ಪದವಿಪೂರ್ವ ಶಿಕ್ಷಣ ಇಲಾಖೆ
ಅನುಮೋದಿಸಿದ ಪಠ್ಯಪುಸ್ತಕ

ಪಿ.ಯು.ಸಿ. ಎರಡನೇ ವರ್ಷ

ಇತಿಹಾಸ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಿ ಯು ಸಿ ಎರಡನೆ ವರ್ಷ

ಇತಿಹಾಸ

ಪಠ್ಯಪುಸ್ತಕ ರಚನಾ ಕೇಂದ್ರ

ಸಲಹಾ ಸಮಿತಿ

ಸದಸ್ಯರು

ಡಾ. ಕೆ.ವಿ.ನಾರಾಯಣ

ಪ್ರೊ. ಲಕ್ಷ್ಮಣ್ ತೆಲಗಾವಿ

ಡಾ. ಕರೀಗೌಡ ಬೀಚನಹಳ್ಳಿ

ಡಾ. ಹಿ.ಚಿ.ಬೋರಲಿಂಗಯ್ಯ

ನಿರ್ದೇಶಕರು

ಡಾ. ಟಿ.ಆರ್.ಚಂದ್ರಶೇಖರ

ಸಹಾಯಕ ನಿರ್ದೇಶಕರು

ಜೈನುಲ್ಲಾ ಬಳ್ಳಾರಿ

ಪದವಿಪೂರ್ವ ಶಿಕ್ಷಣ ಇಲಾಖೆ
ಅನುಮೋದಿಸಿದ ಪಠ್ಯಪುಸ್ತಕ

ಪಿ ಯು ಸಿ ಎರಡನೆ ವರ್ಷ

ಇತಿಹಾಸ

ಸಂಪಾದಕರು
ಡಾ. ಸಿ.ಆರ್. ಗೋವಿಂದರಾಜು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ITIHAASA
Prescribed Text Book for Second Year P.U.C

Edited by
Dr. C.R. Govindaraju
Head, Dept. of History
Kannada University, Hampi
Vidyaranya 583 276

Published by
Dr. H.C. Boralingaiah
Director, Prasaranga
Kannada University, Hampi
Vidyaranya 583 276

Pages : XVI + 344 **Price : Rs. 120/-**
First Impression : 2005
www.kavihampi.org

ಬೆಲೆ : ರೂ. ೧೨೦/-

ಮುಖಪುಟ : **ಕೆ.ಕೆ. ಮಕಾಳಿ**

ಪ್ರಕಾಶಕರು
ಡಾ. ಹಿ.ಚಿ. ಬೋರಲಿಂಗಯ್ಯ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಣ
ಆಕೃತಿ ಕಂಪ್ಯೂಟರ್ಸ್
ಪೂಂಜಾ ಆರ್ಕೆಡ್
ಕೆ.ಎಸ್. ರಾವ್ ರಸ್ತೆ, ಮಂಗಳೂರು - 1
ದೂರವಾಣಿ : 0824 2443002

ನಿರ್ದೇಶಕರ ಮಾತು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕ ರಚನಾ ಕೇಂದ್ರವು ಶಿಕ್ಷಣದ ಎಲ್ಲಾ ಹಂತಗಳಿಗೆ ಮತ್ತು ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳು, ಆಕರ ಗ್ರಂಥಗಳು, ಪರಾಮರ್ಶನ ಕೃತಿಗಳು, ಅಧ್ಯಾಪಕರ ಕೈಪಿಡಿಗಳು ಮುಂತಾದವುಗಳನ್ನು ಸಿದ್ಧಪಡಿಸುವ ಮತ್ತು ಪ್ರಕಟಿಸುವ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಈ ದಿಶೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೫-೦೬ ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಿದೆ. ಈ ಪಠ್ಯಕ್ರಮಕ್ಕೆ ಅನುಗುಣವಾಗಿ ಅಧ್ಯಾಪಕರ ಕೈಪಿಡಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕೇಂದ್ರ ಆರಂಭಿಸಿದೆ.

ಈ ಕಾರ್ಯ ಅನೇಕರ ಸಹಕಾರ-ಸಹಯೋಗದಿಂದ ನಡೆಯಬೇಕಾಗಿದೆ. ನಾವು ಸಿದ್ಧಪಡಿಸುತ್ತಿರುವ ಪಠ್ಯಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯು ಅಧಿಕೃತ ಪಠ್ಯಗಳೆಂದು ಮನ್ನಣೆ ನೀಡಿದೆ. ಇದು ತುಂಬಾ ಮಹತ್ವದ ಸಂಗತಿಯಾಗಿದೆ. ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಡಿ.ಎನ್. ನಾಯಕ್ ಇವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಪಠ್ಯಪುಸ್ತಕಗಳ ಸಂಪಾದಕರಾಗಿ ನಾಡಿನ ಅನೇಕ ಹಿರಿಯ ವಿದ್ವಾಂಸರು ಕೆಲಸ ಮಾಡುತ್ತಿದ್ದಾರೆ. ಅವರ ಸಹಯೋಗದಲ್ಲಿ ಅನೇಕ ಲೇಖಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರಿಗೂ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಕೇಂದ್ರದ ಹಿಂದಿನ ಶಕ್ತಿಯೆಂದರೆ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ. ಅವರ ಮಾರ್ಗದರ್ಶನದಲ್ಲಿ ಕೇಂದ್ರವು ಕೆಲಸ ಮಾಡುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಕೇಂದ್ರದ ಸಲಹಾ ಮಂಡಳಿ ಸದಸ್ಯರಿಗೆ, ಪ್ರಸಾರಾಂಗದ ನಿರ್ದೇಶಕರು ಮತ್ತು ಸಿಬ್ಬಂದಿಗೆ ಕೇಂದ್ರದ ಪರವಾಗಿ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರಸ್ತುತ ಪದವಿಪೂರ್ವ ಎರಡನೆ ವರ್ಷದ ಇತಿಹಾಸ ಪಠ್ಯವನ್ನು ತುಂಬಾ ಅಚ್ಚುಕಟ್ಟಾಗಿ ಸಿದ್ಧಪಡಿಸಿಕೊಟ್ಟಿರುವ ಅದರ ಸಂಪಾದಕರಾದ ಡಾ. ಸಿ.ಆರ್.ಗೋವಿಂದರಾಜು ಅವರಿಗೆ ಹಾಗೂ ವಿವಿಧ ಅಧ್ಯಾಯಗಳನ್ನು ಬರೆದುಕೊಟ್ಟಿರುವ ನಾಡಿನ ಖ್ಯಾತ ವಿದ್ವಾಂಸರಿಗೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಟಿ.ಆರ್.ಚಂದ್ರಶೇಖರ

ಸಂಪಾದಕರ ಮಾತು

ಕನ್ನಡ ಮಾಧ್ಯಮದಲ್ಲಿ ಓದಿ, ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳಿಗೆ ಒಳ್ಳೆಯ ಪಠ್ಯಪುಸ್ತಕಗಳು ದೊರೆಯುತ್ತಿಲ್ಲ. ಈ ಕೊರತೆ ಬಹಳ ಹಿಂದಿನಿಂದಲೂ ನಮ್ಮನ್ನು ಕಾಡುತ್ತಿದೆ. ಈ ಕೊರತೆಯನ್ನು ತುಂಬಲು ಪ್ರಯತ್ನಗಳು ನಡೆದಿವೆಯಾದರೂ ಬಹಳ ಕಡಿಮೆ. ಕನ್ನಡ ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಶಾಶ್ವತವಾದ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಅಂಥ ಪ್ರಯತ್ನಗಳಲ್ಲಿ ಪದವಿಪೂರ್ವ ತರಗತಿಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿಯೇ ರಚಿಸಿಕೊಡುವ ಪ್ರಯೋಗವೂ ಒಂದು. ಈ ಮಾತು ವಿಜ್ಞಾನ, ವಾಣಿಜ್ಯ, ಕಲಾ ವಿದ್ಯಾರ್ಥಿಗಳಿಗೂ ಅನ್ವಯ ಆಗುವಂಥದ್ದು. ಇತಿಹಾಸದ ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಕಳೆದ ವರ್ಷ ಹಾಗೂ ಈ ವರ್ಷ ಅದನ್ನು ರಚಿಸಿ ಕೊಡುವ ಹೊಣೆ ನನ್ನ ಪಾಲಿಗೆ ಬಂದಿದೆ. ಇದಕ್ಕಾಗಿ ಹಿಂದಿನ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ, ಡಾ. ಕೆ.ವಿ.ನಾರಾಯಣ ಹಾಗೂ ಹಾಲಿ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರಿಗೆ ವಿಶೇಷವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಅವರು ಆಸಕ್ತಿ ವಹಿಸಿ ವಿದ್ಯಾರ್ಥಿಗಳಿಗೆ ಈ ಪಠ್ಯ ಪುಸ್ತಕಗಳು ಸಕಾಲಕ್ಕೆ ದೊರೆಯುವಂತಾಗುವಲ್ಲಿ ಹೆಚ್ಚಿನ ಸಹಕಾರ-ಪ್ರೋತ್ಸಾಹಗಳನ್ನು ನೀಡಿದ್ದಾರೆ. ಅವರ ಕಾರ್ಯದಕ್ಷತೆಗೆ ನನ್ನ ಧನ್ಯವಾದಗಳು. ಅಂತೆಯೇ ಕನ್ನಡ ವಿಶ್ವವಿದ್ಯಾಲಯದ ಆದ್ಯತೆಯ ಕಾರ್ಯ-ಯೋಜನೆಗಳಲ್ಲಿ ಪಠ್ಯಪುಸ್ತಕಗಳ ಕೊರತೆಯನ್ನು ನೀಗಬೇಕೆನ್ನುವ ಕನಸನ್ನು ಕಂಡು, ಇಂದಿಗೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವ ಮೊದಲ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರನ್ನು ನೆನಪಿಸಿಕೊಳ್ಳದೆ ಇರಲಾರೆ. ಅಲ್ಲದೆ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲ ಪದಾಧಿಕಾರಿಗಳಿಗೆ ಈ ಅವಕಾಶವನ್ನು ನಮಗೆ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಪಠ್ಯಪುಸ್ತಕವು ಆಧುನಿಕ ಕಾಲಘಟ್ಟದ ಪ್ರಪಂಚ, ಭಾರತ ಹಾಗೂ ಕರ್ನಾಟಕಗಳಿಗೆ ಸಂಬಂಧಿಸಿದ ಅಧ್ಯಯನದ ಸ್ವರೂಪವನ್ನು ಹೊಂದಿರುವಂಥದ್ದು. ಪಠ್ಯಕ್ಕನುಗುಣವಾಗಿ ಕನ್ನಡದಲ್ಲಿಯೇ ಚಿಂತನೆ ನಡೆಸಲು ಅನುಕೂಲವಾಗುವಂತೆ ಭಾಷೆಯ ಬಳಕೆ, ವಿಷಯ ಮಂಡನಾ ಕ್ರಮವನ್ನು ಇಲ್ಲಿ ಅನುಸರಿಸಲಾಗಿದೆ. ಇತಿಹಾಸವು ಚಲನಶೀಲವಾದ್ದರಿಂದ ಇತ್ತೀಚಿನ ಹೊಸ ಅಂಶಗಳನ್ನು ವೈಜ್ಞಾನಿಕ ದೃಷ್ಟಿಕೋನದ ಒರೆಗೆ ಹಚ್ಚಿ ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. ಅಲ್ಲದೆ ವಿದ್ಯಾರ್ಥಿ ವೃಂದಕ್ಕೆ ಅನುಕೂಲವಾಗಲೆಂದು ಸಾಧ್ಯವಾದಷ್ಟು

ವಿವರಣೆಗಳ ಜೊತೆಗೆ ಪ್ರಶ್ನಾತ್ಮಕ ಶೈಲಿಯಲ್ಲಿ ವಿಚಾರಗಳನ್ನು ಮಂಡಿಸುವ ಕ್ರಮ ಇಲ್ಲಿನದು. ಅವಶ್ಯಕವಿದ್ದಲ್ಲಿ ಮಾತ್ರ ತಾತ್ವಿಕ-ಸೈದ್ಧಾಂತಿಕ ಚರ್ಚೆಗಳನ್ನು ಅಳವಡಿಸಿದ್ದೇವೆ. ಸಾಂಪ್ರದಾಯಿಕ ಚರಿತ್ರೆಯ ಬರವಣಿಗೆಗಿಂತ ಭಿನ್ನವಾಗಿ, ಸರಳವಾಗಿ, ಸಂಕ್ಷಿಪ್ತವಾಗಿ ಅಧ್ಯಾಯಗಳನ್ನು ಬರೆಸಲು ಪ್ರಯತ್ನಿಸಲಾಗಿದೆ. ಸಮಯ ಹಾಗೂ ತಾಂತ್ರಿಕ ತೊಂದರೆಗಳ ಕಾರಣದಿಂದಾಗಿ ಸದರಿ ಪಠ್ಯಪುಸ್ತಕದಲ್ಲಿ ಭಾವಚಿತ್ರ-ರೇಖಾಚಿತ್ರಗಳನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಕೊರತೆಯ ಅರಿವು ನಮಗಿದೆ. ಮುಂದೆ ಪರಿಷ್ಕರಣೆಯ ಸಂದರ್ಭದಲ್ಲಿ ಇದನ್ನು ನೀಗಿಸಿಕೊಳ್ಳಲಾಗುವುದು. ಒಟ್ಟಾರೆ ಈ ಬಗೆಯ ಪ್ರಯತ್ನ ಎಷ್ಟರಮಟ್ಟಿಗೆ ಫಲಪ್ರದವಾಗಿದೆ ಎಂಬುದನ್ನು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವೃಂದವೇ ಹೇಳಬೇಕು. ತಮ್ಮ ಸಲಹೆ-ಸೂಚನೆಗಳಿಗೆ ಎಂದಿಗೂ ಸ್ವಾಗತ.

ಈ ಪಠ್ಯಪುಸ್ತಕದಲ್ಲಿ ಪ್ರಧಾನವಾಗಿ ಮೂರು ಭಾಗಗಳಿದ್ದು, ಆರು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಅವುಗಳಲ್ಲಿ ವ್ಯಾಪಕವಾದ ಉಪಶೀರ್ಷಿಕೆಗಳನ್ನು ಪಠ್ಯಕ್ಕನುಗುಣವಾಗಿ ನೀಡಿ ಸರಳ, ಸಂಕ್ಷಿಪ್ತಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಕೆಲವೆಡೆ ಹೆಚ್ಚುವರಿ ಅನ್ನಿಸುವ ವಿಚಾರಗಳು ಸಹ ಇವೆ. ಅವುಗಳನ್ನು 'ಹೆಚ್ಚಿನ ವಿಷಯ'ದಡಿಯಲ್ಲಿ ಅಳವಡಿಸಿರುವುದರಿಂದ ಆಸಕ್ತರಿಗೆ ಅನುಕೂಲವಾಗಬಹುದು. ಆಯಾ ಅಧ್ಯಾಯದ ಲೇಖಕರು 'ಹೆಚ್ಚಿನ ಓದಿಗಾಗಿ' ಕೃತಿಗಳನ್ನು, ಪ್ರಶ್ನೆಪತ್ರಿಕೆಗಳ ರಚನೆಗಾಗಿ 'ಮಾದರಿ ಪ್ರಶ್ನೆ' ಗಳನ್ನು ಹಾಗೂ 'ಹೆಚ್ಚಿನ ಜ್ಞಾನ'ಕ್ಕಾಗಿ ಕಾರ್ಯ-ಯೋಜನೆಗಳನ್ನು ನೀಡಿರುವುದು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಪಠ್ಯಪುಸ್ತಕದ ಕೊನೆಗೆ 'ನಕಾಶೆ', 'ಆಯ್ದ ಗ್ರಂಥಸೂಚಿ' ಹಾಗೂ 'ಮಾದರಿ ಪ್ರಶ್ನೆಪತ್ರಿಕೆ'ಯೊಂದನ್ನು (ಪ.ಪೂ.ಶಿಕ್ಷಣ ಇಲಾಖೆ ಸೂಚಿಸಿದ) ಸಹ ನೀಡಿದ್ದೇವೆ. ಒಟ್ಟಾರೆ ಪಠ್ಯಕ್ಕನುಗುಣವಾಗಿಯೆ ಈ ಎಲ್ಲ ಅಂಶಗಳನ್ನು ಯೋಜಿಸಲಾಗಿದೆ.

ಶ್ರಮವಹಿಸಿ ಪಠ್ಯದ ಅಧ್ಯಾಯಗಳನ್ನು ಕ್ರಮವಾಗಿ ಬರೆದುಕೊಟ್ಟ ನಾಡಿನ ವಿದ್ವಾಂಸರಾದ ಡಾ. ಕೆ.ಎಂ. ಲೋಕೇಶ್, ಡಾ. ಕೆ. ಮೋಹನ್‌ಕೃಷ್ಣ ರೈ, ಪ್ರೊ. ಎಂ.ಜಮುನ, ಡಾ. ಕೆ.ಎಸ್. ವಿಜಯಲಕ್ಷ್ಮಿ, ಪ್ರೊ. ಎಸ್. ಚಂದ್ರಶೇಖರ್, ಡಾ. ಎ.ಎಚ್. ಗಾಯಿತ್ರಿ ದೇವಿ, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರೊ. ಎಸ್. ಷಡಕ್ಷರಯ್ಯ, ಪ್ರೊ. ಡಿ. ಎನ್. ಯೋಗೀಶ್ವರಪ್ಪ ಹಾಗೂ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರುಗಳಿಗೆ ನಾನು ಆಭಾರಿ. ಈ ಹತ್ತು ಜನ ವಿದ್ವಾಂಸರು ತಮ್ಮದೇ ಆದ ಕ್ಷೇತ್ರದಲ್ಲಿ ವಿಶೇಷ ನೈಪುಣ್ಯತೆಯನ್ನು ಪಡೆದವರು. ಇವರೆಲ್ಲರೂ ನನ್ನ ಹಲವು ಬಗೆಯ ಒತ್ತಡ-ಒತ್ತಾಸೆಗಳಿಗೆ ಸ್ಪಂದಿಸಿರುವುದರಿಂದ ವಿಶೇಷವಾಗಿಯೆ ನೆನೆಯುತ್ತೇನೆ. ಇವರ ಸಹಕಾರವಿಲ್ಲದೆ ಈ ಕೃತಿಯು ಪ್ರಕಟವಾಗುತ್ತಿರಲಿಲ್ಲ. ಕರ್ನಾಟಕ ಏಕೀಕರಣವನ್ನು ಕುರಿತ ಅಧ್ಯಾಯವನ್ನು (ನನ್ನದೇ ಸಂಶೋಧನಾ ಕ್ಷೇತ್ರವಾದ್ದರಿಂದ) ನಾನೇ ಬರೆಯ ಬೇಕಾಯಿತು. ನನ್ನನ್ನು ಮೊದಲಿನಿಂದಲೂ ಪ್ರೋತ್ಸಾಹಿಸುತ್ತಿರುವ ಪ್ರೊ. ಬಿ. ಷೇಕ್‌ಅಲಿ, ಪ್ರೊ. ಎಸ್.ಶೆಟ್ಟರ್, ಪ್ರೊ. ಎಸ್. ಚಂದ್ರ

ಶೇಖರ್, ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಕಿ.ರಂ. ನಾಗರಾಜ ಮೊದಲಾದವರಿಗೆ ಧನ್ಯವಾದಗಳು. ಹಿತೈಷಿಗಳೂ, ಕುಲಸಚಿವರೂ ಆದ ಡಾ. ಕರೀಗೌಡ ಬೀಚನಹಳ್ಳಿ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರುಗಳ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ. ಪಠ್ಯಪುಸ್ತಕ ರಚನಾಕೇಂದ್ರದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ್, ಸಹಾಯಕ ನಿರ್ದೇಶಕರಾದ ಜೈನುಲ್ಲಾ ಬಳ್ಳಾರಿ ಅವರು ಎಲ್ಲ ಹಂತಗಳಲ್ಲೂ ಸಹಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ನಕಾಶೆ ರಚಿಸಿಕೊಟ್ಟು ಕೃತಿಯು ಕೈ ಸೇರುವವರೆಗೆ ಸಹಕರಿಸಿದ ಗೆಳೆಯ ಕೆ.ಎಲ್. ರಾಜಶೇಖರ್, ವಿದ್ಯಾರ್ಥಿ ಮಿತ್ರ ಹಣಮಂತ್ರಾಯ ದೊಡ್ಡಮನಿ, ಕರಡು ತಿದ್ದಲು ಸಹಕರಿಸಿದ ಬಾಳಗೆಳತಿ ಟಿ.ಕೆ. ಭಾಗ್ಯವತಿ ಅವರಿಗೆ ಧನ್ಯವಾದಗಳು. ಅಂತೆಯೇ ಪ್ರಸಾರಾಂಗದ ಗೆಳೆಯರಾದ ಎಚ್.ಬಿ. ರವೀಂದ್ರ, ಬಿ. ಸುಜ್ಞಾನಮೂರ್ತಿ, ಮುಖಪುಟ ರಚಿಸಿಕೊಟ್ಟ ಕೆ.ಕೆ. ಮಕಾಳಿ ಅವರುಗಳನ್ನು ಮರೆಯುವಂತಿಲ್ಲ. ಅಚ್ಚುಕಟ್ಟಾಗಿ ಡಿ.ಟಿ.ಪಿ ಮಾಡಿದ ಶ್ರೀಮತಿ ಎ. ನಾಗವೇಣಿ ಹಾಗೂ ಮುದ್ರಣಾಲಯದ ಗೆಳೆಯರಿಗೆ ಧನ್ಯವಾದಗಳು. ಈ ಕೃತಿಯ ಪ್ರಕಟಣೆಗೆ ಸಲಹೆ-ಸೂಚನೆಗಳನ್ನು ನೀಡಿ ಸಹಕರಿಸಿದ ವಿಭಾಗದ ಹಾಗೂ ವಿಶ್ವವಿದ್ಯಾಲಯದ ಎಲ್ಲ ಸಹೋದ್ಯೋಗಿ ಮಿತ್ರರಿಗೆ ವಂದನೆಗಳು.

ಸಿ.ಆರ್.ಗೋವಿಂದರಾಜು
ಮುಖ್ಯಸ್ಥರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ವಿಸ್ತೃತ ಪಠ್ಯಕ್ರಮ

ಬೋಧನಾ ಅವಧಿ : ೧೦೦ ಗಂಟೆಗಳು

ಭಾಗ - ಎ

I ಆಧುನಿಕ ಪ್ರಪಂಚ

ಅಧ್ಯಾಯ ೧

೧.೧ ಭೌಗೋಳಿಕ ಅನ್ವೇಷಣೆಗಳು — **೨ ಗಂಟೆ**

ಕಾರಣಗಳು - ಪ್ರಮುಖ ಭೌಗೋಳಿಕ ಅನ್ವೇಷಣೆಗಳು - ಪರಿಣಾಮಗಳು

೧.೨ ಪುನರುಜ್ಜೀವನ — **೩ ಗಂಟೆ**

ಅರ್ಥ - ಮಹತ್ವ - ಕಾರಣಗಳು - ಲಕ್ಷಣಗಳು - ಸಾಹಿತ್ಯ, ಕಲೆ, ವಾಸ್ತುಶಿಲ್ಪ ಹಾಗೂ ವಿಜ್ಞಾನಗಳಲ್ಲಾದ ಪ್ರಗತಿ

೧.೩ ಧರ್ಮಸುಧಾರಣಾ ಚಳವಳಿ — **೨ ಗಂಟೆ**

ಕಾರಣಗಳು - ಮಾರ್ಟಿನ್ ಲೂಥರನ ಪಾತ್ರ - ಪ್ರತಿ ಸುಧಾರಣಾ ಚಳವಳಿ ಪರಿಣಾಮಗಳು

II ಕ್ರಾಂತಿಗಳ ಮತ್ತು ರಾಷ್ಟ್ರೀಯತೆಯ ಯುಗ

ಅಧ್ಯಾಯ ೨

೨.೧ ಅಮೆರಿಕಾದ ಸ್ವಾತಂತ್ರ್ಯ ಹೋರಾಟ — **೨ ಗಂಟೆ**

ಕಾರಣಗಳು - ಹೋರಾಟದ ಹಾದಿ - ಪರಿಣಾಮಗಳು

೨.೨ ಫ್ರಾನ್ಸಿನ ಕ್ರಾಂತಿ — **೪ ಗಂಟೆ**

ಕಾರಣಗಳು-ಕ್ರಾಂತಿಯ ಆರಂಭ ಮತ್ತು ವಿವಿಧ ಹಂತಗಳು-ಪರಿಣಾಮಗಳು ನೆಪೋಲಿಯನ್ ಬೋನಾಪಾರ್ಟೆಯ ಜೀವನ ಮತ್ತು ಸಾಧನೆಗಳು

೨.೩ ಇಟಲಿಯ ಏಕೀಕರಣ — **೨ ಗಂಟೆ**

ಜೋಸೆಫ್ ಮ್ಯಾಜಿನಿ - ವಿಕ್ಟರ್ ಇಮ್ಯಾನ್ಯುವಲ್ - ಕೌಂಟ್-ಡಿ-ಕೆವೂರ್ ಹಾಗೂ ಗ್ಯಾರಿಬಾಲ್ಡಿ ಅವರ ಪಾತ್ರ

೨.೪ ಜರ್ಮನಿಯ ಏಕೀಕರಣ — **೨ ಗಂಟೆ**

ಏಕೀಕರಣದ ವಿಭಿನ್ನ ಹಂತಗಳು ಹಾಗೂ ಬಿಸ್ಮಾರ್ಕ್

೨.೫ ರಷ್ಯಾದ ಕ್ರಾಂತಿ — **೨ ಗಂಟೆ**

ಕಾರಣಗಳು - ಕ್ರಾಂತಿಯ ಪ್ರಮುಖ ಘಟನೆಗಳು - ಪರಿಣಾಮಗಳು

III ಜಗತ್ತಿನ ಮಹಾಯುದ್ಧಗಳು ಹಾಗೂ ಅಂತರ್‍ರಾಷ್ಟ್ರೀಯ ಸಂಘ-ಸಂಸ್ಥೆಗಳು

ಅಧ್ಯಾಯ ೩

೩.೧ ಮೊದಲನೆಯ ಮಹಾಯುದ್ಧ ೩ ಗಂಟೆ

ಕಾರಣಗಳು - ಯುದ್ಧದ ಗತಿ-ಬೆಳವಣಿಗೆ - ಪರಿಣಾಮ-ವರ್ಸೆಲ್ಸ್ ಒಪ್ಪಂದ

೩.೨ ಎರಡನೆಯ ಮಹಾಯುದ್ಧ ೫ ಗಂಟೆ

ಕಾರಣಗಳು - ಯುದ್ಧದ ಗತಿ-ಬೆಳವಣಿಗೆ - ಪರಿಣಾಮಗಳು

೩.೩ ವಿಶ್ವಸಂಸ್ಥೆ ೪ ಗಂಟೆ

ಧ್ಯೇಯ ಮತ್ತು ಉದ್ದೇಶಗಳು - ಪ್ರಧಾನ ಅಂಗ-ಸಂಸ್ಥೆಗಳು - ಸಾಧನೆಗಳು - ಮಿತಿಗಳು, ಭಾರತ ಹಾಗೂ ವಿಶ್ವಸಂಸ್ಥೆ - ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾರತದ ಪಾತ್ರ - ಭದ್ರತಾ ಮಂಡಳಿಯಲ್ಲಿನ ಖಾಯಂ ಸ್ಥಾನಕ್ಕಾಗಿ ಭಾರತದ ಹಕ್ಕು ಪ್ರತಿಪಾದನೆ

೩.೪ ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ಅವರ ಐತಿಹಾಸಿಕ ಕೊಡುಗೆಗಳು ೩ ಗಂಟೆ

ಮಾವೋತ್ಸೆ ತುಂಗ್ - ನೆಲ್ಸನ್ ರೋಲಿಹ್ಲಾಲ್ ಮಂಡೇಲ - ಮಿಖೈಲ್ ಸರ್ಗೈವಿಕ್ ಗೋರ್ಬಚೆವ್

ಭಾಗ - ಬಿ

IV ಭಾರತಕ್ಕೆ ಯುರೋಪಿಯನ್ನರ ಆಗಮನ

ಅಧ್ಯಾಯ ೪

೪.೧ ಪೋರ್ಚುಗೀಸರು - ಡಚ್ಚರು - ಫ್ರೆಂಚರು ಹಾಗೂ ಇಂಗ್ಲಿಷರು ೪ ಗಂಟೆ

ಇವರ ವಸಾಹತು ನೆಲೆಗಳ ಸಂಕ್ಷಿಪ್ತ ನೋಟ

ಪೋರ್ಚುಗೀಸರು - ಡಚ್ಚರು - ಫ್ರೆಂಚರು ಹಾಗೂ ಇಂಗ್ಲಿಷರು

೪.೨ ಭಾರತದಲ್ಲಿ ಬ್ರಿಟಿಷರ ಸಾರ್ವಭೌಮತ್ವ - ೧೮೫೭ ರವರೆಗೆ ೬ ಗಂಟೆ

ಆಂಗ್ಲೊ-ಫ್ರೆಂಚರ ಸಂಘರ್ಷಗಳು (ಕರ್ನಾಟಿಕ್ ಯುದ್ಧಗಳು) - ಪ್ಲಾಸಿ ಕದನ - ಬಕ್ಸರ್ ಕದನ - ಸಹಾಯಕ ಸೈನ್ಯ ಪದ್ಧತಿ - ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ

೪.೩ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ೪ ಗಂಟೆ

ಕಾರಣಗಳು - ದಂಗೆಯ ಮೂರು ಹಂತಗಳು - ವಿಫಲತೆ - ಪರಿಣಾಮ ಹಾಗೂ ಮಹತ್ವ

೪.೪ ಭಾರತದ ಆರ್ಥಿಕತೆ ಹಾಗೂ ಶಿಕ್ಷಣ ವ್ಯವಸ್ಥೆಯ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವ ೩ ಗಂಟೆ

ಒಸ್ನೆಲೆ - ಸಂಪತ್ತಿನ ಸೋರಿಕೆ - ಭೂ ಕಂದಾಯ ನೀತಿ - ಮಹಲ್‌ವಾರಿ ಪದ್ಧತಿ ರೈತ್ವಾರಿ ಪದ್ಧತಿ-ಪಾಶ್ಚಾತ್ಯ ಶಿಕ್ಷಣದ ಪ್ರವೇಶ ಮೆಕಾಲೆಯ ವರದಿ-ವುಡ್ಸ್ ವರದಿ

೪.೫ ಭಾರತೀಯ ಪುನರುಜ್ಜೀವನ — ೫ ಗಂಟೆ

ಹಿನ್ನೆಲೆ - ಕಾರಣಗಳು - ರಾಜಾ ರಾಮಮೋಹನ ರಾಯ್ - ದಯಾನಂದ ಸರಸ್ವತಿ - ವಿವೇಕಾನಂದ - ಸೈಯ್ಯದ್ ಅಹ್ಮದ್‌ಖಾನ್ - ಅನಿಬೆಸೆಂಟ್

೪.೬ ರಾಷ್ಟ್ರೀಯ ಚಳವಳಿ — ೮ ಗಂಟೆ

ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾದ ಅಂಶಗಳು - ಭಾರತ ರಾಷ್ಟ್ರೀಯ ಕಾಂಗ್ರೆಸ್ - ಮಂದಗಾಮಿ ಹಾಗೂ ತೀವ್ರಗಾಮಿ ಪಂಥಗಳು - ಕ್ರಾಂತಿಕಾರಿ ಚಳವಳಿಗಳು - ಗಾಂಧಿಪೂರ್ವ ರಾಷ್ಟ್ರೀಯ ಚಳವಳಿ - ಗಾಂಧಿಯುಗ

೪.೭ ವ್ಯಕ್ತಿ ಚಿತ್ರಣ ಹಾಗೂ ಅವರ ಕೊಡುಗೆಗಳು — ೩ ಗಂಟೆ

ಬಿ.ಆರ್. ಅಂಬೇಡ್ಕರ್ - ಇಂದಿರಾ ಗಾಂಧಿ - ಮದರ್ ತೆರೆಸಾ

ಭಾಗ - ಸಿ
ಆಧುನಿಕ ಕರ್ನಾಟಕ

ಅಧ್ಯಾಯ ೫

೫.೧ ಆಧುನಿಕ ಮೈಸೂರಿನ ಉದಯ — ೪ ಗಂಟೆ

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದ ಮೈಸೂರು - ಆಂಗ್ಲೋ - ಮೈಸೂರು ಯುದ್ಧಗಳು - ಪರಿಣಾಮಗಳು

೫.೨ ಮೈಸೂರು ಒಡೆಯರ ಪುನರ್‌ಸ್ಥಾಪನೆ — ೨ ಗಂಟೆ

ಮುಮ್ಮಡಿ ಕೃಷ್ಣರಾಜ ಒಡೆಯರು - ಪೂರ್ಣಯ್ಯನವರ ಆಳ್ವಿಕೆ

೫.೩ ಕಮಿಷನರುಗಳ ಆಳ್ವಿಕೆ — ೩ ಗಂಟೆ

ಮಾರ್ಕ್ ಕಬ್ಬನ್ - ಲೆವಿಂಗ್ ಬೆನ್ತಮ್ ಭೌರಿಂಗ್

೫.೪ ಪುನರ್ದಾನ — ೬ ಗಂಟೆ

ನಾಲ್ವಡಿ ಕೃಷ್ಣರಾಜ ಒಡೆಯರು - ಮೈಸೂರಿನ ಪ್ರಸಿದ್ಧ ದಿವಾನರು - ಸರ್ ಕೆ. ಶೇಷಾದ್ರಿ ಐಯರ್ - ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮೈಲ್

೫.೫ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ — ೭ ಗಂಟೆ

ಕರ್ನಾಟಕದಲ್ಲಿ ಸಶಸ್ತ್ರ ಬಂಡಾಯಗಳು - ರಾಷ್ಟ್ರೀಯ ಕಾಂಗ್ರೆಸಿನ ಹೋರಾಟದಲ್ಲಿ ಕರ್ನಾಟಕದ ಪಾತ್ರ - ಗಾಂಧಿಪೂರ್ವ ಯುಗ - ಗಾಂಧಿಯುಗ - ಬೆಳಗಾವಿ ಕಾಂಗ್ರೆಸ್ ಅಧಿವೇಶನ - ಅಂಕೋಲಾ ಉಪ್ಪಿನ ಸತ್ಯಾಗ್ರಹ - ಶಿವಪುರ ಧ್ವಜ ಸತ್ಯಾಗ್ರಹ - ವಿದುರಾಶ್ವತ್ಥ ದುರಂತ - ಈಸೂರು ದುರಂತ - ಅರಮನೆ ಸತ್ಯಾಗ್ರಹ - ಕೆ.ಸಿ. ರೆಡ್ಡಿ

೫.೬ ಕರ್ನಾಟಕ ಏಕೀಕರಣ ೩ ಗಂಟೆ

ಹಿನ್ನೆಲೆ - ಆರಂಭಿಕ ಪ್ರಯತ್ನಗಳು - ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಪಾತ್ರ - ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಏಕೀಕರಣ ಚಳವಳಿ

೫.೭ ಸಮಕಾಲೀನ ಕರ್ನಾಟಕ ೩ ಗಂಟೆ

ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ಅವರ ಐತಿಹಾಸಿಕ ಕೊಡುಗೆಗಳು

ಕೆಂಗಲ್ ಹನುಮಂತಯ್ಯ - ಎಸ್. ನಿಜಲಿಂಗಪ್ಪ - ಡಿ. ದೇವರಾಜ ಅರಸ್

ಅಧ್ಯಾಯ ೬

ನಕಾಶೆ ರಚನೆ ೫ ಗಂಟೆ

ಐತಿಹಾಸಿಕ ಮಹತ್ವ ಪಡೆದ ಸ್ಥಳಗಳು

ಜಲಿಯನ್‌ವಾಲಾ ಬಾಗ್, ಮೀರತ್, ಕಲ್ಕತ್ತ, ಔಧ್, ಚಿತ್ತಗಾಂಗ್, ಚೌರಿ-ಚೌರಾ, ದಂಡಿ, ಈಸೂರು, ವಿದುರಾಶ್ವಥ, ಅಂಕೋಲಾ, ಬೆಳಗಾಂ, ಕ್ಯಾಲಿಕಟ್, ಗೋವಾ, ಪಾಂಡಿಚೇರಿ, ಪ್ಲಾಸಿ, ಬಕ್ಸರ್, ಶ್ರೀರಂಗಪಟ್ಟಣ, ಹೈದರಾಬಾದ್, ಮೈಸೂರು, ಬೆಂಗಳೂರು, ಕಿತ್ತೂರು.

ಪರಿವಿಡಿ

ಭಾಗ -ಎ

I ಆಧುನಿಕ ಪ್ರಪಂಚ

II ಕ್ರಾಂತಿಗಳ ಮತ್ತು ರಾಷ್ಟ್ರೀಯತೆಯ ಯುಗ

III ಜಗತ್ತಿನ ಮಹಾಯುದ್ಧಗಳು ಹಾಗೂ ಅಂತರ್‍ರಾಷ್ಟ್ರೀಯ ಸಂಘ-ಸಂಸ್ಥೆಗಳು

ಭಾಗ - ಬಿ

IV ಭಾರತಕ್ಕೆ ಯುರೋಪಿಯನ್ನರ ಆಗಮನ

ಭಾಗ - ಎ

I ಆಧುನಿಕ ಪ್ರಪಂಚ

II ಕ್ರಾಂತಿಗಳ ಮತ್ತು ರಾಷ್ಟ್ರೀಯತೆ ಯುಗ

III ಜಗತ್ತಿನ ಮಹಾಯುದ್ಧಗಳು ಹಾಗೂ ಅಂತರ್ರಾಷ್ಟ್ರೀಯ ಸಂಘ-ಸಂಸ್ಥೆಗಳು

I ಆಧುನಿಕ ಪ್ರಪಂಚ

ಅಧ್ಯಾಯ ೧

೧.೧. ಭೌಗೋಳಿಕ ಅನ್ವೇಷಣೆಗಳು

(Geographical Discoveries)

ಯುರೋಪಿಯನ್ನರು ಏಕೆ ಹದಿನೈದನೆಯ ಶತಮಾನದಲ್ಲಿ ಅಷ್ಟೊಂದು ವೇಗವಾಗಿ ಹಾಗೂ ದಾರ್ಷ್ಟ್ಯದಿಂದ ಒಮ್ಮೊಂದೊಮ್ಮೆಲೆ ಪ್ರಪಂಚದಾದ್ಯಂತ ಹರಡಿಕೊಂಡರು? ಎಂದು ತಿಳಿದುಕೊಳ್ಳುವುದು ಆಸಕ್ತಿದಾಯಕವಾದುದು. ಅವರಿಗೆ ಅತೀ ದೂರದ ದೇಶಗಳಾದ ಚೀನಾ, ಭಾರತ, ದಕ್ಷಿಣ ಆಫ್ರಿಕ ಮುಂತಾದವುಗಳ ಬಗ್ಗೆ ತಿಳುವಳಿಕೆ ಇದ್ದರೂ ಅವರ ಪ್ರಪಂಚದ ಕಲ್ಪನೆ ಕೇವಲ ಯುರೋಪ್ ಹಾಗೂ ಮೆಡಿಟರೇನಿಯನ್ ಪ್ರದೇಶಗಳಿಗೆ ಸೀಮಿತವಾಗಿತ್ತು. ಆದರೆ ಮುಂದಿನ ೨೦೦ ವರ್ಷಗಳಲ್ಲಿ ಅವರು, ಪ್ರಪಂಚದ ಎಲ್ಲ ಖಂಡಗಳಲ್ಲಿ (ಆಸ್ಟ್ರೇಲಿಯ ಹಾಗೂ ಅಂಟಾರ್ಟಿಕ್‌ಗಳನ್ನು ಹೊರತುಪಡಿಸಿ) ತಮ್ಮ ನೆಲೆಗಳನ್ನು ಸ್ಥಾಪಿಸುವುದನ್ನು ಕಾಣುತ್ತೇವೆ. ಕ್ರಿ.ಶ. ೧೬೦೦ ರ ವೇಳೆಗೆ ಅಮೆರಿಕಾದ ಕರಾವಳಿ ತೀರಗಳು ಹಾಗೂ ಪಶ್ಚಿಮ ಆಫ್ರಿಕಾದ ಹಲವಾರು ನಗರಗಳು ಅವರ ಅಧಿಪತ್ಯಕ್ಕೆ ಒಳಗಾದವು. ಇದು ಹೇಗೆ ಸಾಧ್ಯ ವಾಯಿತು? ಯುರೋಪಿಯನ್ನರು ಹೇಗೆ ಅಷ್ಟು ಶೀಘ್ರವಾಗಿ ಪ್ರಪಂಚದಾದ್ಯಂತ ಪಸರಿಸಿದರು? ಈ ಕ್ರಾಂತಿಗೆ ಮೂಲಭೂತ ಕಾರಣಗಳೇನು?

ಅನ್ವೇಷಣೆಗಳ ಮಹತ್ವ

೧೫ ಹಾಗೂ ೧೬ ನೆಯ ಶತಮಾನಗಳ ಅನ್ವೇಷಣೆಗಳು ಆಧುನಿಕ ಯುಗದ ಆರಂಭಕ್ಕೆ ಬುನಾದಿಯನ್ನು ಹಾಕಿದುದರಿಂದ ಅವುಗಳಿಗೆ ಇತಿಹಾಸದಲ್ಲಿ ಅಪಾರ ಮಹತ್ವವಿದೆ. ಇವುಗಳು ಇತಿಹಾಸದ ದಿಕ್ಕನ್ನೇ ಬದಲಾಯಿಸಿದವು. ಈ ಬೆಳವಣಿಗೆಯು ಯುರೋಪಿಯನ್ ರಾಷ್ಟ್ರಗಳಿಗೆ ಅಪಾರ ಸಂಪತ್ತು ಹಾಗೂ ಶಕ್ತಿಯನ್ನು ನೀಡಿ ಅವುಗಳು ಮುನ್ನಡೆಯಲು ಅವಕಾಶ ಮಾಡಿಕೊಟ್ಟಿತ್ತು. ಇನ್ನೊಂದೆಡೆ ಪೌರ್ವಾತ್ಯ ರಾಷ್ಟ್ರಗಳು ಹಿಂದುಳಿಯಲು ಕಾರಣವಾಯಿತು. ಅನ್ವೇಷಣೆಗಳಿಗೆ ಮೊದಲು ಕೇವಲ ಭೂಮಾರ್ಗಗಳ ಮೂಲಕ ಪೂರ್ವ ಹಾಗೂ ಪಶ್ಚಿಮದ ನಡುವೆ ಸಂಪರ್ಕವಿತ್ತು. ಇದರಿಂದಾಗಿ ಪ್ರವಾಸಿಗರು, ವ್ಯಾಪಾರಿಗಳು ಮುಂತಾದವರು ಹೆಚ್ಚು ದೂರವನ್ನು ಕ್ರಮಿಸುವುದರಲ್ಲಿ ಅಪಾರ ಕಷ್ಟ-ನಷ್ಟಗಳನ್ನು ಎದುರಿಸಬೇಕಾಗಿತ್ತು. ಹೊಸ

ಸಮುದ್ರ ಮಾರ್ಗಗಳ ಅನ್ವೇಷಣೆ ಇಂಥ ತೊಂದರೆಗಳನ್ನು ನಿರ್ಮೂಲನ ಮಾಡಿ ಪ್ರಪಂಚದಲ್ಲಿ ಮಹತ್ತರ ಬದಲಾವಣೆಗಳಿಗೆ ಎಡೆ ಮಾಡಿಕೊಟ್ಟಿತು.

ಹದಿನೈದನೆಯ ಶತಮಾನದಲ್ಲಿದ್ದ ಯುರೋಪಿನ ಪರಿಸ್ಥಿತಿ

'ಪುನರುಜ್ಜೀವನ ಚಳವಳಿ'ಯು ಆರಂಭಗೊಂಡು ಯುರೋಪಿಯನ್ನರಲ್ಲಿ ಸಾಹಸ ಮನೋಭಾವನೆ ಹಾಗೂ ಚಿಂತನಾ ಪ್ರವೃತ್ತಿಯು ಸ್ಫುರಿಸುವಂತೆ ಮಾಡಿತು. ವೈಜ್ಞಾನಿಕ ಚಿಂತನೆಯ ಪ್ರಭಾವದಿಂದಾಗಿ ಸಮಾಜದ ಮೇಲಿನ ಚರ್ಚಿನ ಹಾಗೂ ಪೋಪನ ಹಿಡಿತ ದುರ್ಬಲಗೊಂಡಿತು. ಊಳಿಗಮಾನ್ಯ ವ್ಯವಸ್ಥೆಯೂ ಕ್ಷೀಣಗೊಂಡು, ಉದ್ಯಮ ವರ್ಗದ ಉದಯವಾಯಿತು. ಈ ವರ್ಗದ ಪ್ರಭಾವ ಎಲ್ಲ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿತು. ಕಲೆ, ಸಾಹಿತ್ಯ ಹಾಗೂ ವಿಜ್ಞಾನಗಳು ಪರಿವರ್ತನೆಗೆ ಒಳಗಾದವು. ಹೊಸ ವೈಜ್ಞಾನಿಕ ಸಿದ್ಧಾಂತಗಳು ಹಾಗೂ ಉಪಕರಣಗಳು ಜನಪ್ರಿಯವಾದವು. ಈ ರೀತಿಯಲ್ಲಿ ೧೫ನೇ ಶತಮಾನವು ಭೌಗೋಳಿಕ ಅನ್ವೇಷಣೆಗಳಿಗೆ ಪೂರಕ ಸನ್ನಿವೇಶಗಳನ್ನು ಹೊಂದಿತ್ತು. ೧೪ ಹಾಗೂ ೧೫ ನೇ ಶತಮಾನಗಳಲ್ಲಿ ಇಟಲಿಯ **ವೆನಿಸ್** ನಗರವು ಯುರೋಪ್ ಹಾಗೂ ಪೌರ್ವಾತ್ಯ ಪ್ರದೇಶಗಳ ನಡುವಿನ ಪ್ರಸಿದ್ಧ ವಾಣಿಜ್ಯ ಸಾಮ್ರಾಜ್ಯವಾಗಿತ್ತು. ಪೂರ್ವ ಮೆಡಿಟರೇನಿಯನ್ನಿನ ಬಂದರುಗಳು **ಇಂಡೀಸ್** (ಪೂರ್ವ ರಾಷ್ಟ್ರಗಳು) ನಿಂದ ಸಾಂಬಾರುದ್ರವ್ಯ (ಮಸಾಲೆ)ಗಳನ್ನು, **ಚೀನಾ**ದಿಂದ ರೇಷ್ಮೆಯನ್ನು, **ಭಾರತ**ದಿಂದ ರತ್ನಗಳು ಹಾಗೂ ಉತ್ಕೃಷ್ಟ ದರ್ಜೆಯ ಹತ್ತಿಬಟ್ಟೆಯನ್ನು, **ಪರ್ಶಿಯನ್ ಖಾರಿ ಪ್ರದೇಶ**ದಿಂದ ಹವಳಗಳನ್ನು, **ಆಫ್ರಿಕಾ**ದ ಪೂರ್ವ ಕರಾವಳಿಯಿಂದ ಆನೆ ದಂತ ಹಾಗೂ ಎಮರಾಲ್ಡ್‌ಗಳನ್ನು, **ಡಮಾಸ್ಕಸ್** ಹಾಗೂ ಇತರ ಮುಸ್ಲಿಂ ನಗರಗಳಿಂದ ಉಕ್ಕಿನ ಆಯುಧಗಳನ್ನು ಪಡೆದುಕೊಂಡು ಯುರೋಪಿನಾದ್ಯಂತ ವಿತರಿಸುತ್ತಿದ್ದವು. ಇವುಗಳನ್ನು ವಿನಿಮಯ ಮಾಡಿಕೊಳ್ಳಲು ಯುರೋಪಿನ ರಾಷ್ಟ್ರಗಳಲ್ಲಿ ಹೆಚ್ಚು ವಸ್ತುಗಳಿರಲಿಲ್ಲ. ಅವುಗಳ ಉತ್ಪನ್ನಗಳು ಚರ್ಮ, ತುಪ್ಪಟ, ಉಣ್ಣೆಬಟ್ಟೆಗಳು, ತಾಮ್ರ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿತ್ತು. ಹೀಗಾಗಿ ವಿನಿಮಯಕ್ಕಾಗಿ ಅವರಿಗೆ ಚಿನ್ನ ಮತ್ತು ಬೆಳ್ಳಿಗಳ ಅವಶ್ಯಕತೆ ವಿಪರೀತವಾಗಿತ್ತು. ಪೌರ್ವಾತ್ಯ ವ್ಯಾಪಾರದ ಮೇಲೆ ವೆನಿಸ್ ನಗರದ ಏಕಸ್ವಾಮ್ಯತೆಯ ಬಗ್ಗೆ ಉಳಿದ ಯುರೋಪಿಯನ್ನರಲ್ಲಿ ಅಪಾರ ದಳ್ಳುರಿಯಿತ್ತು ಹಾಗೂ ಅದನ್ನು ದುರ್ಬಲಗೊಳಿಸಲು ಪ್ರಯತ್ನಗಳಾಗುತ್ತಿದ್ದವು.

ಕಾರಣಗಳು

ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾದ ಅಂಶಗಳನ್ನು ಪರಿಶೀಲಿಸುವುದಾದರೆ-

೧. **ಅನ್ವೇಷಣಾ ಹಸಿವು :** ಕೆಲವು ಇತಿಹಾಸಕಾರರು ಹೇಳುವಂತೆ "ಯುರೋಪ್ ಹಸಿದಿತ್ತು". ಆದುದರಿಂದ ಅದು ಭೌಗೋಳಿಕ ಅನ್ವೇಷಣೆಯಲ್ಲಿ ತೊಡಗಿತು. ಇದರರ್ಥ ವಿಷ್ಟೇ ಯುವಕರು ಸಾಹಸಕ್ಕಾಗಿ ಹಸಿದಿದ್ದರು. ರಾಜರುಗಳು ದಿಗ್ವಿಜಯಕ್ಕಾಗಿ ಹಸಿದಿದ್ದರು. ಜನಸಂಖ್ಯೆ ಹೆಚ್ಚಿದ್ದ ಯುರೋಪಿನ ಪ್ರದೇಶಗಳ ಸಾವಿರಾರು ಜನರು ಹೊಸ ಭೂಭಾಗಕ್ಕಾಗಿ,

ಸಂಪತ್ತಿಗಾಗಿ ಹಸಿದಿದ್ದರು. ವ್ಯಾಪಾರ-ವ್ಯವಹಾರಕ್ಕಾಗಿ ಚಿನ್ನ, ಬೆಳ್ಳಿಯ ಅವಶ್ಯಕತೆಯಿದ್ದುದರಿಂದ, ವ್ಯಾಪಾರಿಗಳು ಹಾಗೂ ಸರ್ಕಾರಗಳು ಅವುಗಳಿಗಾಗಿ ಹಸಿದಿದ್ದರು. ಈ 'ಹಸಿವು' ಅವರನ್ನು ಅನ್ವೇಷಣಾ ಕಾರ್ಯದಲ್ಲಿ ತೊಡಗಿಸುವಂತೆ ಮಾಡಿತು.

೨. **ಕಾನ್‌ಸ್ಟಾಂಟಿನೋಪಲ್‌ನ ಪತನ : ಪೌರ್ವಾತ್ಯ ರೋಮ್** ಸಾಮ್ರಾಜ್ಯದ ರಾಜಧಾನಿಯಾದ **ಕಾನ್‌ಸ್ಟಾಂಟಿನೋಪಲ್** ಪಟ್ಟಣವು **ಕ್ರಿ.ಶ.** ೧೪೫೩ ರಲ್ಲಿ **ಅಟ್ಟೋಮಾನ್ ಟರ್ಕ**ರ ವಶವಾದ ನಂತರ ಟರ್ಕರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದ ವ್ಯಾಪಾರಿ ಮಾರ್ಗಗಳು ಪಾಶ್ಚಿಮಾತ್ಯ ವ್ಯಾಪಾರಿಗಳಿಗೆ ಮುಚ್ಚಲ್ಪಟ್ಟವು. ಈ ಪಟ್ಟಣವು ಪೂರ್ವ, ಪಶ್ಚಿಮಗಳ ನಡುವೆ ಸೇತುವೆಯಂತೆ ಇದ್ದು ಬಿರುಸಿನ ವ್ಯಾಪಾರ-ವಹಿವಾಟುಗಳ ಪ್ರಸಿದ್ಧ ಕೇಂದ್ರವಾಗಿತ್ತು. ಇದರಿಂದಾಗಿ ಪಾಶ್ಚಿಮಾತ್ಯರಿಗೆ ಟರ್ಕರಿಂದ ಮುಕ್ತವಾದ ಮಾರ್ಗಗಳನ್ನು ಕಂಡು ಹಿಡಿಯುವುದು ಅನಿವಾರ್ಯವಾಯಿತು.

೩. **ಕ್ರುಸೇಡುಗಳು** (ಧರ್ಮ ಯುದ್ಧಗಳು) : ಕ್ರೈಸ್ತ ಹಾಗೂ ಮುಸ್ಲಿಮರ ನಡುವೆ ನಡೆಯುತ್ತಿದ್ದ ಯುದ್ಧಗಳಿಗೆ 'ಕ್ರುಸೇಡು'ಗಳು ಎನ್ನುತ್ತಾರೆ. ಇದರ ಪರಿಣಾಮವಾಗಿ ಮಧ್ಯಕಾಲೀನ ಯುಗದಲ್ಲಿ ಕ್ರೈಸ್ತರು ಹಾಗೂ ಮುಸ್ಲಿಂರ ನಡುವಿನ ಸಂಪರ್ಕ ವೃದ್ಧಿಸಿ, ಯುರೋಪಿನ ರಾಷ್ಟ್ರಗಳಿಗೆ, ಮುಖ್ಯವಾಗಿ ಇಟಲಿಗೆ ವ್ಯಾಪಾರ-ವ್ಯವಹಾರಗಳನ್ನು ಕುದುರಿಸಲು ಹೆಚ್ಚಿನ ಅವಕಾಶಗಳು ದೊರೆತವು. ಹೊಸದಾಗಿ ಹುಟ್ಟಿಕೊಂಡ ನಗರಗಳು ಪೌರ್ವಾತ್ಯ ವ್ಯಾಪಾರಗಳಿಂದ ಅಪಾರ ಲಾಭವನ್ನು ಗಳಿಸತೊಡಗಿದವು. ಉದಾ: **ವೆನಿಸ್** ನಗರವು 'ಮೆಡಿಟರೇನಿಯನ್ ಸಮುದ್ರದ ರಾಣಿ' ಎನಿಸಿಕೊಂಡಿತು. ಹೀಗೆ, ವೆನಿಸ್ ಹಾಗೂ ಇತರ ನಗರಗಳ ಪ್ರವರ್ಧಮಾನ ಹಾಗೂ ಅಪಾರ ಲಾಭದ ನಿರೀಕ್ಷೆಗಳು ಇತರೆ ರಾಷ್ಟ್ರಗಳು ಸಹ ಭೌಗೋಳಿಕ ಅನ್ವೇಷಣೆಯಲ್ಲಿ ತೊಡಗಲು ಕಾರಣವಾದವು.

೪. **ವ್ಯಾಪಾರದ ಸ್ಪರ್ಧೆ** : ಏಷ್ಯಾದ ಉತ್ಪಾದಿತ ವಸ್ತುಗಳನ್ನು ಯುರೋಪಿನಾದ್ಯಂತ ವಿತರಿಸುವ ಹಂಚುವ ಏಕಸ್ವಾಮ್ಯತೆಯು **ವೆನಿಸ್** ಹಾಗೂ **ಜಿನೋವಾ**ದ ವರ್ತಕರ ಕೈಯಲ್ಲಿತ್ತು. ಅವರು ಹೆಚ್ಚು ಲಾಭ ಗಳಿಸುವ ಆಶೆಯಿಂದ ಉದ್ದೇಶಪೂರ್ವಕವಾಗಿ ಬೆಲೆಗಳನ್ನು ಮಿತಿಮೀರಿ ಏರಿಸುತ್ತಿದ್ದರು. ಇದರಿಂದ ತೊಂದರೆಗೊಳಗಾದ ಇತರ ದೇಶಗಳ ವರ್ತಕರು ಮತ್ತು ಆಡಳಿತಗಾರರು ಏಷ್ಯಾ ಖಂಡದ ಉತ್ಪಾದಕ ಹಾಗೂ ಪೂರೈಕೆ ರಾಷ್ಟ್ರಗಳೊಂದಿಗೆ ಮಧ್ಯವರ್ತಿಗಳಿಲ್ಲದೆ ನೇರ ಸಂಪರ್ಕವಿಟ್ಟುಕೊಳ್ಳಲು ನಿರ್ಧರಿಸಿದರು. ಈ ಬಯಕೆಯು ಅನ್ವೇಷಣೆಗೆ ವಿಶೇಷವಾದ ಸ್ಫೂರ್ತಿಯನ್ನು ನೀಡಿತು.

ಮರ್ಕಂಟೈಲಿಸಂ ಅಥವಾ ವ್ಯಾಪಾರಿ ಪ್ರವೃತ್ತಿ ಕೂಡಾ ಭೌಗೋಳಿಕ ಅನ್ವೇಷಣೆಗೆ ಸ್ಫೂರ್ತಿಯನ್ನು ನೀಡಿತು. ಇದೊಂದು ಸರಳ ಆರ್ಥಿಕ ಚಟುವಟಿಕೆ. ವಸ್ತುಗಳನ್ನು ಅವುಗಳು ಹೆಚ್ಚು ಸಿಗುವ ಪ್ರದೇಶಗಳಲ್ಲಿ ಖರೀದಿಸಿ, ಅವುಗಳನ್ನು ಕೊರತೆಯಿರುವ ಸ್ಥಳಗಳಲ್ಲಿ ಹೆಚ್ಚಿನ ಬೆಲೆಗೆ ಮಾರುವುದೇ 'ಮರ್ಕಂಟೈಲಿಸಂ'. ಈ ವ್ಯವಹಾರಕ್ಕೆ ಹಣದ ಅವಶ್ಯಕತೆಯಿತ್ತು.

ಕೆಲವು ವಸ್ತುಗಳನ್ನು ಕೇವಲ ವಸ್ತುಗಳ ವಿನಿಮಯದಿಂದ ಪಡೆಯಲು ಸಾಧ್ಯವಿರಲಿಲ್ಲ. ಯುರೋಪಿಯನ್ ಅರ್ಥವ್ಯವಸ್ಥೆಯು ಹಣದ ಅರ್ಥವ್ಯವಸ್ಥೆಯಾದಾಗ ದೂರ ಪ್ರಾಚ್ಯದ ವಸ್ತುಗಳಿಗೆ ಬೇಡಿಕೆ ಏರಿತು. ಆದರೆ ಯುರೋಪಿಯನ್ನರಲ್ಲಿ ದೂರ ಪ್ರಾಚ್ಯದ ವಸ್ತುಗಳನ್ನು ಪಡೆಯುವುದಕ್ಕಾಗಿ ವಿನಿಮಯ ಮಾಡಿಕೊಳ್ಳಲು, ಬೇಕಾದಷ್ಟು ಸಾಮಾಗ್ರಿಗಳು ಇಲ್ಲದ ಕಾರಣ ಚಿನ್ನ ಮತ್ತು ಬೆಳ್ಳಿಯ ಹುಡುಕಾಟ ಪ್ರಾರಂಭ ಆಯಿತು.

೫. **ಪೌರ್ವಾತ್ಯ ರಾಷ್ಟ್ರಗಳಲ್ಲಿನ ಸಂಪತ್ತಿನ ಬಯಕೆ :** ಇಟಾಲಿಯನ್ ಯಾತ್ರಿಕ **ಮಾರ್ಕೊಪೋಲೋನು** ತನ್ನ ತಂದೆಯೊಂದಿಗೆ ಚೀನಾದ ದೊರೆ **ಕುಬ್ಲೈಖಾನನ** ಆಸ್ಥಾನಕ್ಕೆ ಭೇಟಿ ನೀಡಿದನು. ಪೌರ್ವಾತ್ಯ ರಾಷ್ಟ್ರಗಳಲ್ಲಿ ಅವನ ಅನುಭವಗಳು, ಅವನು ಏಷ್ಯಾದಿಂದ ತನ್ನ ರಾಷ್ಟ್ರಕ್ಕೆ ತಂದ ಅಪಾರ ಮೌಲ್ಯದ ವಸ್ತುಗಳು ಹಾಗೂ ಪೌರ್ವಾತ್ಯ ರಾಷ್ಟ್ರಗಳ ಸಂಪತ್ತುಗಳ ಬಗ್ಗೆ ಅವನ ಬರವಣಿಗೆಗಳು ಯುರೋಪಿಯನ್ನರಲ್ಲಿ ಪೂರ್ವಕ್ಕೆ ಹೋಗುವ ಬಯಕೆಗೆ ಚಾಲನೆ ನೀಡಿದವು.

೬. **ಹೊಸ ಸಾಗರ ಮಾರ್ಗಗಳಿಗಾಗಿ ಶೋಧ :** ಸಾಹಸ ಪ್ರೇಮ, ಅದಮ್ಯ ಉತ್ಸಾಹ ಹಾಗೂ ಉದ್ಯಮಶೀಲತೆ ಕೂಡ ನಾವಿಕರಲ್ಲಿ ಕಂಡು ಕೇಳರಿಯದ ಸಾಗರಗಳಲ್ಲಿ ನೌಕಾಯಾನ ಮಾಡಿ, ಅಪಾಯಗಳನ್ನೆದುರಿಸಿ, ಸಾಗರ ಮಾರ್ಗಗಳನ್ನು ಕಂಡುಹಿಡಿಯಲು ಪ್ರೇರಣೆಯನ್ನುಂಟು ಮಾಡಿತು. ಹೀಗಾಗಿ, ಇಂದಿನಂತೆ ವೈಜ್ಞಾನಿಕೋಪಕರಣಗಳು, ದೂರ ಪ್ರಯಾಣಕ್ಕೆ ಬೇಕಾದ ಬೃಹತ್ ಹಡಗುಗಳು ಇಲ್ಲದಿದ್ದರೂ ನಾವಿಕರು ಅನ್ವೇಷಣೆಯ ಬೃಹತ್ ಕಾರ್ಯಕ್ಕೆ ತಮ್ಮನ್ನು ಹಚ್ಚಿಕೊಂಡರು.

೭. **ಧರ್ಮ ಪ್ರಚಾರ :** ಕ್ರೈಸ್ತ ಮತವು ಯುರೋಪಿನಲ್ಲಿ ಮುಖ್ಯ ಧರ್ಮವಾಗಿದ್ದು ಅದನ್ನು ತೀವ್ರ ರೀತಿಯಲ್ಲಿ ಪ್ರಚಾರ ಮಾಡಲು **ಮಿಶನರಿಗಳು** (ಮತ ಪ್ರಚಾರಕರು) ಪ್ರಯತ್ನಿಸುತ್ತಿದ್ದರು. ಮಧ್ಯಕಾಲೀನ ಯುಗದ ಅಂತ್ಯದ ವೇಳೆಗೆ ಯುರೋಪಿನಾದ್ಯಂತ ಕ್ರೈಸ್ತ ಮತವು ಹರಡಿತ್ತು. ಆದ್ದರಿಂದ ಮಿಶನರಿಗಳು ಏಷ್ಯಾದತ್ತ ತಮ್ಮ ದೃಷ್ಟಿಯನ್ನು ಹರಿಸಲು ಪ್ರಾರಂಭಿಸಿದರು. ಹೊಸದಾಗಿ ಅನ್ವೇಷಿಸಿದ ನಾಡುಗಳಲ್ಲಿ ತಮ್ಮ ಮತವನ್ನು ಪ್ರಚಾರ ಮಾಡಿ ಅನುಯಾಯಿಗಳನ್ನು ಗಳಿಸಿಕೊಳ್ಳುವುದು ಇವರ ಗುರಿಯಾಯಿತು. ಪ್ರಪಂಚದ ಮೂಲೆಮೂಲೆಗೂ ಕ್ರೈಸ್ತ ಮತದ ಸಂದೇಶಗಳನ್ನು ಕೊಂಡೊಯ್ಯಲು ಯುರೋಪಿನಲ್ಲಿ ಪ್ರಭಾವಶಾಲಿ ಮಿಶನರಿ ಚಳವಳಿಗಳನ್ನು ಸಂಘಟಿಸಲಾಯಿತು. ಹೊಸ ಅನ್ವೇಷಣೆಗಳಿಗೆ ಉತ್ತೇಜನ ನೀಡಿದ ರಾಜರು, ಶ್ರೀಮಂತ ವರ್ಗದವರು, ಮುಂತಾದವರು ಕ್ರೈಸ್ತ ಮತವನ್ನು ಪ್ರಚಾರ ಮಾಡಲು ಕೂಡ ಬೆಂಬಲವಿತ್ತರು. ಹೀಗೆ ವ್ಯಾಪಾರಿಗಳು 'ಚಿನ್ನ'ಕ್ಕಾಗಿ, ಮಿಶನರಿಗಳು ತಮ್ಮ ದೇವರಿಗಾಗಿ ಹೊಸ ಭೂಭಾಗಗಳನ್ನು ಅರಸಿದರು.

೮. **ಜ್ಞಾನದ ನಿಖರತೆ :** 'ನವೋದಯ ಚಳವಳಿ'ಯು ಚಿಂತನಾ ಪ್ರಜ್ಞೆಯನ್ನು ಬೆಳೆಸಿ, ಭೌಗೋಳಿಕ ಜ್ಞಾನದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಭೂಮಿಯ ಸಮತಟ್ಟಾಗಿದೆ

ಎಂಬುದು ಚರ್ಚಿನ ಸಿದ್ಧಾಂತವಾಗಿತ್ತು. ಆದರೆ ವಿಜ್ಞಾನಿಗಳು ಭೂಮಿಯು ಗುಂಡಾಗಿದೆ ಎಂಬ ಸತ್ಯವನ್ನು ನಿಖರವಾಗಿ ಹೇಳಿದಾಗ ನಾವಿಕರಲ್ಲಿ ಹೆಚ್ಚಿನ ನಂಬಿಕೆ ಹಾಗೂ ಛಲ ಉಂಟಾಗಿ ಭಾರತವನ್ನರಸಲು ಹೊರಟರು.

೯. **ದಿಕ್ಸೂಚಿ ಹಾಗೂ ನೌಕಾ ತಂತ್ರಜ್ಞಾನ ಸುಧಾರಣೆ** : ಅಪಾಯಕಾರಿ ಸಮುದ್ರ ಯಾನವನ್ನು ಮಾಡಲು ಕೇವಲ ಆಸಕ್ತಿ, ಛಲ ಮತ್ತು ಸಾಹಸಶೀಲತೆ ಮಾತ್ರ ಇದ್ದರೆ ಸಾಲದು. ಅದಕ್ಕೆ ಪೂರಕವಾಗಿ ವೈಜ್ಞಾನಿಕ ಪರಿಕರಗಳು ಹಾಗೂ ಸಾಧನಗಳು ಕೂಡ ಅಷ್ಟೇ ಮುಖ್ಯ. ಪುನರುಜ್ಜೀವನ ಕಾಲದ ಸಂಶೋಧಕರು ಹಾಗೂ ವಿಜ್ಞಾನಿಗಳು ಅಂತಹ ಸಾಧನಗಳನ್ನು ಕಂಡುಹಿಡಿದರು. ಉದಾ: ನಾವಿಕನ **ದಿಕ್ಸೂಚಿ** (ಮರ್ರೈನರ್ಸ್ ಕಂಪಾಸ್) ಅಲ್ಲದೆ ಭೂಗೋಳ ಹಾಗೂ ಖಗೋಳ ಶಾಸ್ತ್ರಜ್ಞರು ನಿಖರವಾದ ಭೂಪಟಗಳನ್ನು ತಯಾರಿಸುವುದರಲ್ಲಿ ಮತ್ತು ಖಗೋಳ ಜ್ಞಾನಗಳಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿದರು. ನೌಕೆಗಳ ನಿರ್ಮಾಣ ತಂತ್ರಜ್ಞಾನದಲ್ಲಾದ ಪ್ರಗತಿ ಕೂಡ ದೂರ ಯಾನಗಳನ್ನು ಕೈಗೊಂಡು ಅನ್ವೇಷಣೆ ನಡೆಸಲು ಸಹಕಾರಿಯಾಯಿತು. ಪ್ರಭಾವಶಾಲಿ ಹಾಗೂ ಶ್ರೀಮಂತ ವ್ಯಕ್ತಿಗಳು ಅವಶ್ಯಕ ಆರ್ಥಿಕ ಹಾಗೂ ಇನ್ನಿತರ ಸೌಕರ್ಯಗಳನ್ನು ನೀಡಿದರು.

೧೦. **ಟಾರ್ಡೆಸಿಲಾಸ್ ಒಪ್ಪಂದ** : ೧೪೯೪ ರಲ್ಲಿ **ಪೋರ್ಚುಗಲ್** ಮತ್ತು **ಸ್ಪೇಯಿನ್** ದೇಶಗಳು **ಟಾರ್ಡೆಸಿಲಾಸ್ ಒಪ್ಪಂದಕ್ಕೆ** ಸಹಿ ಹಾಕಿ ತಮಗೆ ಗೊತ್ತಿದ್ದ ಪ್ರಪಂಚವನ್ನು ತಮ್ಮೊಳಗೆ ವಿಭಾಗಿಸಿಕೊಂಡರು. ಈ ಒಪ್ಪಂದ ಪ್ರಕಾರ **'ಕೇಪ್ ಆಫ್ ಗುಡ್ ಹೋಪ್'**ನ ಪೂರ್ವಕ್ಕಿದ್ದ ಎಲ್ಲಾ ವ್ಯಾಪಾರ ಮಾರ್ಗಗಳು **ಪೋರ್ಚುಗಲ್**ಗೆ ಹಾಗೂ ಪಶ್ಚಿಮಕ್ಕಿದ್ದ **ಅಟ್ಲಾಂಟಿಕ್** ಸಾಗರದ ಮೇಲಿನ ಎಲ್ಲಾ ಮಾರ್ಗಗಳು **ಸ್ಪೇಯಿನ್**ಗೆ ಕೊಡಲ್ಪಟ್ಟಿತು. ಇದರಿಂದಾಗಿ ಪೋರ್ಚುಗೀಸರು ಪೂರ್ವ ದೇಶಗಳ ಮೇಲೆ ಹೆಚ್ಚು ಆಸಕ್ತಿ ವಹಿಸಿ ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದರು. ಸ್ಪ್ಯಾನಿಯಾರ್ಡರು ಲ್ಯಾಟಿನ್ (ಮಧ್ಯ) ಹಾಗೂ ದಕ್ಷಿಣ ಅಮೆರಿಕಾಗಳ ಮೇಲೆ ಗಮನ ಹರಿಸಿದರು.

೧೧. **ಪ್ರೆಸ್ಟರ್ ಜಾನ್ ಕುರಿತ ದಂತಕತೆ** : ಮಧ್ಯಕಾಲೀನ ಯುಗದಲ್ಲಿ ಪೂರ್ವಕ್ಕೆ ಸಂಬಂಧಿಸಿದಂತೆ ದಂತ ಕಥೆಯೊಂದಿತ್ತು. **ಪ್ರೆಸ್ಟರ್ ಜಾನ್** ಎಂಬ ಕ್ರೈಸ್ತ ದೊರೆಯು ಪೂರ್ವದಲ್ಲಿ ಆಳುತ್ತಿದ್ದು ಅವನು ಅಪಾರ ಶ್ರೀಮಂತನಾಗಿದ್ದಾನೆ ಎಂಬ ಕಲ್ಪನೆ ಯುರೋಪಿಯನ್ನರಲ್ಲಿ ಇತ್ತು. ಆದುದರಿಂದ ಪ್ರೆಸ್ಟರ್‌ಜಾನ್‌ನ ಸಾಮ್ರಾಜ್ಯವನ್ನು ತಲುಪಿ ಅವನನ್ನು ಭೇಟಿಯಾಗುವುದು ಕೂಡಾ ಭೌಗೋಳಿಕ ಅನ್ವೇಷಣೆಗೆ ಪ್ರೇರಣೆಯನ್ನು ನೀಡಿತು.

ದೂರ ಪ್ರಾಚ್ಯಕ್ಕೆ ಮೊದಲ ಭೇಟಿಗಳು

ಇಟಲಿಯ ವೆನಿಸಿನ ವ್ಯಾಪಾರಿಗಳಾದ **ಪೋಲೋ** ಸಹೋದರರು ಕ್ರಿ.ಶ. ೧೨೬೦ ರಲ್ಲಿ ಚೀನಾಕ್ಕೆ ಭೇಟಿ ನೀಡಿದರು. **ಕುಬ್ಲೈಖಾನನ** ಆಸ್ಥಾನವನ್ನು ಸಂದರ್ಶಿಸಿದರು. ಎರಡನೇ ಭೇಟಿಯ ಸಂದರ್ಭದಲ್ಲಿ ಅವರು **ಮಾರ್ಕೊ ಪೋಲೋ**ನನ್ನು ಕರೆದೊಯ್ದರು. ಇವನು

ಮಧ್ಯಕಾಲಿನಯುಗದ ಅತೀ ಪ್ರಸಿದ್ಧ ಐರೋಪ್ಯ ಪ್ರವಾಸಿ. ಚೀನಾ ದೇಶದಲ್ಲಿ ೧೭ ವರ್ಷಗಳ ಕಾಲ ಪ್ರಯಾಣಿಸಿ, ೧೨೯೨ ರಲ್ಲಿ ಚೀನಾದಿಂದ ಹೊರಟು, ಇಂಡೋನೇಷ್ಯಾ, ದಕ್ಷಿಣ ಭಾರತ, ಪರ್ಶಿಯನ್ ಖಾರಿ ಪ್ರದೇಶಗಳನ್ನು ಸಂದರ್ಶಿಸುತ್ತಾ ತನ್ನ ರಾಷ್ಟ್ರವನ್ನು ತಲುಪಿದನು. ಇವನು ತನ್ನ ಅನುಭವಗಳ ಕುರಿತು ಬರೆದ ಬರವಣಿಗೆಗಳು ಹಲವು ಐರೋಪ್ಯ ಸಾಹಸಿಗಳಿಗೆ, ಉದ್ಯಮಶೀಲರಿಗೆ ಪ್ರೇರಣೆ ನೀಡಿದವು.

೧೫ನೇ ಶತಮಾನಕ್ಕೆ ಮೊದಲು ನಡೆದ ಅನ್ವೇಷಣೆಗಳು

ಸಮುದ್ರಯಾನ ಅನ್ವೇಷಣೆಯ ಪ್ರಯತ್ನಗಳು ಮಧ್ಯಕಾಲೀನ ಯುಗದಲ್ಲೂ ನಡೆದಿದ್ದವು. ಆದರೆ ಅವುಗಳು ಹೊಸ ಪ್ರದೇಶಗಳ ಕಂಡುಹಿಡಿಯುವಿಕೆಗೆ ದಾರಿ ಮಾಡಿಕೊಡಲಿಲ್ಲ. ಉದಾ: ಹನ್ನೊಂದನೆಯ ಶತಮಾನದಲ್ಲಿ **ವೈಕಿಂಗ್** ಜನರು ಗ್ರೀನ್‌ಲ್ಯಾಂಡ್, ಲ್ಯಾಬ್ರಡಾರ್ ಪ್ರದೇಶಗಳಿಗೆ ಭೇಟಿ ನೀಡಿದ್ದರು. ಪಾಶ್ಚಿಮಾತ್ಯ ಐರೋಪ್ಯರಿಗೆ ದೂರಪ್ರಾಚ್ಯ ರಾಷ್ಟ್ರಗಳಾದ ಚೀನಾ, ಇಂಡೋನೇಷ್ಯಾ, ಭಾರತಗಳ ಬಗ್ಗೆ ಅರಿವಿತ್ತು. ಅವುಗಳ ಬಗ್ಗೆ ಮಾರ್ಕೊಪೋಲೋನ ಬರೆಹಗಳಲ್ಲಿ ವರ್ಣನೆಗಳಿದ್ದರೂ, ಅವುಗಳನ್ನು ವಿಶಾಲಾರ್ಥದಲ್ಲಿ 'ಅನ್ವೇಷಣೆ' ಎಂದು ಕರೆದಿಲ್ಲ. ಏಕೆಂದರೆ ಈ ಅವಧಿಯಲ್ಲಿ ಭೌಗೋಳಿಕ ಅನ್ವೇಷಣೆಗಳಿಗೆ ಪ್ರೇರಣೆಯಾಗುವ ಯಾವುದೇ ರೀತಿಯ ಆರ್ಥಿಕ, ರಾಜಕೀಯ ಅಥವಾ ಸಾಂಸ್ಕೃತಿಕ ಒತ್ತಡಗಳಿರಲಿಲ್ಲ. ಹದಿನೈದು ಮತ್ತು ಹದಿನಾರನೆಯ ಶತಮಾನಗಳಲ್ಲಿ, ಹೊಸ ಪ್ರದೇಶಗಳ ಹಾಗೂ ಹೊಸ ಸಮುದ್ರ ಮಾರ್ಗಗಳ ಕಂಡುಹಿಡಿಯುವಿಕೆ ಹಾಗೂ ಅಭಿವೃದ್ಧಿಯ ನಿಜವಾದ ಅಗತ್ಯತೆಯುಂಟಾಯಿತು. ಆದುದರಿಂದ ಇಂಥ ಗಹನವಾದ ಕಾರ್ಯದಲ್ಲಿ ಹಲವಾರು ಪಾಶ್ಚಿಮಾತ್ಯ ರಾಷ್ಟ್ರಗಳು, ಉದಾ: ಸ್ಪೇಯಿನ್, ಪೋರ್ಚುಗಲ್, ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಟಲಿ ಭಾಗವಹಿಸಿದುದು ಆಕಸ್ಮಿಕವಾಗಿರಲಿಲ್ಲ.

ಪ್ರಮುಖ ಭೌಗೋಳಿಕ ಅನ್ವೇಷಣೆಗಳು

ಸಾಹಸಮಯ ಸಮುದ್ರಯಾನ ಹಾಗೂ ಅನ್ವೇಷಣೆಯಲ್ಲಿ **ಪೋರ್ಚುಗೀಸರು** ಹಾಗೂ **ಸ್ಪ್ಯಾನಿಯಾರ್ಡರು** ಮೊದಲಿಗರಾಗಿದ್ದಾರೆ.

ಪೌರ್ವಾತ್ಯ ದೇಶಗಳಿಗೆ ಕೇಪ್-ದಾರಿ: ಪೋರ್ಚುಗಲ್ಲಿನ ರಾಜಕುಮಾರ **ಹೆನ್ರಿ**ಯನ್ನು **ನಾವಿಕ ಹೆನ್ರಿ** (ಹೆನ್ರಿ ದಿ ನ್ಯಾವಿಗೇಟರ್) ಎಂದು ಕರೆಯುತ್ತಾರೆ. ಅವನೊಬ್ಬ ನೌಕಾಯಾನ ಸಾಹಸದ ಒಬ್ಬ ಮಹಾನ್ ಪ್ರೋತ್ಸಾಹಕನಾಗಿದ್ದ. ಆಫ್ರಿಕ ಖಂಡವನ್ನು ಸುತ್ತು ಹಾಕಿ ಪೂರ್ವಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿಯಲು ಕನಸು ಕಾಣುತ್ತಿದ್ದ. 'ನಾವಿಕ'ನೆಂಬ ಬಿರುದು ಇದ್ದರೂ ಅವನೇನು ಸ್ವತಃ ನಾವಿಕನಾಗಿರಲಿಲ್ಲ; ನೌಕೆಯನ್ನು ಚಲಾಯಿಸಿರಲಿಲ್ಲ. ಆದರೆ ನಾವಿಕರಿಗೆ ಅಪಾರ ಪ್ರೋತ್ಸಾಹ ನೀಡಿದ; ಅವರಿಗಾಗಿ ಶಾಲೆಯೊಂದನ್ನು ಸ್ಥಾಪಿಸಿದ. ಈ ಸಂಸ್ಥೆಯು ಪರಿಣಿತ ಇಟಾಲಿಯನ್ ನಾವಿಕರನ್ನು, ಭೂಗೋಳ ತಜ್ಞರನ್ನು ಆಕರ್ಷಿಸಿತು. ಅವನು ಸೈನಿಕರು, ವ್ಯಾಪಾರಿಗಳು ಹಾಗೂ ಕ್ರೈಸ್ತ ಮತ ಪ್ರಚಾರಕರನ್ನು ಹೊಂದಿದ ನೌಕಾ

ದಂಡಯಾತ್ರೆಗಳನ್ನು ಕಳುಹಿಸಿದ್ದನು. ಅವರು **ಮದೈರಾ** ಹಾಗೂ **ಅಜೋರ್ಸ್** ದ್ವೀಪಗಳನ್ನು ಕಂಡುಹಿಡಿದು ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡರು. 'ಕತ್ತಲೆಯ ಖಂಡ' (ಆಫ್ರಿಕ)ದ ಇದುವರೆಗೂ ಅನ್ವೇಷಿಸದ ತೀರ ಪ್ರದೇಶಗಳನ್ನು ಶೋಧಿಸಿದರು. ಹೆನ್ರಿಯು ಕಣ್ಮರೆಯಾದ ನಂತರ **ಟೋಪೋ ಗೊನ್ಸಾಲ್ವೆಸ್**ನು ೧೪೭೨ ರಲ್ಲಿ ಸಮಭಾಜಕ ವೃತ್ತವನ್ನು ದಾಟಿದನು. ಕ್ರಿ.ಶ. ೧೪೮೮ ರಲ್ಲಿ **ಭಾರ್ಥಲೋಮಿಯೋ ಡಯಾಸ್**ನು ಆಫ್ರಿಕ ಖಂಡದ ದಕ್ಷಿಣದ ತುತ್ತತುದಿಯನ್ನು ತಲುಪಿದನು. ಈ ಭೂ ಶಿಖರದಲ್ಲಿ (Cape) ಬಿರುಗಾಳಿಯ ಅಬ್ಬರವನ್ನು ಕಂಡು ಅದನ್ನು **ಕೇಪ್ ಆಫ್ ಸ್ಟೋಮ್ಸ್** (ಬಿರುಗಾಳಿಯ ಭೂಶಿಖರ) ಎಂದು ಕರೆದನು. ಆದರೆ ಅವನ ರಾಜನು ಅದನ್ನು **ಕೇಪ್ ಆಫ್ ಗುಡ್ ಹೋಪ್** (ಆಶಾಕಿರಣದ ಭೂಶಿಖರ) ಎಂದು ಕರೆದನು. ಭಾರತಕ್ಕೆ ಜಲಮಾರ್ಗವನ್ನು ತೋರಿಸುವ ಭರವಸೆಯನ್ನು ಈ ಘಟನೆಯು ನೀಡಿದುದರಿಂದ ಈ ಹೆಸರಿಟ್ಟನು.

ವಾಸ್ಕೋ-ಡ-ಗಾಮ : ಭಾರತಕ್ಕೆ ಜಲಮಾರ್ಗ ಕಂಡು ಹಿಡಿಯಬೇಕೆನ್ನುವ ನಾವಿಕ **ಹೆನ್ರಿ**ಯ ಕನಸು ೧೪೯೮ ರಲ್ಲಿ ನನಸಾಯಿತು. ಪೋರ್ಚುಗಲ್ಲಿಗೆ ಸೇರಿದ ವಾಸ್ಕೋ-ಡ-ಗಾಮನು ಈ ಮಹಾನ್ ಕಾರ್ಯವನ್ನು ನೇರವೇರಿಸಿದನು. ೧೪೬೦ ರಲ್ಲಿ ಹುಟ್ಟಿದ ಇವನು ರಾಜ **ಮ್ಯಾನುವೆಲ್** ಆದೇಶದ ಮೇರೆಗೆ, ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿದು ವ್ಯಾಪಾರದ ಮೇಲಿನ ಮುಸ್ಲಿಂರ ಏಕಸ್ವಾಮ್ಯತೆಯನ್ನು ಮುರಿದು ಹಾಕಲು, ಜುಲೈ ೮, ೧೪೯೭ ರಂದು ೪ ನೌಕೆಗಳೊಂದಿಗೆ **ಲಿಸ್ಬನ್**ನಿಂದ ಹೊರಟನು. (ಅವುಗಳಲ್ಲಿ ಮೂರು ನೌಕೆಗಳ ಹೆಸರು, ಸಾವೋ ಗ್ಯಾಬ್ರಿಯಲ್, ಸಾವೋ ರಾಫೆಲ್ ಮತ್ತು ಬೆರ್ರಿಯೋ). ಅವನು ಆಫ್ರಿಕಾ ಖಂಡದ ಮಲಿಂದಿ (ಕೆನ್ಯಾ) ಬಂದರನ್ನು ತಲುಪಿದಾಗ ಭಾರತದ **ಕಲ್ಲಿಕೋಟೆ**ಗೆ ದಾರಿ ತಿಳಿದ ವ್ಯಕ್ತಿಯೊಬ್ಬನ ಪರಿಚಯವಾಯಿತು. ಅವನೊಡನೆ ೨೩ ದಿನಗಳ ಕಾಲ ಅರಬ್ಬೀ ಸಮುದ್ರದಲ್ಲಿ ಪ್ರಯಾಣಿಸಿ ಮೇ ೨೦, ೧೪೯೮ ರಲ್ಲಿ ಕಲ್ಲಿಕೋಟೆಗೆ ತಲುಪಿದನು. ಕಲ್ಲಿಕೋಟೆಯಲ್ಲಿ ಅವನು **ಜಾಮೋರಿನ್** ಎಂಬ ರಾಜನನ್ನು ಭೇಟಿಯಾದನು. ೧೪೯೮ ಅಗಸ್ಟ್ ತಿಂಗಳಲ್ಲಿ ತನ್ನ ದೇಶಕ್ಕೆ ಹಿಂತಿರುಗುವಾಗ ತನ್ನ ನೌಕಾಯಾನದ ವೆಚ್ಚದ ೬೦ ಪಟ್ಟು ಬೆಲೆ ಬಾಳುವಷ್ಟು ಪೌರ್ವಾತ್ಯ ಸಾಮ್ರಾಗಿಗಳನ್ನು ಕೊಂಡೊಯ್ದನು. ವಾಸ್ಕೋ-ಡ-ಗಾಮ ಭಾರತಕ್ಕೆ ೧೪೯೭-೯೯, ೧೫೦೨-೦೩ ಹಾಗೂ ೧೫೨೪ ರಲ್ಲಿ ಬಂದು ಹೋದನು. ೧೫೨೪ ರಲ್ಲಿ ಭಾರತಕ್ಕೆ ಮೂರನೆ ಬಾರಿಗೆ ಭೇಟಿ ಕೊಟ್ಟನು. ಆದರೆ ಅವನ ದೇಹಾರೋಗ್ಯ ಕ್ಷೀಣಿಸಿದ ಕಾರಣ ಅದೇ ವರ್ಷ **ಕೊಚ್ಚಿನ್**ನಲ್ಲಿ ಮರಣ ಹೊಂದಿದನು. ೧೫೩೮ ರಲ್ಲಿ ಅವನ ದೇಹವನ್ನು ಪೋರ್ಚುಗಲ್‌ಗೆ ಕೊಂಡೊಯ್ಯಲಾಯಿತು.

ವಾಸ್ಕೋ-ಡ-ಗಾಮನು ಈ ರೀತಿಯಲ್ಲಿ ಪೂರ್ವಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿಯುವುದರ ಮೂಲಕ ಭಾರತಕ್ಕೆ ಹಾಗೂ ಪಶ್ಚಿಮ ರಾಷ್ಟ್ರಗಳ ಮಧ್ಯೆ ನಿರಂತರ ಸಂಪರ್ಕಕ್ಕೆ

ಕಾರಣಕರ್ತನಾದನು. ಅಲ್ಲದೆ ಪೋರ್ಚುಗಲ್ಲನ್ನು ಒಂದು ವಿಶ್ವ ಶಕ್ತಿಯನ್ನಾಗಿ ಮಾಡಿದನು. ಪೋರ್ಚುಗೀಸರು ಈ ಮಾರ್ಗವನ್ನು ಬಳಸಿ ಪೂರ್ವ ಪ್ರಪಂಚದಲ್ಲಿ ಅಲ್ಪಕಾಲದಲ್ಲಿಯೇ ವ್ಯಾಪಾರ ಹಾಗೂ ರಾಜಕೀಯ ಸಾಮ್ರಾಜ್ಯವನ್ನು ಕಟ್ಟಿದರು. ಅರಬ್ಬಿ ಸಮುದ್ರವು 'ಪೋರ್ಚುಗೀಸರ ಸರೋವರ'ವಾಯಿತು. ಇದುವರೆಗೆ ಏಷ್ಯಾದಲ್ಲಿ ವ್ಯಾಪಾರದಲ್ಲಿ ಮೇಲುಗೈ ಯನ್ನು ಹೊಂದಿದ್ದ ಅರಬ್ಬರ ಸ್ಥಾನಕ್ಕೆ ಅಪಾರ ಹೊಡೆತ ಬಿದ್ದಿತ್ತು ಮತ್ತು ಇದರಿಂದ ಅವರೆಂದೂ ಚೇತರಿಸಿಕೊಳ್ಳಲಿಲ್ಲ. ಇಟಲಿಯ ನಗರಗಳೂ ಪ್ರಾಮುಖ್ಯತೆಯನ್ನು ಕಳೆದು ಕೊಳ್ಳತೊಡಗಿದವು. ೧೫೦೯ ರಲ್ಲಿ ಭಾರತದಲ್ಲಿ ಪೋರ್ಚುಗೀಸರ ಗವರ್ನರ್ ಆಗಿದ್ದ **ಫ್ರಾನ್ಸಿಸ್ಕೋ-ಡಿ-ಆಲ್ಮಿಡಾ**ನು, ಅರಬ್ಬರು, ಈಜಿಪ್ಟ್ ಹಾಗೂ ಗುಜರಾತಿನ ಸುಲ್ತಾನರುಗಳ ಒಗ್ಗೂಡಿದ ನೌಕಾದಳಗಳನ್ನು ನಾಶ ಮಾಡಿದನು. **ಅಲ್ಬುಕರ್ಕ್**ನು ೧೫೧೦ ರಲ್ಲಿ **ಗೋವಾ**ವನ್ನು ಬಹಮನಿ ಸುಲ್ತಾನರಿಂದ ವಶಪಡಿಸಿಕೊಂಡು ಪೂರ್ವದಲ್ಲಿ ಪೋರ್ಚುಗೀಸರ ರಾಜಧಾನಿಯನ್ನಾಗಿ ಮಾಡಿಕೊಂಡನು. ಪೋರ್ಚುಗೀಸರು ಮುಂದೆ ೧೫೧೭ ರಲ್ಲಿ ಚೀನಾಕ್ಕೆ ಹಾಗೂ ೧೫೪೨ ರಲ್ಲಿ ಜಪಾನಿನೊಡನೆ ಸಂಪರ್ಕ ಸಾಧಿಸಿದರು. ಇತಿಹಾಸದಲ್ಲಿ ವಾಸ್ಕೋ-ಡ-ಗಾಮನ ಕಾಲವನ್ನು "ಡ-ಗಾಮ ಯುಗ" ಎಂದು ಕರೆಯಲ್ಪಟ್ಟಿದೆ. ಅತ್ಯಲ್ಪ ಅವಧಿಯಲ್ಲಿ ಪೋರ್ಚುಗೀಸರು ಶ್ರೀಲಂಕಾ, ಸುಮಾತ್ರ, ಜಾವಾ ಮತ್ತು ಸಾಂಬಾರುದ್ರವ್ಯಗಳ ದ್ವೀಪಗಳ ಮೇಲೆ ತಮ್ಮ ರಾಜಕೀಯ ಅಧಿಕಾರವನ್ನು ಹೇರಿ ಅವುಗಳ ಶೋಷಣೆಯನ್ನು ಪ್ರಾರಂಭಿಸಿದರು.

ಅಮೆರಿಕಾಗಳ ಅನ್ವೇಷಣೆ

ಕ್ರಿಸ್ಟೋಫರ್ ಕೊಲಂಬಸ್ನು ಇಟಲಿಯ ಜಿನೋವಾದ ನಾವಿಕನಾಗಿದ್ದನು. ಇವನ ಸಿದ್ಧಾಂತವು ಭಿನ್ನವಾಗಿತ್ತು. ಅಟ್ಲಾಂಟಿಕ್ ಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಪ್ರಯಾಣಿಸಿ ದರೆ ದೂರಪ್ರಾಚ್ಯವನ್ನು ವೇಗವಾಗಿ ಹಾಗೂ ಸುಲಭವಾಗಿ ಮುಟ್ಟಬಹುದು ಎಂಬ ಕಲ್ಪನೆ ಯನ್ನು ಇಟ್ಟುಕೊಂಡಿದ್ದನು. ಸ್ಪೇಯಿನ್ನಿನ ರಾಣಿ **ಇಸಾಬೆಲ್ಲ**ಳ ಸಹಾಯದಿಂದ ಅವನು ಕ್ರಿ.ಶ. ೧೪೯೨ ರಲ್ಲಿ ಮೂರು ಸಣ್ಣ ಹಡಗುಗಳಲ್ಲಿ (ಸಾಂತಾ ಮಾರಿಯಾ, ಪಿಂಟಾ ಹಾಗೂ ನೀನಾ) ೮೮ ಜನರೊಂದಿಗೆ ಪಶ್ಚಿಮ ದಿಕ್ಕಿನಲ್ಲಿ ಸಾಗಿದನು. ಸುಮಾರು ೭೦ ದಿನಗಳ ನಂತರ ಬಹಮಾ ದ್ವೀಪಗಳೊಂದರಲ್ಲಿ ಬಂದಿಳಿದನು. ಇವನು ತಲುಪಿದ ಮೊದಲ ಪ್ರದೇಶ ಗ್ಯುವಾಹನಿ ಎಂಬ ದ್ವೀಪ. ಅದಕ್ಕೆ 'ಸೈಂಟ್ ಸಾಲ್ವಡೋರ್' (ರಕ್ಷಕ) ಎಂಬ ಹೆಸರನ್ನಿಟ್ಟನು. ತಾನು ಭಾರತವನ್ನು ಕಂಡು ಹಿಡಿದೆನೆಂದು ಬೀಗಿದರೂ, ಈ ದ್ವೀಪವು ಭಾರತ, ಚೀನಾಗಳಿಂದ ಸಹಸ್ರಾರು ಮೈಲಿ ದೂರದಲ್ಲಿದ್ದಿತು. ಅಲ್ಲಿಯ ಜನರನ್ನು **ಇಂಡಿಯನ್ಸ್** ಎಂದು ಕರೆದನು. ಭಾರತವನ್ನು ಮುಟ್ಟದಿದ್ದರೂ 'ಹೊಸ ಪ್ರಪಂಚ'ದ ಅಸ್ತಿತ್ವವನ್ನು ಕಂಡುಹಿಡಿದನು. ಕ್ರಿ.ಶ. ೧೪೯೮ ಹಾಗೂ ೧೫೦೨ ನೆಯ ಇಸವಿಗಳ ಯಾತ್ರೆಯಲ್ಲಿ ಇವನು ಕೆರಿಬಿಯನ್ ದ್ವೀಪಗಳನ್ನು (ಕ್ಯೂಬಾ ಮತ್ತು ಹೈಟಿ) ಹಾಗೂ ವೆನಿಜೂವೆಲಾ ಮತ್ತು ಮಧ್ಯ ಅಮೆರಿಕಾದ ಕರಾವಳಿ

ಪ್ರದೇಶಗಳನ್ನು ಅನ್ವೇಷಿಸಿದನು. ಕ್ರಿ.ಶ. ೧೫೦೬ ರಲ್ಲಿ ಈ ನಾವಿಕನು ಕಾಲವಾದಾಗ ಪ್ರಪಂಚದ ವಿಸ್ತಾರ ಬಹಳಷ್ಟು ಹೆಚ್ಚಿತ್ತು.

ಕ್ರಿ.ಶ. ೧೫೦೦ ರಲ್ಲಿ ಸ್ಪ್ಯಾನಿಸ್ ನಾವಿಕ **ಕೆಬ್ರಾಲ್**ನು ದಕ್ಷಿಣ ಅಮೆರಿಕಾದ ಕರಾವಳಿ ಪ್ರದೇಶ ಹಾಗೂ ಬ್ರೆಝಿಲ್‌ಗಳನ್ನು ಅನ್ವೇಷಿಸಿದನು.

ಕ್ರಿ.ಶ. ೧೫೧೩ ರಲ್ಲಿ ಸ್ಪೆಯಿನ್ನಿನ **ಬಾಲ್ಬೋವಾ**ನು ಪನಾಮಾ ಭೂಸಂಧಿಯನ್ನು, **ಹರ್ನಾಂಡೋ ಕಾರ್ಟೇಜ್** ಎಂಬುವವನು ಮೆಕ್ಸಿಕೋವನ್ನು ಮತ್ತು **ಪಿಜಾರೋ** ಎಂಬಾತ ಪೆರುವನ್ನು ಅನ್ವೇಷಿಸಿದರು.

ಇದೇ ವೇಳೆಯಲ್ಲಿ ಇಟಲಿಯ ಫ್ಲೋರೆನ್ಸ್‌ಗೆ ಸೇರಿದ **ಅಮೇರಿಗೋ ವೆಸ್‌ಪುಸ್ಸಿ**ಯು ಇಂದಿನ ಅಮೆರಿಕಾ ಸಂಯುಕ್ತ ಸಂಸ್ಥಾನದ ಫ್ಲೋರಿಡಾದಲ್ಲಿ ಕಾಲಿಟ್ಟನು. ತಾನು 'ಹೊಸ ಪ್ರಪಂಚ'ವೊಂದನ್ನು ಕಂಡುಹಿಡಿದಿದ್ದೇನೆ ಎನ್ನುವ ನಂಬಿಕೆಯನ್ನು ಕೆಲವು ಪತ್ರಗಳನ್ನು ಬರೆದನು. ಇವುಗಳ ಆಧಾರದ ಮೇಲೆ 'ಹೊಸ ಪ್ರಪಂಚ'ಕ್ಕೆ ಇವನ ನೆನಪಿನಲ್ಲಿ ಅಮೆರಿಕಾ ಎಂದು ಕರೆಯಲಾಯಿತು.

ಇಂಗ್ಲೀಷ್ ಹಾಗೂ ಫ್ರೆಂಚ್ ಅನ್ವೇಷಣಾಕಾರರು ಭೂ ಶೋಧನಾ ಕಾರ್ಯಕ್ಕೆ ಸ್ವಲ್ಪ ತಡವಾಗಿ ಬಂದರು. ಅವರು ಪೂರ್ವ ದೇಶಗಳಿಗೆ ವಾಯುವ್ಯ ಹಾಗೂ ಈಶಾನ್ಯ ದಿಕ್ಕುಗಳಿಗೆ (ರಷ್ಯಾದ ಮೂಲಕ) ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಇವರ ಪ್ರಯತ್ನ ಗಳಿಂದ ಉತ್ತರ ಅಮೆರಿಕಾದ ಕೆನಡಾ, ಮಿಸ್ಸಿಸಿಪ್ಪಿ ಕಣಿವೆಗಳು ಹಾಗೂ ನ್ಯೂಫೌಂಡ್ ಲ್ಯಾಂಡ್‌ಗಳು ಅನ್ವೇಷಿಸಲ್ಪಟ್ಟವು. ಈ ರೀತಿಯಲ್ಲಿ ಪೌರ್ವಾತ್ಯ ಪ್ರದೇಶಗಳಿಗೆ ವಾಯುವ್ಯ ದಿಕ್ಕಿನಲ್ಲಿ ಮಾರ್ಗವಿಲ್ಲದಿದ್ದರೂ, ನಾವಿಕರ ಪ್ರಯತ್ನಗಳ ಫಲವಾಗಿ ಹಲವು ಹೊಸ ಪ್ರದೇಶ ಗಳು ಕಂಡುಹಿಡಿಯಲ್ಪಟ್ಟವು. ಇದರಿಂದಾಗಿ ೧೭ನೆಯ ಶತಮಾನ ವ್ಯಾಪಾರ ಹಾಗೂ ವಸಾಹತು ನಿರ್ಮಾಣಕ್ಕೆ ಎಡೆ ಮಾಡಿಕೊಟ್ಟಿತು.

ಪ್ರಪಂಚದ ಸುತ್ತ ಪ್ರದಕ್ಷಿಣೆ

ಫರ್ಡಿನಾಂಡ್ ಮೆಗಲ್ಲನ್‌ನ್ನನು ಸ್ಪೆಯಿನ್ ರಾಷ್ಟ್ರದವನಾಗಿದ್ದು, ೧೫೧೯ ರಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ನೈಋತ್ಯ ದಿಕ್ಕಿನಲ್ಲಿ ಸಾಗಿ ದಕ್ಷಿಣ ಅಮೆರಿಕಾದ ದಕ್ಷಿಣದ ತುತ್ತತುದಿಯನ್ನು ದಾಟಿದನು (ಈ ಭೂಶಿಖರವನ್ನು ಇಂದು 'ಮೆಗಲ್ಲನ್ ಜಲಸಂಧಿ' ಎಂದು ಕರೆಯುತ್ತಾರೆ). ಅನಂತರ ವಿಶಾಲ ಫೆಸಿಫಿಕ್ (ಶಾಂತ) ಸಾಗರದಲ್ಲಿ ಪ್ರಯಾಣಿಸಿ ಫಿಲಿಫೈನ್ಸ್ ದ್ವೀಪವನ್ನು ಮುಟ್ಟಿದನು. ಆದರೆ ಇಲ್ಲಿ ಸ್ಥಳೀಯ ಜನರಿಂದ ಕೊಲ್ಲಲ್ಪಟ್ಟನು. ಇವನ ಕೆಲವು ಸಂಗಡಿಗರು ತಮ್ಮ ಪ್ರಯಾಣವನ್ನು ಮುಂದುವರಿಸಿ, ಹಿಂದೂ ಮಹಾಸಾಗರ ಹಾಗೂ ಅರಬ್ಬಿ ಸಮುದ್ರಗಳನ್ನು ದಾಟಿ, ಆಫ್ರಿಕವನ್ನು ಬಳಸಿ ಯುರೋಪಿಗೆ ಬಂದು ಸೇರಿದರು. ಇದೊಂದು ಇತಿಹಾಸ ಪ್ರಸಿದ್ಧ ಘಟನೆಯಾಗಿದೆ. ಏಕೆಂದರೆ ಪ್ರಪಂಚದ ಸುತ್ತಲೂ

ನಡೆದ ಮೊದಲ ನೌಕಯಾನ; ಭೂಮಿಯು ದುಂಡಾಗಿದೆ; ಸಂಪ್ರದಾಯವಾದಿ ನಂಬಿಕೆಯಂತೆ ಸಮತಟ್ಟಾಗಿಲ್ಲ ಎಂದು ಮೆಗಲ್ಲನ್ನನ ತಂಡ ತೋರಿಸಿಕೊಟ್ಟಿತು.

ಪರಿಣಾಮಗಳು

೧. ಅನ್ವೇಷಣೆಗಳ ಪರಿಣಾಮವಾಗಿ ಯುರೋಪಿಯನ್ನರು ಪ್ರಪಂಚದ ಎಲ್ಲಾ ಖಂಡಗಳಲ್ಲಿ ಅದರಲ್ಲೂ ಮುಖ್ಯವಾಗಿ ಏಷ್ಯಾ, ಆಫ್ರಿಕ ಹಾಗೂ ಅಮೆರಿಕಾಗಳಲ್ಲಿ ನೆಲೆಗಳನ್ನು ಸ್ಥಾಪಿಸಿದರು.

೨. ಈ ಪ್ರಕ್ರಿಯೆಯು ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯ ಪರಿಣಾಮವನ್ನುಂಟು ಮಾಡಿದವು. ಅಮೆರಿಕಾವು ವೇಗವಾಗಿ ಐರೋಪೀಕರಣವನ್ನು ಹೊಂದಿತು. ಏಷ್ಯಾ ಹಾಗೂ ಆಫ್ರಿಕಾಗಳು ನಿಧಾನವಾಗಿ ಈ ಅನುಭವಕ್ಕೊಳಗಾದವು.

೩. ಏಷ್ಯಾದ ದೇಶಗಳ ನೇರ ಸಂಪರ್ಕದಿಂದಾಗಿ ಯುರೋಪ್ ಖಂಡದ ಜನತೆ ಅತ್ಯಾವಶ್ಯಕ ವಸ್ತುಗಳ ಪೂರೈಕೆಯನ್ನು ಅಪಾರ ಪ್ರಮಾಣದಲ್ಲಿ ನಿರಂತರವಾಗಿ ಪಡೆಯಲು ಸಾಧ್ಯವಾಯಿತು. ಅಲ್ಲದೆ ಹೊಸ ವಸ್ತುಗಳನ್ನು ಕೂಡ. ಭಾರತದ ಬಟ್ಟೆ ಸಾಮಗ್ರಿಗಳಿಗೆ, ಪರ್ಶಿಯನ್ ನೆಲಗಂಬಳಿಗಳಿಗೆ ಅಪಾರ ಮಾರುಕಟ್ಟೆಯಿತ್ತು. ಹಲವು ಹೊಸ ವಸ್ತುಗಳಿಗೆ, ಉದಾ: ಆಲೂಗೆಡ್ಡೆ, ಚಾಕಲೇಟ್, ಕೋಕೋ, ಕ್ವಿನೈನ್, ಹೊಗೆಸೊಪ್ಪು, ಕಬ್ಬು, ಸಕ್ಕರೆ, ತುಪ್ಪಟ, ತಿಮಿಂಗಿಲ ಎಣ್ಣೆ, ನೀಲಿ, ಟೀ, ಕಾಫಿ, ಪಿಂಗಾಣಿ ವಸ್ತುಗಳು, ಹತ್ತಿ, ರೇಷ್ಮೆ ಬಟ್ಟೆಗಳು, ಮಸಾಲೆ ಪದಾರ್ಥಗಳು ಮುಂತಾದವು ಯುರೋಪಿನಲ್ಲಿ ಮೊದಲ ಬಾರಿಗೆ ಅನುಭೋಗಕ್ಕೆ ದೊರೆತವು. ಇವುಗಳ ಪೂರೈಕೆ ಜಾಸ್ತಿಯಾದಂತೆ ಬೆಲೆಗಳೂ ಕಡಿಮೆಯಾದವು. ಕೆಲವು ವಸ್ತುಗಳು ಯುರೋಪಿಯನ್ನರ ಮುಖ್ಯ ಅನುಭೋಗದ ವಸ್ತುಗಳಾದವು.

೪. ಅಲ್ಲದೆ ಮಿತಿಯಿಲ್ಲದ ಪ್ರಮಾಣದಲ್ಲಿ ಚಿನ್ನ ಹಾಗೂ ಬೆಳ್ಳಿಯಂಥ ಅಮೂಲ್ಯ ಲೋಹಗಳು ಯುರೋಪಿಗೆ ಹರಿದು ಬರತೊಡಗಿದವು. ಮೆಕ್ಸಿಕೋ ಹಾಗೂ ಪೆರು ದೇಶಗಳು ಚಿನ್ನವನ್ನು, ಬೊಲ್ಲಿವಿಯಾ ದೇಶವು ಬೆಳ್ಳಿಯನ್ನು ಪೂರೈಸತೊಡಗಿದವು. ಇವುಗಳು ಯುರೋಪಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ, ವ್ಯಾಪಾರ ಉದ್ದಿಮೆಗಳ ವಿತರಣೆಗೆ ಅವಕಾಶ ಮಾಡಿ ಕೊಟ್ಟಿತ್ತು. ಪಶ್ಚಿಮ ಯುರೋಪಿನಲ್ಲಿ ೧೪೯೩ ರಲ್ಲಿ ೫,೫೦,೦೦೦ ಕೆ.ಜಿ. ಚಿನ್ನವಿದ್ದರೆ ಅದು ೧೫೪೪ ರಲ್ಲಿ ೮,೧೫,೦೦೦ ಕೆ.ಜಿ.ಗೆ ಏರಿತು. ಬೆಳ್ಳಿಯ ಸಂಗ್ರಹವು ೧೪೯೩ ರಲ್ಲಿ ಏಳು ಮಿಲಿಯನ್ ಕೆ.ಜಿ.ಯಿದ್ದರೆ, ಅದು ೧೫೪೪ ರಲ್ಲಿ ಒಂಬತ್ತು ಮಿಲಿಯನ್‌ಗೆ ಏರಿತು. ಚಿನ್ನ ಬೆಳ್ಳಿಗಳ ಹರಿದು ಬರುವಿಕೆ ಕ್ರಮೇಣ ಬೆಲೆಯೇರಿಕೆಗೂ ಅವಕಾಶ ನೀಡಿತು. ಇದನ್ನೇ 'ಬೆಲೆಕ್ರಾಂತಿ' ಎಂದು ಕರೆಯುತ್ತಾರೆ. ಇದರಿಂದ ಕೊಳ್ಳುವ ಶಕ್ತಿ ಕ್ಷೀಣಿಸಿತು.

೫. ಭೌಗೋಳಿಕ ಅನ್ವೇಷಣೆಗಳಿಂದಾದ ಅತಿ ಮುಖ್ಯ ದುಷ್ಪರಿಣಾಮವೆಂದರೆ, ಸಾಮ್ರಾಜ್ಯ ಶಾಹಿವಾದ, ವಸಾಹತುಶಾಹಿವಾದ ಮುಂತಾದ ಪ್ರವೃತ್ತಿಗಳು ತಲೆಯೆತ್ತಿದ್ದು. ಇಂದು ನಾವು ಯಾವ ರಾಷ್ಟ್ರಗಳನ್ನು ಮೂರನೇ ವಿಶ್ವ ಎನ್ನುತ್ತೇವೆಯೋ (ಏಷ್ಯಾ, ಆಫ್ರಿಕ, ದಕ್ಷಿಣ ಅಮೆರಿಕಾ ರಾಷ್ಟ್ರಗಳು) ಅವುಗಳು ತೀವ್ರ ಶೋಷಣೆಗೆ ಒಳಗಾದವು. ಪಾಶ್ಚಿಮಾತ್ಯ ರಾಷ್ಟ್ರಗಳು ಸಂಪದ್ಭರಿತವಾಗುತ್ತಿದ್ದಂತೆ, ಪೌರ್ವಾತ್ಯ ರಾಷ್ಟ್ರಗಳು ಪಾಶ್ಚಿಮಾತ್ಯರ ಆಳ್ವಿಕೆಗೆ ಒಳಗಾಗಿ ವಸಾಹತುಗಳಾದವು. ಪೋರ್ಚುಗಲ್, ಸ್ಪೈಯಿನ್, ಇಂಗ್ಲೆಂಡ್, ಹಾಲೆಂಡ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಸಾಮ್ರಾಜ್ಯಶಾಹಿಗಳಾಗಿ ತಾವು ವಶಪಡಿಸಿಕೊಂಡ ನಾಡುಗಳಲ್ಲಿ ಶೋಷಣೆಯ ಸಾಮ್ರಾಜ್ಯಗಳನ್ನೆ ನಿರ್ಮಿಸಿದರು. ಅಲ್ಲದೆ ಈ ಸಾಮ್ರಾಜ್ಯ ಶಕ್ತಿಗಳ ನಡುವೆ ಸ್ಪರ್ಧೆ, ವೈಮನಸ್ಸುಗಳುಂಟಾಗಿ ತೀವ್ರತರದ ಕಲಹ ಹಾಗೂ ಯುದ್ಧಗಳು ಏರ್ಪಟ್ಟವು. ವಸಾಹತುಗಳು, ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಹಾಗೂ ಪಾಶ್ಚಿಮಾತ್ಯರ ಉತ್ಪನ್ನಗಳಿಗೆ ಮಾರುಕಟ್ಟೆಗಳನ್ನೊದಗಿಸುವ ಕೇಂದ್ರಗಳಾದವು.

೬. ಕೆಲವು ಪ್ರಾಚೀನ ನಾಗರಿಕತೆಗಳು ನಾಶವಾದವು. ಸ್ಪೇಯಿನಿಗೆ ಸೇರಿದ **ಕಾಂಕ್ವಿಷ್ಟಡಾರ್** ಗಳೆಂದು ಕರೆಯಲ್ಪಡುವ, ಖಾಸಗಿ ಉದ್ಯಮಶೀಲ ವ್ಯಕ್ತಿಗಳು ಮೆಕ್ಸಿಕೋವನ್ನು ಗೆದ್ದು ಅಲ್ಲಿನ 'ಅಜಟೆಕ್ ನಾಗರಿಕತೆ'ಯನ್ನು, ಪೆರುವನ್ನು ಗೆದ್ದು ಅಲ್ಲಿನ 'ಇಂಕಾ ನಾಗರಿಕತೆ'ಯನ್ನು ನಾಶ ಮಾಡಿದರು. ಸಹಸ್ರಾರು ಮುಗ್ಧ **ರೆಡ್ ಇಂಡಿಯನ್ನ**ರು ಹಾಗೂ ಸ್ಥಳೀಯರು ಕೊಲ್ಲಲ್ಪಟ್ಟರು. ಬದುಕುಳಿದವರು ಗುಲಾಮರಾದರು.

೭. ಮಧ್ಯಕಾಲೀನ ಯುಗದಲ್ಲಿ ಮೆಡಿಟರೇನಿಯನ್ ಹಾಗೂ ಬಾಲ್ಟಿಕ್ ಸಮುದ್ರಗಳು ವ್ಯಾಪಾರ-ವಾಣಿಜ್ಯಗಳ ಹೆದ್ದಾರಿಗಳಾಗಿದ್ದವು. ಜಿನೋವಾ, ವೆನಿಸ್, ಫ್ಲೊರೆನ್ಸ್ ಮುಂತಾದ ನಗರಗಳು ವಾಣಿಜ್ಯ ಚಟುವಟಿಕೆಗಳ ಮುಖ್ಯ ಕೇಂದ್ರಗಳಾಗಿದ್ದವು. ಏಷ್ಯಾ ಮತ್ತು ಐರೋಪ್ಯ ರಾಷ್ಟ್ರಗಳ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಅಲ್ಲಿ ವಿನಿಮಯ ಮಾಡಿಕೊಳ್ಳುತ್ತಿದ್ದರು. ಆದರೆ ಅಮೆರಿಕಾದ ಶೋಧನೆ ಹಾಗೂ ಪೂರ್ವಕ್ಕೆ ಸಮುದ್ರ ಮಾರ್ಗದ ಕಂಡುಹಿಡಿಯುವಿಕೆ, ಅಟ್ಲಾಂಟಿಕ್ ಸಾಗರವನ್ನು ವ್ಯಾಪಾರದ ಮುಖ್ಯ ಹೆದ್ದಾರಿಯನ್ನಾಗಿಸಿತು. ಲಿಸ್ಬನ್, ಲಂಡನ್, ಅಂಟ್ವರ್ಪ್ ಹಾಗೂ ಅಮಸ್ಟರ್‌ಡಾಮ್‌ಗಳು ಮುಖ್ಯ ವ್ಯಾಪಾರಿ ಕೇಂದ್ರಗಳಾದವು. ಇಟಲಿ ಹಾಗೂ ಟರ್ಕಿಯಂತಹ ರಾಷ್ಟ್ರಗಳು ಎರಡನೇ ದರ್ಜೆ ವಾಣಿಜ್ಯ ಶಕ್ತಿಗಳಾದರೆ, ಜರ್ಮನಿ, ನಾರ್ವೆ, ಸ್ವೀಡನ್ ಹಾಗೂ ರಷ್ಯಾ ದೇಶಗಳು ತೀವ್ರ ಆರ್ಥಿಕ ಹಿನ್ನಡೆಯನ್ನು ಎದುರಿಸ ಬೇಕಾಯ್ತು.

೮. ಯುರೋಪಿಯನ್ನರ ಜೀವನ ಮಟ್ಟದಲ್ಲಿ ಸುಧಾರಣೆಯಾಯಿತು. ಉತ್ತಮ ಆದಾಯ ಹಾಗೂ ಬೇಕಾದಷ್ಟು ಪ್ರಮಾಣದಲ್ಲಿ ನಿತ್ಯ ವಸ್ತುಗಳು ಪೂರೈಕೆ ಇದಕ್ಕೆ ಕಾರಣವಾಯಿತು. ಇದರಿಂದಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಕೂಡ ಬದಲಾವಣೆಗಳು ಕಂಡುಬಂದವು.

೯. ಮತ್ತೊಂದು ಪರಿಣಾಮವೆಂದರೆ, ಅಸ್ತಿತ್ವದಲ್ಲಿದ್ದ ಶ್ರೀಮಂತ ಜಮೀನುದಾರರ ವರ್ಗದೊಂದಿಗೆ, ಮತ್ತೊಂದು ಹೊಸ ವರ್ಗವು ಸೇರಿಕೊಂಡಿತು. ಅದೇ ಶ್ರೀಮಂತ ವರ್ತಕರ ವರ್ಗ. ಅಲ್ಲದೆ ಹೊಸ ಪ್ರಪಂಚಗಳಲ್ಲಿ ಪ್ರಭಾವಶಾಲಿಯಾದ ವಲಸೆಗಾರರ ಮಧ್ಯಮವರ್ಗ ಕೂಡ ಸೃಷ್ಟಿಯಾಯಿತು. ಹೊಸ ಪ್ರಪಂಚದ ಕಂಡುಹಿಡಿಯುವಿಕೆಯು ಐರೋಪ್ಯನ್ನರಿಗೆ ಅಲ್ಲಿಗೆ ವಲಸೆ ಹೋಗಿ ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತನ್ನು ಸುಧಾರಿಸಿಕೊಳ್ಳಲು ಅವಕಾಶವನ್ನಿತ್ತಿತು.

೧೦. ಧಾರ್ಮಿಕ ಭಿನ್ನಾಭಿಪ್ರಾಯಗಳು ಹಾಗೂ ಧಾರ್ಮಿಕ ಚಳವಳಿಗಳ ಪರಿಣಾಮವಾಗಿ, ರೋಮನ್ ಕೆಥೋಲಿಕ್ ಚರ್ಚಿನಿಂದ ಪ್ರೊಟೆಸ್ಟಾಂಟರು ತೊಂದರೆಗೊಳಗಾದಾಗ, ಪ್ರೊಟೆಸ್ಟಾಂಟರು ವಸಾಹತು (ಕಲೋನಿ)ಗಳಿಗೆ ವಲಸೆ ಹೋಗಿ ಆಶ್ರಯ ಪಡೆದರು. (ಉದಾ: ಹೊಸ ಪ್ರಪಂಚಕ್ಕೆ-ಅಮೆರಿಕಾಕ್ಕೆ, ಯುರೋಪಿಯನ್ನರ ವಲಸೆ).

೧೧. ರಾಜಕೀಯ ಬದಲಾವಣೆಗಳೂ ಕೂಡ ಭೌಗೋಳಿಕ ಅನ್ವೇಷಣೆಯ ಇನ್ನೊಂದು ಮಹತ್ತರ ಪರಿಣಾಮವೆನ್ನಬಹುದು. ಯುರೋಪಿನ ರಾಷ್ಟ್ರಗಳಲ್ಲಿ 'ದರ್ಪಿಷ್ಠ' ಪ್ರಭುತ್ವಗಳು ಏಳಿಗೆಗೆ ಬರತೊಡಗಿದವು. ರಾಜಪ್ರಭುತ್ವಗಳು ಪ್ರಭಾವಶಾಲಿ ಊಳಿಗಮಾನ್ಯ ಶಕ್ತಿಗಳನ್ನು ಹತ್ತಿಕ್ಕಿ ರಾಜಕೀಯ ಹಾಗೂ ಸೈನಿಕ ಅಧಿಕಾರಗಳನ್ನು ತಮ್ಮ ಕೈಗಳಲ್ಲಿ ಕೇಂದ್ರಿಕರಿಸಿಕೊಂಡು ಹೆಚ್ಚು ಶಕ್ತಿಶಾಲಿಯಾಗಿ ಬೆಳೆದು 'ದರ್ಪಿಷ್ಠ' ಪ್ರಭುತ್ವಗಳೆನಿಸಿಕೊಂಡವು. ಫ್ರಾನ್ಸ್, ಇಂಗ್ಲೆಂಡ್, ಸ್ಪೆಯಿನ್ ಹಾಗೂ ಇಟಲಿಗಳಲ್ಲಿ ಬೇರೆ ಬೇರೆ ಸ್ವರೂಪದ ಪ್ರಭುತ್ವಗಳು ಅಸ್ತಿತ್ವಕ್ಕೆ ಬಂದವು. ಇವುಗಳು ಯುರೋಪಿನ ಇತಿಹಾಸದ ಮೇಲೆ ದೂರಗಾಮಿ ಪರಿಣಾಮ ಗಳನ್ನು ಬೀರಿದವು. ಭೌಗೋಳಿಕ ಗಡಿಗಳು, ದಿಗಂತಗಳು ವಿಸ್ತರಿಸಿದಂತೆ, ಪಾಶ್ಚಿಮಾತ್ಯ ರಾಷ್ಟ್ರಗಳ ದೃಷ್ಟಿಕೋನವೂ ಕೂಡ ವಿಸ್ತಾರಗೊಳ್ಳಲು ಪ್ರಾರಂಭವಾಯಿತು. ವಿಶಾಲ ದೃಷ್ಟಿ ಕೋನ ಹಾಗೂ ಭೌತಿಕ ಸಮೃದ್ಧಿಯ ಪರಿಣಾಮವಾಗಿ ಯುರೋಪಿನಲ್ಲಿ ಪುನರುಜ್ಜೀವನದ ಚೇತನವು ವೃದ್ಧಿಸಿ, ಮಾನವನ ಸರ್ವಾಂಗೀಣ ಪ್ರಗತಿಗೆ ಅವಕಾಶ ನೀಡಿತು.

೧೨. ಯುರೋಪ್ ಖಂಡವು ಪ್ರಭಾವಶಾಲಿಯಾದ, ಶಕ್ತಿಶಾಲಿಯಾದ ಖಂಡವಾಗಿ ಹೊರಹೊಮ್ಮಿತ್ತು, ಅದು ಇತರ ಖಂಡಗಳ ಮೇಲೆ ಅಧಿಪತ್ಯವನ್ನು ಸ್ಥಾಪಿಸಿತು. ಭಾರತ, ಚೀನಾ, ಪೆರು, ಮೆಕ್ಸಿಕೋ ಹಾಗೂ ಬ್ರೆಝಿಲ್‌ಗಳ ಪ್ರಾಚೀನ ನಾಗರೀಕತೆಗಳ ಅಸ್ತಿತ್ವಕ್ಕೆ ಇದರಿಂದ ಬೆದರಿಕೆಯುಂಟಾಯಿತು.

೧೪. ಹೊಸ ನಾಡುಗಳ ಶೋಧನೆ ಹಾಗೂ ವಶಪಡಿಸಿಕೊಳ್ಳುವಿಕೆಯು ಕ್ರೈಸ್ತ ಮತ ಪ್ರಚಾರಕರಿಗೆ ತಮ್ಮ ಚಟುವಟಿಕೆಗಳಿಗೆ ಹುಲುಸಾದ ಕ್ಷೇತ್ರಗಳನ್ನು ಒದಗಿಸಿತು. ಯುರೋಪಿ ನಲ್ಲಿ ಜಾತ್ಯಾತೀತ ಹಾಗೂ ವಿಸ್ತೃತ ಮಾನವ ದೃಷ್ಟಿಕೋನಗಳ ಉದಯ, ದರ್ಪಿಷ್ಠ ರಾಜ ಪ್ರಭುತ್ವಗಳ ಏಳಿಗೆ ಮುಂತಾದವು ಚರ್ಚಿನ ಪ್ರಭಾವವನ್ನು ದುರ್ಬಲಗೊಳಿಸಿತು. ಇದರಿಂದಾಗಿ

ಕ್ರೈಸ್ತ ಮಿಶನರಿಗಳು ವಸಾಹತುಗಳಲ್ಲಿ ತಮ್ಮ ಮತ ಪ್ರಚಾರ ಹಾಗೂ ಮತಾಂತರ ಕಾರ್ಯಕ್ರಮಗಳನ್ನು ಪ್ರಾರಂಭಿಸಿ, ಕ್ರೈಸ್ತ ಮತವನ್ನು ಬಲವಾಗಿ ನೆಟ್ಟರು.

೧೫. ಗುಲಾಮಗಿರಿಯ ಆರಂಭ: ಯುರೋಪಿನ ವಸಾಹತು ಆಡಳಿತಕಾರರಿಂದ ಅಮೆರಿಕಾಗಳ ಸ್ಥಳೀಯ ಇಂಡಿಯನ್ನರ ಕಗ್ಗೊಲೆ ನಡೆಯಿತು. ಇದು ಜನಸಂಖ್ಯೆಯ ಮೇಲೆ ಪರಿಣಾಮ ಬೀರಿತು. ಅಮೆರಿಕಾಗಳ ಚಿನ್ನ, ಬೆಳ್ಳಿ ಗಣಿಗಳಲ್ಲಿ, ಬೃಹತ್ ತೋಟಗಳಲ್ಲಿ ಕೆಲಸ ಮಾಡಲು ಕೂಲಿ ಕಾರ್ಮಿಕರ ಅವಶ್ಯಕತೆ ಹೆಚ್ಚಾದಾಗ, 'ಕತ್ತಲೆಯ ಖಂಡ' ಆಫ್ರಿಕಾದಿಂದ ಲಕ್ಷಾಂತರ ಮುಗ್ಧ ಹಿಂದುಳಿದ ಆಫ್ರಿಕನ್ನರನ್ನು ಕ್ರೂರ ರೀತಿಯಲ್ಲಿ ಅಮೆರಿಕಾಗೆ ಸಾಗಿಸಲಾಯಿತು. ಮಾನವ ಮಾನವನನ್ನೇ ಕ್ರೂರ ರೀತಿಯಲ್ಲಿ ಶೋಷಿಸುವ ಹೊಸ ಸಂಸ್ಕೃತಿ ಪ್ರಾರಂಭವಾಯಿತು. ಇದನ್ನೇ **ಗುಲಾಮಗಿರಿ** (ಸ್ಲೇವರಿ) ಎನ್ನುತ್ತೇವೆ.

ಈ ರೀತಿಯಲ್ಲಿ ಭೌಗೋಳಿಕ ಅನ್ವೇಷಣೆಗಳು ಮಾನವನ ಇತಿಹಾಸದ ಪುಟಗಳಲ್ಲಿ ಅತ್ಯಂತ ರೋಚಕ ಅಧ್ಯಾಯವನ್ನೇ ಸೃಷ್ಟಿಸಿದವು.

೧.೨ ಪುನರುಜ್ಜೀವನ
(Renaissance)

ಅರ್ಥ

೧೪, ೧೫ ಹಾಗೂ ೧೬ನೆಯ ಶತಮಾನಗಳಲ್ಲಿ ಯುರೋಪಿನಲ್ಲಾದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಳವಳಿಗಳ ಸರಮಾಲೆಗೆ ರಿನೈಝಾನ್ಸ್ ಅಥವಾ ನವೋದಯ ಅಥವಾ ಪುನರುಜ್ಜೀವನ ಅಥವಾ ಪುನರ್ಜನ್ಮ ಎಂದು ಕರೆಯುತ್ತಾರೆ. ಈ ಚಳವಳಿಗಳು ಇಟಲಿಯಲ್ಲಿ ಉದ್ಭವಿಸಿ ಕ್ರಮೇಣ ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಹಾಗೂ ಯುರೋಪಿನ ಇತರ ಭಾಗಗಳಿಗೆ ಹರಡಿದವು. ಈ ಚಳವಳಿಯಲ್ಲಿ ಭಾಗವಹಿಸಿದ್ದವರು ಪುರಾತನ ಗ್ರೀಕ್ ಹಾಗೂ ರೋಮಿನ ಶ್ರೇಷ್ಠ ನಾಗರಿಕತೆಗಳನ್ನು ಕುರಿತು ವಿಶೇಷ ಆಸಕ್ತಿಯನ್ನು ತಳೆದವರಾಗಿದ್ದರು.

ಪ್ರಾಚೀನ ರೋಮ್ ಸಾಮ್ರಾಜ್ಯವು ಕ್ರಿ.ಶ. ೫ನೆಯ ಶತಮಾನದಲ್ಲಿ ಪತನವಾದ ನಂತರ, ೧೪ ಹಾಗೂ ೧೫ನೆಯ ಶತಮಾನಗಳವರೆಗೆ ಯುರೋಪ್ ಮಧ್ಯಕಾಲೀನ ಯುಗವನ್ನು ಹೊಂದಿತ್ತು. ಈ ಐತಿಹಾಸಿಕ ಕಾಲದಲ್ಲಿ ಯುರೋಪಿನಲ್ಲಿ ಬೌದ್ಧಿಕ ಹಾಗೂ ಸಾಂಸ್ಕೃತಿಕ ಅವನತಿಯು ಉಂಟಾಯಿತು ಎಂದು ನವೋದಯ ಕಾಲದ ಜನರು ಭಾವಿಸಿದ್ದರು. ಆದರೆ ೧೪ ಹಾಗೂ ೧೫ನೆಯ ಶತಮಾನಗಳಲ್ಲಿ ಹಲವಾರು ಕಾರಣಗಳಿಂದಾಗಿ, ಈ ಪ್ರಾಚೀನ ನಾಗರಿಕತೆಗಳ ಸಾಧನೆಗಳ ಬಗ್ಗೆ ಎಂದಿಲ್ಲದ ಆಸಕ್ತಿ, ಕುತೂಹಲಗಳು ಮೂಡಿದವು. ಈ ಕುತೂಹಲವೇ 'ಪುನರುಜ್ಜೀವನ' ಚಳವಳಿಗೆ ನಾಂದಿ ಹಾಡಿ ಆಧುನಿಕ ಕಾಲದ ಆರಂಭಕ್ಕೆ ಅನುವು ಮಾಡಿಕೊಟ್ಟಿತು.

ಪುನರುಜ್ಜೀವನ ಚೇತನವು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಅಂದರೆ ಧಾರ್ಮಿಕ, ಆರ್ಥಿಕ, ರಾಜಕೀಯ, ಬೌದ್ಧಿಕ, ಕಲೆ ಮತ್ತು ಸಾಹಿತ್ಯ ಮೊದಲಾದವುಗಳಲ್ಲಿ ಪರಿವರ್ತನೆಯನ್ನು ತಂದಿತು. ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿನ ಬೆಳವಣಿಗೆಗಳು, ಇಟಲಿ, ಜರ್ಮನಿ, ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳಲ್ಲಿ ಹೊಸ ಪಟ್ಟಣಗಳ ಉದಯ, ಊಳಿಗಮಾನ್ಯ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಗಳ ಅವನತಿ, ಇವೇ ಮುಂತಾದ ಬೆಳವಣಿಗೆಗಳಾದವು. ಭೂಮಿಯ ಬದಲು ಹಣವು ಸಂಪತ್ತಿನ ಹೊಸ ಮಾನದಂಡವಾಯಿತು. ಮಾರ್ಕೊಪೋಲೋ ನಂತಹ ಯುರೋಪಿನ ಸಾಹಸಿ ಪ್ರವಾಸಿಗರು ದೂರ ದೂರದ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿರುವ ನಾಗರೀಕತೆಗಳ ವಿಶೇಷತೆಯನ್ನು ಅರಿತುಕೊಂಡು ಅವುಗಳಿಗೆ ಪ್ರಚಾರ ನೀಡಿದರು. ಈ ರೀತಿಯ ಸಂಪರ್ಕವು ಯುರೋಪಿನಲ್ಲಿ ಗ್ರೀಸ್ ಹಾಗೂ ರೋಮಿನ ಗತಕಾಲದ ಬಗ್ಗೆ ಆಸಕ್ತಿ ಮೂಡಿಸಿತು. ಅಲ್ಲದೆ ಅರಬ್ ಮತ್ತು ಬೈಜಾಂಟೈನ್ ಸಾಮ್ರಾಜ್ಯಗಳ ಮೂಲಕ ಕೂಡ ಗ್ರೀಕ್, ರೋಮನ್ ಹಾಗೂ ಇತರ ಸಂಸ್ಕೃತಿಗಳ ಜ್ಞಾನವು ಯುರೋಪಿಗೆ ಹರಿದು ಬಂದಿತು. ಕ್ರಿ.ಶ. ೧೪೫೩ ರಲ್ಲಿ ಕಾನ್‌ಸ್ಟಾಂಟಿನೋಪಲ್ ಪಟ್ಟಣವು ಮುಸ್ಲಿಂ ಟರ್ಕರ

ಪಾಲಾದಾಗ, ಆ ಪಟ್ಟಣದಲ್ಲಿದ್ದ ಗ್ರೀಕ್ ಪಂಡಿತರು ತಮ್ಮ ವಶದಲ್ಲಿದ್ದ ಪ್ರಾಚೀನ ಗ್ರೀಕ್, ರೋಮನ್ ಸಾಹಿತ್ಯ ಕೃತಿಗಳೊಂದಿಗೆ ಇಟಲಿಗೆ ವಲಸೆ ಹೋದರು. ಇಟಲಿಗೆ ಇವರ ಆಗಮನವು ಪ್ರಾಚೀನ ನಾಗರೀಕತೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಮೂಡಿಸಿ, ಪುನರುಜ್ಜೀವನವು ಬೆಳೆಯಲು ಅವಕಾಶವಾಯಿತು.

ಪುನರುಜ್ಜೀವನ ಚಳವಳಿಯನ್ನು ಎರಡು ಹಂತಗಳಾಗಿ ವಿಭಾಗಿಸಬಹುದು. ಮೊದಲ ಹಂತದಲ್ಲಿ, ಪ್ರಾಚೀನ ನಾಗರೀಕತೆಗಳನ್ನು ಅಧ್ಯಯನ ಮಾಡುವ ಆಸಕ್ತಿ ಜನ್ಮ ತಾಳುವುದನ್ನು ಮತ್ತು ಎರಡನೆಯ ಹಂತದಲ್ಲಿ ಸಂಶೋಧನೆಗಳ ಫಲವಾಗಿ ಹೊಸ ಹೊಸ ಮಾಹಿತಿ, ಜ್ಞಾನಗಳು ಸೃಷ್ಟಿಯಾಗುವುದನ್ನು ಕಾಣುತ್ತೇವೆ. ಎರಡನೆಯ ಹಂತವು 'ಸಂಶೋಧನೆಗಳ ಯುಗ'ವೆಂದು ಕರೆಯಲ್ಪಟ್ಟಿದೆ. ಆಧುನಿಕ ಚಿಂತನೆಗಳಿಗೆ ಈ ಹಂತದಲ್ಲಿ ಅಡಿಪಾಯ ಹಾಕಲಾಯಿತು. ಹೊಸ ಜ್ಞಾನವು ಹೊಸ ಮಾಧ್ಯಮದ ಮೂಲಕ ಮುಖ್ಯವಾಗಿ ಮುದ್ರಣ ಕಲೆ (ಪ್ರಿಂಟ್ ತಂತ್ರಜ್ಞಾನ) ಹರಡತೊಡಗಿತು. ಈ ಸಂದರ್ಭದಲ್ಲಿ ಪ್ರಾಚೀನ ಗ್ರೀಸ್‌ನ ವೈಜ್ಞಾನಿಕ ಹಾಗೂ ತತ್ವಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳು ಲ್ಯಾಟಿನ್ ಅನುವಾದದ ಮೂಲಕ ಪಾಶ್ಚಿಮಾತ್ಯರಿಗೆ ದೊರೆಯತೊಡಗಿದವು. ಆದ್ದರಿಂದ ಮಾನವ ಜನಾಂಗವನ್ನು ಕುರಿತು ವೈಜ್ಞಾನಿಕ ಮತ್ತು ವಿಚಾರ ಪೂರ್ಣವಾದ ಚಿಂತನೆಗಳು ನಡೆಯತೊಡಗಿದವು. ಹೀಗಾಗಿ ಧಾರ್ಮಿಕ ಕಂದಾಚಾರಗಳಿಂದ ಮುಕ್ತವಾದ ಸಮಾಜ ವ್ಯವಸ್ಥೆಯು ನಿರ್ಮಾಣವಾಗ ತೊಡಗಿತು.

ಇಟಲಿಯಲ್ಲಿ ಪುನರುಜ್ಜೀವನವು ಆರಂಭವಾಗಲು ಕಾರಣಗಳು

ಪುನರುಜ್ಜೀವನ ಚಳವಳಿಯು ಇಟಲಿಯಲ್ಲಿ ಕ್ರಿ.ಶ. ೧೩೦೦-೧೫೫೦ರ ನಡುವೆ ಜನ್ಮ ತಾಳಿ, ಬೆಳೆದು, ಅನಂತರ ಉತ್ತರ ಯುರೋಪಿನತ್ತ ಸಾಗಿತು. ಇಟಲಿಯಲ್ಲಿಯೆ ಏಕೆ ಈ ಚಳವಳಿಯು ಹುಟ್ಟಿಕೊಂಡಿತು? ಎಂಬುದು ಪ್ರಮುಖ ಪ್ರಶ್ನೆ.

ಇಟಲಿಯು ಪೂರ್ವ ಹಾಗೂ ಪಶ್ಚಿಮಗಳ ನಡುವೆ ಸ್ವಾಭಾವಿಕವಾದ ದ್ವಾರವಾಗಿತ್ತು. ಇದರಿಂದಾಗಿ ಇಟಲಿಯು ಯುರೋಪಿನ ಇತರ ರಾಷ್ಟ್ರಗಳ ಮೇಲೆ ಸಾಂಸ್ಕೃತಿಕವಾಗಿ ಮೇಲುಗೈ ಸಾಧಿಸಿತ್ತು. ವೆನಿಸ್, ಜಿನೋವಾ, ಮಿಲಾನ್, ಪೀಸ ಮತ್ತು ಫ್ಲೋರೆನ್ಸ್ ನಗರಗಳು ಏಷ್ಯಾ ದೊಡನೆ ನಿರಂತರವಾದ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿದ್ದವು. ಈ ನಗರಗಳಲ್ಲಿ ಕ್ರಿಯಾ ಶೀಲವಾಗಿದ್ದ ನಗರ ಸಮಾಜವನ್ನು ಕಾಣಬಹುದಿತ್ತು. ಹೊಸದಾಗಿ ಸಂಪತ್ತಿಗರಾದ ವ್ಯಾಪಾರಿ ವರ್ಗಗಳು, 'ಭೂರ್ಷ್ವಾಸಿಕಿ'ಗಳಾಗಿ (ಮಧ್ಯಮ ವರ್ಗ) ಶ್ರೀಮಂತ ವರ್ಗಗಳನ್ನು ಅನುಕರಣೆ ಮಾಡತೊಡಗಿದವು. ಉದಾಹರಣೆಗೆ ಫ್ಲೋರೆನ್ಸ್‌ನ 'ಮೆಡಿಸಿ' ಕುಟುಂಬವು ವೃತ್ತಿಯಲ್ಲಿ ವೈದ್ಯರಾಗಿದ್ದು, ಬ್ಯಾಂಕಿಂಗ್ ಉದ್ಯಮದಲ್ಲಿ ಅಪಾರ ಸಂಪತ್ತನ್ನು ಗಳಿಸಿ ಪ್ರಸಿದ್ಧವಾಯಿತು. ಶ್ರೀಮಂತ ವ್ಯಾಪಾರಿ ವರ್ಗಗಳ ಉಗಮವು ಇಟಲಿಯಲ್ಲಿ ಶಿಕ್ಷಣದ ಅಭಿವೃದ್ಧಿಗೆ ಎಡೆಮಾಡಿ

ಕೊಟ್ಟಿತು. ಇದರ ಪರಿಣಾಮವಾಗಿ ಇಟಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರ ಸೃಷ್ಟಿಯಾಯಿತು. ಇವರು ರಾಜಕೀಯ ಹಾಗೂ ನೈತಿಕ ಮಾರ್ಗದರ್ಶಿಗಳನ್ನು, ಸಾಹಿತ್ಯಕ ಕೃತಿಗಳನ್ನು ರಚಿಸಿ ಪುನರುಜ್ಜೀವನವು ಪ್ರಬಲವಾಗಿ ಬೆಳೆಯಲು ಕಾರಣರಾದರು.

ಇನ್ನೊಂದು ಕಾರಣವೆಂದರೆ, ಇಟಲಿಯು ಗತಕಾಲದ ಗ್ರೀಕೋ-ರೋಮನ್ ನಾಗರಿಕತೆಯ ಬೌದ್ಧಿಕ ಹಾಗೂ ಕಲಾತ್ಮಕ ಅಂಶಗಳೊಂದಿಗೆ, ಇತರೆ ರಾಷ್ಟ್ರಗಳಿಗಿಂತ ಹೆಚ್ಚು ನಿಕಟ ಸಂಬಂಧವನ್ನು ಹೊಂದಿತ್ತು. ಇಟಲಿಯೆಲ್ಲೆಡೆ ಪ್ರಾಚೀನ ರೋಮ್ ಸಾಮ್ರಾಜ್ಯದ ಸ್ಮಾರಕಗಳು ಹರಡಿದ್ದವು. ಅಲ್ಲದೆ ಲ್ಯಾಟಿನ್ ಸಾಹಿತ್ಯದಲ್ಲಿ ಇಟಲಿಯ ಪ್ರಾಚೀನ ಪಟ್ಟಣಗಳ ಹಾಗೂ ಇತರ ಪ್ರದೇಶಗಳ ಉಲ್ಲೇಖವಿದ್ದುದು ಇಟಲಿಯನ್ನರಿಗೆ ಸ್ಫೂರ್ತಿ ನೀಡಿತ್ತು.

ಕ್ರಿ.ಶ. ೧೪೫೩ ರಲ್ಲಿ ಪೂರ್ವ ರೋಮ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಾನ್‌ಸ್ಟಾಂಟಿನೋಪಲ್ ನಗರವು ಅಟೋಮಾನ್ ಟರ್ಕರ ವಶವಾದದ್ದು ಕೂಡ ಇಟಲಿಯಲ್ಲಿ ಪುನರುಜ್ಜೀವನಕ್ಕೆ ಕಾರಣವಾಯಿತು. ಕಾನ್‌ಸ್ಟಾಂಟಿನೋಪಲ್‌ನಲ್ಲಿಯೇ ನೆಲೆಸಿದ್ದ ಹಲವಾರು ಜನ ಗ್ರೀಕ್ ಪಂಡಿತರು ಇಟಲಿಗೆ ಓಡಿ ಬಂದು ವಿವಿಧ ಪಟ್ಟಣಗಳಲ್ಲಿ ತಳವೂರಿದರು. ಇವರು ತಮ್ಮೊಂದಿಗೆ ಗ್ರೀಕ್ ಸಾಹಿತ್ಯ, ತತ್ವಜ್ಞಾನ, ರಾಜಕೀಯ ಸಿದ್ಧಾಂತ, ಕಲೆ ಇತ್ಯಾದಿಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಕೊಂಡೊಯ್ದರು. ಇದರಿಂದಾಗಿ ಪ್ರಾಚೀನ ಸಂಸ್ಕೃತಿಗಳ ಮರು ಅಧ್ಯಯನಕ್ಕೆ ಅವಕಾಶವುಂಟಾಯಿತು.

ಇಟಲಿಯ ಈ ನಗರವಾಸಿ ಶ್ರೀಮಂತ ವರ್ಗಗಳು ನೀಡಿದ ಬೆಂಬಲ ಪುನರುಜ್ಜೀವನಕ್ಕೆ ಕಾರಣವಾಯಿತು. ಮಿಲಾನಿನ ಆಡಳಿತಗಾರ **ಸ್ಪೋರ್ಜಾ**, ಫ್ಲೋರೆನ್ಸ್‌ನ **ಮೆಡಿಸಿ ಕುಟುಂಬ**, ಫೆರಾರದ ಎಸ್ತೆ, ಮಾಂಟುವಾದ **ಗೊಂಜ್ಗಾಗ** ಇವರೆಲ್ಲರೂ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ಪ್ರಾಯೋಜಕರಾಗಿದ್ದರು.

ವಿಶ್ಲೇಷಣೆಗಳು

ಎರಡು ರೀತಿಯಲ್ಲಿ ಪುನರುಜ್ಜೀವನವನ್ನು ವಿಶ್ಲೇಷಿಸಲಾಗಿದೆ. ಅವು

೧. ಪುನರುಜ್ಜೀವನವು ಪುನರ್ಜನ್ಮವನ್ನು ಪ್ರತಿನಿಧಿಸುತ್ತದೆ.

೨. ಪುನರುಜ್ಜೀವನವು ಹಂತ ಹಂತವಾಗಿ ಆಗುವ ಬದಲಾವಣೆ.

೧. ಪುನರುಜ್ಜೀವನವು ಪುನರ್ಜನ್ಮವನ್ನು ಪ್ರತಿನಿಧಿಸುತ್ತದೆ : 'ನವೋದಯ' 'ಪುನರ್ಜನ್ಮ' ಅಥವಾ 'ರಿನೈಸ್ಸಾನ್' ಎಂಬ ಪದವನ್ನು ಆಧುನಿಕ ಕಾಲದೊಂದಿಗೆ ಮೊದಲ ಬಾರಿಗೆ ತಳುಕು ಹಾಕಿದವನು **ಗ್ಲೋರ್ಗಿಯೋ ವಸಾರಿ** ಎಂಬ ಇಟಲಿಯ ವರ್ಣಚಿತ್ರಕಾರ. ಇವನು ಕಲಾಕಾರರ ಜೀವನ ಎಂಬ ಪುಸ್ತಕವನ್ನು ಬರೆದನು. ಇವನು ಪ್ರಾಚೀನ ಗ್ರೀಕ್ ಹಾಗೂ ರೋಮಿನ ಕಲಾಕೃತಿಗಳಿಂದ ಸ್ಫೂರ್ತಿ ಪಡೆದು ಸೃಷ್ಟಿಯಾದ ಸಮಕಾಲೀನ ಕಲೆಯನ್ನು ವರ್ಣಿಸಲು ಪುನರ್ಜನ್ಮ (Renaissance) ಎಂಬ ಪದವನ್ನು ಬಳಸಿದನು.

೧೪ ಹಾಗೂ ೧೫ನೆಯ ಶತಮಾನಗಳಲ್ಲಿ ಇಟಲಿಯ ಹಲವು ಪಂಡಿತರು, ಬರೆಹಗಾರರು ಹಾಗೂ ಬುದ್ಧಿಜೀವಿಗಳು ಇತಿಹಾಸದ ಬಗ್ಗೆ ಅಸಾಧಾರಣ ಅರಿವನ್ನು ತೋರಿದರು. ತಾವು ಹೊಸ ಯುಗದಲ್ಲಿ ಜೀವಿಸುತ್ತಿದ್ದೇವೆ ಎಂದು ಈ ವರ್ಗವು ಭಾವಿಸಿ ಈ ಯುಗವು, ಕತ್ತಲೆ ಹಾಗೂ ಅಜ್ಞಾನದಿಂದ ತುಂಬಿದ್ದ ಮಧ್ಯಯುಗದಿಂದ ಭಿನ್ನವಾಗಿದೆ; ಅದರ ಪ್ರಭಾವದಿಂದ ಮುಕ್ತವಾಗಿದೆ ಎಂಬ ಭಾವನೆ ಅವರದ್ದಾಗಿತ್ತು. ಇವರು ತಮ್ಮ ವೈಯಕ್ತಿಕ ಸಾಧನೆಗಳನ್ನು ಪುರಾತನ ಗ್ರೀಕ್ ಹಾಗೂ ರೋಮಿನ ಸಾಧನೆಗಳು ಹಾಗೂ ವೈಭವಕ್ಕೆ ಹೋಲಿಸಿದರು. ಕಲಾತ್ಮಕ ಸಾಧನೆಗಳ ದೃಷ್ಟಿಯಿಂದ ನೋಡಿದರೆ ತಮ್ಮ ಕಾಲವು ಪುರಾತನ ಸಂಸ್ಕೃತಿಯನ್ನು ಹೋಲುತ್ತದೆಯೆಂದು ಭಾವಿಸಿದರು. ಆದುದರಿಂದ ಈ ವರ್ಗಕ್ಕೆ ಹೊಸಯುಗವು 'ಪುನರುಜ್ಜೀವನ' ಅಥವಾ 'ಪುನರ್ಜನ್ಮ'ದ ಯುಗವಾಗಿತ್ತು.

ಫ್ಲೋರೆನ್ಸ್‌ನ ಪಂಡಿತ ಹಾಗೂ ರಾಜತಂತ್ರಜ್ಞ **ಲಿಯೋನಾರ್ಡೋ ಬ್ರೂನಿಯು** ಇನ್ನೊಂದು ವರ್ಗವನ್ನು ಪ್ರತಿನಿಧಿಸಿದ್ದನು. ಇವನು ನವೋದಯ ಯುಗಕ್ಕೆ ರಾಜಕೀಯ ದೃಷ್ಟಿಕೋನವನ್ನು ಒದಗಿಸಿದನು. ಇವನು ಗಣರಾಜ್ಯ ಹಾಗೂ ಪ್ರಾತಿನಿಧಿಕ ಮಾದರಿಯ ಸರ್ಕಾರದ ಪ್ರೋತ್ಸಾಹಕನಾಗಿದ್ದು, ಪ್ರಾಚೀನ ರೋಮ್ ಸರ್ಕಾರವು ತಮಗೆ ಅತ್ಯುತ್ತಮ ಮಾದರಿ ಎಂದ. ಅವನಿಗೆ ನವೋದಯವು ಈ ರೀತಿಯಲ್ಲಿ ಪ್ರಾಚೀನ ರೋಮಿನ ರಾಜಕೀಯ ವ್ಯವಸ್ಥೆಯ ಪುನರುಜ್ಜೀವನವನ್ನು ಪ್ರತಿನಿಧಿಸಿತು. ಇವನು ಸಾಮಾಜಿಕ ಹಾಗೂ ರಾಜಕೀಯ ಜೀವನವನ್ನು 'ಮಾನವತಾ' ದೃಷ್ಟಿಕೋನಗಳಿಂದ ವಿಮರ್ಶಿಸಿದನು. ಫ್ಲೋರೆನ್ಸ್ ಹಾಗೂ ಇತರ ಇಟಲಿಯ ನಗರ ರಾಜ್ಯಗಳ ಪ್ರಜೆಗಳಲ್ಲಿ ದೇಶ ಪ್ರೇಮ ಬೆಳೆಯುವಂತೆ ಮಾಡಿದನು.

ನವೋದಯ ಚಳವಳಿಯು ಇಟಲಿಯಲ್ಲಿ ಪ್ರಾರಂಭವಾಗಿ ಉತ್ತರ ಯುರೋಪಿಗೆ ಹರಡಿತು. ಉತ್ತರದಲ್ಲಿ ಈ ಚಳವಳಿಯ ಹರಿಕಾರರು ಅದಕ್ಕೆ ಹೊಸ ದೃಷ್ಟಿಕೋನವನ್ನು ನೀಡಿದರು. ಡಚ್ ದೇಶದ ಬುದ್ಧಿಜೀವಿ **ಡೆಸಿಡೇರಿಯಸ್ ಇರಾಸ್ಮಸ್** ಹಾಗೂ ಅವನ ಅನುಯಾಯಿಗಳು ಕ್ರೈಸ್ತ ಸಮಾಜವನ್ನು ಸುಧಾರಿಸಲು ಹೆಚ್ಚು ಒತ್ತನ್ನು ನೀಡಿದರು. ಪುರಾತನ ಗ್ರೀಕ್ ಹಾಗೂ ರೋಮಿನ ಶ್ರೇಷ್ಠ ತತ್ವಗಳನ್ನಾಧರಿಸಿದ ಶಿಕ್ಷಣದ ಮೂಲಕ ಕ್ರೈಸ್ತ ಸಮಾಜದಲ್ಲಿ ಬದಲಾವಣೆಯನ್ನು ತರಲು ಸಾಧ್ಯವಿದೆ ಎಂದು ವಾದಿಸಿದರು. ಈ ರೀತಿ ನವೋದಯವು ಧರ್ಮ ಸುಧಾರಣೆಗೂ ಇಂಬು ನೀಡಿದ ಚಳವಳಿಯಾಯಿತು.

೧೮ನೇ ಶತಮಾನದಲ್ಲಿ ಫ್ರೆಂಚ್ ದಾರ್ಶನಿಕ ಹಾಗೂ ಬರೆಹಗಾರ ವಾಲ್ಟೈರ್‌ನು ಈ ಚಳವಳಿಯ ಕುರಿತು ಬರೆಯುತ್ತಾ "ಮನುಷ್ಯನ ಮನಸ್ಸನ್ನು ಮೂಢನಂಬಿಕೆ ಹಾಗೂ ಮಿಥ್ಯಾ ಚಿಂತನೆಗಳ ಬಲೆಯಿಂದ ವಿಮೋಚನೆಗೊಳಿಸಿದ ಪ್ರಕ್ರಿಯೆಯಲ್ಲಿ ಪುನರುಜ್ಜೀವನ ಚಳವಳಿಯು ಒಂದು ಮಹತ್ತರ ಹಂತ" ಎಂದು ಬಣ್ಣಿಸಿದನು. ಈ ಯುಗದಲ್ಲಿ ರೋಮನ್ ಕೆಥೋಲಿಕ್ ಚರ್ಚಿನ ಪ್ರಾಬಲ್ಯವು ಬಹಳಷ್ಟು ದುರ್ಬಲವಾದುದನ್ನು ಅವನು ಪ್ರಶ್ನಿಸಿದನು.

ಹತ್ತೊಂಬತ್ತನೆಯ ಶತಮಾನದ 'ರೊಮ್ಯಾಂಟಿಕ್ ಚಳವಳಿ' ಕಾಲದ ಬರೆಹಗಾರರು ರಿನೈಸಾನ್ಸ್‌ನ್ನು ಬೇರೆ ದೃಷ್ಟಿಕೋನದಿಂದ ನೋಡಿದರು. ಇವರು ವಿಚಾರಕ್ಕೆ ಬದಲು ಭಾವನಾತ್ಮಕ ಅಂಶಗಳಿಗೆ ಹೆಚ್ಚು ಒತ್ತು ನೀಡಿದರು. ಇಟಲಿಯ ಸಾಹಿತಿ **ಪೆಟ್ರಾರ್ಕ್**, ಶಿಲ್ಪಿ **ಮೈಕಲೆಂಜಲೋ**, ಫ್ರೆಂಚ್ ದಾರ್ಶನಿಕ **ಡೆಸ್ಕಾರ್ಟೆಸ್**‌ರ ವ್ಯಕ್ತಿತ್ವಗಳು ಅವರಿಗೆ ಮಾದರಿಯಾದವು. ವೈಯಕ್ತಿಕವಾದ, ವ್ಯಕ್ತಿಯ ಸಾಮರ್ಥ್ಯಗಳು ಹಾಗೂ ಹಕ್ಕುಗಳನ್ನು ಪುನರುಜ್ಜೀವನ ಕಾಲದಲ್ಲಿದ್ದಂತೆ ಮಾನ್ಯ ಮಾಡಿದರು.

ಹತ್ತೊಂಬತ್ತನೆಯ ಶತಮಾನದ ಇತಿಹಾಸಕಾರರಾದ ಫ್ರಾನ್ಸ್‌ನ **ಜೂಲ್ಸ್ ಮಿಚೆಲೆಟ್** ಹಾಗೂ ಸ್ವಿಟ್ಜರ್‌ಲ್ಯಾಂಡಿನ **ಜಾಕೊಬ್ ಬರ್ಕಾರ್ಟ್**‌ರು ಪುನರುಜ್ಜೀವನದ ವಿವಿಧ ದೃಷ್ಟಿಕೋನಗಳನ್ನು ತಮ್ಮ ವಿಶ್ಲೇಷಣೆಗಳಲ್ಲಿ ಕ್ರೋಢೀಕರಿಸಿದರು. ಮಿಚೆಲೆಟ್‌ನಿಗೆ ಪುನರುಜ್ಜೀವನವೆಂಬುದು ಮಾನವ ಇತಿಹಾಸದಲ್ಲಿ ಹೊಸ ಶಕೆಯನ್ನು ಆರಂಭಿಸಿತು. ಪುನರುಜ್ಜೀವನವು ಆಧುನಿಕ ಮನುಷ್ಯನ ಎಲ್ಲ ಶ್ರೇಷ್ಠ ಸಾಧನೆಗಳು. ಉದಾ: ಅಮೆರಿಕಾದ ಕಂಡುಹಿಡಿಯುವಿಕೆ, ಹೊಸ ವಿಜ್ಞಾನ, ಆಧುನಿಕ ಸಾಹಿತ್ಯ ಹಾಗೂ ಕಲೆಗಳು ಮುಂತಾದವು ಸಾಧ್ಯವಾಗುವಂತೆ ಮಾಡಿತ್ತೆಂದು ಇವನು ವಾದಿಸಿದ.

ಬರ್ಕಾರ್ಟ್‌ನು **ಇಟಲಿಯಲ್ಲಿ ಪುನರುಜ್ಜೀವನ ನಾಗರೀಕತೆ** ಎಂಬ ಪುಸ್ತಕವನ್ನು ೧೮೬೦ರಲ್ಲಿ ಪ್ರಕಟಿಸಿದನು. ಪುನರುಜ್ಜೀವನವು 'ಆಧುನಿಕ ಕಾಲದ ಆರಂಭ' ಎಂಬ ಮಿಚೆಲೆಟ್‌ನ ವಿಶ್ಲೇಷಣೆಯನ್ನು ಒಪ್ಪಿಕೊಂಡನು ಮತ್ತು ಈ ವಿಶ್ಲೇಷಣೆಯನ್ನು ಇನ್ನಷ್ಟು ವಿಸ್ತರಿಸಿದನು. ಆಧುನಿಕ ರಾಜಕೀಯ ಪ್ರವೃತ್ತಿಗಳು ಹಾಗೂ ವರ್ತನೆಗಳು ಈ ಯುಗದಲ್ಲಿ ಪ್ರಾರಂಭವಾಯಿತು ಎಂದು ಬರ್ಕಾರ್ಟ್‌ನು ಅಭಿಪ್ರಾಯಪಟ್ಟನು.

೨. ಪುನರುಜ್ಜೀವನವು ಹಂತ ಹಂತವಾಗಿ ಆಗುವ ಬದಲಾವಣೆ :

ಕೆಲವು ಬರೆಹಗಾರರು ಪುನರುಜ್ಜೀವನ ಚಳವಳಿಯು 'ಪುನರ್ಜನ್ಮ'ವನ್ನು ಪ್ರತಿನಿಧಿಸುತ್ತದೆ ಎಂಬ ವಾದವನ್ನು ಒಪ್ಪಲಿಲ್ಲ. ಅವರು ಬರ್ಕಾರ್ಟ್ ಹಾಗೂ ಮಿಚೆಲೆಟ್‌ರ ಸಿದ್ಧಾಂತಗಳನ್ನು ಪ್ರಶ್ನಿಸಿದರು. ರಿನೈಸಾನ್ಸ್ ಯುಗವು ಮೇಲಿನ ಬರೆಹಗಾರರು ಹೇಳುವಷ್ಟು ವಿಶಿಷ್ಟ ಅಥವಾ ಭಿನ್ನವಾದುದಲ್ಲ; ಮಧ್ಯಯುಗದಲ್ಲಿ ಕೇವಲ ಬರ್ಬರತೆಯ ಬದಲು, ಅಭಿವೃದ್ಧಿ ಹೊಂದಿದ ಉನ್ನತ ಮಟ್ಟದ ನಾಗರೀಕತೆಯಿತ್ತು. ಪುನರುಜ್ಜೀವನದ ಹಲವು ಅಂಶಗಳು ತಮ್ಮ ಬೇರುಗಳನ್ನು ಮಧ್ಯಯುಗದ ಸಂಸ್ಕೃತಿಯಲ್ಲಿ ಹೊಂದಿದ್ದವು ಎಂದು ಅವರು ಅಭಿಪ್ರಾಯಪಟ್ಟರು. ಆದ್ದರಿಂದಲೇ ನವೋದಯ ಕಾಲದಲ್ಲಿ ಸಂಸ್ಕೃತಿಯ 'ಪುನರ್ಜನ್ಮ'ವಾಯಿತು ಎಂದು ಹೇಳುವುದು. ಆಧುನಿಕ ಪ್ರಪಂಚದ ಸೃಷ್ಟಿಯಲ್ಲಿ ಈ ಯುಗದ ಮಹತ್ವವನ್ನು ಒತ್ತಿ ಹೇಳುವುದು ಹಾದಿ ತಪ್ಪಿಸುವಂತಹದ್ದು ಎಂದು ವಾದಿಸಿದರು.

ಇವರ ಪ್ರಕಾರ ಪುನರುಜ್ಜೀವನವು ಕ್ಷೀಣಿಸುತ್ತಿರುವ ಮಧ್ಯಯುಗವನ್ನು ಪ್ರತಿನಿಧಿಸುತ್ತದೆಯೇ ಹೊರತು, ಹೊಸ ಯುಗದ ಉದಯವಲ್ಲ. ಏಕೆಂದರೆ ಮಧ್ಯಯುಗೀನ

ಬರೆಹಗಾರರು ಕೂಡ ಪ್ರಾಚೀನ ಗ್ರೀಕ್ ಹಾಗೂ ರೋಮಿನ ಸಾಹಿತ್ಯವನ್ನು ಓದಿ ಅವುಗಳು ಅಮೂಲ್ಯವೆಂದು ಪರಿಗಣಿಸಿದ್ದರು.

ಹೀಗಾಗಿ ಮಧ್ಯಯುಗ ಹಾಗೂ ಪುನರುಜ್ಜೀವನ ಕಾಲಗಳ ನಡುವೆ ಒಮ್ಮಿಂದೊಮ್ಮೆಗೆ ಒಡಕು ಉಂಟಾಗಲಿಲ್ಲ. ಪುನರುಜ್ಜೀವನ ಕಾಲದ ಜನರು ಕ್ರೈಸ್ತ ಪಂಥವನ್ನು ಬಿಡಲಿಲ್ಲ. ಅಲ್ಲದೆ ಈ ಯುಗದ ಹಲವು ಅಂಶಗಳು ಆಧುನಿಕವಾಗಿರಲಿಲ್ಲ ಎಂದು ಪ್ರತಿಕ್ರಿಯಿಸಿದ ಇವರು ಪುನರುಜ್ಜೀವನವು ನಿಧಾನಗತಿಯ ಬದಲಾವಣೆಯನ್ನು ಪ್ರತಿನಿಧಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ಈ ರೀತಿಯಲ್ಲಿ ನವೋದಯವನ್ನು ಕುರಿತು ವಿವಿಧ ವಿಶ್ಲೇಷಣೆಗಳು ನಡೆದಿವೆ. ಹೀಗಿದ್ದರೂ ೧೬ನೆಯ ಶತಮಾನದಲ್ಲಿ ಯುರೋಪ್ ಖಂಡವು ತೀವ್ರ ಥರದ ಬದಲಾವಣೆಗಳಿಗೊಳಗಾಯಿತು ಎನ್ನುವುದನ್ನು ಅಲ್ಲಗಳೆಯಲಾಗದು.

ಪುನರುಜ್ಜೀವನದ ಲಕ್ಷಣಗಳು

೧. ಗ್ರೀಕೋ-ರೋಮನ್ ಸಾಹಿತ್ಯ ಹಾಗೂ ಕಲೆಗಳ ಪುನರ್‌ಪರಿಶೋಧನೆ : ನವೋದಯ ಕಾಲದಲ್ಲಿ ಲ್ಯಾಟಿನ್ ಹಾಗೂ ಗ್ರೀಕ್ ಭಾಷಾಂತರ ಸಾಹಿತ್ಯಗಳು ಜನಪ್ರಿಯಗೊಂಡವು. ಸಮಾಜದ ವಿವಿಧ ಸ್ತರಗಳಿಗೆ ಸೇರಿದ ಜನರು, ರಾಜರು, ಶ್ರೀಮಂತ ವರ್ಗದವರು, ವ್ಯಾಪಾರಿಗಳು, ಸೈನಿಕರು ಇವರೇ ಮುಂತಾದವರು ಪ್ರಾಚೀನ ಕಲೆ ಹಾಗೂ ಸಾಹಿತ್ಯಗಳನ್ನು ಅಭ್ಯಸಿಸಿದರು. ಇವರು ವೃತ್ತಿನಿರತ ಪಂಡಿತರಾಗಿರದೆ ಹವ್ಯಾಸಿಗಳಾಗಿದ್ದು ಸಂತೋಷಕ್ಕಾಗಿ ಅಧ್ಯಯನ ಮಾಡುತ್ತಿದ್ದರು. ಕಲೆಯಲ್ಲಿ ಇವರ ಆಸಕ್ತಿಯು ಗತಕಾಲದಿಂದಿಡಿದು ಸಮಕಾಲೀನ ಕೃತಿಗಳವರೆಗೆ ಹರಡಿತು. ಮಧ್ಯಕಾಲೀನ ಯುಗದಲ್ಲಿ ಕಲೆ ಹಾಗೂ ಸಾಹಿತ್ಯವು ಪರಿಣತರ ಆಸ್ತಿಯಾಗಿತ್ತು. ಪುನರುಜ್ಜೀವನ ಕಾಲದಲ್ಲಿ ಕಲೆ ಮತ್ತು ಸಾಹಿತ್ಯಗಳು, ಸೌಂದರ್ಯೋಪಾಸನೆ ಹಾಗೂ ಕಲಿಕೆಯ ವಸ್ತುಗಳಾಗಿದ್ದು, ಪ್ರತಿಯೊಬ್ಬರೂ ಅವುಗಳ ಉಪಯೋಗವನ್ನು ಪಡೆಯಬಹುದಾಗಿತ್ತು.

೨. ಕುತೂಹಲ ಮತ್ತು ವಸ್ತುನಿಷ್ಠೆ : ಪುನರುಜ್ಜೀವನ ಕಾಲವು ಜನರಲ್ಲಿ ಕುತೂಹಲ, ವಿಸ್ಮಯ, ಸಮದೃಷ್ಟಿ ಹಾಗೂ ವಸ್ತುನಿಷ್ಠತೆಗಳನ್ನು ಬೆಳೆಸಿತು. ಕಣ್ಣಿಗೆ ಕಾಣುವ ಪ್ರಪಂಚದ ಬಗ್ಗೆ ತೀವ್ರ ಆಸಕ್ತಿಯನ್ನು ಮೂಡಿಸಿತು. ಇಂದ್ರಿಯಗೋಚರವಾದ ಅನುಭವದಿಂದ ಗಳಿಸಿದ ಜ್ಞಾನಕ್ಕೆ ಒತ್ತು ನೀಡಿತು. ಮಧ್ಯಕಾಲೀನ ಯುಗದಲ್ಲಿದ್ದ ಅರ್ಥಹೀನ ಊಹೆಗಳು, ಸಾವಿನ ನಂತರದ ಜೀವನದಲ್ಲಿ ಆಸಕ್ತಿ ಇತ್ಯಾದಿಗಳಿಂದ ಈ ಹೊಸಯುಗವು ದೂರ ಸರಿಯಿತು. ಧಾರ್ಮಿಕ ಮಠಗಳ ಗೊಡ್ಡು ಸಿದ್ಧಾಂತಗಳಲ್ಲಿ ಬಹಳಷ್ಟನ್ನು ಕೈಬಿಟ್ಟರು. ಈ ರೀತಿ ಇಂದ್ರಿಯ ಗ್ರಾಹ್ಯವಲ್ಲದ ಧಾರ್ಮಿಕ ವಿಷಯಗಳನ್ನು ದೂರವಿಟ್ಟು ಮಾನವನ ಚಟುವಟಿಕೆಗಳ ನೈತಿಕ ಪರಿಣಾಮಗಳ ಮೇಲೆ ವಿಶೇಷ ಗಮನಹರಿಸಿತು.

೩. **ವೈಯಕ್ತಿಕವಾದ :** ನವೋದಯ ಕಾಲದಲ್ಲಿ ವ್ಯಕ್ತಿಯ ವಿಶಿಷ್ಟ ಪ್ರತಿಭೆಗಳು ಹಾಗೂ ಸಾಮರ್ಥ್ಯಗಳು ಮಹತ್ವವನ್ನು ಪಡೆದುಕೊಂಡವು. ವೈಯಕ್ತಿಕ ಖ್ಯಾತಿಯ ಸಿದ್ಧಾಂತವು ಮಧ್ಯಕಾಲೀನ ಯುಗಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಗಳಿಸಿತು. ಪುನರುಜ್ಜೀವನ ಕಾಲದ ಕಲಾಕಾರರು, ತಾವಿರುವ ಪ್ರಪಂಚದಲ್ಲಿ ಖ್ಯಾತಿ ಹಾಗೂ ಗೌರವವನ್ನು ಪಡೆಯಬೇಕೆಂಬ ಹಂಬಲದಿಂದ ತಮ್ಮ ಕೃತಿಗಳಲ್ಲಿ ತಮ್ಮ ಹೆಸರನ್ನು ಮುದ್ರಿಸಿದರು. ಆದರೆ ಇದರ ಮೊದಲಿದ್ದ ಮಧ್ಯಯುಗೀನ ಕಾಲದಲ್ಲಿ ಕೃತಿಕಾರರು ಪರಲೋಕ ಹಾಗೂ ದೇವರ ವೈಭವದಲ್ಲಿ ನಂಬಿಗೆಯಿಟ್ಟು ಹೆಚ್ಚು ವಿನಮ್ರರಾಗಿ ವರ್ತಿಸಿದರು ಹಾಗೂ ಬಹುಭಾಗ ಅನಾಮಧೇಯರಾಗಿಯೇ ಉಳಿದರು.

ವ್ಯಕ್ತಿಯ ವೈಯಕ್ತಿಕ ಸಾಮರ್ಥ್ಯದ ಬೆಳವಣಿಗೆಗೆ ಹೆಚ್ಚು ಒತ್ತು ನೀಡಿದ ಕಾರಣ, ಇದು ಶಿಕ್ಷಣದ ಸ್ವರೂಪದಲ್ಲಿಯೂ ಬದಲಾವಣೆಯನ್ನು ತಂದಿತು. ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯು-ಬೌದ್ಧಿಕವಾದ ಹಾಗೂ ಭೌತಿಕ ಮುಖ್ಯವಾಯಿತು. ಯಾರು ಒಂದು ನಿರ್ದಿಷ್ಟ ವೃತ್ತಿಗೆ ಉದಾಹರಣೆಗೆ ಪಂಡಿತ, ಪುರೋಹಿತ ಅಥವಾ ಸೈನಿಕ ಮೊದಲಾದವುಗಳಿಗೆ ಅಂಟಿಕೊಳ್ಳದೆ ತಮ್ಮ ಬಹುಮುಖ ಪ್ರತಿಭೆಗಳನ್ನು ಅಭಿವ್ಯಕ್ತಿಗೊಳಿಸಲು ನವೋದಯವು ಅವಕಾಶ ನೀಡಿತು.

೪. **ಮಾನವತಾವಾದದ ಏಳಿಗೆ :** ಪುನರುಜ್ಜೀವನದ ಪ್ರಬಲ ಬೌದ್ಧಿಕ ಚಳವಳಿಯು ಮಾನವತಾವಾದವಾಗಿತ್ತು. ಮಾನವನು ಚಿಂತನಾಜೀವಿ ಎಂಬ ತತ್ವವನ್ನು ಮಾನವತಾವಾದಿಗಳು ಪ್ರಚುರಪಡಿಸಿದರು. ಅವರು ವ್ಯಕ್ತಿಯ ಗೌರವ ಹಾಗೂ ಯೋಗ್ಯತೆಗಳಿಗೆ ಒತ್ತು ಕೊಟ್ಟರು. ಪ್ರಾಚೀನ ಸಂಸ್ಕೃತಿಗಳಲ್ಲಿ ಮಾನವನಿಗಿದ್ದ ಪ್ರಾಮುಖ್ಯತೆಯನ್ನು ಪುನರುಜ್ಜೀವನ ಕಾಲದಲ್ಲಿ ಮರಳಿ ಗಳಿಸಲು ಪ್ರಯತ್ನಿಸಲಾಯಿತು. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡುವ ಶಿಕ್ಷಣವನ್ನು ಜನಪ್ರಿಯಗೊಳಿಸಲು ಶ್ರಮಿಸಿದರು. ಈ ಶಿಕ್ಷಣವು ವ್ಯಾಕರಣ, ವಾಕ್ಚಾತುರ್ಯ, ಚರಿತ್ರೆ, ಕಾವ್ಯ, ನೀತಿಶಾಸ್ತ್ರ ಮುಂತಾದ ಮಾನವಿಕ ವಿಷಯಗಳನ್ನು ಹೊಂದಿತ್ತು. ಸಾಂಪ್ರದಾಯಿಕ ವಿಷಯ ಹಾಗೂ ಶಿಕ್ಷಣಗಳಿಂದ ಭಿನ್ನವಾಗಿದ್ದು, ಪ್ರಗತಿಗಾಮಿ ಅಂಶಗಳಿಗೆ ಒತ್ತು ನೀಡಿತ್ತು. ಹಿಂದಿನ ಚರ್ಚ್ ವ್ಯವಸ್ಥೆಯಲ್ಲಿ ಧಾರ್ಮಿಕ ಹಾಗೂ ಅಲೌಕಿಕ ವಿಷಯಗಳನ್ನು ಪ್ರಮುಖವಾಗಿ ಬೋಧಿಸಲಾಗುತ್ತಿತ್ತು. ಮಾನವತಾವಾದಿಗಳು ಶಿಕ್ಷಣವನ್ನು ಚರ್ಚಿನ ಬಿಗಿಮುಷ್ಠಿಯಿಂದ ಬಿಡುಗಡೆಗೊಳಿಸಿ ಮಾನವನ ದೈಹಿಕ ಹಾಗೂ ನೈತಿಕ ಏಳಿಗೆಗೆ ಮಹತ್ವ ನೀಡಿದರು. ಅದೇ ಸಂದರ್ಭದಲ್ಲಿ ಅವನ ಜವಾಬ್ದಾರಿ ಹಾಗೂ ಸಾಮಾಜಿಕ ಸಾಮರಸ್ಯಕ್ಕೂ ಒತ್ತು ನೀಡಿದರು. ಸಮಾಜವು ಹಳೆಯ ಸಾಂಪ್ರದಾಯಿಕ ಚಿಂತನೆಗಳ ಮೇಲೆ ಬೆಳೆದು ನಿಂತಿದೆ. ಪ್ರಾಚೀನ ಕ್ರೈಸ್ತ ಪಂಥದ ಸಿದ್ಧಾಂತಗಳು ಇಂದಿನ ಸಮಾಜಕ್ಕೆ ಒಗ್ಗುವುದಿಲ್ಲ ಎಂದು ಅವರು ವಾದಿಸಿದರು. ಇವರಲ್ಲಿ ಹೆಚ್ಚಿನವರು ಪಟ್ಟಣ-ನಗರವಾಸಿಗಳಾಗಿದ್ದು ಪುರೋಹಿತಶಾಹಿಗಳ ಕೈಯಲ್ಲಿ ಶಿಕ್ಷಣವಿರುವುದನ್ನು ವಿರೋಧಿಸಿದರು. ಮನುಷ್ಯನ ಪ್ರಾಮುಖ್ಯತೆಯನ್ನು ವರ್ಗ ಸವಲತ್ತುಗಳು

ನಿರ್ಧರಿಸುವುದಿಲ್ಲ; ಅದರ ಬದಲು ಅವನ ಗುಣಾದರ್ಶಗಳು ಎಂದು ಹೇಳಿದರು. ಇತಿಹಾಸ ಕೂಡ ದೇವರ ಇಚ್ಛೆಯಂತೆ ರೂಪಿಸಲ್ಪಡುವುದಿಲ್ಲ; ಅದು ಮನುಷ್ಯನಿಂದ ಎಂದು ಹೇಳಿ ಊಳಿಗಮಾನ್ಯ ವಿರೋಧಿ ನೀತಿಗಳ ಹರಿಕಾರರಾದರು. ಹೊಸದಾದ, ಜಾತ್ಯಾತೀತವಾದ, ಧಾರ್ಮಿಕ ಅಂಧಶ್ರದ್ಧೆಗಳಿಂದ ಮುಕ್ತವಾದ ವ್ಯವಸ್ಥೆಯನ್ನು ಬಯಸಿದರು. ಮನುಷ್ಯನೇ ಅವನ ವಿಧಿಯ ಮಾಲಿಕ ಎಂದು ಅಭಿಪ್ರಾಯಪಟ್ಟನು. ಅವನ ಶಕ್ತಿ ಮತ್ತು ಸಾಮರ್ಥ್ಯಗಳಲ್ಲಿ ನಂಬಿಕೆಯಿಟ್ಟರು. ಚರ್ಚನ್ನು ತೀವ್ರವಾಗಿ ನಿಂದಿಸಿದರು. ಪುರೋಹಿತ ವರ್ಗದ ಅಜ್ಞಾನ ಹಾಗೂ ಮುರ್ಖತನಗಳನ್ನು, ಪೋಪನ ದುರಾಸೆ ಹಾಗೂ ಅಧಿಕಾರದ ಲಾಲಸೆ ಇತ್ಯಾದಿಗಳು ಇವರಿಂದ ನಿತ್ಯ ಗೇಲಿಗೀಡಾದವು.

ಮಾನವತಾವಾದದ ಸೃಷ್ಟಿ ಹಾಗೂ ಬೆಳವಣಿಗೆ ಯುರೋಪಿನ ಇತಿಹಾಸದ ದಿಕ್ಕನ್ನೇ ಬದಲಾಯಿಸಿತು.

ಫ್ರಾನ್ಸಿಸ್ಕೋ ಪೆಟ್ರಾರ್ಕ್ (೧೩೦೪-೧೩೭೪)

ಕ್ರಿ.ಶ. ೧೩೦೪ ರಲ್ಲಿ ಫ್ಲೊರೆನ್ಸ್‌ನಲ್ಲಿ ಜನಿಸಿದ ಪೆಟ್ರಾರ್ಕ್‌ನು ಮೊದಲ ಶ್ರೇಷ್ಠ ಮಾನವತಾವಾದಿ. ಮಾನವನ ವ್ಯಕ್ತಿತ್ವದಲ್ಲಿ ಗಾಢವಾದ ಆಸಕ್ತಿಯನ್ನು ತೋರಿಸಿದನು. ಚರ್ಚಿನ ಅಜ್ಞಾನ ಹಾಗೂ ಅಂಧಶ್ರದ್ಧೆಗಳನ್ನು ತೀವ್ರವಾಗಿ ಖಂಡಿಸಿದನು. ಅಲ್ಲದೆ ಮಾನವನ ನಿಜವಾದ ಅವಶ್ಯಕತೆಗಳ ಮೇಲೆ ಚರ್ಚ್ ಗಮನಹರಿಸದಿರುವ ಬಗ್ಗೆ ಟೀಕಿಸಿದನು. ಪ್ರಾಚೀನ ಗ್ರೀಕ್ ಹಾಗೂ ರೋಮ್‌ಗಳ ಸಾಂಸ್ಕೃತಿಕ ಸಾಧನೆಗಳಿಂದ ಪ್ರೇರಿತನಾಗಿ, ಅವುಗಳ ಮೂಲಕ ಸಮಕಾಲೀನ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದನು.

ಪೆಟ್ರಾರ್ಕ್‌ನ ನಂತರ ಮಾನವತಾವಾದವು ಉತ್ತರ ಯುರೋಪಿನಲ್ಲಿ ಹರಡಿ ಜನಪ್ರಿಯವಾಯಿತು. ಇಟಲಿಯ ಇತರ ಮಾನವತಾವಾದಿಗಳಾದ **ಬೊಕಾಸಿಯೋ, ನಿಕೋಲಿ, ಸ್ಯಾಲುತಾಟಿ** ಮುಂತಾದವರು ಕೂಡ ಮಾನವನನ್ನು ತಮ್ಮ ಅಧ್ಯಯನದ ಕೇಂದ್ರ ಬಿಂದುವನ್ನಾಗಿಸಿಕೊಂಡರು. ಇಟಲಿಯ **ಲಿಯೋನಾರ್ಡೋ ಬ್ರೂನಿಯು** ರಾಷ್ಟ್ರ ಪ್ರೇಮದ ಬೆಳವಣಿಗೆಗೆ ಒತ್ತು ನೀಡಿದರು. ಮಾನವತಾವಾದಿಗಳು ಸ್ಥಳೀಯ ಭಾಷೆಗಳನ್ನು ಬಳಸಿದ್ದರಿಂದ ಈ ಭಾಷೆಗಳು ಜನಪ್ರಿಯಗೊಂಡವು. ಲ್ಯಾಟಿನ್ ಭಾಷೆಯಲ್ಲಿದ್ದ ಜ್ಞಾನಭಂಡಾರವು ಜನರಿಗೆ ಆಡುಭಾಷೆಗಳಲ್ಲಿ ದೊರೆಯಲ್ಪಟ್ಟಿತ್ತು. **ಪ್ಲೇಟೋ**ನಂಥ ಪ್ರಾಚೀನ ದಾರ್ಶನಿಕರ ತತ್ವ ಸಿದ್ಧಾಂತಗಳು ಜನರಲ್ಲಿ ಜನಪ್ರಿಯಗೊಂಡವು.

ಉತ್ತರ ಯುರೋಪಿನಲ್ಲಿನ (ಜರ್ಮನಿ, ಹಾಲೆಂಡ್, ಆಸ್ಟ್ರಿಯ, ಬೆಲ್ಜಿಯಂ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳು) ಮಾನವತಾವಾದವು ಬೇರೂರುವ ವೇಳೆಗೆ ಧರ್ಮ ಸುಧಾರಣಾ ಚಳವಳಿಯು ಬಲವಾಗಿ ಬೆಳೆದಿತ್ತು. ಆದ್ದರಿಂದ ಉತ್ತರದ ಮಾನವತಾವಾದವನ್ನು ಕ್ರಿಶ್ಚಿಯನ್ ಮಾನವತಾವಾದದೊಡನೆ ಗುರುತಿಸಲಾಗಿದೆ. ಕ್ರಿಶ್ಚಿಯನ್ ಮಾನವತಾವಾದಿಗಳು, ಧಾರ್ಮಿಕ ದಾಖಲೆಗಳ ಅಧ್ಯಯನಕ್ಕೆ ಇಟಲಿಯ ಮಾನವತವಾದಿಗಳ ತಂತ್ರಗಳನ್ನು ಬಳಸಿದರು. ಇದರಿಂದಾಗಿ ಗ್ರೀಕ್, ಹೀಬ್ರೂ ಭಾಷೆಗಳಿದ್ದ ಮೂಲ ಧಾರ್ಮಿಕ ಗ್ರಂಥಗಳನ್ನು

ಪುನರವಲೋಕನ ಮಾಡಿ, ಮಧ್ಯಕಾಲೀನ ಯುಗದಲ್ಲಿ ಜನಪ್ರಿಯವಾದ ಹಲವು ಅರ್ಥಹೀನ ವಿಶ್ಲೇಷಣೆಗಳನ್ನು ಕಿತ್ತು ಬಿಸಾಡಲು ಸಾಧ್ಯವಾಯಿತು. ಇದು ಮುಂದೆ ಕ್ರೈಸ್ತ ಧರ್ಮದಲ್ಲಿ ಸುಧಾರಣಾ ಚಳವಳಿಯು ಬಲಗೊಳ್ಳಲು ಅವಕಾಶ ನೀಡಿತು.

ಹಾಲೆಂಡಿನ ಪಂಡಿತ **ಡೆಸಿಡೇರಿಯಸ್ ಇರಾಸ್ಮಸ್‌**ನು ಉತ್ತರದ ಮಾನವತಾವಾದಿಗಳಲ್ಲಿ ಅತಿ ಪ್ರಸಿದ್ಧನು. ಇವನನ್ನು 'ಮಾನವತಾವಾದಿಗಳ ರಾಜ'ನೆಂದು ಪರಿಗಣಿಸಲಾಗಿದೆ. ಅಸಾಧಾರಣ ಬುದ್ಧಿಜೀವಿ ಹಾಗೂ ಬರೆಹಗಾರನಾಗಿದ್ದ. ಇವನು ಧರ್ಮಾಂಧತೆಯನ್ನು ಖಂಡಿಸಿ, ಧಾರ್ಮಿಕ ಶ್ರದ್ಧೆ, ಉದಾರವಾದ ಹಾಗೂ ಸಹಿಷ್ಣುತಾಭಾವವನ್ನು ಬೆಂಬಲಿಸಿದನು. ತನ್ನ ಪುಸ್ತಕ **ಪ್ರೈಸ್ ಆಫ್ ಫೋಲಿ**ಯಲ್ಲಿ ಸಮಾಜದಲ್ಲಿರುವ ಭ್ರಷ್ಟಾಚಾರ ಹಾಗೂ ಅನೈತಿಕತೆಯನ್ನು ಟೀಕಿಸಿದನು. ಇವನ ವಿಚಾರಧಾರೆಗಳು ಕೆಥೋಲಿಕ್ ಹಾಗೂ ಪ್ರೊಟೆಸ್ಟಾಂಟ್‌ರಿಬ್ಬರ ಮೇಲೂ ಪರಿಣಾಮ ಬೀರಿತು. ಇರಾಸ್ಮಸ್‌ನ ಸ್ನೇಹಿತ **ಸರ್ ಥಾಮಸ್ ಮೋರ್**‌ನು ಇನ್ನೊಬ್ಬ ಪ್ರಖ್ಯಾತ ಮಾನವತಾವಾದಿ. ಇವನು ಬರೆದ ಪ್ರಸಿದ್ಧ ಪುಸ್ತಕ **ಯುಟೋಪಿಯ.** ಇದರಲ್ಲಿ ಮೋರನು ಕಾಲ್ಪನಿಕ ದ್ವೀಪದಲ್ಲಿ ಜೀವಿಸುವ ಆದರ್ಶ ಜನಾಂಗ ವೊಂದನ್ನು ಚಿತ್ರಿಸಿ ಸಮಕಾಲೀನ ಸಮಾಜದ ಭ್ರಷ್ಟಾಚಾರವನ್ನು ಟೀಕಿಸಿದ್ದಾನೆ.

ಕ್ರೈಸ್ತ ಮಾನವತಾವಾದಿಗಳು ಚರ್ಚ್ ಹಾಗೂ ಪಂಥದ ಕೆಲವು ಪದ್ಧತಿಗಳನ್ನು ಟೀಕಿಸಿದರೂ, ಚರ್ಚಿನ ಏಕತೆ ಮತ್ತು ಕೆಥೋಲಿಕ್ ಧರ್ಮವನ್ನು ಸುಧಾರಿಸಿ ಉಳಿಸಿಕೊಳ್ಳಲು ಬಯಸಿದರು. ಇರಾಸ್ಮಸ್‌ನು ಮಾರ್ಟಿನ್ ಲೂಥರನ ವಾದಗಳನ್ನು ಒಪ್ಪಲು ಸಿದ್ಧನಿರಲಿಲ್ಲ. ಕ್ರಿಶ್ಚಿಯನ್ ಮಾನವಾತವಾದಿಗಳು ಜನರಲ್ಲಿ ಪ್ರಶ್ನಿಸುವ ಮನೋಭಾವವನ್ನು ಜನಪ್ರಿಯ ಗೊಳಿಸಿದರು; ಆದರೆ ಧಾರ್ಮಿಕ ಚೌಕಟ್ಟನ್ನು ಮುರಿದು ಹಾಕಲು ಸಿದ್ಧರಿರಲಿಲ್ಲ.

ಸಾಹಿತ್ಯ

ಹದಿನಾಲ್ಕನೆಯ ಶತಮಾನದ ಇಟಲಿಯ ಖ್ಯಾತ ಬರೆಹಗಾರ **ಡಾಂಟೆ ಅಲಿಗಿಯೆರಿ** (೧೨೬೫-೧೩೨೧). ಮಧ್ಯಯುಗದಿಂದ ಸಾಹಿತ್ಯವು ನವೋದಯ ಕಾಲಕ್ಕೆ ಬಂದಾಗ ಹೊಂದಿದ ಪರಿವರ್ತನೆಯನ್ನು ಡಾಂಟೆ ಅಲಿಗಿಯೆರಿಯ ಕೃತಿಗಳು ಪ್ರತಿನಿಧಿಸುತ್ತವೆ. ಇವನ ಪ್ರಸಿದ್ಧ ಕೃತಿ **ಡಿವೈನ್ ಕಾಮೆಡಿ** ಇದು ಮಾನವನ ಜೀವನ ಹಾಗೂ ಪ್ರವೃತ್ತಿಯ ಎಲ್ಲಾ ಅಂಶಗಳಲ್ಲಿ ಆಸಕ್ತಿಯನ್ನು ತೋರಿಸಿತು. ಇಟಲಿಯ ಇನ್ನೊಬ್ಬ ಬರೆಹಗಾರ **ಬೊಕಾಸಿಯೋ,** ಇವನ ಕೃತಿ **ದಿ ಡೆಕಮೆರೋನ್** ಸಮಕಾಲೀನ ಸಮಾಜದ ಮೇಲೆ ಬೆಳಕು ಚೆಲ್ಲುತ್ತದೆ. ಡಾಂಟೆ ಹಾಗೂ ಬೊಕಾಸಿಯೋರು ಲ್ಯಾಟಿನ್ ಭಾಷೆಯ ಬದಲು ಇಟಲಿಯನ್ ಭಾಷೆಯನ್ನು ಸಾಹಿತ್ಯದ ಮಾಧ್ಯಮವನ್ನಾಗಿ ಬಳಸಿದರು. **ಪೆಟ್ರಾರ್ಕ್**‌ನು ತನ್ನ ಪ್ರೇಮ ಸಾನೆಟ್ಟುಗಳನ್ನು ಇಟಲಿಯನ್ ಭಾಷೆಯಲ್ಲಿ ಬರೆದನು. ಇವುಗಳು 'ಪೆಟ್ರಾರ್ಕ್‌ನ ಸಾನೆಟ್ಟು'ಗಳೆಂದೇ ಜನಪ್ರಿಯವಾಯಿತು.

ಮಾನವತಾವಾದದ ಪ್ರಭಾವವೂ ಸಾಹಿತ್ಯದ ಮೇಲಾಯ್ತು. ಪೆಟ್ರಾರ್ಕ್‌ನೇ ಇಲ್ಲೂ ಅಗ್ರಗಣ್ಯನಾಗಿದ್ದನು. ೧೫ನೇ ಶತಮಾನದಲ್ಲಿ ಫ್ಲೋರೆನ್ಸ್‌ನ ಆಡಳಿತಗಾರ ಲೊರೆಂಜೋ

ಡಿ ಮೆಡಿಸಿಯ ಪ್ರೋತ್ಸಾಹದಿಂದ ಇಟಲಿಯ ಕಾವ್ಯಗಳು ಮತ್ತೊಮ್ಮೆ ಅರಳಿದವು. ಅರಿಸ್ಟೋನ 'ಒರ್ಲಾಂಡೋ-ಫೂರಿಯಾಸೋ', ಸಾನಜಾರೋನ 'ಆರ್ಕಾಡಿಯಾ' ಮುಂತಾದ ಕೃತಿಗಳು ರಚನೆಯಾದವು. ೧೬ನೇ ಶತಮಾನದಲ್ಲಿ ಗದ್ಯದಲ್ಲಿಯೂ ಶ್ರೇಷ್ಠ ಕೃತಿಗಳು ರಚನೆಯಾದವು. ರಾಜಕೀಯ ಸಿದ್ಧಾಂತಗಳು ರಾಜಕೀಯ ಅಧಿಕಾರದ ಬಳಕೆ ಆಧುನಿಕ ಸರಕಾರಗಳ ನೀತಿಗಳು ಹಾಗೂ ಅವುಗಳ ಪಾಲನೆಯ ಕುರಿತಾದ **ನಿಕೊಲೊ ಮೆಕೆವಲ್ಲಿಯ** ದಿ ಪ್ರಿನ್ಸ್ ಎಂಬ ಪುಸ್ತಕವು ಬಹಳಷ್ಟು ಜನಪ್ರಿಯವಾಯಿತು.

ಸ್ಪೆಯಿನ್ ದೇಶದ **ಸರ್ವೆಂಟಿಸ್ ಸಾವೆದ್ರ**ನ 'ಡಾನ್ ಕ್ವಿಕೋಟ್' ಎಂಬ ಅನ್ಯೋಕ್ತಿ ಕಾದಂಬರಿ, ಇಂಗ್ಲೆಂಡ್‌ನಲ್ಲಿ **ವಿಲಿಯಂ ಷೇಕ್ಸ್‌ಪಿಯರ್**‌ನ ಶ್ರೇಷ್ಠ ನಾಟಕಗಳು. ಈ ಕಾಲದಲ್ಲಿ ಸೃಷ್ಟಿಯಾದವು.

ಪುನರುಜ್ಜೀವನದ ಕಲೆಗಳು

ಸಾಹಿತ್ಯ, ಕಲೆ ಹಾಗೂ ಸಂಗೀತ ಕ್ಷೇತ್ರಗಳಲ್ಲೂ ಪುನರುಜ್ಜೀವನವು ಅಪಾರವಾದ ಪ್ರಗತಿ, ನಾವೀನ್ಯತೆ ಹಾಗೂ ಹೊಸತನವನ್ನು ಸಾಧಿಸಿತು. ವರ್ಣಚಿತ್ರಗಳು, ಶಿಲ್ಪಕಲೆ, ವಾಸ್ತುಶಿಲ್ಪ ಮುಂತಾದವುಗಳಲ್ಲಿ ನವೋದಯವು ಮಧ್ಯಕಾಲೀನ ಸಂಪ್ರದಾಯಗಳನ್ನು ಬದಿಗೊತ್ತಿತು. ಕಲಾಕೃತಿಗಳಲ್ಲಿ ಪೂರ್ಣತೆ ಹಾಗೂ ಸಮಕೋನಗಳನ್ನು ಸಾಧಿಸಲು ಗಣಿತ ಹಾಗೂ ರೇಖಾಗಣಿತಗಳನ್ನು ಕಲಾಕಾರರು ಉಪಯೋಗಿಸಿಕೊಂಡರು. ಹೀಗೆ ಕಲೆ ಮತ್ತು ವಿಜ್ಞಾನಗಳ ಮಿಲನವು ಪುನರುಜ್ಜೀವನದ ಕಲಾ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿದೆ. ಪ್ರಾಚೀನ ರೋಮ್ ಸಾಮ್ರಾಜ್ಯದ ಶಿಲ್ಪಕಲೆ ಹಾಗೂ ವಾಸ್ತುಶಿಲ್ಪವು ಕಲಾಕಾರರಿಗೆ ಸ್ಪೂರ್ತಿಯ ಚಿಲುಮೆಯಾಯಿತು. ಜೀವನದ ವಿವಿಧ ಕ್ಷೇತ್ರಗಳಲ್ಲಿ ಆಗುತ್ತಿದ್ದ ಬದಲಾವಣೆಗಳು ಕಲಾಕ್ಷೇತ್ರದಲ್ಲಿ ಪ್ರಯೋಗಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿತು. ಪಟ್ಟಣಗಳಲ್ಲಿ ಶೇಖರವಾದ ಸಂಪತ್ತು ಕೂಡಾ ಇವರಿಗೆ ಉತ್ತೇಜನ ನೀಡಲು ವ್ಯಯಿಸಲ್ಪಟ್ಟಿತು.

ವರ್ಣಚಿತ್ರಗಳು : ನವೋದಯದ ವರ್ಣಚಿತ್ರಕಾರರು ಮಧ್ಯಯುಗದ ಶುದ್ಧ ಧಾರ್ಮಿಕ ವಿಷಯಗಳಿಂದ ದೂರ ಸರಿದು ಪ್ರಾಕೃತಿಕ ಪ್ರಪಂಚವನ್ನು ಬಿಂಬಿಸಲು ಪ್ರಾರಂಭಿಸಿದರು. ೧೪ನೇ ಶತಮಾನದ ಫ್ಲೋರೆನ್ಸ್‌ನ **ಗಿಯೊಟೊ**ನನ್ನು ನವೋದಯ ವರ್ಣಚಿತ್ರ ಕಲೆಯ ಅಗ್ರಗಣ್ಯನೆಂದು ಕರೆಯುತ್ತಾರೆ. ಇಟಲಿಯ ತ್ರಿಮೂರ್ತಿಗಳಾದ **ಲಿಯೋನಾರ್ಡೋ ಡ ವಿಂಚಿ, ರಾಫೆಲ್** ಹಾಗೂ **ಮೈಕೆಲೆಂಜಲೋ** ಇವರುಗಳ ವರ್ಣಚಿತ್ರಗಳು ಉತ್ಕೃಷ್ಟ ಮಟ್ಟದ್ದಾಗಿದ್ದು, ಪುನರುಜ್ಜೀವನದ ಖ್ಯಾತ ಕಲಾ ಕೊಡುಗೆಗಳಾಗಿವೆ.

ಡ ವಿಂಚಿಯು (೧೪೫೨-೧೫೧೯) ಖ್ಯಾತ ವರ್ಣಚಿತ್ರಕಾರ, ಮಾತ್ರವಲ್ಲದೆ ತಂತ್ರಜ್ಞ, ವಿಜ್ಞಾನಿ, ವಾಸ್ತುಶಿಲ್ಪಿ ಮತ್ತು ಸಂಶೋಧಕನಾಗಿದ್ದನು. ಇಂದಿನ ವಿಮಾನ, ಪ್ಯಾರಚೂಟ್, ಜಲಾಂತರ್ಗಾಮಿ, ಕಾರುಗಳ ಸೃಷ್ಟಿಯನ್ನು ಅಂದೇ ಊಹಿಸಿದ್ದನು. ಒಬ್ಬ ಜೀವಶಾಸ್ತ್ರಜ್ಞನಾಗಿ ಮಾನವ ದೇಹರಚನೆಯನ್ನು ಕೂಡ ಅಭ್ಯಸಿಸಿದ್ದನು. ಇವನ ಚಿತ್ರಗಳಲ್ಲಿ ಪ್ರಖ್ಯಾತ

ವಾದುವು **ಮೊನಲೀಸಾ** ಮತ್ತು **ದಿ ಲಾಸ್ಟ್ ಸಪ್ಪರ್**. ಮಿಲಾನ್ ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಕಾಲುವೆಯ ನಕ್ಷೆಯನ್ನು ಇವನು ತಯಾರಿಸಿದನು.

ರಾಫೆಲ್‌ನ ಪ್ರಖ್ಯಾತ ವರ್ಣಚಿತ್ರ **ಮಡೋನ್ನಾ**. ಅವನು ರಚಿಸಿದ ಪ್ರೆಸ್ಕೋವನ್ನು **ದಿ ಸ್ಕೂಲ್ ಆಫ್ ಅಥೆನ್ಸ್** ಎಂದು ಕರೆಯಲಾಗಿದೆ. ಇದರಲ್ಲಿ ಪ್ರಾಚೀನ ಗ್ರೀಕ್ ದಾರ್ಶನಿಕರಾದ ಪ್ಲೇಟೋ ಹಾಗೂ ಅರಿಸ್ಟಾಟಲ್‌ರು ಇತರ ದಾರ್ಶನಿಕರು ಹಾಗೂ ವಿಜ್ಞಾನಿಗಳಿಂದ ಸುತ್ತುವರಿಯಲ್ಪಟ್ಟದ್ದನ್ನು ತೋರಿಸುತ್ತದೆ.

ಮೈಕೆಲೆಂಜಲೋನು (೧೪೭೫-೧೫೬೪) ವರ್ಣಚಿತ್ರಕಾರ, ಶಿಲ್ಪಿ, ವಾಸ್ತುಶಿಲ್ಪಿ ಹಾಗೂ ಕವಿಯಾಗಿದ್ದನು. **ಡೇವಿಡ್** ಮತ್ತು **ಮೋಸೆಸ್** ಇವನ ಶ್ರೇಷ್ಠ ಶಿಲ್ಪಗಳಾಗಿವೆ. ರೋಮಿನ ಸಿಸ್ಟೈನ್ ಚರ್ಚಿನ ಮೇಲ್ಛಾವಣಿಯನ್ನು ಇವನು ವರ್ಣಚಿತ್ರಗಳಿಂದ ಅಲಂಕರಿಸಿ ತನ್ನ ಕಲೆಯ ಔನ್ನತ್ಯವನ್ನು ಪ್ರಪಂಚಕ್ಕೆ ತೋರಿಸಿಕೊಟ್ಟನು. ಇದು ಪ್ರಪಂಚದಲ್ಲಿಯೇ ಬೃಹತ್ತಾದ ಪ್ರೆಸ್ಕೋ ಆಗಿದೆ. **ಟಿಟಿಯನ್**‌ನನು ಇಟಲಿಯ ಮತ್ತೊಬ್ಬ ವರ್ಣಚಿತ್ರಕಾರ.

ವಾಸ್ತುಶಿಲ್ಪದಲ್ಲಿ ಇಟಲಿಯನ್ನರು ಪ್ರಾಚೀನ ರೋಮಿನ ಶೈಲಿಯನ್ನು ಅನುಕರಿಸಿದರು. ಆದ್ದರಿಂದ ಈ ಶೈಲಿಯನ್ನು 'ರೋಮನಸ್ಕ್' ಎಂದು ವರ್ಣಿಸಲಾಗಿದೆ. ರೋಮ್ ನಗರದ ಸೈಂಟ್ ಪೀಟರ್‌ನ ಬ್ಯಾಸಿಲಿಕವು ಶ್ರೇಷ್ಠ ಉದಾಹರಣೆಯಾಗಿದೆ. ಬ್ಯಾಸಿಲಿಕದ ಗೋಲವನ್ನು (ಡೋಮ್) ಮೈಕಲೆಂಜಲೋನು ಪುನರ್‌ವಿನ್ಯಾಸ ಮಾಡಿದನು. ಇತರೆಡೆ ವಾಸ್ತುಶಿಲ್ಪದಲ್ಲಿ **ಗೋಥಿಕ್** ಶೈಲಿಯನ್ನು ಅನುಸರಿಸಲಾಯಿತು. ಈ ಶೈಲಿಯನ್ನು ಫ್ರಾನ್ಸಿನ ರೀಮ್ಸ್ ಕೆಥೆಡ್ರಾಲ್ ಹಾಗೂ ಲೂವ್ರೆ ಮ್ಯೂಸಿಯಂಗಳಲ್ಲಿ ಕಾಣಬಹುದು. .

ಸಂಗೀತ ಕಲೆ ಕೂಡ ಇತರ ಕಲೆಗಳೊಂದಿಗೆ ವಿಕಾಸ ಹೊಂದಿತ್ತು. ಸಂಗೀತಜ್ಞರು 'ಪಾಲಿಫೋನಿ' ಎನ್ನುವ ತಂತ್ರವನ್ನು ಅಭಿವೃದ್ಧಿಗೊಳಿಸಿ ಬೇರೆ ಬೇರೆ ರಾಗಗಳ ಹೊಂದಾಣಿಕೆ ಮಾಡಿದರು. ಹೊಸ ಸಂಗೀತೋಪಕರಣಗಳೂ ಕೂಡ ಅವತರಿಸಿದವು. ವಯಲಿನ್ ಇತ್ಯಾದಿಗಳ ಉಪಯೋಗ ಆರಂಭವಾಯಿತು. ಜಾನಪದ ಹಾಡುಗಳು ಮತ್ತು ಸಂಗೀತ ಯುರೋಪಿನ ಸಾಂಸ್ಕೃತಿಕ ಮುಖ್ಯವಾಹಿನಿಯ ಭಾಗಗಳಾದವು.

ಪುನರುಜ್ಜೀವನ ಕಾಲದಲ್ಲಿ ವಿಜ್ಞಾನ

ಈ ಯುಗದ ಚಿಂತನೆಗಳು ವೈಜ್ಞಾನಿಕ ಮಾಹಿತಿಗಳ ಸೃಷ್ಟಿಗೆ ಎಡೆಮಾಡಿ, ಪಾಶ್ಚಿಮಾತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಹಲವು ಕ್ಷೇತ್ರಗಳಲ್ಲಿ ಮಹತ್ತರ ಬೆಳವಣಿಗೆಗಳಾದವು. ಅವುಗಳು -

ಮುದ್ರಣ(ಪ್ರಿಂಟ್) ತಂತ್ರಜ್ಞಾನ : ಪುಸ್ತಕಗಳ ಮುದ್ರಣಕ್ಕಾಗಿ ತಂತ್ರಜ್ಞಾನದ ಶೋಧನೆ ಪುನರುಜ್ಜೀವನ ಅತ್ಯಂತ ಶ್ರೇಷ್ಠ ಕೊಡುಗೆಯಾಗಿದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ಹಳೆಯ ಮುದ್ರಣ ತಂತ್ರಜ್ಞಾನವನ್ನು ಜರ್ಮನಿಯ **ಗುಟೇನ್‌ಬರ್ಗ್**‌ನು ಅಭಿವೃದ್ಧಿಪಡಿಸಿದನು.

ಪೋಪರು ಆಗ ನೀಡುತ್ತಿದ್ದ 'ಕ್ಷಮಾಪಣಾ ಪತ್ರ'ಗಳನ್ನು ಹಾಗೂ ಬೈಬಲ್‌ನ ಒಂದು ಭಾಷಾಂತರವನ್ನು ಮುದ್ರಿಸಿ ಹಂಚಿದನು. ಮುದ್ರಣ ಯಂತ್ರದ ಅಭಿವೃದ್ಧಿಯಿಂದಾಗಿ ಹೆಚ್ಚು ಪುಸ್ತಕಗಳು, ಹೆಚ್ಚು ಸಂಖ್ಯೆಯಲ್ಲಿ ಕ್ಷಿಪ್ರಗತಿಯಲ್ಲಿ ಮುದ್ರಿಸಲ್ಪಟ್ಟು ಕಡಿಮೆ ಬೆಲೆಯಲ್ಲಿ ಜನರಿಗೆ ದೊರೆಯಲಾರಂಭಿಸಿದವು. ಜ್ಞಾನಪ್ರಸಾರದಲ್ಲಿ ಮುದ್ರಣ ಯಂತ್ರದ ಪಾತ್ರವು ಅಪೂರ್ವವೆನಿಸಿದೆ.

ವೈದ್ಯಕೀಯ ಶಾಸ್ತ್ರ: ಮಾನವ ದೇಹರಚನೆಯ ಬಗ್ಗೆ ಚಿತ್ರಗಳೊಂದಿಗೆ ಪುಸ್ತಕಗಳು ಪ್ರಕಟಗೊಂಡು ವೈದ್ಯಶಾಸ್ತ್ರದಲ್ಲಿ ಹೊಸ ಶಕೆಯನ್ನುಂಟು ಮಾಡಿತು. ವೈದ್ಯಕೀಯ ಶಾಸ್ತ್ರಗಳ ಅಧ್ಯಯನಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ಯೋಗ್ಯ ಸ್ಥಾನಮಾನ ದೊರೆಯಿತು. ಪದುವಾ ಹಾಗೂ ಪೆರ್‍ರ್ರಾರ ವಿಶ್ವವಿದ್ಯಾನಿಲಯಗಳ ವೈದ್ಯಕೀಯ ಕಾಲೇಜುಗಳು ಪ್ರಖ್ಯಾತಿಯನ್ನು ಪಡೆದಿದ್ದವು. **ಆಂಡ್ರಿಯಸ್ ವೆಸಾಲಿಯಸ್** ಎಂಬ ಬೆಲ್ಜಿಯಂನ ವೈದ್ಯನು ಪದುವ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಗಳನ್ನು ಮಾಡಿ ತನ್ನ ಶೋಧನೆಗಳನ್ನು **ಆನ್ ದ ಸ್ಟ್ರಕ್ಚರ್ ಆಫ್ ದ ಹ್ಯೂಮನ್ ಬಾಡಿ** ಎಂಬ ಪುಸ್ತಕದಲ್ಲಿ ಪ್ರಕಟಿಸಿದನು. **ಗ್ಯಾಬ್ರಿಯಲ್ಲೋ-ಪೆಲ್ಲೋಸಿಯೋ** ಎಂಬಾತ ಮಾನವ ದೇಹದ ರಚನೆ ಮೇಲೆ ಸಂಶೋಧನೆ ಮಾಡಿದನು. ಔಷಧ ಶಾಸ್ತ್ರದಲ್ಲಿ **ಪರಾಸೆಲ್‌ಸನ್** ಎಂಬ ಸ್ವಿಸ್ ವೈದ್ಯ, ಶಸ್ತ್ರಚಿಕಿತ್ಸೆಯ ಮೇಲೆ **ಅಂಬ್ರೊಯಿಸ್ ಪೇರ್** ಎಂಬ ಫ್ರೆಂಚ್ ವೈದ್ಯನು ಗಣನೀಯ ಶೋಧನೆಗಳನ್ನು ಮಾಡಿದನು. ಪದುವ ವಿಶ್ವವಿದ್ಯಾನಿಲಯವು ಯುರೋಪಿನ ವೈಜ್ಞಾನಿಕ ರಾಜಧಾನಿಯಾಯಿತು.

ಖಗೋಳಶಾಸ್ತ್ರ : ಕ್ರಿ.ಶ. ೧೫೪೩ ನೆಯ ಇಸವಿಯು ಆಧುನಿಕ ಖಗೋಳ ಶಾಸ್ತ್ರದ ಅಧ್ಯಯನದಲ್ಲಿ ಬಹಳ ಮುಖ್ಯವಾದ ಕಾಲವೆನ್ನಬಹುದು. ಪೋಲ್ಯಾಂಡಿನ ಖಗೋಳ ಶಾಸ್ತ್ರಜ್ಞನಾದ **ನಿಕೋಲಾಸ್ ಕೊಪರ್ನಿಕಸ್**ನು (೧೪೭೩-೧೫೪೩) 'ಸಿಕ್ಸ್ ಬುಕ್ಸ್ ಕನ್ಸರ್‌ನಿಂಗ್ ದಿ ರಿವೊಲ್ಯೂಷನ್ಸ್ ಆಫ್ ದಿ ಹೆವನ್ಲಿ ಸ್ಫಿಯರ್ಸ್' ಎಂಬ ಪುಸ್ತಕಗಳನ್ನು ಪ್ರಕಟಿಸಿ ಖಗೋಳಶಾಸ್ತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದನು. ಗಣಿತಶಾಸ್ತ್ರ ಹಾಗೂ ಖಗೋಳಶಾಸ್ತ್ರಗಳ ಮೇಲಿನ ಇವನ ಕೃತಿಗಳು ಪ್ರಚಲಿತದಲ್ಲಿದ್ದ ಕೆಲವು ಸಿದ್ಧಾಂತಗಳನ್ನು ಬುಡಮೇಲು ಮಾಡಿದವು. **ಟಾಲೆಮಿ**ಯ ವಿಶ್ವವನ್ನು ಕುರಿತು ಇದ್ದ "ಭೂ ಕೇಂದ್ರಿತ" (ಜಿಯೋ- ಸೆಂಟ್ರಿಕ್) ಸಿದ್ಧಾಂತವನ್ನು ಅಲ್ಲಗಳೆದು, "ಸೂರ್ಯ ಕೇಂದ್ರಿತ" (ಹೀಲಿಯೋ-ಸೆಂಟ್ರಿಕ್) ಸಿದ್ಧಾಂತವನ್ನು ಜನಪ್ರಿಯಗೊಳಿಸಿತು. ಭೂಮಿ ಸೂರ್ಯನ ಸುತ್ತ ಸುತ್ತುತ್ತದೆಯೇ ಹೊರತು ಸೂರ್ಯ ಭೂಮಿಯ ಸುತ್ತ ಪ್ರದಕ್ಷಿಣೆ ಮಾಡುವುದಿಲ್ಲ ಎಂಬ ವೈಜ್ಞಾನಿಕ ಸತ್ಯವನ್ನು ಕೊಪರ್ನಿಕಸ್‌ನು ಬಯಲು ಮಾಡಿದಾಗ ಸಂಪ್ರದಾಯವಾದಿ ಚರ್ಚಿನ ಮೂಲ ನಂಬಿಕೆಗಳಿಗೆ ದೊಡ್ಡ ಪೆಟ್ಟು ಬಿದ್ದಿತು. ಈ ಹೊಸ ಸಿದ್ಧಾಂತವು ಭೂಮಿಯ ವಿಶಿಷ್ಟತೆಯನ್ನು ನಾಶ ಮಾಡಿ, ಅದು ಕೇವಲ ವಿಶ್ವದ ಇತರ ಬಾಹ್ಯಾಕಾಶ ವಸ್ತುಗಳಲ್ಲೊಂದು, ಅದು

ವಿಶ್ವದ ಕೇಂದ್ರವಲ್ಲ ಎಂದು ಪ್ರಮಾಣೀಕರಿಸಿತು. ಡೈನ್ಮಾರ್ಕಿನ ಖಗೋಳಶಾಸ್ತ್ರಜ್ಞ **ಟೈಕೋ ಬ್ರಾಹೀ** ಹಾಗೂ ಜರ್ಮನಿಯ **ಕೆಪ್ಲರ್**‌ಗಳು ಗ್ರಹಗಳು ಸೂರ್ಯನ ಸುತ್ತ ವೃತ್ತಾಕಾರದಲ್ಲಿ ಪ್ರದಕ್ಷಿಸದೆ ಅಂಡಾಕಾರದ (ಎಲಿಪ್ಟಿಕಲ್) ಪಥದಲ್ಲಿ ಚಲಿಸುತ್ತವೆ ಎಂದು ತೋರಿಸಿದರು. ಕೆಪ್ಲರನು ಕ್ರಿ.ಶ. ೧೬೦೯ ರಲ್ಲಿ **ಆನ್ ದ ಮೋಷನ್ ಆಫ್ ಮಾರ್ಸ್** ಎಂಬ ಪುಸ್ತಕವನ್ನು ಬರೆದನು.

ಇಟಲಿಯ ವಿಜ್ಞಾನಿ **ಗೆಲಿಲಿಯೋ ಗೆಲೀಲಿಯು** (೧೫೬೪-೧೬೪೨) ತಾನು ತಯಾರಿಸಿದ ದೂರದರ್ಶಕದ ಮೂಲಕ ಬಾಹ್ಯಾಕಾಶವನ್ನು ವೀಕ್ಷಿಸಿ ಅಧ್ಯಯನವನ್ನು ಮಾಡಿದನು. ಅವನು ತನ್ನ ಸಿದ್ಧಾಂತಗಳನ್ನು **ಡಯಲಾಗ್ಸ್ ಆಫ್ ದ ಟೂ ಚೀಫ್ ಸಿಸ್ಟಮ್ಸ್ ಆಫ್ ದ ವರ್ಲ್ಡ್** (೧೬೩೨) ಎಂಬ ಪುಸ್ತಕದಲ್ಲಿ ಪ್ರಕಟಿಸಿದನು. ಚರ್ಚ್ ಹಾಗೂ ಟಾಲೆಮಿಯ ಸಿದ್ಧಾಂತಗಳಿಗೆ ವಿರುದ್ಧವಾದ, ವೈಜ್ಞಾನಿಕ ಸತ್ಯಗಳನ್ನು ಬಯಲು ಮಾಡಿದ ಕಾರಣ ಗೆಲೀಲಿಯೋನು ಚರ್ಚ್‌ನ ವಿರೋಧವನ್ನು ಕಟ್ಟಿಕೊಂಡನು. ಅಲ್ಲದೆ ಚರ್ಚಿನ ವಾಗ್ದಂಡನೆಯನ್ನು ಎದುರಿಸಬೇಕಾಯಿತು. ತನ್ನ ಜೀವ ಉಳಿಸಿಕೊಳ್ಳಲು ತಾನು ದೃಢವಾಗಿ ನಂಬಿದ್ದ ಸಿದ್ಧಾಂತಗಳನ್ನು ಹಿಂತೆಗೆದುಕೊಳ್ಳಬೇಕಾಯಿತು.

ಇಂಗ್ಲೆಂಡಿನ **ಐಸ್ಯಾಕ್ ನ್ಯೂಟನ್ನನು** ಈ ಕಾಲದ ಮತ್ತೊಬ್ಬ ಪ್ರಸಿದ್ಧ ವಿಜ್ಞಾನಿ. ಗ್ರಹಗತಿಗಳನ್ನು ಕುರಿತು ಮೂಡಿದ್ದ ಹಲವಾರು ಸಮಸ್ಯೆಗಳನ್ನು ಇವನು ಪರಿಹರಿಸಿ ಆಧುನಿಕ ಭೌತಶಾಸ್ತ್ರಕ್ಕೆ ತಳಪಾಯ ಹಾಕಿದನು. ಕ್ರಿ.ಶ. ೧೬೮೭ ರಲ್ಲಿ **ದಿ ನ್ಯೂ ಮ್ಯಾಥಮ್ಯಾಟಿಕಲ್ ಪ್ರಿನ್ಸಿಪಲ್ಸ್ ಆಫ್ ನ್ಯಾಚುರಲ್ ಫಿಲೋಸೊಫಿ** ಎಂಬ ಕೃತಿಯನ್ನು ರಚಿಸಿದನು. ಅದರಲ್ಲಿ ವಿಶ್ವದ ಎಲ್ಲಾ ಗ್ರಹಗಳು ಹಾಗೆಯೆ ಇತರ ಕಣಗಳು ಪರಸ್ಪರ ಆಕರ್ಷಣೆಯ ಬಲದಿಂದ ಚಲಿಸುತ್ತವೆ ಎಂದು ವಾದಿಸಿದನು. ಇದೇ ನ್ಯೂಟನ್ನನ ಪ್ರಸಿದ್ಧ **ಗುರುತ್ವಾಕರ್ಷಣ ಸಿದ್ಧಾಂತವಾಗಿ** ಪ್ರಸಿದ್ಧಿ ಪಡೆಯಿತು.

ಕ್ಯಾಲೆಂಡರ್: ಖಗೋಳ ಅಧ್ಯಯನದ ಪರಿಣಾಮವಾಗಿ ಕ್ಯಾಲೆಂಡರ್‌ಗಳನ್ನು ರೂಪಿಸುವ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆಯಾಯಿತು. ಪೋಪನಾದ **೧೩ನೇ ಗ್ರೆಗರಿಯು** ೧೫೮೨ ರಲ್ಲಿ ಜೂಲಿಯನ್ ಕ್ಯಾಲೆಂಡರ್‌ನ್ನು ಸುಧಾರಿಸಿ, ಇಂದು ನಾವು ಒಪ್ಪಿಕೊಂಡ **ಗ್ರೆಗರಿಯನ್ ಕ್ಯಾಲೆಂಡರನ್ನು** ರೂಪಿಸಿದನು. ಖಗೋಳಶಾಸ್ತ್ರ, ಗಣಿತಶಾಸ್ತ್ರ, ನೌಕೆ ನಿರ್ಮಾಣ, ತಂತ್ರಜ್ಞಾನದಲ್ಲಿ ಅಭಿವೃದ್ಧಿ, ದಿಕ್ಸೂಚಿಯ ಕಂಡುಹಿಡಿಯುವಿಕೆ ಮುಂತಾದವು **ಕೊಲಂಬಸ್, ಮೆಗಲನ್** ಮತ್ತು **ಫ್ರಾನ್ಸಿಸ್ ಡ್ರೇಕ್**‌ನಂಥ ಸಾಹಸಿ ನಾವಿಕರ ಅನ್ವೇಷಣಾ ಕಾರ್ಯಗಳಿಗೆ ಸ್ಫೂರ್ತಿಯ ಸೆಲೆಯಾಯಿತು.

ರಾಜಕಾರಣ, ಸಮಾಜ ಮತ್ತು ಆರ್ಥಿಕ ಬದಲಾವಣೆಗಳು : ರಾಜಕೀಯವಾಗಿ ಕೆಲವು ಮುಖ್ಯ ಬೆಳವಣಿಗೆಗಳಾದವು. ಮಧ್ಯಕಾಲೀನ ಯುಗದ ಮುಖ್ಯ ಲಕ್ಷಣವಾಗಿದ್ದ ಊಳಿಗಮಾನ್ಯ ವ್ಯವಸ್ಥೆಯು ಕುಸಿಯಲು ಪ್ರಾರಂಭಿಸಿತು. ಇದರ ಪರಿಣಾಮವಾಗಿ ದರ್ಪಿಷ್ಟ ರಾಜ

ಪ್ರಭುತ್ವಗಳು ಏಳಿಗೆಗೆ ಬಂದವು. ಕೆಲವು ರಾಜರು ಅಧಿಕಾರಗಳನ್ನು ಕೇಂದ್ರಿಕರಿಸಿಕೊಂಡು ರಾಷ್ಟ್ರೀಯತೆಯ ಏಳಿಗೆಗೆ ಕಾರಣರಾದರು. ಈಗ ಸಾಮಾನ್ಯ ಮನುಷ್ಯನ ಧ್ವನಿ ಹೆಚ್ಚು ಸ್ಪಷ್ಟವಾಗಿ ಪರಿಣಾಮಕಾರಿಯಾಗಿ ಕೇಳತೊಡಗಿತು. ಜನರಲ್ಲಿ ಏಕತೆಯ ಭಾವನೆಯು ವೃದ್ಧಿಗೊಳ್ಳತೊಡಗಿತು.

ವ್ಯಾಪಾರ ಮತ್ತು ವಾಣಿಜ್ಯಗಳು ಹೆಚ್ಚು ಚೇತರಿಕೆಯನ್ನು ಪಡೆದವು. ಹೊಸ ಮಾರ್ಗಗಳ ಅನ್ವೇಷಣೆಯಾಗಿ ವ್ಯಾಪಾರಕ್ಕೆ ಪುನಶ್ಚೇತನವನ್ನು ಒದಗಿಸಿತು. ನಗರಗಳು ಹುಟ್ಟಿಕೊಂಡವು. ಮಧ್ಯಮ ವರ್ಗದ ಮುಖ್ಯವಾಗಿ ವ್ಯಾಪಾರಿ ವರ್ಗದ ಏಳಿಗೆಯೊಂದಿಗೆ ವರ್ಗಾಧಾರಿತ ಸಮಾಜವು ಸೃಷ್ಟಿಯಾಗಿ ಯುರೋಪಿನಲ್ಲಿ ಹೊಸ ಯುಗಕ್ಕೆ ನಾಂದಿಯಾಡಿತು. ಊಳಿಗಮಾನ್ಯ ಶಕ್ತಿಗಳಿಂದ ಸ್ಥಳೀಯ ಆಡಳಿತದ ಚುಕ್ಕಾಣಿಯು ಮಧ್ಯಮ ವರ್ಗದ ಕೈಗೆ ಹೋಯಿತು.

ಈ ರೀತಿ ಪುನರುಜ್ಜೀವನವು ಮಾನವ ಸಂಸ್ಕೃತಿಯ ಪ್ರಗತಿಯಲ್ಲಿ ವಿಶಿಷ್ಟವಾದ ಅಧ್ಯಾಯವಾಗಿದ್ದು ಪ್ರಪಂಚವನ್ನು ಆಧುನಿಕ ಯುಗದತ್ತ ಕೊಂಡೊಯಿತು.

೧.೩ ಧರ್ಮಸುಧಾರಣಾ ಚಳವಳಿ
(Reformation)

೧೬ನೆಯ ಶತಮಾನದಲ್ಲಿ ಕ್ರೈಸ್ತ ಪಂಥದಲ್ಲಿ ನಡೆದ ಕ್ರಾಂತಿಯನ್ನು **ರಿಫಾರ್‌ಮೇಷನ್** ಅಥವಾ **ಧರ್ಮಸುಧಾರಣೆ** ಎನ್ನುತ್ತಾರೆ. ಇದು ಪಶ್ಚಿಮಾತ್ಯ ಕ್ರೈಸ್ತ ಪ್ರಪಂಚದ ಮೇಲೆ ಪೋಪಿನ ಧಾರ್ಮಿಕ ಸಾರ್ವಭೌಮ ಅಧಿಕಾರಕ್ಕೆ ಅಂತ್ಯಹಾಡಿತು. ಅಂದರೆ ರೋಮನ್ ಚರ್ಚಿನ ದಬ್ಬಾಳಿಕೆಯ ವಿರುದ್ಧ ನಡೆದ ಧಾರ್ಮಿಕ ಕ್ರಾಂತಿಯನ್ನು **ಧರ್ಮ ಸುಧಾರಣಾ ಚಳವಳಿ** ಎಂದು ಕರೆಯಲಾಗಿದೆ. ಅಲ್ಲದೆ ಹೊಸ ಸಿದ್ಧಾಂತದ **ಪ್ರೊಟೆಸ್ಟೆಂಟ್ ಚರ್ಚು**ಗಳ ಸ್ಥಾಪನೆಗೆ ಎಡೆಮಾಡಿತು. ಪುನರುಜ್ಜೀವನ ಚಳವಳಿ ಹಾಗೂ ಫ್ರೆಂಚ್ ಕ್ರಾಂತಿಯ ನಡುವೆ ನಡೆದ ಈ ಸುಧಾರಣ ಚಳವಳಿಯು ಪಶ್ಚಿಮ ಯುರೋಪಿನಲ್ಲಿ ಮಧ್ಯಯುಗೀನ ಜೀವನ ಶೈಲಿಯನ್ನು ಸಂಪೂರ್ಣವಾಗಿ ಬದಲಾಯಿಸಿತು. ಅಲ್ಲದೆ 'ಆಧುನಿಕ ಇತಿಹಾಸದ ಯುಗ'ವನ್ನೆ ಆರಂಭಿಸಿತು. ೧೬ನೆಯ ಶತಮಾನದಲ್ಲಿ **ಮಾರ್ಟಿನ್ ಲೂಥರ್**ನಿಂದ ಈ ಸುಧಾರಣಾ ಕ್ರಾಂತಿ ಪ್ರಾರಂಭವಾದರೂ, ಅದಕ್ಕೆ ಪೂರಕವಾದ ಸನ್ನಿವೇಶ ಹಾಗೂ ಕಾರಣಗಳು ನೂರಾರು ವರ್ಷಗಳಿಂದಲೇ ಅಸ್ತಿತ್ವದಲ್ಲಿದ್ದವು.

ಕಾರಣಗಳು

ರೋಮಿನ ಚರ್ಚ್ ೧೬ನೆಯ ಶತಮಾನದ ವೇಳೆಗೆ ಯುರೋಪಿನ ಮೇಲೆ ಧಾರ್ಮಿಕ ಪ್ರಭುತ್ವವನ್ನು ಸಾಧಿಸಿತ್ತು. ಅದು ಯುರೋಪಿನ ಹೆಚ್ಚಿನ ರಾಷ್ಟ್ರಗಳ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಚಟುವಟಿಕೆಗಳ ಮೇಲೆ ಮಹತ್ತರ ಪರಿಣಾಮ ಬೀರಿತ್ತು. ಆದರೆ ಪೋಪ್ ಹಾಗೂ ಚರ್ಚ್‌ನ ಬಗ್ಗೆ ಜನರಲ್ಲಿ ಅಸಮಾಧಾನವಿತ್ತು. ಕಾರಣವೇನೆಂದರೆ ಪೋಪರ ಅಧಿಕಾರ ಹಾಗೂ ಅವರ ಕೈಕೆಳಗಿನ ಪುರೋಹಿತ ವರ್ಗಗಳ ದಬ್ಬಾಳಿಕೆಗಳಿಗೆ ಮಿತಿ ಇರಲಿಲ್ಲ. ಇದನ್ನು ವಿರೋಧಿಸುವ ಛಾತಿ, ಧೈರ್ಯ ಹಾಗೂ ಸೈದ್ಧಾಂತಿಕ ನೆಲೆಗಟ್ಟು, ಸಾಮಾನ್ಯ ಜನರಿಗಿರಲಿಲ್ಲ. ಚರ್ಚಿನ ನೀತಿಗಳನ್ನು, ಧರ್ಮ ವಿರೋಧಿ ಕ್ರಮಗಳನ್ನು, ಅಧಾರ್ಮಿಕ ಪದ್ಧತಿಗಳನ್ನು ಪ್ರಶ್ನಿಸಿದವರನ್ನು ಘೋರವಾಗಿ ಶಿಕ್ಷಿಸಲಾಗುತ್ತಿತ್ತು. ಜೀವಂತ ದಹನ, ಸಾಮಾಜಿಕ ಬಹಿಷ್ಕಾರ, ಜೈಲುವಾಸ ಇತ್ಯಾದಿಗಳನ್ನು ಚರ್ಚು ಅನುಸರಿಸುತ್ತಿತ್ತು.

೧೩ನೆಯ ಶತಮಾನದಿಂದ ರೋಮ್‌ನ ಕ್ಯಾಥೋಲಿಕ್ ಪೋಪರು ಧರ್ಮವನ್ನು ಹರಡುವಂಥ ಮುಖ್ಯ ಕಾಯಕಕ್ಕೆ ಕಡಿಮೆ ಮಹತ್ವವನ್ನು ನೀಡಿದರು. ಅಲ್ಲದೆ ಇವರು ಪ್ರಾಪಂಚಿಕ ಸುಖಭೋಗಗಳು ಹಾಗೂ ಇನ್ನಿತರ ಧಾರ್ಮಿಕೇತರ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದರು. ಮೇಲ್ವರ್ಗದ ಪುರೋಹಿತರು ಭ್ರಷ್ಟರಾಗಿ ಇವರ ಜೊತೆಗೆ ಅವರು ಸಹ ಪ್ರಾಪಂಚಿಕ ಜೀವನವೇ ಶ್ರೇಷ್ಠವೆಂದು ತಿಳಿದರು. ಈ ಬೆಳವಣಿಗೆಯನ್ನು ವೀಕ್ಷಿಸಿದ ಜನರಲ್ಲಿ ಚರ್ಚ್ ವಿರೋಧಿ ಭಾವನೆಗಳು ಹುಟ್ಟಿಕೊಳ್ಳತೊಡಗಿದವು.

ಪೋಪನ ಹಾಗೂ ಚರ್ಚಿನ ಅಧಿಕಾರ ರಾಷ್ಟ್ರಗಳ ಮೇರೆಗಳನ್ನು ಮೀರಿ ಎಲ್ಲೆಡೆ ಹರಡಿತ್ತು. ರಾಜರು, ಆಡಳಿತಗಾರರು ಕೂಡಾ ಚರ್ಚಿನ ಸೂಚನೆಗಳನ್ನು ಧಿಕ್ಕರಿಸುವಂತಿರಲಿಲ್ಲ. ಹೀಗೆ ಪೋಪರು ಯುರೋಪಿನ ರಾಜಕೀಯದ ಮೇಲೂ ಪ್ರಭುತ್ವ ಸಾಧಿಸಿದ್ದರು. ಅವರು ತಮ್ಮ ಇಚ್ಛೆಗನುಗುಣವಾಗಿ ವರ್ತಿಸುತ್ತಿದ್ದು, ಹಲವು ಬಾರಿ ರಾಜರ, ಆಡಳಿತಗಾರರ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತಿರಲಿಲ್ಲ. ಆದರೆ ರಾಷ್ಟ್ರೀಯತೆಯ ಅರಿವು ಉದಯವಾದಾಗ ಚರ್ಚಿನ ಪ್ರಭುತ್ವದ ವಿರುದ್ಧ ಅಸಮಾಧಾನದ ಹೊಗೆ ಮೇಲೇಳತೊಡಗಿತು.

ಚರ್ಚಿನ ಆಡಳಿತ ವೈಖರಿಯಿಂದ ರೈತಾಪಿ ವರ್ಗ, ಸಾಮಾನ್ಯ ಜನ ಹಾಗೂ ಇತರರು ನರಳುತ್ತಿದ್ದರು. ಇವರು ಪುರೋಹಿತ ವರ್ಗಕ್ಕೆ ಹಾಗೂ ಚರ್ಚಿಗೆ ನೀಡುತ್ತಿದ್ದ ತೆರಿಗೆ, ಸಲ್ಲಿಸುತ್ತಿದ್ದ ಊಳಿಗಮಾನ್ಯ ಸೇವೆಗಳು ಸಹಿಸಲಸಾಧ್ಯವಾಗಿತ್ತು. ಹೀಗಾಗಿ ಧಾರ್ಮಿಕ ವ್ಯವಸ್ಥೆಯಲ್ಲಿನ ಸುಧಾರಣೆಗಾಗಿ ಹಾತೊರೆಯುವಂತೆ ಆಯಿತು.

ಯುರೋಪಿನಲ್ಲಿ ಬೌದ್ಧಿಕ ವಾತಾವರಣವು ಉಸಿರುಗಟ್ಟುವಂತಾದ್ದಾಗಿತ್ತು. ನಾವೀನ್ಯತೆ, ಸೃಜನಶೀಲತೆ, ಉದ್ಯಮಶೀಲತೆಗಳಿಗೆ ಚರ್ಚು ಕಡಿವಾಣವನ್ನು ಹಾಕಿದ್ದರಿಂದ ಜನರು ಬೌದ್ಧಿಕವಾಗಿ ಬದಲಾವಣೆಯ ಗಾಳಿಗೆ ಹಾತೊರೆದರು.

ಬೆಳೆಯುತ್ತಿದ್ದ ರಾಷ್ಟ್ರೀಯವಾದಿ ಮನೋಸ್ಥಿತಿಯು ಪೋಪನ ಅಧಿಕಾರವನ್ನು ಧಾರ್ಮಿಕ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಿ ರಾಜಕೀಯವಾಗಿ ರಾಜರುಗಳ ಕೈ ಬಲಪಡಿಸಲು ಪ್ರಯತ್ನಿಸಿತು. ಊಳಿಗಮಾನ್ಯ ವ್ಯವಸ್ಥೆಯ ಕ್ಷೀಣಿಸುವಿಕೆ, ಭೌಗೋಳಿಕ ಅನ್ವೇಷಣೆಗಳು, ಪ್ರಾಚೀನ ಕಲೆ ಮತ್ತು ಸಾಹಿತ್ಯಗಳ ಅಧ್ಯಯನ ಮುಂತಾದವು ಯುರೋಪಿನಲ್ಲಿ ಜಾತ್ಯಾತೀತವಾದ ವಿಶಾಲ ದೃಷ್ಟಿಕೋನಗಳನ್ನು ಬೆಳೆಸಿ ಧರ್ಮ ಸುಧಾರಣಾ ಕ್ರಾಂತಿಗೆ ನಾಂದಿ ಹಾಡಿದವು.

ಇನ್ನೊಂದು ಕಾರಣವೂ ಮಹತ್ವದ್ದಾಗಿತ್ತು. ಚರ್ಚಿನ ಒಡೆತನದಲ್ಲಿ ಅಪರಿಮಿತ ಭೂಮಿ ಇದ್ದುದರಿಂದ ಅಪಾರವಾದ ವರಮಾನ (ಕಂದಾಯ)ವು ದೊರೆಯುತ್ತಿತ್ತು. ಈ ವರಮಾನವು ರಾಷ್ಟ್ರೀಯ ಬೊಕ್ಕಸಕ್ಕೆ ಸೇರದೆ ರಾಷ್ಟ್ರಗಳು ಬಹಳ ನಷ್ಟವನ್ನು ಅನುಭವಿಸುತ್ತಿದ್ದವು. ಇದರಿಂದ ರಾಷ್ಟ್ರೀಯ ಅಭಿವೃದ್ಧಿಗೆ ಹಣ ದೊರೆಯುತ್ತಿರಲಿಲ್ಲ. ಚರ್ಚಿನ ಧಾರ್ಮಿಕ ಹಿಡಿತದಿಂದ ರಾಷ್ಟ್ರಗಳು ಬಿಡುಗಡೆ ಹೊಂದಿದರೆ ಮಾತ್ರ ಈ ವರಮಾನ ಅವುಗಳಿಗೆ ದೊರೆಯುವ ಸಾಧ್ಯತೆಯಿತ್ತು.

ಸುಧಾರಣಾ ಚಳವಳಿಯ ಪೂರ್ವದಲ್ಲಿದ್ದ ಧಾರ್ಮಿಕ ಪರಿಸ್ಥಿತಿ

ಕ್ರಿ.ಶ. ೯೬೨ ರಲ್ಲಿ ದೊರೆ ಮೊದಲನೆ ಒಟ್ಟೋನು ಪವಿತ್ರ ರೋಮ್ ಸಾಮ್ರಾಜ್ಯಕ್ಕೆ ಮರುಜೀವ ಕೊಟ್ಟನು. ಪವಿತ್ರ ರೋಮ್ ಸಾಮ್ರಾಜ್ಯವು ಹೆಚ್ಚಾಗಿ ಜರ್ಮನಿಯ ರಾಜ್ಯಗಳನ್ನು ಹೊಂದಿತ್ತು. ಪೋಪ್ ಹಾಗೂ ರಾಜರುಗಳ ನಡುವೆ ಸಾಮ್ರಾಜ್ಯದ ಮೇಲೆ ಸಾರ್ವಭೌಮತ್ವಕ್ಕಾಗಿ ನಿರಂತರ ಸ್ಪರ್ಧೆ ಪ್ರಾರಂಭವಾಯಿತು. ಹೆಚ್ಚಿನ ಸಂದರ್ಭಗಳಲ್ಲಿ ಪೋಪನು ವಿಜಯಿಯಾಗುತ್ತಿದ್ದನು. ಇದರಿಂದಾಗಿ ರೋಮ್ ಹಾಗೂ ಜರ್ಮನ್ ಸಾಮ್ರಾಜ್ಯದ ನಡುವೆ ವೈರತ್ವ ಮೂಡಿತು. ಈ ವೈರತ್ವವು ೧೧ ಮತ್ತು ೧೨ನೆಯ ಶತಮಾನಗಳಲ್ಲಿ ಜರ್ಮನ್

ರಾಷ್ಟ್ರೀಯತೆಯ ಭಾವನೆಗಳು ಅಭಿವೃದ್ಧಿಗೊಂಡಂತೆ ಹೆಚ್ಚುತ್ತಾ ಹೋಯಿತು. ದೂರದ ವಿದೇಶಿ ಪೋಪ್ ಹಾಗೂ ಅವನ ಧಾರ್ಮಿಕ ಅಧಿಕಾರಿಗಳಿಗೆ ತಲೆಬಾಗುವುದರ ವಿರುದ್ಧ ಮತ್ತು ಪೋಪನ ತೆರಿಗೆ ವಿರುದ್ಧ ತೀವ್ರ ಪ್ರತಿರೋಧವು ವ್ಯಕ್ತವಾಗತೊಡಗಿತು. ಇಂಗ್ಲೆಂಡಿನಲ್ಲಿ ಪೋಪನ ಅಧಿಕಾರದಿಂದ ಹೊರಬರಲು ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು.

೧೪ನೆಯ ಶತಮಾನದಲ್ಲಿ ಇಂಗ್ಲೆಂಡಿನ ಸುಧಾರಣಾವಾದಿ **ಜಾನ್ ವೈಕ್ಲಿಫನು** ಬಹಳ ಧೈರ್ಯದಿಂದ ಪೋಪಿನ ಅಧಿಕಾರವನ್ನು ಖಂಡಿಸಿದನು. ಇವನು **ಕ್ಷಮಾಪಣಾ ಪತ್ರಗಳ** ಮಾರಾಟ, ಧಾರ್ಮಿಕ ಯಾತ್ರೆಗಳು ಮೀತಿಮೀರಿದ ರೀತಿಯಲ್ಲಿ ಸಂತರುಗಳ ಆರಾಧನೆ, ಅಲ್ಲದೆ ಪುರೋಹಿತರ ನೈತಿಕ ಹಾಗೂ ಬೌದ್ಧಿಕ ಅಧಃಪತನವನ್ನು ತೀವ್ರವಾಗಿ ಟೀಕಿಸಿದನು. ಬೈಬಲನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿ ಜನಪ್ರಿಯಗೊಳಿಸಿದನು. ಇವನ ತತ್ವಗಳು ಬೊಹೇಮಿಯದ ಧರ್ಮ ಸುಧಾರಕ **ಜ್ಯಾನ್ ಹಸ್‌ನ** ಮೇಲೆ ಬಹಳ ಪರಿಣಾಮ ಬೀರಿತು. ಆದರೆ ಹಸ್‌ನ ಬೋಧನೆಗಳನ್ನು **ರೋಮನ್ ಕ್ಯಾಥೋಲಿಕ್ ಚರ್ಚ್** ಒಪ್ಪಿಕೊಳ್ಳದೆ ಅವನನ್ನು 'ಧರ್ಮಭ್ರಷ್ಟ'ನೆಂದು ಘೋಷಿಸಿ ೧೪೧೫ ರಲ್ಲಿ ಜೀವಂತವಾಗಿ ಸುಟ್ಟು ಹಾಕಿತು. ಈ ಬೆಳವಣಿಗೆಯು ಪೋಪ್ ವಿರೋಧಿ ಹಾಗೂ ರಾಷ್ಟ್ರೀಯ ಭಾವನೆಗಳ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿತು.

ಕೆಲವು ರಾಷ್ಟ್ರಗಳ ರಾಜರುಗಳ ಪೋಪ್‌ನೊಡನೆ 'ಕನ್‌ಕಾರ್‌ಡಾಟ್' ಎಂಬ ಒಪ್ಪಂದವನ್ನು ಮಾಡಿಕೊಂಡು ತಮ್ಮ ರಾಷ್ಟ್ರಗಳ ಚರ್ಚನ್ನು ತಮ್ಮ ಹತೋಟಿಯಲ್ಲಿಯೇ ಇಟ್ಟುಕೊಂಡರು. ಇದರಿಂದ ಸ್ವಾಯತ್ತತೆ ಹೊಂದಿದ ರಾಷ್ಟ್ರೀಯ ಚರ್ಚುಗಳ ಬೆಳವಣಿಗೆಗೆ ಅವಕಾಶವಾಯಿತು.

೧೫ನೆಯ ಶತಮಾನದಿಂದ ದುರಾಸೆ, ಅನೈತಿಕತೆ ಹಾಗೂ ಅಜ್ಞಾನಗಳ ಕಾರಣಗಳಿಂದ ನಿರಂತರ ದಾಳಿಗೊಳಗಾದ ಚರ್ಚ್ ಕೆಲವು ಬಾರಿ ಸುಧಾರಣೆಗಳನ್ನು ತರಲು ಪ್ರಯತ್ನಿಸಿದ್ದೂ ಇದೆ. ಉದಾಹರಣೆಗೆ 'ಕೌನ್ಸಿಲ್ ಆಫ್ ಕಾನ್‌ಸ್ಟಾಂಸ್'ನಲ್ಲಿ ಸುಧಾರಣೆಗಳನ್ನು ತರುವ ದಿಕ್ಕಿನಲ್ಲಿ ಸುದೀರ್ಘ ಚರ್ಚೆಯಾಯಿತು.

ಮಾನವತಾವಾದವು ಪ್ರಾಚೀನ ಸಂಸ್ಕೃತಿಯ ಮರು ಅಧ್ಯಯನವಷ್ಟೇ ಅಲ್ಲದೆ ಪ್ರಶ್ನಿಸುವ ಮನೋಭಾವ ಮತ್ತು ವೈಜ್ಞಾನಿಕ ಚಿಂತನೆಯ ಉದಯ ಹಾಗೂ ಧರ್ಮದ ಬಗ್ಗೆ ಇದ್ದ ಅಂಧಶ್ರದ್ಧೆಯನ್ನು ಪ್ರಶ್ನಿಸಿತು. ಅಲ್ಲದೆ ಚರ್ಚಿಗೆ ಶಿಕ್ಷಣ ವ್ಯವಸ್ಥೆಯ ಮೇಲಿದ್ದ ಏಕಸ್ವಾಮತ್ಯೆಯನ್ನು ದುರ್ಬಲಗೊಳಿಸಿತು. **ಲೊರೊಂಜೊವಲ್ಲನು** ಬೈಬಲಿನ ಕೆಲವು ಅನುವಾದಗಳನ್ನು ಟೀಕಾತ್ಮಕ ವಿಮರ್ಶೆಗೆ ಒಳಪಡಿಸಿದ್ದ. ಮುದ್ರಣ ಕಲೆಯ ಶೋಧನೆ, ಆ ಮೂಲಕ ಜ್ಞಾನದ ಪ್ರಸರಣ ಕೂಡಾ ಸುಧಾರಣಾ ಚಳವಳಿಗೆ ಅಡಿಗಲ್ಲನ್ನು ಹಾಕಿದ್ದವು.

ಇಟಲಿಯ ಹೊರಗಿನ ಮಾನವತಾವಾದಿಗಳಾದ ಹಾಲೆಂಡಿನ **ಇರಾಸ್ಮಾಸ್**, ಇಂಗ್ಲೆಂಡಿನ **ಜಾನ್ ಕೋಲೆಟ್** ಮತ್ತು **ಥೋಮಸ್ ಮೋರ್**, ಜರ್ಮನಿಯ **ಜೊಹಾನ್ ರೀಚ್ಲಿನ್** ಮುಂತಾದವರು ಚರ್ಚಿನ ಪದ್ಧತಿಗಳನ್ನು ಮರುವಿಮರ್ಶಿಸಿ ಸುಧಾರಣೆಗಳಿಗೆ ಇಂಬು

ನೀಡಿದರು. ಇವರ ಪಾಂಡಿತ್ಯ ಪೂರ್ಣ ಅಧ್ಯಯನಗಳನ್ನು ಆಧರಿಸಿ **ಮಾರ್ಟಿನ್ ಲೂಥರ್, ಜಾನ್ ಕಾಲ್ವಿನ್** ಮತ್ತು ಇತರ ಸುಧಾರಣಾವಾದಿಗಳು 'ಬೈಬಲ್ಲೇ ನಿಜವಾದ ಧರ್ಮದ ಮೂಲ, ಚರ್ಚ್ ಅಲ್ಲ' ಎಂದು ವಾದಿಸಿದರು.

ಜರ್ಮನಿಯಲ್ಲಿ ಧಾರ್ಮಿಕ ಸುಧಾರಣಾ ಕ್ರಾಂತಿ: ಮಾರ್ಟಿನ್ ಲೂಥರ್

ಮಾರ್ಟಿನ್ ಲೂಥರ್‌ನು ೧೫೧೭ ರಲ್ಲಿ ಜರ್ಮನಿಯಲ್ಲಿ ೯೫ ಅಂಶಗಳನ್ನು ಪ್ರಕಟಿಸಿದಾಗ **ಪ್ರೊಟೆಸ್ಟೆಂಟ್ ಕ್ರಾಂತಿ** ಪ್ರಾರಂಭವಾಯಿತು. 'ಪ್ರೊಟೆಸ್ಟೆಂಟ್' ಎಂಬ ಪದವನ್ನು ಮಾರ್ಟಿನ್ ಲೂಥರನ ನಾಯಕತ್ವದ ಪ್ರತ್ಯೇಕತಾವಾದಿಗಳಿಗಾಗಿ ಬಳಸಲಾಯಿತು. ಚರ್ಚಿನಿಂದ ಅಧಿಕಾರ ದುರುಪಯೋಗವಾಗುತ್ತಿದ್ದುದರ ವಿರುದ್ಧ ಅವರು ಪ್ರತಿಭಟನೆಯನ್ನು ಮಾಡಿದ ಕಾರಣ ಈ ಹೆಸರನ್ನು ಬಳಸಲಾಯಿತು. ಇವರೆಲ್ಲರೂ (ಪ್ರೊಟೆಸ್ಟೆಂಟರು) ಅಂತಿಮವಾಗಿ ಪೋಪ್‌ನ ಅಧಿಕಾರವನ್ನು ತಿರಸ್ಕರಿಸಿದರು. ಪ್ರೊಟೆಸ್ಟೆಂಟ್ ಪಂಥವು ೧೬ನೆ ಶತಮಾನದಲ್ಲಿ ಹಲವು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿತು. ಉದಾಹರಣೆಗೆ **ಲೂಥರಿಸಂ, ಕ್ಯಾಲ್ವಿನಿಸಂ, ಆ್ಯಂಗ್ಲಿಕ್ಯಾನಿಸಂ** ಮುಂತಾದವು.

ಮಾರ್ಟಿನ್ ಲೂಥರನು ಜರ್ಮನಿಯಲ್ಲಿ ೧೪೮೩ ರಲ್ಲಿ ರೈತ ಕುಟುಂಬವೊಂದರಲ್ಲಿ ಜನಿಸಿದನು. ಅವನು ಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ವರ್‌ಪರ್ಟ್ ವಿಶ್ವವಿದ್ಯಾನಿಲಯಕ್ಕೆ ಕಾನೂನು ಪದವಿಗಾಗಿ ತನ್ನ ತಂದೆಯಿಂದ ಕಳುಹಿಸಲ್ಪಟ್ಟನು. ಆದರೆ ಲೂಥರನು ಕಾನೂನು ಅಧ್ಯಯನವನ್ನೇ ಪ್ರಾರಂಭಿಸಲಾಗಲಿಲ್ಲ. ಅದರ ಬದಲು ಸಂತ ಅಗಸ್ಟಿನ್‌ನ ಪಾದ್ರಿಗಳ ಸಂಘವನ್ನು ಸೇರಿ ವಿಟೇನ್‌ಬರ್ಗ್ ಆಶ್ರಮದಲ್ಲಿ ಪಾದ್ರಿಯಾದನು. ಇದರಿಂದ ಇವನ ಕುಟುಂಬಕ್ಕೆ ದಿಗ್ಭ್ರಮೆ ಹಾಗೂ ನಿರಾಸೆ ಉಂಟಾಯಿತು. ಇಲ್ಲಿ ಅವನು ಧರ್ಮಶಾಸ್ತ್ರದಲ್ಲಿ ೧೫೧೨ ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದನು. ಅವನು ರೋಮಿಗೆ ಭೇಟಿ ಕೊಟ್ಟಾಗ ಚರ್ಚಿನಲ್ಲಿರುವ ಭ್ರಷ್ಟಾಚಾರವನ್ನು ಕಣ್ಣಾರೆ ಕಂಡನು. ತನ್ನ ಸ್ವಂತ ಧಾರ್ಮಿಕ ಅನುಭವದಿಂದ ಅವನಲ್ಲಿ ಒಂದು ನಂಬಿಕೆ ಬಲವಾಗಿತ್ತು. ಅದೇನೆಂದರೆ ಮೋಕ್ಷಕ್ಕೆ ದಾರಿ ಧಾರ್ಮಿಕ ಪದ್ಧತಿಗಳಲ್ಲಾಗಲೀ ಅಥವಾ ಚರ್ಚ್ ಹೇಳುವ 'ಒಳ್ಳೆಯ ಕೆಲಸಗಳಲ್ಲಾಗಲೀ' ಇಲ್ಲ. ಅದನ್ನು ಪರಿಶುದ್ಧತೆ, ಸರಳತೆಯಲ್ಲಿ ಹಾಗೂ ದೇವರ ಅನುಗ್ರಹದಲ್ಲಿರುವ ನಂಬಿಕೆಯಿಂದ ಮಾತ್ರ ಗಳಿಸಬಹುದು ಎಂಬುದು. ಈ ಅಭಿಪ್ರಾಯವು ಕ್ಯಾಥೋಲಿಕ್ ಪುರೋಹಿತ ವ್ಯವಸ್ಥೆಯ ಬುಡಕ್ಕೆ ಕೊಡಲಿ ಪೆಟ್ಟನ್ನಿಟ್ಟಿತು. ಅಲ್ಲದೆ ಮಾರ್ಟಿನ್ ಲೂಥರನು ಕ್ಷಮಾಪಣಾ ಪತ್ರಗಳ ಮಾರಾಟವನ್ನು ಖಂಡಿಸಿದನು. ಕ್ಷಮಾಪಣಾ ಪತ್ರದ ಮಹತ್ವವು ಒಂದು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿಂತಿತ್ತು. ಮಾನವನು ಭೂಮಿಯಲ್ಲಿದ್ದಾಗ ಹಲವಾರು ಪಾಪಕೃತ್ಯಗಳನ್ನು ಮಾಡುತ್ತಾನೆ. ಹಾಗಾಗಿ ಅವನು ಸತ್ತ ನಂತರ ಅವನ ಆತ್ಮವು ದೇವರು ನೀಡುವ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಈ ಶಿಕ್ಷೆಯಿಂದ ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಆದರೆ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬಹುದು. ಅದು ಹೇಗೆಂದರೆ ಚರ್ಚ್ ಮಾರಾಟ ಮಾಡುವ ಕ್ಷಮಾಪಣಾ ಪತ್ರಗಳನ್ನು ಕ್ರಯಕ್ಕೆ

ಕೊಳ್ಳುವುದರಿಂದ. ಆದುದರಿಂದ ಕ್ಷಮಾಪಣಾ ಪತ್ರ (ಇಂಡಲಿಜೆನ್ಸ್) ಎಂದರೆ ಅದು 'ಸಾವಿನ ನಂತರ ಅನುಭವಿಸಬೇಕಾದ ಶಿಕ್ಷೆಯ ಒಂದು ಭಾಗವನ್ನು ಕಡಿಮೆ ಮಾಡುವ ಕಾಗದ ಪತ್ರ'. ದುಡ್ಡು ಕೊಡುವುದರ ಮೂಲಕ ಪಾಪ ಮಾಡಿದವನು ತನ್ನ ತಪ್ಪುಗಳಿಗೆ ಪ್ರಾಯಶ್ಚಿತ್ತವನ್ನು ಕ್ರಯಕ್ಕೆ ಕೊಳ್ಳಬಹುದಿತ್ತು. ಈ ದಂಧೆಯಿಂದ ಚರ್ಚಿಗೆ ಅಪಾರ ಆದಾಯ ಬರುತ್ತಿತ್ತು.

ಮಾರ್ಟಿನ್ ಲೂಥರನು 'ಕ್ಷಮಾಪಣಾ ಪತ್ರ'ದಂಥ ಒಂದು ಕಾಗದ ತುಂಡು ಮನುಷ್ಯನಿಗೆ ಮೋಕ್ಷವನ್ನು ತಂದು ಕೊಡುವುದಿಲ್ಲ. ಮೋಕ್ಷ ದೊರೆಯುವುದು ಹೃದಯದಾಳದ ಪ್ರಾಯಶ್ಚಿತ್ತದಿಂದ ಹಾಗೂ ದೇವರ ಮೇಲಿನ ನಂಬಿಕೆಯಿಂದ ಮಾತ್ರ ಎಂಬ ತತ್ವವನ್ನು ಪ್ರಚುರಪಡಿಸಿದ. ತನ್ನ ವಿಚಾರಗಳನ್ನು ೯೫ ಅಂಶಗಳ ರೂಪದಲ್ಲಿ ಮಾರ್ಟಿನ್ ಲೂಥರನು ಹೊರತಂದನು. ಅಲ್ಲದೆ ಇವುಗಳ ಕುರಿತು ತಾನು ಸಾರ್ವಜನಿಕ ಚರ್ಚೆಗೂ ಸಿದ್ಧವೆಂದನು. ೧೫೧೭ ರ ಅಕ್ಟೋಬರ್ ೩೧ ರಂದು ವಿಟೆನ್ ಬರ್ಗ್ ಚರ್ಚಿನ ಬಾಗಿಲ ಮೇಲೆ ಈ ಪತ್ರವನ್ನು ಅಂಟಿಸಿದನು. ಹಾಗೂ ಅದನ್ನು ಪ್ರಕಟಿಸಿ ಪಟ್ಟಣಗಳಲ್ಲಿ ಹಂಚಿಸಿದನು. ಲೂಥರನ ವಿಚಾರಗಳಿಗೆ ಹಾಗೂ ನಿಲುವುಗಳಿಗೆ ಅಮೋಘವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾಮಾನ್ಯ ಜನರು, ರೈತಾಪಿ ವರ್ಗದವರು, ಶ್ರೀಮಂತ ವ್ಯಾಪಾರಿಗಳು, ಕೆಲವು ರಾಜಕುಮಾರರು, ಇನ್ನಿತರರು, ಅವನ ದೃಷ್ಟಿಕೋನವನ್ನು ಬೆಂಬಲಿಸಿದರು. ಸಿಟ್ಟುಗೊಂಡ ಕ್ಯಾಥೋಲಿಕ್ ಪೋಪನು ಲೂಥರನಿಗೆ ಸಾಮಾಜಿಕ ಬಹಿಷ್ಕಾರ ಹೇರಿ ಆದೇಶ ಹೊರಡಿಸಿದನು. ಆದರೆ ಲೂಥರನು ಆ ಆದೇಶವನ್ನು ಬಹಿರಂಗವಾಗಿ ಸುಟ್ಟು ಹಾಕಿ ತನ್ನ ಪ್ರತಿಭಟನಾ ಕಾರ್ಯವನ್ನು ಮುಂದುವರಿಸಿದನು. ಧರ್ಮನಿಂದೆಯ ಆರೋಪದಿಂದ ಜೀವ ಬೆದರಿಕೆಯನ್ನು ಎದುರಿಸಿದ ಮಾರ್ಟಿನ್ ಲೂಥರ್‌ನಿಗೆ ಸ್ಯಾಕ್ಸನಿಯ (ಜರ್ಮನಿಯ ೩೦೦ ರಾಜ್ಯಗಳಲ್ಲೊಂದು) ಆಡಳಿತ ಗಾರನು ರಕ್ಷಣೆಯನ್ನು ಒದಗಿಸಿದ. ಮಾನವತಾವಾದಿಗಳೂ ಹಾಗೂ ಜರ್ಮನಿಯ ಅನೇಕ ರಾಜಕೀಯ ನಾಯಕರು ಅವನಿಗೆ ಬೆಂಬಲವನ್ನು ನೀಡಿದರು.

ಲೂಥರನು ವಿದೇಶಿ ಪೋಪನ ಅಧಿಕಾರದ ಹೇರಿಕೆಯ ವಿರುದ್ಧ ಜರ್ಮನಿಯಲ್ಲಿ ರಾಷ್ಟ್ರೀಯ ಭಾವನೆಯನ್ನು ಬಡಿದೆಬ್ಬಿಸಿದನು. ರಾಜಕೀಯ ವಿಷಯಗಳಲ್ಲಿ ರಾಜ್ಯದ ಹಾಗೂ ನಾಗರಿಕ ಸರಕಾರದ ಅಧಿಕಾರವು ಚರ್ಚಿನ ಅಧಿಕಾರಕ್ಕಿಂತ ಹಿರಿದಾದುದು ಎಂದು ವಾದಿಸಿದನು. ಪುರೋಹಿತ ವರ್ಗವು ಒಂದು "ಅನಾವಶ್ಯಕ ಪೀಡೆ" ಎಂದು ಬಣ್ಣಿಸಿ ಅವರ ಮಹತ್ವವನ್ನು ಅಲ್ಲಗಳೆದನು. ಪ್ರತಿಯೊಬ್ಬರೂ ದೇವರ ವಾಕ್ಯವನ್ನು ತಾವೇ ವಿಶ್ಲೇಷಿಸಿಕೊಂಡು ಅದರಂತೆ ನಡೆಯಬೇಕು; ಪಾದ್ರಿಗಳ ಏಕಸ್ವಾಮ್ಯಕ್ಕೆ ಅದನ್ನು ಬಿಡಬಾರದೆಂದನು. ಸ್ವತಃ ಅವನೇ ಬೈಬಲ್ಲನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿದನು.

ಜರ್ಮನಿಯು ಇದರಿಂದ ಧಾರ್ಮಿಕ ಹಾಗೂ ಆರ್ಥಿಕ ಅಂಶಗಳ ಮೇಲೆ ವಿಭಜನೆ ಗೊಂಡಿತು. ಪವಿತ್ರ ರೋಮ್ ಸಾಮ್ರಾಟ, ಹಲವು ರಾಜರುಗಳು, ಮೇಲ್ವರ್ಜೆಯ ಪುರೋಹಿತ ವರ್ಗ ಮುಂತಾದವರು ರೋಮನ್ ಕ್ಯಾಥೋಲಿಕ್ ಸಮಾಜದ ಹಳೆಯ ಸಂಪ್ರದಾಯ

ವ್ಯವಸ್ಥೆಗೆ ಬೆಂಬಲ ನೀಡಿದರೆ, ಉತ್ತರ ಜರ್ಮನಿಯ ರಾಜರು, ಕೆಳದರ್ಜೆಯ ಪುರೋಹಿತ ವರ್ಗ, ವ್ಯಾಪಾರಿ ವರ್ಗ, ಹೆಚ್ಚಿನ ರೈತಾಪಿ ಜನಾಂಗ, ಲೂಥರನ ಪಂಥಕ್ಕೆ ಬೆಂಬಲ ನೀಡಿದರು. ರೈತರಿಗೆ ಲೂಥರಿನ ಪಂಥವು, ಕ್ಯಾಥೋಲಿಕ್ ಚರ್ಚಿನ ದುಷ್ಟ ತೆರಿಗೆ ಪದ್ಧತಿ ಮತ್ತು ಊಳಿಗಮಾನ್ಯ ಬವಣೆಗಳಿಂದ ಬಿಡುಗಡೆಗೊಳಿಸಿತು. ಕ್ರಿ.ಶ. ೧೫೨೪ ರಲ್ಲಿ ರೈತರು ಯುದ್ಧವನ್ನು ಪ್ರಾರಂಭಿಸಿದಾಗ ಕ್ಯಾಥೋಲಿಕ್ ಹಾಗೂ ಲೂಥರನ ಪಂಥಗಳ ನಡುವೆ ಬಹಿರಂಗ ಯುದ್ಧ ಪ್ರಾರಂಭವಾಯಿತು. ಲೂಥರನು ಆರಂಭದ ಹಂತದಲ್ಲಿ ರೈತರಿಗೆ ಬೆಂಬಲ ಘೋಷಿಸಿದರೂ, ಅಂತಿಮವಾಗಿ ಬೆಂಬಲವನ್ನು ಹಿಂತೆಗೆದುಕೊಂಡನು. ಅರ್ಥ ವ್ಯವಸ್ಥೆಯ ಮೇಲೆ ರೈತಾಪಿ ಯುದ್ಧಗಳಿಂದಾಗುವ ಪರಿಣಾಮಗಳಿಗೆ ಹೆದರಿ ಅವನು ಈ ರೀತಿ ನಡೆದುಕೊಂಡನು. ಎರಡೂ ಪಂಥಗಳ ನಡುವೆ ಸಹಮತ ಮತ್ತು ಒಪ್ಪಂದವನ್ನು ಏರ್ಪಡಿಸುವ ಪ್ರಯತ್ನವು **ಡಯಟ್ ಆಫ್ ಸ್ಪೈಯರ್**‌ನಲ್ಲಿ ಕ್ರಿ.ಶ. ೧೫೨೯ ರಲ್ಲಿ ನಡೆಯಿತು. ಆದರೆ ಅದು ಯಶಸ್ವಿ ಆಗದೆ, ೧೫೨೯ ರಲ್ಲಿ ಲೂಥರನ ಪಂಥಕ್ಕೆ ಸೇರಿದವರು **ಪ್ರೊಟೆಸ್ಟಾಂಟ**ರೆಂದು ಕರೆಯಲ್ಪಟ್ಟರು. ಈ ರೀತಿ ಕ್ಯಾಥೋಲಿಕ್ ಧರ್ಮಕ್ಕಿಂತ ಭಿನ್ನವಾದ ಪಂಥವೊಂದು ಯುರೋಪಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಪವಿತ್ರ ರೋಮ್ ಸಾಮ್ರಾಜ್ಯದ ಅಧಿಪತಿ ೫ನೇ ಚಾರ್ಲ್ಸ್‌ನು ಕೂಡಾ ಯುದ್ಧದ ಮೂಲಕ ಪ್ರೊಟೆಸ್ಟಾಂಟರನ್ನು ಧ್ವಂಸಗೊಳಿಸಲು ಪ್ರಯತ್ನಿಸಿ ವಿಫಲನಾದನು. ಕ್ರಿ.ಶ. ೧೫೫೫ ರಲ್ಲಿ **ಆಗ್ಸ್‌ಬರ್ಗ್ ಶಾಂತಿ ಒಪ್ಪಂದ** ಏರ್ಪಟ್ಟಿತು. ಇದರ ಪ್ರಕಾರ ಜರ್ಮನಿಯ ರಾಜರುಗಳು ತಮಗೆ ಬೇಕಾದ ಪಂಥವನ್ನು ಆಯ್ಕೆ ಮಾಡಿಕೊಂಡು, ತಮ್ಮ ರಾಜ್ಯದಲ್ಲಿ ಜನಪ್ರಿಯಗೊಳಿಸುವ ಹಕ್ಕನ್ನು ಪಡೆದರು. ಹೀಗೆ ಪ್ರೊಟೆಸ್ಟಾಂಟ್ ಪಂಥಕ್ಕೆ ಅಧಿಕೃತ ಮನ್ನಣೆ ದೊರೆಯಿತು. ಧಾರ್ಮಿಕ ಸುಧಾರಣಾ ಕ್ರಾಂತಿಯಿಂದಾಗಿ ಪಶ್ಚಿಮ ಯುರೋಪಿನಲ್ಲಿ ಪುರಾತನ ಕಾಲದಿಂದಿದ್ದ ಕ್ರೈಸ್ತ ಮತದ ಧಾರ್ಮಿಕ ಏಕತೆಯು ಒಡೆದು ನುಚ್ಚುನೂರಾಯಿತು.

ಯುರೋಪಿನ ಇತರೆಡೆ ಕ್ರಾಂತಿ

ಧರ್ಮ ಸುಧಾರಣಾ ಕ್ರಾಂತಿ ಲೂಥರನಿಗೆ ಹಾಗೂ ಜರ್ಮನಿಗೆ ಮಾತ್ರ ಸೀಮಿತವಾಗಿರದೆ ಇತರ ಕಡೆಗಳಿಗೂ ಹರಡಿತು. **ಉಲ್ರಿಚ್ ಜ್ವಿಂಗ್ಲಿ** ಮತ್ತು **ಜೀನ್ ಕ್ಯಾಲ್ವಿನ್**‌ನ್ನರ ನೇತೃತ್ವದಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಪ್ರೊಟೆಸ್ಟಾಂಟ್ ಚಳವಳಿಯು ಜನಪ್ರಿಯಗೊಂಡಿತು. ಕ್ಯಾಲ್ವಿನ್‌ನ್ನು ಪ್ರೊಟೆಸ್ಟಾಂಟ್ ಮಿಶನರಿಗಳ ತರಬೇತಿಗಾಗಿ ಒಂದು ಸಂಸ್ಥೆಯನ್ನು ಪ್ರಾರಂಭಿಸಿದನು. ಅಲ್ಲದೆ ಪ್ರೊಟೆಸ್ಟಾಂಟ್ ಸಿದ್ಧಾಂತಕ್ಕೆ ಹೆಚ್ಚು ನಿಖರವಾದ ಹಾಗೂ ತರ್ಕಬದ್ಧವಾದ ವಿಶ್ಲೇಷಣೆಗಳನ್ನು ನೀಡಿ ಜನಪ್ರಿಯಗೊಳಿಸಿದನು. ಇವರ ವಿಚಾರಧಾರೆಯು **ಕ್ಯಾಲ್ವಿನಿಸಂ** ಎಂದು ಜನಪ್ರಿಯವಾಯಿತು. ಕಟ್ಟುನಿಟ್ಟಿನ ಸರಳತೆ ಹಾಗೂ ನಿರಂತರ ಚಟುವಟಿಕೆಗಳಿಗೆ ಹೆಸರಾದ ಇವನನ್ನು **ಪ್ರೊಟೆಸ್ಟಾಂಟ್ ಪೋಪ್** ಎಂದು ಕರೆಯಲಾಗಿದೆ. ಕ್ಯಾಲ್ವಿನ್‌ನ್ನನ ಅನುಯಾಯಿಗಳನ್ನು ಇಂಗ್ಲೆಂಡ್ ಹಾಗೂ ಅಮೆರಿಕಾದಲ್ಲಿ 'ಪ್ಯೂರಿಟಾನ್'ರೆಂದು, ಸ್ಕಾಟ್‌ಲ್ಯಾಂಡಿನಲ್ಲಿ 'ಪ್ರೆಸ್ಬಿಟೇರಿಯನ್ನ'ರೆಂದು ಹಾಗೂ ಫ್ರಾನ್ಸ್‌ನಲ್ಲಿ 'ಹುಗೆನಾಟ'ರೆಂದು ಕರೆಯುತ್ತಾರೆ.

ಇಂಗ್ಲೆಂಡಿನಲ್ಲಿ ೮ನೇ ಹೆನ್ರಿಯು ವೈಯಕ್ತಿಕ ಕಾರಣಗಳಿಗಾಗಿ ರೋಮಿನ ಪೋಪನ ವಿರುದ್ಧ ಸಿಡಿದೆದ್ದು ತಾನೇ ಇಂಗ್ಲೆಂಡಿನ ಚರ್ಚ್ ಹಾಗೂ ಪುರೋಹಿತ ವರ್ಗದ 'ಏಕಮಾತ್ರ ರಕ್ಷಕ' ಎಂದು ಘೋಷಿಸಿಕೊಂಡನು. ಚಾರಿತ್ರಿಕವಾಗಿ ಹೆನ್ರಿಯು ಕ್ಯಾಥೋಲಿಕ್ ಚರ್ಚಿನ ವಿರುದ್ಧ ದಂಗೆಯೆದ್ದ ಲೂಥರ್ ಹಾಗೂ ಕ್ಯಾಲ್ವಿನ್ನರಂತೆ ಅಗ್ರಗಣ್ಯನಾಗಿದ್ದಾನೆ. ಮುಂದೆ ಇಂಗ್ಲೆಂಡಿನ ಪ್ರೊಟೆಸ್ಟಾಂಟ್ ಪಂಥವು **ಆಂಗ್ಲಿಕನ್ ಚರ್ಚ್** ಅಥವಾ **ಚರ್ಚ್ ಆಫ್ ಇಂಗ್ಲೆಂಡ್** ಎಂದು ಪ್ರಸಿದ್ಧವಾಯಿತು.

ಪರಿಣಾಮಗಳು

ಈ ರೀತಿಯಲ್ಲಿ ಧಾರ್ಮಿಕ ಸುಧಾರಣಾ ಕ್ರಾಂತಿಯು ಅಸ್ತಿತ್ವದಲ್ಲಿದ್ದ ರೋಮನ್ ಕ್ಯಾಥೋಲಿಕ್ ಪಂಥವನ್ನು ವಿಭಜಿಸಿ ಪ್ರೊಟೆಸ್ಟಾಂಟ್ ಪಂಥದ ಉಗಮಕ್ಕೆ ನಾಂದಿ ಹಾಡಿತು. ಹೊಸ ಪಂಥವು ಜರ್ಮನಿ, ಇಂಗ್ಲೆಂಡ್, ಸ್ವಿಟ್ಜರ್‌ಲ್ಯಾಂಡ್, ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳು, ನೆದರ್‌ಲ್ಯಾಂಡ್ಸ್, ಸ್ಕಾಟ್‌ಲ್ಯಾಂಡ್ ಮುಂತಾದ ರಾಷ್ಟ್ರಗಳಲ್ಲಿ ಜನಪ್ರಿಯಗೊಂಡಿತು. ಅಲ್ಲದೆ ಇದು ಊಳಿಗಮಾನ್ಯ ಶಕ್ತಿಗಳನ್ನು ದುರ್ಬಲಗೊಳಿಸಿ ಮಧ್ಯಮ ವರ್ಗಗಳು ಬಲಿಷ್ಠಗೊಳ್ಳಲು ಅವಕಾಶ ಮಾಡಿಕೊಟ್ಟಿತು. ಹೊಸ ವೈಯಕ್ತಿಕವಾದ, ರಾಷ್ಟ್ರೀಯವಾದಗಳು, ಪ್ರಜಾಸತ್ತಾತ್ಮಕ ಸರಕಾರಗಳು ಇತ್ಯಾದಿ ಪ್ರವರ್ಧಮಾನಕ್ಕೆ ಬರಲು, ವ್ಯಾಪಾರ, ಬ್ಯಾಂಕಿಂಗ್ ಉದ್ಯಮಗಳ ಮೇಲೆ ಸಾಂಪ್ರದಾಯಿಕ, ಧಾರ್ಮಿಕ ಕಟ್ಟುಪಾಡುಗಳು ನಿರ್ಮೂಲನಗೊಳ್ಳಲು, ಆಧುನಿಕ ಬಂಡವಾಳವಾದವು ಉಗಮಗೊಳ್ಳಲು, ಸ್ಥಳೀಯ ಭಾಷೆ, ಸಾಹಿತ್ಯ ಹಾಗೂ ಜನಪ್ರಿಯ ಶಿಕ್ಷಣ ವ್ಯವಸ್ಥೆಗಳು ಪ್ರವರ್ಧಮಾನಕ್ಕೆ ಬರಲು ಎಡೆಮಾಡಿಕೊಟ್ಟಿತು.

ಪ್ರತಿಸುಧಾರಣಾ ಚಳವಳಿ - ಪರಿಣಾಮಗಳು

ಲೂಥರ್, ಜ್ವಿಂಗ್ಲಿ ಮತ್ತು ಕ್ಯಾಲ್ವಿನ್ನರ ಪ್ರೊಟೆಸ್ಟಾಂಟ್ ಚಳವಳಿಯಿಂದಾಗಿ ರೋಮನ್ ಕ್ಯಾಥೋಲಿಕ್ ಚರ್ಚಿನ ಬುಡವೇ ಅಲ್ಲಾಡತೊಡಗಿತು. ಚಳವಳಿಯಿಂದ ಉಂಟಾದ ಹಾನಿಯನ್ನು ಎದುರಿಸಲು ಕ್ಯಾಥೋಲಿಕ್ ಪಂಥದೊಳಗೆ ಒಂದರ ನಂತರ ಇನ್ನೊಂದು ಸುಧಾರಣೆಯನ್ನು ಜಾರಿಗೆ ತರಲು ಒತ್ತಡ ಉಂಟಾಯಿತು. ಇದನ್ನು **ಕ್ಯಾಥೋಲಿಕ್ ಸುಧಾರಣಾ** ಅಥವಾ **ಪ್ರತಿ-ಸುಧಾರಣಾ ಚಳವಳಿ** ಎಂದು ಕರೆಯುತ್ತಾರೆ. ಇದು ಧರ್ಮ ಸುಧಾರಣಾ ಚಳವಳಿಯ ಇನ್ನೊಂದು ಹಂತವಾಗಿದೆ.

ಪ್ರತಿಸುಧಾರಣಾ ಚಳವಳಿಯು ಕ್ಯಾಥೋಲಿಕ್ ಪಂಥದ ಸಾರ್ವತ್ರಿಕ ಅಧಿಪತ್ಯವನ್ನು ಮರು ಸ್ಥಾಪಿಸಲು ಹಲವು ಕ್ರಮಗಳನ್ನು ಕೈಗೊಂಡಿತು. ೧೫೪೫ ರಲ್ಲಿ ಪೋಪ್ ೩ನೇ ಪಾಲನು ಕರೆದ ಸಭೆಯಲ್ಲಿ (ಕೌನ್ಸಿಲ್ ಆಫ್ ಟ್ರೆಂಟ್) ಮೊದಲ ಪ್ರಯತ್ನ ನಡೆಯಿತು. ಇಲ್ಲಿ 'ಪ್ರೊಟೆಸ್ಟಾಂಟಿಸಂ'ನ ಬೆದರಿಕೆಯನ್ನು ಹೋಗಲಾಡಿಸಲು ಇರುವ ಮಾರ್ಗೋಪಾಯ ಗಳನ್ನು ಕುರಿತು ಚರ್ಚಿಸಲಾಯಿತು. ಎರಡೂ ಪಂಥಗಳ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯ

ಗಳನ್ನು ಬಗೆಹರಿಸುವುದು, ಕ್ಯಾಥೋಲಿಕ್ ಚರ್ಚಿನಲ್ಲಿ ನೈತಿಕ ಹಾಗೂ ಆಡಳಿತಾತ್ಮಕ ಅಪಚಾರ ಗಳನ್ನು ನಿರ್ಮೂಲನಾ ಮಾಡುವುದು, ಮುಸ್ಲಿಂರ ವಿರುದ್ಧ **ಹೊಸ ಧರ್ಮ ಯುದ್ಧ**ಗಳನ್ನು (**ಕ್ರುಸೆಡ್ಸ್**) ಪ್ರಾರಂಭಿಸುವುದು ಇತ್ಯಾದಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಧರ್ಮ ನಿಂದೆಯನ್ನು ಹತ್ತಿಕ್ಕಲು **ಇಂಕ್ವಿಜಿಷನ್** ಎಂಬ ಸ್ಪೇನಿನಲ್ಲಿ ಜನಪ್ರಿಯವಾಗಿದ್ದ 'ಚರ್ಚ್ ನ್ಯಾಯಾಲಯ'ವನ್ನು ಪುನರುಜ್ಜೀವನಗೊಳಿಸಲಾಯಿತು.

ಹಲವಾರು ಹೊಸ ಧಾರ್ಮಿಕ ಸಂಘಗಳು ಈ ಸಂದರ್ಭದಲ್ಲಿ ಹುಟ್ಟಿಕೊಂಡವು. ಕ್ಯಾಥೋಲಿಕ್ ಪಂಥಕ್ಕೆ ಮರುಜೀವ ತುಂಬುವುದು, ಉತ್ತರ ಯುರೋಪಿನಲ್ಲಿ ಪ್ರೊಟೆಸ್ಟಾಂಟ್ ಧರ್ಮದ ಜನಪ್ರಿಯತೆಯನ್ನು ತಡೆಗಟ್ಟುವುದು, ದಕ್ಷಿಣ ಯುರೋಪಿನಲ್ಲಿ ಕ್ಯಾಥೋಲಿಕ್ ಪಂಥದ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದು, ಜನರಲ್ಲಿ ಆಧ್ಯಾತ್ಮಿಕ ಪ್ರಜ್ಞೆಯನ್ನು ಇನ್ನೂ ಬಲಗೊಳಿಸುವುದು ಈ ಸಂಘಗಳ ಧ್ಯೇಯಗಳಾಗಿದ್ದವು. ಇವುಗಳಲ್ಲಿ ಪ್ರಮುಖವಾದ ಮಿಶನರಿ ಸಂಘ **ಜೇಸುಯಿಟ್ಸ್** (ಸೊಸೈಟಿ ಆಫ್ ಜೀಸಸ್) ಎಂಬುವುದು. ಇದರ ನಾಯಕ **ಇಗ್ನೇಷಿಯಸ್ ಲೊಯೋಲಾ** ಎಂಬ ಸ್ಪೇನಿನ ಮಾಜಿ ಸೈನಿಕ. ಆಧ್ಯಾತ್ಮಿಕ ಅನುಭವಕ್ಕೆ ಒಳಗಾಗಿ ಯೇಸುಕ್ರಿಸ್ತನ ಸೈನಿಕನಾದನು. ಕ್ರೈಸ್ತನ ಸಂದೇಶಗಳ ಪ್ರಚಾರಕ್ಕಾಗಿ ತನ್ನ ಹಾಗೂ ಸಂಘದ ಸೇವೆಯನ್ನು ಮುಡಿಪಾಗಿಟ್ಟನು. ಪೋಪನಿಗೆ ವಿಶೇಷ ವಿಧೇಯತೆಯನ್ನು ತೋರಿಸು ವುದನ್ನು ತನ್ನ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದನು.

ಈ ಪ್ರಯತ್ನಗಳ ಮೂಲಕ ಕ್ಯಾಥೋಲಿಕ್ ಪಂಥವು ಪ್ರೊಟೆಸ್ಟಾಂಟಿಸಂನ್ನು ಹೆಚ್ಚಿನ ರಾಷ್ಟ್ರಗಳಲ್ಲಿ ಹರಡುವುದನ್ನು ತಡೆಗಟ್ಟಿತು. ಯುರೋಪಿನ ಹೆಚ್ಚಿನ ಭಾಗವು ಪ್ರೊಟೆಸ್ಟಾಂಟ್ ಆಗಿ ಉಳಿದರೆ, ಸಮುದ್ರಗಳಾಚೆಗಿನ ಹೊಸ ರಾಷ್ಟ್ರಗಳು ಕ್ಯಾಥೋಲಿಕ್ ಪಂಥದ ಪ್ರಭಾವಕ್ಕೊಳಗಾದವು.

ಹೆಚ್ಚಿನ ಓದಿಗಾಗಿ

೧. ಹೇಯಿಸ್ ಸಿ.ಜೆ.ಹೆಚ್ - **ಮಾಡರ್ನ್ ಯೂರೋಪ್ ಟು ೧೮೭೦**

೨. ಪಣ್ಣೀಕ್ಕರ್ ಕೆ.ಎಂ - **ಏಷ್ಯಾ ಅಂಡ್ ವೆಸ್ಟರ್ನ್ ಡೊಮಿನೆನ್ಸ್**

೩. ಕೊನಿಗ್ಸ್ ಬರ್ಗರ್ ಹೆಚ್.ಜಿ - **ಅರ್ಲಿ ಮಾಡರ್ನ್ ಯೂರೋಪ್ ೧೫೦೦-೧೭೮೯**

೪. ಥಾಮಸ್ ಹೆಚ್. ಗ್ರೀನ್ - **ಎ ಬ್ರೀಫ್ ಹಿಸ್ಟರಿ ಆಫ್ ವೆಸ್ಟರ್ನ್ ಮ್ಯಾನ್**

೫. ಫಿಷರ್ ಹೆಚ್.ಎ.ಎಲ್ - **ಹಿಸ್ಟರಿ ಆಫ್ ಯೂರೋಪ್**

೬. ಎನ್.ಸಿ.ಇ.ಆರ್.ಟಿ - **ಕಂಟೆಂಪರರಿ ವರ್ಲ್ಡ್ ಹಿಸ್ಟರಿ**

೭. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಸಿರೀಸ್

ಮಾದರಿ ಪ್ರಶ್ನೆಗಳು

I. ಒಂದು ವಾಕ್ಯದಲ್ಲಿ ಉತ್ತರಿಸಿ (೧ ಅಂಕ)

೧. ನಾವಿಕ ಹೆನ್ರಿಯು ಯಾವ ರಾಷ್ಟ್ರದ ದೊರೆ?

೨. ಆಫ್ರಿಕಾದ ದಕ್ಷಿಣ ಭೂಶಿಖರವನ್ನು 'ಕೇಪ್ ಆಫ್ ಗುಡ್ ಹೋಪ್' ಎಂದು ಕರೆದವರಾರು?

೩. ಕೊಲಂಬಸ್‌ನು ಮೊತ್ತಮೊದಲು ಕಂಡುಹಿಡಿದ ದ್ವೀಪ ಯಾವುದು?

೪. ವಾಸ್ಕೋ-ಡ-ಗಾಮನು ಯಾವ ವರ್ಷದಲ್ಲಿ ಭಾರತ ತಲುಪಿದನು?

೫. ಅಮೆರಿಕಾಕ್ಕೆ ಆ ಹೆಸರು ಯಾರಿಂದ ಬಂದಿತು?

೬. 'ಕಾಂಕ್ವಿಸ್ಟಡಾರ್'ಗಳೆಂದರೆ ಯಾರು?

೭. ೧೩ನೆಯ ಶತಮಾನದಲ್ಲಿ ಚೀನಾ ಹಾಗೂ ಭಾರತಕ್ಕೆ ಬಂದ ಇಟಲಿಯ ಪ್ರವಾಸಿ ಯಾರು?

೮. ಪುನರುಜ್ಜೀವನ ಎಂದರೇನು?

೯. ಮಾನವತಾವಾದ ಎಂದರೇನು?

೧೦. ಇಟಲಿಯ ಪ್ರಖ್ಯಾತ ಮಾನವತಾವಾದಿ ಯಾರು?

೧೧. ಉತ್ತರ ಯುರೋಪಿನ ಪ್ರಖ್ಯಾತ ಮಾನವತಾವಾದಿ ಯಾರು?

೧೨. ಪುನರುಜ್ಜೀವನ ಕಲೆಗೆ ಧಾರಾಳ ಪ್ರೋತ್ಸಾಹ ನೀಡಿದ ಫ್ಲೋರೆನ್ಸಿನ ಕುಟುಂಬ ಯಾವುದು?

೧೩. ಕೆಪ್ಲರ್‌ನು ಯಾಕೆ ಪ್ರಸಿದ್ಧಿಯಾಗಿದ್ದಾನೆ?

೧೪. ಯುರೋಪಿನ ವೈಜ್ಞಾನಿಕ ರಾಜಧಾನಿಯೆಂದು ಯಾವ ವಿಶ್ವವಿದ್ಯಾನಿಲಯವನ್ನು ಕರೆಯಲಾಗಿತ್ತು?

೧೫. ಧರ್ಮ ಸುಧಾರಣಾ ಚಳವಳಿ ಎಂದರೇನು?

೧೬. ೧೬ನೇ ಶತಮಾನದಲ್ಲಿ ಜರ್ಮನಿಯಲ್ಲಿ ಧರ್ಮ ಸುಧಾರಣಾ ಚಳವಳಿಯನ್ನು ಪ್ರಾರಂಭಿಸಿದವರಾರು?

೧೭. 'ರೋಮನ್ ಕ್ಯಾಥೋಲಿಕರು' ಎಂದರೆ ಯಾರು?

೧೮. 'ಪ್ರೊಟೆಸ್ಟೆಂಟರು' ಎಂದರೆ ಯಾರು?

೧೯. 'ಜೇಸುಯಿಟ್ಸ್'ನ ಇನ್ನೊಂದು ಹೆಸರೇನು?

II. ಎರಡು ವಾಕ್ಯಗಳಲ್ಲಿ ಉತ್ತರಿಸಿ (೨ ಅಂಕಗಳು)

೧. ಧರ್ಮ ಸುಧಾರಣಾ ಚಳವಳಿಗೆ ಎರಡು ಕಾರಣಗಳನ್ನು ನೀಡಿ.

೨. ಜಾನ್ ಹಸ್ಸ್‌ನು ಯಾವ ರಾಷ್ಟ್ರಕ್ಕೆ ಸೇರಿದ್ದನು? ಅವನನ್ನು ಏಕೆ ಜೀವಂತವಾಗಿ ಸುಟ್ಟು ಹಾಕಲಾಯಿತು?

೩. 'ಕ್ಷಮಾಪಣಾ ಪತ್ರ'ಗಳನ್ನು ಏಕೆ ಕೊಡಲಾಗುತ್ತಿತ್ತು?

೪. ಮಾರ್ಟಿನ್‌ಲೂಥರನು 'ಕ್ಷಮಾಪಣಾ ಪತ್ರ'ಗಳನ್ನು ಏಕೆ ಖಂಡಿಸಿದನು?

೫. ಫ್ರಾನ್ಸ್ ಹಾಗೂ ಸ್ವಿಟ್ಜರ್‌ಲ್ಯಾಂಡ್‌ಗಳಲ್ಲಿ ಧರ್ಮ ಸುಧಾರಣಾ ಚಳವಳಿಗಳ ನೇತಾರಾರು?

೬. 'ಪ್ರತಿ ಸುಧಾರಣಾ ಚಳವಳಿ' ಎಂದರೇನು?

೭. ಇಗ್ನೇಶಿಯಸ್ ಲೊಯೋಲಾ ಯಾರು? ಅವನು ಸ್ಥಾಪಿಸಿದ ಧಾರ್ಮಿಕ ಸಂಘ ಯಾವುದು?

೮. ಸೊಸೈಟಿ ಆಫ್ ಜೀಸಸ್‌ನ ಧ್ಯೆಯಗಳೇನಾಗಿತ್ತು?

೯. ಧರ್ಮ ಸುಧಾರಣಾ ಚಳವಳಿಯ ಎರಡು ಪರಿಣಾಮಗಳನ್ನು ಕುರಿತು ಬರೆಯಿರಿ.

೧೦. ೧೫ನೆಯ ಶತಮಾನದಲ್ಲಿ ಭಾರತಕ್ಕೆ ಜಲಮಾರ್ಗದ ಅನ್ವೇಷಣೆಯಲ್ಲಿ ತೊಡಗಿದ ಎರಡು ಮುಖ್ಯ ರಾಷ್ಟ್ರಗಳಾವುವು?

೧೧. ಭೌಗೋಳಿಕ ಅನ್ವೇಷಣೆಗಳಿಗೆ ಎರಡು ಕಾರಣಗಳನ್ನು ಬರೆಯಿರಿ.

೧೨. ವಾಸ್ಕೋ-ಡ-ಗಾಮನು ಭಾರತದ ಯಾವ ಪ್ರದೇಶಕ್ಕೆ ಮೊದಲು ತಲುಪಿದನು? ಅಲ್ಲಿದ್ದ ರಾಜನ ಹೆಸರೇನು?

೧೩. ಗೋವಾ ಪ್ರದೇಶವು ಯಾವ ವರ್ಷದಲ್ಲಿ ಪೋರ್ಚುಗೀಸರ ಕೈವಶವಾಯಿತು? ಆಗ ಅದರ ರಾಜ್ಯಪಾಲನಾರು?

೧೪. ಅಜಟೆಕ್ ಮತ್ತು ಇಂಕಾ ನಾಗರೀಕತೆಗಳು ಎಲ್ಲಿದ್ದವು? ಅವುಗಳನ್ನು ಯಾರು ನಾಶ ಮಾಡಿದರು?

೧೫. ಟಾರ್ಡೆಸಿಲಾಸ್ ಒಪ್ಪಂದದ ಮಹತ್ವವೇನು?

೧೬. ಪೂರ್ವದೇಶಗಳಿಂದ ಯುರೋಪಿಗೆ ಆಮದಾಗುತ್ತಿದ್ದ ಯಾವುದಾದರೂ ನಾಲ್ಕು ವಸ್ತುಗಳನ್ನು ಹೆಸರಿಸಿ.

೧೭. ಭೌಗೋಳಿಕ ಅನ್ವೇಷಣೆಗಳ ಎರಡು ಮುಖ್ಯ ಪರಿಣಾಮಗಳನ್ನು ಬರೆಯಿರಿ.

೧೮. ಫರ್ಡಿನಾಂಡ್ ಮೆಗಲ್ಲಾನ್ ಯಾವ ದೇಶದವನು? ಅವನು ಕಂಡುಹಿಡಿದ ಜಲಮಾರ್ಗದ ಹೆಸರೇನು?

೧೯. ಕಾನ್‌ಸ್ಟಾಂಟಿನೋಪಲ್‌ನ್ನು ಯಾರು ಯಾವಾಗ ವಶಪಡಿಸಿಕೊಂಡರು?

೨೦. ಕಾನ್‌ಸ್ಟಾಂಟಿನೋಪಲ್‌ನ ಪತನದಿಂದಾದ ಮುಖ್ಯ ಬೆಳವಣಿಗೆ ಏನು?

೨೧. ಪುನರುಜ್ಜೀವನವು ಇಟಲಿಯಲ್ಲಿ ಪ್ರಾರಂಭವಾಗಲು ಎರಡು ಕಾರಣಗಳನ್ನು ನೀಡಿ.

೨೨. ಪುನರುಜ್ಜೀವನವನ್ನು ಹತ್ತೊಂಬತ್ತನೆಯ ಶತಮಾನದಲ್ಲಿ ವಿಶ್ಲೇಷಿಸಿದ ಪ್ರಸಿದ್ಧ ಇತಿಹಾಸಕಾರರಿಬ್ಬರು ಯಾರು?

೨೩. ಪುನರುಜ್ಜೀವನದ ಇಟಲಿಯ ಕಲಾಕಾರ ತ್ರಿಮೂರ್ತಿಗಳಾರು?

೨೪. ಲಿಯೋನಾರ್ಡೋ ಡ ವಿಂಚಿಯ ಎರಡು ವರ್ಣಚಿತ್ರಗಳ ಹೆಸರು ಹೇಳಿ.

೨೫. ಮೈಕಲೆಂಜಲೋನ ಕಲಾಕೃತಿಗಳಾವುವು?

೨೬. ಕೊಪರ್ನಿಕಸ್‌ನ ಸಿದ್ಧಾಂತವೇನು?

೨೭. ಗೆಲಿಲಿಯೋನ ಸಿದ್ಧಾಂತವೇನು?

೨೮. ಗೆಲಿಲಿಯೋನು ತನ್ನ ಸಿದ್ಧಾಂತಗಳನ್ನು ಯಾಕೆ ಹಿಂತೆಗೆದುಕೊಂಡನು?

೨೯. ಸೈಂಟ್ ಪೀಟರನ ಬ್ಯಾಸಿಲಿಕ ಎಲ್ಲಿದೆ? ಅದರ ಡೋಮ್‌ನ್ನು ಪುನರ್ ವಿನ್ಯಾಸಗೊಳಿಸಿದವರಾರು?

೩೦. 'ಗುರುತ್ವಾಕರ್ಷಣ ಸಿದ್ಧಾಂತ'ವನ್ನು ಕಂಡುಹಿಡಿದ ವಿಜ್ಞಾನಿ ಯಾರು? ಅವನು ಯಾವ ದೇಶಕ್ಕೆ ಸೇರಿದವನು?

೩೧. ಭೂಮಿಯು ಸೂರ್ಯನ ಸುತ್ತ ಸುತ್ತುವ ಪಥ ಯಾವ ಆಕಾರವನ್ನು ಹೊಂದಿದೆ. ಅದನ್ನು ಕಂಡುಹಿಡಿದವರಾರು?

೩೨. ಟಾಲೆಮಿಯ ಸಿದ್ಧಾಂತವನ್ನು ಕುರಿತು ಬರೆಯಿರಿ.

III. ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ (೫ ಅಂಕಗಳು)

೧. ಭೌಗೋಳಿಕ ಅನ್ವೇಷಣೆಯ ಮಹತ್ವವೇನು?

೨. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳಾವುವು?

೩. ಅಮೇರಿಕಾಗಳ ಅನ್ವೇಷಣೆಯನ್ನು ಕುರಿತು ಬರೆಯಿರಿ.

೪. 'ಪುನರುಜ್ಜೀವನ' ಚಳವಳಿಯನ್ನು ಕುರಿತು ಅರ್ಥೈಸಿ.

೫. ಸಾಹಿತ್ಯಕ ಪುನರುಜ್ಜೀವನವನ್ನು ಕುರಿತು ಬರೆಯಿರಿ.

೬. ಧರ್ಮ ಸುಧಾರಣಾ ಚಳವಳಿಯನ್ನು ಕುರಿತು ಬರೆಯಿರಿ.

೭. ಮಾರ್ಟಿನ್ ಲೂಥರ್‌ನ ಧರ್ಮ ಸುಧಾರಣಾ ಸಾಧನೆಗಳನ್ನು ಕುರಿತು ಬರೆಯಿರಿ.

IV. ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ (೧೦ ಅಂಕಗಳು)

೧. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳು ಹಾಗೂ ಪರಿಣಾಮಗಳನ್ನು ಕುರಿತು ವಿವರಿಸಿ.

೨. ಪುನರುಜ್ಜೀವನದ ಲಕ್ಷಣಗಳನ್ನು ವಿವರಿಸಿ.

೩. ಧರ್ಮ ಸುಧಾರಣಾ ಚಳವಳಿಗೆ ಪ್ರೇರಕವಾದ ಕಾರಣಗಳೇನು? ಹಾಗೂ ಈ ಚಳವಳಿಯಿಂದಾದ ಪರಿಣಾಮಗಳೇನು?

V. ಹೆಚ್ಚಿನ ಜ್ಞಾನಕ್ಕಾಗಿ ಕಾರ್ಯ-ಯೋಜನೆಗಳು (Assignments/Projects)

೧. ಗ್ಲೋಬ್ ಹಾಗೂ ಭೂಪಟಗಳ ಬಳಕೆಯ ಕ್ರಮವನ್ನು ತಿಳಿಯಿರಿ.

೨. ಭೌಗೋಳಿಕ ಅನ್ವೇಷಣೆಯ ಮಾರ್ಗಗಳನ್ನು ಭೂಪಟಗಳ ಮುಖೇನ ಗುರುತಿಸಿ.

೩. OHP ಪ್ರೊಜೆಕ್ಟರಿನ ಮೂಲಕ ಮೆಗಲ್ಲಾನ್, ಕೊಲಂಬಸ್, ವಾಸ್ಕೋ-ಡ-ಗಾಮ, ಹೆನ್ರಿ ಮೊದಲಾದವರ ಭಾವಚಿತ್ರಗಳ ವೀಕ್ಷಣೆ.

೪. ಪುನರುಜ್ಜೀವನ ಕಾಲಘಟ್ಟದ ಕಟ್ಟಡ ವಾಸ್ತು, ಚಿತ್ರಕಲೆ ಹಾಗೂ ಶಿಲ್ಪಕಲೆಗಳನ್ನು ಕುರಿತ ಚಿತ್ರಗಳನ್ನು ಸಂಗ್ರಹಿಸಿ.

೫. ಮಾರ್ಟಿನ್ ಲೂಥರ್‌ನ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ವಿವರ-ಮಾಹಿತಿಗಳನ್ನು ಸಂಗ್ರಹಿಸಿ.

೬. ಪ್ರೊಟೆಸ್ಟೆಂಟ್ ಚಳವಳಿಯು ಪಸರಿಸಿದ ಸ್ಥಳಗಳನ್ನು ಗುರುತಿಸಿ.

೭. ಪ್ರೊಟೆಸ್ಟೆಂಟ್ ಧರ್ಮಸುಧಾರಕರ ಭಾವಚಿತ್ರಗಳನ್ನು ಸಂಗ್ರಹಿಸಿ.

II ಕ್ರಾಂತಿಗಳ ಮತ್ತು ರಾಷ್ಟ್ರೀಯತೆಯ ಯುಗ

ಅಧ್ಯಾಯ ೨

೨.೧ ಅಮೆರಿಕಾದ ಸ್ವಾತಂತ್ರ್ಯ ಹೋರಾಟ

ಆಧುನಿಕ ಪ್ರಪಂಚದ ಚರಿತ್ರೆಯ ಅಧ್ಯಯನ ನಡೆಸುವಾಗ ಅಮೆರಿಕಾದ ಸ್ವಾತಂತ್ರ್ಯ ಹೋರಾಟ ಒಂದು ಪ್ರಮುಖ ಘಟನೆಯಾಗಿ ಕಂಡುಬರುತ್ತದೆ. ಅದು ಪ್ರಪಂಚದ ಇತರ ದೇಶಗಳಲ್ಲಿ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟ ಮತ್ತು ಕ್ರಾಂತಿಗಳಿಗೆ ಮಾರ್ಗದರ್ಶನವಾಯಿತು. ಈಗ ನಾವು ಅಮೆರಿಕ ಎಂದು ಕರೆಯುವ ಈ ಭೂಭಾಗ ಯುರೋಪಿಯನ್ನರ ಮೂಲಕ ಹೊಸ ಹೆಸರನ್ನು ಪಡೆದು ಪ್ರಪಂಚದ ಚರಿತ್ರೆಯಲ್ಲಿ ಒಂದು ಭೂಖಂಡವಾಗಿ ಗುರುತಿಸಿಕೊಂಡಿತು. ಯುರೋಪಿನ ಜನರು ನಾವು ಅಮೆರಿಕಾವನ್ನು ಕಂಡುಹಿಡಿದೆವು ಎಂಬುದಾಗಿ ಪ್ರಪಂಚಕ್ಕೆ ಸಾರಿ ಹೇಳಿದರು. ಆದರೆ ಅವರು ಬರುವುದಕ್ಕೆ ಮುಂಚೆಯೆ ಅಲ್ಲಿ ಜನ ವಾಸಮಾಡುತ್ತಿದ್ದರು ಎನ್ನುವುದು ವಾಸ್ತವ ಸಂಗತಿ. ಆದರೆ ಅಮೆರಿಕಾದ ಆದಿವಾಸಿಗಳಿಗೆ ತಾವು ವಾಸಿಸುತ್ತಿರುವ ಜಾಗ ಬಿಟ್ಟು ಬೇರೆ ಭೂಭಾಗಗಳ ಬಗ್ಗೆ ಹೆಚ್ಚಿಗೆ ಗೊತ್ತಿರಲಿಲ್ಲ. ಇದು ಯುರೋಪಿಯನ್ನರಿಗೆ ಅನುಕೂಲಕರವಾಗಿಯೇ ಪರಿಣಮಿಸಿತು. ಅಮೆರಿಕಾವು ಯುರೋಪಿನ ಅನ್ವೇಷಣೆಯಿಂದಾಗಿ ಕಂಡುಹಿಡಿಯಲ್ಪಟ್ಟ ಮೇಲೆ, ಯುರೋಪಿಯನ್ ವಲಸೆಗಾರರ ಪ್ರಮುಖ ಕೇಂದ್ರವಾಗಿ ಬೆಳೆಯಲಾರಂಭಿಸಿತು. ಇಂಗ್ಲೆಂಡಿನಲ್ಲಿ ಹಾಗೂ ಯುರೋಪಿನ ಇತರೆ ಭಾಗಗಳಲ್ಲಿ ಧಾರ್ಮಿಕ ಅಸಹನೆಯಿಂದ ನೊಂದ ಜನರು ಈ ಹೊಸ ಭೂಖಂಡದತ್ತ ವಲಸೆ ಬರಲಾರಂಭಿಸಿದರು. ಈ ರೀತಿಯಾಗಿ ಆಗಮಿಸಿದ ವಲಸೆಗಾರರು ಉತ್ತರ ಅಮೆರಿಕಾದ ಪೂರ್ವ ಕರಾವಳಿಯಲ್ಲಿ ನೆಲೆಸಿದರು. ಯುರೋಪಿನಿಂದ ಆಗಮಿಸಿದ ವಲಸೆಗಾರರಲ್ಲಿ ಬ್ರಿಟಿಷರು ಮಾತ್ರವಲ್ಲದೆ ಡಚ್ಚರು, ಫ್ರೆಂಚರು, ಜರ್ಮನ್ನರು, ಪೋರ್ಚುಗೀಸರು, ಇಟಾಲಿಯನ್ನರು, ಡೇನರು, ಬೊಹೇಮಿಯನ್ನರು ಇನ್ನೂ ಮುಂತಾದವರು ಇದ್ದರು. ಇವರೆಲ್ಲರೂ ಇಂದಿನ ಅಮೆರಿಕಾ ಸಂಯುಕ್ತ ಸಂಸ್ಥಾನದ ಪೂರ್ವ ತೀರದಲ್ಲಿ ಉತ್ತರದ ನ್ಯೂ ಫೌಂಡ್‌ಲ್ಯಾಂಡಿನಿಂದ ದಕ್ಷಿಣದ ಫ್ಲೋರಿಡಾದವರೆಗೆ ಹರಡಿ ಹದಿಮೂರು ವಸಾಹತುಗಳನ್ನು ಸ್ಥಾಪಿಸಿ ನೆಲೆಸಿದರು. ಅವುಗಳೆಂದರೆ ಜಾರ್ಜಿಯ, ಸೌತ್ ಕೆರೋಲಿನ, ನಾರ್ತ್ ಕೆರೋಲಿನ, ವರ್ಜೀನಿಯ, ಮೇರಿಲ್ಯಾಂಡ್, ಡೆಲಾವೇರಂ, ನ್ಯೂಜೆರ್ಸಿ, ನ್ಯೂಯಾರ್ಕ್, ಪೆನ್ಸಿಲ್‌ವೇನಿಯ, ರೋಡ್

ಐಲೆಂಡ್, ಕನೆಕ್ಟಿಕಾಟ್, ನ್ಯೂಹಾಮ್‌ಷೈರ್ ಮತ್ತು ಮೆಸಾಚುಸೆಟ್ಸ್. ಇವರು ಕ್ರಮೇಣ ಅಮೆರಿಕಾ ಸಂಯುಕ್ತ ಸಂಸ್ಥಾನದ ಪಶ್ಚಿಮದತ್ತ ಸರಿಯತೊಡಗಿದರು. ಉತ್ತರ ಪ್ರದೇಶವನ್ನು ನ್ಯೂ ಇಂಗ್ಲೆಂಡ್ ಪ್ರದೇಶವೆಂದು ಕರೆಯಲಾಯಿತು. ಅಟ್ಲಾಂಟಿಕ್ ಸಮುದ್ರವನ್ನು ದಾಟಿ ಹೊಸ ಪ್ರಪಂಚಕ್ಕೆ ಆಗಮಿಸಿದ ವಲಸೆಗಾರರು ಹೊಸ ವ್ಯವಸ್ಥೆಯೊಂದನ್ನು ಹುಟ್ಟು ಹಾಕಿ ಬದುಕನ್ನು ನಡೆಸಲು ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಅದೇ ಸಂದರ್ಭದಲ್ಲಿ ಇಂಗ್ಲೆಂಡ್ ಅಮೆರಿಕನ್ನರ ಮೇಲೆ ತನ್ನ ಆಡಳಿತಾತ್ಮಕ ಹಾಗೂ ಆರ್ಥಿಕ ಸಾರ್ವಭೌಮತ್ವವನ್ನು ಹೇರಲಾರಂಭಿಸಿತು. ಇದು ವಲಸೆಗಾರರನ್ನು ಇಂಗ್ಲೆಂಡಿನ ವಿರುದ್ಧ ಹೋರಾಟ ಮಾಡುವಂತೆ ಮಾಡಿತು. ವಲಸೆಗಾರರು ಇಂಗ್ಲೆಂಡಿನ ವಿರುದ್ಧ ಯಾವ ಯಾವ ಕಾರಣಗಳಿಗೋಸ್ಕರ ಹೋರಾಟ ಮಾಡಿದರು ಎನ್ನುವುದನ್ನು ಈ ರೀತಿ ಪರಿಶೀಲಿಸಬಹುದು.

ಕಾರಣಗಳು

೧. ವಸಾಹತು ಸರಕಾರದ ಮೇಲಿನ ಇಂಗ್ಲೆಂಡಿನ ಹತೋಟಿ

ಅಮೆರಿಕಾದಲ್ಲಿನ ಪ್ರತಿಯೊಂದು ವಸಾಹತು ತನ್ನದೇ ಆದ ಸರಕಾರವನ್ನು ಹೊಂದಿತ್ತು. ಆದರೆ ವಸಾಹತುಗಳು ಬ್ರಿಟಿಷ್ ಸರಕಾರ ನೇಮಿಸಿದ ರಾಜ್ಯಪಾಲಕನ ಮಾರ್ಗದರ್ಶನದಲ್ಲಿ ಆಡಳಿತವನ್ನು ನಡೆಸಬೇಕಾಗಿತ್ತು. ಪ್ರತಿಯೊಂದು ವಸಾಹತಿಗೂ ಒಬ್ಬ ರಾಜ್ಯಪಾಲಕ ಇರುತ್ತಿದ್ದನು. ರಾಜ್ಯಪಾಲಕ ವಸಾಹತಿನ ರಾಜನಿದ್ದಂತೆ. ವಸಾಹತಿನ ಕಾಯಿದೆಗಳನ್ನು ಜಾರಿಗೆ ತರುವುದು, ಅಧಿಕಾರಗಳನ್ನು ನೇಮಕ ಮಾಡುವುದು, ವಸಾಹತಿನ ಪ್ರಜಾಪ್ರತಿನಿಧಿ ಸಭೆಗಳನ್ನು ಸೇರಿಸುವುದು ಮತ್ತು ಮುಕ್ತಾಯಗೊಳಿಸುವುದು, ಕಾಯಿದೆಗಳನ್ನು ಮಂಡಿಸುವುದು ಮುಂತಾದ ಅಧಿಕಾರಗಳು ಅವನ ಕೈಯಲ್ಲಿತ್ತು. ಅವನ ಖರ್ಚು ವೆಚ್ಚಗಳೆಲ್ಲವನ್ನೂ ಪ್ರಜೆಗಳು ಕೊಡುತ್ತಿದ್ದ ತೆರಿಗೆಯಿಂದ ಪೂರೈಸಬೇಕಾಗಿತ್ತು. ಪ್ರತಿಯೊಂದು ವಸಾಹತಿನಲ್ಲೂ ಒಂದು ಪ್ರಜಾಪ್ರತಿನಿಧಿ ಸಭೆ ಇರುತ್ತಿತ್ತು. ಈ ಸಭೆಯಲ್ಲಿ ಕೆಳಮನೆ ಮತ್ತು ಮೇಲ್ಮನೆ ಎನ್ನುವ ಎರಡು ಮನೆಗಳಿದ್ದವು. ಈ ಚುನಾಯಿತ ಸಭೆಯು ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಹೊಂದಿತ್ತು. ಆಗಾಗ್ಗೆ ರಾಜನ ಗವರ್ನರ್‌ಗಳು (ರಾಜ್ಯಪಾಲಕ) ಹಾಗೂ ಶಾಸನಸಭೆಗಳ ನಡುವೆ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡು, ಅದು ಸಂಘರ್ಷಕ್ಕೆಡೆ ಮಾಡಿಕೊಡುತ್ತಿತ್ತು. ವಸಾಹತುಗಳ ಆಡಳಿತ ಮತ್ತು ಲಂಡನ್ನಿನ ಆಡಳಿತ ಒಂದಕ್ಕೊಂದು ಪೂರಕವಾಗಿರಲಿಲ್ಲ. ವಸಾಹತುಗಳ ಶಾಸನಸಭೆಗಳು ಸ್ವತಂತ್ರವಾಗಿ ವ್ಯವಹರಿಸಲು ಹಾತೊರೆಯುತ್ತಿದ್ದವು. ಅವು ಈ ನಿಟ್ಟಿನಲ್ಲಿ ಸ್ವಲ್ಪಮಟ್ಟಿನ ಯಶಸ್ಸನ್ನು ಪಡೆದಿದ್ದರೂ ಇಂಗ್ಲೆಂಡಿನ ಬಿಗಿ ಹಿಡಿತದಿಂದ ಹೊರಬಂದಿರಲಿಲ್ಲ. ಇಂಗ್ಲೆಂಡಿನ ಪ್ರಭುತ್ವ ತನ್ನ ಅಧಿಕಾರವನ್ನು ವಸಾಹತುಗಳ ಮೇಲೆ ಹೇರಲು ಯತ್ನಿಸುತ್ತಿತ್ತು. ಅಮೆರಿಕಾದ ಜನರು ತಮ್ಮ ಶಾಸನಸಭೆಗಳು ಬ್ರಿಟಿಷ್ ಪಾರ್ಲಿಮೆಂಟಿನೊಂದಿಗೆ ಸಮಾನ ಹಕ್ಕುಗಳನ್ನು ಪಡೆಯಬೇಕೆಂದು ಇಚ್ಛಿಸಿದರು. ಬ್ರಿಟಿಷ್ ಪಾರ್ಲಿಮೆಂಟ್ ವಿಧಿಸಿದ ತೆರಿಗೆಯನ್ನು ಕೊಡಲು ವಸಾಹತುಗಳ ಜನತೆ ನಿರಾಕರಿಸಿದರು.

ಎಲ್ಲ ವಸಾಹತುಗಳು ತಮ್ಮ ಏಜೆಂಟರನ್ನು ಲಂಡನ್‌ನಲ್ಲಿ ನೇಮಿಸಲು ತೀರ್ಮಾನಿಸಿದವು. ಇವೇ ಮುಂತಾದ ಅನೇಕ ವಿಚಾರಗಳು ವಸಾಹತುಗಳು ಹೋರಾಟ ನಡೆಸುವಂತೆ ಪ್ರೇರೇಪಿಸಿದವು.

೨. ಬ್ರಿಟಿಷರ ವಾಣಿಜ್ಯ ನೀತಿ

ಬ್ರಿಟಿಷರ ವಾಣಿಜ್ಯ ನೀತಿ ವಸಾಹತುಗಳ ಆಸಕ್ತಿಗಳಿಗೆ ಮಾರಕವಾಗಿದ್ದು, ಬ್ರಿಟಿಷ್ ಸರಕಾರದ ವಿರುದ್ಧ ಹೋರಾಟ ನಡೆಸುವಂತೆ ಮಾಡಿತು. ಬ್ರಿಟಿಷ್ ಸರಕಾರಕ್ಕೆ ಅಮೆರಿಕದ ವಸಾಹತುಗಳು ಮುಖ್ಯವೆನಿಸಿದ್ದು ಆರ್ಥಿಕ ಕಾರಣಗಳಿಗಾಗಿ ಮಾತ್ರ. ಬ್ರಿಟಿಷ್ ಸರಕಾರ ವಾಣಿಜ್ಯ ಸಿದ್ಧಾಂತ ಹಾಗೂ ಸಮುದ್ರಯಾನ ಶಾಸನಗಳನ್ನು ಜಾರಿಗೊಳಿಸುವುದರ ಮೂಲಕ ವಸಾಹತುಗಳ ಮೇಲೆ ಹಿಡಿತ ಸಾಧಿಸಲು ಅಸಂವಿಧಾನಾತ್ಮಕ ನಿರ್ಣಯ ಕೈಗೊಂಡಿತು. ಈ ಕಾಯಿದೆಗಳ ಪ್ರಕಾರ ವಸಾಹತುಗಳ ಉತ್ಪಾದನೆಯನ್ನು ಬ್ರಿಟಿಷ್ ಅಥವಾ ವಸಾಹತುಗಳ ಹಡಗುಗಳನ್ನು ಬ್ರಿಟನ್ನಿಗೇ ರವಾನಿಸಬೇಕಾಗಿತ್ತು. ವಸಾಹತುಗಳು ನೇರವಾಗಿ ಬೇರಾವ ದೇಶಗಳೊಂದಿಗೂ ವ್ಯಾಪಾರ ಮಾಡುವಂತಿರಲಿಲ್ಲ ಹಾಗೂ ಕೈಗಾರಿಕೆಗಳಲ್ಲೂ ತೊಡಗುವಂತಿರಲಿಲ್ಲ. ವಸಾಹತುಗಳಿಂದ ಬರುವ ಸ್ಪರ್ಧೆಯನ್ನು ತಪ್ಪಿಸಿ ಬ್ರಿಟನ್ನಿನ ಕೈಗಾರಿಕೆಗಳಿಗೆ ರಕ್ಷಣೆ ಒದಗಿಸುವುದೇ ಇದರ ಉದ್ದೇಶವಾಗಿತ್ತು. ಆರಂಭದಲ್ಲಿ ಬ್ರಿಟಿಷ್ ಸರಕಾರ ಹೊರಡಿಸಿದ ಕಾಯಿದೆಗಳು ಕಡ್ಡಾಯವಾಗಿರಲಿಲ್ಲ. ಆದರೆ ೧೮ ನೆಯ ಶತಮಾನದಲ್ಲಿ ಬ್ರಿಟಿಷ್ ಸರಕಾರ ಇವುಗಳನ್ನು ಕಡ್ಡಾಯಗೊಳಿಸಿತು. ಇದು ಅಮೆರಿಕಾದ ವಸಾಹತುಗಳ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರಿತು. ಬ್ರಿಟನ್ನಿನ ಬಿಗಿ ಕಾಯಿದೆಗಳಿಂದಾಗಿ ವಸಾಹತುಗಳ ಜನತೆ ವಿಧಿಯಿಲ್ಲದೆ ಕಳ್ಳಸಾಗಾಣಿಕೆಗೆ ಶರಣಾದರು. ಬ್ರಿಟನ್ನಿನ ವ್ಯಾಪಾರ ಮತ್ತು ನೌಕಾ ಸಂಚಾರದ ಕಾಯಿದೆಗಳು ವಸಾಹತುಗಳ ಜನರಲ್ಲಿ ಅತೃಪ್ತಿ, ಅಸಮಾಧಾನವನ್ನುಂಟು ಮಾಡಿದವು. ಇದರಿಂದಾಗಿ ಬ್ರಿಟಿಷ್ ಸರಕಾರದ ವಿರುದ್ಧ ಹೋರಾಡುವುದು ಅನಿವಾರ್ಯವಾಯಿತು.

೩. ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಪೈಪೋಟಿ ಮತ್ತು ಯುದ್ಧ

೧೭ ಮತ್ತು ೧೮ ನೆಯ ಶತಮಾನಗಳಲ್ಲಿ ಇಂಗ್ಲೆಂಡ್ ಮತ್ತು ಯುರೋಪಿನ ಇತರೆ ರಾಷ್ಟ್ರಗಳು ಕಚ್ಚಾವಸ್ತುಗಳಿಗಾಗಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪರಸ್ಪರ ಯುದ್ಧ ಮಾಡುತ್ತಲೇ ಇದ್ದವು. ಅಮೆರಿಕಾದ ಪ್ರಕೃತಿ ಸಂಪತ್ತು ಯುರೋಪಿನ ರಾಷ್ಟ್ರಗಳಲ್ಲಿ ದುರಾಸೆಯನ್ನು ಹುಟ್ಟಿಸಿತು. ಫ್ರೆಂಚರು ಮತ್ತು ಬ್ರಿಟಿಷರು ಅಮೆರಿಕಾದ ಬಂದರುಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಾಗೂ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಲು ಪರಸ್ಪರ ಸೆಣಸಾಡಿದರು. ೧೭೫೬ ರಲ್ಲಿ ಬ್ರಿಟಿಷರ ಮತ್ತು ಫ್ರೆಂಚರ ನಡುವಿನ ಘರ್ಷಣೆ ಯುರೋಪಿಗೂ ಹರಡಿ **ಏಳು ವರ್ಷಗಳ ಯುದ್ಧ** ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಅಮೆರಿಕಾದ ವಸಾಹತುಗಳು ಈ ಎರಡು ದೇಶಗಳ ಮನಸ್ತಾಪಗಳಿಗೆ ಮತ್ತು ಹೋರಾಟಗಳಿಗೆ ವೇದಿಕೆ

ಗಳಾದವು. ವಸಾಹತುಗಳ ಜನತೆ ಆಗಾಗ್ಗೆ ಫ್ರೆಂಚರು ಮತ್ತು ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್ಸ್‌ರಿಂದ ತೊಂದರೆಗೆ ಒಳಗಾಗುತ್ತಿದ್ದರು. ಆದ್ದರಿಂದ ಬ್ರಿಟಿಷರು ವಸಾಹತುಗಳ ಜನರ ರಕ್ಷಣೆಗಾಗಿ ಸೈನ್ಯ ಮತ್ತು ನೌಕಾಪಡೆಯನ್ನು ಸ್ಥಾಪಿಸಬೇಕಾಯಿತು. ಸೈನ್ಯದ ನಿರ್ವಹಣೆಗೋಸ್ಕರ ಈ ಜನರು ಉಪಯೋಗಿಸುವ ವಸ್ತುಗಳ ಮೇಲೆ ತೆರಿಗೆ ವಿಧಿಸಲು ಬ್ರಿಟಿಷ್ ಸರಕಾರ ನಿರ್ಧರಿಸಿತು. ಫ್ರೆಂಚರು ಯುದ್ಧದಲ್ಲಿ ಸೋತು ಉತ್ತರ ಅಮೆರಿಕಾದ ತಮ್ಮ ಹಕ್ಕನ್ನು ಬಿಟ್ಟುಕೊಟ್ಟ ಸಂದರ್ಭದಲ್ಲಿ ವಸಾಹತುಗಳು ಸಂದಿಗ್ಧ ಪರಿಸ್ಥಿತಿಯಲ್ಲಿದ್ದವು. ವಸಾಹತುಗಳಿಂದ ಹಣ ಸಂಗ್ರಹಿಸಲು ಬ್ರಿಟಿಷರು ಮಾಡಿದ ಪ್ರಯತ್ನಗಳಿಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಿದರು.

ಯುದ್ಧಾನಂತರ ವಸಾಹತುಗಳ ವ್ಯಾಪಾರ ಕುಗ್ಗಿತು ಹಾಗೂ ಸಾಲದ ಹೊರೆ ವಿಪರೀತವಾಗಿತ್ತು. ಈ ಪರಿಸ್ಥಿತಿಯಲ್ಲಿ ಹೊಸ ತೆರಿಗೆಗಳು ಜಾರಿಗೆ ಬಂದು ಅವರ ಕಷ್ಟ-ನಷ್ಟಗಳನ್ನು ಹೆಚ್ಚಿಸಿದವು. ಇಷ್ಟೆಲ್ಲ ನಿಯಂತ್ರಣಗಳು, ನಿರ್ಬಂಧಗಳು ಸಾಲದಾಗಿ ಅಮೆರಿಕಾದಲ್ಲಿ ಕಾಗದದ ಹಣವನ್ನು ಅಚ್ಚು ಮಾಡುವುದನ್ನು ನಿರ್ಬಂಧಿಸುವ ಹೊಸ ನಿರ್ಧಾರವನ್ನು ಬ್ರಿಟಿಷ್ ಸರಕಾರ ಪ್ರಕಟಿಸಿತು. ಇದು ಅಮೆರಿಕಾದ ವಸಾಹತುಗಳಲ್ಲಿ ಗೊಂದಲದ ಪರಿಸ್ಥಿತಿಯನ್ನು ಉಂಟು ಮಾಡಿತು. ಅಮೆರಿಕಾದ ವಸಾಹತುಗಾರರು ಪ್ರಭಾವಶಾಲಿಗಳಾಗಿ ಬೆಳೆಯುವುದು ಬ್ರಿಟಿಷರಿಗೆ ಇಷ್ಟವಿರಲಿಲ್ಲ. ಬ್ರಿಟಿಷರಿಗೂ ಮತ್ತು ಫ್ರೆಂಚರಿಗೂ ನಡೆದ ಯುದ್ಧದ ಸಮಯದಲ್ಲಿ ಅಮೆರಿಕಾದ ವರ್ತಕರು ಫ್ರೆಂಚ್ ಪಶ್ಚಿಮ ಇಂಡೀಸ್ ದ್ವೀಪಗಳೊಡನೆ ವ್ಯಾಪಾರ ಮುಂದುವರಿಸಿಕೊಂಡು ಹೋಗಿದ್ದು ಬ್ರಿಟಿಷರಿಗೆ ಅಸಮಾಧಾನ ಉಂಟು ಮಾಡಿತ್ತು. ಬ್ರಿಟಿಷರ ದೃಷ್ಟಿಯಲ್ಲಿ ಅದು ಅನ್ಯಾಯ ಹಾಗೂ ದೇಶದ್ರೋಹವಾಗಿತ್ತು. ಹೀಗಾಗಿ ಅಮೆರಿಕಾದ ವಸಾಹತುಗಳ ಮೇಲೆ ತನ್ನ ಸಾರ್ವಭೌಮತ್ವವನ್ನು ಹೇರಿ ಆಡಳಿತವನ್ನು ಬಿಗಿಪಡಿಸಲು ಬ್ರಿಟಿಷ್ ಸರಕಾರ ನಾನಾ ರೀತಿಯ ಪ್ರಯತ್ನಗಳನ್ನು ಮಾಡಿತು. ಆದರೆ ಆ ಪ್ರಯತ್ನಗಳು ಸಮಸ್ಯೆಗಳನ್ನು ಪರಿಹರಿಸುವುದರ ಬದಲು ಇನ್ನೂ ಹೆಚ್ಚಿನ ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸಿದವು. ಯುದ್ಧ ಕೊನೆಗೊಂಡ ಮೇಲೆ ಬ್ರಿಟಿಷರು ಫ್ರೆಂಚರ ನೆಲೆಗಳನ್ನು ಒಂದೊಂದಾಗಿ ಸ್ವಾಧೀನಪಡಿಸಿಕೊಂಡರು. ಫ್ರೆಂಚರಿಂದ ಗೆದ್ದುಕೊಂಡ ಭೂಪ್ರದೇಶ ಯಾರಿಗೆ ಸೇರಬೇಕು ಎನ್ನುವ ವಿಷಯದಲ್ಲೂ ವಸಾಹತುಗಳು ಮತ್ತು ಬ್ರಿಟಿಷ್ ಸರಕಾರದ ಮಧ್ಯೆ ಹೊಸ ಸಮಸ್ಯೆ ತಲೆದೋರಿತು. ೧೭೬೩ ರ ಪ್ಯಾರಿಸ್ ಒಪ್ಪಂದದ ನಂತರ ಬ್ರಿಟನ್ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿತು. ಅಮೆರಿಕಾದಲ್ಲಿ ಹೊಸದಾಗಿ ಅನೇಕ ಪ್ರದೇಶಗಳನ್ನು ಪಡೆದುಕೊಂಡು, ಅವುಗಳ ಮೇಲೆ ತನ್ನ ಸಾಮ್ರಾಜ್ಯಶಾಹಿ ಆಡಳಿತ ಯೋಜನೆಗಳನ್ನು ಹೇರಿತು. ಇದು ಅಮೆರಿಕನ್ನರ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.

ಹೀಗೆ ಬ್ರಿಟಿಷ್ ಸರಕಾರವು ತನ್ನ ಅಗತ್ಯಗಳಿಗೆ ತಕ್ಕಂತೆ ಅಮೆರಿಕಾದ ವಸಾಹತುಗಳನ್ನು ಬಳಸಿಕೊಂಡಿತು. ಅವು ತನ್ನ ಅಧೀನದಲ್ಲಿಯೇ ಇರಬೇಕೆಂದು ತನ್ನ ಸಾರ್ವಭೌಮತ್ವವನ್ನು ಹೇರುವ ಪ್ರಯತ್ನವನ್ನೂ ಮಾಡಿತು. ವಸಾಹತುಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸುವ

ಸಾಮರ್ಥ್ಯ ಬ್ರಿಟಿಷ್ ಸರಕಾರಕ್ಕೆ ಇದ್ದರೂ, ಆ ನಿಟ್ಟಿನಲ್ಲಿ ಯಾವ ಕೆಲಸ ಕಾರ್ಯಗಳನ್ನೂ ಮಾಡಲಿಲ್ಲ. ಅಧಿಕಾರಿಗಳನ್ನು ನೇಮಕ ಮಾಡುವುದರಲ್ಲಿ, ಸೈನ್ಯದಲ್ಲಿ ಬಡ್ತಿ ಕೊಡುವುದರಲ್ಲಿ ಹಾಗೂ ಇನ್ನಿತರ ವಿಷಯಗಳಲ್ಲಿ ಬ್ರಿಟಿಷ್ ಸರಕಾರ ಪಕ್ಷಪಾತ ತೋರಿಸುತ್ತಿತ್ತು. ತನಗೆ ಲಾಭ ತರುವ ಕಾಯಿದೆಗಳನ್ನು ವಸಾಹತುಗಳಲ್ಲಿ ಹೆಚ್ಚು ಕಠಿಣವಾಗಿ ಜಾರಿಗೆ ತರಲು ಪ್ರಯತ್ನಪಟ್ಟಿತು. ಇವೆಲ್ಲವೂ ಅಮೆರಿಕಾದ ವಸಾಹತುಗಳ ಜನರು ಬ್ರಿಟಿಷ್ ಸರಕಾರದ ವಿರುದ್ಧ ಹೋರಾಟ ನಡೆಸುವಂತೆ ಮಾಡಿದವು.

ಹೋರಾಟದ ಹಾದಿ

ಅಮೆರಿಕಾದ ವಸಾಹತುಗಳು ಆರಂಭದಿಂದಲೂ ಬ್ರಿಟಿಷ್ ಸರಕಾರದ ಹಸ್ತಕ್ಷೇಪವನ್ನು ವಿರೋಧಿಸುತ್ತಲೇ ಬಂದಿದ್ದವು. ಆದರೆ ಬ್ರಿಟಿಷ್ ಸರಕಾರ ತನ್ನ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತ್ವವನ್ನು ಹೇರುವ ಪ್ರಯತ್ನವನ್ನು ಮಾತ್ರ ಬಿಡಲಿಲ್ಲ. ಬ್ರಿಟಿಷರ ವಾಣಿಜ್ಯ ನೀತಿ ಮತ್ತು ನೌಕಾಸಂಚಾರದ ಕಾಯಿದೆಗಳು ವಸಾಹತುಗಳನ್ನು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಕ್ಷೀಣಿಸುವಂತೆ ಮಾಡಿದವು. ಬ್ರಿಟಿಷ್ ಸರಕಾರ ಜಾರಿಗೆ ತಂದ ಕಾಯಿದೆಗಳು ಅಮೆರಿಕನ್ನರಿಗೆ ಹಿಡಿಸಲಿಲ್ಲ. ಬ್ರಿಟಿಷರು ಇಂಡಿಯನ್ನರ ಮೇಲೆ ಹೆಚ್ಚು ಬಲಾತ್ಕಾರ, ಹಿಂಸಾಚಾರ ಮಾಡಲು ಆರಂಭಿಸಿದ್ದು ಹೊಸ ಪ್ರಪಂಚದಲ್ಲಿ ದ್ವೇಷಾಸೂಯೆ ಹಾಗೂ ಅಶಾಂತಿಗೆ ಕಾರಣವಾಯಿತು. ಪರಸ್ಪರ ವಿರೋಧಿ ಗುಂಪುಗಳು ಹುಟ್ಟಿಕೊಂಡು ಹೋರಾಟ ನಡೆಸಲಾರಂಭಿಸಿದವು. ಬಿಳಿಯರ ಆಕ್ರಮಣ ಹಾಗೂ ಹತಾಶ ಇಂಡಿಯನ್ನರ ವಿರೋಧಗಳು ಕೊನೆಕಾಣದ ಸಮಸ್ಯೆಗಳಾಗಿ ಕಂಡುಬಂದವು. ಬ್ರಿಟಿಷ್ ಸರಕಾರ ಸಮಸ್ಯೆಗಳನ್ನು ಇನ್ನಷ್ಟು ಸಂಕೀರ್ಣಗೊಳಿಸಿತೇ ವಿನಹ ಅದರ ಪರಿಹಾರದತ್ತ ಗಮನಹರಿಸಲಿಲ್ಲ. ಹೀಗಾಗಿ ಯುದ್ಧ ಆರಂಭವಾಗುವ ಮೊದಲೇ ಅದಕ್ಕೆ ಸಂಬಂಧಪಟ್ಟ ಸಿದ್ಧತೆಗಳು ನಡೆಯುತ್ತಿದ್ದವು. **ಜಾನ್ ಆಡಾಮ್ಸ್** ಇದನ್ನೇ ಈ ರೀತಿ ಹೇಳಿದ್ದಾನೆ; "ಯುದ್ಧ ಆರಂಭವಾಗುವ ಮೊದಲೇ ಕ್ರಾಂತಿಯನ್ನು ನಡೆಸಲಾಯಿತು. ಕ್ರಾಂತಿಯು ಜನರ ಹೃದಯ ಮತ್ತು ಮನಸ್ಸಿನಲ್ಲಿತ್ತು." ವಸಾಹತುಗಳು ಆರ್ಥಿಕ ಕ್ಷೇತ್ರದಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿದ್ದೇ ಅಲ್ಲದೆ ಆಡಳಿತದ ವಿಚಾರದಲ್ಲೂ ಅನುಭವವನ್ನು ಹೊಂದಿದ್ದವು. ಬ್ರಿಟಿಷ್ ಸರಕಾರದ ದ್ವಂದ್ವ ನೀತಿಗಳು ಮತ್ತು ಮಲತಾಯಿ ಧೋರಣೆ ವಸಾಹತುಗಳು ತಮ್ಮ ನೆಲೆಗಳನ್ನು ಭದ್ರಗೊಳಿಸುವಂತೆ ಮಾಡಿತು. ಇದಕ್ಕೆ ಹೋರಾಟವನ್ನೇ ಮಾಡಬೇಕಾಗಿ ಬಂತು.

ಸಕ್ಕರೆ ಕಾಯಿದೆ

೧೭೬೪ ರಲ್ಲಿ ಪ್ರಧಾನಮಂತ್ರಿ **ಜಾನ್ ಗ್ರೆನ್‌ವಿಲ್ಲನ** ನಾಯಕತ್ವದಲ್ಲಿ ಪಾರ್ಲಿಮೆಂಟ್ ಸಕ್ಕರೆ ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾಯಿದೆ ಅಮೆರಿಕ ನೇರವಾಗಿ ಆಮದು ಮಾಡಿಕೊಳ್ಳುವ ಸಕ್ಕರೆ, ಕಾಫಿ, ವೈನ್ ಮತ್ತು ಇನ್ನೂ ಅನೇಕ ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸಿತು. ಕಾಕಂಬಿಯ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿ ಸಕ್ಕರೆ

ಕಾಯಿದೆಯನ್ನು ಹೆಚ್ಚು ಕಠಿಣವಾಗಿ ಜಾರಿಗೆ ತರಲಾಯಿತು. ಕಾಕಂಬಿಯು ರಮ್ ತಯಾರಿಕೆಗೆ ಅತ್ಯವಶ್ಯಕವಾದ್ದರಿಂದ ಅದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದರೆ ಅಮೆರಿಕಾಕ್ಕೆ ಅದರ ಕಳ್ಳ ಸಾಗಾಣಿಕೆಯು ನಿಂತು ತೆರಿಗೆ ಸಂಗ್ರಹವು ಹೆಚ್ಚಾಗುವುದೆಂದು ಬ್ರಿಟಿಷ್ ಸರಕಾರ ಭಾವಿಸಿತು. ಆದ್ದರಿಂದ ಹೊಸ ಸಕ್ಕರೆ ಕಾಯಿದೆಯನ್ನು ಜಾರಿಗೆ ತಂದಿತು. ಅಮೆರಿಕ ಯುರೋಪಿನಿಂದ ಇಂಗ್ಲೆಂಡ್ ಮೂಲಕವಾಗಿ ಆಮದು ಮಾಡಿಕೊಳ್ಳುತ್ತಿದ್ದ ಪದಾರ್ಥಗಳ ಮೇಲಿನ ತೆರಿಗೆಯನ್ನು ಎರಡು ಪಟ್ಟು ಹೆಚ್ಚಿಸಲಾಯಿತು. ತೆರಿಗೆಗೆ ಒಳಪಟ್ಟ ಪದಾರ್ಥಗಳ ಪಟ್ಟಿಗೆ ಕಬ್ಬಿಣ, ಕಚ್ಚಾ ರೇಷ್ಮೆ, ಪೊಟಾಷ್ ಮತ್ತು ಇನ್ನೂ ಅನೇಕ ವಸ್ತುಗಳನ್ನು ಸೇರಿಸಲಾಯಿತು. ಈ ಕಾಯಿದೆಯನ್ನು ಮುರಿದವರನ್ನು ಬ್ರಿಟಿಷ್ ನೌಕಾ ಅಧಿಕಾರಿಗಳ ಮುಂದೆ ವಿಚಾರಣೆಗೆ ಗುರಿಪಡಿಸಲಾಗುತ್ತಿತ್ತು. ಹೊಸ ತೆರಿಗೆಗಳ ಕಾನೂನುಗಳನ್ನು ಅಮೆರಿಕಾದ ವಸಾಹತುಗಳು ಬಲವಾಗಿ ವಿರೋಧಿಸಿದವು. ಪ್ರಜಾಪ್ರತಿನಿಧಿಗಳು ಶಾಸನಸಭೆಗಳಲ್ಲಿ ತೀವ್ರವಾಗಿ ಪ್ರತಿಭಟಿಸಿದರು. ಅಮೆರಿಕಾದ ವಸಾಹತುಗಳು ಸಕ್ಕರೆ ಕಾಯಿದೆಯನ್ನು ರದ್ದು ಮಾಡುವಂತೆ ಬ್ರಿಟಿಷ್ ಸರಕಾರವನ್ನು ಒತ್ತಾಯಿಸಿದವು.

ಸ್ಟ್ಯಾಂಪ್ ಕಾಯಿದೆ

ಅತಿಹೆಚ್ಚು ಪ್ರತಿರೋಧವನ್ನು ಮತ್ತು ಸಂಘಟಿತ ಹೋರಾಟವನ್ನು ಸೃಷ್ಟಿಸಿದ ಕಾಯಿದೆಯೆಂದರೆ **ಸ್ಟ್ಯಾಂಪ್ ಕಾಯಿದೆ**. ಇದು ಬ್ರಿಟಿಷ್ ಸರಕಾರವು ಹೊಸ ವಸಾಹತು ವ್ಯವಸ್ಥೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಚಲಾವಣೆಗೆ ತಂದ ಕಾಯಿದೆಯಾಗಿತ್ತು. ಈ ಕಾಯಿದೆಯ ಪ್ರಕಾರ ಅಮೆರಿಕನ್ನರು ತೆರಿಗೆ ಸ್ಟ್ಯಾಂಪ್‌ಗಳನ್ನು ಖರೀದಿಸಿ, ವರ್ತಮಾನ ಪತ್ರಿಕೆಗಳು, ಜಾಹೀರಾತುಗಳು, ಎಲ್ಲ ರೀತಿಯ ದಾಖಲೆಗಳು, ಪರವಾನಗಿಗಳು ಮುಂತಾದವುಗಳಿಗೆ ಅಂಟಿಸಬೇಕಾಗಿತ್ತು. ಇದರಿಂದ ಬರುವ ಆದಾಯವನ್ನು ಅಮೆರಿಕಾದಲ್ಲಿ ವಸಾಹತುಗಳನ್ನು ರಕ್ಷಿಸುವ ಬ್ರಿಟಿಷ್ ಸೈನಿಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ಉಪಯೋಗಿಸಲು ನಿರ್ಧರಿಸಲಾಗಿತ್ತು. ಈ ಕಾಯಿದೆಯನ್ನು ಅಮೆರಿಕಾದ ಎಲ್ಲ ವಸಾಹತುಗಳವರು ಒಗ್ಗಟ್ಟಾಗಿ ಸೇರಿ ವಿರೋಧಿಸಿದರು. ಸಕ್ಕರೆ ಕಾಯಿದೆಗಿಂತಲೂ ಸ್ಟ್ಯಾಂಪಿನ ಕಾಯಿದೆಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಲು ಕಾರಣ ಅವರ ದೃಷ್ಟಿಯಲ್ಲಿ ಅದು ನೇರವಾದ ತೆರಿಗೆ ಹಾಗೂ ಬ್ರಿಟನ್ ತನ್ನ ಸಾಲ ತೀರಿಸಲು ಅಮೆರಿಕನ್ನರ ತಲೆಯ ಮೇಲೆ ಹೇರಿದ ಕರಭಾರವಾಗಿ ತೋರಿತು. ಆರಂಭದಲ್ಲಿ ಪಾರ್ಲಿಮೆಂಟಿಗೆ ತಮ್ಮ ವಿರೋಧ ವ್ಯಕ್ತಪಡಿಸಿ ಕೋರಿಕೆಗಳನ್ನು ಸಲ್ಲಿಸಿದರು. ಆದರೆ ಪಾರ್ಲಿಮೆಂಟ್ ತಮ್ಮ ಕೋರಿಕೆಗಳನ್ನು ಕಡೆಗಣಿಸಿದ್ದರಿಂದ ವಸಾಹತುಗಳಲ್ಲಿ ಬಲವಾದ ಪ್ರತಿಭಟನೆಗಳು ಆರಂಭವಾದವು. ಈ ಪ್ರತಿಭಟನೆಗಳ ಮುಂದಾಳತ್ವ ವಹಿಸಿದ್ದು ವರ್ಜೀನಿಯ ವಸಾಹತು. ೧೭೬೫ ರಲ್ಲಿ ಪ್ಯಾಟ್ರಿಕ್ ಹೆನ್ರಿ ವರ್ಜೀನಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ 'ವಸಾಹತು ಪ್ರಜಾಪ್ರತಿನಿಧಿ ಸಭೆ ಮಾತ್ರ ವರ್ಜೀನಿಯನ್ನರ ಮೇಲೆ ತೆರಿಗೆ ಹಾಕುವ ವಿಶಿಷ್ಟ ಮತ್ತು ಸಂಪೂರ್ಣ ಹಕ್ಕು ಪಡೆದಿದೆ; ವಸಾಹತುಗಳ ಮೇಲೆ

ತೆರಿಗೆ ಹಾಕುವ ಹಕ್ಕು ಪಾರ್ಲಿಮೆಂಟಿಗೆ ಖಂಡಿತವಾಗಿ ಇಲ್ಲ' ಎಂಬ ನಿರ್ಣಯವನ್ನು ಮಂಡಿಸಿದನು. ನಂತರ ನಡೆದ ಮೆಸಾಚ್ಯುಸೆಟ್ ಸಭೆಯಲ್ಲೂ ತೆರಿಗೆಯ ವಿರೋಧವಾಗಿ ಅನೇಕ ನಿರ್ಣಯಗಳನ್ನು ಮಂಗಿಸಲಾಯಿತು.

ಸ್ವಾತಂತ್ರ್ಯದ ಮಕ್ಕಳು ಎಂಬ ತೀವ್ರಗಾಮಿಗಳ ಸಂಘ ಹುಟ್ಟಿಕೊಂಡು ಕಾಯಿದೆಯ ವಿರುದ್ಧ ಹೋರಾಟ ಆರಂಭಿಸಿತು. ಸ್ಟಾಂಪ್ ಏಜಂಟರನ್ನು ಓಡಿಸಿದ್ದಲ್ಲದೆ, ಸ್ಟಾಂಪ್‌ಗಳನ್ನು ನಾಶಪಡಿಸಲಾಯಿತು. ಬ್ರಿಟನ್ನಿನಿಂದ ವಸ್ತುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವಂತೆ ತೀರ್ಮಾನಿಸಲಾಯಿತು. ಇದು ಇಂಗ್ಲೆಂಡಿನ ವರ್ತಕರಿಗೆ ತೀವ್ರ ನಷ್ಟವನ್ನುಂಟು ಮಾಡಿತು. ಸ್ಟಾಂಪ್ ಕಾಗದ ಕೊಂಡರೆ ಅದು ತಮ್ಮ ಸ್ವಯಂ ಆಡಳಿತದ ಹಕ್ಕನ್ನು ಬಿಟ್ಟುಕೊಟ್ಟಂತೆ ಆಗುತ್ತದೆ ಎಂದು ಅಮೆರಿಕನ್ನರು ನಂಬಿದ್ದರು. ಸ್ಟಾಂಪ್ ಕಾಯಿದೆಯು ವಸಾಹತುಗಳ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಹಾಳುಗೆಡಹುವ ಇಂಗ್ಲೆಂಡಿನ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ ಎಂದು ವಸಾಹತುಗಳ ಪ್ರತಿನಿಧಿಗಳು ಘೋಷಿಸಿ, ಪ್ರತಿಭಟನೆಯನ್ನು ಮುಂದುವರಿಸಿದರು.

ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ

ಬ್ರಿಟಿಷ್ ಪಾರ್ಲಿಮೆಂಟಿಗೆ ತಮ್ಮ ಮೇಲೆ ತೆರಿಗೆ ಹಾಕುವ ಹಕ್ಕಿದೆ ಎಂದು ಒಪ್ಪಿಕೊಳ್ಳಲು ಅಮೆರಿಕನ್ನರು ತಯಾರಿರಲಿಲ್ಲ. ನಮ್ಮ ಪ್ರತಿನಿಧಿಗಳಿಲ್ಲದ ಬ್ರಿಟಿಷ್ ಪಾರ್ಲಿಮೆಂಟಿನ ಕಾಯಿದೆಯ ಪ್ರಯೋಗ ನಮ್ಮ ಮೇಲೆ ಹೇಗೆ ಸಾಧ್ಯ ಎಂಬ ಚಿಂತನೆ ವಸಾಹತುಗಳಲ್ಲೆಲ್ಲ ಆರಂಭಗೊಂಡಿತು. **ಪ್ರಾತಿನಿಧ್ಯವಿಲ್ಲದೆ ತೆರಿಗೆ ಇಲ್ಲ** ಎಂಬುದು ಹದಿಮೂರು ವಸಾಹತುಗಳ ಹೋರಾಟದ ಘೋಷಣೆಯಾಯಿತು. ಇದರಿಂದಾಗಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿ ಅದು ಯಾವ ಗಳಿಗೆಯಲ್ಲಾದರೂ ಸ್ಫೋಟಗೊಳ್ಳಬಹುದಾಗಿತ್ತು. ವಸಾಹತುಗಳ ದೃಷ್ಟಿಯಲ್ಲಿ ಅವುಗಳ ಪ್ರತಿನಿಧಿಗಳು ಬ್ರಿಟನ್ನಿನ **ಹೌಸ್ ಆಫ್ ಕಾಮನ್ಸ್**‌ನಲ್ಲಿ ಇಲ್ಲದಿದ್ದರೆ ಪ್ರಾತಿನಿಧ್ಯ ಇಲ್ಲದಂತೆ. ಹಾಗಾಗಿ ಅವು ತಮ್ಮ ಪ್ರತಿನಿಧಿಗಳನ್ನು ಬ್ರಿಟನ್ನಿನ ಪಾರ್ಲಿಮೆಂಟಿಗೆ ಕಳುಹಿಸುವುದರಲ್ಲಿ ಉತ್ಸುಕವಾಗಿದ್ದವು. ಈ ವಾದ ಬ್ರಿಟಿಷರ 'ತಾತ್ವಿಕ ಪ್ರಾತಿನಿಧ್ಯ' ಕಲ್ಪನೆಗೆ ವಿರುದ್ಧವಾಗಿತ್ತು. ತಾತ್ವಿಕ ಪ್ರಾತಿನಿಧ್ಯದ ಪ್ರಕಾರ ಪಾರ್ಲಿಮೆಂಟಿನ ಪ್ರತಿಯೊಬ್ಬ ಸದಸ್ಯನು ಕೇವಲ ಅವನ ರಾಷ್ಟ್ರವನ್ನಲ್ಲದೆ ಇಡೀ ಸಾಮ್ರಾಜ್ಯದ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದನು. ಅಂತೆಯೇ ಆ ಸದಸ್ಯನು ವಸಾಹತುಗಳ ಹಿತಾಸಕ್ತಿಗಳನ್ನು ಕೂಡ ತಾತ್ವಿಕವಾಗಿ ಪ್ರತಿನಿಧಿಸುತ್ತಿದ್ದನು. ಅಮೆರಿಕನ್ನರಿಗೆ ಈ ತಾತ್ವಿಕ ಪ್ರಾತಿನಿಧ್ಯ ಅರ್ಥವಿಲ್ಲದ ರಾಜಕೀಯ ಪದ್ಧತಿ ಎನ್ನಿಸಿತು. ಏಕೆಂದರೆ ಅಮೆರಿಕನ್ನರಿಗೆ ಯಾವುದೇ ಸಾಮ್ರಾಜ್ಯಶಾಹಿ ಪಾರ್ಲಿಮೆಂಟು ಅಸ್ತಿತ್ವದಲ್ಲಿರಲಿಲ್ಲ. ಬ್ರಿಟಿಷ್ ಪಾರ್ಲಿಮೆಂಟಿನ ಅಧಿಕಾರ ವ್ಯಾಪ್ತಿ ಬ್ರಿಟನ್ನಿಗೆ ಮಾತ್ರ ಸೀಮಿತವಾಗಿತ್ತೇ ಹೊರತು ಅಮೆರಿಕಾಕ್ಕೆ ವಿಸ್ತರಿಸಿರಲಿಲ್ಲ. ಅಮೆರಿಕನ್ನರ ಅಭಿಪ್ರಾಯದಲ್ಲಿ, ವಸಾಹತುಗಳಿಗೆ ಹೇಗೆ ಇಂಗ್ಲೆಂಡಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸುವ ಅಧಿಕಾರವಿಲ್ಲವೋ ಹಾಗೆಯೇ

ಇಂಗ್ಲೆಂಡಿನ ಪಾರ್ಲಿಮೆಂಟಿಗೆ ವಸಾಹತುಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸುವ ಅಧಿಕಾರವಿಲ್ಲ.

ಬ್ರಿಟಿಷ್ ಸರ್ಕಾರ ವಸಾಹತುಗಳ ವಾದವನ್ನು ಒಪ್ಪಲಿಲ್ಲ. ಅವರ ಪ್ರಕಾರ ಪ್ರಾತಿನಿಧ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ ವಸಾಹತುಗಳ ಏಜೆಂಟರು ಪ್ರತಿನಿಧಿಗಳಾಗಿ ಪಾರ್ಲಿಮೆಂಟಿನಲ್ಲಿ ಭಾಗವಹಿಸುತ್ತಿದ್ದರು. ಅದಲ್ಲದೆ ವಸಾಹತುಗಳನ್ನು ಆಳುವವರು ಪಾರ್ಲಿಮೆಂಟ್ ನೇಮಿಸಿದ ಅಧಿಕಾರಿಗಳು ಹಾಗೂ ಅವು ನಡೆಯುತ್ತಿರುವುದು ಪಾರ್ಲಿಮೆಂಟ್ ಜಾರಿಗೆ ತಂದ ಕಾಯಿದೆಗಳಿಂದ. ಈ ವಾದ-ವಿವಾದಗಳು ಸಂಕೀರ್ಣ ಪರಿಸ್ಥಿತಿಯನ್ನು ಹುಟ್ಟುಹಾಕಿದವು. ಅಮೆರಿಕನ್ನರು ತೆರಿಗೆ ವಿಧಿಸುವುದನ್ನು ವಿರೋಧಿಸಿದ್ದು ಮಾತ್ರವಲ್ಲದೆ ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿದರು. ವಸಾಹತುಗಳ ಕ್ರಾಂತಿಕಾರಿ ವಾದವನ್ನು ಬ್ರಿಟಿಷ್ ಸರಕಾರ ಒಪ್ಪಲು ತಯಾರಿರಲಿಲ್ಲವಾದರೂ, ಬ್ರಿಟಿಷ್ ವಸ್ತುಗಳ ಬಹಿಷ್ಕಾರ ಅವರನ್ನು ಸ್ಟಾಂಪ್ ಕಾಯಿದೆಯನ್ನು ರದ್ದು ಮಾಡುವಂತೆ ಹಾಗೂ ಸಕ್ಕರೆ ಕಾಯಿದೆಗೆ ತಿದ್ದುಪಡಿ ತರುವಂತೆ ಮಾಡಿತು. ನಂತರ ಅಮೆರಿಕನ್ನರು ಬ್ರಿಟಿಷ್ ವಸ್ತುಗಳ ಮೇಲಿನ ಬಹಿಷ್ಕಾರವನ್ನು ರದ್ದು ಮಾಡಿದರು.

ಟೌನ್‌ಶೆಂಡ್ ಕಾಯಿದೆಗಳು

ಸ್ಟಾಂಪ್ ಕಾಯಿದೆಯನ್ನು ರದ್ದುಗೊಳಿಸಿದ ದಿನವೇ ಪಾರ್ಲಿಮೆಂಟ್ ಹಕ್ಕು ಸ್ಪಷ್ಟಪಡಿಸುವ ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾಯಿದೆ 'ವಸಾಹತುಗಳು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಧೀನವಾದವು, ಆದ್ದರಿಂದ ಪಾರ್ಲಿಮೆಂಟ್ ತನಗೆ ಇಷ್ಟ ಬಂದ ಯಾವ ಕಾಯಿದೆಯನ್ನಾದರೂ ವಸಾಹತುಗಳನ್ನು ನಿರ್ಬಂಧದಲ್ಲಿಡುವ ಸಲುವಾಗಿ ಜಾರಿಗೆ ತರಬಹುದು' ಎನ್ನುವುದನ್ನು ಸ್ಪಷ್ಟಪಡಿಸಿತು. ೧೭೬೭ ರಲ್ಲಿ ಬ್ರಿಟನ್ನಿನ ಹಣಕಾಸು ಮಂತ್ರಿ **ಚಾರ್ಲ್ಸ್ ಟೌನ್‌ಶೆಂಡ್‌**ನು ಬ್ರಿಟಿಷರ ಮೇಲೆ ತೆರಿಗೆಯನ್ನು ಕಡಿಮೆ ಮಾಡಿ, ಅಮೆರಿಕಾದ ಆಮದು ವ್ಯಾಪಾರದ ಮೇಲೆ ತೆರಿಗೆಯನ್ನು ಹೇರುವ ಕಾರ್ಯಕ್ರಮ ರೂಪಿಸಿದನು. ಅಮೆರಿಕಾದ ವಸಾಹತುಗಳು ಆಮದು ಮಾಡಿಕೊಳ್ಳುತ್ತಿದ್ದ ಗಾಜು, ಸೀಸ, ಬಣ್ಣಗಳು, ಕಾಗದ, ಟೀ ಮುಂತಾದ ವಸ್ತುಗಳ ಮೇಲೆ ತೆರಿಗೆ ಹೇರಿ, ಅವುಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸುವಂತೆ ಆದೇಶಿಸಲಾಯಿತು. ಅಮೆರಿಕಾದಲ್ಲಿ ಬ್ರಿಟಿಷ್ ಆಡಳಿತವನ್ನು ಮೇಲ್ವಿಚಾರಣೆ ಮಾಡಲು ಈ ತೆರಿಗೆಯ ಹಣವನ್ನು ಬಳಸಲು ಉದ್ದೇಶಿಸಲಾಗಿತ್ತು.

ಬ್ರಿಟಿಷ್ ಪಾರ್ಲಿಮೆಂಟಿಗೆ ವಸಾಹತುಗಳ ಮೇಲೆ ಆಂತರಿಕ ಅಥವಾ ಬಾಹ್ಯ ತೆರಿಗೆಯನ್ನು ಹಾಕುವ ಯಾವುದೇ ಹಕ್ಕಿಲ್ಲ ಎಂಬುದಾಗಿ ವಸಾಹತುಗಳು ವಾದಿಸಿದವು. ಅಮೆರಿಕನ್ ತೀವ್ರವಾದಿಗಳು ಬ್ರಿಟಿಷ್ ವಸ್ತುಗಳ ಬಹಿಷ್ಕಾರಕ್ಕೆ ಕರೆ ನೀಡಿದರು. ಬ್ರಿಟಿಷ್ ತೆರಿಗೆ ಅಧಿಕಾರಿಗಳಿಗೂ ವಸಾಹತುಗಳ ಜನರಿಗೂ ಸಂಘರ್ಷಗಳಾದವು. ಬೋಸ್ಟನ್ ಬಂದರಿನಲ್ಲಿ ಬ್ರಿಟಿಷ್ ಸೈನಿಕರಿಗೂ ವಸಾಹತುಗಳ ಹೋರಾಟಗಾರರಿಗೂ ಘರ್ಷಣೆ ನಡೆದು ಮೂವರು ಬೋಸ್ಟನ್ನರು ಕೊಲ್ಲಲ್ಪಟ್ಟರು. ಇದು ೧೭೭೦ ರ ಮಾರ್ಚ್ ತಿಂಗಳಿನಲ್ಲಿ ನಡೆಯಿತು.

ಇದನ್ನು **ಬೋಸ್ಟನ್ ಕಗ್ಗೊಲೆ** ಎಂಬುದಾಗಿ ಕರೆಯಲಾಗಿದೆ. ಈ ಘಟನೆಯನ್ನು ಅಮೆರಿಕನ್ನರು 'ಬ್ರಿಟಿಷರ ಹೃದಯಹೀನತೆ ಹಾಗೂ ನಿರಂಕುಶಾಧಿಕಾರದ ಪ್ರತೀಕ' ಎಂದು ಬಣ್ಣಿಸಿದರು.

ಅಮೆರಿಕನ್ನರ ಪ್ರತಿಭಟನೆಗೆ ಮಣಿದು ಬ್ರಿಟಿಷ್ ಪಾರ್ಲಿಮೆಂಟ್ ೧೭೭೦ ರಲ್ಲಿ ಟೌನ್‌ಶೆಂಡ್ ತೆರಿಗೆಗಳನ್ನು ಹಿಂದೆ ಗೆದ್ದುಕೊಂಡಿತು. ಆದರೆ 'ಇಂಗ್ಲಿಷ್ ಟೀ'ಯ ಮೇಲೆ ತೆರಿಗೆ ಮುಂದುವರಿಯಿತು. ಇದರಿಂದಾಗಿ ಅಮೆರಿಕನ್ನರ ಬಹಿಷ್ಕಾರವೂ ಮುಂದುವರಿಯಿತು. ಬ್ರಿಟಿಷ್ ಪಾರ್ಲಿಮೆಂಟ್ ಅಮೆರಿಕನ್ನರ ವ್ಯವಹಾರದಲ್ಲಿ ಯಾವಾಗ ಬೇಕಾದರೂ ಮಧ್ಯ ಪ್ರವೇಶ ಮಾಡುವ ಸಾಧ್ಯತೆಗಳು ಕೆಲವು ತೀವ್ರವಾದಿಗಳನ್ನು ಸಂಪೂರ್ಣ ಸ್ವಾತಂತ್ರ್ಯದತ್ತ ಯೋಚಿಸುವಂತೆ ಮಾಡಿತು. **ಸ್ಯಾಮ್ ಆಡಮ್ಸ್‌**ನ ನೇತೃತ್ವದಲ್ಲಿ ತೀವ್ರವಾದಿಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವತ್ತ ಕಾರ್ಯಪ್ರವೃತ್ತರಾದರು. ಇವರಿಗೆ ಬ್ರಿಟಿಷ್ ಸರಕಾರವೂ ಟೀ ಮೇಲಿನ ತೆರಿಗೆಯನ್ನು ರದ್ದು ಮಾಡದೇ ಇರುವುದು ಸರಿಯಾದ ವೇದಿಕೆಯನ್ನು ಕಲ್ಪಿಸಿತು.

ಬೋಸ್ಟನ್ ಟೀ ಪಾರ್ಟಿ

ಬ್ರಿಟಿಷ್ ಪಾರ್ಲಿಮೆಂಟ್ **ಈಸ್ಟ್ ಇಂಡಿಯಾ ಕಂಪನಿಗೆ** ಟೀ ವ್ಯಾಪಾರದ ಮೇಲೆ ಏಕಸ್ವಾಮ್ಯವನ್ನು ನೀಡಿತು. ಇದರಿಂದಾಗಿ ಈಸ್ಟ್ ಇಂಡಿಯಾ ಕಂಪನಿ ತನ್ನ ಏಜೆಂಟರ ಮೂಲಕ ಟೀಯನ್ನು ನೇರವಾಗಿ ಅಮೆರಿಕಾದಲ್ಲಿ ಮಾರಲು ಆರಂಭಿಸಿತು. ಇದರಿಂದ ಅಮೆರಿಕನ್ ಸಗಟು ವ್ಯಾಪಾರಿಗಳಿಗೆ ಅಪಾರ ನಷ್ಟ ಉಂಟಾಯಿತು. ಕಂಪನಿಯು ಟೀಯನ್ನು ಕಡಿಮೆ ದರಕ್ಕೆ ನೇರವಾಗಿ ಜನರಿಗೆ ಮಾರಾಟ ಮಾಡಲಾರಂಭಿಸಿದ್ದು, ಕಳ್ಳ ಸಾಗಾಣಿಕೆ ವ್ಯಾಪಾರದಲ್ಲಿ ಪಾಲುಗೊಳ್ಳುತ್ತಿದ್ದ ವ್ಯಾಪಾರಿಗಳನ್ನು ಚಿಂತೆಗೀಡುಮಾಡಿತು. ಅವರೆಲ್ಲರೂ ತೀವ್ರವಾದಿಗಳೊಂದಿಗೆ ಸೇರಿಕೊಂಡರು. ಬ್ರಿಟಿಷ್ ಸರಕಾರ ಇಂಗ್ಲಿಷ್ ಟೀ ವ್ಯಾಪಾರದ ಏಕಸ್ವಾಮ್ಯತೆಯನ್ನು ಕಂಪನಿಗೆ ನೀಡಿದ್ದನ್ನು ವಸಾಹತುಗಾರರು ಒಂದಾಗಿ ಪ್ರತಿಭಟಿಸಿದರು. **ನ್ಯೂಯಾರ್ಕ್** ಮತ್ತು **ಫಿಲಿಡೆಲ್ಫಿಯಾ**ದಲ್ಲಿ ಜನರ ಆಕ್ರೋಶ ಎಷ್ಟಿತ್ತೆಂದರೆ ಟೀ ಹೊತ್ತು ತಂದ ಹಡಗುಗಳನ್ನು ಬಂದರಿನ ಒಳಗೆ ಬಿಡದೆ ಹಿಂತಿರುಗಿ ಇಂಗ್ಲೆಂಡಿಗೆ ಹೋಗುವಂತೆ ಮಾಡಿದರು. ಎಲ್ಲ ಬಂದರುಗಳಲ್ಲಿ ಟೀ ಮೇಲಿನ ಬಹಿಷ್ಕಾರ ಮುಂದುವರಿಯಿತು. ಅದೇ ಸಂದರ್ಭದಲ್ಲಿ **ಬೋಸ್ಟನ್** ಬಂದರಿಗೆ ಟೀಯನ್ನು ಹೊತ್ತ ಹಡಗುಗಳು ಬಂದವು. ಟೀಯನ್ನು ಇಳಿಸಲು ಅಲ್ಲಿಯ ಬ್ರಿಟಿಷ್ ಗವರ್ನರ್ ಕ್ರಮ ಕೈಗೊಂಡನು. ಆದರೆ ಬೋಸ್ಟನ್‌ನಲ್ಲಿ ಪರಿಸ್ಥಿತಿ ಬೇರೆ ತೆರನಾಗಿತ್ತು.

ಬೋಸ್ಟನ್ ಪ್ರದೇಶದ ಜನ **ಆಡಮ್ಸ್‌**ನ ನಾಯಕತ್ವದಲ್ಲಿ ಹಡಗುಗಳು ತಂದ ಟೀಯನ್ನು ಹಡಗಿನಿಂದ ಇಳಿಸಿದ ಹಾಗೆ ಮಾಡಲು ತೀರ್ಮಾನಿಸಿದ್ದರು. ಟೀ ಹೊತ್ತು ತಂದ ಹಡಗುಗಳು ಲಂಗರು ಹಾಕಿ ಕಾಯುತ್ತ ನಿಂತಿದ್ದವು. **ಡಿಸೆಂಬರ್ ೧೬, ೧೭೭೩** ರ ರಾತ್ರಿ ಕೆಲವು ಅಮೆರಿಕನ್ ವಲಸೆಗಾರರು ಇಂಡಿಯನ್ನರಂತೆ ವೇಷ ಧರಿಸಿ ಹಡಗನ್ನು ಹೊಕ್ಕು ಅದರಲ್ಲಿದ್ದ ಟೀ ಪೆಟ್ಟಿಗೆಗಳನ್ನು ಹೊರಗೆ ತಂದು ಸಮುದ್ರಕ್ಕೆ ಎಸೆದರು. ಬ್ರಿಟಿಷ್ ಸರಕಾರ ಇದೊಂದು ಮಹಾ

ಅಪರಾಧ ಎಂಬುದಾಗಿ ಪರಿಗಣಿಸಿ ವಸಾಹತುಗಾರರನ್ನು ಶಿಕ್ಷಿಸಲು ಮೂರು ನಿರ್ಬಂಧಕಾರಿ ಕಾಯಿದೆಗಳನ್ನು ಜಾರಿಗೆ ತಂದಿತು. ಟೀ ನೀರಿಗೆಸೆದು ಮಾಡಿದ ನಷ್ಟವನ್ನು ಜನರು ತಮ್ಮ ಹಣದಿಂದ ತುಂಬಿಸಿಕೊಡುವವರೆಗೆ ಬೋಸ್ಟನ್ ಬಂದರನ್ನು ಎಲ್ಲ ವ್ಯಾಪಾರ ವ್ಯವಹಾರಗಳಿಗೆ ಮುಚ್ಚಲಾಗಿದೆ ಎಂದು ಪಾರ್ಲಿಮೆಂಟ್ ಪ್ರಕಟಣೆ ಮಾಡಿತು. ಗವರ್ನರನ ಅಪ್ಪಣೆಯಿಲ್ಲದೆ ಸಭೆ ಸೇರುವುದನ್ನು ನಿಷೇಧಿಸಲಾಯಿತು. ಅಮೆರಿಕನ್ನರು ಈ ಕಾಯಿದೆಗಳೆಲ್ಲವೂ ನ್ಯಾಯ ಬಾಹಿರವೆಂದು ಘೋಷಿಸಿ ಅವುಗಳನ್ನು "ಸಹಿಸಲಾಗದ ಕಾಯಿದೆಗಳು" ಎಂದು ಕರೆದರು.

ಖಂಡಾಂತರ ಕಾಂಗ್ರೆಸ್

ಬೋಸ್ಟನ್ ಟೀ ಪಾರ್ಟಿಯ ನಂತರ ನಡೆದ ವಿದ್ಯಮಾನಗಳು ಅಮೆರಿಕನ್ನರನ್ನು ಚಿಂತೆಗೀಡುಮಾಡಿದವು. ಮುಂದಿನ ಕಾರ್ಯಯೋಜನೆಯ ಕುರಿತು ಚರ್ಚಿಸಲು ವಸಾಹತುಗಳ ಪ್ರತಿನಿಧಿಗಳು **ಸೆಪ್ಟೆಂಬರ್ ೫, ೧೭೭೪** ರಲ್ಲಿ ಫಿಲಿಡೆಲ್ಫಿಯಾದಲ್ಲಿ ಭೇಟಿಯಾದರು. ಇದನ್ನು **ಮೊದಲ ಖಂಡಾಂತರ ಕಾಂಗ್ರೆಸ್** ಎಂಬುದಾಗಿ ಕರೆಯಲಾಗಿದೆ. ಈ ಕಾಂಗ್ರೆಸ್‌ನಲ್ಲಿ ವಲಸೆಗಾರರ ಜೀವನ, ಸ್ವಾತಂತ್ರ್ಯ ಹಾಗೂ ಸಂಪತ್ತಿಗೆ ಸಂಬಂಧಿಸಿದಂತೆ, ತೆರಿಗೆ, ಶಾಸನಸಭೆ ಹಾಗೂ ಆಂತರಿಕ ನೀತಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಖಂಡಾಂತರ ಸಂಘಗಳನ್ನು ರಚಿಸಿ ಇಂಗ್ಲೆಂಡಿನ ರಾಜನ ಅಧಿಕಾರದ ಸಂಕೇತಗಳನ್ನು ನಿರ್ನಾಮ ಮಾಡಲು ತೀರ್ಮಾನಿಸಲಾಯಿತು. ಜನರು ತಮ್ಮ ಹಕ್ಕುಗಳನ್ನು ರಕ್ಷಿಸಲು ಶಸ್ತ್ರ ಸನ್ನದ್ಧರಾಗಬೇಕು ಎನ್ನುವ ಸೂಚನೆಯನ್ನು ನೀಡಲಾಯಿತು. ಬ್ರಿಟನ್ನಿನೊಂದಿಗಿನ ಎಲ್ಲ ಆಮದು-ರಫ್ತು ವ್ಯಾಪಾರವನ್ನು ನಿಲ್ಲಿಸಲಾಯಿತು. ಈ ನಿಷೇಧವನ್ನು ಉಲ್ಲಂಘಿಸುವವರನ್ನು ಶಿಕ್ಷೆಗೆ ಗುರಿಪಡಿಸುವಂತೆ ಸ್ಥಳೀಯ ಸಮಿತಿಗಳನ್ನು ರಚಿಸಲಾಯಿತು. ಸೈನ್ಯವನ್ನು ಕಟ್ಟಿ, ಅದಕ್ಕೆ ಬೇಕಾದ ಸಂಗ್ರಹವನ್ನು ಮಾಡಲಾಯಿತು. ವಸಾಹತುಗಳಲ್ಲಿ ಇಷ್ಟೆಲ್ಲಾ ಬೆಳವಣಿಗೆಗಳಾಗುತ್ತಿದ್ದರೂ ಹಾಗೂ ಕ್ರಾಂತಿಯ ಕಹಳೆಯನ್ನು ಊದಿದ್ದರೂ, ಇಂಗ್ಲೆಂಡಿನ ರಾಜ **ಮೂರನೆಯ ಜಾರ್ಜ್** ತೀವ್ರವಾದಿಗಳೊಂದಿಗೆ ಯಾವುದೇ ಒಪ್ಪಂದಕ್ಕೆ, ಇಲ್ಲವೇ ಕಾಯಿದೆಗಳನ್ನು ರದ್ದುಗೊಳಿಸುವುದಕ್ಕೆ ಮನಸ್ಸು ಮಾಡಲಿಲ್ಲ. ಇದು ಯುದ್ಧಕ್ಕೆ ಎಡೆಮಾಡಿಕೊಟ್ಟಿತು.

ಹೋರಾಟದ ಆರಂಭ

ಬ್ರಿಟಿಷರು ಮತ್ತು ಅಮೆರಿಕನ್ನರು ಹೋರಾಟಕ್ಕೆ ತಯಾರಿ ನಡೆಸಿದ್ದರು. ಬ್ರಿಟಿಷ್ ಸೇನೆಯು ಏಪ್ರಿಲ್ ೧೭೭೫ ರಲ್ಲಿ **ಮೆಸಾಚುಸೆಟ್ಸ್‌ನ** ಹತ್ತಿರದ **ಲೆಕ್ಸಿಂಗ್‌ಟನ್‌ಗೆ** ದಾಳಿಯಿಟ್ಟು, ಅಮೆರಿಕನ್ ಹೋರಾಟಗಾರರ ಮೇಲೆ ಗುಂಡು ಹಾರಿಸಿತು. ಇದು 'ಜಗತ್ತಿನ ಸುತ್ತ ಕೇಳಿಸಿದ ಗುಂಡಿನೇಟು' ಎಂದು ಪ್ರಸಿದ್ಧವಾಗಿದೆ. ಇದರ ನಂತರ **ಕಾಂಕಾರ್ಡ್** ಹಳ್ಳಿಯ ಬಳಿ ಸಾಗಿದ ಬ್ರಿಟಿಷ್ ಸೇನೆಯು ಮರಳಿ ಬೋಸ್ಟನ್‌ನತ್ತ ಸಾಗುತ್ತಿದ್ದಾಗ ಅಮೆರಿಕನ್ ಕ್ರಾಂತಿಕಾರಿಗಳು ಅದರ ಮೇಲೆ ದಾಳಿ ಮಾಡಿ ತೀವ್ರ ನಷ್ಟವನ್ನುಂಟು ಮಾಡಿದರು. ಈ ದಾಳಿಯಿಂದ ಬ್ರಿಟಿಷ್ ಸೈನ್ಯ ಹಿಮ್ಮೆಟ್ಟಬೇಕಾಯಿತು. ಬೋಸ್ಟನ್ ತಲುಪುವ ವೇಳೆಗೆ

ಬ್ರಿಟಿಷರು ಸುಮಾರು ೨೫೦ ಸೈನಿಕರನ್ನು ಕಳೆದುಕೊಂಡರು. ಅಮೇರಿಕನ್ನರು ಸುಮಾರು ೯೩ ಹೋರಾಟಗಾರರನ್ನು ಕಳೆದುಕೊಂಡರು. ಎರಡೂ ಪಕ್ಷಗಳು ಸಾವು-ನೋವುಗಳನ್ನು ಅನುಭವಿಸಿದುದರ ಪರಿಣಾಮವಾಗಿ ಶಾಂತಿ ಸಂಧಾನಗಳಿಗೆ ಎಡೆಯಿಲ್ಲದಂತೆ ಯುದ್ಧ ಕೈ ಮೀರಿ ಹೋಗಿತ್ತು. ಇದೇ ವೇಳೆಗೆ ವಸಾಹತುಗಳ **ಎರಡನೆಯ ಖಂಡಾಂತರ ಕಾಂಗ್ರೆಸ್ ಮೇ ೧೦, ೧೭೭೫** ರಂದು ನಡೆದು ಬ್ರಿಟಿಷರ ವಿರುದ್ಧ ಯುದ್ಧಕ್ಕೆ ಹೋಗಲು ಅದು ನಿರ್ಧರಿಸಿತು. ಎರಡನೆಯ ಕಾಂಗ್ರೆಸ್‌ನಲ್ಲಿ ಹಾಜರಿದ್ದ ಪ್ರಮುಖ ವ್ಯಕ್ತಿಗಳೆಂದರೆ **ಥಾಮಸ್ ಜೆಫರ್‌ಸನ್, ಜಾರ್ಜ್ ವಾಷಿಂಗ್‌ಟನ್, ಬೆಂಜಮಿನ್ ಫ್ರಾಂಕ್ಲಿನ್** ಮತ್ತು **ಜಾನ್ ಹ್ಯಾನ್‌ಕಾಕ್**. ಬೋಸ್ಟನ್ ಸುತ್ತಮುತ್ತ ಚದುರಿಹೋದ ಹೋರಾಟಗಾರರನ್ನು ಕಾಂಗ್ರೆಸ್ ಒಂದುಗೂಡಿಸಿ ಖಂಡಾಂತರ ಸೈನ್ಯವನ್ನು ರಚನೆ ಮಾಡಿ **ಜಾರ್ಜ್ ವಾಷಿಂಗ್‌ಟನ್**ನನ್ನು ಅಮೆರಿಕನ್ ಸೈನ್ಯದ ದಂಡನಾಯಕನಾಗಿ ನೇಮಿಸಲಾಯಿತು.

ಜೂನ್ ೧೭, ೧೭೭೫ ರಂದು ಬ್ರಿಟಿಷ್ ಸೈನಿಕರು ಬಂಕರ್‌ಹಿಲ್ ಮತ್ತು ಬ್ರಿಡ್ಸ್‌ಹಿಲ್ ಪ್ರದೇಶಗಳನ್ನೊಳಗೊಂಡ **ಚಾರ್ಲ್ಸ್ ಟೌನ್** ಪ್ರದೇಶದ ಮೇಲೆ ದಾಳಿ ನಡೆಸಿದರು. ಇದು "ಬಂಕರ್‌ಹಿಲ್ ಕದನ" ಎಂದೇ ಕರೆಯಲ್ಪಟ್ಟಿದೆ. ಇದರಲ್ಲಿ ಬ್ರಿಟಿಷರು ಜಯ ಸಾಧಿಸಿದರೂ ಅಪಾರ ನಷ್ಟವನ್ನು ಅನುಭವಿಸಬೇಕಾಗಿ ಬಂತು. ಜಾರ್ಜ್ ವಾಷಿಂಗ್‌ಟನ್‌ನು ಡಾರ್‌ಚೆಸ್ಟರ್ ಪ್ರದೇಶವನ್ನು ಆಕ್ರಮಿಸಿಕೊಂಡು ಬೋಸ್ಟನ್ ನಗರದತ್ತ ಸಾಗಿದನು. ಇದನ್ನರಿತ ಬ್ರಿಟಿಷ್ ಜನರಲ್ **ವಿಲಿಯಂ ಹಾವಿ** ಯುದ್ಧವನ್ನು ತಪ್ಪಿಸಿ ಬೋಸ್ಟನ್ ನಗರದಿಂದ ಹೊರಟು ಹೋದನು. ಆ ದಿನವನ್ನು ಬೋಸ್ಟನ್ ನಾಗರಿಕರು **ವಿಸರ್ಜನಾ ದಿನ**ವನ್ನಾಗಿ ಆಚರಿಸಿದರು. ಯುದ್ಧಗಳು ಅಮೆರಿಕಾದ ವಿವಿಧ ಪ್ರದೇಶಗಳಲ್ಲಿ ನಿರಂತವಾಗಿ ನಡೆಯುತ್ತಲೇ ಇದ್ದವು. ಸಾವು ನೋವು ದಿನನಿತ್ಯದ ಸಂಗತಿಯಾಗಿತ್ತು. ಬ್ರಿಟಿಷರು ದಕ್ಷಿಣದ ವಸಾಹತುಗಳು ತಮ್ಮ ಪರವಾಗಿ ಇರಬಹುದೆಂದು ಊಹಿಸಿದ್ದರು. ಏಕೆಂದರೆ ಅಲ್ಲಿ ಗುಲಾಮರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ಅವರು ಸ್ವಾತಂತ್ರ್ಯದ ಪರ ಇದ್ದು ಹೋರಾಟಗಾರರೊಂದಿಗೆ ಸೇರಿಕೊಂಡರು.

ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿಯೇ **ಥಾಮಸ್ ಪೇನ್** ಎನ್ನುವ ರಾಜಕೀಯ ಸಿದ್ಧಾಂತವಾದಿ ತನ್ನ ಪುಸ್ತಕದ ಮೂಲಕ ಅಮೆರಿಕ ಸಂಪೂರ್ಣ ಸ್ವಾತಂತ್ರ್ಯ ಪಡೆಯಬೇಕೆಂದು ಕರೆಕೊಟ್ಟನು. ರಾಜಪ್ರಭುತ್ವವನ್ನು 'ಭ್ರಷ್ಟ ಸಂಸ್ಥೆ'ಯೆಂದು ಹೀಗಳೆದನು. ಇದು ಹೋರಾಟಗಾರರ ಮೇಲೆ ಪ್ರಭಾವ ಬೀರಿತು. ಯುದ್ಧ ಮುಂದುವರಿದಂತೆ, ಸ್ವಾತಂತ್ರ್ಯ ಘೋಷಣೆಯ ಕರಡನ್ನು ಸಿದ್ಧಪಡಿಸಲು ವರ್ಜೀನಿಯಾದ **ಥಾಮಸ್ ಜೆಫರ್‌ಸನ್ನ**ನ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಯಿತು. ಅದರಿಂದ ರಚಿತವಾದ ಕರಡು **ಜುಲೈ ೪, ೧೭೭೬** ರಂದು ಅಂಗೀಕರಿಸಲ್ಪಟ್ಟು, ಅದರಲ್ಲಿ ಹೊಸ ರಾಷ್ಟ್ರದ ಉದಯವನ್ನು ಸಾರಲಾಯಿತು. ಸ್ವಾತಂತ್ರ್ಯವನ್ನು ಘೋಷಿಸಿದ್ದೇನೋ ಆಯಿತು. ಆದರೆ ಅದನ್ನು ಉಳಿಸಿ ಬೆಳೆಸುವುದು ಅಷ್ಟು ಸುಲಭವಾಗಿರಲಿಲ್ಲ. ಏಕೆಂದರೆ ಬ್ರಿಟನ್ ತನ್ನ ಸೈನಿಕ ಕಾರ್ಯಾಚರಣೆಯನ್ನು ಮುಂದುವರಿಸಿತ್ತು.

ಅಂತಿಮ ಯುದ್ಧ

ಅಮೆರಿಕನ್ನರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಇಂಗ್ಲೆಂಡಿನೊಂದಿಗೆ ಅಂತಿಮ ಯುದ್ಧಕ್ಕೆ ಸಿದ್ಧರಾದರು. **ಜಾರ್ಜ್ ವಾಷಿಂಗ್‌ಟನ್** ಯುದ್ಧದ ಮುಂದಾಳತ್ವ ವಹಿಸಿದ. **ಲಾಂಗ್ ಐಲೆಂಡ್ ಕದನ**ದಲ್ಲಿ ಬ್ರಿಟಿಷ್ ಸೈನ್ಯ ವಾಷಿಂಗ್‌ಟನ್‌ನ ಸೈನ್ಯವನ್ನು ಸುತ್ತು ಹಾಕಿ ಸುಲಭವಾಗಿ ಸೋಲಿಸಿತು. ನಂತರ ನಡೆದ **ನ್ಯೂಯಾರ್ಕ್ ಕದನ**ದಲ್ಲೂ ಬ್ರಿಟಿಷರು ಮೇಲುಗೈ ಸಾಧಿಸಿದರು. ಸೋತು ಹಿಮ್ಮೆಟ್ಟಿದರೂ ವಾಷಿಂಗ್‌ಟನ್ ಎದೆಗುಂದಲಿಲ್ಲ. ಮುಂದಿನ ಯುದ್ಧಗಳಲ್ಲಿ ಜಯ ಸಾಧಿಸುವ ಉಪಾಯಗಳತ್ತ ಯೋಚಿಸಲಾರಂಭಿಸಿದ. ವಾಷಿಂಗ್‌ಟನ್‌ನಿಗೆ ಆರಂಭದಲ್ಲಿ ಸೋಲುಣಿಸಿದವ ಬ್ರಿಟಿಷ್ ಜನರಲ್ ಹಾವಿ. **ಟ್ರೆಂಟನ್** ಮತ್ತು **ಪ್ರಿನ್ಸ್‌ಟನ್**ನಲ್ಲಿ ನಡೆದ ಕದನದಲ್ಲಿ ವಾಷಿಂಗ್‌ಟನ್ ಜಯಗಳಿಸಿದನು. ಇದು ಅಮೆರಿಕನ್ನರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿತು. ಹೋರಾಟ ತೀವ್ರವಾಯಿತು. ಇಂಗ್ಲೆಂಡಿನಿಂದ ಹೆಚ್ಚಿನ ಪಡೆಗಳು ಅಮೆರಿಕಾವನ್ನು ತಲುಪಿದವು. **ಬ್ರೂಕ್ಲಿನ್** ಬಳಿ ಯುದ್ಧ ನಡೆದು ವಾಷಿಂಗ್‌ಟನ್ ಸೋತನು. ಜನರಲ್ ಹಾವಿ ಫಿಲಡೆಲ್ಫಿಯಾ ನಗರವನ್ನು ಪ್ರವೇಶಿಸಿದನು. **ಜರ್ಮನ್ ಟೌನ್** ಎಂಬಲ್ಲಿ ಜನರಲ್ **ಹಾವಿ**ಯ ಸೈನ್ಯ ವಾಷಿಂಗ್‌ಟನ್‌ನನ್ನು ಮತ್ತೆ ಸೋಲಿಸಿತು. ಆದರೆ ಅಮೆರಿಕಾದ ಸೇನಾಧಿಕಾರಿಗಳಾದ **ಹೊರೆಷಿಯೋ ಗೇಟ್ಸ್** ಮತ್ತು **ಬೆನೆಡಿಕ್ಟ್ ಆರ್ನಾಲ್ಡ್** ಬ್ರಿಟಿಷ್ ಜನರಲ್ ಬ್ರುಗೋಯ್ನನ ಸೈನ್ಯವನ್ನು ಸಾರಟೋಗ ಎಂಬಲ್ಲಿ ತಡೆದು ಸಿಲ್ಲಿಸಿ ಸೋಲಿಸಿದರು. ಬ್ರುಗೋಯ್ನ ಶರಣಾಗತನಾದನು. ಇದೇ ವೇಳೆ **ಬೆಂಜಮಿನ್ ಫ್ರಾಂಕ್ಲಿನ್** ರಾಯಭಾರದಿಂದಾಗಿ **ಫ್ರಾನ್ಸ್** ಅಮೆರಿಕಾಕ್ಕೆ ಸಹಾಯ ನೀಡಲು ಮುಂದೆ ಬಂದಿತು. **ಸ್ಪೈನ್** ಮತ್ತು **ಹಾಲೆಂಡ್**ಗಳೂ ತಮ್ಮ ಬೆಂಬಲ ನೀಡಿದವು.

ಬ್ರಿಟಿಷ್ ಪಡೆಗಳ ಶರಣಾಗತಿಯ ಬಳಿಕ ಪಾರ್ಲಿಮೆಂಟ್ ಇನ್ನು ಮುಂದೆ ವಸಾಹತುಗಳ ಮೇಲೆ ಯಾವ ತೆರಿಗೆಯನ್ನು ವಿಧಿಸುವುದಿಲ್ಲ ಎನ್ನುವ ಹೇಳಿಕೆ ಹೊರಡಿಸಿತು. ಆದರೆ ಅಮೆರಿಕನ್ನರು ಆಪಾಗಲೇ ಫ್ರೆಂಚರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಹಾಗೂ ಪಾರ್ಲಿಮೆಂಟಿನ ಹೇಳಿಕೆಗಳ ಮೇಲೆ ಭರವಸೆ ಹೊಂದಿರಲಿಲ್ಲ. ಯುದ್ಧಗಳು ಮತ್ತೆ ಮುಂದುವರಿದವು. ಬ್ರಿಟನ್ **ಕ್ಲಿನ್‌ಟನ್**ನನ್ನು ಮಹಾದಂಡನಾಯಕನಾಗಿ ನೇಮಿಸಿತು. ಆತನ ನೇತೃತ್ವದಲ್ಲಿ ಬ್ರಿಟಿಷ್ ಸೇನೆ ಜಾರ್ಜಿಯಾ, ಚಾರ್ಲ್ಸ್‌ಟನ್ ಮುಂತಾದ ಕಡೆಗಳಲ್ಲಿ ಜಯಗಳಿಸಿತು. ಈ ವಿಜಯದ ಮೇಲೆ ಜನರಲ್ ಕ್ಲಿನ್‌ಟನ್ ಜನರಲ್ **ಕಾರ್ನ್‌ವಾಲಿಸ್**‌ನ ಕೈಕೆಳಗೆ ಬ್ರಿಟಿಷ್ ಸೈನ್ಯವನ್ನು ಬಿಟ್ಟು ನ್ಯೂಯಾರ್ಕಿಗೆ ಹಿಂತಿರುಗಿದನು. ಕಾರ್ನ್‌ವಾಲಿಸ್ ತನ್ನ ಸೈನ್ಯ ಕಾರ್ಯಾಚರಣೆಯಿಂದ ಅಮೆರಿಕಾದ ದಕ್ಷಿಣ ಸೈನ್ಯಗಳ ಸೇನಾಧಿಪತಿ **ಗೇಟ್ಸ್**‌ನನ್ನು ಸೋಲಿಸಿದನು. ನಂತರ ಅಮೆರಿಕಾದ ಸೈನ್ಯದ ಮುಖಂಡತ್ವ ವಹಿಸಿದ **ನಥಾನಿಯಲ್ ಗ್ರೀನ್**‌ಗೂ ಕಾರ್ನ್‌ವಾಲಿಸ್‌ನಿಗೂ ಅನೇಕ ಯುದ್ಧಗಳು ನಡೆದವು. ಕಾರ್ನ್‌ವಾಲಿಸ್ ಆರಂಭದಲ್ಲಿ ಜಯಗಳಿಸಿದನು. ಆದರೆ ಆತನಿಗೆ ಸಮಸ್ಯೆ ಎದುರಾದದ್ದು ವಾಷಿಂಗ್‌ಟನ್‌ನನ್ನು ಎದುರಿಸಿದಾಗ. ವಾಷಿಂಗ್‌ಟನ್ ಫ್ರೆಂಚರ ನೆರವಿನೊಂದಿಗೆ ಕಾರ್ನ್‌ವಾಲಿಸ್‌ನನ್ನು ಎದುರಿಸಿ,

ಸೋಲಿಸಿದನು. ಅಕ್ಟೋಬರ್ ೧೯, ೧೭೮೧ ರಂದು ಯಾರ್ಕ್‌ಟೌನ್‌ನಲ್ಲಿ ಕಾರ್ನ್‌ವಾಲಿಸ್ ಶರಣಾಗತನಾದನು. ಆತನ ಶರಣಾಗತಿಯೊಂದಿಗೆ ಯುದ್ಧವೂ ಕೊನೆಗೊಂಡಿತು.

ಪ್ಯಾರಿಸ್ ಶಾಂತಿ ಒಪ್ಪಂದ

ಫೆಬ್ರವರಿ ೨೭, ೧೭೮೨ ರಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅಮೆರಿಕಾದಲ್ಲಿ ಯುದ್ಧ ಮುಂದುವರಿಸಕೂಡದು ಎನ್ನುವ ಮಸೂದೆಯನ್ನು ಬಹುಮತದಿಂದ ಅಂಗೀಕರಿಸಲಾಯಿತು. **ಸೆಪ್ಟೆಂಬರ್ ೩, ೧೭೮೩** ರಲ್ಲಿ **ಪ್ಯಾರಿಸ್ ಶಾಂತಿ ಒಪ್ಪಂದಕ್ಕೆ** ಸಹಿ ಹಾಕಲಾಯಿತು. ಮೊದಲೆ ಒಪ್ಪಂದ ಮಾಡಿಕೊಂಡಂತೆ ಬ್ರಿಟನ್ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ‘ಸ್ವತಂತ್ರ ರಾಷ್ಟ್ರ’ವೆಂದು ಅಂಗೀಕರಿಸಿತು. ಬ್ರಿಟನ್ ಅಮೆರಿಕಾದಲ್ಲಿ ಇದುವರೆಗೆ ತನ್ನ ಆಡಳಿತದ ಹತೋಟಿಯಲ್ಲಿದ್ದ ಹದಿಮೂರು ವಸಾಹತುಗಳ ಸ್ವಾತಂತ್ರ್ಯ, ಹಕ್ಕುಗಳು ಹಾಗೂ ಸಾರ್ವ ಭೌಮತ್ವವನ್ನು ಒಪ್ಪಿಕೊಂಡಿತು. ಅಮೆರಿಕಾ ಸ್ವತಂತ್ರಗೊಂಡ ಮೇಲೆ ಅಲ್ಲಿನ ಹದಿಮೂರು ವಸಾಹತುಗಳನ್ನು ಒಂದು ರಾಷ್ಟ್ರವಾಗಿ ಒಗ್ಗೂಡಿಸುವ ಬೃಹತ್ ಕಾರ್ಯ ವಸಾಹತುಗಳ ಮುಖಂಡರ ಮುಂದಿತ್ತು.

ರಾಜ್ಯಾಂಗದ ರಚನೆ

ಅಮೆರಿಕಾ ಸ್ವತಂತ್ರಗೊಂಡ ಮೇಲೆ ರಾಜ್ಯಾಂಗದ ರಚನೆ ಪ್ರಮುಖ ಸವಾಲಿನ ಕೆಲಸ ವಾಗಿತ್ತು. ಸಂಯುಕ್ತ ಸಂಸ್ಥಾನಗಳು ಒಂದು ಸಂಘವಾಗಿತ್ತೇ ವಿನಹ ಸರಕಾರವಾಗಿರಲಿಲ್ಲ. ಕೇಂದ್ರ ಸರಕಾರಕ್ಕೆ ಬದಲಾಗಿ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನು ಪಡೆದಿತ್ತು. ಆದರೆ ಸಂಯುಕ್ತ ಸಂಸ್ಥಾನಗಳಿಗೆ ಸರಕಾರಕ್ಕೆ ಇರಬೇಕಾದ ಅಧಿಕಾರ ಇರಲಿಲ್ಲ. ಹಾಗಾಗಿ ವಿದೇಶಿ ವ್ಯವಹಾರ ಮತ್ತು ದೇಶದ ಹಲವಾರು ಸಮಸ್ಯೆಗಳನ್ನು ಪರಿಹರಿಸುವಲ್ಲಿ ತೀವ್ರ ಕಷ್ಟವನ್ನು ಅನುಭವಿಸಬೇಕಾಗಿ ಬಂತು. ಇದನ್ನು ತಪ್ಪಿಸುವುದಕ್ಕೋಸ್ಕರ ಹೊಸ ರಾಜ್ಯಾಂಗ (ಸಂವಿಧಾನ)ವೊಂದನ್ನು ರಚಿಸುವತ್ತ ಕ್ರಮ ಕೈಗೊಳ್ಳಲಾಯಿತು. ೧೭೮೭ ರಲ್ಲಿ **ಫಿಲಡೆಲ್ಫಿಯಾ ಸ್ಟೇಟ್ ಹೌಸ್‌**ನಲ್ಲಿ ಜಾರ್ಜ್ ವಾಷಿಂಗ್‌ಟನ್‌ನ ನೇತೃತ್ವದಲ್ಲಿ **ಫೆಡರಲ್ ಸಮ್ಮೇ**ಳನವು ನಡೆಯಿತು. ರಾಜ್ಯಾಡಳಿತ, ಸಂವಿಧಾನಾತ್ಮಕ ಕ್ರಾಂತಿ ಇತ್ಯಾದಿಗಳಲ್ಲಿ ಪಳಗಿದ ಅನುಭವಿ ರಾಜಕೀಯ ತಜ್ಞರು ಅಲ್ಲಿ ಸೇರಿದ್ದರು. ಪ್ರತಿನಿಧಿಗಳು ಸೆಪ್ಟೆಂಬರ್ ೧೭, ೧೭೮೭ ರಂದು ಸಂವಿಧಾನದ ಅಂತಿಮ ಕರಡಿಗೆ ಸಹಿ ಮಾಡಿದರು. ಪ್ರಪಂಚದಲ್ಲೇ ಮೊಟ್ಟ ಮೊದಲ ಬಾರಿಗೆ ಲಿಖಿತ ರೂಪದ ರಾಜ್ಯಾಂಗವನ್ನು ಪಡೆದ ದೇಶ ಅಮೆರಿಕಾ ಆಯಿತು. ೧೭೮೯ ರಲ್ಲಿ **ವಾಷಿಂಗ್‌ಟನ್‌**ನನ್ನು ಅಮೆರಿಕಾದ **ಮೊದಲನೆಯ ಅಧ್ಯಕ್ಷ**ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ೧೭೮೯ ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಮೊದಲ ಸಂವಿಧಾನದ ಬಗೆಗಿನ ಕಾಂಗ್ರೆಸ್‌ನಲ್ಲಿ ವೈಯಕ್ತಿಕ ಹಕ್ಕುಗಳ ಬಗ್ಗೆ ಹತ್ತು ತಿದ್ದುಪಡಿಗಳನ್ನು ತಂದು ಅವುಗಳನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾಯಿತು. ಈ

ತಿದ್ದುಪಡಿಗಳನ್ನು ಒಟ್ಟಾಗಿ **ಬಿಲ್ ಆಫ್ ರೈಟ್ಸ್** ಅಥವಾ **ಹಕ್ಕುಗಳ ಶಾಸನ** ಎಂದು ಕರೆಯಲಾಗಿದೆ.

ಹೋರಾಟದ ಪರಿಣಾಮಗಳು

ಯುದ್ಧದ ಪರಿಣಾಮವಾಗಿ ಅಮೆರಿಕಾದ ವಸಾಹತುಗಳು ಸಂಯುಕ್ತ ಸಂಸ್ಥಾನಗಳಾಗಿ ಮಾರ್ಪಾಡು ಹೊಂದಿದವು. ಹದಿಮೂರು ವಸಾಹತುಗಳು ಸ್ವಾತಂತ್ರ್ಯವನ್ನು ಗಳಿಸಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳೆಂಬ ಹೆಸರಿನಲ್ಲಿ ಹೊಸ ದೇಶವೊಂದು ತಲೆಯೆತ್ತಿತು. ಲಿಖಿತವಾದ ಸಂವಿಧಾನವನ್ನು ವಿಶ್ವದಲ್ಲಿಯೇ ಮೊಟ್ಟಮೊದಲಿಗೆ ಅಮೆರಿಕಾದಲ್ಲಿ ಜಾರಿಗೊಳಿಸಲಾಯಿತು. ಜಗತ್ತಿನ ಇನ್ನಿತರ ಕಡೆಗಳಲ್ಲಿ ಸ್ಥಾಪನೆಯಾದ ಸಂವಿಧಾನಾತ್ಮಕ ಸರಕಾರಗಳಿಗೆ ಇದು ಪ್ರೇರಣೆಯನ್ನು ನೀಡಿತು. ಫ್ರಾನ್ಸಿನ ಜನತೆ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಟ ನಡೆಸುವುದಕ್ಕೆ ಇದು ಕಾರಣವಾಯಿತು. ಅಮೆರಿಕನ್ನರಿಗೆ ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ನೀಡಿ, ಅವುಗಳಿಗೆ ಎಂದೂ ತೊಂದರೆಯಾಗದಂತೆ ಸಂವಿಧಾನಾತ್ಮಕ ರಕ್ಷಣೆಯನ್ನು ನೀಡಿತು. ಸ್ವಾತಂತ್ರ್ಯ ಹೋರಾಟವು ಅಮೆರಿಕಾದ ವಸಾಹತುಗಳನ್ನು ಒಂದು ಸ್ವತಂತ್ರ ವಾದ ಪ್ರಜಾಪ್ರಭುತ್ವವಾಗಿ ಮಾರ್ಪಾಡು ಮಾಡಿದ್ದೇ ಅಲ್ಲದೆ ಸಮಾಜ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿತು. ಎಲ್ಲರೂ ಸಮಾನರು ಹಾಗೂ ಎಲ್ಲರಿಗೂ ಪ್ರಾತಿನಿಧ್ಯ ಸಿಗಬೇಕೆನ್ನುವುದು ಕ್ರಾಂತಿಯ ಮೂಲತತ್ವವಾಗಿತ್ತು. ಕೆಲವರಿಗಷ್ಟೇ ಮೀಸಲಾಗಿದ್ದ ಅವಕಾಶಗಳು ಸಾಮಾನ್ಯ ಪ್ರಜೆಗಳಿಗೂ ದೊರಕುವಂತಾಯಿತು.

ಭೂಸ್ವಾಮ್ಯದ ಬಗ್ಗೆ ಹಲವಾರು ಪ್ರಮುಖ ಬದಲಾವಣೆಗಳು ಉಂಟಾದವು. ವಸಾಹತುಗಳ ಪಶ್ಚಿಮಕ್ಕಿರುವ ಪ್ರದೇಶಗಳು ಹಾಗೂ ಬ್ರಿಟಿಷರ ಅಧೀನದಲ್ಲಿದ್ದ ಭೂಮಿಯ ಒಡೆತನ ಹೊಸ ರಾಷ್ಟ್ರದ ಅಧೀನಕ್ಕೆ ಬಂದವು. ಜನರು ಸುಲಭವಾಗಿ ಭೂಮಿಯನ್ನು ಪಡೆದು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ತೊಡಗಿಕೊಳ್ಳುವಂತಾಯಿತು.

ಧರ್ಮವನ್ನು ರಾಜಕೀಯದಿಂದ ದೂರ ಇಡುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪ್ರತಿಯೊಂದು ಸಂಸ್ಥಾನದಲ್ಲೂ ಅದರದ್ದೇ ಆದ ಧಾರ್ಮಿಕಾಚರಣೆಗಳಿದ್ದವು. ಸ್ವಾತಂತ್ರ್ಯ ಗಳಿಸಿದ ಮೇಲೆ ಧರ್ಮವನ್ನು ಅವರವರ ವೈಯಕ್ತಿಕ ಆಚರಣೆಗೆ ಬಿಟ್ಟು ರಾಷ್ಟ್ರೀಯ ಧಾರ್ಮಿಕ ನೀತಿಯನ್ನು ಜಾರಿಗೊಳಿಸಲಾಯಿತು. ಮತ-ಧರ್ಮ ಸಂಸ್ಥೆಗಳು ತಮ್ಮ ಯುರೋಪಿನ ಸಂಬಂಧವನ್ನು ಕಳೆದುಕೊಂಡವು. ಎಲ್ಲ ಕ್ಷೇತ್ರದಲ್ಲೂ **ಅಮೆರಿಕನತ್ವ** ಅಥವಾ **ಅಮೆರಿಕೀಕರಣ** ವನ್ನು ಬೆಳೆಸುವ ಪ್ರಯತ್ನ ಮಾಡಲಾಯಿತು.

ಯುದ್ಧಾನಂತರ ಅಮೆರಿಕಾದಲ್ಲಿ ಎಷ್ಟೆಲ್ಲಾ ಬದಲಾವಣೆಗಳಾದರೂ ಗುಲಾಮರ ಸಮಸ್ಯೆಗೆ ಪರಿಹಾರ ದೊರೆಯದೆ ಉಳಿಯಿತು. ಸ್ವಾತಂತ್ರ್ಯ, ಸಮಾನತೆ, ಪ್ರಾತಿನಿಧ್ಯ ಮುಂತಾದ ತತ್ವಗಳ ಅಡಿಯಲ್ಲಿ ರೂಪುಗೊಂಡ ಅಮೆರಿಕಾದಲ್ಲಿ ಗುಲಾಮಗಿರಿ ಐತಿಹಾಸಿಕ ವಿಪರ್ಯಾಸ

ವಾಗಿ ತೋರಿತು. ತಾವು ಹಕ್ಕುಗಳನ್ನು ಪಡೆದುಕೊಂಡು ಗುಲಾಮರಿಗೆ ಹಕ್ಕುಗಳನ್ನು ನೀಡದಿರುವುದು ಹೋರಾಟದ ಕಪ್ಪುಚುಕ್ಕೆಯಾಗಿ ಕಂಡುಬಂತು. ದಕ್ಷಿಣ ಕೆರೊಲಿನ ಮತ್ತು ಜಾರ್ಜಿಯ ಗುಲಾಮರಿಗೆ ಹಕ್ಕುಗಳನ್ನು ನೀಡುವುದನ್ನು ವಿರೋಧಿಸಿದವು. ಏಕೆಂದರೆ ಅಲ್ಲಿನ ಭೂಮಾಲೀಕರಿಗೆ ಗುಲಾಮರ ಅಗತ್ಯವಿತ್ತು. ಗುಲಾಮರು ಸ್ವತಂತ್ರಗೊಂಡರೆ ಭೂ ಮಾಲೀಕರಿಗೆ ಉಳಿಗಾಲವಿರಲಿಲ್ಲ. ಅವರ ಆರ್ಥಿಕ ಭದ್ರತೆಗೆ ಗುಲಾಮರು ಅಗತ್ಯವಾಗಿದ್ದರು. ಹೀಗಾಗಿ ಅದೊಂದು ಸಮಸ್ಯೆಯಾಗಿಯೇ ಮುಂದುವರೆಯಿತು. ತಾವು ಮಾಡುತ್ತಿರುವುದು ತಪ್ಪು ಎಂದು ತಿಳಿದಿದ್ದರೂ ಗುಲಾಮಗಿರಿಯನ್ನು ಮುಂದುವರಿಸಿಕೊಂಡು ಹೋಗುವಂಥ ಸಂದಿಗ್ಧ ಪರಿಸ್ಥಿತಿಗೆ ಸಂವಿಧಾನವನ್ನು ರಚಿಸಿದ ಮುಖಂಡರೂ ಸಹ ಒಳಗಾಗಿದ್ದರು.

೨.೨ ಫ್ರಾನ್ಸಿನ ಕ್ರಾಂತಿ

ಫ್ರಾನ್ಸಿನಲ್ಲಿ ೧೭೮೯ ರಲ್ಲಿ ನಡೆದ ಕ್ರಾಂತಿ ಹಳೆಯ ಆಳ್ವಿಕೆಯನ್ನು ಕೊನೆಗೊಳಿಸಿ ಮಾನವೀಯ ಮೌಲ್ಯಗಳು ಜಾರಿಗೊಳ್ಳುವಂತೆ ಮಾಡಿತು. ಅದೊಂದು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕಾಗಿ ನಡೆದ ಕ್ರಾಂತಿಯಾಗಿತ್ತು. ಕ್ರಾಂತಿಯ ಮೂಲಕ ಬದಲಾವಣೆಯನ್ನು ಕಂಡುಕೊಂಡ ಫ್ರಾನ್ಸಿನ ಜನತೆ ಶೋಷಣೆ ಮತ್ತು ಪರಾಧೀನತೆಯಿಂದ ನೊಂದಿದ್ದ ಜನರಿಗೆ ಅದರಿಂದ ಹೊರಬರಲು ಮಾರ್ಗೋಪಾಯಗಳನ್ನು ಸಾರಿ ಹೇಳಿತು. ಈ ನಿಟ್ಟಿನಲ್ಲಿ ಫ್ರಾನ್ಸಿನ ಕ್ರಾಂತಿ ಪ್ರಪಂಚದ ಇತಿಹಾಸದಲ್ಲಿಯೇ ಮಹತ್ವಪೂರ್ಣ ಘಟನೆಯೆನಿಸಿದೆ. ಅದು ಫ್ರಾನ್ಸಿನಲ್ಲಿ ನಡೆದರೂ ಫ್ರಾನ್ಸಿಗಷ್ಟೇ ಸೀಮಿತವಾಗಿರಲಿಲ್ಲ. ನಿರಂಕುಶ ಪ್ರಭುತ್ವವನ್ನು ವಿರೋಧಿಸುವ ಹಾಗೂ ಪ್ರಜಾಪ್ರಭುತ್ವ ಮಾದರಿಯ ಸರಕಾರವನ್ನು ಬಯಸುವ ಪ್ರತಿಯೊಬ್ಬರಿಗೂ ಅದು ದಾರಿದೀಪವಾಯಿತು. ಫ್ರಾನ್ಸಿನ ಕ್ರಾಂತಿ ಆರಂಭವಾದಂದಿನಿಂದ ಯುರೋಪಿನ ಚರಿತ್ರೆಯು ಒಂದು ದೇಶದ, ಒಂದು ಘಟನೆಯ ಮತ್ತು ಒಬ್ಬ ವ್ಯಕ್ತಿಯ ಚರಿತ್ರೆಯಾಗಿ ಮಾರ್ಪಾಡು ಹೊಂದಿತು ಎನ್ನುವ ಮಾತಿದೆ. ಇಲ್ಲಿ ಒಂದು ದೇಶವೆಂದರೆ ಅದು ಫ್ರಾನ್ಸ್, ಒಂದು ಘಟನೆಯೆಂದರೆ ಅದು ಫ್ರಾನ್ಸಿನ ಕ್ರಾಂತಿ, ಒಬ್ಬ ವ್ಯಕ್ತಿಯೆಂದರೆ ಅವನು ನೆಪೋಲಿಯನ್ ಬೋನಾಪಾರ್ಟ. ಇದು ಫ್ರಾನ್ಸಿನಲ್ಲಿ ಜರುಗಿದ ಕ್ರಾಂತಿ ಮತ್ತು ಅದರ ಪರಿಣಾಮಗಳ ಮಹತ್ವವನ್ನು ತಿಳಿಸುತ್ತದೆ.

ಕಾರಣಗಳು

ಫ್ರಾನ್ಸಿನಲ್ಲಿ ನಡೆದ ಕ್ರಾಂತಿಗೆ ಕಾರಣಗಳು ಹಲವಾರು. ಅವುಗಳಲ್ಲಿ ಮುಖ್ಯವಾದವು ಗಳೆಂದರೆ, ಬೂರ್ಬನ್ ರಾಜವಂಶದ ನಿರಂಕುಶಾಡಳಿತ, ಮೂರು ವರ್ಗಗಳಾಗಿ ವಿಭಜನೆ ಗೊಂಡಿದ್ದ ಸಮಾಜ, ಆರ್ಥಿಕ ದಿವಾಳಿತನ, ತತ್ವಜ್ಞಾನಿಗಳ ಚಿಂತನೆಗಳು ಹಾಗೂ ಅಮೆರಿಕಾ ದಲ್ಲಿ ನಡೆದ ಕ್ರಾಂತಿಯ ಪ್ರಭಾವ. ಇವೆಲ್ಲವೂ ಫ್ರಾನ್ಸಿನಲ್ಲಿ ಹೊಸ ಬಗೆಯ ಕ್ರಾಂತಿಯೊಂದು ನಡೆಯುವುದಕ್ಕೆ ಕಾರಣವಾದವು. ಈ ಬಗೆಯ ಕ್ರಾಂತಿಯೊಂದು ನಡೆಯುವುದಕ್ಕೆ ಕಾರಣ ವಾದವು. ಈ ಕ್ರಾಂತಿಯನ್ನು ರಾಜಕೀಯ ಕ್ರಾಂತಿ, ಸಾಮಾಜಿಕ ಕ್ರಾಂತಿ, ಶ್ರೀಮಂತವರ್ಗದ ಕ್ರಾಂತಿ, ಮಧ್ಯಮವರ್ಗದ ಕ್ರಾಂತಿ, ಸಾಮಾನ್ಯವರ್ಗದ ಕ್ರಾಂತಿ, ಪ್ರಜಾಪ್ರಭುತ್ವವಾದಿ ಕ್ರಾಂತಿ ಮುಂತಾದ ಬೇರೆ ಬೇರೆ ಸೈದ್ಧಾಂತಿಕ ಚೌಕಟ್ಟುಗಳ ಹಿನ್ನೆಲೆಯಲ್ಲೂ ವ್ಯಾಖ್ಯಾನಿಸಲಾಗಿದೆ. ಇದಕ್ಕೆ ಫ್ರಾನ್ಸಿನ ಕ್ರಾಂತಿ ಪಡೆದುಕೊಂಡ ವಿವಿಧ ಆಯಾಮಗಳೇ ಕಾರಣಗಳಾಗಿವೆ. ಫ್ರಾನ್ಸಿನ ಕ್ರಾಂತಿಗೆ ಕಾರಣವಾದ ಅಂಶಗಳನ್ನು ಕುರಿತು ಹೀಗೆ ಪರಿಶೀಲಿಸಬಹುದು.

೧. ರಾಜಕೀಯ ಕಾರಣಗಳು

ಫ್ರಾನ್ಸನ್ನು ಆಳುತ್ತಿದ್ದ ಬೂರ್ಬನ್ ವಂಶದ ಅರಸರ ಆಳ್ವಿಕೆ ಕ್ರಾಂತಿಗೆ ಮೂಲ ಕಾರಣ ವಾಯಿತು. ಬೂರ್ಬನ್ ವಂಶದ ಅರಸರು ರಾಜಾಧಿಕಾರವನ್ನು ದೈವದತ್ತವಾದುದೆಂದು ತಿಳಿದಿದ್ದರು. ಫ್ರಾನ್ಸಿನಲ್ಲಿ ಶ್ರೀಮಂತರು ಊಳಿಗಮಾನ್ಯ ವ್ಯವಸ್ಥೆಯ ಮಾದರಿಯಲ್ಲಿಯೇ

ಅನೇಕ ವಿಶೇಷ ಹಕ್ಕು ಮತ್ತು ರಿಯಾಯಿತಿಗಳನ್ನು ಹೊಂದಿದ್ದರು. ಫ್ರಾನ್ಸಿನಲ್ಲಿ ಎ ಸ್ಟೇಟ್ಸ್ ಜನರಲ್ ಎಂಬ ಪಾರ್ಲಿಮೆಂಟ್ ಇದ್ದರೂ ಅದಕ್ಕೆ ಅರಸನನ್ನು ನಿಯಂತ್ರಿಸುವ ಅಧಿಕಾರ ವಿರಲಿಲ್ಲ. ಅದು ಹಲವಾರು ವರುಷಗಳಿಂದಲೂ ಸಮಾವೇಶಗೊಂಡಿರಲಿಲ್ಲ. ನಿರಂಕುಶಾಡಳಿತದ ವಿರುದ್ಧ ಯಾರೂ ಮಾತನಾಡುವಂತಿರಲಿಲ್ಲ. ದರ್ಪಿಷ್ಟ ಪ್ರಭುಗಳ ನುಡಿಯೇ ಕಾನೂನಾಗಿತ್ತು. ಈ ಹಳೆಯ ಆಡಳಿತ ವ್ಯವಸ್ಥೆ ಫ್ರಾನ್ಸಿನ ಜನತೆಯನ್ನು ತನ್ನ ದುರಾಡಳಿತದ ಸಂಕೋಲೆಯಲ್ಲಿ ಬಂಧಿಸಿತ್ತು.

ಫ್ರಾನ್ಸಿನ ಅರಸರು ತಾವು 'ದೇವಾಂಶ ಸಂಭೂತ'ರೆಂದೂ 'ತಾವು ದೇವರಿಗಲ್ಲದೆ ಬೇರೆ ಯಾರಿಗೂ ಹೊಣೆಗಾರರಲ್ಲ'ವೆಂದೂ ನಂಬಿದ್ದರು. ರಾಜನೆ ಕಾನೂನು ರೂಪಿಸುವ, ತೆರಿಗೆಗಳನ್ನು ಹೇರುವ, ಯುದ್ಧ ಸಾರುವ ಹಾಗೂ ಒಪ್ಪಂದ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿದ್ದನು. ಫ್ರಾನ್ಸಿನ ದೊರೆಯಾದ ೧೪ ನೆಯ ಲೂಯಿಯು 'ನಾನೇ ರಾಜ್ಯ, ರಾಜ್ಯವೇ ನಾನು' ಎಂಬುದಾಗಿ ಘೋಷಿಸಿಕೊಂಡಿದ್ದ. ೧೪ ನೆಯ ಲೂಯಿಯು ತನ್ನ ದೀರ್ಘಾವಧಿಯ ಆಳ್ವಿಕೆಯಲ್ಲಿ ಪ್ರಾಂತ್ಯ ವಿಸ್ತರಣೆಗೆ ಮತ್ತು ಆಸ್ಥಾನ ವೆಚ್ಚಕ್ಕೆ ಮಾಡಿದ ದುಂದುವೆಚ್ಚವು ಫ್ರಾನ್ಸಿನ ಅರ್ಥ ವ್ಯವಸ್ಥೆಯನ್ನು ಹಾಳುಗೆಡವಿತು. ದುಂದುವೆಚ್ಚಕ್ಕೆ ಬೇಕಾದ ಹಣವನ್ನು ರೈತರು, ವರ್ತಕರು ಮುಂತಾದ ಜನರಿಂದ ಸಂಗ್ರಹಿಸಿ ಅವರನ್ನು ನಿರ್ಗತಿಕರನ್ನಾಗಿ ಮಾಡ ಲಾಯಿತು. ಅವನ ಉತ್ತರಾಧಿಕಾರಿಯಾಗಿ ಬಂದ ೧೫ ನೆಯ ಲೂಯಿಯು ರಾಜ್ಯವನ್ನು ಇನ್ನಷ್ಟು ದುಸ್ಥಿತಿಗೀಡುಮಾಡಿದನು. ಆತನು ತನ್ನ ರಾಣಿ ಪಾಂಪೆಡೋರಳ ಮತ್ತು ಆಸ್ಥಾನಿಕರ ಕೈಗೊಂಬೆಯಾಗಿದ್ದನು. ಇವನ ಆಳ್ವಿಕೆಯಲ್ಲಿ ಆಡಳಿತಾಧಿಕಾರವು ಸ್ವಾರ್ಥಿಗಳಾದ ಆಸ್ಥಾನಿಕರ ಕೈ ಸೇರಿ ಆಡಳಿತದಲ್ಲಿ ಭ್ರಷ್ಟಾಚಾರ, ದಬ್ಬಾಳಿಕೆ ಹೆಚ್ಚಿದವು. ರಾಜನು ತನ್ನ ಮುದ್ರೆ ಇರುವ ಅಧಿಕಾರದ ಆಜ್ಞಾಪತ್ರಗಳನ್ನು ಆಸ್ಥಾನಿಕರಿಗೆ ನೀಡಿದ್ದನು. ಆಸ್ಥಾನಿಕರು ಆಜ್ಞಾಪತ್ರಗಳನ್ನು ತಮ್ಮ ವಿರೋಧಿಗಳನ್ನು ನಿರ್ಮೂಲ ಮಾಡಲು ಬಳಸಿಕೊಂಡರು. ೧೫ ನೆಯ ಲೂಯಿಯ ಆಳ್ವಿಕೆಯ ಅವಧಿಯಲ್ಲಿ ನಡೆದ 'ಸಪ್ತ ವಾರ್ಷಿಕ ಯುದ್ಧ'ದಲ್ಲಿ ಫ್ರಾನ್ಸ್ ಬಹಳಷ್ಟು ವಸಾಹತುಗಳನ್ನು ಕಳೆದುಕೊಂಡು ಆರ್ಥಿಕವಾಗಿ ಕ್ಷೀಣಿಸತೊಡಗಿತು. ಇವನ ನಂತರ ಅಧಿಕಾರಕ್ಕೆ ಬಂದ ೧೬ ನೆಯ ಲೂಯಿ ಫ್ರಾನ್ಸ್‌ನ್ನು ಸಂಕಷ್ಟದಿಂದ ಪಾರು ಮಾಡಲು ಪ್ರಯತ್ನಿಸಿದನಾದರೂ, ಅವನಿಗೆ ಅರಸನಿಗೆ ಬೇಕಾದ ಧೈರ್ಯ ಸ್ಥೈರ್ಯಗಳಿರಲಿಲ್ಲ. ಆತ ದುರ್ಬಲ ವ್ಯಕ್ತಿಯಾಗಿದ್ದ. ೧೬ ನೆಯ ಲೂಯಿಯು ತನ್ನ ಹೆಂಡತಿ ಮೇರಿ ಆಂಟೋಯಿನೆಟ್‌ಳ ದುರ್ಬೋಧನೆಗೆ ಒಳಗಾದ. ಅವಳ ಸೌಂದರ್ಯಕ್ಕೆ ಮಾರು ಹೋದ ೧೬ ನೆಯ ಲೂಯಿ ಫ್ರಾನ್ಸ್‌ನ ಜನತೆಯನ್ನು ಮರೆತುಬಿಟ್ಟ. ಮೇರಿ ಆಂಟೋಯಿನೆಟ್‌ಳು ಆಸ್ಟ್ರಿಯಾದ ರಾಜ ಕುಮಾರಿಯಾಗಿದ್ದು, ಆಸ್ಟ್ರಿಯಾ ಫ್ರಾನ್ಸಿನ ವೈರಿ ದೇಶವಾಗಿತ್ತು. ಇದು ಫ್ರಾನ್ಸಿನ ಜನತೆ ಈ ವಿವಾಹವನ್ನೇ ವಿರೋಧಿಸುವಂತಾಯಿತು. ಅವಳು ವಿದೇಶಿಯಳು ಎಂಬ ತೀಕ್ಷ್ಣ ಟೀಕೆಗೆ ಗುರಿಯಾಗಿದ್ದಳು.

ಫ್ರಾನ್ಸಿನ **ಲೂಯಿ ದೊರೆಗಳು** ವಿಲಾಸ ವೈಭವಗಳಿಂದ ಕೂಡಿದ್ದ ಅರಮನೆಯನ್ನು ಪ್ಯಾರಿಸ್‌ಗೆ ಹನ್ನೆರಡು ಮೈಲಿ ದೂರದ **ವರ್ಸೇಲ್ಸ್**‌ನಲ್ಲಿ ನಿರ್ಮಿಸಿಕೊಂಡಿದ್ದರು. ಅರಸರು ತಮ್ಮ ರಾಜಪರಿವಾರದೊಡನೆ ಅಲ್ಲಿ ವೈಭವದ ಜೀವನ ನಡೆಸುತ್ತಿದ್ದರು. ಫ್ರಾನ್ಸಿನ ಕ್ರಾಂತಿಯ ವೇಳೆಗ ಪ್ರತಿವರ್ಷ ಅರಮನೆಯಲ್ಲಿ ದುಂದುವೆಚ್ಚದಿಂದ ವ್ಯಯವಾಗುತ್ತಿದ್ದ ಹಣ ೨೦೮ ದಶಲಕ್ಷ ಡಾಲರ್‌ಗಳಷ್ಟಾಗಿದ್ದಿತು. ಫ್ರಾನ್ಸಿನ ಜನತೆ ಈ ಅರಮನೆಯನ್ನು ಫ್ರಾನ್ಸಿನ ಸಮಾಧಿ ಎಂಬುದಾಗಿ ಕರೆಯುತ್ತಿದ್ದರು. ಹೀಗೆ ರಾಜ್ಯ ಬೊಕ್ಕಸ ಬರಿದಾಗಿ ಭಾರೀ ಆರ್ಥಿಕ ಮುಗ್ಗಟ್ಟು ತಲೆದೋರಿ ಜನತೆ ಅರಸತ್ವದ ಬಗ್ಗೆಯೇ ಬೇಸರಗೊಂಡು, ಹಳೆಯ ಆಡಳಿತ ವ್ಯವಸ್ಥೆಯನ್ನು ಕಿತ್ತೊಗೆಯುತ್ತ ಚಿಂತಿಸತೊಡಗಿದರು.

೨. ಸಾಮಾಜಿಕ ಕಾರಣಗಳು

ಫ್ರಾನ್ಸಿನಲ್ಲಿ ಸಾಮಾಜಿಕ ಅಸಮಾನತೆ ತನ್ನ ಪರಾಕಾಷ್ಠೆಯನ್ನು ಮುಟ್ಟಿತ್ತು. ಫ್ರಾನ್ಸಿನ ಸಮಾಜ ಮೂರು ವರ್ಗಗಳಾಗಿ ವಿಂಗಡಣೆಯಾಗಿತ್ತು. ಅವುಗಳೆಂದರೆ **ಪಾದ್ರಿಗಳು, ಶ್ರೀಮಂತರು** ಮತ್ತು **ಸಾಮಾನ್ಯ ವರ್ಗ**. ಪಾದ್ರಿಗಳು ಮತ್ತು ಶ್ರೀಮಂತರು ಮೇಲ್ವರ್ಗದವರಾಗಿದ್ದು ರಾಜ್ಯದ ಆಡಳಿತದಲ್ಲಿ ಮತ್ತು ಚರ್ಚ್‌ನಲ್ಲಿ ವಿಶೇಷ ಹಕ್ಕು ಬಾಧ್ಯತೆಗಳನ್ನು ಹೊಂದಿದ್ದರು. ಇವರು ಫ್ರಾನ್ಸ್‌ನ ಒಟ್ಟು ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರಾಗಿದ್ದರೂ ಸಮಾಜದ ಉನ್ನತ ಹುದ್ದೆ ಮತ್ತು ಅಧಿಕಾರಗಳು ಅವರ ಪಾಲಾಗಿದ್ದವು. ಇವರು ತೆರಿಗೆಗಳಿಂದ ವಿನಾಯಿತಿಯನ್ನು ಹೊಂದಿದ್ದರು. ಇದರಿಂದಾಗಿ ತೆರಿಗೆಯ ಹೊರೆ ಸಾಮಾನ್ಯ ವರ್ಗದ ಜನರ ಹೆಗಲ ಮೇಲೆ ಬೀಳುವಂತಾಯಿತು. **ಎಚ್.ಎ.ಎಲ್. ಫಿಷರ್** ಅವರ ಪ್ರಕಾರ, "ಈ ಎರಡೂ ವರ್ಗಗಳು ದೇಶದ ಯಾವುದೇ ಕರ್ತವ್ಯವನ್ನು ನಿರ್ವಹಿಸದೆ ಸುಖವನ್ನನುಭವಿಸುತ್ತಾ ಸಮಾಜಕ್ಕೆ ಮತ್ತು ದೇಶಕ್ಕೆ ಹೊರೆಯಾಗಿದ್ದರು. ಅವರು ತಮಗೆ ಬರಬೇಕಾಗಿದ್ದ ಜಹಗೀರು ತೆರಿಗೆಯನ್ನು ವಸೂಲಿ ಮಾಡಿಕೊಂಡು, ಬಲಾತ್ಕಾರದ ಬಿಟ್ಟಿ ಸೇವೆಯನ್ನು ಪಡೆದುಕೊಂಡು ಯಾವುದೇ ಜವಾಬ್ದಾರಿಯುತವಾದ ಕೆಲಸ ಕಾರ್ಯಗಳನ್ನು ಮಾಡದೆ ಕಾಲಕಳೆಯುತ್ತಿದ್ದರು". 'ಶ್ರೀಮಂತರು ಕಾದಾಡುತ್ತಾರೆ, ಪಾದ್ರಿಗಳು ಪ್ರಾರ್ಥನೆ ಮಾಡುತ್ತಾರೆ, ಜನರು ತೆರಿಗೆ ನೀಡುತ್ತಾರೆ' ಎನ್ನುವುದು ಫ್ರಾನ್ಸ್‌ನಲ್ಲಿ ಪ್ರಚಲಿತವಾಗಿದ್ದ ಉಕ್ತಿಯಾಗಿತ್ತು.

ಪಾದ್ರಿ ವರ್ಗವು ರೋಮನ್ ಕ್ಯಾಥೋಲಿಕ್ ಚರ್ಚಿಗೆ ಸಂಬಂಧಿಸಿದ್ದು, ಅತ್ಯುಚ್ಚವಾದ ವರ್ಗವಾಗಿದ್ದಿತು. ಫ್ರಾನ್ಸಿನ ಒಟ್ಟು ಭೂಮಿಯಲ್ಲಿ ಎರಡು ಪಾಲು ಭೂಮಿ ಇವರ ಅಧೀನದಲ್ಲಿತ್ತು. ಪಾದ್ರಿಗಳು ಚರ್ಚಿನ ಆದಾಯವನ್ನು ತಮ್ಮ ವೈಭವದ ಜೀವನಕ್ಕೆ ಬಳಸುತ್ತಿದ್ದರು. ಚರ್ಚಿನ ಆದಾಯಕ್ಕೆ ಸರಕಾರವು ಯಾವುದೇ ತೆರಿಗೆ ವಿಧಿಸುತ್ತಿರಲಿಲ್ಲ. ಶ್ರೀಮಂತರು ಅಥವಾ **ನೋಬಲ್ ವರ್ಗ** ಪಾದ್ರಿಗಳಂತೆ ಸವಲತ್ತುಗಳನ್ನು ಹೊಂದಿದ್ದರು. ಅಧಿಕಾರವನ್ನೂ ಹೊಂದಿದ್ದ ಇವರು ರೈತರನ್ನು ಶೋಷಣೆ ಮಾಡುತ್ತಿದ್ದರು. ಇವರಿಗೆ ಬೇಟೆಯ ಹಕ್ಕಿನ ಏಕಸ್ವಾಮ್ಯವು ಲಭಿಸಿತ್ತು. ಇದರಿಂದ ರೈತರ ಬೆಳೆಗಳು ಹಾಳಾಗುತ್ತಿದ್ದವು. ಈ ಹಕ್ಕಿನ ವಿರುದ್ಧ ಸಾರ್ವತ್ರಿಕವಾಗಿ ಜನರು ನೋಬಲ್ ವರ್ಗವನ್ನು ವಿರೋಧಿಸಿದರು.

ಪಾದ್ರಿಗಳು ಮತ್ತು ನೋಬಲ್ ವರ್ಗವನ್ನು ಬಿಟ್ಟು ಇನ್ನುಳಿದವರು ಸಾಮಾನ್ಯ ವರ್ಗದವರಾಗಿದ್ದರು. ಫ್ರಾನ್ಸ್‌ನ ಶೇಕಡಾ ೯೯ ರಷ್ಟು ಭಾಗ ಜನತೆಯನ್ನು ಸಾಮಾನ್ಯ ವರ್ಗವು ಒಳಗೊಂಡಿತ್ತು. ಈ ವರ್ಗಕ್ಕೆ ಮಧ್ಯಮ ವರ್ಗದವರು, ಕುಶಲಕರ್ಮಿಗಳು ಹಾಗೂ ರೈತರು ಸೇರಿದ್ದರು. ಇವರಲ್ಲಿ ರೈತರ ಸ್ಥಿತಿ ಇನ್ನುಳಿದವರಿಗಿಂತ ಶೋಚನೀಯವಾಗಿತ್ತು. ಇವರು ಎಲ್ಲಾ ರೀತಿಯ ಕೆಲಸಗಳನ್ನು ಮಾಡಬೇಕಾಗಿತ್ತು. ಹಾಗೂ ಎಲ್ಲ ಬಗೆಯ ತೆರಿಗೆಯನ್ನು ಸಲ್ಲಿಸಬೇಕಿತ್ತು. ಇವರು ಬದಲಾವಣೆಗಾಗಿ ಹಾತೊರೆಯುತ್ತಿದ್ದರು. ಅಸಮಾನ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಇವರು ಹೋರಾಟ ಆರಂಭಿಸಿ, ಕ್ರಾಂತಿಯುದ್ದಕ್ಕೂ ಅದನ್ನು ಮುಂದುವರಿಸಿದರು. ಈ ಕಾರಣದಿಂದಾಗಿ ಫ್ರಾನ್ಸಿನ ಕ್ರಾಂತಿಯನ್ನು **ರೈತರ ಹೋರಾಟ** ಎಂಬುದಾಗಿಯೂ ಕರೆಯಲಾಗಿದೆ.

೩. ಆರ್ಥಿಕ ಕಾರಣಗಳು

ಆರ್ಥಿಕ ದಿವಾಳಿತನ ಫ್ರಾನ್ಸಿನ ಜನತೆಯನ್ನು ಅಲ್ಲಿನ ಅರಸರ ವಿರುದ್ಧ ಹೋರಾಟ ಮಾಡುವಂತೆ ಮಾಡಿತು. ೧೪ ನೆಯ ಲೂಯಿ ನಡೆಸಿದ ಅಧಿಕ ವೆಚ್ಚದ ಯುದ್ಧಗಳು, ೧೫ ನೆಯ ಲೂಯಿಯ ಅರಮನೆಯ ವೈಭವ ಮತ್ತು ಅವನ ರಾಣಿಯರ ದುಂದುವೆಚ್ಚ, 'ಸಪ್ತವಾರ್ಷಿಕ ಯುದ್ಧ'ದಲ್ಲಿ ಫ್ರಾನ್ಸ್‌ಗಾದ ನಷ್ಟ, ೧೬ ನೆಯ ಲೂಯಿ ಮತ್ತು ಆತನ ರಾಣಿಯ ವಿಲಾಸದ ಜೀವನ ಮುಂತಾದವು ಫ್ರಾನ್ಸಿನ ಬೊಕ್ಕಸವನ್ನು ಬರಿದಾಗಿಸಿತು. ಅಮೆರಿಕಾ ಸ್ವಾತಂತ್ರ್ಯ ಹೋರಾಟದಲ್ಲಿ ಫ್ರಾನ್ಸ್ ಇಂಗ್ಲೆಂಡ್ ವಿರುದ್ಧ ಅಮೆರಿಕಾಕ್ಕೆ ಸಹಾಯ ಮಾಡಿತು. ಆದರೆ ಇದು ಫ್ರಾನ್ಸ್‌ನ ಆರ್ಥಿಕ ಸ್ಥಿತಿಯನ್ನೇ ಅಲುಗಾಡಿಸಿತು.

ಫ್ರಾನ್ಸಿನಲ್ಲಿ ಜಾರಿಯಲ್ಲಿದ್ದ ತೆರಿಗೆ ನೀತಿ ಆರ್ಥಿಕ ದುಸ್ಥಿತಿಗೆ ಇನ್ನೊಂದು ಕಾರಣವಾಯಿತು. ಪಾದ್ರಿಗಳು ಮತ್ತು ನೋಬಲ್ ವರ್ಗದವರು ಅಪಾರ ಸಂಪತ್ತನ್ನು ಹೊಂದಿದ್ದರೂ ಅವರು ರಾಜ್ಯದ ಬೊಕ್ಕಸಕ್ಕೆ ಏನೂ ನೀಡುತ್ತಿರಲಿಲ್ಲ. ಸಾಮಾನ್ಯ ವರ್ಗದ ಮೇಲೆ ಅಧಿಕ ತೆರಿಗೆ ಬಿತ್ತು. ತೆರಿಗೆಯ ಹೊರೆಯನ್ನು ತಾಳಲಾರದೆ ಜನ ತತ್ತರಿಸುವಂತಾಯಿತು. ಫಲವತ್ತಾದ ಭೂಮಿಯಿದ್ದರೂ ಉತ್ಪಾದನಾ ಯೋಜನೆಗಳಿಗೆ ಹಣ ತೊಡಗಿಸಲು ರಾಜ್ಯದಲ್ಲಿ ಹಣವಿರಲಿಲ್ಲ. ಕೈಗಾರಿಕೆ ಮತ್ತು ವ್ಯಾಪಾರ-ವಾಣಿಜ್ಯ ಕ್ಷೇತ್ರಗಳು ಹಿಂದುಳಿದವು. ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ೧೬ ನೆಯ ಲೂಯಿಯು ಹಣಕಾಸಿನ ಮಂತ್ರಿಗಳನ್ನು ನೇಮಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಇವೆಲ್ಲವೂ ಫ್ರಾನ್ಸ್‌ನ ಕ್ರಾಂತಿಗೆ ದಾರಿ ಮಾಡಿಕೊಟ್ಟವು.

೪. ತತ್ವಜ್ಞಾನಿಗಳ ಪ್ರಭಾವ

ಫ್ರೆಂಚ್ ತತ್ವಜ್ಞಾನಿಗಳು ತಮ್ಮ ಚಿಂತನೆಗಳ ಮೂಲಕ ಮನುಷ್ಯನ ಘನತೆ, ಗೌರವ ಮತ್ತು ಹಕ್ಕುಗಳಿಗೆ ಹೊಸ ಆಯಾಮವನ್ನು ಕೊಟ್ಟರು. **ಮಾಂಟೆಸ್ಕ್ಯೂ, ವಾಲ್ಟೇರ್** ಮತ್ತು **ರೂಸೋ** ತಮ್ಮ ಸಿದ್ಧಾಂತಗಳ ಮೂಲಕ ಅರಿವಿನ ಯುಗವೊಂದನ್ನು ಹುಟ್ಟುಹಾಕಿದರು.

ಫ್ರಾನ್ಸ್ ದೇಶದ ಈ ತತ್ವಜ್ಞಾನಿಗಳ ಬರವಣಿಗೆಗಳು ಕೇವಲ ಆ ದೇಶದ ಜನರ ಮನಸ್ಸಿನ ಮೇಲಷ್ಟೇ ಅಲ್ಲದೆ ಯುರೋಪಿನ ಇತರ ದೇಶಗಳ ಜನರ ಮೇಲೂ ಪ್ರಭಾವವನ್ನು ಬೀರಿದವು. ಇವರ ಸಿದ್ಧಾಂತಗಳನ್ನು ಓದಿದ ಪರಿಣಾಮವಾಗಿ ಫ್ರಾನ್ಸಿನಲ್ಲಿ ಕ್ರಾಂತಿಯ ಅಲೆಗಳು ಕಾಣಿಸಿಕೊಳ್ಳಲಾರಂಭಿಸಿದವು. ನಿರಂಕುಶಾಡಳಿತ ಹಳೆಯ ಆಡಳಿತ ವ್ಯವಸ್ಥೆ, ಸಾಮಾಜಿಕ ಅಸಮಾನತೆ ಮುಂತಾದ ಪಿಡುಗುಗಳ ವಿರುದ್ಧ ಧ್ವನಿ ಎತ್ತಲು ಇವರ ಚಿಂತನೆಗಳು ಜನರಿಗೆ ನೆರವಾದವು. ಪ್ರಜ್ಞಾವಂತ ರಾಜರುಗಳು ತತ್ವಜ್ಞಾನಿಗಳ ಪ್ರಭಾವಕ್ಕೆ ಒಳಗಾದರೂ, ತಮ್ಮ ಅಧಿಕಾರಶಾಹಿ ಧೋರಣೆಗಳಿಂದ ಹೊರಬರಲು ವಿಫಲರಾಗಿ ಜನರ ಒಲವನ್ನು ಕಳೆದು ಕೊಂಡರು. ಫ್ರಾನ್ಸ್ ಕ್ರಾಂತಿಯು **ಸ್ವಾತಂತ್ರ್ಯ, ಸಮಾನತೆ** ಮತ್ತು **ಭ್ರಾತೃತ್ವ** ಸಿದ್ಧಾಂತಗಳಿಗೆ ಬದ್ಧವಾಗಿದ್ದು, ಫ್ರಾನ್ಸ್‌ನ ಜನರ ದೇಶಾಭಿಮಾನವನ್ನು ಕೆರಳಿಸಿ ಬೂರ್ಬನ್ ಆಡಳಿತವನ್ನು ಬೇರು ಸಹಿತ ಕಿತ್ತುಹಾಕುವಂತೆ ಮಾಡಿತು. ತತ್ವಜ್ಞಾನಿಗಳು ಹೊಸ ರಾಜಕೀಯ ಮತ್ತು ಸಮಾಜದ ನಿರ್ಮಾಣಕ್ಕೆ ಕರೆಕೊಟ್ಟರು.

ಮೊಂಟೆಸ್ಕ್ಯೂ

ಮೊಂಟೆಸ್ಕ್ಯೂ ಒಬ್ಬ ಪ್ರಭಾವಶಾಲಿ ತತ್ವಜ್ಞಾನಿಯಾಗಿದ್ದು ಬ್ರಿಟಿಷ್ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಯಿಂದ ಪ್ರಭಾವಿತನಾಗಿದ್ದ. ಬ್ರಿಟನ್ ಮಾದರಿಯ ಸಂವಿಧಾನಾತ್ಮಕ ವ್ಯವಸ್ಥೆ ಫ್ರಾನ್ಸ್ ದೇಶದಲ್ಲೂ ಅಸ್ತಿತ್ವಕ್ಕೆ ಬರಬೇಕೆಂಬುದು ಅವನ ಉದ್ದೇಶವಾಗಿತ್ತು. ಮೊಂಟೆಸ್ಕ್ಯೂನ **ಸ್ಪಿರಿಟ್ ಆಫ್ ಲಾಸ್** ಕೃತಿ ರಾಜಕೀಯ ವಿಚಾರ, ವಿವಿಧ ಬಗೆಯ ಸರಕಾರಗಳ ವೈಶಿಷ್ಟ್ಯ ಮತ್ತು ಗುಣದೋಷಗಳ ವಿಮರ್ಶಾತ್ಮಕ ಅಧ್ಯಯನ, ಅಧಿಕಾರದ ವಿಭಜನೆಯ ಮಹತ್ವ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಚರ್ಚಿಸಿತು. ಫ್ರಾನ್ಸಿಗೆ ಸಂವಿಧಾನಬದ್ಧ ರಾಜಪ್ರಭುತ್ವದ ಅಗತ್ಯವಿದೆ ಎನ್ನುವುದನ್ನು ಸಾರಿ ಮಾಂಟೆಸ್ಕ್ಯೂ ಹೇಳಿದ. ರಾಜ್ಯಾಡಳಿತದ ಮೂರು ಅಂಗಗಳಾದ **ಕಾರ್ಯಾಂಗ, ಶಾಸಕಾಂಗ** ಮತ್ತು **ನ್ಯಾಯಾಂಗ**ಗಳು ಸ್ವತಂತ್ರ ವಾಗಿರಬೇಕು. ಅವುಗಳನ್ನು ಬೇರ್ಪಡಿಸುವುದು ಅವಶ್ಯಕ ಎಂದು ವಾದಿಸಿದ. ಸರಕಾರದ ಪ್ರತಿಯೊಂದು ಅಂಗವೂ ಮತ್ತೊಂದು ಅಂಗದಿಂದ ಸ್ವತಂತ್ರವಾಗಿರಬೇಕು ಮತ್ತು ಹಾಗಿದ್ದಾಗ ಮಾತ್ರ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ ಎಂಬುದಾಗಿ ಮೊಂಟೆಸ್ಕ್ಯೂ ಅಭಿಪ್ರಾಯಪಟ್ಟ.

ವಾಲ್ಟೇರ್

ವಾಲ್ಟೇರ್ ಫ್ರಾನ್ಸ್ ದೇಶದ ಮತ್ತೊಬ್ಬ ಖ್ಯಾತ ತತ್ವಜ್ಞಾನಿ. ಅವನು ಪಾದ್ರಿಗಳು ನಡೆಸುವ ಅವ್ಯವಹಾರಗಳ ಮತ್ತು ರಾಜನ ದೈವದತ್ತವಾದ ಅಧಿಕಾರಗಳ ವಿರೋಧಿಯಾಗಿದ್ದ. ಇದರಿಂದಾಗಿ ಸರಕಾರ ಮತ್ತು ಚರ್ಚಿನ ವಿರೋಧವನ್ನು ಕಟ್ಟಿಕೊಂಡನು. ಇವನು ತನ್ನ ಬರಹಗಳಲ್ಲಿ ಧಾರ್ಮಿಕ ಸಹನೆ ಮತ್ತು ಆರ್ಥಿಕ ಭದ್ರತೆಗೆ ಪ್ರಾಮುಖ್ಯತೆಯನ್ನು ನೀಡಿದನು. ಸ್ವಾತಂತ್ರ್ಯದಲ್ಲಿ ನಂಬಿಕೆ ಇಡದಿರುವುದು ಮಾನವ ಸಮಾಜದ ಎಲ್ಲ ಸಂಬಂಧವನ್ನು ನಾಶ ಮಾಡಿದಂತೆ ಎನ್ನುವುದು ಅವನ ಅಭಿಪ್ರಾಯವಾಗಿತ್ತು. ವಾಲ್ಟೇರ್ ರಾಜಪ್ರಭುತ್ವದ

ವಿರೋಧಿಯಾಗಿರಲಿಲ್ಲ. ಅವನ ಪ್ರಕಾರ ರಾಜತ್ವವು ಪ್ರಗತಿಪರವಾಗಿರಬೇಕು ಹಾಗೂ ಅದು ಕಲ್ಯಾಣಕಾರಕವಾಗಿರಬೇಕು. ಅಧಿಕಾರಶಾಹಿ ರಾಜತ್ವವನ್ನು ವಾಲ್ಟೇರ್ ವಿರೋಧಿಸಿದನು. ಅವನು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರಲಿಲ್ಲ. ಅವನ ಮಾತಿನಲ್ಲಿಯೇ ಹೇಳುವುದಾದರೆ "ನಾನು ಒಂದು ಸಿಂಹದ ಅಧಿಕಾರದ ಕೆಳಗೆ ಇರಲು ಬಯಸುತ್ತೇನೆ ವಿನಹ ನೂರು ಇಲಿಗಳು ಮಾಡುವ ಅಧಿಕಾರದ ಕೆಳಗೆ ಅಲ್ಲ". ವಾಲ್ಟೇರ್‌ನ ಪ್ರಕಾರ ಅರಸರು ಪ್ರಜೆಗಳ ಪ್ರಗತಿಯ ಕುರಿತು ಚಿಂತಿಸಬೇಕು ಹಾಗೂ ತಾವು ಪ್ರಗತಿಪರರಾಗಿರಬೇಕು.

ರೂಸೋ

ರೂಸೋನನ್ನು **ಫ್ರಾನ್ಸಿನ ಕ್ರಾಂತಿಯ ಪ್ರವಾದಿ** ಎಂದೂ ಕರೆಯುವುದುಂಟು. ಆತನೊಬ್ಬ ಕ್ರಾಂತಿಕಾರಿ ತತ್ವಜ್ಞಾನಿಯಾಗಿದ್ದು ಫ್ರಾನ್ಸ್ ದೇಶದ ಸಮಕಾಲೀನ ರಾಜಕೀಯ ವ್ಯವಸ್ಥೆಗೆ ಹೊಸ ರೂಪವನ್ನು ಕೊಡಲು ಪ್ರಯತ್ನಿಸಿದ. **ಮನುಷ್ಯರು ಮುಕ್ತರಾಗಿ ಜನಿಸಿದರೂ, ಬೆಳೆದಂತೆ ಸರಪಳಿಯಿಂದ ಬಂಧಿತರಾಗುತ್ತಾರೆ** ಎಂದು ತಿಳಿಸಿ, ಅದಕ್ಕೆ ಫ್ರಾನ್ಸ್‌ನ ಅರಸರ ಆಳ್ವಿಕೆ ಹೇಗೆ ಕಾರಣವಾಯಿತು ಎನ್ನುವುದನ್ನು ತಿಳಿಸಿದ. 'ರಾಜ್ಯದ ಪರಮಾಧಿಕಾರವು ಜನರ ಅಪೇಕ್ಷೆಯಂತಿರಬೇಕೇ ಹೊರತು ದೈವದತ್ತವಾದ ಅಧಿಕಾರದಿಂದಲ್ಲ' ಎಂದು ಪ್ರಚಾರ ಮಾಡಿದ. ಕ್ರಾಂತಿಕಾರದ ಪ್ರಸಿದ್ಧ ಘೋಷಣೆಯಾದ **ಸ್ವಾತಂತ್ರ್ಯ, ಸಮಾನತೆ** ಮತ್ತು **ಭ್ರಾತೃತ್ವ**ಗಳನ್ನು ಪರಿಚಯಿಸಿದವನು ರೂಸೋ.

'ಸಾಮಾಜಿಕ ಒಪ್ಪಂದ' (**ಸೋಶಿಯಲ್ ಕಾಂಟ್ರಾಕ್ಟ್**) ಕೃತಿಯು ರೂಸೋನ ಪ್ರಸಿದ್ಧ ಕೃತಿಯಾಗಿದ್ದು, ಆತನ ವಿಚಾರಧಾರೆಗಳೆಲ್ಲವನ್ನೂ ಒಳಗೊಂಡಿದೆ. ಆದ್ದರಿಂದ ಅದನ್ನು **ಫ್ರಾನ್ಸಿನ ಕ್ರಾಂತಿಯ ಬೈಬಲ್** ಎಂದೇ ಕರೆಯಲಾಗಿದೆ. ಸಮಾಜವು 'ಸಾಮಾಜಿಕ ಒಪ್ಪಂದ'ದ ತಳಹದಿಯ ಮೇಲೆ ನಿಂತಿದೆ ಎಂದು ರೂಸೋ ಭಾವಿಸಿದ್ದನು. ಜನರು ಹಿಂದೆಯೇ ತಮ್ಮ ಪ್ರಾಣ ಮತ್ತು ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಒಂದು ಸರಕಾರವನ್ನು ರಚಿಸಿಕೊಂಡು ಒಪ್ಪಂದವೊಂದಕ್ಕೆ ಬಂದಿದ್ದರು. ಆದರೆ ಈಗಿರುವ ಒಪ್ಪಂದ ಅಪ್ರಮಾಣಿಕವಾಗಿದ್ದು, ಅದು ಮೂಲ ಒಪ್ಪಂದಕ್ಕೆ ವಿರುದ್ಧವಾಗಿದೆ ಎಂಬುದಾಗಿ ತಿಳಿಸಿದನು. ಸರಕಾರವು ಪ್ರಜೆಗಳ ಒಪ್ಪಿಗೆಯ ಆಧಾರದ ಮೇಲೆ ನಿಂತಿರಬೇಕು, ಜನತೆಯೇ ನೇರವಾಗಿ ಸರಕಾರದಲ್ಲಿ ಭಾಗವಹಿಸುವಂತಿರಬೇಕು, ಬಹುಸಂಖ್ಯಾತ ಜನರನ್ನು ಪ್ರತಿನಿಧಿಸುವ ಸರಕಾರವಿರಬೇಕೆಂದು ರೂಸೋ ಭಾವಿಸಿದ್ದನು. ರೂಸೋ **ಪ್ರಜಾಪ್ರಭುತ್ವದ ಆರಾಧಕನಾಗಿದ್ದು** ನೇರ ಪ್ರಜಾಪ್ರಭುತ್ವವನ್ನು ಬಯಸಿದ್ದನು. ಫ್ರಾನ್ಸ್‌ನ ಜನರು ರೂಸೋನ ತತ್ವಗಳಿಂದ ಪ್ರಭಾವಿತರಾಗಿ ೧೬ ನೆಯ ಲೂಯಿಯ ಆಳ್ವಿಕೆಯ ವಿರುದ್ಧ ಹೋರಾಟ ನಡೆಸಿ ಜನಸಾಮಾನ್ಯರ ಹಕ್ಕುಗಳನ್ನು ಪ್ರತಿಪಾದಿಸುವ ಹೊಸ ಸಂವಿಧಾನ ಮತ್ತು ಸರಕಾರದ ರಚನೆಯಲ್ಲಿ ತೊಡಗಿದರು.

ಫ್ರಾನ್ಸಿನಲ್ಲಿ ಈ ಮೇಲಿನ ಮೂವರು ಚಿಂತಕರಲ್ಲದೆ ಇನ್ನೂ ಅನೇಕರು ತಮ್ಮ ಚಿಂತನೆಗಳ ಮೂಲಕ ಕ್ರಾಂತಿಗೆ ನೆರವಾದರು. ಅವರಲ್ಲಿ ಡಿಡಿರೋ ಪ್ರಮುಖನು. ಅವನು **ಆಲಂಬರ್ಟ್**ನ

ಜೊತೆಯಲ್ಲಿ ಸಂಪಾದಿಸಿದ ವಿಶ್ವಕೋಶ ಫ್ರಾನ್ಸಿನ ಸ್ಥಿತಿಗತಿಗಳ ಕುರಿತು ಚರ್ಚಿಸಿತು. ಫಿಸಿಯಾಕ್ರಾಟರೆಂಬ ಆರ್ಥಿಕ ಚಿಂತಕರ ತಂಡವೊಂದು ಕ್ವೆಸ್ನೆ ಎನ್ನುವವನ ನಾಯಕತ್ವದಲ್ಲಿ ಫ್ರಾನ್ಸಿನ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ನಡೆಸಿತು. ಇವರು ಫ್ರಾನ್ಸಿನಲ್ಲಿದ್ದ ತೆರಿಗೆ ನೀತಿಯನ್ನು ಕಟುವಾಗಿ ವಿರೋಧಿಸಿದರು. ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸಬೇಕೆಂದು ಸಲಹೆ ನೀಡಿದರು. ಇವರ ಚಿಂತನೆಗಳು ಫ್ರಾನ್ಸಿನಲ್ಲಿ ಕ್ರಾಂತಿಯ ಅಲೆಗಳು ಕಾಣಿಸಿಕೊಳ್ಳುವುದಕ್ಕೆ ಕಾರಣವಾದವು.

೫. ಅಮೆರಿಕಾ ಕ್ರಾಂತಿಯ ಪ್ರಭಾವ

ಅಮೆರಿಕಾದ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ಆರಂಭಿಸಿದ ಹೋರಾಟಕ್ಕೆ ಫ್ರೆಂಚರು ತಮ್ಮ ಸಹಾಯವನ್ನು ನೀಡಿದರು. ಫ್ರಾನ್ಸ್ ಅಮೆರಿಕಾಕ್ಕೆ ಸಹಾಯ ನೀಡಿದ್ದು ಬ್ರಿಟಿಷರ ವಿರುದ್ಧವಾಗಿ. ಅಮೆರಿಕಾದ ಕ್ರಾಂತಿಯ ಪರಿಣಾಮವಾಗಿ ಫ್ರೆಂಚರು ತಮ್ಮ ದೊರೆಯ ನಿರಂಕುಶಾಡಳಿತ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧ ಹೋರಾಟ ಮಾಡಲು ನಿರ್ಧರಿಸಿದರು. ಅಮೆರಿಕನ್ನರು ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಸಾಧಿಸಿದ ಜಯ ಫ್ರೆಂಚ್ ಜನತೆಗೆ ಸ್ಫೂರ್ತಿ ನೀಡಿತು.

ಕ್ರಾಂತಿಯ ಆರಂಭ ಮತ್ತು ವಿವಿಧ ಹಂತಗಳು

ಫ್ರಾನ್ಸಿನ ಆರ್ಥಿಕ ಬಿಕ್ಕಟ್ಟು ತಾರಕಕ್ಕೇರಿದ್ದರಿಂದ ಫ್ರಾನ್ಸಿನ ಜನತೆಯ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಲು **೧೭೮೯ ಮೇ ತಿಂಗಳ ೫** ರಂದು ಸ್ಟೇಟ್ಸ್ ಜನರಲ್ ಸಭೆಯನ್ನು ಕರೆಯಲು **೧೬ ನೆಯ ಲೂಯಿಯು** ತೀರ್ಮಾನಿಸಿದನು. ಅದರಂತೆ ಹೊಸ ಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು ೧೭೮೯ ರಲ್ಲಿ ಚುನಾವಣೆಗಳನ್ನು ನಡೆಸಲು ಆಜ್ಞೆ ಹೊರಡಿಸಲಾಯಿತು. ೧೭೫ ವರ್ಷಗಳಿಂದ ಕರೆಯದಿದ್ದ ಈ ಸಭೆಯನ್ನು ೧೭೮೯ ರಲ್ಲಿ ವರ್ಸೇಲ್ಸ್‌ನಲ್ಲಿ ಕರೆಯಲಾಯಿತು. ಇದು ಕ್ರಾಂತಿಯ ಆರಂಭವನ್ನು ಸೂಚಿಸಿತು. ಮೊದಲು ಸ್ಟೇಟ್ಸ್ ಜನರಲ್‌ನ ಸಭೆಯನ್ನು ಮೂರು ವರ್ಗಗಳು ಪ್ರತ್ಯೇಕವಾಗಿ ಸೇರುತ್ತಿದ್ದವು. ಆದರೆ ಈಗ ಹೊಸದಾಗಿ ಸಭೆ ಸೇರುವಾಗ ಎಲ್ಲರೂ ಒಂದೆಡೆ ಸೇರುವಂತೆ ತೀರ್ಮಾನಿಸಲಾಯಿತಾದರೂ, ಮೊದಲೆರಡು ವರ್ಗಗಳಾದ ಪಾದ್ರಿಗಳು ಮತ್ತು ನೋಬಲ್ಲರು ಅದನ್ನು ವಿರೋಧಿಸಿದರು. ಹಾಗಾಗಿ ಮೂರನೆಯ ವರ್ಗವಾದ ಸಾಮಾನ್ಯರು ಮಿರಾಬ್ಯು ಮತ್ತು ಅಬೆಸೆಯಿಯ ಮುಖಂಡತ್ವದಲ್ಲಿ ಜೂನ್ ೧೭ ರಂದು ಸಭೆ ಸೇರಿ 'ರಾಷ್ಟ್ರೀಯ ಸಭೆ'ಯನ್ನು ರಚಿಸಿದರು. ಮೊದಲೆರಡು ವರ್ಗಗಳು ಈ ಸಭೆಗೆ ಹಾಜರಾಗಲು ಒಪ್ಪಲಿಲ್ಲ.

ಟೆನ್ನಿಸ್ ಕೋರ್ಟಿನ ಪ್ರತಿಜ್ಞೆ

ರಾಷ್ಟ್ರೀಯ ಸಭೆಯು ಅಸ್ತಿತ್ವಕ್ಕೆ ಬಂದಿರುವುದು ಅರಸನಿಗೆ, ಪಾದ್ರಿಗಳಿಗೆ ಮತ್ತು ಶ್ರೀಮಂತರಿಗೆ ನುಂಗಲಾರದ ತುತ್ತಾಯಿತು. ೧೬ ನೆಯ ಲೂಯಿಯು ಒತ್ತಡಕ್ಕೆ ಮಣಿದು ರಾಷ್ಟ್ರೀಯ ಸಭೆಯನ್ನು ಬಹಿಷ್ಕರಿಸುವ ತೀರ್ಮಾನಕ್ಕೆ ಬಂದ. ಜೂನ್ ೨೦ ರಂದು ಸಾಮಾನ್ಯ

ವರ್ಗದ ಪ್ರತಿನಿಧಿಗಳು ಸಭೆ ಸೇರಲು ಹೋದಾಗ ಸಭಾ ಭವನವನ್ನು ಮುಚ್ಚಿ ಅಲ್ಲಿ ಸೈನಿಕರನ್ನು ನೇಮಿಸಲಾಗಿತ್ತು. ರಾಜನ ಈ ಕ್ರಮವನ್ನು ವಿರೋಧಿಸಿದ ಸದಸ್ಯರು ಹತ್ತಿರವೇ ಇದ್ದ ಟೆನ್ನಿಸ್ ಕ್ರೀಡಾಂಗಣಕ್ಕೆ ಬಂದು ಹೊಸ ಸಂವಿಧಾನವನ್ನು ರಚಿಸುವವರೆಗೂ ಅಲ್ಲಿಂದ ಕದಲುವುದಿಲ್ಲವೆಂದು ಪ್ರತಿಜ್ಞೆಯನ್ನು ಕೈಗೊಂಡರು. ಇದನ್ನೇ ಪ್ರಸಿದ್ಧವಾದ **ಟೆನ್ನಿಸ್ ಕೋರ್ಟ್ ಪ್ರತಿಜ್ಞೆ**ಎಂಬುದಾಗಿ ಕರೆಯಲಾಗಿದೆ. ಇದಾದ ನಂತರ ರಾಜನು ಸಭೆಯೊಂದನ್ನು ನಡೆಸಿ ಮೂರು ವರ್ಗದ ಜನರು ಪ್ರತ್ಯೇಕವಾಗಿ ಸಭೆ ಸೇರಬೇಕೆಂದು ಘೋಷಿಸಿದನು. ಮೂರನೆಯ ವರ್ಗದವರು ಸಭಾ ಭವನದಿಂದ ಹೊರಹೋಗಬೇಕೆಂದು ಆಜ್ಞಾಪಿಸಿದಾಗ ಪ್ರತಿನಿಧಿಗಳು ಅದನ್ನು ವಿರೋಧಿಸಿದರು. "ನಾವಿಲ್ಲಿ ಜನತೆಯ ಇಚ್ಛೆಗನುಗುಣವಾಗಿ ನೆರೆದಿದ್ದೇವೆ. ಬಂದೂಕಿನ ಮೊನೆಯಿಂದಲ್ಲದೆ ನಾವಿಲ್ಲಿಂದ ಕದಲುವುದಿಲ್ಲ" ಎಂಬುದಾಗಿ ಪ್ರತ್ಯುತ್ತರ ನೀಡಿದರು.

ಬ್ಯಾಸ್ಟಿಲ್ ಸೆರೆಮನೆಯ ಪತನ

೧೬ ನೆಯ ಲೂಯಿಯು ರಾಷ್ಟ್ರೀಯ ಸಭೆಯನ್ನು ರದ್ದುಪಡಿಸಿ, ಮೂರನೆಯ ವರ್ಗದವರ ಮೇಲೆ ಕ್ರಮ ತೆಗೆದುಕೊಳ್ಳಲು ಸೇನೆಗೆ ಆಜ್ಞಾಪಿಸಿದನು. ಇದು ಪ್ಯಾರಿಸ್ ನಗರದ ಜನತೆಯನ್ನು ಪ್ರಚೋದಿಸಿ ಕ್ರಾಂತಿಗಿಳಿಯುವಂತೆ ಮಾಡಿತು. ಉದ್ರಿಕ್ತ ಕ್ರಾಂತಿಕಾರರು **೧೭೮೯ ರ ಜುಲೈ ೧೪** ರಂದು ಬ್ಯಾಸ್ಟಿಲ್ ಸೆರೆಮನೆಗೆ ನುಗ್ಗಿ, ನಾಶಮಾಡಿ, ಬಂಧಿಗಳನ್ನು ಬಿಡುಗಡೆ ಮಾಡಿದರು. ರಾಜಕೀಯ ಬಂಧಿಗಳಿದ್ದ ಈ ಸೆರೆಮನೆ ನಿರಂಕುಶಾಧಿಕಾರದ ಸಂಕೇತವಾಗಿತ್ತು. ಬ್ಯಾಸ್ಟಿಲ್ ಪತನದೊಂದಿಗೆ ಕ್ರಾಂತಿಕಾರರ ಹೋರಾಟ ಉಗ್ರ ಸ್ವರೂಪವನ್ನು ಪಡೆದುಕೊಂಡಿತು. ಪ್ಯಾರಿಸ್‌ನಲ್ಲಿ **ಕಮ್ಯೂನ್** ಎಂಬ ಹೊಸ ಆಡಳಿತ ವ್ಯವಸ್ಥೆಯನ್ನು ಕ್ರಾಂತಿಕಾರರು ಸ್ಥಾಪಿಸಿದರು. ನಂತರ ಲಾಫಾಯಟ್‌ನ ನೇತೃತ್ವದಲ್ಲಿ **ನ್ಯಾಷನಲ್ ಗಾರ್ಡ್** ಎಂಬ ರಾಷ್ಟ್ರೀಯ ರಕ್ಷಣಾ ಪಡೆಯನ್ನು ರಚಿಸಲಾಯಿತು. ಪ್ಯಾರಿಸ್ ನಗರದ ಆಡಳಿತ ಅದರ ವಶವಾಯಿತು. ಶ್ರೀಮಂತರು ಮತ್ತು ಪಾದ್ರಿಗಳು ರಾಷ್ಟ್ರೀಯ ಪಡೆಯಿಂದ ಬಂಧನಕ್ಕೆ ಒಳಗಾದರು. ಕೆಲವರು ದೇಶ ಬಿಟ್ಟು ಓಡಿಹೋದರು. ರಾಷ್ಟ್ರೀಯ ಸಭೆ ೧೭೮೯ ರ ಆಗಸ್ಟ್ ೪ ರಂದು ಸಭೆ ಸೇರಿ ಶ್ರೀಮಂತರ ಮತ್ತು ಪಾದ್ರಿಗಳ ವಿಶೇಷ ಸೌಲಭ್ಯವನ್ನು ರದ್ದುಮಾಡಿತು. ಫ್ರಾನ್ಸಿನಲ್ಲಿ ಉಳಿದ ಆಸ್ಥಾನಿಕರು ಮತ್ತಿತರರು ಕ್ರಾಂತಿಕಾರರ ನಿರ್ಣಯಗಳನ್ನು ಒಪ್ಪಿಕೊಳ್ಳದಂತೆ ರಾಜನಿಗೆ ಒತ್ತಡ ಹೇರುತ್ತಲೇ ಇದ್ದರು.

ರೊಟ್ಟಿಯ ಹಗರಣ ಅಥವಾ ವರ್ಸೇಲ್ಸ್ ಮೇಲೆ ಮಹಿಳೆಯರ ಮುತ್ತಿಗೆ

ಫ್ರಾನ್ಸ್‌ನ ಜನತೆಗೆ ರಾಜ ಪರಿವಾರ ವರ್ಸೇಲ್ಸ್‌ನಲ್ಲಿರುವುದು ಇಷ್ಟವಿರಲಿಲ್ಲ. ಪ್ಯಾರಿಸ್‌ನಲ್ಲಿ ಬರಗಾಲದಿದಾಗಿ ಆಹಾರದ ಅಭಾವ ಎದುರಾಗಿತ್ತು. ವರ್ಸೇಲ್ಸ್‌ನಲ್ಲಿ ಹೇರಳವಾದ ದವಸಧಾನ್ಯವಿದ್ದು, ರಾಜ ಪರಿವಾರ ವೈಭವದ ಜೀವನ ನಡೆಸುತ್ತಿದ್ದುದು

ಹಾಗೂ ಕ್ರಾಂತಿಕಾರರ ವಿರುದ್ಧ ಚಟುವಟಿಕೆ ನಡೆಸುತ್ತಿದ್ದುದು ಎಲ್ಲೆಡೆ ಅಸಮಾಧಾನಕ್ಕೆ ಕಾರಣವಾಗಿತ್ತು. ಹೀಗಾಗಿ ವರ್ಸೇಲ್ಸ್‌ಗೆ ದಾಳಿಯೊಂದನ್ನು ಮಹಿಳೆಯರ ನೇತೃತ್ವದಲ್ಲಿ ಸಂಘಟಿಸಲಾಯಿತು. **ರೊಟ್ಟಿ ಬೇಕು** ಎನ್ನುವುದು ಅವರ ಘೋಷಣೆಯಾಗಿತ್ತು. ಪ್ರದರ್ಶನ ಕಾರರು ಅರಮನೆಯ ಮೇಲೆ ದಾಳಿ ಮಾಡಿ, ಕಾವಲುಗಾರರನ್ನು ಕೊಂದು, ರಾಜ, ರಾಣಿ ಮತ್ತು ಅವರ ಪರಿವಾರವನ್ನು ವರ್ಸೇಲ್ಸ್ ಅರಮನೆಯಿಂದ ಪ್ಯಾರಿಸ್‌ಗೆ ಕರೆತಂದರು. ಪ್ಯಾರಿಸ್ ನಗರದಲ್ಲಿ ಅವರನ್ನು ಹೆಚ್ಚು ಕಡಿಮೆ ಬಂಧಿಗಳನ್ನಾಗಿಯೇ ಇಡಲಾಯಿತು. ರಾಷ್ಟ್ರೀಯ ಸಭೆಯು ವರ್ಸೇಲ್ಸ್‌ನಿಂದ ಪ್ಯಾರಿಸ್‌ಗೆ ಸ್ಥಳಾಂತರಗೊಂಡಿತು. ರಾಷ್ಟ್ರೀಯ ಸಭೆಯನ್ನು ೧೭೮೧ರ ಸೆಪ್ಟೆಂಬರ್ ತಿಂಗಳಲ್ಲಿ ಸಂವಿಧಾನ ಸಭೆಯನ್ನಾಗಿ ಪರಿವರ್ತಿಸಲಾಯಿತು.

ರಾಷ್ಟ್ರೀಯ ಸಭೆಯು ಹೊಸ ಸಂವಿಧಾನವನ್ನು ರಚಿಸುವುದರ ಮೂಲಕ ಫ್ರಾನ್ಸಿನ ಹಳೆಯ ವ್ಯವಸ್ಥೆಯನ್ನು ನಾಶಮಾಡಿತು. ಅದು ಮಾನವ ಹಕ್ಕುಗಳನ್ನು ಘೋಷಣೆ ಮಾಡಿತು. ರಾಜತ್ವದ ಬಗ್ಗೆ ಜನರಲ್ಲಿದ್ದ ಗೌರವವನ್ನು ಕಡಿಮೆಗೊಳಿಸಿ ಅದನ್ನು ವಿರೋಧಿಸುವಂತೆ ಮಾಡಿತು. ಹೊಸ ರಾಜ್ಯಾಂಗವನ್ನು ನೀಡುವ ಗುರಿಯನ್ನು ಸಾಧಿಸಿದ ರಾಷ್ಟ್ರೀಯ ಸಭೆಯು **೧೭೮೧ರ ಸೆಪ್ಟೆಂಬರ್ ೩೦** ರಂದು ತಾನೇ ವಿಸರ್ಜನೆಗೊಂಡಿತು.

ಶಾಸನಸಭೆ (೧೭೮೧-೯೨)

೧೭೮೧ ರಂದು ಚುನಾವಣೆಗಳು ನಡೆದು ಅಕ್ಟೋಬರ್ ೧ ರಂದು ಶಾಸನಸಭೆಯ ಮೊದಲ ಅಧಿವೇಶನ ನಡೆಯಿತು. ಶಾಸನಸಭೆಯಲ್ಲಿ ೭೪೫ ಮಂದಿ ಸದಸ್ಯರಿದ್ದರು. ಶಾಸನ ಸಭೆಯ ಅವಧಿಯಲ್ಲಿ ಹಲವು ರಾಜಕೀಯ ಸಂಘಗಳು ಹುಟ್ಟಿಕೊಂಡವು. ಆರಂಭದಲ್ಲಿ ಹುಟ್ಟಿಕೊಂಡಂತವು **ಜಾಕೋಬಿನ್** ಮತ್ತು **ಕಾರ್ಡಿಲಿಯರ್ ಕ್ಲಬ್**‌ಗಳು. **ಜಾಕೋಬಿನ್ ಕ್ಲಬ್** ಆರಂಭದಲ್ಲಿ ಮಂದಗಾಮಿ ನೀತಿ ಹೊಂದಿದ್ದರೂ ನಂತರ ತೀವ್ರಗಾಮಿ ಸಂಘವಾಗಿ ಬೆಳೆಯಿತು. **ರಾಬಿಸ್ಪಿಯರನು** ಈ ಕ್ಲಬ್‌ನ ಅತ್ಯಂತ ಪ್ರಭಾವಿ ನಾಯಕನಾಗಿದ್ದನು. ರಾಬಿಸ್ಪಿಯರನ ನಾಯಕತ್ವದಲ್ಲಿ **ಜಾಕೋಬಿನ್ ಕ್ಲಬ್** ರಾಷ್ಟ್ರೀಯ ಸಭೆಯ ಪ್ರತಿಸ್ಪರ್ಧಿಯಾಗಿ ಬೆಳೆಯಿತು. **ಕಾರ್ಡಿಲಿಯರ್ ಕ್ಲಬ್** ಹೆಚ್ಚಿನ ಮಟ್ಟದಲ್ಲಿ ತೀವ್ರವಾದಿಯಾಗಿದ್ದಿತು. **ಡಾಂಟನ್** ಇದರ ನಾಯಕನಾಗಿದ್ದನು. ಶಾಸನಸಭೆಯು ತಮ್ಮ ನೀತಿಗಳಿಗೆ ಒಪ್ಪಿಗೆಯಾಗುವಂತೆ ತೀರ್ಮಾನಗಳನ್ನು ತೆಗೆದುಕೊಂಡರೆ ಅದನ್ನು ಬೆಂಬಲಿಸುತ್ತಿದ್ದವು, ಇಲ್ಲದಿದ್ದರೆ ವಿರೋಧಿಸು ತ್ತಿದ್ದವು. ಶಾಸನಸಭೆಯಲ್ಲಿ **ಗಿರಾಂಡಿಸ್ಟರೆಂಬ** ಸದಸ್ಯರ ಇನ್ನೊಂದು ಕ್ಲಬ್ ಅಥವಾ ಗುಂಪು ಇತ್ತು. ಈ ಗುಂಪಿನ ಪ್ರಮುಖ ನಾಯಕರಾದ **ವರ್ಜಿನೀಡ್, ಕಂಡೊರ್ಸೆಟ್, ಬ್ರಿಸ್ಸಾಡ್** ಮುಂತಾದವರು ಫ್ರಾನ್ಸಿನ ಗಿರೋಂಡಿ ಪ್ರಾಂತ್ಯಕ್ಕೆ ಸೇರಿದವರಾಗಿದ್ದರು. ಇವರು ಪ್ರಜಾಪ್ರಭುತ್ವ ವಾದಿಗಳಾಗಿದ್ದರು. **ಜಾಕೋಬಿಯನ್ನರು** ಹಾಗೂ **ಗಿರೋಂಡಿಸ್ಟರು** ಒಬ್ಬರಿಗೊಬ್ಬರು ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು. ಇವರಿಬ್ಬರೂ ಗಣರಾಜ್ಯದಲ್ಲಿ ನಂಬಿಕೆಯಿಟ್ಟಿದ್ದರೂ ಅಧಿಕಾರಕ್ಕಾಗಿ ನಡೆದ ಹೋರಾಟದಲ್ಲಿ ಪ್ರತಿಸ್ಪರ್ಧಿಗಳಾದರು.

ಶಾಸನಸಭೆಯು ಜಾರಿಗೊಳಿಸಿದ ಕಾನೂನುಗಳನ್ನು ೧೬ ನೆಯ ಲೂಯಿಯು ಸಂವಿಧಾನವು ತನಗೆ ಕೊಟ್ಟಿದ್ದ ಅಧಿಕಾರವನ್ನು ಬಳಸಿ ನಿಷೇಧಿಸಿದನು. ಇದರಿಂದಾಗಿ ಗಿರೋಂಡಿಸ್ಟರು ಅರಸನನ್ನು ತೀವ್ರವಾಗಿ ವಿರೋಧಿಸುವಂತಾಯಿತು. ಫ್ರಾನ್ಸ್‌ನ ಜನತೆ ಪ್ರಭುತ್ವದ ಮೇಲಿನ ವಿಶ್ವಾಸವನ್ನು ನಿಧಾನವಾಗಿ ಕಳೆದುಕೊಳ್ಳುತ್ತಾ ಬಂದರು. ೧೭೯೨ ರ ಜೂನ್ ಮತ್ತು ಆಗಸ್ಟ್‌ನಲ್ಲಿ ರಾಜ ಮತ್ತು ಆತನ ಪರಿವಾರವಿದ್ದ ಟ್ಯೂಲರಿಸ್ ಅರಮನೆಗೆ ಪ್ಯಾರಿಸ್‌ನ ಗುಂಪು ದಾಳಿ ಮಾಡಿತು. ನಂತರ ಅವರನ್ನು ಕತ್ತಲು ತುಂಬಿದ **ಟೆಂಪಲ್ ಕಾರಾಗೃಹ**ದಲ್ಲಿ ಇಡಲಾಯಿತು. ಫ್ರಾನ್ಸ್‌ನಲ್ಲಾದ ಈ ಬೆಳವಣಿಗೆಗಳು ಯುರೋಪಿನ ಇತರ ರಾಷ್ಟ್ರಗಳನ್ನು ಚಿಂತೆಗೀಡು ಮಾಡಿದವು. ಫ್ರಾನ್ಸ್‌ನ್ನು ಬಿಟ್ಟು ಓಡಿಹೋಗಿದ್ದ ನೋಬಲ್ಲರು **ಆಸ್ಟ್ರಿಯಾ** ಮತ್ತು **ಪ್ರಷ್ಯ** ಫ್ರಾನ್ಸ್‌ನ ವಿರುದ್ಧ ಯುದ್ಧ ಮಾಡುವಂತೆ ಪ್ರೇರೇಪಿಸಿದರು. ಈ ಎರಡು ದೇಶಗಳು ಫ್ರಾನ್ಸಿನಲ್ಲಿ ಮತ್ತೆ ಬೂರ್ಬನ್ ವಂಶ ನಿರಾತಂಕವಾಗಿ ಆಳ್ವಿಕೆ ನಡೆಸುವಂತಾಗ ಬೇಕೆಂದು ಬಯಸಿ ಫ್ರಾನ್ಸಿನ ಜನತೆಗೆ ಒತ್ತಡ ಹೇರಿದರು. ಇದರಿಂದ ಕ್ರೋಧಗೊಂಡ ಫ್ರಾನ್ಸಿನ ಜನತೆ ಹಿಂಸೆಯಲ್ಲಿ ತೊಡಗಿತು. ಆಸ್ಟ್ರಿಯಾ ಮತ್ತು ಪ್ರಷ್ಯಾದ ಸೇನೆ ಫ್ರೆಂಚ್ ಸೈನ್ಯವನ್ನು ಸೋಲಿಸುತ್ತಾ, ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಮುನ್ನಡೆಯುತ್ತಿದ್ದುದು ಫ್ರೆಂಚರನ್ನು ಕಳವಳಕ್ಕೀಡು ಮಾಡಿತು. ಫ್ರಾನ್ಸ್‌ನಲ್ಲಿ ಅರಾಜಕತೆ ಉಂಟಾಯಿತು. ಫ್ರಾನ್ಸ್‌ನ ಸೋಲಿಗೆ ರಾಜತ್ವವಾದಿಗಳನ್ನು ಹೊಣೆಗಾರರನ್ನಾಗಿ ಮಾಡಲಾಯಿತು. ಪ್ಯಾರಿಸ್ಸಿನ ಕಮ್ಯೂನ್ ಕ್ರಾಂತಿ ವಿರೋಧಿಗಳನ್ನು ಬಂಧಿಸುವಂತೆ ಆಜ್ಞೆ ಮಾಡಿತು. **೧೭೯೨ ಸೆಪ್ಟೆಂಬರ್ ೨ ರಿಂದ ೬** ರವರೆಗೆ ರಾಜತ್ವದ ಬೆಂಬಲಿಗರೆಂದು ಸಂಶಯಕ್ಕೀಡಾದವರನ್ನು ನಿರ್ದಯವಾಗಿ ಕೊಲೆ ಮಾಡಲಾಯಿತು. ಈ ಘಟನೆಯನ್ನು **ಸೆಪ್ಟಂಬರ್ ಕಗ್ಗೊಲೆ** ಎಂಬುದಾಗಿ ಕರೆಯಲಾಗಿದೆ. ಆಂತರಿಕ ಮತ್ತು ವಿದೇಶಿ ಶತ್ರುಗಳ ಮನಸ್ಸಿನಲ್ಲಿ ಭಯ ಹುಟ್ಟಿಸುವುದು ಇದರ ಉದ್ದೇಶ ವಾಗಿತ್ತು. **ಡಾಂಟನ್** ಮತ್ತು **ಮ್ಯಾರಟ್** ಇದನ್ನು ವ್ಯವಸ್ಥಿತವಾಗಿ ಮಾಡಿಸಿದರು. ೧೭೯೨ ರ ಸೆಪ್ಟಂಬರ್ ೨೦ ರಂದು ಪ್ಯಾರಿಸ್ ಕಡೆ ಮುನ್ನುಗ್ಗುತ್ತಿದ್ದ ವಿರೋಧಿಗಳ ಸಂಯುಕ್ತ ಸೈನ್ಯವನ್ನು ವಾಲ್ಮಿ ಎಂಬಲ್ಲಿ ಫ್ರೆಂಚ್ ಸೈನ್ಯವು ಸೋಲಿಸಿತು. ಈ ಜಯವು ಫ್ರೆಂಚರಲ್ಲಿ ಹೊಸ ಸ್ಫೂರ್ತಿಯನ್ನು ತುಂಬಿತು.

ರಾಷ್ಟ್ರೀಯ ಸಮಿತಿ (೧೭೯೨-೯೫)

ರಾಷ್ಟ್ರೀಯ ಸಮತಿಯು ಕ್ರಾಂತಿಕಾಲದ ಮೂರನೆಯ ಸಂಘಟನೆ. ಇದು ೧೭೯೨ ರಿಂದ ೧೭೯೫ ರವರೆಗೆ ಅಸ್ತಿತ್ವದಲ್ಲಿತ್ತು. ರಾಷ್ಟ್ರೀಯ ಸಮಿತಿಯು ೧೭೯೨ ರ ಸೆಪ್ಟೆಂಬರ್ ೨೧ ರಂದು ಸಭೆ ಸೇರಿ 'ಫ್ರಾನ್ಸಿನಲ್ಲಿ ರಾಜಪ್ರಭುತ್ವವನ್ನು ತೊಡೆದು ಹಾಕಲಾಗಿದೆ' ಎಂಬ ನಿರ್ಣಯವನ್ನು ಕೈಗೊಂಡಿತು. ಅದೇ ರೀತಿ ಫ್ರಾನ್ಸ್‌ನ್ನು **ಗಣರಾಜ್ಯ** ಎಂಬುದಾಗಿ ಘೋಷಿಸಲಾಯಿತು. ಸೆರೆಮನೆಯಲ್ಲಿರುವ **೧೬ ನೆಯ ಲೂಯಿ**ಗೆ ಯಾವ ಶಿಕ್ಷೆಯನ್ನು ನೀಡಬೇಕು ಎನ್ನುವ ವಿಚಾರದಲ್ಲಿ ರಾಷ್ಟ್ರೀಯ ಸಮಿತಿಯಲ್ಲಿ ಜಾಕೋಬಿಯನ್ನರು ಮತ್ತು

ಗಿರೋಂಡಿಯನ್ನರ ಮಧ್ಯೆ ವಾಗ್ವಾದ ನಡೆಯಿತು. ಜಾಕೋಬಿಯನ್ನರು ಮರಣ ದಂಡನೆ ನೀಡಬೇಕೆಂದು ಒತ್ತಾಯಿಸಿದರು. ಕೊನೆಗೂ ರಾಷ್ಟ್ರೀಯ ಸಮಿತಿ ಲೂಯಿಗೆ ಮರಣ ದಂಡನೆ ವಿಧಿಸಿತು. ೧೭೯೩ ಜನವರಿ ೨೧ ರಂದು ೧೬ ನೆಯ ಲೂಯಿಯನ್ನು **ಗಿಲೋಟಿನ್ ಯಂತ್ರಕ್ಕೆ** ಬಲಿಕೊಡಲಾಯಿತು. ಈ ಘಟನೆ ಯುರೋಪಿನ ರಾಷ್ಟ್ರಗಳು ಫ್ರಾನ್ಸಿನ ವಿರುದ್ಧ ಹೋರಾಡುವಂತೆ ಮಾಡಿತು. ಆದರೆ ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ.

ಭಯಾನಕ ಆಳ್ವಿಕೆ

ಫ್ರಾನ್ಸ್‌ನಲ್ಲಿ ೧೬ ನೆಯ ಲೂಯಿಯನ್ನು ಗಿಲೋಟಿನ್ ಯಂತ್ರಕ್ಕೆ ಬಲಿಕೊಟ್ಟಲ್ಲಿಂದ **ರಾಬಿಸ್ಪಿಯರನನ್ನು** ಗಿಲೋಟಿನ್ ಯಂತ್ರಕ್ಕೆ ಬಲಿಕೊಟ್ಟಲ್ಲಿಯವರೆಗಿನ ಅವಧಿಯನ್ನು **ಭಯಾನಕ ಆಳ್ವಿಕೆ** ಎಂಬುದಾಗಿ ಕರೆಯಲಾಗಿದೆ. ಅದು ೧೭೯೩ ರ ಮಾರ್ಚ್ ೯ ರಿಂದ ಜುಲೈ ೨೮ ರವರೆಗೆ ಮುಂದುವರಿಯಿತು. ಫ್ರಾನ್ಸ್‌ನ ಸಮಸ್ಯೆಗಳನ್ನು ಎದುರಿಸಲು ಸಾರ್ವಜನಿಕ ರಕ್ಷಣಾ ಸಮಿತಿಯೊಂದನ್ನು ಸ್ಥಾಪಿಸಬೇಕೆಂದು ಗಿರೋಂಡಿಯನ್ನರು ಸಲಹೆ ನೀಡಿದರು. ಅದು ಸ್ಥಾಪನೆಯಾದ ಮೇಲೆ ಜಾಕೋಬಿಯನ್ನರ ಅಧೀನಕ್ಕೆ ಬಂತು. ಗಿರೋಂಡಿಯನ್ನರು ಕ್ರಾಂತಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಸಹಕರಿಸಲಿಲ್ಲ ಹಾಗೂ ಲೂಯಿಗೆ ಸಂಬಂಧಿಸಿದಂತೆ ಮೃದು ಧೋರಣೆ ತಳೆದರು ಎಂಬುದಾಗಿ ಜಾಕೋಬಿಯನ್ನರು ಆರೋಪಿಸಿದರು. ರಾಬಿಸ್ಪಿಯರ್ ಭಯಾನಕ ಆಳ್ವಿಕೆಯನ್ನು ಸಮರ್ಥಿಸಿಕೊಂಡ. ಈ ಎರಡು ಕ್ಲಬ್‌ಗಳ ನಡುವೆ ಅಂತರ್ ಕಲಹ ಆರಂಭಗೊಂಡಿತು. **ಜಾಕೋಬಿನ್ ಕ್ಲಬ್** ತೀವ್ರಗಾಮಿಯಾಗಿದ್ದರೆ **ಗಿರೋಂಡಿಸ್ಟ್ ಕ್ಲಬ್** ಮಂದಗಾಮಿಯಾಗಿತ್ತು. ಗಿರೋಂಡಿಸ್ಟ್‌ಗಳ ವಿರುದ್ಧ ಡಾಂಟನ್ ಮತ್ತು ರಾಬಿಸ್ಪಿಯರ್ ಸೇಡಿನ ಕ್ರಮ ತೆಗೆದುಕೊಂಡರು. ೧೭೯೩ ರ ಅಕ್ಟೋಬರ್ ೩೧ ರಂದು ೧೨ ಮಂದಿ ಗಿರೋಂಡಿಯನ್ನರನ್ನು ಕೊಲ್ಲಲಾಯಿತು. ಗಿರೋಂಡಿಯನ್ನರ ಪ್ರಮುಖ ನಾಯಕಿ **ಮೇಡಂ ರೋಲ್ಯಾಂಡಳಿಗೂ** ಮರಣದಂಡನೆ ವಿಧಿಸಲಾಯಿತು. ರಾಣಿ **ಮೇರಿ ಆಂಟೋಯಿನೆಟ್ಟಳನ್ನೂ** ೧೭೯೩ ರ ಅಕ್ಟೋಬರ್ ೧೬ ರಂದು ಗಿಲೋಟಿನ್‌ಗೆ ಕೊಡಲಾಯಿತು. **ಬೈಲಿ, ಬಾರ್ನಾವ, ಆರ್ಲಿಯನ್ಸ್‌ದ** ರಾಜಕುಮಾರ ಮುಂತಾದವರನ್ನು ಗಿಲೋಟಿನ್‌ಗೆ ಕೊಡಲಾಯಿತು. ಇನ್ನು ಮುಂದೆ ಗುಂಡಿಕ್ಕಿ ಕೊಲ್ಲುವ, ಗಿಲೋಟಿನ್‌ಗೆ ತಲೆಯೊಡ್ಡುವ ಭಯಾನಕ ಆಳ್ವಿಕೆಯನ್ನು ನಿಲ್ಲಿಸಬೇಕೆಂದು **ಡಾಂಟನ್** ಸೂಚಿಸಿದನು. ಆದರೆ **ರಾಬಿಸ್ಪಿಯರ್** ಒಪ್ಪಲಿಲ್ಲ. ಡಾಂಟನ್‌ನನ್ನು ೧೭೯೪ ಏಪ್ರಿಲ್ ೨ ರಂದು ಗಿಲೋಟಿನ್‌ಗೆ ಕೊಡಲಾಯಿತು. ಡಾಂಟನ್ನನ ಮರಣಾನಂತರ ರಾಬಿಸ್ಪಿಯರ್ ನಿರಂಕುಶಾಧಿಕಾರಿಯ ರೀತಿ ವರ್ತಿಸಲಾರಂಭಿಸಿದನು. ಕೊನೆಗೆ ರಾಷ್ಟ್ರೀಯ ಸಮಿತಿ ೧೭೯೪ ರ ಜುಲೈ ೨೮ ರಂದು ರಾಬಿಸ್ಪಿಯರನನ್ನು ಗಿಲೋಟಿನ್ ಯಂತ್ರಕ್ಕೆ ಬಲಿಕೊಡುವಂತೆ ಆಜ್ಞೆ ಮಾಡಿತು. ರಾಬಿಸ್ಪಿಯರನ ಮರಣದೊಂದಿಗೆ ಭಯಾನಕ ಆಳ್ವಿಕೆ ಕೊನೆಗೊಂಡಿತು.

ಡೈರೆಕ್ಟರಿಯ ಆಡಳಿತ (೧೭೯೫-೯೯)

ರಾಷ್ಟ್ರೀಯ ಸಮಿತಿಯು ೧೭೯೫ ರಲ್ಲಿ ಸಂವಿಧಾನವೊಂದನ್ನು ರೂಪಿಸಿತು. ಹೊಸ ಶಾಸಕಾಂಗಕ್ಕೆ ೨/೩ ರಷ್ಟು ಸದಸ್ಯರನ್ನು ರಾಷ್ಟ್ರೀಯ ಸಮಿತಿಯಿಂದಲೇ ಆಯ್ಕೆ ಮಾಡಬೇಕೆಂದು ತೀರ್ಮಾನಿಸಲಾಯಿತು. ರಾಜಪ್ರಭುತ್ವವಾದಿಗಳನ್ನು ತಡೆಗಟ್ಟುವುದು ಇದರ ಉದ್ದೇಶ ವಾಗಿತ್ತು. ಆದರೆ ಪ್ಯಾರಿಸ್ಸಿನ ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಈ ಕ್ರಮವನ್ನು ವಿರೋಧಿಸಿದರು. ಆ ಸಂದರ್ಭದಲ್ಲಿ **ನೆಪೋಲಿಯನ್ ಬೋನಾಪಾರ್ಟೆ** ರಾಷ್ಟ್ರೀಯ ಸಮಿತಿ ಯನ್ನು ರಕ್ಷಿಸಿದನು. ಹೊಸ ಸಂವಿಧಾನವು ಕಾರ್ಯಾಂಗದ ಅಧಿಕಾರವನ್ನು ಐವರು ಸದಸ್ಯರ ನ್ನೊಳಗೊಂಡ **ಕಾರ್ಯನಿರ್ದೇಶಕ ಮಂಡಳಿ** ಅಥವಾ **ಡೈರೆಕ್ಟರಿಗೆ** ನೀಡಿತು. ಡೈರೆಕ್ಟರಿಯ ಆಳ್ವಿಕೆಯ ಅವಧಿಯು ಗಲಭೆಗಳಿಂದ ಕೂಡಿತ್ತು. ಡೈರೆಕ್ಟರರಲ್ಲಿ ಸಹಮತವಿರಲಿಲ್ಲ. ಹಾಗೂ ರಾಜಪ್ರಭುತ್ವವಾದಿಗಳು ಶಾಸನಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಡೈರೆಕ್ಟರಿ ಸರಕಾರ ಆರ್ಥಿಕ ದಿವಾಳಿತನಕ್ಕೂ ಒಳಗಾಗಿತ್ತು. **ಆಸ್ಟ್ರಿಯಾ, ಇಂಗ್ಲೆಂಡ್** ಮುಂತಾದ ಯುರೋಪಿನ ದೇಶಗಳೊಂದಿನ ಯುದ್ಧದಲ್ಲೂ ಫ್ರಾನ್ಸ್ ಪರಾಭವಗೊಂಡಿತು. ಆದರೆ **ಇಟಲಿಯ** ಮೇಲೆ ದಂಡಯಾತ್ರೆ ನಡೆಸಿದ ನೆಪೋಲಿಯನ್ ಜಯ ಗಳಿಸಿ ಡೈರೆಕ್ಟರಿ ಆಡಳಿತಕ್ಕೆ, ಸ್ವಲ್ಪ ನೆಮ್ಮದಿ ತಂದನು. ಆದರೆ ಅದೇ ನೆಪೋಲಿಯನ್ **ಈಜಿಪ್ಟ್‌ನ** ದಂಡಯಾತ್ರೆಯಿಂದ ಹಿಂತಿರುಗಿ ಬಂದು ಡೈರೆಕ್ಟರಿ ಆಡಳಿತವನ್ನು ಪತನಗೊಳಿಸಿದನು.

ಕ್ರಾಂತಿಯ ಪರಿಣಾಮಗಳು

೧. ಫ್ರಾನ್ಸ್‌ನ ಕ್ರಾಂತಿಯಿಂದಾಗಿ ಯುರೋಪ್ ಮತ್ತು ವಿಶ್ವದಾದ್ಯಂತ ನಿರಂಕುಶಾಡಳಿತದ ವಿರುದ್ಧ ಹೋರಾಡಲು ಜನತೆಗೆ ಸ್ಫೂರ್ತಿ ದೊರೆಯಿತು. ಪ್ರಜಾಸತ್ತಾತ್ಮಕ ಸರಕಾರಗಳು ರೂಪಿತವಾಗಲು ಫ್ರಾನ್ಸ್‌ನ ಕ್ರಾಂತಿಯು ದಾರಿ ಮಾಡಿಕೊಟ್ಟಿತು. ಫ್ರಾನ್ಸ್‌ನಲ್ಲಿ ಬೂರ್ಬನ್ ವಂಶದ ಆಳ್ವಿಕೆ ಕೊನೆಗೊಂಡಿತು.

೨. ಕ್ರಾಂತಿಯ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಪ್ರಪಂಚದಾದ್ಯಂತ ಪ್ರಚಾರವನ್ನು ಪಡೆದುಕೊಂಡವು. ಇವು ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡುವ ತತ್ವಗಳಾಗಿದ್ದು, ನಿರಂಕುಶಾಡಳಿತ ಮತ್ತು ಊಳಿಗಮಾನ್ಯತೆಯಿಂದ ನೊಂದಿದ್ದ ಜನರಿಗೆ ದಾರಿದೀಪವಾದವು. ಮಾನವ ಹಕ್ಕುಗಳ ಘೋಷಣೆ ಫ್ರಾನ್ಸಿನ ಕ್ರಾಂತಿಯ ಮಹತ್ವಪೂರ್ಣ ಕೊಡುಗೆಯಾಗಿದೆ.

೩. ರಾಷ್ಟ್ರೀಯತಾ ಬೆಳವಣಿಗೆ ಫ್ರಾನ್ಸಿನ ಕ್ರಾಂತಿಯ ಬಹುಮುಖ್ಯ ಪರಿಣಾಮಗಳಲ್ಲಿ ಒಂದು. ಫ್ರಾನ್ಸ್ ನಮ್ಮದು, ಈ ದೇಶದಲ್ಲಿ ನಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ ಹಾಗೂ ಅದರ ರಕ್ಷಣೆ ನಮ್ಮ ಜವಾಬ್ದಾರಿ ಎನ್ನುವುದನ್ನು ಕ್ರಾಂತಿಯ ಮೂಲಕ ಅರಿತುಕೊಂಡ ಫ್ರಾನ್ಸಿನ ಜನತೆ ಉಳಿದ ದೇಶಗಳಿಗೂ ಅದನ್ನೇ ಹರಡಿದರು. ೧೬ ನೆಯ ಲೂಯಿ ಕ್ರಾಂತಿಯ

ಸಂದರ್ಭದಲ್ಲಿ ದೇಶದ್ರೋಹ ಮಾಡಿದ ಎನ್ನುವ ಆಪಾದನೆಗೆ ಗುರಿಯಾಗಿದ್ದ. ಇದರಿಂದಾಗಿ ಫ್ರಾನ್ಸಿನ ಜನತೆ ರಾಜತ್ವವನ್ನೇ ವಿರೋಧಿಸುವಂತಾಯಿತು. ಯುರೋಪಿನ ಸಂಯುಕ್ತ ಸೇನೆ ಫ್ರಾನ್ಸ್‌ನ್ನು ಆಕ್ರಮಿಸಿದಾಗ, ಮಾತೃಭೂಮಿ ಅಪಾಯದಲ್ಲಿದೆ ಎನ್ನುವ ಘೋಷಣೆಯೊಡನೆ ಹೋರಾಡಿ ಕ್ರಾಂತಿಕಾರರು ಜಯಿಸಿದರು. ಯುರೋಪಿನ ದಬ್ಬಾಳಿಕೆಗೆ ಒಳಗಾಗಿದ್ದ ವಿಶ್ವದ ಅನೇಕ ದೇಶಗಳು ತಮ್ಮ ಸಂದೇಶವನ್ನು ನೀಡಿತು. ಇಟಲಿ ಮತ್ತು ಜರ್ಮನಿಗಳು ಏಕೀಕರಣ ಕ್ಕಾಗಿ ನಡೆಸಿದ ಹೋರಾಟ ಫ್ರಾನ್ಸ್‌ನ ಕ್ರಾಂತಿಯ ಪರಿಣಾಮವೇ ಆಗಿದೆ.

೪. ಫ್ರಾನ್ಸ್‌ನ ಕ್ರಾಂತಿಯು ರಮ್ಯ ಸಾಹಿತ್ಯದ ನಿರ್ಮಾಣಕ್ಕೆ ಪ್ರೇರಣೆಯನ್ನು ನೀಡಿತು. ಅದೊಂದು ಚಳವಳಿಯಾಗಿ ಬೆಳೆಯಿತು. ಅನೇಕ ಸಾಹಿತ್ಯ ಕೃತಿಗಳು ರಚನೆಗೊಂಡು ವ್ಯಕ್ತಿಯ ಭಾವನೆ ಮತ್ತು ಜೀವನಕ್ಕೆ ಆದ್ಯತೆಯನ್ನು ನೀಡಿದವು. ಮಾನವೀಯತಾ ಭಾವನೆಗಳು ಹೆಚ್ಚು ಹೆಚ್ಚು ಬೆಳವಣಿಗೆಗೊಂಡವು.

೫. ಪಾದ್ರಿಗಳು ಮತ್ತು ಶ್ರೀಮಂತರ ಅಧೀನದಲ್ಲಿದ್ದ ಭೂಮಿಯನ್ನು ರಾಷ್ಟ್ರೀಕರಣ ಗೊಳಿಸಲಾಯಿತು. ಅವರಿಂದ ಪಡೆದ ಭೂಮಿಯನ್ನು ಕೃಷಿಕರು ಸಾಗುವಳಿ ಮಾಡಿ ಉತ್ತಮ ಬೆಳೆಯನ್ನು ಪಡೆದರು. ಇದು ಆಹಾರದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸಿತು. ಅದೇ ರೀತಿ ಶೋಷಣೆಯನ್ನು ಕಡಿಮೆಗೊಳಿಸಿತು.

೬. ನೆಪೋಲಿಯನ್ ಬೋನಾಪಾರ್ಟೆಯ ಏಳಿಗೆಗೆ ಫ್ರೆಂಚ್ ಕ್ರಾಂತಿಯೇ ಕಾರಣ. ಕ್ರಾಂತಿಯ ದಿನಗಳನ್ನು ಕಂಡಿದ್ದ ನೆಪೋಲಿಯನ್ ಮುಂದೆ ಸರ್ವಾಧಿಕಾರಿಯಾಗಿ ಬೆಳೆದ. ಆತನ ಯಶಸ್ಸಿಗೆ ಕ್ರಾಂತಿಯ ಪಾಠಗಳೇ ಕಾರಣವಾದವು. ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ಹಂಬಲ ಅವನದ್ದಾಗಿತ್ತು.

ನೆಪೋಲಿಯನ್ ಬೋನಾಪಾರ್ಟೆಯ ಜೀವನ ಮತ್ತು ಸಾಧನೆಗಳು

(೧೭೬೯-೧೮೨೧)

ಯುರೋಪಿನ ಚರಿತ್ರೆಯನ್ನು ಫ್ರಾನ್ಸಿನ ಚರಿತ್ರೆಯನ್ನಾಗಿ ಮಾರ್ಪಡಿಸಿದವನು ನೆಪೋಲಿಯನ್. ಇವನು ಫ್ರಾನ್ಸಿನ ಕ್ರಾಂತಿಯ ಫಲವಾಗಿದ್ದು, ಕ್ರಾಂತಿಯ ತತ್ವಗಳನ್ನು ಮೈಗೂಡಿಸಿಕೊಂಡು ಬೆಳೆದವನು. ರಾಜತ್ವವನ್ನು ವಿರೋಧಿಸಿದ್ದ ಫ್ರಾನ್ಸಿನ ಜನತೆ ನೆಪೋಲಿಯನ್ನನನ್ನು ಅದೇ ರಾಜತ್ವಕ್ಕೇರಿಸಿದ್ದು ಆಶ್ಚರ್ಯವಾಗಿ ಕಂಡು ಬಂದರೂ, ಅದು ನೆಪೋಲಿಯನ್ನನ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಗಣರಾಜ್ಯವನ್ನು ಫ್ರಾನ್ಸಿನಲ್ಲಿ ಸ್ಥಾಪಿಸುವ ಉದ್ದೇಶ ಹೊಂದಿದ್ದ ನೆಪೋಲಿಯನ್ನನು ಸರ್ವಾಧಿಕಾರಿಯಾಗಿ ಬೆಳೆದ. ಹೊಸ ಕಾನೂನುಗಳನ್ನು ಜಾರಿಗೊಳಿಸಿ, ಹೊಸ ಬಗೆಯ ಆಡಳಿತವನ್ನು ನಡೆಸಿದ. ನಿರಂತರ ಯುದ್ಧದಲ್ಲಿ ತೊಡಗಿ, ಅದರಲ್ಲೇ ಸುಖ ಕಂಡ ನೆಪೋಲಿಯನ್ ಕೊನೆಗೆ ಅದರಲ್ಲೇ ತನ್ನ ಅವನತಿಯನ್ನು ಕಂಡ.

ಆರಂಭಿಕ ಜೀವನ

ನೆಪೋಲಿಯನ್ ೧೭೬೯ ಆಗಸ್ಟ್ ೧೫ ರಂದು ಕಾರ್ಸಿಕಾ ದ್ವೀಪದ ಅಜಾಸಿಯೋ ಎಂಬ ನಗರದಲ್ಲಿ ಚಾರ್ಲ್ಸ್ ಬೋನಾಪಾರ್ಟೆ ಮತ್ತು ಲೆಟೇಷಿಯಾ ರೆಮೊಲಿನೊ ದಂಪತಿಗಳ ಮಗನಾಗಿ ಜನಿಸಿದನು. ಬಾಲ್ಯದಲ್ಲಿ ಬಡತನವನ್ನು ಅನುಭವಿಸಿದ್ದ ನೆಪೋಲಿಯನ್‌ಗೆ ಸರಿಯಾದ ಶಿಕ್ಷಣವೂ ದೊರೆಯಲಿಲ್ಲ. ವಿದ್ಯಾರ್ಥಿವೇತನದ ಮೂಲಕ ಸೈನಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ. ನೆಪೋಲಿಯನ್ ವಿದ್ಯಾರ್ಥಿಯಾಗಿದ್ದಾಗಲೇ ವಾಲ್ಟೇರ್, ಟರ್ಗೋಟ್ ಮತ್ತು ರೂಸೋನ ಬರೆಹಗಳನ್ನು ಅಧ್ಯಯನ ಮಾಡಿ ಅದರಿಂದ ಪ್ರಭಾವಿತನಾಗಿದ್ದ. ಕಾರ್ಸಿಕಾವು ಮೊದಲು ಇಟಲಿಗೆ ಸೇರಿತ್ತಾದರೂ ನಂತರ ಅದು ಫ್ರಾನ್ಸ್‌ನ ಅಧೀನಕ್ಕೆ ಬಂದಿತ್ತು. ಕಾರ್ಸಿಕಾದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ಕನಸನ್ನು ನೆಪೋಲಿಯನ್ ಹೊಂದಿದ್ದನು. ಸೈನಿಕ ಶಾಲೆಯನ್ನು ತ್ಯಜಿಸಿದ ನೆಪೋಲಿಯನ್ ತನ್ನ ೧೬ನೆಯ ವರ್ಷದಲ್ಲಿ ಫ್ರೆಂಚ್ ಸೈನ್ಯದ ಫಿರಂಗಿದಳದಲ್ಲಿ ಸಬ್ ಲೆಫ್ಟಿನೆಂಟ್ ಆಗಿ ಸೇರಿಕೊಂಡನು. ೧೭೯೨ ರಲ್ಲಿ ಕ್ರಾಂತಿಕಾರಿ ಸೈನ್ಯವನ್ನು ಸೇರಿದನು. ನಂತರ ಡೈರೆಕ್ಟರಿಯ ಆಳ್ವಿಕೆಯಲ್ಲಿ ಕ್ಯಾಪ್ಟನ್ ಆಗಿ ನೇಮಕಗೊಂಡನು. ರಾಷ್ಟ್ರೀಯ ಸಮಿತಿಯನ್ನು ಅಪಾಯದಿಂದ ರಕ್ಷಿಸಿ ಅದರ ಕೃಪೆಗೆ ಕಾರಣನಾದನು. ೧೭೯೫ ರಲ್ಲಿ ಡೈರೆಕ್ಟರಿ ಸರಕಾರಕ್ಕೆ ವಿರುದ್ಧವಾಗಿ ಸಂಭವಿಸಿದ ಪ್ಯಾರಿಸ್ಸಿನ ದಂಗೆಯನ್ನು ಅಡಗಿಸಿ, ಪ್ಯಾರಿಸ್ಸಿನ ಆಂತರಿಕ ರಕ್ಷಣಾಧಿಕಾರಿಯಾಗಿ ನೇಮಕಗೊಂಡನು.

ಆರಂಭದ ಯುದ್ಧಗಳು

ನೆಪೋಲಿಯನ್ನನು ಚಕ್ರವರ್ತಿಯಾಗುವ ಮೊದಲು ಅನೇಕ ಯುದ್ಧಗಳನ್ನು ಮಾಡಿ ಸೈನಿಕ ಕ್ಷೇತ್ರದಲ್ಲಿ ಅಪಾರ ಅನುಭವವನ್ನು ಹೊಂದಿದ್ದನು. ಡೈರೆಕ್ಟರಿಯ ಆಡಳಿತಾವಧಿಯಲ್ಲಿ ನೆಪೋಲಿಯನ್ನನು ಇಟಲಿ ಮತ್ತು ಈಜಿಪ್ಟ್‌ಗಳ ಮೇಲೆ ದಂಡಯಾತ್ರೆ ಕೈಗೊಂಡನು.

ಇಟಲಿಯ ದಂಡಯಾತ್ರೆ (೧೭೯೬-೯೭)

ನೆಪೋಲಿಯನ್ನನ ಇಟಲಿಯ ದಂಡಯಾತ್ರೆಯ ಸೈನಿಕ ಕಾರ್ಯಾಚರಣೆಗಳಲ್ಲೇ ಉತ್ಕೃಷ್ಟ ಮಾದರಿಯದೆಂದು ಪರಿಗಣಿಸಲ್ಪಟ್ಟಿದೆ. ಅವನು ಆಸ್ಟ್ರಿಯಾ ಹಾಗೂ ಸಾರ್ಡೀನಿಯಾದ ಸಂಯುಕ್ತ ಸೈನ್ಯವನ್ನು ಎದುರಿಸಿ ಹೋರಾಡಿದನು. ಮೊಂಡವಿ ಎಂಬಲ್ಲಿ ಸಾರ್ಡೀನಿಯಾವನ್ನು ಸೋಲಿಸಿದನು. ಸಾರ್ಡೀನಿಯಾವು ನೀಸ್ ಮತ್ತು ಸಾವಾಯ್ ಪ್ರಾಂತ್ಯಗಳನ್ನು ಬಿಟ್ಟುಕೊಡುವುದರ ಮೂಲಕ ಶಾಂತಿಯ ಪ್ರಸ್ತಾಪ ಮಾಡಿತು. ನಂತರ ನೆಪೋಲಿಯನ್ ತನ್ನ ಗಮನವನ್ನು ಲಂಬಾರ್ಡಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಆಸ್ಟ್ರಿಯಾದ ಸೈನ್ಯದ ಕಡೆಗೆ ಹರಿಸಿದನು. ಆಸ್ಟ್ರಿಯನ್ನರು ಅಡಗಿಕೊಂಡಿದ್ದ ಮಾಂಡುವಾ ಕೋಟೆಯನ್ನು ಆಕ್ರಮಿಸಿ ಆಸ್ಟ್ರಿಯನ್ನರನ್ನು ಸೋಲಿಸಿದನು. ರಿವೋಲಿಯಲ್ಲಿ ಮತ್ತೊಮ್ಮೆ ಆಸ್ಟ್ರಿಯನ್ನರು ಸೋತರು. ವೆನಿಸ್ ನಗರವನ್ನು ಗೆದ್ದು ಅಲ್ಲಿನ ಗಣರಾಜ್ಯವನ್ನು ಬೀಳಿಸಿದನು. ೧೭೯೭ ರ ಏಪ್ರಿಲ್‌ನಲ್ಲಿ ಆಸ್ಟ್ರಿಯಾವು ಲಿಯೋಬಾನ್‌ನಲ್ಲಿ ಕ್ಯಾಂಪೋಫೋರ್ಮಿಯೊ ಒಪ್ಪಂದಕ್ಕೆ ಸಹಿ ಹಾಕಿತು.

ಕ್ಯಾಂಪೊಫೊರ್ಮಿಯೋದ ಒಪ್ಪಂದದ ಪ್ರಕಾರ ಆಸ್ಟ್ರಿಯಾವು ಬೆಲ್ಜಿಯಂನಲ್ಲಿದ್ದ ತನ್ನ ಪ್ರದೇಶಗಳನ್ನು ಫ್ರಾನ್ಸ್‌ಗೆ ಬಿಟ್ಟುಕೊಟ್ಟಿತು. ರೈನ್‌ನದಿಯ ಎಡದಂಡೆ ಹಾಗೂ ಲಂಬಾರ್ಡಿ ಯಾದ ತನ್ನ ಹಕ್ಕುಗಳನ್ನು ಫ್ರಾನ್ಸ್‌ಗೆ ಬಿಟ್ಟುಕೊಟ್ಟಿತು. ನೆಪೋಲಿಯನ್ ಇಟಲಿಯನ್ನು ವಶಪಡಿಸಿಕೊಂಡಿದ್ದಷ್ಟೇ ಅಲ್ಲದೆ, ಅಲ್ಲಿಂದ ಅಪಾರ ಸಂಪತ್ತನ್ನು ಕೊಂಡೊಯ್ದನು. ಇಟಲಿಯಲ್ಲಿದ್ದ ಪ್ರಾಚೀನ ಕಲಾಕೃತಿಗಳನ್ನು ಪ್ಯಾರಿಸ್‌ಗೆ ಸಾಗಿಸಲಾಯಿತು. ಇಟಲಿ ದಂಡಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಬಂದ ನೆಪೋಲಿಯನ್‌ಗೆ ಪ್ಯಾರಿಸ್‌ನಲ್ಲಿ ಭವ್ಯ ಸ್ವಾಗತ ನೀಡಲಾಯಿತು.

ಈಜಿಪ್ಟ್ ದಂಡಯಾತ್ರೆ (೧೭೯೮)

ಡೆರೆಕ್ಟರಿಯು ನೆಪೋಲಿಯನ್ನನನ್ನು ಇಂಗ್ಲೆಂಡಿನ ವಿರುದ್ಧದ ಈಜಿಪ್ಟಿನ ದಂಡಯಾತ್ರೆಗೆ ದಂಡನಾಯಕನನ್ನಾಗಿ ನೇಮಿಸಿತು. ಈ ದಂಡಯಾತ್ರೆ ಅಪಾಯಗಳಿಂದ ಕೂಡಿದ್ದದ್ದಾಗಿತ್ತು. ಮೆಡಿಟರೇನಿಯನ್ ಪ್ರದೇಶದಲ್ಲಿ ಸೇನಾಧಿಪತಿ **ನೆಲ್ಸನ್ನನು** ಬಲಿಷ್ಟವಾದ ಇಂಗ್ಲಿಷ್ ನೌಕಾಪಡೆಯೊಂದಿಗೆ ತಯಾರಿದ್ದನು. ಫ್ರೆಂಚ್ ಸೈನ್ಯ **ಅಲೆಗ್ಸಾಂಡ್ರಿಯಾವನ್ನು** ಆಕ್ರಮಿಸಿ **ಕೈರೋಗೆ** ಹೊರಟಿತು. ೧೭೯೮ ರಲ್ಲಿ ನಡೆದ ಪಿರಮಿಡ್ಡುಗಳ ಯುದ್ಧದಲ್ಲಿ ಫ್ರೆಂಚರು ಕೈರೊ ಮೇಲೆ ಹಿಡಿತ ಸಾಧಿಸಿದರು. ಅದೇ ವೇಳೆಗೆ ನೈಲ್ ನದಿಯಲ್ಲಿ ಬೀಡು ಬಿಟ್ಟಿದ್ದ ಫ್ರಾನ್ಸಿನ ನೌಕೆಗಳನ್ನು ಅಡ್ಮಿರಲ್ ನೆಲ್ಸನ್ನನು ಧಾಳಿ ನಡೆಸಿ ನಾಶಗೊಳಿಸಿದನು. ಇದು ನೆಪೋಲಿಯನ್‌ಗಾದ ಸೋಲು. ಇದೇ ಸಂದರ್ಭದಲ್ಲಿ **ಟರ್ಕಿಯು** ಫ್ರಾನ್ಸ್‌ನ ವಿರುದ್ಧ ಯುದ್ಧ ಸಾರಿತು. ೧೭೯೯ ರಲ್ಲಿ ನೆಪೋಲಿಯನ್ನನು **ಸಿರಿಯಾಕ್ಕೆ** ಮುತ್ತಿಗೆ ಹಾಕಿದನು. ಟರ್ಕರು ಬ್ರಿಟಿಷರ ನೆರವಿನೊಂದಿಗೆ ಉಗ್ರವಾಗಿ ಹೋರಾಟ ಮಾಡಿದನು. ನೆಪೋಲಿಯನ್ನನು ಅನೇಕ ಕಷ್ಟ-ನಷ್ಟಗಳನ್ನು ಎದುರಿಸಬೇಕಾಗಿ ಬಂತು. ೧೭೯೯ ರ ಜುಲೈ ೨೫ ರಂದು ನಡೆದ **ಅಬುಕಿರ್ ಯುದ್ಧದಲ್ಲಿ** ನೆಪೋಲಿಯನ್ನನು ಟರ್ಕರನ್ನು ಸೋಲಿಸಿದನು. ನಂತರ ನೆಪೋಲಿಯನ್ನನು ಫ್ರಾನ್ಸಿಗೆ ಹಿಂತಿರುಗಿದನು. ಅಲ್ಲಿ ಡೈರೆಕ್ಟರಿ ಸರಕಾರವು ಪತನದ ಹಾದಿಯಲ್ಲಿತ್ತು. ಅದನ್ನು ಕಿತ್ತೊಗೆದು, ಮೂವರು ಪ್ರತಿನಿಧಿಗಳ ಹೊಸ ಸರಕಾರವನ್ನು ಫ್ರಾನ್ಸಿನಲ್ಲಿ ರಚಿಸಿದನು. ಮೂವರು ಪ್ರತಿನಿಧಿಗಳಲ್ಲಿ ನೆಪೋಲಿಯನ್ ಮೊದಲಿಗನಾದ.

ಎರಡನೆಯ ಇಟಲಿ ದಂಡಯಾತ್ರೆ (೧೮೦೦)

೧೮೦೦ ರಲ್ಲಿ ನೆಪೋಲಿಯನ್ನನು ಇಟಲಿಯ ವಿರುದ್ಧದ ಎರಡನೆಯ ದಂಡಯಾತ್ರೆಯ ನೇತೃತ್ವ ವಹಿಸಿದನು. ಆಸ್ಟ್ರಿಯಾವನ್ನು ಸೋಲಿಸುವುದು ಈ ಯುದ್ಧದ ಉದ್ದೇಶವಾಗಿತ್ತು. ನೆಪೋಲಿಯನ್ ಹಾಗೂ ಆತನ ದಂಡನಾಯಕ **ಮೋರಿಯೋ** ಆಸ್ಟ್ರಿಯಾ ಸೇನೆಯನ್ನು ಸೋಲಿಸಿದರು. ಆಸ್ಟ್ರಿಯನ್ನರು ಉತ್ತರ ಇಟಲಿಯ ಭಾಗಗಳನ್ನು ಫ್ರಾನ್ಸ್‌ಗೆ ಬಿಟ್ಟು ಕೊಡುವುದರ ಮೂಲಕ ಯುದ್ಧ ವಿರಾಮವನ್ನು ಘೋಷಿಸಿದರು. ೧೮೦೧ ರ ಫೆಬ್ರವರಿ ೯

ರಂದು ಫ್ರಾನ್ಸ್ ಮತ್ತು ಆಸ್ಟ್ರಿಯಾದ ನಡುವೆ **ಲೂನೆ ವಿಲ್ಲೆ** ಒಪ್ಪಂದವಾಯಿತು. ಅದರ ಪ್ರಕಾರ ರೈನ್ ನದಿಯ ಎಡದಂಡೆಯ ಪ್ರದೇಶಗಳು ಮತ್ತು ಉತ್ತರ ಇಟಲಿ ಫ್ರೆಂಚರ ವಶವಾಯಿತು. ಇಷ್ಟಾದರೂ ಇಂಗ್ಲೆಂಡ್ ಫ್ರಾನ್ಸಿನ ವಿರುದ್ಧ ಯುದ್ಧ ಮುಂದುವರಿಸಿತು. ನಿರಂತರ ಯುದ್ಧಗಳಿಂದ ಬೇಸತ್ತ ಎರಡೂ ರಾಷ್ಟ್ರಗಳು ೧೮೦೨ ರ ಮಾರ್ಚ್ ೨ ರಂದು **ಅಮೀನ್ಸ್ ಶಾಂತಿ ಒಪ್ಪಂದಕ್ಕೆ** ಸಹಿ ಹಾಕಿದವು. ಈ ಒಪ್ಪಂದವು ಫ್ರಾನ್ಸ್‌ಗೆ ಲಾಭಕರವಾಗಿತ್ತು.

ಚಕ್ರವರ್ತಿಯಾದ ಮೇಲೆ ನಡೆಸಿದ ಯುದ್ಧಗಳು

ನೆಪೋಲಿಯನ್ನನು ನಡೆಸಿದ ಯುದ್ಧಗಳು ಹಾಗೂ ಗಳಿಸಿದ ವಿಜಯಗಳು ಆತನನ್ನು ಫ್ರಾನ್ಸಿನಲ್ಲಿ ಜನಪ್ರಿಯ ವ್ಯಕ್ತಿಯನ್ನಾಗಿಸಿದವು. ಈಜಿಪ್ಟಿನ ದಂಡಯಾತ್ರೆಯ ನಂತರ ನೆಪೋಲಿಯನ್ನನು ಫ್ರಾನ್ಸಿನಲ್ಲಿ ಡೈರೆಕ್ಟರಿಯ ಆಡಳಿತವನ್ನು ಕೊನೆಗೊಳಿಸಿ ಪ್ರತಿನಿಧಿ ಪದ್ಧತಿಯ ಸರಕಾರದ ಸ್ಥಾಪನೆ ಮಾಡಿದ. ಹೊಸ ಸರಕಾರದಲ್ಲಿ ಮೂವರು ಪ್ರತಿನಿಧಿಗಳಿದ್ದು, ಅವರಲ್ಲಿ ನೆಪೋಲಿಯನ್ ಮೊದಲಿಗನಾಗಿದ್ದ. ೧೮೦೨ ರಲ್ಲಿ ಮೊದಲು ಪ್ರತಿನಿಧಿ (ಕಾನ್ಸುಲ್) ಯಾಗಿ ಅಧಿಕಾರ ಕೇಂದ್ರೀಕರಿಸಿಕೊಂಡು ತನ್ನ ಅಧಿಕಾರಾವಧಿಯನ್ನು ಜೀವನ ಪರ್ಯಂತ ಇರುವಂತೆ ಬದಲಾಯಿಸಿಕೊಂಡನು. ೧೮೦೪ ರಲ್ಲಿ ತನ್ನನ್ನು **ಫ್ರಾನ್ಸಿನ ಚಕ್ರವರ್ತಿ** ಎಂದು ಘೋಷಿಸಿಕೊಂಡ. "ನೆಲದ ಮೇಲೆ ಬಿದ್ದಿದ್ದ ಫ್ರಾನ್ಸಿನ ಕಿರೀಟವನ್ನು ಕಂಡು ಅದನ್ನು ಖಡ್ಗ ದಿಂದ ಎತ್ತಿಕೊಂಡೆ" ಎಂದು ಹೇಳಿಕೊಂಡನು. ಚಕ್ರವರ್ತಿಯಾದ ಬಳಿಕ ನೆಪೋಲಿಯನ್ ನಿರಂತರ ಯುದ್ಧದಲ್ಲಿ ತೊಡಗಿದ. ಅಖಂಡ ಯುರೋಪಿಗೆ ಒಡೆಯನಾಗಬೇಕೆಂಬುದು ಅವನ ಮಹದಾಸೆಯಾಗಿತ್ತು.

ಯುರೋಪಿನ ಮೂರನೆಯ ಒಕ್ಕೂಟದ ವಿರುದ್ಧ ನಡೆಸಿದ ಯುದ್ಧಗಳು

ನೆಪೋಲಿಯನ್ನನ ವಿರುದ್ಧ ಯುರೋಪಿನ ರಾಷ್ಟ್ರಗಳು ಒಕ್ಕೂಟವನ್ನು ರಚಿಸಿಕೊಂಡಿದ್ದವು. ಕ್ರಾಂತಿಯ ಸಂದರ್ಭದಲ್ಲಿ ಎರಡು ಸಲ ಒಕ್ಕೂಟಗಳು ರಚನೆಗೊಂಡಿದ್ದವು. ೧೮೦೩ ರಲ್ಲಿ ನೆಪೋಲಿಯನ್ ತನ್ನ ವೈರಿ ರಾಷ್ಟ್ರಗಳ ವಿರುದ್ಧ ಯುದ್ಧ ಆರಂಭಿಸಿದಾಗ **ಇಂಗ್ಲೆಂಡ್, ಆಸ್ಟ್ರಿಯಾ** ಮತ್ತು **ರಷ್ಯಾಗಳು** ಮೂರನೆಯ ಒಕ್ಕೂಟವನ್ನು ರಚಿಸಿಕೊಂಡವು. ೧೮೦೫ ರ ಅಕ್ಟೋಬರ್ ೨೦ ರಂದು ನೆಪೋಲಿಯನ್ನನು ಆಸ್ಟ್ರಿಯಾವನ್ನು **ಉಲ್ಮ್** ಎಂಬಲ್ಲಿ ಸೋಲಿಸಿದನು. ಆದರೆ ೧೮೦೫ ರ ಅಕ್ಟೋಬರ್ ೨೧ ರಂದು ನಡೆದ **ಟ್ರಫಾಲ್ಗರ್ ಕದನದಲ್ಲಿ** ಫ್ರೆಂಚರು ಸೋತರು. ಇದೊಂದು ನೌಕಾಯುದ್ಧವಾಗಿದ್ದು ಬ್ರಿಟಿಷ್ ಸೇನಾನಿ ನೆಲ್ಸನ್ ನೆಪೋಲಿಯನ್‌ಗೆ ಸೋಲುಣಿಸಿ ತಾನೂ ಅಸುನೀಗಿದನು.

೧೮೦೫ ರ ಡಿಸೆಂಬರ್ ೨ ರಂದು ನೆಪೋಲಿಯನ್ನನು ಆಸ್ಟ್ರಿಯಾ ಮತ್ತು ರಷ್ಯಾದ ಸಂಯುಕ್ತ ಸೈನ್ಯವನ್ನು **ಆಸ್ಟರ್‌ಲಿಟ್ಜ್** ಎಂಬಲ್ಲಿ ಸೋಲಿಸಿದನು. ಸೋತ ಆಸ್ಟ್ರಿಯ **ಪ್ರೆಸ್ ಬರ್ಗ್ ಒಪ್ಪಂದ** ಮಾಡಿಕೊಂಡಿತು. ನೆಪೋಲಿಯನ್ನನು ವಿಧಿಸಿದ ಷರತ್ತುಗಳೆಲ್ಲವನ್ನೂ ಆಸ್ಟ್ರಿಯಾ ಒಪ್ಪಿಕೊಂಡಿತು. ಅಲ್ಲಿಗೆ ಮೂರನೆಯ ಒಕ್ಕೂಟ ಮುರಿದು ಬಿತ್ತು.

ನೆಪೋಲಿಯನ್ನನು ೧೮೦೬ ರ ಜುಲೈ ೧೨ ರಂದು ಜರ್ಮನಿಯಲ್ಲಿ ರೈನ್ ಒಕ್ಕೂಟವನ್ನು ರಚಿಸಿದನು. ಈ ಒಕ್ಕೂಟದಲ್ಲಿ ೧೬ ಸಂಸ್ಥಾನಗಳಿದ್ದವು. ಈ ಒಕ್ಕೂಟದ ಸ್ಥಾಪನೆಯೊಂದಿಗೆ ಪವಿತ್ರ ರೋಮನ್ ಸಾಮ್ರಾಜ್ಯ ಕೊನೆಗೊಂಡಿತು. ಆಸ್ಟ್ರಿಯಾದ ಚಕ್ರವರ್ತಿ ಎರಡನೆಯ ಫ್ರಾನ್ಸಿಸ್ ಪವಿತ್ರ ರೋಮನ್ ಚಕ್ರವರ್ತಿ ಬಿರುದನ್ನು ತ್ಯಜಿಸಬೇಕಾಗಿ ಬಂತು. ೧೮೦೬ ರ ಅಕ್ಟೋಬರ್ ೧೪ ರಂದು ಪ್ರಷ್ಯಾವನ್ನು ಜೆನ ಯುದ್ಧದಲ್ಲಿ ನೆಪೋಲಿಯನ್ ಸೋಲಿಸಿದನು. ಇಟಲಿಯ ಬಹುಭಾಗವನ್ನು ಆಕ್ರಮಿಸಿ, ತನ್ನ ಸಹೋದರ ಲೂಯಿ ಬೋನಾಪಾರ್ಟೆಯನ್ನು ಹಾಲೆಂಡಿನ ಅರಸನನ್ನಾಗಿ ನೇಮಿಸಿದನು.

ಆಸ್ಟ್ರಿಯಾ ಮತ್ತು ಪ್ರಷ್ಯಾವನ್ನು ಸೋಲಿಸಿದ ಮೇಲೆ ನೆಪೋಲಿಯನ್ ರಷ್ಯಾದೊಡನೆ ಯುದ್ಧ ಮಾಡಿದ. ೧೮೦೭ ರಲ್ಲಿ ಫ್ರೀಡ್‌ಲ್ಯಾಂಡ್ ಯುದ್ಧದಲ್ಲಿ ರಷ್ಯಾವನ್ನು ಸೋಲಿಸಲಾಯಿತು. ರಷ್ಯಾದ **ಜಾರ್ ಅಲೆಗ್ಸಾಂಡರನು** ನೆಪೋಲಿಯನ್ನನೊಂದಿಗೆ **ಟಿಲ್ಸಿತ್‌ಒಪ್ಪಂದ**ವನ್ನು ಮಾಡಿಕೊಂಡನು. ನೆಪೋಲಿಯನ್ನನು ಬ್ರಿಟನ್ನಿನ ವಿರುದ್ಧ ಯೋಜಿಸಿದ್ದ ಆರ್ಥಿಕ ದಿಗ್ಬಂಧನಕ್ಕೆ (ಖಂಡಾಂತರ ಪದ್ಧತಿ) ಬೆಂಬಲ ಕೊಡಲು ಅಲೆಗ್ಸಾಂಡರ್ ಒಪ್ಪಿದನು.

ಖಂಡಾಂತರ ಪದ್ಧತಿ

ನೆಪೋಲಿಯನ್ನನು ಇಂಗ್ಲೆಂಡೊಂದನ್ನು ಬಿಟ್ಟು ಇನ್ನುಳಿದ ಯುರೋಪಿನ ರಾಷ್ಟ್ರಗಳ ಮೇಲೆ ಹತೋಟಿ ಸಾಧಿಸಿದ್ದನು. ಸೈನಿಕ ಕಾರ್ಯಾಚರಣೆಯ ಮೂಲಕ ಇಂಗ್ಲೆಂಡನ್ನು ಸೋಲಿಸುವುದು ಕಷ್ಟ ಎಂಬುದನ್ನರಿತ ನೆಪೋಲಿಯನ್ ಆರ್ಥಿಕವಾಗಿ ಇಂಗ್ಲೆಂಡನ್ನು ಕ್ಷೀಣಿಸುವ ಯೋಜನೆಯನ್ನು ಹಾಕಿದ. ಇಂಗ್ಲೆಂಡಿನ ಶಕ್ತಿ ಅಡಕವಾಗಿದ್ದುದೇ ಅದರ ವ್ಯಾಪಾರ, ವಾಣಿಜ್ಯ ಹಾಗೂ ವಸಾಹತುಗಳಲ್ಲಿ. ಇಂಗ್ಲೆಂಡ್ ನಡೆಸುತ್ತಿದ್ದ ಲಾಭಕರ ವ್ಯಾಪಾರವನ್ನು ಕುಂಠಿತಗೊಳಿಸುವ, ಆ ಮೂಲಕ ಅದರ ಸಂಪತ್ತು, ಸಮೃದ್ಧಿಯನ್ನು ಇಳಿಮುಖಗೊಳಿಸುವ ಉದ್ದೇಶದಿಂದ ನೆಪೋಲಿಯನ್ ನಡೆಸಿದ ಆರ್ಥಿಕ ಯುದ್ಧವೇ **ಖಂಡಾಂತರ ಪದ್ಧತಿ**. ನೆಪೋಲಿಯನ್ ೧೮೦೬ ರಲ್ಲಿ ಇಂಗ್ಲೆಂಡಿನ ಮೇಲೆ 'ಆರ್ಥಿಕ ದಿಗ್ಬಂಧನ'ವನ್ನು ಹೇರಿದನು.

ನೆಪೋಲಿಯನ್ನನು ಹೊರಡಿಸಿದ ಈ ಆರ್ಥಿಕ ದಿಗ್ಬಂಧನ ಇಂಗ್ಲೆಂಡಿನ ಜೊತೆಗೆ ಯುರೋಪಿನ ಇತರ ರಾಷ್ಟ್ರಗಳನ್ನೂ ಆರ್ಥಿಕ ಸಂಕಷ್ಟಕ್ಕೆ ಗುರಿ ಮಾಡಿತು. ಆದರೆ ಇಂಗ್ಲೆಂಡ್ ಇದರಿಂದ ಹೆಚ್ಚು ಕಷ್ಟಪಡಲಿಲ್ಲ. ಏಕೆಂದರೆ ಅದು ವಿಶ್ವದ ನಾನಾ ಕಡೆ ವಸಾಹತುಗಳನ್ನು ಹೊಂದಿತ್ತು. ಇಂಗ್ಲೆಂಡಿನ ವಸ್ತುಗಳಿಗೆ ಯುರೋಪಿನ ಬಂದರುಗಳು ಮುಚ್ಚಿದ್ದರೂ ವಿಶ್ವದ ಮಾರುಕಟ್ಟೆಯ ಹೆಬ್ಬಾಗಿಲು ಅದಕ್ಕೆ ತೆರೆದೇ ಇತ್ತು. ಹೀಗಾಗಿ ಯುರೋಪಿನ ಇತರ ರಾಷ್ಟ್ರಗಳು ತೊಂದರೆಗೀಡಾದವು. ಅವು ಇಂಗ್ಲೆಂಡಿನಿಂದ ಕಳ್ಳ ಸಾಗಾಣಿಕೆಯ ಮೂಲಕ ಅವಶ್ಯಕ ವಸ್ತುಗಳನ್ನು ತರಿಸಿಕೊಳ್ಳಲಾರಂಭಿಸಿದವು. ಇದು ಖಂಡಾಂತರ ಪದ್ಧತಿಯ ಪತನಕ್ಕೆ ಕಾರಣವಾಯಿತು. ಕಳ್ಳ ಸಾಗಾಣಿಕೆ ನಡೆಸಿದ ರಾಷ್ಟ್ರಗಳು ನೆಪೋಲಿಯನ್ನನ ಆಕ್ರಮಣಕ್ಕೆ ಗುರಿಯಾದವು. ಪೋರ್ಚುಗಲ್ ನೆಪೋಲಿಯನ್ನನ ಆರ್ಥಿಕ ದಿಗ್ಬಂಧನವನ್ನು ಕಾರ್ಯಗತಗೊಳಿಸಲು ನಿರಾಕರಿಸಿತು. ನೆಪೋಲಿಯನ್ ಸ್ಪೈನ್‌ನ ನೆರವಿನೊಂದಿಗೆ ಪೋರ್ಚುಗಲ್‌ನ ಮೇಲೆ ಧಾಳಿ

ಮಾಡಿ ಸೋಲಿಸಿದನು. ಪೋರ್ಚುಗಲ್ ವಶವಾದ ನಂತರವೂ ಸ್ಪೈನ್‌ನಲ್ಲಿದ್ದ ತನ್ನ ಸೇನೆಯನ್ನು ನೆಪೋಲಿಯನ್ ತೆರವು ಮಾಡದೇ ಇದ್ದುದು, ಅರಸನನ್ನಾಗಿ ನೇಮಿಸಿದ್ದು ಸ್ಪೈನ್‌ನ ಜನತೆ ಹೋರಾಡುವಂತೆ ಮಾಡಿತು. ಸ್ಪೈನ್‌ನ ಹೋರಾಟ ನೆಪೋಲಿಯನ್‌ಗೆ ತಲೆ ನೋವಾಗಿ ಪರಿಣಮಿಸಿತು. 'ಸ್ಪೈನ್‌ನ ಹುಣ್ಣು ನನ್ನನ್ನು ನಾಶಪಡಿಸಿತು' ಎಂಬುದಾಗಿ ನೆಪೋಲಿಯನ್ ಹೇಳಿಕೊಂಡ.

ಪರ್ಯಾಯ ದ್ವೀಪದ ಯುದ್ಧ

ಸ್ಪೈನ್‌ನೊಡನೆ ನಡೆದ ಯುದ್ಧವನ್ನು **ಪರ್ಯಾಯ ದ್ವೀಪದ ಯುದ್ಧ** ಎಂಬುದಾಗಿಯೂ ಕರೆಯಲಾಗಿದೆ. ಸ್ಪೈನ್ ಮತ್ತು ಪೋರ್ಚುಗಲ್ ಪ್ರದೇಶಗಳನ್ನು ಪರ್ಯಾಯ ದ್ವೀಪವೆಂದು ಕರೆಯಲಾಗುತ್ತಿತ್ತು. ಈ ಎರಡೂ ದೇಶದ ಜನರು ಫ್ರೆಂಚ್ ಸೈನ್ಯವನ್ನು ತಮ್ಮ ಗೆರಿಲ್ಲಾ ಯುದ್ಧದ ಮೂಲಕ ಸೋಲುವಂತೆ ಮಾಡಿದರು. ಇಂಗ್ಲೆಂಡ್ **ವೆಲ್ಲೆಸ್ಲಿಯ** ನೇತೃತ್ವದಲ್ಲಿ ಸ್ಪೈನ್ ಮತ್ತು ಪೋರ್ಚುಗಲ್‌ನ ನೆರವಿಗೆ ಬಂದದ್ದು ಫ್ರಾನ್ಸ್ ಸಂಪೂರ್ಣ ಸೋಲುವಂತೆ ಮಾಡಿತು. ೧೮೧೨ ರಲ್ಲಿ ಫ್ರೆಂಚ್ ಸೇನೆ ಸೋಲುವುದರ ಮೂಲಕ ಪರ್ಯಾಯ ಯುದ್ಧ ಕೊನೆಗೊಂಡಿತು.

ರಷ್ಯಾದ ದಂಡಯಾತ್ರೆ (೧೮೧೨)

ನೆಪೋಲಿಯನ್ನನು ನಡೆಸಿದ ಯುದ್ಧಗಳಲ್ಲೇ ರಷ್ಯಾದ ಮೇಲಿನ ಯುದ್ಧ ಅತ್ಯಂತ ಭೀಕರವಾದದ್ದು. ರಷ್ಯಾದ ಜಾರ್ **ಅಲೆಗ್ಸಾಂಡರ್** ನೆಪೋಲಿಯನ್ನನ ಖಂಡಾಂತರ ಪದ್ಧತಿಯನ್ನು ಬೆಂಬಲಿಸಲಿಲ್ಲ ಎನ್ನುವುದು ಯುದ್ಧಕ್ಕೆ ಕಾರಣ. ರಷ್ಯಾವು ತನ್ನ ಆರ್ಥಿಕತೆ ಹದಗೆಡುವ ಸಂದರ್ಭದಲ್ಲಿ ಇಂಗ್ಲೆಂಡಿನೊಂದಿಗೆ ವ್ಯಾಪಾರ ಸಂಬಂಧವನ್ನು ಬೆಳೆಸಿತು. ೧೮೧೨ ರಲ್ಲಿ ನೆಪೋಲಿಯನ್ ಬೃಹತ್ ಸೈನ್ಯದೊಂದಿಗೆ ದಂಡಯಾತ್ರೆ ಕೈಗೊಂಡನು. ರಷ್ಯದ ಸೇನೆ ಸೆಪ್ಟೆಂಬರ್ ೭ ರಂದು ಫ್ರೆಂಚ್ ಸೈನ್ಯದ ವಿರುದ್ಧ ಹೋರಾಡಿತು. ಆದರೆ ಈ ಯುದ್ಧ ನಿರ್ಣಾಯಕವಾದುದಾಗಿರಲಿಲ್ಲ. ರಷ್ಯನ್ ಸೇನೆ ಹಿಂದಕ್ಕೆ ಸರಿಯುತ್ತಾ **ಮಾಸ್ಕೋ**ದವರೆಗೆ ಹೋಯಿತು. ರಷ್ಯನ್ನರು ಶಾಂತಿಗೆ ಮುಂದಾಗದೆ ಮಾಸ್ಕೋ ನಗರವನ್ನೇ ತೆರವು ಮಾಡಿದರು. ಫ್ರಾನ್ಸಿನ ಸೇನೆ ಅಲ್ಲಿನ ಚಳಿಯಿಂದ ಕೂಡಿದ ಹವಾಮಾನದಿಂದಾಗಿ ಕಂಗೆಡುವಂತಾಯಿತು ಹಾಗೂ ಹಸಿವಿನಿಂದ ಬಳಲುವಂತಾಯಿತು. ಅಪಾಯವನ್ನರಿತ ನೆಪೋಲಿಯನ್ನನು ಮಾಸ್ಕೋದಿಂದ ಮರು ಪ್ರಯಾಣಿಸಲು ತೀರ್ಮಾನಿಸಿದ. ಈ ಮರು ಪ್ರಯಾಣ ಅತ್ಯಂತ ದುರಂತಮಯವಾದದ್ದಾಗಿತ್ತು. ಚಳಿ, ಹಸಿವು ಮತ್ತು ಬಳಲಿಕೆಯಿಂದ ಕಂಗೆಟ್ಟ ಫ್ರಾನ್ಸಿನ ಸೈನ್ಯವನ್ನು ರಷ್ಯಾದ **ಕೊಸಾಕ್** ಯೋಧರು **ಗೆರಿಲ್ಲಾ** ದಾಳಿಯಿಂದ ಇನ್ನಷ್ಟು ಕಂಗೆಡಿಸಿದರು. ಅನೇಕ ಫ್ರೆಂಚ್ ಸೈನಿಕರು ಹಿಮಗಟ್ಟಿದ ನದಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡರು. ಆರು ಲಕ್ಷ ಸೈನಿಕರಲ್ಲಿ ಜೀವಂತವಾಗಿ ಹಿಂದಿರುಗಿದವರು ಒಂದು ಲಕ್ಷಕ್ಕೂ ಕಡಿಮೆ ಸೈನಿಕರು. ಇದು ರಷ್ಯಾದ ದಂಡಯಾತ್ರೆಯ ಭೀಕರತೆಯನ್ನು ತಿಳಿಸುತ್ತದೆ. ನೆಪೋಲಿಯನ್ ಮಾರುವೇಷದಲ್ಲಿ **ಪ್ಯಾರಿಸ್** ತಲುಪಿದ.

ಫ್ರಾನ್ಸಿನ ವಿರುದ್ಧದ ನಾಲ್ಕನೆಯ ಒಕ್ಕೂಟ

ನೆಪೋಲಿಯನ್ನನು ರಷ್ಯಾದ ದಂಡಯಾತ್ರೆಯಲ್ಲಿ ಅನುಭವಿಸಿದ ಕಷ್ಟ-ನಷ್ಟಗಳನ್ನು ಗಮನಿಸಿ ರಷ್ಯಾ, ಪ್ರಷ್ಯಾ, ಆಸ್ಟ್ರಿಯಾ ಮತ್ತು ಇಂಗ್ಲೆಂಡ್ ದೇಶಗಳು ಫ್ರಾನ್ಸಿನ ವಿರುದ್ಧ ನಾಲ್ಕನೆಯ ಒಕ್ಕೂಟವನ್ನು ರಚಿಸಿಕೊಂಡವು. ೧೮೧೩ ರಲ್ಲಿ ನಡೆದ ಲಿಪ್‌ಜಿಗ್ ಅಥವಾ ರಾಷ್ಟ್ರಗಳ ಯುದ್ಧದಲ್ಲಿ ನೆಪೋಲಿಯನ್ ಸೋತುಹೋದ. ಮಿತ್ರ ರಾಷ್ಟ್ರಗಳ ಸೈನ್ಯ ೧೮೧೪ ರ ಮಾರ್ಚ್ ೩೦ ರಂದು ಪ್ಯಾರಿಸ್ ಪ್ರವೇಶಿಸಿತು. ನೆಪೋಲಿಯನ್ ಅಧಿಕಾರ ಬಿಟ್ಟು ಕೊಡಬೇಕಾಯಿತು. ಮೆಡಿಟರೇನಿಯನ್ ಸಮುದ್ರದ ಎಲ್ಬಾ ದ್ವೀಪಕ್ಕೆ ನೆಪೋಲಿಯನ್ನನನ್ನು ಕಳುಹಿಸಲಾಯಿತು. ಬೂರ್ಬನ್ ವಂಶದ ೧೮ನೆಯ ಲೂಯಿ ಮಿತ್ರರಾಷ್ಟ್ರಗಳ ನೆರವಿನಿಂದ ಫ್ರಾನ್ಸಿನ ರಾಜನಾದನು. ಆದರೆ ನೆಪೋಲಿಯನ್ನನು ಒಂದು ವರ್ಷದ ಒಳಗೆ ಎಲ್ಬಾದಿಂದ ತಪ್ಪಿಸಿಕೊಂಡು ಬಂದು ಮತ್ತೆ ಫ್ರಾನ್ಸಿನ ಚಕ್ರವರ್ತಿಯಾದ. ಅವನ ಆಳ್ವಿಕೆ ನೂರು ದಿವಸಗಳ ಕಾಲ ಮುಂದುವರಿಯಿತು. ಒಕ್ಕೂಟದ ರಾಷ್ಟ್ರಗಳು ಅಂತಿಮ ಯುದ್ಧಕ್ಕೆ ಸಜ್ಜಾದವು. ೧೮೧೫ ರ ಜೂನ್ ೧೮ ರಂದು ವಾಟರ್‌ಲೂ ಎಂಬಲ್ಲಿ ನೆಪೋಲಿಯನ್ ಸಂಪೂರ್ಣವಾಗಿ ಸೋಲಲ್ಪಟ್ಟನು. ಸೆರೆಸಿಕ್ಕ ನೆಪೋಲಿಯನ್ನನನ್ನು ಸೆಂಟ್ ಹೆಲೆನಾ ಎಂಬ ದ್ವೀಪಕ್ಕೆ ಸಾಗಿಸ ಲಾಯಿತು. ಸೆರೆವಾಸದ ಕಷ್ಟವನ್ನನುಭವಿಸಿದ ನೆಪೋಲಿಯನ್ನನು ೧೮೨೧ ರ ಮೇ ೫ ರಂದು ಕರುಳಿನ ಕ್ಯಾನ್ಸರ್‌ನಿಂದ ಅಸುನೀಗಿದನು. ಅಲ್ಲಿಗೆ ಯುರೋಪ್ ಕಂಡ ಅದ್ವಿತೀಯ ಯೋಧನೊಬ್ಬನ ಅಧ್ಯಾಯ ಕೊನೆಗೊಂಡಿತು.

ಸುಧಾರಣೆಗಳು

ನೆಪೋಲಿಯನ್ನನು ನಿರಂತರ ಯುದ್ಧಗಳಲ್ಲಿ ತೊಡಗಿಕೊಂಡಿದ್ದರೂ ಫ್ರಾನ್ಸಿನ ಆಡಳಿತ ವನ್ನು ಕಡೆಗಣಿಸಿರಲಿಲ್ಲ. ನೆಪೋಲಿಯನ್ ಆಡಳಿತದ ಎಲ್ಲ ಕ್ಷೇತ್ರಗಳಲ್ಲೂ ಮಹತ್ತರವಾದ ಸುಧಾರಣೆಗಳನ್ನು ಜಾರಿಗೆ ತಂದನು. ಅರಾಜಕತೆಯಿಂದ ಕೂಡಿದ್ದ ಫ್ರಾನ್ಸಿನಲ್ಲಿ ಶಾಂತಿ, ಭದ್ರತೆ ಹಾಗೂ ದಕ್ಷ ಆಡಳಿತವನ್ನು ಜಾರಿಗೆ ತರುವುದು ಸುಲಭದ ಕೆಲಸವಾಗಿರಲಿಲ್ಲ.

ಆಡಳಿತಾತ್ಮಕ ಸುಧಾರಣೆಗಳು

ನೆಪೋಲಿಯನ್ನನು ಫ್ರಾನ್ಸಿನಾದ್ಯಂತ ಏಕರೀತಿಯ ಆಡಳಿತವನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಿದ. ಇದರಿಂದ ಸಂಪೂರ್ಣ ನಿಯಂತ್ರಣ ಸಾಧ್ಯ ಎನ್ನುವುದು ನೆಪೋಲಿಯನ್ನನ ಆಲೋಚನೆಯಾಗಿತ್ತು. ಕೇಂದ್ರೀಕೃತ ಆಡಳಿತ ವ್ಯವಸ್ಥೆಯು ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸಿತು. ಆದರೆ ಹಿಂದಿನ ಆಡಳಿತ ವಿಭಾಗಗಳು ಮತ್ತು ಚುನಾಯಿತ ಸ್ಥಾನಿಕ ಸಂಸ್ಥೆಗಳು ಹಾಗೆಯೇ ಮುಂದುವರಿದವು. ಅಧಿಕಾರಿಗಳನ್ನು ನೆಪೋಲಿಯನ್ನನೇ ನೇಮಕ ಮಾಡುತ್ತಿದ್ದನು.

ನ್ಯಾಯಾಂಗ ಸುಧಾರಣೆಗಳು

ನೆಪೋಲಿಯನ್ನನು ಚಕ್ರವರ್ತಿಯಾದ ಮೇಲೆ ಹೊಸ ಕಾನೂನು ಸಂಹಿತೆಗಳನ್ನು ಜಾರಿಗೊಳಿಸಿದನು. ಫ್ರೆಂಚ್ ಕಾನೂನು ಸಂಹಿತೆಯ ಕ್ರೋಢೀಕರಣ ಅವನ ಮಹತ್ವದ ಸಾಧನೆಗಳಲ್ಲೊಂದು. ಸರ್ವಸಮಾನವಾದ ಕಾನೂನುಗಳಿರಬೇಕೆನ್ನುವುದು ಕ್ರಾಂತಿಯ ದಿನಗಳ ಬೇಡಿಕೆಯಾಗಿತ್ತು. ಕ್ರಾಂತಿಯ ತತ್ವಗಳಾದ **ಸಮಾನತೆ** ಮತ್ತು **ಧಾರ್ಮಿಕ ಸಹಿಷ್ಣುತೆ**ಗಳನ್ನು ನೂತನ ಕಾಯಿದೆಗಳಲ್ಲಿ ಅಳವಡಿಸಲಾಯಿತು. ನೆಪೋಲಿಯನ್ನನು ಸರಳವಾದ, ಸಂಕ್ಷಿಪ್ತವಾದ ಹಾಗೂ ವೈಜ್ಞಾನಿಕವಾದ ಕಾನೂನುಗಳನ್ನು ನ್ಯಾಯಾಂಗ ಪಂಡಿತರ ನೆರವಿನಿಂದ ಜಾರಿಗೊಳಿಸಿದ. ಅವುಗಳನ್ನು **ಕೋಡ್ ನೆಪೋಲಿಯನ್** ಎಂದೇ ಕರೆಯಲಾಗಿದೆ. ಕೋಡ್ ನೆಪೋಲಿಯನ್ ಅಥವಾ 'ನೆಪೋಲಿಯನ್ನನ ಕಾನೂನು ಸಂಹಿತೆಗಳು' ಐದು ಭಾಗಗಳಾಗಿ ವಿಂಗಡಣೆಗೊಂಡಿದ್ದವು. ಅವುಗಳೆಂದರೆ **ಸಿವಿಲ್ ಕೋಡ್, ಸಿವಿಲ್ ಪ್ರೊಸಿಜರ್ ಕೋಡ್, ಕ್ರಿಮಿನಲ್ ಪ್ರೊಸಿಜರ್ ಕೋಡ್, ಪಿನಲ್ ಕೋಡ್** ಹಾಗೂ **ಕಮರ್ಷಿಯಲ್ ಕೋಡ್.**

ಧಾರ್ಮಿಕ ಸುಧಾರಣೆಗಳು

ನೆಪೋಲಿಯನ್ನನು ಕ್ರಾಂತಿಯ ಸಂದರ್ಭದಲ್ಲಿ ಮೂಲೆಗುಂಪಾಗಿದ್ದ **ಕ್ಯಾಥೋಲಿಕ್ ಧರ್ಮ**ವನ್ನು ಫ್ರಾನ್ಸಿನಲ್ಲಿ ಪುನರ್‌ಸ್ಥಾಪನೆ ಮಾಡಿದ. ಫ್ರಾನ್ಸಿನಲ್ಲಿ ಕ್ಯಾಥೋಲಿಕ್ ಧರ್ಮೀಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರ ಬೆಂಬಲವನ್ನು ಪಡೆಯುವುದಕ್ಕಾಗಿ ಕ್ಯಾಥೋಲಿಕ್ ಚರ್ಚನ್ನು ಸ್ಥಾಪಿಸಿದನು. ೧೮೦೨ ರಲ್ಲಿ **ಪೋಪನೊಂದಿಗೆ ಕನ್‌ಕಾರ್ಡೆಟ್ ಒಪ್ಪಂದ**ವನ್ನು ಮಾಡಿ ಪೋಪನನ್ನು ಫ್ರೆಂಚ್ ಕ್ಯಾಥೋಲಿಕ್ ಚರ್ಚಿನ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು. ಈ ಒಪ್ಪಂದದ ಪ್ರಕಾರ **ಚರ್ಚ್** ಮತ್ತು ಧರ್ಮವನ್ನು ರಾಜ್ಯದ ಅಧೀನ ದಲ್ಲಿರುವಂತೆ ಮಾಡಲಾಯಿತು. ನೆಪೋಲಿಯನ್ನನು ಧಾರ್ಮಿಕ ಸಹಿಷ್ಣುತಾ ನೀತಿಯನ್ನು ಅನುಸರಿಸಿದನು.

ಆರ್ಥಿಕ ಸುಧಾರಣೆಗಳು

ಫ್ರಾನ್ಸ್‌ನ್ನು ಆರ್ಥಿಕವಾಗಿ ಬಲಿಷ್ಟ ರಾಷ್ಟ್ರವನ್ನಾಗಿಸಲು ನೆಪೋಲಿಯನ್ನನು ಅನೇಕ ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸಿದನು. ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಲಾಯಿತು. ಆಡಳಿತದ ಕೇಂದ್ರೀಕರಣ ಇದಕ್ಕೆ ಸಹಕಾರಿಯಾಯಿತು. ಹೊಸ ಭೂ ಕಂದಾಯ ಪದ್ಧತಿಯನ್ನು ಜಾರಿಗೆ ತರಲಾಯಿತು. ಫ್ರಾನ್ಸ್‌ನಲ್ಲಿ ವ್ಯಾಪಾರಿ ಸಂಸ್ಥೆಗಳನ್ನು ವ್ಯವಸ್ಥೆಗೊಳಿಸಿ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಯಿತು. ಕೃಷಿಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಫ್ರಾನ್ಸಿನ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸಲು **ಬ್ಯಾಂಕ್ ಆಫ್ ಫ್ರಾನ್ಸ್** ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. **ಫ್ರಾಂಕ್** ಎಂಬ ಹೊಸ ನಾಣ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

ಶೈಕ್ಷಣಿಕ ಸುಧಾರಣೆಗಳು

ಫ್ರಾನ್ಸಿನಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಯಿತು. ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲೂ ಶಾಲೆಗಳನ್ನು ತೆರೆಯಲಾಯಿತು. ಪ್ಯಾರಿಸ್‌ನಲ್ಲಿ ಶಿಕ್ಷಕ ತರಬೇತಿ ಶಾಲೆಯನ್ನು ಸ್ಥಾಪಿಸಲಾಯಿತು. ೧೮೦೮ ರಲ್ಲಿ ಪ್ಯಾರಿಸ್‌ನಲ್ಲಿ **ಫ್ರಾನ್ಸ್** ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಹಲವಾರು ಕಲಾವಸ್ತುಗಳ ಪ್ರದರ್ಶನ ಶಾಲೆ ಮತ್ತು ಫ್ರೆಂಚ್ ಅಕಾಡೆಮಿಗಳನ್ನು ಸ್ಥಾಪಿಸಲಾಯಿತು. ಕ್ರಾಂತಿಯ ಕಾಲದಲ್ಲಿ ಮುಚ್ಚಲಾಗಿದ್ದ ಚರ್ಚ್ ಶಾಲೆಗಳನ್ನು ಮತ್ತೆ ತೆರೆಯುವುದಕ್ಕೆ ಅವಕಾಶ ನೀಡಲಾಯಿತು. ವಿದ್ಯಾರ್ಥಿವೇತನ ನೀಡುವುದರ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

ಲೀಜನ್ ಆಫ್ ಹಾನರ್

'ಲೀಜನ್ ಆಫ್ ಹಾನರ್' ಎಂದರೆ ದೇಶಕ್ಕಾಗಿ ಮಹತ್ವದ ಸೇವೆ ಸಲ್ಲಿಸಿದವರಿಗೆ ಗೌರವ ಪ್ರಶಸ್ತಿ ಮತ್ತು ಧನ ಸಹಾಯ ನೀಡುವ ಒಂದು ವಿಧಾನ. ಫ್ರಾನ್ಸಿನಲ್ಲಿ ಕ್ರಾಂತಿಗೆ ಮೊದಲು ಕೇವಲ ರಾಜಪರಿವಾರದವರು ಮತ್ತು ಉನ್ನತ ವರ್ಗದವರು ಮಾತ್ರ ಪ್ರಶಸ್ತಿಗಳನ್ನು ಹಾಗೂ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿದ್ದರು. ನೆಪೋಲಿಯನ್ನನು ಇದನ್ನು ವಿರೋಧಿಸಿ, ತೆಗೆದು ಹಾಕಿದನು. ಅಭ್ಯರ್ಥಿಯ ಯೋಗ್ಯತೆಗೆ ಮಾತ್ರ ಗಮನ ನೀಡಿ ಗೌರವಿಸುವ ಹೊಸ ವಿಧಾನವನ್ನು ಜಾರಿಗೊಳಿಸಿದನು. ಫ್ರಾನ್ಸಿನಲ್ಲಿ **ದಿ ಲೀಜನ್ ಆಫ್ ಹಾನರ್** ಪ್ರಶಸ್ತಿ ನೀಡುವ ಪರಿಪಾಠ ಇಂದಿಗೂ ಉಳಿದುಕೊಂಡು ಬಂದಿದೆ.

ಲೋಕೋಪಯೋಗಿ ಕೆಲಸಗಳು

ನೆಪೋಲಿಯನ್ನನು ತನ್ನ ಸೈನಿಕ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಅನೇಕ ಹೆದ್ದಾರಿಗಳು ಮತ್ತು ಸೇತುವೆಗಳನ್ನು ನಿರ್ಮಿಸಿದನು. ನೀರಾವರಿ ಅನುಕೂಲಕ್ಕಾಗಿ ಅಣೆಕಟ್ಟುಗಳು ಮತ್ತು ಕಾಲುವೆಗಳನ್ನು ನಿರ್ಮಿಸಲಾಯಿತು. ಬಂದರುಗಳನ್ನು ಅಭಿವೃದ್ಧಿಗೊಳಿಸಿ ವಿದೇಶಿ ವ್ಯಾಪಾರವನ್ನು ಚುರುಕುಗೊಳಿಸಲಾಯಿತು. ಫ್ರಾನ್ಸಿನಲ್ಲಿ ಅನೇಕ ಸಾರ್ವಜನಿಕ ಕಟ್ಟಡಗಳು ವಸ್ತು ಸಂಗ್ರಹಾಲಯಗಳು ಹಾಗೂ ಸ್ಮಾರಕ ಭವನಗಳನ್ನು ನಿರ್ಮಿಸಲಾಯಿತು. **ಪ್ಯಾರಿಸ್‌ನಲ್ಲಿ** ಅನೇಕ ಉದ್ಯಾನವನಗಳು, ಕಾರಂಜಿಗಳು, ಸುಂದರ ಅರಮನೆಗಳು ಹಾಗೂ ರಸ್ತೆಗಳನ್ನು ನಿರ್ಮಿಸಿ ಪ್ಯಾರಿಸ್ಸನ್ನು ಯುರೋಪಿನ ಅತ್ಯಂತ ಸುಂದರ ನಗರವನ್ನಾಗಿ ಮಾಡಲಾಯಿತು.

ನೆಪೋಲಿಯನ್ನನ ಅವನತಿಗೆ ಕಾರಣಗಳು

೧೮೦೪ ರಿಂದ ೧೮೧೪ ರವರೆಗೆ **ಚಕ್ರವರ್ತಿ**ಯಾಗಿ ಮೆರೆದ ಹಾಗೂ ಯುರೋಪಿನ ಭೂಪಟವನ್ನು ತನಗೆ ಇಷ್ಟ ಬಂದಂತೆ ರಚಿಸಿದ ಹಾಗೂ ಗಡಿಗಳನ್ನು ಬದಲಾಯಿಸಿದ ನೆಪೋಲಿಯನ್ನನು ಕೊನೆಗೂ ಶರಣಾಗಬೇಕಾಯಿತು. ಯುರೋಪಿನ ಸಂಯುಕ್ತ ಸೇನೆಗೆ ಸೋತು ಸೆರೆಮನೆ ವಾಸ ಅನುಭವಿಸಿ, ಅಲ್ಲೇ ತನ್ನ ಅಂತ್ಯವನ್ನು ಕಾಣಬೇಕಾಯಿತು. ನೆಪೋಲಿಯನ್ನನ ಅವನತಿಗೆ ಯುರೋಪಿನ ಒಡೆಯನಾಗಬೇಕೆನ್ನುವ ಆತನ ಮಹದಾಸೆಯೇ ಮೂಲ ಕಾರಣವಾಯಿತು. ನಿರಂತರ ಯುದ್ಧಗಳಲ್ಲಿ ತೊಡಗಿದ್ದ ನೆಪೋಲಿಯನ್ನನು

ಯುರೋಪಿನಾದ್ಯಂತ ವೈರಿಗಳನ್ನು ಸೃಷ್ಟಿಸಿಕೊಂಡ. ಯುರೋಪಿನ ರಾಷ್ಟ್ರಗಳು ಒಕ್ಕೂಟಗಳನ್ನು ರಚಿಸಿಕೊಂಡು ನೆಪೋಲಿಯನ್ನನನ್ನು ಎದುರಿಸಿದವು. ಹೀಗಾಗಿ ನೆಪೋಲಿಯನ್ನನ ಅವನತಿಗೆ ಅವನ ಸೈನಿಕ ನೀತಿಯು ಕಾರಣವಾಯಿತು.

ನೆಪೋಲಿಯನ್ನನು ಜಾರಿಗೆ ತಂದ 'ಖಂಡಾಂತರ ಪದ್ಧತಿ' ಅವನ ಅವನತಿಗೇ ಕಾರಣ ವಾಯಿತು. ಬಲಿಷ್ಠ ಇಂಗ್ಲೆಂಡನ್ನು ಆರ್ಥಿಕವಾಗಿ ದಿವಾಳಿಯನ್ನಾಗಿಸುವ ನೆಪೋಲಿಯನ್ನನ ಪ್ರಯತ್ನ ವಿಫಲವಾಯಿತು. ನೆಪೋಲಿಯನ್ನನು ಇಂಗ್ಲೆಂಡಿನ ವಿರುದ್ಧ ಘೋಷಿಸಿದ ಆರ್ಥಿಕ ದಿಗ್ಬಂಧನ ಯುರೋಪಿನ ಇತರ ರಾಷ್ಟ್ರಗಳಿಗೆ ಅಪಾರ ನಷ್ಟವನ್ನುಂಟು ಮಾಡಿ ವ್ಯಾಪಕ ಟೀಕೆಗೆ ಗುರಿಯಾಯಿತು. ನೆಪೋಲಿಯನ್ನನನ್ನು ಬೆಂಬಲಿಸುತ್ತಿದ್ದ ದೇಶಗಳೂ ಇದರಿಂದಾಗಿ ವಿರೋಧಿಸಲಾರಂಭಿಸಿದವು. ಇಂಗ್ಲೆಂಡಿನೊಂದಿಗೆ ವ್ಯಾಪಾರ ಸಂಬಂಧವನ್ನು ಇಟ್ಟುಕೊಂಡಿದ್ದ ದೇಶಗಳ ವಿರುದ್ಧ ನೆಪೋಲಿಯನ್ನನು ಯುದ್ಧ ಮಾಡಿ ಅಪಾರ ನಷ್ಟವನ್ನು ಅನುಭವಿಸಿದನು.

ನೆಪೋಲಿಯನ್ನನ ಅವನತಿಗೆ ಇನ್ನೊಂದು ಮುಖ್ಯ ಕಾರಣ ಸ್ಪೈನ್ ದೇಶದೊಂದಿಗಿನ ಅವನ ಯುದ್ಧ. 'ಸ್ಪಾನಿಷ್ ಹುಣ್ಣು ನನ್ನನ್ನು ನಾಶಪಡಿಸಿತು' ಎಂಬುದಾಗಿ ಸ್ವತಹ ನೆಪೋಲಿಯನ್ನನೇ ಹೇಳಿಕೊಂಡ. ಸ್ಪೈನ್‌ನ ಅರಸನನ್ನು ಪದಚ್ಯುತಗೊಳಿಸಿ ತನ್ನ ಸಹೋದರ ನನ್ನು ಅರಸನನ್ನಾಗಿ ನೇಮಿಸಿದ ನೆಪೋಲಿಯನ್ನನ ಕ್ರಮ ಸ್ಪೈನ್‌ನಲ್ಲಿ ಸ್ವಾತಂತ್ರ್ಯ ಹೋರಾಟದ ಆರಂಭಕ್ಕೆ ಕಾರಣವಾಯಿತು. ಸ್ಪೈನ್ ಇಂಗ್ಲೆಂಡಿನ ನೆರವಿನೊಂದಿಗೆ ಕೊನೆಯವರೆಗೂ ಗೆರಿಲ್ಲಾ ಯುದ್ಧ ನಡೆಸಿ ನೆಪೋಲಿಯನ್ನನಿಗೆ ಸೋಲುಂಟಾಗುವಂತೆ ಮಾಡಿತು.

ನೆಪೋಲಿಯನ್ನನ ರಷ್ಯಾದ ಮೇಲಿನ ದಂಡಯಾತ್ರೆ ಅಪಾರ ಸಾವು-ನೋವುಗಳಿಗೆ ಕಾರಣವಾಯಿತು. ಈ ದಂಡಯಾತ್ರೆಯು ನೆಪೋಲಿಯನ್ನನನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಕ್ಷೀಣಿಸುವಂತೆ ಮಾಡಿತು. ಇದು ಯುರೋಪಿನ ರಾಷ್ಟ್ರಗಳು ಮತ್ತೆ ಒಗ್ಗೂಡಿ ಒಕ್ಕೂಟವನ್ನು ರಚಿಸುವಂತೆ ಮಾಡಿತು. ನೆಪೋಲಿಯನ್ನನ ಸೋಲು ಮಿತ್ರ ರಾಷ್ಟ್ರಗಳಿಗೆ ಗೆಲುವಾಗಿ ಪರಿಣಮಿಸಿತು.

ಮಿತ್ರರಾಷ್ಟ್ರಗಳು ೧೮೧೩ ರಲ್ಲಿ ನೆಪೋಲಿಯನ್ನನನ್ನು ಸೋಲಿಸಿದ ಮೇಲೆ ಶಾಂತಿ ಸಂಧಾನ ಮಾಡಿಕೊಳ್ಳಲು ಆಹ್ವಾನಿಸಿದವು ಹಾಗೂ ಅನೇಕ ಉದಾರ ಷರತ್ತುಗಳನ್ನು ಸೂಚಿಸಿದವು. ಆದರೆ ನೆಪೋಲಿಯನ್ನನು ಉದಾರ ಷರತ್ತುಗಳನ್ನು ಧಿಕ್ಕರಿಸಿ 'ನಾನೊಬ್ಬ ಅದೃಷ್ಟದ ಶಿಶು, ಸೋಲನ್ನು ಒಪ್ಪಿಕೊಳ್ಳಲಾರೆ' ಎಂದು ತಿಳಿಸಿ ಹೋರಾಟ ಮುಂದುವರಿಸಿದನು. ಅದರ ಪರಿಣಾಮವಾಗಿ ವಾಟರ್‌ಲೂ ಕದನದಲ್ಲಿ ಸಂಪೂರ್ಣವಾಗಿ ಸೋತು ಶರಣಾದನು.

ಕ್ರಾಂತಿಯ ತತ್ವಗಳನ್ನು ಮೈಗೂಡಿಸಿಕೊಂಡು ಬೆಳೆದ ನೆಪೋಲಿಯನ್ನನು ಸರ್ವಾಧಿಕಾರಿ ಯಾಗಿ, ಚಕ್ರವರ್ತಿಯಾಗಿ ಬೆಳೆದದ್ದು ಫ್ರಾನ್ಸಿನಲ್ಲಿ ಕೆಲವು ಗುಂಪುಗಳು ಅವನನ್ನು ವಿರೋಧಿಸು ವಂತೆ ಮಾಡಿದ್ದವು. ಗಣರಾಜ್ಯವಾದಿಗಳ ಗುಂಪು ನೆಪೋಲಿಯನ್ನನನ್ನು ವಿರೋಧಿಸುತ್ತಿತ್ತು. ಕೆಲವರು ನೆಪೋಲಿಯನ್ನನಿಗೆ ವಿಧೇಯರಾಗಿದ್ದುಕೊಂಡೇ ಅವನ ವಿರುದ್ಧ ಕೆಲಸ ಮಾಡುತ್ತಿದ್ದರು. ಇದಕ್ಕೆ ನೆಪೋಲಿಯನ್ನನ ಸರ್ವಾಧಿಕಾರಿ ಧೋರಣೆಯೇ ಮುಖ್ಯ ಕಾರಣ. ಹೀಗೆ ನೆಪೋಲಿಯನ್ನನು ಅನುಸರಿಸಿದ ನೀತಿಗಳೇ ಅವನ ಅವನತಿಗೆ ದಾರಿ ಮಾಡಿಕೊಟ್ಟವು.

೨.೩ ಇಟಲಿಯ ಏಕೀಕರಣ

ಛಿದ್ರ ಛಿದ್ರಗೊಂಡ ಇಟಲಿಯನ್ನು ಒಂದುಗೂಡಿಸಲು ನಡೆಸಿದ ಪ್ರಯತ್ನವೇ ಏಕೀಕರಣ ಚಳವಳಿ. ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕ್‌ನ ಪ್ರಕಾರ 'ಇಟಲಿಯು ಕೇವಲ ಭೌಗೋಳಿಕ ಪದವಿನ್ಯಾಸ ಮಾತ್ರ'. ಇಟಲಿಯು ಹಲವಾರು ರಾಜ್ಯಗಳಾಗಿ ಒಡೆದು ಹೋಗಿ ವಿಭಿನ್ನ ರೀತಿಯ ಆಡಳಿತ ವ್ಯವಸ್ಥೆಗೆ ಒಳಪಟ್ಟಿತ್ತು. ಯುರೋಪಿನ ಹಲವಾರು ರಾಷ್ಟ್ರಗಳು ಇಟಲಿಯ ವಿವಿಧ ರಾಜ್ಯಗಳ ಮೇಲೆ ತಮ್ಮ ನಿಯಂತ್ರಣ ಸಾಧಿಸಿದ್ದವು. ಆಸ್ಟ್ರಿಯಾದ **ಹಾಬ್ಸ್‌ಬರ್ಗ್** ರಾಜವಂಶದವರು **ಪಾರ್ಮ, ಮೊಡೆನಾ** ಮತ್ತು **ಟಸ್ಕನಿ** ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದರು. ಆಸ್ಟ್ರಿಯಾವು **ಲೊಂಬಾರ್ಡಿ** ಮತ್ತು **ವೆನೀಶಿಯಾ**ಗಳ ಮೇಲೆ ನೇರ ಹತೋಟಿ ಸಾಧಿಸಿತ್ತು. **ನೇಪಲ್ಸ್** ಮತ್ತು **ಸಿಸಲಿ** ರಾಜ್ಯಗಳು **ಸ್ಪೈನ್**‌ನ **ಬೂರ್ಬನ್** ರಾಜವಂಶದ ನಿಯಂತ್ರಣಕ್ಕೆ ಒಳಪಟ್ಟಿತ್ತು. ಮಧ್ಯ ಇಟಲಿಯು **ಪೋಪ**ನ ಅಧೀನದಲ್ಲಿತ್ತು. **ಸಾರ್ಡೀನಿಯ** ಮತ್ತು **ಪೀಡ್‌ಮಾಂಟ್** ಮಾತ್ರ ಇಟಲಿಯ **ಸೆವಾಯ್** ರಾಜಮನೆತನಕ್ಕೆ ಸೇರಿತ್ತು. ಹೀಗೆ ಇಟಲಿಯು ಹರಿದು ಹಂಚಿಹೋಗಿತ್ತು.

ಹರಿದು ಹಂಚಿಹೋಗಿದ್ದ ಇಟಲಿಯನ್ನು ಒಂದುಗೂಡಿಸುವ ಪ್ರಯತ್ನ ರಾಷ್ಟ್ರೀಯತೆಯ ಬೆಳವಣಿಗೆಯೊಂದಿಗೆ ಇಟಲಿಯಲ್ಲಿ ಆರಂಭಗೊಂಡಿತು. ಇಟಲಿಯ ರಾಜ್ಯಗಳನ್ನು ಮೊದಲ ಬಾರಿಗೆ ಒಂದುಗೂಡಿಸುವ ಪ್ರಯತ್ನವನ್ನು ಮಾಡಿದವನು **ನೆಪೋಲಿಯನ್ ಬೋನಾಪಾರ್ಟೆ**. ನೆಪೋಲಿಯನ್ ಇಟಲಿಯಲ್ಲಿ ಫ್ರೆಂಚ್ ಕಾನೂನುಗಳನ್ನು ಜಾರಿಗೊಳಿಸುವುದರ ಮೂಲಕ ವ್ಯವಸ್ಥಿತ ಆಡಳಿತವನ್ನು ಜಾರಿಗೆ ತಂದನು. ಇಟಲಿಯ ರಾಜ್ಯಗಳನ್ನು ಒಂದುಗೂಡಿಸುವ ಪ್ರಯತ್ನವನ್ನು ನೆಪೋಲಿಯನ್ನನು ಮೊದಲ ಬಾರಿಗೆ ಮಾಡಿದನು. ಇದರಿಂದ ಇಟಾಲಿಯನ್ನರು ಏಕತೆಯ ಅನುಭವವನ್ನು ಪಡೆಯುವಂತಾಯಿತು. ಆದರೆ ನೆಪೋಲಿಯನ್ನನ ಅವನತಿಯ ಬಳಿಕ ಮತ್ತೆ ಇಟಲಿ ವಿಭಜನೆಗೊಂಡಿತು. ೧೮೧೫ ರಲ್ಲಿ ವಿಯೆನ್ನಾದಲ್ಲಿ ಸಭೆ ಸೇರಿದ ಯುರೋಪಿನ ನಾಯಕರು ಯುರೋಪಿನ ಭೂಪಟವನ್ನು ತಮಗಿಷ್ಟ ಬಂದಂತೆ ಪುನರ್ ನಿರ್ಮಿಸಿಕೊಂಡರು. ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕನು ಇಟಲಿಯ ರಾಜ್ಯಗಳು ಒಂದು ಗೂಡದಂತೆ ನೋಡಿಕೊಂಡನು.

ಇಟಲಿಯ ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಮೂಡಿಸುವಲ್ಲಿ ಫ್ರಾನ್ಸಿನಲ್ಲಿ ನಡೆದ ಮೂರು ಕ್ರಾಂತಿಗಳು ಪ್ರಮುಖ ಪಾತ್ರವಹಿಸಿದವು. ೧೭೮೯ ರ ಕ್ರಾಂತಿ, ೧೮೩೦ ಮತ್ತು ೧೮೪೮ ರ ಕ್ರಾಂತಿಗಳು ಇಟಲಿಯಲ್ಲಿ ರಾಷ್ಟ್ರೀಯತೆಯ ಕಿಡಿ ಕಾಣಿಸಿಕೊಳ್ಳುವಂತೆ ಮಾಡಿದವು. **ಸ್ವಾತಂತ್ರ್ಯ, ಸಮಾನತೆ** ಮತ್ತು **ಭ್ರಾತೃತ್ವ**ದ ಭಾವನೆಗಳು ಇಟಲಿಯ ಜನರನ್ನು ಜಾಗೃತಗೊಳಿಸಿದವು. ೧೮೩೦ ಮತ್ತು ೧೮೪೮ ರ ಫ್ರೆಂಚ್ ಕ್ರಾಂತಿಯ ಪರಿಣಾಮವಾಗಿ ಇಟಲಿಯಲ್ಲಿ ಅನೇಕ ಆಸ್ಟ್ರಿಯಾ ಮತ್ತು ಫ್ರಾನ್ಸ್‌ನ ಪ್ರವೇಶದಿಂದಾಗಿ ಹಲವಾರು ರೀತಿಯ ಕಷ್ಟನಷ್ಟಗಳಿಗೆ ಒಳಗಾದವು. ಇಟಾಲಿಯನ್ನರು ತಮ್ಮ ಹೋರಾಟದಲ್ಲಿ ಯಶಸ್ಸನ್ನು

ಕಾಣದಿದ್ದರೂ, ಮುಂದಿನ ಹೋರಾಟಕ್ಕೆ ಸರಿಯಾದ ಮಾರ್ಗೋಪಾಯಗಳನ್ನು ಕಂಡುಕೊಂಡರು.

ಇಟಲಿಯ ಏಕೀಕರಣದ ಹೋರಾಟದಲ್ಲಿ ಗುಪ್ತ ಸಂಘಗಳ ಪಾತ್ರ ಮಹತ್ವದ್ದು. ಛಿದ್ರಗೊಂಡ ಇಟಲಿಯನ್ನು ಒಂದುಗೂಡಿಸುವ ಹಾಗೂ ವಿದೇಶಿ ಆಳ್ವಿಕೆಯನ್ನು ಕೊನೆಗೊಳಿಸುವ ನಿಟ್ಟಿನಲ್ಲಿ **ಕಾರ್ಬೋನರಿ ಸಂಘ** ಪ್ರಮುಖವಾದದ್ದು. ೧೮೨೦-೩೧ ರ ಅವಧಿಯಲ್ಲಿ ಈ ಸಂಘ ಇಟಲಿಯಾದ್ಯಂತ ಅನೇಕ ಹೋರಾಟಗಳನ್ನು ನಡೆಸಿತು. ಇದೊಂದು ಕ್ರಾಂತಿಕಾರಿ ಸಂಘವಾಗಿದ್ದು, ವಿದೇಶಿಯರಿಗೆ ಭಯದ ವಾತಾವರಣವನ್ನು ಹುಟ್ಟುಹಾಕಿತು. ಆದರೆ ಆಸ್ಟ್ರಿಯಾವು ತನ್ನ ಸೈನಿಕ ಕಾರ್ಯಾಚರಣೆಯ ಮೂಲಕ ಈ ಸಂಘ ಮತ್ತು ಅದರ ಶಾಖೆಗಳನ್ನು ಹತ್ತಿಕ್ಕಿತು. ಆದರೆ ಕಾರ್ಬೋನರಿ ಸಂಘ ಇಟಲಿಯ ಜನರ ಮನಸ್ಸಿನಲ್ಲಿ ಹುಟ್ಟುಹಾಕಿದ್ದ ಕ್ರಾಂತಿಯ ಭಾವನೆಯನ್ನು ಅಳಿಸಿಹಾಕಲು ಯಾವ ವಿದೇಶಿ ರಾಷ್ಟ್ರದಿಂದಲೂ ಸಾಧ್ಯವಾಗಲಿಲ್ಲ. ಇಟಲಿಯ ಏಕೀಕರಣಕ್ಕಾಗಿ ನಡೆದ ಇನ್ನೊಂದು ಪ್ರಮುಖ ಚಳವಳಿ **ರಿಸಾರ್ಜಿಮೆಂಟೊ ಚಳವಳಿ** ಅಥವಾ 'ಪುನರುತ್ಥಾನ ಚಳವಳಿ'. ಈ ಚಳವಳಿಯು ಇಟಲಿಯ ಹಿಂದಿನ ವೈಭವವನ್ನು ಜನರ ಮನಸ್ಸಿನಲ್ಲಿ ಮೂಡುವಂತೆ ಮಾಡಿ, ಮತ್ತದು ಇಟಲಿಯಲ್ಲಿ ಮರುಕಳಿಸುವಂತೆ ಮಾಡುವ ಉದ್ದೇಶವನ್ನು ಹೊಂದಿತ್ತು. ಇಟಲಿಯು ಏಕೀಕರಣಗೊಳ್ಳಬೇಕಾದ ಅನಿವಾರ್ಯತೆಯನ್ನು ಈ ಚಳವಳಿಯು ತಿಳಿಸಿತು.

ಇಟಲಿಯಲ್ಲಿ ಕಾಣಿಸಿಕೊಂಡ ರಾಷ್ಟ್ರೀಯತೆಯ ಭಾವನೆಗಳಿಗೆ ಸರಿಯಾದ ಮಾರ್ಗದರ್ಶನ ಹಾಗೂ ಹೋರಾಟಗಳನ್ನು ಸಂಘಟಿಸುವ ವಿಧಾನವನ್ನು ತೋರಿಸಿಕೊಟ್ಟು, ಏಕೀಕರಣವನ್ನು ಸಾಧ್ಯವಾಗಿಸಿದ್ದು ಇಟಲಿಯ ಮಹಾನಾಯಕರು. ಅವರುಗಳೆಂದರೆ **ಜೋಸೆಫ್ ಮ್ಯಾಜಿನಿ, ಕೌಂಟ್-ಡಿ-ಕೆವೂರ್, ವಿಕ್ಟರ್ ಇಮ್ಮಾನ್ಯೂಯಲ್** ಮತ್ತು **ಗ್ಯಾರಿಬಾಲ್ಡಿ**. ಇವರ ಕೆಲಸ ಕಾರ್ಯಗಳು ಛಿದ್ರಗೊಂಡಿದ್ದ ಇಟಲಿಯನ್ನು ಒಂದುಗೂಡಿಸಿದವು.

ಜೋಸೆಫ್ ಮ್ಯಾಜಿನಿ (೧೮೦೫-೧೮೭೨)

ಇಟಲಿಯು ಏಕೀಕರಣಗೊಳ್ಳಬೇಕೆಂಬ ಇಟಾಲಿಯನ್ನರ ಅಂತರಾಳದ ಆಕಾಂಕ್ಷೆಗಳಿಗೆ ಸ್ಪಷ್ಟವಾದ ಮತ್ತು ದಿಟ್ಟವಾದ ಧ್ವನಿ ದೊರೆತಿದ್ದು ಮ್ಯಾಜಿನಿಯಿಂದ. ಮ್ಯಾಜಿನಿಯು ೧೮೦೫ ರಲ್ಲಿ ಇಟಲಿಯ ಜಿನೀವಾ ನಗರದಲ್ಲಿ ಜನಿಸಿದನು. ಈತನ ತಂದೆ ವೃತ್ತಿಯಲ್ಲಿ ವೈದ್ಯನಾಗಿದ್ದು, ಲೈಗೂರಿಯನ್ ಗಣರಾಜ್ಯದ ಅಧಿಕಾರಿಯಾಗಿದ್ದನು. ತಂದೆಯ ಪ್ರಭಾವದಿಂದ ಮ್ಯಾಜಿನಿ ಉತ್ತಮ ಶಿಕ್ಷಣವನ್ನು ಪಡೆದನು. **ಖಡ್ಗಕ್ಕಿಂತ ಲೇಖನಿ ಹರಿತ** ಎಂಬುದು ಅವನ ನಂಬಿಕೆಯಾಗಿತ್ತು. ತನ್ನ ಕ್ರಾಂತಿಕಾರಕ ಬರವಣಿಗೆಗಳಿಂದ ಇಟಲಿಯ ಜನತೆಯನ್ನು ಬಡಿದೆಬ್ಬಿಸಿದನು. ಇಟಲಿಯ ರಿಸಾರ್ಜಿಮೆಂಟೊ ಅಥವಾ 'ಪುನರುತ್ಥಾನ' ಚಳವಳಿಯ ಸ್ಫೂರ್ತಿಯ ನೆಲೆ ಮತ್ತು ಶಕ್ತಿ ಇವನಾಗಿದ್ದನು. ತನ್ನ ಕ್ರಾಂತಿಕಾರಿ ಚಟುವಟಿಕೆಗಳಿಗೆ ಕಾರ್ಬೋನರಿ ಸಂಘವನ್ನು ಸೇರಿಕೊಂಡನು.

ಮ್ಯಾಜಿನಿಯು ೧೮೩೧ ರಲ್ಲಿ **ಯಂಗ್ ಇಟಲಿ** ಎಂಬ ಸಂಘವನ್ನು ಸ್ಥಾಪಿಸಿ, ಆ ಮೂಲಕ 'ನವ ಇಟಲಿಯ ನಿರ್ಮಾಣ'ಕ್ಕೆ ಪ್ರಯತ್ನಿಸಿದನು. ಇದೊಂದು ರಹಸ್ಯ, ಗುಪ್ತ ಸಂಘಟನೆಯಾಗಿತ್ತು. ಇಟಲಿಯ ಸ್ವಾತಂತ್ರ್ಯ ಮತ್ತು ಏಕೀಕರಣದ ವಾದವು ಮ್ಯಾಜಿನಿಯ ಪ್ರಕಾರ ಒಂದು ಧರ್ಮವೇ ಆಗಿತ್ತು. ಅದು ಸಂಪೂರ್ಣ ತ್ಯಾಗ ಮತ್ತು ಸಮರ್ಪಣಾ ಮನೋಭಾವವನ್ನು ಹೊಂದಿದ್ದ ಯುವಜನರಿಂದ ಕೂಡಿತ್ತು. ಎಲ್ಲ ರಾಷ್ಟ್ರೀಯ ಚಳವಳಿಗಳು ಅನಾಮಧೇಯ ಜನರಿಂದಲೇ ಆರಂಭವಾಗುತ್ತದೆ, ಅವರು ಯಾವುದೇ ಪ್ರಭಾವವೂ ಇಲ್ಲದೆ ಕಾಲ ಮತ್ತು ಕಷ್ಟಗಳ ಪರಿವೆ ಇಲ್ಲದೆ ನಂಬಿಕೆ ಮತ್ತು ಛಲಗಳಿಂದ ಕೂಡಿರುತ್ತಾರೆ ಎಂಬುದು ಮ್ಯಾಜಿನಿಯ ನಂಬಿಕೆಯಾಗಿತ್ತು. ಈ ನಂಬಿಕೆಗಳ ಆಧಾರದ ಮೇಲೆಯೇ 'ಯಂಗ್ ಇಟಲಿ' ಯನ್ನು ರಚಿಸಲಾಗಿತ್ತು. ಈ ಸಂಘದ ಕಾರ್ಯಕ್ರಮಗಳು ಅತ್ಯಂತ ಸ್ಪಷ್ಟ ಹಾಗೂ ಯೋಜನಾ ಬದ್ಧವಾಗಿದ್ದವು. ಆಸ್ಟ್ರಿಯಾವನ್ನು ಇಟಲಿಯಿಂದ ಹೊರಹಾಕುವುದು ಮ್ಯಾಜಿನಿಯ ಮೊದಲ ಗುರಿಯಾಗಿತ್ತು. ಇಟಲಿಯ ಜನತೆ ಯಾವುದೇ ಸಹಾಯಕ್ಕೂ ವಿದೇಶಗಳನ್ನು ಅವಲಂಬಿಸದೆ, ತಮ್ಮದೇ ಆದ ಶಕ್ತಿಯಿಂದ ಹೋರಾಡಬೇಕೆಂದು ಮ್ಯಾಜಿನಿಯು ಕರೆಕೊಟ್ಟನು. ಆಸ್ಟ್ರಿಯಾವನ್ನು ಸೋಲಿಸಲು ಆದಷ್ಟು ಬೇಗ ಯುದ್ಧ ಆರಂಭಿಸಬೇಕು ಹಾಗೂ ಅದಕ್ಕಾಗಿ ದೇಶದಲ್ಲಿ ಒಗ್ಗಟ್ಟನ್ನು ಸಾಧಿಸಬೇಕೆಂದು 'ಯಂಗ್ ಇಟಲಿ'ಯ ಮೂಲಕ ಇಟಲಿಯ ಜನತೆಗೆ ಕರೆ ಕೊಟ್ಟನು. ಇಟಲಿ ಸಂಪೂರ್ಣ ಇಟಲಿಯಾಗಿಯೇ ಇರಬೇಕೇ ಹೊರತು ಮತ್ತಾವ ಹೆಸರಿನಿಂದಲೂ ಉದಯಿಸುವುದು ಬೇಡ ಎಂಬುದು ಅವನ ತೀರ್ಮಾನವಾಗಿತ್ತು.

ಮ್ಯಾಜಿನಿಯು ೧೮೪೮ ರಲ್ಲಿ ಫ್ರೆಂಚ್ ಕ್ರಾಂತಿಯಿಂದ ಪ್ರಭಾವಿತನಾಗಿ **ರೋಮ್** ನಗರವನ್ನು ಆಕ್ರಮಿಸಿ, ಅಲ್ಲಿಯ ಪೋಪನನ್ನು ಪದಚ್ಯುತಗೊಳಿಸಿ ತನ್ನ ಕನಸಿನ ಗಣರಾಜ್ಯವನ್ನು ಸ್ಥಾಪಿಸಿದನು. ಆದರೆ ಈ ವಿಜಯ ಹೆಚ್ಚುಕಾಲ ಉಳಿಯಲಿಲ್ಲ. ಫ್ರಾನ್ಸಿನಲ್ಲಿ ೧೮೪೯ ರಲ್ಲಿ **ಮೂರನೆಯ ನೆಪೋಲಿಯನ್** ಅಧಿಕಾರಕ್ಕೆ ಬಂದದ್ದು ಮ್ಯಾಜಿನಿಗೆ ಶಾಪವಾಗಿ ಪರಿಣಮಿಸಿತು. ಮೂರನೆಯ ನೆಪೋಲಿಯನ್ ಮ್ಯಾಜಿನಿ ರೋಮ್‌ನಲ್ಲಿ ಸ್ಥಾಪಿಸಿದ ಗಣರಾಜ್ಯವನ್ನು ನಿರ್ನಾಮ ಮಾಡಿ, ಪೋಪನನ್ನು ಮತ್ತೆ ಅಲ್ಲಿನ ಅಧಿಕಾರಕ್ಕೆ ತಂದ. ಫ್ರಾನ್ಸಿನ ಅರಸನಿಗೆ ಅಲ್ಲಿನ ಕ್ಯಾಥೋಲಿಕ್ಕರ ಬೆಂಬಲವನ್ನು ಪಡೆದು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದು ಮುಖ್ಯವಾಗಿತ್ತು. ಇದರಿಂದಾಗಿ ಮ್ಯಾಜಿನಿಯ ಗಣರಾಜ್ಯದ ಕನಸು ಮಣ್ಣುಪಾಲಾಯಿತು. ನಂತರ ಗಡಿಪಾರಾದ ಮ್ಯಾಜಿನಿ **ಇಂಗ್ಲೆಂಡಿ**ನಲ್ಲಿದ್ದುಕೊಂಡು ಇಟಲಿಯ ಚಳವಳಿಗಾರರಿಗೆ ಮಾರ್ಗದರ್ಶನ ನೀಡಿದನು. ಮ್ಯಾಜಿನಿಯ ಉದ್ದೇಶಗಳು ಈಡೇರದಿದ್ದರೂ ಆತ ಹುಟ್ಟು ಹಾಕಿದ ದೇಶ ಪ್ರೇಮ ಮತ್ತು ತ್ಯಾಗ ಮನೋಭಾವಗಳು ಏಕೀಕರಣ ಹೋರಾಟವನ್ನು ಇಟಲಿಯಲ್ಲಿ ಮುಂದುವರಿಯುವಂತೆ ಮಾಡಿದವು.

ವಿಕ್ಟರ್ ಇಮ್ಯಾನ್ಯುಯಲ್ (೧೮೨೦-೧೮೭೮)

ಪೀಡ್‌ಮಾಂಟ್ ಮತ್ತು ಸಾರ್ಡೀನಿಯಾ ರಾಜ್ಯವನ್ನು ಇಟಲಿಯ ರಾಜವಂಶದ ದೊರೆ ಚಾರ್ಲ್ಸ್ ಆಲ್ಬರ್ಟ್ ಆಳುತ್ತಿದ್ದನು. ಆಲ್ಬರ್ಟ್‌ನು ಇಟಲಿಯನ್ನು ವಿದೇಶಿಯರ ಆಳ್ವಿಕೆಯಿಂದ

ಮುಕ್ತಗೊಳಿಸಲು ಹವಣಿಸುತ್ತಿದ್ದನು. ೧೮೪೮ ರ ಫೆಬ್ರವರಿಯಲ್ಲಿ ಫ್ರಾನ್ಸ್‌ನಲ್ಲಿ ಕ್ರಾಂತಿ ಉಂಟಾದಾಗ ಅದರ ಪ್ರಭಾವದಿಂದ ಇಟಲಿಯಲ್ಲೂ ಹೋರಾಟಗಳು ನಡೆದವು. ಲೊಂಬಾರ್ಡಿ ಮತ್ತು ವೆನೀಶಿಯಾದ ಜನತೆ ಆಸ್ಟ್ರಿಯಾದ ವಿರುದ್ಧ ಹೋರಾಟ ಮಾಡಿದರು. ಅದೇ ಸಮಯದಲ್ಲಿ ಸಾರ್ಡೀನಿಯಾದ ದೊರೆ ಆಲ್ಬರ್ಟನು ಆಸ್ಟ್ರಿಯಾದ ವಿರುದ್ಧ ಲೊಂಬಾರ್ಡಿಯಲ್ಲಿ ಯುದ್ಧ ಸಾರಿದನು. ಆರಂಭದಲ್ಲಿ ವಿಜಯಿಯಾದರೂ ನಂತರ ಆಸ್ಟ್ರಿಯನ್ನರಿಗೆ ಸೋತು ಶರಣಾಗತನಾದನು. ಇದರಿಂದ ಹತಾಶನಾದ ಆಲ್ಬರ್ಟನು ತನ್ನ ಮಗನಾದ ವಿಕ್ಟರ್ ಇಮ್ಯಾನ್ಯುಯಲ್‌ಗೆ ಸಾರ್ಡೀನಿಯಾದ ಅಧಿಕಾರವನ್ನು ನೀಡಿ ಪೋರ್ಚುಗಲ್‌ಗೆ ನಿರಾಶ್ರಿತನಂತೆ ಹೋದನು.

ಪೀಡ್‌ಮಾಂಟ್ ಮತ್ತು ಸಾರ್ಡೀನಿಯಾದ ಅರಸನಾಗಿ ವಿಕ್ಟರ್ ಇಮ್ಯಾನ್ಯುಯಲ್ ೧೮೪೯ ರಲ್ಲಿ ಅಧಿಕಾರವನ್ನು ವಹಿಸಿಕೊಂಡನು. ಆಸ್ಟ್ರಿಯನ್ನರ ವಿರೋಧದ ನಡುವೆಯೂ ತನ್ನ ರಾಜ್ಯಕ್ಕೆ ಸಂವಿಧಾನಬದ್ಧ ಪ್ರಭುತ್ವವನ್ನು ನೀಡಿದನು. ಅತ್ಯಂತ ಪ್ರಾಮಾಣಿಕ ರಾಜನೆಂದು ಹೆಸರು ಗಳಿಸಿದ್ದ ಇಮ್ಯಾನ್ಯುಯಲ್ ಇಟಲಿ ಏಕೀಕರಣದ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿ ನೇತೃತ್ವ ವಹಿಸಿದನು. **ಕೌಂಟ್-ಡಿ-ಕೆವೂರನನ್ನು** ತನ್ನ ಪ್ರಧಾನಮಂತ್ರಿಯನ್ನಾಗಿ ನೇಮಿಸಿಕೊಂಡನು. ಇಮ್ಯಾನ್ಯುಯಲ್ ಸಮಯ ಸಂದರ್ಭ ನೋಡಿಕೊಂಡು ಫ್ರಾನ್ಸ್ ಮತ್ತು ಆಸ್ಟ್ರಿಯಾ ದೇಶಗಳೊಡನೆ ವ್ಯವಹರಿಸುತ್ತಿದ್ದನು. ೧೮೫೮ ರಲ್ಲಿ ಫ್ರಾನ್ಸ್‌ನೊಡನೆ **ಪಾಂಬ್ಲಿಯರ್ಸ್ ಒಪ್ಪಂದ** ಹಾಗೂ ೧೮೫೯ ರಲ್ಲಿ ಆಸ್ಟ್ರಿಯಾದೊಂದಿಗೆ ವಿಲ್ಲಾ ಫ್ರಾಂಕ್ ಒಪ್ಪಂದಗಳನ್ನು ಮಾಡಿಕೊಂಡನು. ೧೮೭೦ ರಲ್ಲಿ ರೋಮ್‌ಗೆ ಮುತ್ತಿಗೆ ಹಾಕಿ ಅದನ್ನು ಇಟಲಿಯ ರಾಜಧಾನಿಯನ್ನಾಗಿ ಮಾಡಿಕೊಂಡನು. ಇಮ್ಯಾನ್ಯುಯಲ್‌ನ ರಾಜತಾಂತ್ರಿಕ ವ್ಯವಹಾರಗಳು ಇಟಲಿಯನ್ನು ಆದಷ್ಟು ಬೇಗ ಏಕೀಕೃತಗೊಳ್ಳುವಂತೆ ಮಾಡಿದವು.

ಕೌಂಟ್-ಡಿ-ಕೆವೂರ್ (೧೮೧೦-೧೮೬೧)

ಇಟಲಿಯ ಏಕೀಕರಣದ ಮತ್ತೊಬ್ಬ ರೂವಾರಿ ಕೌಂಟ್-ಡಿ-ಕೆವೂರ್. ಕೆವೂರ್ ೧೮೧೦ ರಲ್ಲಿ **ಟ್ಯೂರಿನ್‌ನ** ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದನು. ಇವನು ಸೈನಿಕ ಶಿಕ್ಷಣ ಪಡೆದು ನಂತರ ಸೈನಿಕ ಇಲಾಖೆಯಲ್ಲಿ ಇಂಜಿನಿಯರ್ ವೃತ್ತಿಯನ್ನು ಕೈಗೊಂಡನು. ೧೮೩೧ ರಲ್ಲಿ ಇಂಜಿನಿಯರ್ ಹುದ್ದೆಗೆ ರಾಜಿನಾಮೆಯನ್ನು ನೀಡಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿ ಕೊಂಡು ಅಪಾರ ಅನುಭವವನ್ನು ಪಡೆದನು. ಇಂಗ್ಲೆಂಡಿನ ಪಾರ್ಲಿಮೆಂಟ್ ಸರಕಾರವು ಕೆವೂರನನ್ನು ಬಹುವಾಗಿ ಆಕರ್ಷಿಸಿತು. ಕೆವೂರ್ ನಿರಂಕುಶ ಪ್ರಭುತ್ವವನ್ನು ವಿರೋಧಿಸು ತ್ತಿದ್ದನು. ಹೋರಾಟದಿಂದ ಮಾತ್ರ ಇಟಲಿಯನ್ನು ಒಂದುಗೂಡಿಸಲು ಸಾಧ್ಯ ಎನ್ನುವುದು ಕೆವೂರನ ನಿಲುವಾಗಿತ್ತು. ಕೆವೂರ್ ೧೮೪೭ ರಲ್ಲಿ **ಇಲ್-ರಿಸಾರ್ಜಿಮೆಂಟೊ** ಎಂಬ ಪತ್ರಿಕೆ ಯನ್ನು ಸಂಪಾದಿಸಿ ಅದರಲ್ಲಿ ಸ್ವಾತಂತ್ರ್ಯ ಮತ್ತು ಸುಧಾರಣೆಗಳ ಮಹತ್ವವನ್ನು ಜನತೆಗೆ ತಿಳಿಹೇಳಿದನು. ಇಟಲಿಯಲ್ಲಿ ಸಂವಿಧಾನಾತ್ಮಕ ಸರಕಾರ ಅಸ್ತಿತ್ವಕ್ಕೆ ಬರಬೇಕೆಂದು ಅನೇಕ

ಲೇಖನಗಳನ್ನು ಬರೆದನು. ೧೮೫೦ ರಲ್ಲಿ ಪೀಡ್‌ಮಾಂಟ್ ಮತ್ತು ಸಾರ್ಡೀನಿಯಾಗಳ ಚುನಾವಣೆಯಲ್ಲಿ ಪಾರ್ಲಿಮೆಂಟಿನ ಸದಸ್ಯನಾಗಿ ಆಯ್ಕೆಯಾದನು. ಕೆವೂರನ ಬುದ್ಧಿವಂತಿಕೆ ಮತ್ತು ಚತುರತೆಯನ್ನು ಗಮನಿಸಿದ ವಿಕ್ಟರ್ ಇಮ್ಮಾನ್ಯುಯಲ್ ಅವನನ್ನು ತನ್ನ ರಾಜ್ಯದ ಪ್ರಧಾನಮಂತ್ರಿಯನ್ನಾಗಿ ನೇಮಿಸಿಕೊಂಡನು.

೧೮೫೨ ರಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆವೂರ್ ಇಟಲಿಯ ಏಕೀಕರಣಕ್ಕಾಗಿ ಹಗಲು ರಾತ್ರಿಯೆನ್ನದೆ ದುಡಿದ. ಇಟಲಿಯ ಏಕತೆ ಪೀಡ್‌ಮಾಂಟಿನ ನೇತೃತ್ವದಿಂದ ಮಾತ್ರ ಸಾಧ್ಯ ಎನ್ನುವುದು ಅವನ ಅಚಲವಾದ ನಂಬಿಕೆಯಾಗಿತ್ತು. ಹೀಗಾಗಿ ಪೀಡ್‌ಮಾಂಟನ್ನು ಪ್ರಬಲಶಕ್ತಿಯನ್ನಾಗಿ ಮಾಡಲು ಪ್ರಯತ್ನಿಸಿದನು. ಧರ್ಮವನ್ನು ರಾಜಕೀಯದಿಂದ ದೂರವಿಟ್ಟು, ಸೈನ್ಯವನ್ನು ಆಮೂಲಾಗ್ರವಾಗಿ ಸಂಘಟಿಸಿ, ಕೈಗಾರಿಕೆ ಮತ್ತು ಕೃಷಿಗಳಲ್ಲಿ ಮೂಲಭೂತ ಬದಲಾವಣೆಗಳನ್ನು ತರಲಾಯಿತು. ಸಂವಿಧಾನಬದ್ಧ ರಾಜಪ್ರಭುತ್ವವನ್ನು ಭದ್ರಪಡಿಸಲಾಯಿತು. ಪ್ರತಿನಿಧಿ ಸಭೆಯ ಮುಖಾಂತರ ಜನರಿಗೆ ರಾಜಕೀಯ ಶಿಕ್ಷಣದ ಸೌಲಭ್ಯವನ್ನು ಕಲ್ಪಿಸಲಾಯಿತು. ರಾಜ್ಯದಲ್ಲಿ ಕಟ್ಟುನಿಟ್ಟಿನ ತೆರಿಗೆ ಮತ್ತು ಕಂದಾಯ ನೀತಿಯನ್ನು ಜಾರಿಗೊಳಿಸಿ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲಾಯಿತು. ವಿದೇಶಿ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಲಾಯಿತು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳೆರಡೂ ಅಭಿವೃದ್ಧಿಗೊಂಡವು. ಕೆವೂರ್ ಇಟಲಿಯ ಸಾಮಾನ್ಯ ಜನತೆಯನ್ನು ಗಮನದಲ್ಲಿಟ್ಟುಕೊಂಡು ಸುಧಾರಣೆಗಳನ್ನು ಜಾರಿಗೆ ತಂದನು. ಚರ್ಚನ್ನು ರಾಜ್ಯದ ಅಧೀನದಲ್ಲಿರುವಂತೆ ಮಾಡಿ ಪಾದ್ರಿಗಳು ಮತ್ತಿತರ ಅಧಿಕಾರಿಗಳು ಹೊಂದಿದ್ದ ವಿಶೇಷ ಸವಲತ್ತುಗಳನ್ನು ರದ್ದುಗೊಳಿಸಿದನು. ಕೆವೂರನ ಈ ಎಲ್ಲ ಕೆಲಸ ಕಾರ್ಯಗಳಿಂದಾಗಿ ಪೀಡ್‌ಮಾಂಟ್ ರಾಜ್ಯ ಇಟಲಿಯಲ್ಲೇ ಅತ್ಯಂತ ಪ್ರಬಲ ರಾಜ್ಯವಾಗಿ ಬೆಳೆಯಿತು.

ಕೆವೂರನು ಇಟಲಿಯ ಏಕೀಕರಣಕ್ಕೆ ವಿದೇಶಿ ನೆರವನ್ನು ನಿರೀಕ್ಷಿಸುತ್ತಿದ್ದನು. ಅದಕ್ಕೆ ಕ್ರಿಮಿಯಾ (೧೮೫೪-೫೬) ಯುದ್ಧವು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಕೆವೂರನಿಗೆ ಇಂಗ್ಲೆಂಡ್ ಅಥವಾ ಫ್ರಾನ್ಸ್‌ನ ಬೆಂಬಲದ ಅಗತ್ಯವಿತ್ತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ತುರ್ಕಿಯ ಪರವಾಗಿ ರಷ್ಯಾದ ವಿರುದ್ಧ ಕ್ರಿಮಿಯಾ ಎಂಬಲ್ಲಿ ಹೋರಾಡಿದವು. ಕೆವೂರನು ರಷ್ಯಾದೊಂದಿಗೆ ಹಗೆತನವಿರದಿದ್ದರೂ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ಪರವಾಗಿ ನಿಂತನು. 'ಕ್ರಿಮಿಯಾದ ಕೆಸರಿನಲ್ಲಿ ನೂತನ ಇಟಲಿಯನ್ನು ನಿರ್ಮಿಸುತ್ತೇನೆ' ಎಂಬುದಾಗಿ ಕೆವೂರ್ ಘೋಷಿಸಿಕೊಂಡನು. ಯುದ್ಧೋತ್ತರ ಸಭೆಗಳಲ್ಲಿ ಆಸ್ಟ್ರಿಯನ್ನರು ಇಟಲಿಯ ರಾಜ್ಯಗಳಲ್ಲಿ ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿದನು. ಇದರಿಂದಾಗಿ ಕೆವೂರ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಾನುಭೂತಿಯನ್ನು ಗಳಿಸಿಕೊಂಡನು. ಫ್ರಾನ್ಸ್ ಇಟಲಿಯೊಂದಿಗೆ ಸ್ನೇಹಯುತ ವಾಗಿರಲು ನಿರ್ಧರಿಸಿತು.

ಫ್ರಾನ್ಸಿನೊಡನೆ ಪಾಂಬ್ಲಿಯರ್ಸ್ ಒಪ್ಪಂದ (೧೮೫೮)

ಫ್ರಾನ್ಸಿನ ಮೂರನೆಯ ನೆಪೋಲಿಯನ್ನನು ಕೆವೂರನ ಉದ್ದೇಶಗಳಿಗೆ ನೆರವು ನೀಡಲು ಮುಂದಾದನು. ೧೮೫೮ ರ ಜುಲೈ ೨೧ ರಂದು ಕೆವೂರನನ್ನು **ಪಾಂಬ್ಲಿಯರ್ಸ್** ಎಂಬಲ್ಲಿಗೆ ಆಹ್ವಾನಿಸಿ ರಹಸ್ಯ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಆಸ್ಟ್ರಿಯನ್ನರನ್ನು ಲೊಂಬಾರ್ಡಿ ಮತ್ತು ವೆನೀಶಿಯಾಗಳಿಂದ ಓಡಿಸಲು ಫ್ರಾನ್ಸ್ ಸೈನಿಕ ನೆರವನ್ನು ನೀಡಬೇಕು ಹಾಗೂ ಇದಕ್ಕೆ ಪ್ರತಿಯಾಗಿ ಸಾರ್ಡೀನಿಯಾಕ್ಕೆ ಸೇರಿದ್ದ **ನೀಸ್** ಮತ್ತು **ಸವಾಯ್**ಗಳನ್ನು ಫ್ರಾನ್ಸ್‌ಗೆ ಬಿಟ್ಟುಕೊಡುವುದು. ಪೋಪನ ಅಧ್ಯಕ್ಷತೆಯಲ್ಲಿ ಇಟಲಿಯ ಎಲ್ಲ ರಾಜ್ಯಗಳು ಒಕ್ಕೂಟವನ್ನು ರಚಿಸಿಕೊಳ್ಳುವಂತೆ ನಡೆದುಕೊಳ್ಳುವುದು. ವಿಕ್ಟರ್ ಇಮ್ಮಾನ್ಯುಯಲ್‌ನ ಮಗಳನ್ನು **ಮೂರನೆಯ ನೆಪೋಲಿಯನ್ನ**ನ ಸಂಬಂಧಿ **ಜೆರೋಮ್ ನೆಪೋಲಿಯನ್ನ**ನಿಗೆ ವಿವಾಹ ಮಾಡಿಕೊಡುವುದು. ಈ ಎಲ್ಲ ಷರತ್ತುಗಳಿಗೆ ಇಬ್ಬರು ನಾಯಕರು ಒಪ್ಪಿಕೊಂಡರು. ಫ್ರಾನ್ಸ್ ಬೆಂಬಲ ಸೂಚಿಸಿದ್ದು ಕೆವೂರನ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ಫ್ರಾಂಕೋ-ಸಾರ್ಡೀನಿಯನ್-ಆಸ್ಟ್ರಿಯನ್ ಯುದ್ಧ (೧೮೫೯)

ಪಾಂಬ್ಲಿಯರ್ಸ್ ಒಪ್ಪಂದದ ಪ್ರಕಾರ ಮೂರನೆಯ ನೆಪೋಲಿಯನ್ನನು ವಿದೇಶಿ ಆಕ್ರಮಣದ ಸಮಯದಲ್ಲಿ ಇಟಲಿಗೆ ನೆರವು ನೀಡುತ್ತೇನೆಂದು ಭರವಸೆ ನೀಡಿದ್ದನು. ಇದರಿಂದ ಉತ್ತೇಜಿತನಾದ ಕೆವೂರ್ ಆಸ್ಟ್ರಿಯಾದ ಮೇಲೆ ಸಾರ್ಡೀನಿಯಾದ ಸೈನ್ಯವನ್ನು ನುಗ್ಗಿಸಲು ಸಿದ್ಧತೆ ಮಾಡಿದನು. ೧೮೫೯ ರಲ್ಲಿ ಸಾರ್ಡೀನಿಯಾ ಮತ್ತು ಆಸ್ಟ್ರಿಯಾಗಳ ನಡುವೆ ಯುದ್ಧ ಆರಂಭಗೊಂಡಿತು. ಫ್ರಾನ್ಸಿನ ಸಹಾಯದಿಂದ ಸಾರ್ಡೀನಿಯಾ ಆಸ್ಟ್ರಿಯಾವನ್ನು **ಮ್ಯಾಜೆಂಟಾ** ಮತ್ತು **ಸಾಲ್ಫಿನೋ**ದಲ್ಲಿ ಸೋಲಿಸಿತು. ಈ ಯುದ್ಧದಲ್ಲಿ ಲೊಂಬಾರ್ಡಿ ಸಂಪೂರ್ಣವಾಗಿ ಮಿತ್ರಪಕ್ಷದ ವಶವಾಯಿತು. **ಮಿಲಾನ್** ನಗರವನ್ನೂ ವಶಪಡಿಸಿಕೊಳ್ಳಲಾಯಿತು. ಇಟಲಿಯಲ್ಲಿ ಆಸ್ಟ್ರಿಯಾದ ಆಳ್ವಿಕೆ ಕೊನೆಗೊಳ್ಳುವ ಎಲ್ಲ ಸೂಚನೆಗಳು ಕಂಡು ಬಂದವು. ಆದರೆ ಅದೇ ಸಂದರ್ಭದಲ್ಲಿ ಮೂರನೆಯ ನೆಪೋಲಿಯನ್ನನು ಆಸ್ಟ್ರಿಯಾದ **ಫ್ರಾನ್ಸಿಸ್ ಜೋಸೆಫ್**ನೊಂದಿಗೆ **ವಿಲ್ಲಾಫ್ರಾಂಕ್** ಎಂಬಲ್ಲಿ ಒಪ್ಪಂದವೊಂದನ್ನು ಮಾಡಿಕೊಂಡು ಯುದ್ಧ ವಿರಾಮವನ್ನು ಘೋಷಿಸಿದನು. ಈ ಒಪ್ಪಂದದ ಪ್ರಕಾರ ಲೊಂಬಾರ್ಡಿಯನ್ನು ಪೀಡ್‌ಮಾಂಟ್‌ಗೆ ಬಿಟ್ಟುಕೊಡಲಾಯಿತು ಹಾಗೂ ವೆನೀಶಿಯಾ ಆಸ್ಟ್ರಿಯಾದ ಅಧೀನದಲ್ಲಿ ಉಳಿಯಿತು. ಟಸ್ಕನಿ, ಪಾರ್ಮ, ಮೊಡೆನ ಮತ್ತು ಪೋಪನ ಉತ್ತರ ರಾಜ್ಯಗಳು ಸಾರ್ಡೀನಿಯಾ ಮತ್ತು ಪೀಡ್‌ಮಾಂಟ್‌ನೊಂದಿಗಿರಲು ಮುಂದೆ ಬಂದವು. ಇದರಿಂದ ಇಟಲಿಯ ಏಕೀಕರಣ ಭಾಗಶಃ ಆಯಿತಾದರೂ ಕೆವೂರ್ ತೀವ್ರ ಅಸಮಾಧಾನಗೊಂಡನು. ಫ್ರಾನ್ಸ್ ಯುದ್ಧವನ್ನು ಅರ್ಧಕ್ಕೆ ನಿಲ್ಲಿಸಿ ಆಸ್ಟ್ರಿಯಾದೊಂದಿಗೆ ಒಪ್ಪಂದ ಮಾಡಿಕೊಂಡವನ್ನು ಕೆವೂರ್ ನಂಬಿಕೆ ದ್ರೋಹವೆಂದು ಕರೆದನು. ವಿಕ್ಟರ್ ಇಮ್ಮಾನ್ಯುಯಲ್ ಸಹ ಈ ಶಾಂತಿ

ಒಪ್ಪಂದಕ್ಕೆ ಒಪ್ಪಿಕೊಂಡದ್ದು ಕೆವೂರನನ್ನು ಚಿಂತೆಗೀಡು ಮಾಡಿತು. ತೀವ್ರ ನಿರಾಸೆಗೊಂಡ ಕೆವೂರ್ ತನ್ನ ಮಂತ್ರಿಸ್ಥಾನಕ್ಕೆ ರಾಜಿನಾಮೆ ನೀಡಿದನು. ಫ್ರಾನ್ಸ್ ಆರಂಭದಲ್ಲಿ ಬೆಂಬಲ ಸೂಚಿಸಿತ್ತಾದರೂ ತನ್ನ ಪಕ್ಕದಲ್ಲಿಯೇ ಪ್ರಬಲ ರಾಷ್ಟ್ರವೊಂದು ಅಸ್ತಿತ್ವಕ್ಕೆ ಬರುವುದು ಅದಕ್ಕೆ ಇಷ್ಟವಿರಲಿಲ್ಲ.

ವಿಲ್ಲಾಫ್ರಾಂಕ್ ಒಪ್ಪಂದದ ಪ್ರಕಾರ ಇಟಲಿಯು ಲೊಂಬಾರ್ಡಿಯನ್ನು ಪಡೆದುಕೊಂಡಿತು. ಫಾರ್ಮ, ಮೊಡೆನಾ, ಟಸ್ಕನಿ, ರೊಮ್ಯಾಗ್ನ ಮುಂತಾದ ಇಟಲಿಯ ರಾಜ್ಯಗಳು ಸಾರ್ಡೀನಿಯಾ ಮತ್ತು ಪೀಡ್‌ಮಾಂಟ್ ಜೊತೆ ಸೇರಿಕೊಳ್ಳಲು ತಮ್ಮ ಒಲವನ್ನು ತೋರಿದವು. ಮೂರನೆಯ ನೆಪೋಲಿಯನ್ನನು ಈ ರಾಜ್ಯಗಳು ಸಾರ್ಡೀನಿಯಾ ಮತ್ತು ಪೀಡ್‌ಮಾಂಟ್ ರಾಜ್ಯದೊಂದಿಗೆ ವಿಲೀನವಾಗುವಂತೆ ಮಾಡಿದನು. ೧೮೬೦ ರಲ್ಲಿ ಮೂರನೆಯ ನೆಪೋಲಿಯನ್ನನೊಂದಿಗೆ **ಟ್ಯೂರಿನ್ ಒಪ್ಪಂದ**ವನ್ನು ಮಾಡಿಕೊಂಡು ಅವನಿಗೆ ನೀಸ್ ಮತ್ತು ಸವಾಯ್‌ಗಳನ್ನು ಬಿಟ್ಟು ಕೊಡಲಾಯಿತು. ಸಾರ್ಡೀನಿಯಾ ರಾಜ್ಯದ ಪ್ರಥಮ ಪಾರ್ಲಿಮೆಂಟ್ ೧೮೬೦ ರ ಫೆಬ್ರವರಿ ೧೮ ರಂದು ಟ್ಯೂರಿನ್‌ನಲ್ಲಿ ನಡೆಯಿತು. ಇಮ್ಮಾನ್ಯುಯಲ್‌ನನ್ನು **ಇಟಲಿಯ ರಾಜ**ನೆಂದು ಘೋಷಿಸಲಾಯಿತು. ಅಲ್ಲಿಗೆ ಏಕೀಕರಣದ ಒಂದು ಹಂತ ಮುಕ್ತಾಯವಾಯಿತು. ಆದರೂ ಏಕೀಕರಣಗೊಂಡ ಇಟಲಿಯನ್ನು ಕಾಣುವ ಕೆವೂರನ ಕನಸು ಹಾಗೆಯೇ ಉಳಿಯಿತು. ಕೆವೂರನು ಈ ಅತೃಪ್ತಿಯೊಂದಿಗೆ ೧೮೬೧ ರ ಜೂನ್ ೬ ರಂದು ಮರಣ ಹೊಂದಿದನು.

ಜೋಸೆಫ್ ಗ್ಯಾರಿಬಾಲ್ಡಿ (೧೮೦೭-೧೮೮೨)

ಇಟಲಿ ಏಕೀಕರಣ ಹೋರಾಟದಲ್ಲಿ ಗ್ಯಾರಿಬಾಲ್ಡಿಯದ್ದು ಪ್ರಮುಖ ಹೆಸರು. ಏಕೀಕರಣ ಖಡ್ಗಬಲದಿಂದ ಮಾತ್ರ ಸಾಧ್ಯ ಎಂಬುದಾಗಿ ಗ್ಯಾರಿಬಾಲ್ಡಿ ನಂಬಿದ್ದನು. ಅದನ್ನೇ ಮುಂದೆ ಇಟಲಿಯ ಜನತೆಗೆ ತೋರಿಸಿಕೊಟ್ಟನು. ಗ್ಯಾರಿಬಾಲ್ಡಿಯು ೧೮೦೭ ರಲ್ಲಿ ಇಟಲಿಯ ನೀಸ್ ರಾಜ್ಯದಲ್ಲಿ ಜನಿಸಿದನು. ಗ್ಯಾರಿಬಾಲ್ಡಿಗೆ ಸಮುದ್ರಯಾನ ಮಾಡುವುದು ಮತ್ತು ಸಾಗರ ಯುದ್ಧಗಳಲ್ಲಿ ಭಾಗವಹಿಸುವುದು ಅಚ್ಚುಮೆಚ್ಚಿನ ಕೆಲಸವಾಗಿತ್ತು. ಗ್ಯಾರಿಬಾಲ್ಡಿಯು ಮ್ಯಾಜಿನಿಯ **ಯಂಗ್ ಇಟಲಿ**ಯನ್ನು ಸೇರಿಕೊಂಡು ಎಲ್ಲ ಕ್ರಾಂತಿಕಾರಕ ಚಟುವಟಿಕೆಗಳಲ್ಲೂ ಭಾಗವಹಿಸಿದನು. ಮ್ಯಾಜಿನಿಯು ೧೮೩೪ ರಲ್ಲಿ ಸವಾಯ್ ರಾಜ್ಯದಲ್ಲಿ ಆಸ್ಟ್ರಿಯನ್ನರ ದಬ್ಬಾಳಿಕೆಯ ವಿರುದ್ಧ ಯುದ್ಧ ಆರಂಭಿಸಿದಾಗ ಗ್ಯಾರಿಬಾಲ್ಡಿ ಯುದ್ಧದಲ್ಲಿ ಭಾಗವಹಿಸಿದನು. ಈ ಹೋರಾಟದಲ್ಲಿ ಭಾಗವಹಿಸಿ, ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿದ್ದಕ್ಕಾಗಿ ಆಸ್ಟ್ರಿಯಾವು ಗ್ಯಾರಿಬಾಲ್ಡಿಗೆ ಗಲ್ಲು ಶಿಕ್ಷೆಯನ್ನು ವಿಧಿಸಿತು. ಸೆರೆಮನೆಯಿಂದ ಹೇಗೊ ತಪ್ಪಿಸಿಕೊಂಡ ಗ್ಯಾರಿಬಾಲ್ಡಿ ದಕ್ಷಿಣ ಅಮೆರಿಕಾಕ್ಕೆ ಹೋಗಿ ಅಲ್ಲಿ ಹದಿನಾಲ್ಕು ವರ್ಷಗಳವರೆಗೆ ದೇಶಭ್ರಷ್ಟನಾಗಿ ಅಲೆದು, ದೇಶಾಭಿಮಾನಿಗಳಿಂದ ಕೂಡಿದ **ಕೆಂಪು ಅಂಗಿ** ದಳವೊಂದನ್ನು ಸಂಘಟಿಸಿದನು. ಆ ದಳದಲ್ಲಿ ಸಾವಿರಕ್ಕಿಂತ ಹೆಚ್ಚು ಸೈನಿಕರು ಇದ್ದಿದ್ದರಿಂದಾಗಿ ಅದನ್ನು **ಸಾವಿರ ದಳ** ಎಂದೇ ಕರೆಯಲಾಗುತ್ತಿತ್ತು. ಮ್ಯಾಜಿನಿಯು ೧೮೪೮ ರಲ್ಲಿ ವಿದೇಶಿಯರ

ವಿರುದ್ಧ ರೋಮ್‌ನಲ್ಲಿ ಹೋರಾಡುತ್ತಿದ್ದಾಗ ಗ್ಯಾರಿಬಾಲ್ಡಿಯು ತನ್ನ 'ಕೆಂಪು ಅಂಗಿ ದಳ'ದ ಸೈನಿಕ ನೆರವನ್ನು ನೀಡಿದನು.

ಸಿಸಿಲಿ ಮತ್ತು ನೇಪಲ್ಸ್‌ಗಳ ದಂಡಯಾತ್ರೆ (೧೮೬೦)

ಗ್ಯಾರಿಬಾಲ್ಡಿಯು ಇಟಲಿಯ ಏಕೀಕರಣ ಹೋರಾಟಕ್ಕೆ ಮತ್ತೆ ಪ್ರವೇಶಿಸಿದ್ದು ಸಿಸಿಲಿಯಲ್ಲಿ ಹೋರಾಟ ಕಾಣಿಸಿಕೊಂಡಾಗ ೧೮೬೦ ರಲ್ಲಿ ಸಿಸಿಲಿಯ ಜನತೆ ತಮ್ಮ ಹೊಸ ರಾಜನಾದ ಎರಡನೆಯ ಫ್ರಾನ್ಸಿಸ್‌ನ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದರು. ಈ ಹೋರಾಟವು ಗ್ಯಾರಿಬಾಲ್ಡಿಗೆ ತನ್ನ ದೇಶಕ್ಕಾಗಿ ಹೋರಾಡಲು ಮತ್ತು ತನ್ನ ಖಡ್ಗದ ಬಲವನ್ನು ತೋರಿಸಲು ಅವಕಾಶವನ್ನು ದೊರಕಿಸಿಕೊಟ್ಟಿತು. ೧೮೬೦ ರ ಮೇ ೫ ರಂದು ಗ್ಯಾರಿಬಾಲ್ಡಿಯು ತನ್ನ 'ಸಾವಿರ ದಳ'ದೊಂದಿಗೆ ಸಿಸಿಲಿ ಮತ್ತು ನೇಪಲ್ಸ್‌ಗಳನ್ನು ವಶಪಡಿಸಿಕೊಳ್ಳಲು ಜಿನೀವಾದಿಂದ ಹೊರಟನು. ಸಿಸಿಲಿಗೆ ಸೈನ್ಯ ಸಮೇತ ಪ್ರವೇಶಿಸಿದ ಗ್ಯಾರಿಬಾಲ್ಡಿ ಎರಡನೆಯ ಫ್ರಾನ್ಸಿಸ್‌ನನ್ನು ಸೋಲಿಸಿದನು. ಸಿಸಿಲಿಯನ್ನು ೧೮೬೦ ರ ಆಗಸ್ಟ್ ತಿಂಗಳಿನಲ್ಲಿ ವಶಪಡಿಸಿಕೊಳ್ಳಲಾಯಿತು. ನಂತರ ಗ್ಯಾರಿಬಾಲ್ಡಿಯು ಎರಡನೆಯ ವಿಕ್ಟರ್ ಇಮ್ಮಾನ್ಯೂಯಲ್‌ನ ಹೆಸರಿನಲ್ಲಿ ಸಿಸಿಲಿಯ ಸರ್ವಾಧಿಕಾರಿಯೆಂದು ಘೋಷಿಸಿಕೊಂಡನು.

ಸಿಸಿಲಿಯನ್ನು ವಶಪಡಿಸಿಕೊಂಡ ಬಳಿಕ ಗ್ಯಾರಿಬಾಲ್ಡಿಯು ಜಲಸಂಧಿಗಳನ್ನು ದಾಟಿ ನೇಪಲ್ಸ್‌ನ ಕಡೆ ಮುನ್ನುಗ್ಗಿದನು. ಗ್ಯಾರಿಬಾಲ್ಡಿಯ ಸೈನಿಕರು ಗೆರಿಲ್ಲಾ ಯುದ್ಧ ತಂತ್ರದಲ್ಲಿ ನುರಿತವರಾಗಿದ್ದರು. ಎರಡನೆಯ ಫ್ರಾನ್ಸಿಸ್ ಹೆಚ್ಚು ಪ್ರತಿರೋಧವನ್ನು ಒಡ್ಡಲಾರದೆ ಶರಣಾಗತನಾದನು. ಫ್ರಾನ್ಸಿಸನು ಗ್ಯಾರಿಬಾಲ್ಡಿಗೆ ಹೆದರಿ ಗಯಾಟಕ್ಕೆ ಓಡಿಹೋದನು. ಅಂತಿಮವಾಗಿ ಗ್ಯಾರಿಬಾಲ್ಡಿಯು ಸಿಸಿಲಿ ಮತ್ತು ನೇಪಲ್ಸ್‌ಗಳ ಮೇಲೆ ತನ್ನ ಹತೋಟಿ ಸಾಧಿಸಿದನು. ಆದರೆ ಇದರಿಂದ ಗ್ಯಾರಿಬಾಲ್ಡಿಗೆ ತೃಪ್ತಿಯಾಗಲಿಲ್ಲ. ಏಕೆಂದರೆ ಇದು ಇಟಲಿಯ ಏಕೀಕರಣವನ್ನು ಪೂರ್ಣಗೊಳಿಸಲಿಲ್ಲ. ರೋಮ್‌ನ ಮೇಲೆ ಯುದ್ಧ ಸಾರುವುದು ಗ್ಯಾರಿಬಾಲ್ಡಿಯ ಮುಂದಿನ ಯೋಜನೆಯಾಗಿತ್ತು. ಅದೇ ಸಂದರ್ಭದಲ್ಲಿ ಕೆವೂರ್ ಮಧ್ಯ ಪ್ರವೇಶಿಸಿ ರೋಮ್‌ನೊಡನೆ ಯುದ್ಧ ಸಾರಿದರೆ ಅದು ಫ್ರಾನ್ಸ್‌ನ ವಿರುದ್ಧ ಯುದ್ಧ ಮಾಡಿದಂತೆ ಹಾಗೂ ಅದು ಅತ್ಯಂತ ಅಪಾಯಕಾರಿಯಾದದ್ದು ಎಂಬುದಾಗಿ ಗ್ಯಾರಿಬಾಲ್ಡಿಗೆ ತಿಳಿಸಿದನು. ಏಕೆಂದರೆ ರೋಮ್ ಸಂಪೂರ್ಣವಾಗಿ ಫ್ರಾನ್ಸ್‌ನ ಅಧೀನದಲ್ಲಿತ್ತು. ಗ್ಯಾರಿ ಬಾಲ್ಡಿಯ ಮುನ್ನಡೆಯನ್ನು ತಡೆಯುವುದಕ್ಕೆ ಕೆವೂರನು ಅರಸ ವಿಕ್ಟರ್ ಇಮ್ಮಾನ್ಯುಯಲ್‌ನ ಮುಂದಾಳತ್ವದಲ್ಲಿ ಸೈನ್ಯವನ್ನು ನೇಪಲ್ಸ್‌ಗೆ ಕಳುಹಿಸಿದನು. ಅರಸನನ್ನು ನೇಪಲ್ಸ್‌ನಲ್ಲಿ ಕಂಡ ಗ್ಯಾರಿಬಾಲ್ಡಿ ಸಿಸಿಲಿ ಮತ್ತು ನೇಪಲ್ಸ್‌ಗಳನ್ನು ಅವನಿಗೆ ಒಪ್ಪಿಸಿದನು. ಹೀಗೆ ತಾನು ಗೆದ್ದುಕೊಂಡಿದ್ದ ಪ್ರದೇಶಗಳನ್ನು ಅರಸನಿಗೆ ಒಪ್ಪಿಸುವುದರ ಮೂಲಕ ಗ್ಯಾರಿಬಾಲ್ಡಿ ದೇಶ ಪ್ರೇಮ, ಅರಸನ ಮೇಲಿನ ಗೌರವ ಹಾಗೂ ತನ್ನ ನಿಸ್ವಾರ್ಥತೆಯನ್ನು ಪ್ರದರ್ಶಿಸಿದನು.

ನಂತರ ಗ್ಯಾರಿಬಾಲ್ಡಿಯು ಸ್ವಲ್ಪ ದ್ರವ್ಯ ಮತ್ತು ಒಂದು ಚೀಲದಷ್ಟು ಬಿತ್ತನೆಯ ಬೀಜವನ್ನು ತೆಗೆದುಕೊಂಡು ಕ್ಯಾಪ್ರೆರ ದ್ವೀಪದಲ್ಲಿನ ತನ್ನ ಜಮೀನಿಗೆ ಹೋ ಕೃಷಿಕ ಜೀವನವನ್ನು ಆರಂಭಿಸಿದನು.

ವೆನೀಶಿಯಾ ಮತ್ತು ರೋಮ್‌ಗಳ ಸೇರ್ಪಡೆ

ವೆನೀಶಿಯಾ ಮತ್ತು ರೋಮ್‌ಗಳು ಸೇರ್ಪಡೆಯಾಗದೆ ಇಟಲಿಯ ಏಕೀಕರಣ ಸಾಧ್ಯವಾಗಲಿಲ್ಲ. ೧೮೬೧ ರಲ್ಲಿ ವಿಕ್ಟರ್ ಇಮ್ಯಾನ್ಯುಯಲ್ 'ಇಟಲಿಯ ರಾಜ'ನೆಂದು ಘೋಷಿಸಿಕೊಂಡರೂ ಅದು ಸಂಪೂರ್ಣ ಏಕೀಕೃತ ಇಟಲಿಯಾಗಿರಲಿಲ್ಲ. ವೆನೀಶಿಯಾವು ಸಂಪೂರ್ಣವಾಗಿ ಆಸ್ಟ್ರಿಯಾದ ಅಧೀನಕ್ಕೆ ಒಳಪಟ್ಟಿದ್ದರೆ, ರೋಮ್ ಪೋಪನ ಆಡಳಿತ ದಲ್ಲಿದ್ದು ಫ್ರೆಂಚ್ ಸೈನ್ಯದ ಹಿಡಿತದಲ್ಲಿತ್ತು. ಹೀಗಾಗಿ ಇವೆರಡನ್ನು ಇಟಲಿಗೆ ಸೇರಿಸಿ ಕೊಳ್ಳುವುದು. ಏಕೀಕರಣ ಚಳವಳಿಯ ಅಂತಿಮ ಘಟ್ಟವಾಯಿತು. ೧೮೬೬ ರಲ್ಲಿ ಆಸ್ಟ್ರಿಯಾ ಮತ್ತು ಪ್ರಷ್ಯಾಗಳ ನಡುವೆ ಪ್ರಾಂತ್ಯಗಳ ಹಂಚುವಿಕೆಯ ವಿಚಾರದಲ್ಲಿ ಯುದ್ಧ ಆರಂಭ ವಾಯಿತು. ಇದೇ ಸಮಯವನ್ನು ಕಾಯುತ್ತಿದ್ದ ವಿಕ್ಟರ್ ಇಮ್ಯಾನ್ಯುಯಲ್ ಆಸ್ಟ್ರಿಯಾದ ವಿರುದ್ಧ ಪ್ರಷ್ಯಾಕ್ಕೆ ನೆರವು ನೀಡಿದನು. ಯುದ್ಧದಲ್ಲಿ ಆಸ್ಟ್ರಿಯಾವು ಸೋತಿತು. ಪ್ರಷ್ಯಾದ ಸಲಹೆಯಂತೆ ಆಸ್ಟ್ರಿಯಾವು ವೆನೀಶಿಯಾವನ್ನು ಇಟಲಿಗೆ ಬಿಟ್ಟುಕೊಟ್ಟಿತು.

೧೮೬೬ ರಲ್ಲಿ ವೆನೀಶಿಯಾವು ಇಟಲಿಗೆ ಸೇರ್ಪಡೆಗೊಂಡ ಬಳಿಕ ರೋಮ್ ಮಾತ್ರ ಸೇರ್ಪಡೆಗೊಳ್ಳಲು ಬಾಕಿ ಉಳಿದಿತ್ತು. ಆ ಅವಕಾಶ ೧೮೭೦ ರಲ್ಲಿ ಕೂಡಿಬಂತು. ೧೮೭೦ ರಲ್ಲಿ ನಡೆದ ಫ್ರಾನ್ಸ್ ಮತ್ತು ಪ್ರಷ್ಯಾಗಳ ನಡುವಿನ ಯುದ್ಧ ಇಟಲಿಯ ಏಕೀಕರಣವನ್ನು ಪೂರ್ಣಗೊಳಿಸಿತು. ಪ್ರಷ್ಯಾದ ಪ್ರಧಾನಿಯಾದ ಬಿಸ್ಮಾರ್ಕನು ಜರ್ಮನಿಯನ್ನು ಸಂಪೂರ್ಣ ವಾಗಿ ಏಕೀಕೃತಗೊಳಿಸಲು ಫ್ರಾನ್ಸಿನ ವಿರುದ್ಧ ಯುದ್ಧ ಸಾರಿದನು. ಹೀಗಾಗಿ ಫ್ರಾನ್ಸ್ ತಾನು ರೋಮ್‌ನಲ್ಲಿ ಪೋಪನ ರಕ್ಷಣೆಗಾಗಿ ಇರಿಸಿದ್ದ ಸೈನ್ಯವನ್ನು ಪ್ರಷ್ಯಾದೊಂದಿಗಿನ ಯುದ್ಧಕ್ಕಾಗಿ ಕರೆಸಿಕೊಂಡನು. ಈ ಸಮಯವನ್ನು ಉಪಯೋಗಿಸಿಕೊಂಡ ವಿಕ್ಟರ್ ಇಮ್ಯಾನ್ಯುಯಲ್ ಹೊರಹೋಗುತ್ತಿದ್ದ ಫ್ರೆಂಚ್ ಸೈನ್ಯವನ್ನು ಸಂಪೂರ್ಣವಾಗಿ ದೇಶದಿಂದ ಹೊರಕ್ಕೆ ತಳ್ಳಿ ರೋಮನ್ನು ಆಕ್ರಮಿಸಿದನು. ರಕ್ಷಕರಿಲ್ಲದ ರೋಮ್ ಇಮ್ಯಾನ್ಯುಯಲ್‌ನ ವಶವಾಯಿತು. ಪೋಪನನ್ನು ಸಿಂಹಾಸನದಿಂದ ಕೆಳಗಿಳಿಸಿ, ರೋಮನ್ನು ಇಟಲಿಯೊಂದಿಗೆ ಐಕ್ಯಗೊಳಿಸ ಲಾಯಿತು. ರೋಮ್ ಏಕೀಕೃತ ಇಟಲಿಯ ರಾಜಧಾನಿಯಾಯಿತು. ಹೀಗೆ ವೆನೀಶಿಯಾ ಮತ್ತು ರೋಮ್‌ಗಳ ಸೇರ್ಪಡೆಯೊಂದಿಗೆ ಇಟಲಿಯ ಏಕೀಕರಣ ಪೂರ್ಣಗೊಂಡಿತು.

ಇಟಲಿಯ ಏಕೀಕರಣ ಹೋರಾಟದಲ್ಲಿ ಮೂರು ಪ್ರಮುಖ ಹಂತಗಳನ್ನು ಗುರುತಿಸ ಬಹುದಾಗಿದೆ. ಅವುಗಳೆಂದರೆ ಕೆವೂರನ ನೇತೃತ್ವದಲ್ಲಿ ನಡೆದ ಸಾರ್ಡಿನಿಯಾದ ವಿಸ್ತರಣೆ ಮೊದಲ ಹಂತವಾದರೆ, ಗ್ಯಾರಿಬಾಲ್ಡಿಯ ನೇತೃತ್ವದಲ್ಲಿ ಸಿಸಿಲಿ ಮತ್ತು ನೇಪಲ್ಸ್‌ಗಳನ್ನು

ಇಟಲಿಗೆ ಸೇರಿಸಿಕೊಂಡದ್ದು ಎರಡನೆಯ ಹಂತ. ವೆನೀಶಿಯಾ ಮತ್ತು ರೋಮ್‌ಗಳನ್ನು ಇಟಲಿಗೆ ಸೇರ್ಪಡೆಗೊಳಿಸಿ, ಏಕೀಕರಣವನ್ನು ಪೂರ್ಣಗೊಳಿಸಿದ್ದು ಮೂರನೆಯ ಹಂತ. ವಿಕ್ಟರ್ ಇಮ್ಮಾನ್ಯುಯಲ್ ಇದರಲ್ಲಿ ಪ್ರಮುಖ ಪಾತ್ರ ವಹಿಸಿದನು. ಇಟಲಿಯ ಏಕೀಕರಣದ ರೂವಾರಿಗಳಾದ ಮ್ಯಾಜಿನಿ, ಕೆವೂರ್, ಗ್ಯಾರಿಬಾಲ್ಡಿ ಮತ್ತು ವಿಕ್ಟರ್ ಇಮ್ಮಾನ್ಯುಯಲ್ ಇಟಲಿಯ ಜನತೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸುವುದರ ಮೂಲಕ ಪ್ರತಿಯೊಬ್ಬರೂ ಹೋರಾಟಕ್ಕೆ ಸಿದ್ಧರಾಗುವಂತೆ ಮಾಡಿದರು. ದೇಶವನ್ನು ವಿದೇಶಿ ದಬ್ಬಾಳಿಕೆ ಯಿಂದ ಮುಕ್ತಗೊಳಿಸಿ ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿದರು. ಹರಿದು ಹಂಚಿಹೋಗಿದ್ದ ಇಟಲಿಯನ್ನು ಒಂದುಗೂಡಿಸುವುದು ಸಾಹಸದ ಕೆಲಸವಾಗಿತ್ತು. ಆ ಸಾಹಸವನ್ನು ಮ್ಯಾಜಿನಿ ತನ್ನ ಲೇಖನಿಯಿಂದ, ಕೆವೂರ್ ರಾಜನೀತಿಯಿಂದ, ಗ್ಯಾರಿಬಾಲ್ಡಿ ಖಡ್ಗದ ಬಲದಿಂದ ಹಾಗೂ ವಿಕ್ಟರ್ ಇಮ್ಮಾನ್ಯುಯಲ್ ತನ್ನ ಸಮಯ ಪ್ರಜ್ಞೆಯಿಂದ ಮಾಡಿ ತೋರಿಸಿದನು. ಇವರೆಲ್ಲರ ಪರಿಶ್ರಮದ ಫಲವಾಗಿ ೧೮೭೦ ರಲ್ಲಿ ಇಟಲಿ ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮಿತು. ವಿಕ್ಟರ್ ಇಮ್ಮಾನ್ಯುಯಲ್ ಏಕೀಕೃತ ಇಟಲಿಯ ಅರಸನಾದರೆ, ರೋಂ ಇಟಲಿಯ ರಾಜಧಾನಿಯಾಯಿತು.

೨.೪ ಜರ್ಮನಿಯ ಏಕೀಕರಣ

ಜರ್ಮನಿಯು ಏಕೀಕರಣಗೊಳ್ಳುವ ಮೊದಲು ಇಟಲಿಯಂತೆ ಹರಿದು ಹಂಚಿ ಹೋಗಿತ್ತು. ವಿದೇಶಿ ರಾಜಮನೆತನಗಳು ಜರ್ಮನಿಯನ್ನು ತಮ್ಮ ಅಧೀನದಲ್ಲಿಟ್ಟು ಕೊಂಡಿದ್ದವು. ೧೮ ಮತ್ತು ೧೯ ನೆಯ ಶತಮಾನಗಳಲ್ಲಿ ಯುರೋಪಿನಲ್ಲಾದ ರಾಜಕೀಯ ಬೆಳವಣಿಗೆಗಳು ಜರ್ಮನ್ನರ ಮೇಲೆ ಅಪಾರ ಪ್ರಭಾವ ಹಾಗೂ ಪ್ರಚೋದನೆಯನ್ನು ಉಂಟು ಮಾಡಿದವು. ೧೭೮೯ ರಲ್ಲಿ ಫ್ರಾನ್ಸಿನಲ್ಲಿ ನಡೆದ ಕ್ರಾಂತಿ ಯುರೋಪಿನಲ್ಲಿ ಹಲವಾರು ಬದಲಾವಣೆಗಳಿಗೆ ಕಾರಣವಾಯಿತು. ಅದು ಜನರನ್ನು ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಡುವಂತೆ ಮಾಡಿತು. ಜರ್ಮನಿಯ ಜನತೆ ನೆಪೋಲಿಯನ್ನನಿಂದಾಗಿ ಒಕ್ಕೂಟ ವ್ಯವಸ್ಥೆಯೊಂದನ್ನು ಕಂಡಿತು. ಫ್ರಾನ್ಸಿನಲ್ಲಿ ೧೮೩೦ ಮತ್ತು ೧೮೪೮ ರಲ್ಲಿ ನಡೆದ ಕ್ರಾಂತಿಗಳು ಜರ್ಮನಿಯು ಒಗ್ಗೂಡುವುದಕ್ಕೆ ನೇರವಾಗಿ ಕಾರಣವಾದವು. ಜರ್ಮನಿಯ ಏಕೀಕರಣದ ವಿಭಿನ್ನ ಹಂತಗಳನ್ನು ಈ ರೀತಿ ಪರಿಶೀಲಿಸಬಹುದು.

ಏಕೀಕರಣದ ವಿಭಿನ್ನ ಹಂತ

ಏಕೀಕರಣದ ಮೊದಲನೆಯ ಹಂತ

ಒಡೆದು ಹೋಗಿದ್ದ ಜರ್ಮನಿಯನ್ನು ಒಂದುಗೂಡಿಸುವ ಪ್ರಯತ್ನವನ್ನು ಮೊದಲ ಬಾರಿಗೆ ಮಾಡಿದವನು ನೆಪೋಲಿಯನ್ ಬೋನಾಪಾರ್ಟ್. ನೆಪೋಲಿಯನ್ನನು ೩೬೦ ಸಣ್ಣ ಪುಟ್ಟ ರಾಜ್ಯಗಳಾಗಿ ಒಡೆದು ಹೋಗಿದ್ದ ಜರ್ಮನಿಯನ್ನು ಒಂದುಗೂಡಿಸಿ ೩೯ ರಾಜ್ಯಗಳನ್ನಾಗಿ ಮಾಡಿದನು. ೩೯ ರಾಜ್ಯಗಳ ಹೊಸ ಒಕ್ಕೂಟವೊಂದನ್ನು ರಚಿಸಿ, ಆ ಒಕ್ಕೂಟಕ್ಕೆ **ರೈನ್ ಒಕ್ಕೂಟ** ಎಂಬುದಾಗಿ ಹೆಸರಿಸಿದನು. ಇದರಿಂದಾಗಿ ಜರ್ಮನ್ನರು ಮೊದಲ ಬಾರಿಗೆ ಏಕತೆಯ ಅನುಭವವನ್ನು ಪಡೆಯುವಂತಾಯಿತು. ಜರ್ಮನ್ನರು ಈ ಒಕ್ಕೂಟ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಪ್ರಯತ್ನಪಟ್ಟರು. ಹಾಗೂ ಹೋರಾಟಗಳನ್ನು ನಡೆಸಿದರು. ಆದರೆ ನೆಪೋಲಿಯನ್ನನ ಪತನದ ನಂತರ ರಚನೆಗೊಂಡ **ವಿಯೆನ್ನಾ ಸಭೆ ಮೆಟರ್ನಿಕನ** ನೇತೃತ್ವದಲ್ಲಿ ಜರ್ಮನಿಯನ್ನು ಮತ್ತೆ ಒಡೆಯಲು ಪ್ರಯತ್ನಿಸಿತು. ಮೆಟರ್ನಿಕ್ ವಿಯೆನ್ನಾ **ಸಮ್ಮೇಳನದ** ನಂತರ ಜರ್ಮನಿಯನ್ನು ಆಸ್ಟ್ರಿಯಾದ ಅಧೀನದಲ್ಲಿರಿಸಿ, ಅಲ್ಲಿ ರಾಷ್ಟ್ರೀಯ ಚಳವಳಿಗಳು ನಡೆಯದಂತೆ ನೋಡಿಕೊಂಡನು. ಇದು ಜರ್ಮನಿಯಲ್ಲಿ ಆಸ್ಟ್ರಿಯನ್ನರ ದಬ್ಬಾಳಿಕೆಗೆ ಅವಕಾಶ ಕಲ್ಪಿಸಿಕೊಟ್ಟಿತು. ನೆಪೋಲಿಯನ್ನನು ಜಾರಿಗೆ ತಂದಿದ್ದ ಕಾನೂನುಗಳನ್ನು ರದ್ದುಗೊಳಿಸಲಾಯಿತು. ಜರ್ಮನಿಯನ್ನು ಹಲವಾರು ವಿಭಾಗಗಳನ್ನಾಗಿ ವಿಂಗಡಿಸಿ ಹಳೆಯ ರಾಜರುಗಳಿಗೇ ಒಪ್ಪಿಸಲಾಯಿತು. ಹೀಗೆ ಏಕೀಕರಣದ ಮೊದಲ ಹಂತ ವಿಫಲಗೊಂಡಿತು. ಆದರೂ ನೆಪೋಲಿಯನ್ನನು ಜರ್ಮನಿಯ ಜನರಲ್ಲಿ ಮೂಡಿಸಿದ್ದ ರಾಷ್ಟ್ರೀಯ ಭಾವನೆಗಳನ್ನು ಅಳಿಸಿ ಹಾಕಲು ವಿಯೆನ್ನಾ ಸಭೆಗೆ ಸಾಧ್ಯವಾಗಲಿಲ್ಲ.

ಏಕೀಕರಣದ ಎರಡನೆಯ ಹಂತ

ಜರ್ಮನಿಯ ರಾಜ್ಯಗಳು ಮತ್ತೊಮ್ಮೆ ಸಂಘಟಿತವಾದದ್ದು ಪ್ರಷ್ಯಾ ನೇತೃತ್ವದಲ್ಲಿ. ಜರ್ಮನಿಯ ರಾಜ್ಯಗಳು ಪರಸ್ಪರ ಹತ್ತಿರವಾಗುವುದಕ್ಕೆ ಆರ್ಥಿಕ ಸಮಸ್ಯೆಗಳು ಮೂಲ ಕಾರಣವಾದವು. ಜರ್ಮನಿಯ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಆರ್ಥಿಕ ನೀತಿಯನ್ನು ಹೊಂದಿದ್ದದರಿಂದಾಗಿ ಇತರ ರಾಜ್ಯಗಳೊಂದಿಗೆ ವ್ಯಾಪಾರ ನಡೆಸುವಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿ ಬರುತಿತ್ತು. ವ್ಯಾಪಾರ ಸರಕುಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವಾಗ ಆಯಾ ರಾಜ್ಯಗಳು ತಮ್ಮದೇ ಆದ ದುಬಾರಿ ಸುಂಕವನ್ನು ವಿಧಿಸುತ್ತಿದ್ದವು. ಇದರಿಂದಾಗಿ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ನಷ್ಟವುಂಟಾಗುತ್ತಿತ್ತು. ಇದನ್ನು ತಡೆಗಟ್ಟಲು ಪ್ರಷ್ಯಾದ ನೇತೃತ್ವದಲ್ಲಿ ಜರ್ಮನಿಯ ಎಲ್ಲ ರಾಜ್ಯಗಳು ಒಂದುಗೂಡಿ **ಝೊಲ್ವೆರಿನ್** ಎಂಬ ಸುಂಕದ ಸಂಘವೊಂದನ್ನು ರಚಿಸಿಕೊಂಡವು. ಈ ಸಂಘ ಅಸ್ತಿತ್ವಕ್ಕೆ ಬಂದ ಮೇಲೆ ಜರ್ಮನಿಯ ರಾಜ್ಯಗಳ ನಡುವೆ ಮುಕ್ತ ವ್ಯಾಪಾರ ಸಾಧ್ಯವಾಯಿತು. ಇದೊಂದು ಸುಂಕದ ಸಂಘವಾಗಿದ್ದರೂ, ಅದರ ಮೂಲಕ ಒಕ್ಕೂಟವನ್ನು ರಚಿಸಿಕೊಳ್ಳಲು ಸಾಧ್ಯವಾಯಿತು. ಹಿಂದಿದ್ದ ಸುಂಕ ಪದ್ಧತಿಯನ್ನು ತೆಗೆದುಹಾಕಲಾಯಿತು. ಇದರಿಂದಾಗಿ ಜರ್ಮನಿಯ ರಾಜ್ಯಗಳ ಪ್ರತ್ಯೇಕ ಆರ್ಥಿಕ ನೀತಿ ರದ್ದುಗೊಂಡು ಏಕರೂಪವಾದ ನೀತಿ ಜಾರಿಗೆ ಬಂತು. ಜರ್ಮನಿಯ ರಾಜ್ಯಗಳು ಆರ್ಥಿಕ ಕಾರಣಕ್ಕಾಗಿ ಒಂದುಗೂಡಿ ಸಂಘವೊಂದನ್ನು ರಚಿಸಿಕೊಂಡದ್ದು ರಾಜಕೀಯವಾಗಿ ಒಂದುಗೂಡುವುದಕ್ಕೂ ಅವಕಾಶ ಕಲ್ಪಿಸಿತು.

ಏಕೀಕರಣದ ಮೂರನೆಯ ಹಂತ

ಫ್ರಾನ್ಸಿನಲ್ಲಿ ೧೮೪೮ರಲ್ಲಿ ನಡೆದ ಕ್ರಾಂತಿ ಜರ್ಮನಿಯ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಜರ್ಮನಿಯ ಅನೇಕ ರಾಜ್ಯಗಳ ಜನರು ಈ ಕ್ರಾಂತಿಯಿಂದ ಪ್ರಭಾವಿತರಾಗಿ ತಮ್ಮ ರಾಜ್ಯದಲ್ಲಿ ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತರುವಂತೆ ಒತ್ತಾಯಿಸಿದರು. ಜರ್ಮನಿಯ ಪ್ರಗತಿಪರರು ೧೮೪೮ರ ಮೇ ತಿಂಗಳಲ್ಲಿ **ಫ್ರಾಂಕ್‌ಫರ್ಟ್** ನಗರದಲ್ಲಿ ೫೫೦ ಪ್ರಜಾಪ್ರತಿನಿಧಿಗಳ ಸಭೆ ಸೇರಿಸಿ ಜರ್ಮನಿಯನ್ನು ಪ್ರಷ್ಯಾದ ನಾಯಕತ್ವದಲ್ಲಿ ಏಕೀಕರಣಗೊಳಿಸಲು ಪ್ರಯತ್ನಿಸಿದರು. ಅವರು ಜರ್ಮನ್ ರಾಜ್ಯಗಳ ಸಂಯುಕ್ತ ಸಂವಿಧಾನವನ್ನು ರೂಪಿಸಿ, ಪ್ರಷ್ಯಾದ ಅರಸ ನಾಲ್ಕನೆಯ **ಫ್ರೆಡರಿಕ್ ವಿಲಿಯಮ್‌**ನನ್ನು ಜರ್ಮನಿಯ ಚಕ್ರವರ್ತಿಯಾಗುವಂತೆ ಕೋರಿದರು. ಆದರೆ ದೊರೆ ವಿಲಿಯಮ್ ಫ್ರಾಂಕ್‌ಫರ್ಟ್ ಪಾರ್ಲಿಮೆಂಟಿನ ತೀರ್ಮಾನವನ್ನು ಗೌರವಿಸಲಿಲ್ಲ ಹಾಗೂ ಪಾರ್ಲಿಮೆಂಟಿನ ಕೋರಿಕೆಯನ್ನು ತಿರಸ್ಕರಿಸಿದನು. ವಿಲಿಯಮ್ ಪಾರ್ಲಿಮೆಂಟಿನ ಕೋರಿಕೆಯನ್ನು ತಿರಸ್ಕರಿಸಲು ಹಲವಾರು ಕಾರಣಗಳಿದ್ದವು.

ಸಾಮಾನ್ಯ ಜನತೆಯ ಪ್ರತಿನಿಧಿಗಳು ಕೊಡುವ ಕಿರೀಟ ಬೇಡವೆಂದು ವಿಲಿಯಮ್ ತಿಳಿಸಿದನು. ಆದರೆ ವಿಲಿಯಮ್ ಪಾರ್ಲಿಮೆಂಟಿನ ಆಹ್ವಾನವನ್ನು ತಿರಸ್ಕರಿಸಲು ಕಾರಣಗಳು ಬೇರೆಯೇ ಇದ್ದವು. ವಿಲಿಯಮ್ ಜರ್ಮನಿಯ ಸಿಂಹಾಸನವೇರಿದರೆ ಆಸ್ಟ್ರಿಯಾವ

ವಿರೋಧವನ್ನು ಕಟ್ಟಿಕೊಳ್ಳಬೇಕಾಗಿತ್ತು. ಆಸ್ಟ್ರಿಯಾದ ವಿರುದ್ಧ ಯುದ್ಧ ಮಾಡುವುದು ತನ್ನಿಂದ ಸಾಧ್ಯವಿಲ್ಲವೆಂದು ವಿಲಿಯಮ್ ತೀರ್ಮಾನಿಸಿದ್ದನು. ರಷ್ಯಾದ ಅರಸ ನಿಕೋಲಸ್ ಜರ್ಮನಿಯ ಏಕೀಕರಣವಾದಲ್ಲಿ ಅದರ ವಿರುದ್ಧ ಯುದ್ಧ ಮಾಡುವನೆಂಬ ಭಯವೂ ವಿಲಿಯಮ್‌ನಿಗಿತ್ತು. ಈ ಎಲ್ಲ ಕಾರಣಗಳಿಂದಾಗಿ ವಿಲಿಯಮ್ ಜರ್ಮನಿಯ ಸಿಂಹಾಸನ ಬೇಡವೆಂದು ತಿಳಿಸಿದನು. ವಿಲಿಯಮ್‌ನ ಈ ಧೋರಣೆ ಫ್ರಾಂಕ್‌ಫರ್ಟ್ ಪಾರ್ಲಿಮೆಂಟಿನ ಕನಸುಗಳನ್ನು ನುಚ್ಚುನೂರು ಮಾಡಿತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಆಸ್ಟ್ರಿಯಾ ಜರ್ಮನ್ ರಾಜ್ಯಗಳ ಮೇಲೆ ತನ್ನ ಹತೋಟಿಯನ್ನು ಸಾಧಿಸಿತು. ಫ್ರಾಂಕ್‌ಫರ್ಟ್ ಪಾರ್ಲಿಮೆಂಟಿನಲ್ಲಿ ಪ್ರಜಾಪ್ರತಿನಿಧಿಗಳು ಕೈಗೊಂಡಿದ್ದ ಸಂವಿಧಾನಬದ್ಧ ನಿರ್ಣಯಗಳನ್ನು ಆಸ್ಟ್ರಿಯಾವು ತನ್ನ ದಮನಕಾರಿ ಧೋರಣೆಯಿಂದ ರದ್ದುಗೊಳಿಸಿ, ದರ್ಪಿಷ್ಟ ಆಡಳಿತವನ್ನು ಜಾರಿಗೊಳಿಸಿತು. ಇದರಿಂದಾಗಿ ಜರ್ಮನಿಯ ಏಕೀಕರಣದ ಮತ್ತೊಂದು ಪ್ರಯತ್ನವೂ ವಿಫಲಗೊಳ್ಳುವಂತಾಯಿತು.

ಬಿಸ್ಮಾರ್ಕ್ (೧೮೧೫-೧೮೯೮) ಹಾಗೂ ಏಕೀಕರಣದ ಅಂತಿಮ ಹಂತ

ಜರ್ಮನಿಯ ಏಕೀಕರಣ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿ, ಅದನ್ನು ಸಾಧಿಸಿದವನು **ಅಟ್ಟೋವಾನ್ ಬಿಸ್ಮಾರ್ಕ್**. ಬಿಸ್ಮಾರ್ಕ್ ಪ್ರಷ್ಯಾದ **ಬ್ರಾಂಡನ್‌ಬರ್ಗ್**‌ನ ಶ್ರೀಮಂತ ಯಂಕರ್ ಕುಟುಂಬದಲ್ಲಿ ೧೮೧೫ ರಲ್ಲಿ ಜನಿಸಿದನು. **ಬರ್ಲಿನ್** ಮತ್ತು **ಗಾಟಿಂಜನ್** ವಿಶ್ವವಿದ್ಯಾಲಯಗಳಲ್ಲಿ ವ್ಯಾಸಾಂಗ ಮಾಡಿ, ಪ್ರಷ್ಯಾದ ನಾಗರಿಕ ಸೇವಾ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡನು. ಬಿಸ್ಮಾರ್ಕ್ ಪ್ರಷ್ಯಾದ ಅರಸನ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದನು. ನೇರ ನುಡಿಯ ಬಿಸ್ಮಾರ್ಕ್ ಮನಬಂದಂತೆ ವರ್ತಿಸುತ್ತಿದ್ದುದ್ದು ಅಲ್ಲಿಯ ಅಧಿಕಾರಿಗಳಿಗೆ ಇಷ್ಟವಾಗುತ್ತಿರಲಿಲ್ಲ. ಬಿಸ್ಮಾರ್ಕ್‌ನನ್ನು ಸರಕಾರಿ ಹುದ್ದೆಯಿಂದ ವಜಾ ಮಾಡಲಾಯಿತು. ನಂತರ ಬಿಸ್ಮಾರ್ಕ್ ತನ್ನದೇ ಆದ ಪಕ್ಷವೊಂದನ್ನು ಸ್ಥಾಪಿಸಿ, ಅದಕ್ಕೆ **ಕನ್ಸರ್ವೇಟಿವ್ ಪಕ್ಷ** ಎಂದು ಹೆಸರಿಸಿದನು. ೧೮೪೭ ರಲ್ಲಿ ಬಿಸ್ಮಾರ್ಕ್ ಪ್ರಷ್ಯಾದ ಶಾಸನ ಸಭೆಯ ಸದಸ್ಯನಾದನು. ೧೮೫೧ ರಲ್ಲಿ ಫ್ರಾಂಕ್‌ಫರ್ಟ್‌ನಲ್ಲಿದ್ದ ಜರ್ಮನ್ ಸಾಮ್ರಾಜ್ಯ ಒಕ್ಕೂಟದ **ಡಯಟ್** (ಶಾಸನಸಭೆ)ಗೆ ಪ್ರತಿನಿಧಿಯಾಗಿ ಆಯ್ಕೆಯಾದನು. ಜರ್ಮನಿಯ ಒಕ್ಕೂಟಕ್ಕೆ ಅಡ್ಡಗೋಡೆಯಾಗಿದ್ದ ಆಸ್ಟ್ರಿಯಾವನ್ನು ಬಿಸ್ಮಾರ್ಕ್ ಆರಂಭದಿಂದಲೂ ವಿರೋಧಿಸುತ್ತಿದ್ದನು. ೧೮೫೯ ರಲ್ಲಿ ಬಿಸ್ಮಾರ್ಕ್‌ನನ್ನು ರಷ್ಯಾಕ್ಕೆ ಪ್ರಷ್ಯಾದ ರಾಯಭಾರಿಯಾಗಿ ನೇಮಕ ಮಾಡಲಾಯಿತು. ಆ ಹುದ್ದೆಯಲ್ಲಿ ಬಿಸ್ಮಾರ್ಕ್ ೧೮೬೨ ರವರೆಗೆ ಮುಂದುವರಿದನು. ೧೮೬೨ ರಲ್ಲಿ ಬಿಸ್ಮಾರ್ಕ್‌ನನ್ನು ಫ್ರಾನ್ಸ್‌ಗೆ ಪ್ರಷ್ಯಾದ ರಾಯಭಾರಿಯಾಗಿ ನೇಮಕ ಮಾಡಲಾಯಿತು.

೧೮೬೧ ರಲ್ಲಿ ಪ್ರಷ್ಯಾದ ದೊರೆ ನಾಲ್ಕನೆಯ **ಫ್ರೆಡರಿಕ್** ಮರಣ ಹೊಂದಿ, ಆತನ ಸಹೋದರ ಒಂದನೆಯ ವಿಲಿಯಮ್ ಅಧಿಕಾರಕ್ಕೆ ಬಂದನು. ಒಂದನೆಯ ವಿಲಿಯಮ್

ಸೈನಿಕ ಶಕ್ತಿಯ ಮೇಲೆ ಅಪಾರ ನಂಬಿಕೆಯುಳ್ಳವನಾಗಿದ್ದು, ಅದರಿಂದ ಮಾತ್ರ ಜರ್ಮನಿಯ ಏಕೀಕರಣ ಸಾಧ್ಯ ಎಂಬುದಾಗಿ ನಂಬಿದ್ದನು. ವಿಲಿಯಮ್ ವಾನ್‌ರೂನ್‌ನನ್ನು ರಕ್ಷಣಾ ಮಂತ್ರಿಯನ್ನಾಗಿ ನೇಮಿಸಿ ಎಲ್ಲ ಜರ್ಮನ್ನರಿಗೂ ಕಡ್ಡಾಯ ಸೈನಿಕ ಶಿಕ್ಷಣವನ್ನು ನೀಡುವಂತೆ ಆದೇಶಿಸಿದನು. ಆದರೆ ಡಯಟ್‌ಗೆ ಯುದ್ಧದ ಮೂಲಕ ಏಕೀಕರಣ ಸಾಧಿಸುವುದು ಇಷ್ಟವಿರಲಿಲ್ಲ. ಪಾರ್ಲಿಮೆಂಟ್ ತನ್ನ ನಿರ್ಧಾರವನ್ನು ಸಡಿಲಗೊಳಿಸಲಿಲ್ಲ ಹಾಗೂ ವಿಲಿಯಮ್ ಸೈನಿಕ ಕಾರ್ಯಾಚರಣೆಯ ಮೂಲಕವೇ ಏಕೀಕರಣ ಸಾಧ್ಯ ಎನ್ನುವ ತನ್ನ ನಿರ್ಧಾರಕ್ಕೆ ಅಂಟಿಕೊಂಡಿದ್ದ. ಸೈನ್ಯ ಸಂಘಟನೆಗೆ ಅಗತ್ಯವಾದ ಹಣವನ್ನು ಬಿಡುಗಡೆ ಮಾಡಲು ಪಾರ್ಲಿಮೆಂಟ್ ವಿರೋಧಿಸಿತು. ಈ ಇಕ್ಕಟ್ಟಿನ ಪರಿಸ್ಥಿತಿ ಬಿಸ್ಮಾರ್ಕ್ ಪ್ರಷ್ಯಾಕ್ಕೆ ಬರುವಂತೆ ಮಾಡಿತು. ಅರಸ ವಿಲಿಯಮ್ ಪ್ರಷ್ಯಾದ ಆಂತರಿಕ ಸಮಸ್ಯೆಗಳಿಂದ ಬೇಸತ್ತು, ದಿಟ್ಟವಾದ ನಿರ್ಧಾರ ತೆಗೆದುಕೊಳ್ಳಲು ಬಿಸ್ಮಾರ್ಕ್‌ನನ್ನು ಪ್ಯಾರಿಸ್‌ನಿಂದ ಕರೆಸಿಕೊಂಡನು. ೧೮೬೨ ರಲ್ಲಿ ಬಿಸ್ಮಾರ್ಕ್‌ನನ್ನು ಪ್ರಷ್ಯಾದ ಪ್ರಧಾನಿಯನ್ನಾಗಿ ನೇಮಕ ಮಾಡಲಾಯಿತು. ಪ್ರಧಾನಿಯಾಗಿ ಆಯ್ಕೆಗೊಂಡ ಬಿಸ್ಮಾರ್ಕ್ ಅರಸನ ಕನಸನ್ನು ನನಸನ್ನಾಗಿಸುವ ಪಣ ತೊಟ್ಟನು. ಜರ್ಮನಿಯ ಏಕೀಕರಣಕ್ಕೆ ಪ್ರಾಮಾಣಿಕವಾಗಿ ದುಡಿಯುವ ಹಾಗೂ ಪಾರ್ಲಿಮೆಂಟಿನ ವಿರುದ್ಧ ಅರಸನಿಗೆ ಸಹಾಯ ಮಾಡುವ ನಿರ್ಧಾರಕ್ಕೆ ಬಂದನು.

ಪ್ರಷ್ಯಾದ ನೇತೃತ್ವದಲ್ಲಿ ಜರ್ಮನಿಯ ರಾಜ್ಯಗಳನ್ನು ಒಂದುಗೂಡಿಸುವುದು ಬಿಸ್ಮಾರ್ಕ್‌ನ ಗುರಿಯಾಗಿತ್ತು. ಉಕ್ಕಿನಂತೆ ಕಠೋರವಾದ ನೀತಿಯಿಂದಲ್ಲದೆ ಶಾಂತವಾದ ಮಾರ್ಗಗಳಿಂದ ಏಕೀಕರಣ ಸಾಧ್ಯವಿಲ್ಲವೆಂದು ಬಿಸ್ಮಾರ್ಕ್ ಮನಗಂಡಿದ್ದನು. ಜರ್ಮನಿಯ ಏಕೀಕರಣ **ರಕ್ತ ಮತ್ತು ಕತ್ತಿ**ಯಿಂದ ಮಾತ್ರ ಸಾಧ್ಯ ಎನ್ನುವುದು ಬಿಸ್ಮಾರ್ಕ್‌ನ ನಿಲುವಾಗಿತ್ತು. ಇದನ್ನು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ತಿಳಿಸಿದನು. ಬಿಸ್ಮಾರ್ಕ್‌ನ ಪ್ರಯತ್ನಗಳಿಂದಾಗಿ ಪ್ರಷ್ಯಾದ ಸೈನ್ಯ ಯುರೋಪಿನಲ್ಲೇ ಅತ್ಯಂತ ಪರಿಣಾಮಕಾರಿಯಾಗಿ ಹೋರಾಡುವ ಮಿಲಿಟರಿ ಶಕ್ತಿಯಾಗಿ ಪರಿವರ್ತನೆಗೊಂಡಿತು. ಬಿಸ್ಮಾರ್ಕ್‌ನು ತನ್ನ ಮಿಲಿಟರಿ ನೀತಿಗಳನ್ನು ವಿರೋಧಿಸುವವರನ್ನು ಕ್ರೂರವಾಗಿ ದಮನ ಮಾಡಿದನು. ತನಗೆ ಬೆಂಬಲನಾಗಿ ನಿಂತಿದ್ದ ಅರಸ ವಿಲಿಯಮ್‌ನ ಅನುಮತಿ ಪಡೆದು ಪ್ರಷ್ಯಾದ ಪಾರ್ಲಿಮೆಂಟಿನ ಅನುಮತಿ ಪಡೆಯದೆ ಜನರ ಮೇಲೆ ತೆರಿಗೆ ವಿಧಿಸಿದನು. ಶ್ರೀಮಂತ ಜನರಿಂದ ಬಲತ್ಕಾರವಾಗಿ ತೆರಿಗೆ ವಸೂಲಿ ಮಾಡಿದನು. ತೆರಿಗೆ ನೀತಿಯನ್ನು ವಿರೋಧಿಸುತ್ತಿದ್ದವರೆಲ್ಲರನ್ನು ಸೆರೆಮನೆಗೆ ತಳ್ಳಿದನು. ಬಿಸ್ಮಾರ್ಕ್‌ನ ಕೆಲಸ ಕಾರ್ಯಗಳಿಗೆ ಪ್ರಷ್ಯಾದ ರಕ್ಷಣಾಮಂತ್ರಿ **ವಾನ್‌ರೂನ್** ಹಾಗೂ ಸೇನಾಪತಿ **ಮಾಲ್ಟ್‌ಕೆ** ಬೆಂಬಲವಾಗಿ ನಿಂತರು. ಅವರ ಹಾಗೂ ಅರಸನ ಬೆಂಬಲದಿಂದ ಬಿಸ್ಮಾರ್ಕ್ ಯುರೋಪಿನಲ್ಲೇ ಅತ್ಯಂತ ಸುಸಜ್ಜಿತವಾದ ಸೈನ್ಯವನ್ನು ಕಟ್ಟಿದನು. ಜರ್ಮನಿಯ ಏಕೀಕರಣಕ್ಕಾಗಿ ಬಿಸ್ಮಾರ್ಕ್ ಈ ಸೈನ್ಯದ ನೆರವಿನಿಂದ **ಡೆನ್ಮಾರ್ಕ್, ಆಸ್ಟ್ರಿಯಾ** ಹಾಗೂ **ಫ್ರಾನ್ಸ್**ನೊಡನೆ ನಿರ್ಣಾಯಕವಾದ ಯುದ್ಧವನ್ನು ಮಾಡಿದನು.

ಡೆನ್ಮಾರ್ಕ್‌ನೊಡನೆ ಯುದ್ಧ (೧೮೬೪)

ಡೆನ್ಮಾರ್ಕ್‌ನೊಡನೆ ಯುದ್ಧವು **ಶ್ಲೇಷ್‌ವಿಗ್** ಮತ್ತು **ಹೋಲ್‌ಸ್ಟೈನ್** ಪ್ರಾಂತ್ಯಗಳ ಭವಿಷ್ಯವನ್ನು ನಿರ್ಧರಿಸುವಂತಹ ಅತ್ಯಂತ ಜಟಿಲ ಸಮಸ್ಯೆಯಿಂದ ಹುಟ್ಟಿಕೊಂಡಿತು. ಜರ್ಮನಿಯ ಏಕೀಕರಣಕ್ಕೆ ಶ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್ ಪ್ರಾಂತ್ಯಗಳು ಬಹು ಮುಖ್ಯವಾಗಿದ್ದವು. ಇವೆರಡೂ ಡೆನ್ಮಾರ್ಕಿನ ದಕ್ಷಿಣ ಗಡಿಗಳಲ್ಲಿ ಪ್ರಷ್ಯಾಕ್ಕೆ ಹೊಂದಿ ಕೊಂಡಂತಿರುವ ಕಿರುಪ್ರಾಂತ್ಯಗಳು. ಶ್ಲೇಷ್‌ವಿಗ್‌ನಲ್ಲಿ ಡೇನರು ಮತ್ತು ಜರ್ಮನ್ನರಿದ್ದರೆ, ಹೋಲ್‌ಸ್ಟೈನ್‌ನಲ್ಲಿ ಜರ್ಮನ್ನರೇ ತುಂಬಿದ್ದರು. ಆದರೆ ಇವೆರಡೂ ಪ್ರಾಂತ್ಯಗಳು ಡೆನ್ಮಾರ್ಕ್‌ನ ಅರಸನ ಅಧೀನದಲ್ಲಿದ್ದವು. ಆದರೆ ಅವುಗಳನ್ನು ಡೆನ್ಮಾರ್ಕ್‌ಗೆ ವಿಲೀನಗೊಳಿಸಿ ಕೊಳ್ಳುವ ಅಧಿಕಾರ ಡೆನ್ಮಾರ್ಕ್‌ನ ಅರಸನಿಗಿರಲಿಲ್ಲ. ೧೮೬೩ ರಲ್ಲಿ ಈ ಎರಡೂ ಪ್ರಾಂತ್ಯ ಗಳನ್ನು ಡೆನ್ಮಾರ್ಕ್‌ನೊಂದಿಗೆ ವಿಲೀನಗೊಳಿಸುವ ಪ್ರಯತ್ನಗಳು ನಡೆದವು. ಈ ಕ್ರಮವನ್ನು ಅಲ್ಲಿನ ಜನರು ತೀವ್ರವಾಗಿ ವಿರೋಧಿಸಿದರು. ಈ ಅವಕಾಶವನ್ನು ಉಪಯೋಗಿಸಿಕೊಂಡ ಬಿಸ್ಮಾರ್ಕ್ ಡೆನ್ಮಾರ್ಕ್‌ನ ಜರ್ಮನ್ ಜನತೆಯ ಬೆಂಬಲವನ್ನು ಪಡೆದುಕೊಂಡು ಡೆನ್ಮಾರ್ಕ್‌ನ ವಿರುದ್ಧ ಸೈನಿಕ ಕಾರ್ಯಾಚರಣೆ ನಡೆಸಲು ಮುಂದಾದನು.

ಡೆನ್ಮಾರ್ಕಿನ ವಿರುದ್ಧದ ಯುದ್ಧಕ್ಕೆ ನೆರವು ನೀಡುವಂತೆ ಬಿಸ್ಮಾರ್ಕ್ ಆಸ್ಟ್ರಿಯಾವನ್ನು ಕೇಳಿಕೊಂಡನು. ಬಿಸ್ಮಾರ್ಕ್ ತನ್ನ ಚತುರ ರಾಜತಾಂತ್ರಿಕ ನೀತಿಯನ್ನು ಉಪಯೋಗಿಸಿ ಆಸ್ಟ್ರಿಯಾದ ಬೆಂಬಲವನ್ನು ಪಡೆದುಕೊಂಡನು. ಆಸ್ಟ್ರಿಯಾದೊಂದಿಗೆ ಒಪ್ಪಂದ ಮಾಡಿ ಕೊಳ್ಳದಿದ್ದರೆ ಆಸ್ಟ್ರಿಯಾವೇ ಪ್ರಷ್ಯಾದ ಆಕ್ರಮಣದ ವಿರುದ್ಧ ಯುದ್ಧ ಸಾರುವ ಸಾಧ್ಯತೆ ಗಳಿದ್ದವು. ಈ ಅಪಾಯವನ್ನರಿತ ಬಿಸ್ಮಾರ್ಕ್ ಆಸ್ಟ್ರಿಯಾದೊಂದಿಗೆ ಸ್ನೇಹತ್ವ ಸಂಪಾದಿಸಿ ಒಪ್ಪಂದ ಮಾಡಿಕೊಂಡನು. ಎರಡೂ ರಾಷ್ಟ್ರಗಳು ಡೆನ್ಮಾರ್ಕ್‌ನ ವಿರುದ್ಧ ಸಂಯುಕ್ತವಾಗಿ ಹೋರಾಡಲು ಒಪ್ಪಿದವು. ೧೮೬೪ ರಲ್ಲಿ ಬಿಸ್ಮಾರ್ಕ್ ಡೆನ್ಮಾರ್ಕ್‌ನ ದೊರೆಗೆ ಶ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್‌ಗಳನ್ನು ತಕ್ಷಣವೇ ಬಿಟ್ಟುಕೊಡಬೇಕೆಂದು ಸೂಚಿಸಿದನು. ನಂತರ ೪೮ ಗಂಟೆಗಳ ಅಂತಿಮ ಗಡುವನ್ನು ನೀಡಲಾಯಿತು. ಆದರೆ ಡೆನ್ಮಾರ್ಕ್‌ನ ದೊರೆ ಕ್ರಿಶ್ಚಿಯನ್ನನಿಂದ ಯಾವುದೇ ರೀತಿಯ ಪ್ರತ್ಯುತ್ತರ ಬರದಿದ್ದಾಗ ಪ್ರಷ್ಯ ಮತ್ತು ಆಸ್ಟ್ರಿಯಾ ಸೈನ್ಯಗಳು ಜೊತೆಗೂಡಿ ೧೮೬೪ ರಲ್ಲಿ ಡೆನ್ಮಾರ್ಕ್‌ನ ಮೇಲೆ ಯುದ್ಧವನ್ನು ಆರಂಭಿಸಿದವು.

ಪ್ರಷ್ಯಾ ಮತ್ತು ಆಸ್ಟ್ರಿಯಾಗಳ ಸಂಯುಕ್ತ ಸೇನೆ ಡೆನ್ಮಾರ್ಕನ್ನು ೧೮೬೪ ರ ಅಕ್ಟೋಬರ್ ನಲ್ಲಿ ಸೋಲಿಸಿತು. ಸೋತು ಶರಣಾದ ಡೆನ್ಮಾರ್ಕ್ ಶ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್ ಗಳನ್ನು ಬಿಸ್ಮಾರ್ಕ್‌ನ ಅಧೀನಕ್ಕೆ ಒಪ್ಪಿಸಿತು. ಎರಡೂ ಪ್ರಾಂತ್ಯಗಳನ್ನು ಜರ್ಮನಿಗೆ ಸೇರಿಸಿ ಕೊಂಡರೆ ಆಸ್ಟ್ರಿಯಾ ಮುನಿಸಿಕೊಳ್ಳಬಹುದೆಂದು ಭಾವಿಸಿ ಬಿಸ್ಮಾರ್ಕ್ ೧೮೬೫ ರಲ್ಲಿ ಆಸ್ಟ್ರಿಯಾದೊಡನೆ **ಗೆಸ್ಟೀನ್** ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಪ್ರಷ್ಯಾ ಶ್ಲೇಷ್‌ವಿಗ್‌ನ್ನು ಹಾಗೂ ಆಸ್ಟ್ರಿಯಾ ಹೋಲ್‌ಸ್ಟೈನ್ ಪ್ರಾಂತ್ಯವನ್ನು ಪಡೆದು ಕೊಳ್ಳುವಂತೆ ತೀರ್ಮಾನಿಸಲಾಯಿತು. ಈ ಹಂಚಿಕೆಯು ಹುಟ್ಟುಹಾಕಿದ ಸಮಸ್ಯೆಗಳು ಮುಂದೆ ಆಸ್ಟ್ರಿಯಾ ಮತ್ತು ಪ್ರಷ್ಯಾಗಳು ಪರಸ್ಪರ ಕಾದಾಡುವಂತೆ ಮಾಡಿದವು.

ಆಸ್ಟ್ರಿಯಾ ಮತ್ತು ಪ್ರಷ್ಯಾ ನಡುವಿನ ಯುದ್ಧ (೧೮೬೬)

ಗೆಸ್ಟೀನ್ ಒಪ್ಪಂದದಲ್ಲುಂಟಾದ ಅಸಮಾಧಾನವೇ ಆಸ್ಟ್ರಿಯಾ ಮತ್ತು ಪ್ರಷ್ಯಾಗಳ ನಡುವಿನ ಯುದ್ಧಕ್ಕೆ ಕಾರಣವಾಯಿತು. ಆಸ್ಟ್ರಿಯಾವು ಪಡೆದುಕೊಂಡಿದ್ದ ಹೋಲ್‌ಸ್ಟೈನ್ ಪ್ರಾಂತ್ಯ ಶ್ಲೇಷ್‌ವಿಗ್‌ನಷ್ಟು ಸಂಪದ್ಭರಿತವಾಗಿರಲಿಲ್ಲ, ಅಲ್ಲದೆ ಅದು ಎರಡೂ ಕಡೆಗಳಿಂದಲೂ ಪ್ರಷ್ಯಾದ ಪ್ರದೇಶಗಳಿಂದ ಆವೃತ್ತವಾಗಿತ್ತು. ಇದು ಆಸ್ಟ್ರಿಯಾವು ಅಸಮಾಧಾನಗೊಳ್ಳುವಂತೆ ಮಾಡಿತು. ಹೋಲ್‌ಸ್ಟೈನ್‌ನ ಮೇಲೆ ಆಸ್ಟಿನ್‌ಬರ್ಗ್‌ನ ಹಕ್ಕನ್ನು ಸ್ಥಾಪಿಸಲು ಆಸ್ಟ್ರಿಯಾವು ಮುಂದಾಯಿತು. ಅಲ್ಲದೆ ಪ್ರಷ್ಯಾದ ಬಗ್ಗೆ ವಿರೋಧಿ ನಿಲುವನ್ನು ತಾಳಿತು. ಬಿಸ್ಮಾರ್ಕ್ ಆಸ್ಟ್ರಿಯಾವು ಪ್ರಷ್ಯಾದ ಬಗ್ಗೆ ತಳೆದ ವಿರೋಧಿ ನಿಲುವನ್ನು ಬದಲಿಸಬೇಕೆಂದು ಒತ್ತಾಯಿಸಿದನು. ಆದರೆ ಆಸ್ಟ್ರಿಯಾವು ಪ್ರಷ್ಯಾದ ವಿರುದ್ಧದ ತನ್ನ ಕಾರ್ಯಾಚರಣೆಯನ್ನು ಮುಂದುವರಿಸಿತು. ಇದು ಆಸ್ಟ್ರಿಯಾ ಮತ್ತು ಪ್ರಷ್ಯಾಗಳ ನಡುವಿನ ಯುದ್ಧವನ್ನು ಅನಿವಾರ್ಯವನ್ನಾಗಿಸಿತು.

ಬಿಸ್ಮಾರ್ಕ್ ಆಸ್ಟ್ರಿಯಾದ ವಿರುದ್ಧ ಯುದ್ಧ ಘೋಷಿಸುವ ಮೊದಲು ಆಸ್ಟ್ರಿಯಾವನ್ನು ಯುರೋಪಿನಲ್ಲಿ ಏಕಾಂಗಿಯನ್ನಾಗಿ ಮಾಡುವ ಪ್ರಯತ್ನವನ್ನು ಮಾಡಿದನು. ಈ ಉದ್ದೇಶದಿಂದ ರಷ್ಯಾ, ಫ್ರಾನ್ಸ್ ಮತ್ತು ಇಟಲಿ ದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡನು. ಈ ಎಲ್ಲ ರಾಷ್ಟ್ರಗಳು ಪ್ರಷ್ಯಾದ ಪರ ನಿಲ್ಲುವಂತೆ ಒಪ್ಪಿಕೊಂಡವು. ಹೀಗೆ ಯುರೋಪಿನಲ್ಲಿ ತನಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಿಕೊಂಡ ಬಳಿಕ ಬಿಸ್ಮಾರ್ಕ್ ಆಸ್ಟ್ರಿಯಾದ ಮೇಲೆ ಸೈನಿಕ ಕಾರ್ಯಾಚರಣೆಯನ್ನು ಕೈಗೊಂಡನು. ೧೮೬೬ ರಲ್ಲಿ ಆಸ್ಟ್ರಿಯಾ ಮತ್ತು ಪ್ರಷ್ಯಾಗಳ ನಡುವೆ ಯುದ್ಧ ಆರಂಭಗೊಂಡಿತು. ಈ ಯುದ್ಧವನ್ನು ಏಳುವಾರಗಳ ಯುದ್ಧ ಎಂಬುದಾಗಿ ಕರೆಯಲಾಗಿದೆ. ಏಳುವಾರಗಳ ಕಾಲ ನಡೆದ ಈ ಯುದ್ಧದಲ್ಲಿ ಆಸ್ಟ್ರಿಯಾವು ೧೮೬೬ರ ಆಗಸ್ಟ್‌ನಲ್ಲಿ ಪ್ರೇಗ್‌ನಲ್ಲಿ ಪ್ರಷ್ಯಾದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು.

ಪ್ರೇಗ್ ಒಪ್ಪಂದದಂತೆ ಆಸ್ಟ್ರಿಯಾವು ಜರ್ಮನಿಯಿಂದ ಸಂಪೂರ್ಣವಾಗಿ ನಿರ್ಗಮಿಸಿತು. ಆಸ್ಟ್ರಿಯಾವು ಇಟಲಿಗೆ ವೆನೀಶಿಯಾವನ್ನು ಹಾಗೂ ಪ್ರಷ್ಯಾಕ್ಕೆ ಹೋಲ್‌ಸ್ಟೈನನ್ನು ಬಿಟ್ಟುಕೊಟ್ಟಿತು. ಯುದ್ಧದಲ್ಲಿ ಸಂಭವಿಸಿದ ಹಾನಿಗಾಗಿ ಯುದ್ಧ ಪರಿಹಾರವನ್ನು ಆಸ್ಟ್ರಿಯಾ ನೀಡುವಂತೆ ಮಾಡಲಾಯಿತು. ಪ್ರಷ್ಯಾದ ಪಡೆಗಳು ಉತ್ತರ ಜರ್ಮನ್, ಹನೋವರ್, ಡ್ರೆಸ್ಡೆನ್, ನಾಸ್ಸೋ, ಹೆಸ್ಸ-ಕ್ಯಾಸೆಲ್‌ಗಳನ್ನು ವಶಪಡಿಸಿಕೊಂಡವು. ಉತ್ತರ ಜರ್ಮನಿಯ ಮೇಲೆ ಪ್ರಷ್ಯಾವು ಸಂಪೂರ್ಣವಾಗಿ ಹಿಡಿತವನ್ನು ಸಾಧಿಸಿತು. ಆಸ್ಟ್ರಿಯಾವು ಜರ್ಮನ್ ಒಕ್ಕೂಟದಿಂದ ಹೊರಗುಳಿಯಬೇಕಾಯಿತು. ಹಾಗೂ ಒಂದು ಹೊಸ ಒಕ್ಕೂಟವನ್ನು ಸ್ಥಾಪಿಸುವುದಕ್ಕಾಗಿ ಪ್ರಷ್ಯಾಕ್ಕೆ ಅವಕಾಶ ನೀಡಬೇಕಾಯಿತು. ಹನೋವರ್, ನಾಸ್ಸೋ, ಹೆಸ್ಸ-ಕ್ಯಾಸೆಲ್, ಫ್ರಾಂಕ್‌ಫರ್ಟ್ ನಗರ, ಶ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್ ಪ್ರಾಂತ್ಯಗಳು ಪ್ರಷ್ಯಾದೊಂದಿಗೆ ವಿಲೀನಗೊಂಡವು. ೧೮೬೭ ರಲ್ಲಿ ಬಿಸ್ಮಾರ್ಕ್‌ನು ಉತ್ತರ ಜರ್ಮನಿಯ

ರಾಜ್ಯಗಳನ್ನೆಲ್ಲಾ ಒಟ್ಟಾಗಿ ಸೇರಿಸಿ ಉತ್ತರ ಜರ್ಮನಿಯ ಒಕ್ಕೂಟವನ್ನು ರಚಿಸಿದನು. ಹೀಗೆ ನಿರ್ಮಾಣವಾದ ಉತ್ತರ ಜರ್ಮನಿಯ ಒಕ್ಕೂಟದಲ್ಲಿ ರೈನ್ ನದಿಯ ಉತ್ತರ ಭಾಗದ ಜರ್ಮನಿಯ ಎಲ್ಲ ಪ್ರದೇಶಗಳೂ ಸೇರಿದ್ದವು. ಉತ್ತರ ಜರ್ಮನಿಯ ರಾಜರುಗಳೆಲ್ಲ ಪ್ರಷ್ಯಾದ ನಾಯಕತ್ವದಲ್ಲಿ ಜರ್ಮನ್ ರಾಜ್ಯಗಳ ಒಕ್ಕೂಟ ರಚನೆಯಾಗಬೇಕೆಂದು ಮುಂದೆ ಬಂದದ್ದು ಬಿಸ್ಮಾರ್ಕ್‌ನ ಕೆಲಸವನ್ನು ಸುಲಭವಾಗಿಸಿತು. ದಕ್ಷಿಣ ಜರ್ಮನಿಯ ನಾಲ್ಕು ರಾಜ್ಯಗಳಾದ **ಬವೇರಿಯಾ, ವಟನ್‌ಬರ್ಗ್, ಬಾಡೆನ್** ಮತ್ತು **ಹಿಸೆಡಾಮಕಠ್**ಗಳನ್ನು ಹೊರತುಪಡಿಸಿ ಉತ್ತರ ಜರ್ಮನಿಯ ಉಳಿದೆಲ್ಲ ರಾಜ್ಯಗಳ ಒಕ್ಕೂಟವನ್ನು ರಚಿಸಲಾಯಿತು.

ಉತ್ತರ ಜರ್ಮನಿಯ ಒಕ್ಕೂಟಕ್ಕೆ ಹೊಸ ಸಂವಿಧಾನವೊಂದನ್ನು ರಚಿಸಲಾಯಿತು. ಸಂವಿಧಾನದ ಪ್ರಕಾರ ಪ್ರಷ್ಯಾದ ರಾಜನನ್ನು ನೂತನ ಒಕ್ಕೂಟದ ಅಧ್ಯಕ್ಷನಾಗಿ ಮಾಡಲಾಯಿತು. ಅಧ್ಯಕ್ಷನ ಸಹಾಯಕ್ಕೆ ಒಬ್ಬ ಛಾನ್ಸಲರ್ ಹಾಗೂ ಮತ್ತೊಬ್ಬ ಮಂತ್ರಿಯನ್ನು ನೇಮಿಸಲಾಯಿತು. ಪ್ರತಿಯೊಂದು ರಾಜ್ಯದ ಪ್ರತಿನಿಧಿಗಳು ಸಂವಿಧಾನದಲ್ಲಿದ್ದರು. ಶಾಸನ ವನ್ನು ರಚಿಸುವ ಅಧಿಕಾರವನ್ನು **ಫೆಡರಲ್ ಕೌನ್ಸಿಲ್** ಹಾಗೂ **ಇಂಪೀರಿಯಲ್ ಕೌನ್ಸಿಲ್** ಎಂಬ ದ್ವಿಸದನಗಳನ್ನೊಳಗೊಂಡ ಪಾರ್ಲಿಮೆಂಟಿಗೆ ನೀಡಲಾಯಿತು. ಫೆಡರಲ್ ಕೌನ್ಸಿಲ್ ನಲ್ಲಿ ಆಯಾ ರಾಜ್ಯಗಳ ರಾಜರುಗಳು ಚುನಾಯಿಸಿ ಕಳುಹಿಸಿದ ಪ್ರತಿನಿಧಿಗಳಿದ್ದರೆ, ಇಂಪೀರಿಯಲ್ ಕೌನ್ಸಿಲ್‌ನಲ್ಲಿ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿರುತ್ತಿದ್ದರು. ಈ ಎಲ್ಲ ಪ್ರಯತ್ನಗಳಿಂದಾಗಿ ಉತ್ತರ ಜರ್ಮನಿಯ ಒಕ್ಕೂಟ ಇನ್ನಷ್ಟು ಗಟ್ಟಿಗೊಂಡಿತು.

ಫ್ರಾನ್ಸ್ ಮತ್ತು ಪ್ರಷ್ಯಾ ನಡುವಿನ ಯುದ್ಧ (೧೮೭೦-೭೧)

ಉತ್ತರ ಜರ್ಮನಿಯ ಒಕ್ಕೂಟ ರಚನೆಯಾಗಿದ್ದರಿಂದಾಗಿ ಜರ್ಮನಿಯ ಏಕೀಕರಣ ಭಾಗಶಃ ನಡೆಯಿತು. ಅದು ಪೂರ್ಣಗೊಂಡಿರುವುದು ಫ್ರಾನ್ಸ್ ದೇಶವನ್ನು ಸೋಲಿಸಿದ ಮೇಲೆ. ದಕ್ಷಿಣ ಜರ್ಮನಿಯ ನಾಲ್ಕು ರಾಜ್ಯಗಳನ್ನು ಜರ್ಮನ್ ಸಾಮ್ರಾಜ್ಯಕ್ಕೆ ಸೇರಿಸಿ ಜರ್ಮನಿಯ ಏಕೀಕರಣವನ್ನು ಪೂರ್ಣಗೊಳಿಸುವುದು ಬಿಸ್ಮಾರ್ಕ್‌ನ ಉದ್ದೇಶವಾಗಿತ್ತು. ದಕ್ಷಿಣ ಜರ್ಮನಿಯ ರಾಜ್ಯಗಳನ್ನು ಉತ್ತರ ಜರ್ಮನಿಯ ಒಕ್ಕೂಟದಲ್ಲಿ ವಿಲೀನಗೊಳಿಸುವ ಪ್ರಷ್ಯಾದ ಕ್ರಮವನ್ನು ಫ್ರಾನ್ಸ್ ವಿರೋಧಿಸಲಾರಂಭಿಸಿತು. ಫ್ರಾನ್ಸ್‌ನ **ಮೂರನೆಯ ನೆಪೋಲಿಯನ್ನ**ನು ಹೊಸ ಒಕ್ಕೂಟವು ಮೈನ್ ನದಿಯ ದಕ್ಷಿಣ ಭಾಗಕ್ಕೆ ವಿಸ್ತರಿಸಬಾರದೆಂದು ಪ್ರಷ್ಯಾಕ್ಕೆ ಎಚ್ಚರಿಕೆ ನೀಡಿದನು. ಇದು ಪ್ರಷ್ಯಾವು ಫ್ರಾನ್ಸ್‌ನೊಡನೆ ಯುದ್ಧ ಮಾಡುವಂತೆ ಮಾಡಿತು. ಬಿಸ್ಮಾರ್ಕ್ ತನ್ನ ರಾಜತಾಂತ್ರಿಕ ನಿಪುಣತೆಯನ್ನು ಉಪಯೋಗಿಸಿ ಆಸ್ಟ್ರಿಯಾವನ್ನು ಯುರೋಪಿನಲ್ಲೇ ಏಕಾಂಗಿ ರಾಷ್ಟ್ರವನ್ನಾಗಿ ಮಾಡಿದಂತೆ ಫ್ರಾನ್ಸನ್ನೂ ಮಾಡಿದನು. ರಷ್ಯಾ, ಇಟಲಿ ಮತ್ತು ಇಂಗ್ಲೆಂಡ್ ಫ್ರಾನ್ಸನ್ನು ವಿರೋಧಿಸುವಂತೆ ಬಿಸ್ಮಾರ್ಕ್ ಮಾಡಿದನು.

ಇಟಲಿಯ ಏಕೀಕರಣಕ್ಕೆ ರೋಮ್‌ನ ಅವಶ್ಯಕತೆಯಿತ್ತು. ಆ ಸಂದರ್ಭವನ್ನು ಬಿಸ್ಮಾರ್ಕ್ ಇಟಲಿಗೆ ಕಲ್ಪಿಸಿಕೊಟ್ಟ. ಪ್ರಷ್ಯಾ ಫ್ರಾನ್ಸ್‌ನೊಡನೆ ಯುದ್ಧ ಆರಂಭಿಸಿದರೆ ತತ್ಕ್ಷಣ ಫ್ರಾನ್ಸ್ ರೋಮ್‌ನಲ್ಲಿ ಪೋಪನ ರಕ್ಷಣೆಗಾಗಿ ಇಟ್ಟಿದ್ದ ಸೈನ್ಯವನ್ನು ವಾಪಾಸು ಕರೆಸಿಕೊಳ್ಳುತ್ತದೆ,

ಆ ಸಂದರ್ಭದಲ್ಲಿ ಇಟಲಿ ರೋಮನ್ನು ಸುಲಭವಾಗಿ ವಶಪಡಿಸಿಕೊಂಡು ತನ್ನ ಏಕೀಕರಣವನ್ನು ಪೂರ್ಣಗೊಳಿಸಬಹುದೆಂದು ಬಿಸ್ಮಾರ್ಕ್ ಇಟಲಿಗೆ ತಿಳಿಸಿದನು. ಈ ಅವಕಾಶವನ್ನೇ ಕಾಯುತ್ತಿದ್ದ ಇಟಲಿ ಜರ್ಮನಿಗೆ ನೆರವು ನೀಡಲು ಒಪ್ಪಿಕೊಂಡಿತು. ಮೂರನೆಯ ನೆಪೋಲಿಯನ್ನನು ಬೆಲ್ಜಿಯಮನ್ನು ಆಕ್ರಮಿಸಲು ಸಿದ್ಧತೆ ನಡೆಸಿರುವ ವಿಚಾರವನ್ನು ಬಿಸ್ಮಾರ್ಕ್ ಇಂಗ್ಲೆಂಡಿಗೆ ತಿಳಿಸಿ, ಇಂಗ್ಲೆಂಡ್ ಫ್ರಾನ್ಸ್‌ನ್ನು ದ್ವೇಷಿಸುವಂತೆ ಮಾಡಿದನು. ೧೮೬೩ ರಲ್ಲಿ ರಷ್ಯಾ ಪೋಲೆಂಡ್ ವಿರುದ್ಧ ಯುದ್ಧ ಮಾಡಿದಾಗ ಬಿಸ್ಮಾರ್ಕ್ ರಷ್ಯಾಕ್ಕೆ ಸೈನಿಕ ನೆರವನ್ನು ನೀಡಿದ್ದನು. ಅದೇ ಸಂದರ್ಭದಲ್ಲಿ ಮೂರನೆಯ ನೆಪೋಲಿಯನ್ ಪೋಲರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ರಷ್ಯಾದ ವಿರೋಧವನ್ನು ಕಟ್ಟಿಕೊಂಡಿದ್ದನು. ಈ ಎಲ್ಲ ಘಟನೆಗಳ ಲಾಭವನ್ನು ಪಡೆದುಕೊಂಡ ಬಿಸ್ಮಾರ್ಕ್ ಫ್ರಾನ್ಸ್‌ಗೆ ಯಾರ ನೆರವೂ ಸಿಗದಂತೆ ಮಾಡಿದನು.

ಫ್ರಾನ್ಸ್ ಮತ್ತು ಪ್ರಷ್ಯಾಗಳ ನಡುವೆ ಯುದ್ಧ ನಡೆಯುವುದಕ್ಕೆ ಸ್ಪೈನಿನ ಉತ್ತರಾಧಿಕಾರದ ಆಯ್ಕೆಯಲ್ಲುಂಟಾದ ಪ್ರಶ್ನೆ ತಾತ್ಕಾಲಿಕ ಕಾರಣವಾಯಿತು. ಸ್ಪೈನ್‌ನ ರಾಣಿ ಇಸಾಬೆಲ್ಲಳು ಸ್ಪೈನ್‌ನಲ್ಲಿ ಕ್ರಾಂತಿ ಸಂಭವಿಸಿದರ ಪರಿಣಾಮವಾಗಿ ೧೮೬೮ ರಲ್ಲಿ ಸಿಂಹಾಸನದಿಂದ ಕೆಳಗಿಳಿದಳು. ನಂತರ ಪ್ರಷ್ಯಾದ ದೊರೆಯ ಸಂಬಂಧಿ **ಹೊಹೆನ್‌ಜೊಲೆರಿನ್** ವಂಶದ **ಲಿಯೋಪಾಲ್ಡ**ನಿಗೆ ರಾಜಾಧಿಕಾರವನ್ನು ನೀಡಲಾಯಿತು. ಇದನ್ನು ಮೂರನೆಯ ನೆಪೋಲಿಯನ್ನನು ಪ್ರಬಲವಾಗಿ ವಿರೋಧಿಸಿದನು. ಲಿಯೋಪಾಲ್ಡನನ್ನು ಮತ್ತು ಹೊಹೆನ್ ಜೊಲೆರಿನ್ ರಾಜಮನೆತನಕ್ಕೆ ಸೇರಿದ ಯಾವುದೇ ವ್ಯಕ್ತಿಯನ್ನು ಸಹ ಸ್ಪೈನಿನ ಸಿಂಹಾಸನದಲ್ಲಿ ಕೂರಿಸಬಾರದೆಂದು ಮೂರನೆಯ ನೆಪೋಲಿಯನ್ನನು ಪಟ್ಟು ಹಿಡಿದು, ತನ್ನ ನಿರ್ಧಾರವನ್ನು ಪ್ರಷ್ಯಾದ ಅರಸ ವಿಲಿಯಮ್‌ಗೆ ರಾಯಭಾರಿಯ ಮೂಲಕ ತಿಳಿಸಿದನು. ವಿಲಿಯಮ್ ಫ್ರಾನ್ಸ್‌ನ ಆದೇಶವನ್ನು ಖಡಾಖಂಡಿತವಾಗಿ ತಿರಸ್ಕರಿಸಿದನು. ಬಿಸ್ಮಾರ್ಕ್‌ಗೆ ಫ್ರಾನ್ಸ್‌ನ ವಿರುದ್ಧ ಯುದ್ಧ ಮಾಡಲು ಇದು ಒಳ್ಳೆಯ ಅವಕಾಶವನ್ನು ಮಾಡಿಕೊಟ್ಟಿತು. ಬಿಸ್ಮಾರ್ಕ್ ಫ್ರೆಂಚರು ಯುದ್ಧವನ್ನು ಪ್ರಕಟಿಸುವಂತೆ ಪ್ರೇರೇಪಿಸಿದನು. ಎರಡೂ ದೇಶಗಳ ಪತ್ರಿಕೆಗಳು ಸುಳ್ಳು, ನಿಂದನಾತ್ಮಕ ಹಾಗೂ ರೊಚ್ಚಿಗೆಬ್ಬಿಸುವಂಥ ಸುದ್ದಿಗಳನ್ನೇ ಪ್ರಕಟಿಸಿದವು.

ಫ್ರೆಂಚ್ ರಾಯಭಾರಿಯು ಪ್ರಷ್ಯಾದ ದೊರೆಯನ್ನು ಅವಮಾನ ಮಾಡಿದನೆಂತಲೂ, ಪ್ರಷ್ಯಾದ ದೊರೆ ಫ್ರೆಂಚ್ ರಾಯಭಾರಿಯನ್ನು ಅವಮಾನ ಮಾಡಿದನೆಂತಲೂ ಪ್ರಷ್ಯ ಮತ್ತು ಫ್ರೆಂಚ್ ಪತ್ರಿಕೆಗಳಲ್ಲಿ ಏಕಕಾಲದಲ್ಲಿ ಎರಡೂ ರಾಷ್ಟ್ರಗಳಲ್ಲಿ ಪ್ರಕಟವಾಗುವಂತೆ ಬಿಸ್ಮಾರ್ಕ್ ಮಾಡಿದನು. ಈ ಸುದ್ದಿಯನ್ನು ತಿಳಿದ ಫ್ರಾನ್ಸ್ ಪ್ರಷ್ಯಾದ ವಿರುದ್ಧ ಯುದ್ಧ ಸಾರಿತು. ೧೮೭೦ ರ ಜುಲೈ ೧೯ ರಂದು ಫ್ರಾನ್ಸ್ ಯುದ್ಧ ಆರಂಭಿಸಿತು. ಪೋಪನ ರಕ್ಷಣೆಗಾಗಿ ರೋಮ್‌ನಲ್ಲಿ ಇರಿಸಲಾಗಿದ್ದ ಸೈನ್ಯವನ್ನು ವಾಪಸ್ಸು ಕರೆಯಿಸಲಾಯಿತು. ಆದರೂ ಜರ್ಮನಿಯ ಸೇನೆ ಫ್ರಾನ್ಸಿನ ಸಂಪದ್ಭರಿತ ಪ್ರದೇಶಗಳಾದ **ಆಲ್ಸೇಸ್** ಮತ್ತು **ಲೊರೈನ್**‌ಗಳನ್ನು ವಶಪಡಿಸಿಕೊಂಡಿತು. ನಂತರ ಫ್ರಾನ್ಸಿನ ಮುಖ್ಯ ರಕ್ಷಣಾ ನೆಲೆಯಾಗಿದ್ದ **ಮೆಟ್ಜ್** ಕೋಟೆಯನ್ನು ವಶಪಡಿಸಿಕೊಂಡಿತು. **ಬವೇರಿಯಾ, ಸೇಡಮ್** ಹಾಗೂ **ವ್ರಟ್ಟಂಬರ್ಗ್**ಗಳು ಪ್ರಷ್ಯಾಕ್ಕೆ

ಸೇರಿಕೊಂಡವು. ಫ್ರಾನ್ಸಿನ ಸೈನ್ಯ ಸಂಖ್ಯಾಬಲದಲ್ಲಿ ಹಾಗೂ ಸಾಮರ್ಥ್ಯದಲ್ಲಿ ಪ್ರಷ್ಯಾದ ಸೈನ್ಯಕ್ಕಿಂತ ಕೆಳಮಟ್ಟದಲ್ಲಿತ್ತು. ಆದರೂ ಮೂರನೆಯ ನೆಪೋಲಿಯನ್ ಹೋರಾಟವನ್ನು ಮುಂದುವರಿಸುತ್ತಲೇ ಇದ್ದನು. ಮೆಟ್ಜ್ ಕೋಟೆಯನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಳ್ಳಲು ಅವಸರದಿಂದ ಧಾವಿಸುತ್ತಿದ್ದ ಮೂರನೆಯ ನೆಪೋಲಿಯನ್ನನನ್ನು ಜರ್ಮನ್ ಸೈನ್ಯವು ೧೮೭೦ರ ಸೆಪ್ಟೆಂಬರ್ ೨ ರಂದು ಬೆಲ್ಜಿಯಮ್ ಗಡಿಯ ಹತ್ತಿರ ಸೆಡಾನ್ ಎಂಬಲ್ಲಿ ಸಂಪೂರ್ಣವಾಗಿ ಸೋಲಿಸಿ ಸೆರೆಹಿಡಿಯಿತು.

ಮೂರನೆಯ ನೆಪೋಲಿಯನ್ನನು ಸೆಡಾನ್‌ನಲ್ಲಿ ಜರ್ಮನಿಗೆ ಶರಣಾದ ಸುದ್ದಿ ತಿಳಿದ ತಕ್ಷಣವೇ ಫ್ರಾನ್ಸ್‌ನಲ್ಲಿ ಸಾಮ್ರಾಜ್ಯವನ್ನು ನಿರ್ನಾಮ ಮಾಡಿ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಚಕ್ರಾಧಿಪತ್ಯ ಕೊನೆಗೊಂಡು ಗಣತಂತ್ರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದರೂ ಯುದ್ಧ ನಿಲ್ಲಲಿಲ್ಲ. ಫ್ರಾನ್ಸಿನ ಜನತೆ ಪ್ಯಾರಿಸ್‌ನತ್ತ ಮುನ್ನುಗ್ಗಿ ಬರುತ್ತಿದ್ದ ಪ್ರಷ್ಯನ್ ಸೇನೆಯ ವಿರುದ್ಧ ಹೋರಾಟ ಮಾಡಿದರು. ಪ್ರಷ್ಯಾದ ಸೇನೆಯನ್ನು ಎದುರಿಸಲಾರದೆ ೧೮೭೧ರ ಜನವರಿ ೧೮ ರಂದು ಫ್ರಾನ್ಸ್ ಸಂಪೂರ್ಣವಾಗಿ ಶರಣಾಗತವಾಗಿ ಫ್ರಾಂಕ್‌ಫರ್ಟ್ ಒಪ್ಪಂದಕ್ಕೆ ಸಹಿ ಹಾಕಿತು. ಒಪ್ಪಂದದ ಪ್ರಕಾರ ಫ್ರಾನ್ಸ್ ಆಲ್ಸೇಸ್, ಲೊರೈನ್ ಹಾಗೂ ಮೆಟ್ಜ್ ಕೋಟೆಯನ್ನು ಪ್ರಷ್ಯಾಕ್ಕೆ ಬಿಟ್ಟುಕೊಡಬೇಕಾಯಿತು. ಅದೇ ರೀತಿ ಯುದ್ಧದ ಎಲ್ಲ ಖರ್ಚು ವೆಚ್ಚಗಳನ್ನು ನೋಡಿಕೊಳ್ಳಬೇಕಾಯಿತು. ಈ ಕರಾರುಗಳು ಫ್ರಾನ್ಸ್‌ಗೆ ಅವಮಾನಕಾರಿಯಾದ, ನೋವಿನ ರೀತಿಯದ್ದಾಗಿದ್ದವು.

ಈ ಯುದ್ಧದ ಪರಿಣಾಮವಾಗಿ ಜರ್ಮನಿಯ ಏಕೀಕರಣ ಪೂರ್ಣಗೊಂಡಿತು ಹಾಗೂ ಹೊಸ ಜರ್ಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತು. ಉತ್ತರ ಜರ್ಮನಿಯ ಒಕ್ಕೂಟದಿಂದ ಹೊರಗುಳಿದಿದ್ದ ದಕ್ಷಿಣ ಜರ್ಮನಿಯ ಉಳಿದೆಲ್ಲಾ ರಾಜ್ಯಗಳು ಉತ್ತರ ಜರ್ಮನಿಯ ಒಕ್ಕೂಟಕ್ಕೆ ಸೇರಿಕೊಂಡವು. ೧೮೭೧ರ ಜನವರಿ ೧೮ ರಂದು ವರ್ಸೇಲ್ಸ್ ಅರಮನೆಯಲ್ಲಿ ಒಂದನೆಯ ವಿಲಿಯಮ್ ಜರ್ಮನಿಯ ಚಕ್ರವರ್ತಿಯಾಗಿ ಅಧಿಕಾರ ವಹಿಸಿಕೊಂಡನು. ಬರ್ಲಿನ್ ಜರ್ಮನಿಯ ರಾಜಧಾನಿಯಾಯಿತು. ಜರ್ಮನ್ ಸಾಮ್ರಾಜ್ಯದ ರಕ್ಷಣೆಯ ಹೊಣೆಯನ್ನು ಹೊತ್ತ ಬಿಸ್ಮಾರ್ಕ್ ಛಾನ್ಸಲರ್ ಹುದ್ದೆಯಲ್ಲಿ ಮುಂದುವರಿದನು.

ಫ್ರಾನ್ಸ್‌ನೊಡನೆ ನಡೆಸಿದ ಯುದ್ಧದ ಪರಿಣಾಮವಾಗಿ ಇಟಲಿ ಮತ್ತು ಜರ್ಮನಿಗಳೆರಡೂ ಏಕೀಕರಣಗೊಂಡವು. ಬಿಸ್ಮಾರ್ಕ್‌ನ ರಕ್ತ ಮತ್ತು ಕತ್ತಿಯ ನೀತಿ ಸಂಪೂರ್ಣವಾಗಿ ಯಶಸ್ಸನ್ನು ಕಂಡಿತು. ಆಸ್ಟ್ರಿಯಾ ಮತ್ತು ಫ್ರಾನ್ಸ್‌ನಂಥ ರಾಷ್ಟ್ರಗಳನ್ನು ತನ್ನ ರಾಜತಾಂತ್ರಿಕ ನಿಪುಣತೆಯಿಂದ ಸೋಲಿಸಿರುವುದು ಬಿಸ್ಮಾರ್ಕ್‌ನ ಮಹತ್ವದ ಸಾಧನೆ. ಈ ಎಲ್ಲ ಕಾರಣಗಳಿಂದಾಗಿ ಬಿಸ್ಮಾರ್ಕ್‌ನನ್ನು ಆಧುನಿಕ ಜರ್ಮನಿಯ ನಿರ್ಮಾಪಕನೆಂದು ಕರೆಯಲಾಗಿದೆ.

೨.೫ ರಷ್ಯಾದ ಕ್ರಾಂತಿ

ರಷ್ಯಾದ ಕ್ರಾಂತಿ ಇಪ್ಪತ್ತನೆಯ ಶತಮಾನದ ಅತ್ಯಂತ ಮಹತ್ವದ ಘಟನೆಗಳಲ್ಲೊಂದು. ಈ ಕ್ರಾಂತಿಯ ಮೂಲಕ ದುಡಿಯುವ ವರ್ಗದ ಜನರ ಪ್ರಭುತ್ವವನ್ನು ಜಗತ್ತಿನಲ್ಲಿಯೇ ಮೊತ್ತಮೊದಲ ಬಾರಿಗೆ ರಷ್ಯಾದಲ್ಲಿ ಸ್ಥಾಪಿಸಲಾಯಿತು. ರಷ್ಯಾದ **ಜಾರ್ ದೊರೆಗಳ** ಪ್ರಭುತ್ವವನ್ನು ಹಾಗೂ ಬಂಡವಾಳಶಾಹಿ ಮತ್ತು ಭೂಮಾಲೀಕ ಪ್ರಭುತ್ವವನ್ನು ಕೊನೆಗೊಳಿಸಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಿದ್ದು ಈ ಕ್ರಾಂತಿಯ ಮಹತ್ವದ ಸಾಧನೆ. ರಷ್ಯಾದ ಕ್ರಾಂತಿಯು ಕಾರ್ಮಿಕರೇ ಪ್ರಧಾನರಾದ ಕಮ್ಯುನಿಸ್ಟ್ ಪ್ರಭುತ್ವವನ್ನು ರೂಪಿಸಿತು. ಜಾರ್ ದೊರೆಗಳ ದಬ್ಬಾಳಿಕೆ, ಶ್ರೀಮಂತ ವರ್ಗದ ವೈಭವದ ಜೀವನ, ಆಹಾರದ ಅಭಾವ, ಅತಿಯಾದ ತೆರಿಗೆಗಳು ಮುಂತಾದವು ರಷ್ಯಾದ ಜನತೆ ಕ್ರಾಂತಿ ನಡೆಸುವಂತೆ ಮಾಡಿದವು.

ಕ್ರಾಂತಿಗೆ ಕಾರಣಗಳು

ರಷ್ಯಾದ ಕ್ರಾಂತಿಗೆ ಕಾರಣಗಳು ಹಲವಾರು. ಅವುಗಳಲ್ಲಿ ಕೆಲವು ಪ್ರಮುಖ ಕಾರಣಗಳು ಈ ಕೆಳಗಿನಂತಿವೆ.

೧. ಜಾರ್ ದೊರೆಗಳ ನಿರಂಕುಶಾಡಳಿತ

ರಷ್ಯಾದ ಅರಸರನ್ನು ಜಾರ್‌ಗಳೆಂದು ಕರೆಯಲಾಗುತ್ತಿತ್ತು. ಜಾರ್ ದೊರೆಗಳು ತಮ್ಮ ಅಧಿಕಾರವು ದೈವದತ್ತವಾದುದೆಂದು ನಂಬಿ ಆಳ್ವಿಕೆ ನಡೆಸುತ್ತಿದ್ದರು. ರಷ್ಯಾದ ದೀರ್ಘ ಕಾಲದವರೆಗೆ ದರ್ಪಿಷ್ಟ ಪ್ರಭುತ್ವಕ್ಕೆ ಒಳಗಾಗಿತ್ತು. ರಷ್ಯಾದ ಜನತೆ ದಬ್ಬಾಳಿಕೆ ಮತ್ತು ಮಿತಿ ಮೀರಿದ ತೆರಿಗೆಗಳಿಂದ ಸಂಕಷ್ಟಕ್ಕೀಡಾಗಿತ್ತು. ರಾಜಪ್ರಭುತ್ವವನ್ನು ವಿರೋಧಿಸಿದವರಿಗೆ ಕಠಿಣ ಶಿಕ್ಷೆ ನೀಡಲಾಗುತ್ತಿತ್ತು. ಜಾರ್ ದೊರೆಗಳು ಪ್ರಗತಿ ವಿರೋಧಿಗಳಾಗಿದ್ದು, ಜನತೆಯ ಎಲ್ಲ ಪ್ರತಿಭಟನೆಗಳನ್ನು ಅತ್ಯಂತ ಕ್ರೂರವಾಗಿ ಹತ್ತಿಕ್ಕುತ್ತಿದ್ದರು. **ಒಂದನೆಯ ನಿಕೋಲಸ್, ಮೂರನೆಯ ಅಲೆಗ್ಸಾಂಡರ್** ಮತ್ತು **ಎರಡನೆಯ ನಿಕೋಲಸ್** ದೊರೆಗಳ ಆಳ್ವಿಕೆಯ ಸಂದರ್ಭಗಳಲ್ಲಿ ರಷ್ಯಾದ ಜನತೆ ವಿಪರೀತ ಕಷ್ಟ-ನಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಬದಲು ಜಾರ್ ದೊರೆಗಳು ದಮನಕಾರಿ ನೀತಿಯನ್ನು ಅನುಸರಿಸಿದರು. ಹಸಿವಿನಿಂದ ಕಂಗೆಟ್ಟ ಜನತೆ ಆಹಾರ ಕೇಳಲು ಬಂದಾಗ ಅವರ ಮೇಲೆ ಗುಂಡಿನ ಮಳೆಗರೆಯಲಾಯಿತು. ಇವೆಲ್ಲವೂ ರಷ್ಯಾದ ಜನತೆ ಕ್ರಾಂತಿಯ ಹಾದಿಯನ್ನು ಹಿಡಿಯುವಂತೆ ಮಾಡಿತು. ಎರಡನೆಯ ನಿಕೋಲಸ್‌ನ ರಾಣಿಯ ಸಲಹೆಗಾರನಾದ **ರಸ್‌ಪುಟಿನ್** ಆಡಳಿತ ಯಂತ್ರವನ್ನು ತನಗೆ ಬೇಕಾದಂತೆ ಬಳಸಿಕೊಳ್ಳಲು ಆರಂಭಿಸಿದಾಗ ಅದನ್ನು ಸಹಿಸದ ಜನ ಅವನನ್ನು ಕೊಲೆ ಮಾಡಿದರು.

೨. ಸೈನಿಕ ಅಪಜಯಗಳು

೧೯ ಮತ್ತು ೨೦ ನೆಯ ಶತಮಾನಗಳಲ್ಲಿ ರಷ್ಯಾವು ಯುದ್ಧಗಳಲ್ಲಿ ನಿರಂತರ ಸೋಲನ್ನು ಕಂಡಿತು. ನೆಪೋಲಿಯನ್ನನೊಡನೆ ನಡೆಸಿದ ಯುದ್ಧ, ಕ್ರಿಮಿಯಾ ಯುದ್ಧ, ಜಪಾನ್‌ನೊಡನೆ ನಡೆಸಿದ ಯುದ್ಧ ಹಾಗೂ ಮೊದಲನೆಯ ಜಾಗತಿಕ ಯುದ್ಧದಲ್ಲಿ ರಷ್ಯಾವು ಸೋಲನ್ನು ಅನುಭವಿಸಿತ್ತು. ಈ ನಿರಂತರ ಸೋಲು ರಷ್ಯಾದ್ಯಂತ ಅತೃಪ್ತಿಗೆ ಕಾರಣವಾಯಿತು. ಅದರಲ್ಲೂ ಚಿಕ್ಕ ರಾಷ್ಟ್ರವಾದ ಜಪಾನ್‌ನೊಂದಿಗಿನ ಸೋಲನ್ನು ರಷ್ಯಾಗಾದ ಅವಮಾನವೆಂದೇ ತಿಳಿಯಲಾಗಿತ್ತು. ಸೈನಿಕ ಅಪಜಯಗಳು ಜಾರ್ ದೊರೆಗಳ ದುರ್ಬಲ ನೀತಿಗಳನ್ನು ಬಹಿರಂಗಪಡಿಸಿದವು. ರಷ್ಯಾ ಅಪಾರ ಸೈನ್ಯವನ್ನು ಹೊಂದಿದ್ದರೂ ಸರಿಯಾದ ತರಬೇತಿ ಇರಲಿಲ್ಲ. ಸೈನ್ಯವನ್ನು ಆಧುನೀಕರಣಗೊಳಿಸುವ ಪ್ರಯತ್ನವನ್ನು ಅರಸರು ಮಾಡಲಿಲ್ಲ. ಸೈನಿಕ ಅಪಜಯಗಳು ರಷ್ಯಾವನ್ನು ಆರ್ಥಿಕ ಸಂಕಷ್ಟಕ್ಕೀಡು ಮಾಡಿದವು. ಇದು ಜಾರ್ ದೊರೆಗಳ ಅಸಮರ್ಥತೆಯನ್ನು ಸೂಚಿಸಿ, ಜನತೆಯ ಅತೃಪ್ತಿಗೆ ಕಾರಣವಾಯಿತು.

೩. ಆರ್ಥಿಕ ಕಾರಣಗಳು

ರಷ್ಯಾದ ಕ್ರಾಂತಿಗೆ ಆರ್ಥಿಕ ಹಿಂದುಳಿದಿರುವಿಕೆ ಪ್ರಮುಖವಾದ ಕಾರಣವಾಯಿತು. ರಷ್ಯಾದ ಗ್ರಾಮೀಣ ಮತ್ತು ನಗರ ಆರ್ಥಿಕ ಜೀವನ ಸಂಪೂರ್ಣ ಹದಗೆಟ್ಟಿತ್ತು. ರಷ್ಯಾವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಕೃಷಿ ಕ್ಷೇತ್ರ ಅತ್ಯಂತ ಹಿಂದುಳಿದಿತ್ತು. ಕೃಷಿಯಲ್ಲಿ ಹಳೆಯ ವಿಧಾನಗಳೇ ಮುಂದುವರಿದಿದ್ದು, ರೈತರನ್ನು ಕಡುಬಡವರನ್ನಾಗಿಸಿತು. ಭೂಮಾಲೀಕರು ರೈತರನ್ನು ಜೀತದಾಳುಗಳಂತೆ ಹಾಗೂ ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದರು. ಗೃಹ ಕೈಗಾರಿಕೆಗಳು ಯುರೋಪಿನಲ್ಲಾದ **ಕೈಗಾರಿಕಾ ಕ್ರಾಂತಿ**ಯಿಂದಾಗಿ ಹಾಗೂ ಅರಸರ ನಿರ್ಲಕ್ಷ್ಯದಿಂದಾಗಿ ನಾಶದ ಅಂಚಿನಲ್ಲಿದ್ದವು. ಇದರಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿ ಅವರೆಲ್ಲರೂ ಉದ್ಯೋಗವನ್ನು ಹುಡುಕುತ್ತಾ ನಗರಗಳಿಗೆ ವಲಸೆ ಹೋಗಲಾರಂಭಿಸಿದರು. ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸ್ಥಿತಿ ಶೋಚನೀಯವಾಗಿತ್ತು. ಕಡಿಮೆ ಕೂಲಿ, ದೀರ್ಘ ಕಾಲಾವಧಿಯ ದುಡಿತ, ಕೊಳೆಗೇರಿಗಳಲ್ಲಿನ ವಾಸ ಕಾರ್ಮಿಕರ ಬದುಕನ್ನು ನರಕವನ್ನಾಗಿಸಿತು. ಕಾರ್ಮಿಕರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಕಾರ್ಮಿಕ ಸಂಘಗಳನ್ನು ಕಟ್ಟಿಕೊಂಡರೆ ಸರಕಾರ ಅದನ್ನು ಕಾನೂನು ವಿರೋಧಿಯೆಂದು ಹತ್ತಿಕ್ಕಿತು. ಆದರೂ ಕಾರ್ಮಿಕ ಸಂಘದ ಉದಯ ರಷ್ಯಾದಲ್ಲಿ ಕ್ರಾಂತಿಯನ್ನು ಅನಿವಾರ್ಯವನ್ನಾಗಿಸಿತು. ಕಾರ್ಮಿಕ ಸಂಘಟನೆಗಳು ಕ್ರಾಂತಿಕಾರಿ ತತ್ವಗಳನ್ನು ಅಳವಡಿಸಿಕೊಂಡು ಶೋಷಣೆಯ ವಿರುದ್ಧ ಸಮರ ಸಾರಿದವು.

೪. ಸಾಮಾಜಿಕ ಅಸಮಾನತೆ

ರಷ್ಯಾವು ಇತರ ದೇಶಗಳಿಗಿಂತ ನೂರು ವರ್ಷ ಹಿಂದುಳಿದಿದೆ ಎನ್ನುವ ಮಾತು ಆರ್ಥಿಕ ಕ್ಷೇತ್ರಕ್ಕಷ್ಟೇ ಅಲ್ಲದೆ ಸಾಮಾಜಿಕ ವ್ಯವಸ್ಥೆಗೂ ಅನ್ವಯಿಸುವಂತದ್ದು. ರಷ್ಯಾವು ಜಾರ್ ದೊರೆಗಳ ಆಳ್ವಿಕೆಯಲ್ಲಿ ದರ್ಬಿಷ್ಟ ಪ್ರಭುತ್ವಕ್ಕೆ ಒಳಗಾಗಿತ್ತು. ಅರಸರು, ಪಾದ್ರಿಗಳು ಮತ್ತು

ಶ್ರೀಮಂತರು ಎಲ್ಲ ರೀತಿಯ ಸವಲತ್ತುಗಳನ್ನು ಮತ್ತು ಅಧಿಕಾರವನ್ನು ಹೊಂದಿದ್ದರು. ರೈತವರ್ಗ ಮತ್ತು ಕುಶಲ ಕರ್ಮಿಗಳು ಎಲ್ಲ ರೀತಿಯಲ್ಲೂ ಸರಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಕೈಗಾರಿಕಾ ಕ್ರಾಂತಿಯ ನಂತರ ಬಂಡವಾಳಗಾರರು ಮತ್ತು ಕಾರ್ಮಿಕರೆನ್ನುವ ಹೊಸ ವರ್ಗ ಹುಟ್ಟಿಕೊಂಡು ವರ್ಗ ಹೋರಾಟಕ್ಕೆ ದಾರಿಮಾಡಿಕೊಟ್ಟಿತು. ಕೈಗಾರಿಕಾ ಕಾರ್ಮಿಕರು ಮಾಲೀಕರ ದಬ್ಬಾಳಿಕೆ ಮತ್ತು ಶೋಷಣೆ ಒಳಗಾದರೆ ರೈತರು ಶ್ರೀಮಂತ ಜಮೀನ್ದಾರರ ಶೋಷಣೆಗೆ ಗುರಿಯಾದರು. ಹೀಗೆ ಸಮಾಜವು ಶೋಷಣೆಯಿಂದ ಕೂಡಿದ್ದು, ಹಲವಾರು ಗುಂಪುಗಳಾಗಿ ಒಡೆದುಹೋಗಿತ್ತು. ಬಂಡವಾಳಗಾರರ ಮತ್ತು ಜಮೀನ್ದಾರರ ಶೋಷಣೆಯಿಂದ ತಪ್ಪಿಸಿಕೊಳ್ಳಲು ಕ್ರಾಂತಿ ಏಕೈಕ ಮಾರ್ಗವಾಗಿ ಕಂಡುಬಂತು.

೫. ದಾರ್ಶನಿಕರ ಪ್ರಭಾವ

ಫ್ರಾನ್ಸಿನ ಕ್ರಾಂತಿಯಂತೆ ರಷ್ಯಾದ ಕ್ರಾಂತಿಗೂ ದಾರ್ಶನಿಕರ ಬರವಣಿಗೆಗಳು ಪ್ರಮುಖ ಕಾರಣವಾದವು. **ಟಾಲ್‌ಸ್ಟಾಯ್, ಮ್ಯಾಕ್ಸಿಮ್‌ಗಾರ್ಕಿ, ಟರ್ಗ್‌ನೇವ್, ಕಾರ್ಲ್‌ಮಾರ್ಕ್ಸ್, ಫ್ರೆಡರಿಕ್ ಏಂಗೆಲ್ಸ್** ಮುಂತಾದವರ ಬರಹಗಳು ರಷ್ಯಾದ ಜನರ ಮನಸ್ಸಿನಲ್ಲಿ ಹೋರಾಡುವ ಭಾವನೆಗಳನ್ನು ಹುಟ್ಟುಹಾಕಿದವು ಹಾಗೂ ಶೋಷಣೆಯನ್ನು ವಿರೋಧಿಸಿ ನಿಲ್ಲುವ ಧೈರ್ಯವನ್ನು ತಂದುಕೊಟ್ಟವು. ಟಾಲ್‌ಸ್ಟಾಯ್‌ಯ **ವಾರ್ ಅಂಡ್ ಪೀಸ್**, ಮ್ಯಾಕ್ಸಿಮ್‌ಗಾರ್ಕಿಯ **ದಿ ಮದರ್**, ಕಾರ್ಲ್‌ಮಾರ್ಕ್ಸ್ ಮತ್ತು ಏಂಗೆಲ್ಸ್‌ರ **ಕಮ್ಯುನಿಸ್ಟ್ ಮ್ಯಾನಿಫೆಸ್ಟೊ** ಮತ್ತು **ದಾಸ್ ಕ್ಯಾಪಿಟಲ್** ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಪ್ರಮುಖ ಕೃತಿಗಳು. ರಷ್ಯಾದ ಹೋರಾಟಗಾರರಿಗೆ ನಿಜವಾದ ಸ್ಫೂರ್ತಿ ದೊರೆತದ್ದು ಕಾರ್ಲ್‌ಮಾರ್ಕ್ಸ್‌ನಿಂದ. ಸಮಾಜದ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳನ್ನು ಕಿತ್ತೊಗೆಯಲು ಹಾಗೂ ಕಾರ್ಮಿಕರು ಕ್ರಾಂತಿಕಾರಿ ಹೋರಾಟಗಳಲ್ಲಿ ತೊಡಗಿಕೊಳ್ಳಲು ಕಾರ್ಲ್‌ಮಾರ್ಕ್ಸ್‌ನ ಚಿಂತನೆಗಳು ನೇರವಾಗಿ ನೆರವಾದವು. ವೈಜ್ಞಾನಿಕ ಸಮಾಜವಾದವನ್ನು ಪ್ರತಿಪಾದಿಸಿದ ಕಾರ್ಲ್‌ಮಾರ್ಕ್ಸ್ ಸಮಾಜವಾದಿ ಕ್ರಾಂತಿಗೆ ಕರೆಕೊಟ್ಟ. ಕಾರ್ಮಿಕರು ಸಂಘಗಳನ್ನು ಕಟ್ಟಿಕೊಂಡು ಹೋರಾಟದ ಮೂಲಕ ಅಧಿಕಾರವನ್ನು ಪಡೆಯಬೇಕು ಹಾಗೂ ಬಂಡವಾಳಶಾಹಿ ವ್ಯವಸ್ಥೆಯನ್ನು ಬೇರು ಸಮೇತ ಕಿತ್ತೊಗೆಯಬೇಕು, ಹಾಗಾದಾಗ ಮಾತ್ರ ಕಾರ್ಮಿಕರ ಅಭಿವೃದ್ಧಿ ಸಾಧ್ಯ ಎನ್ನುವುದು ಮಾರ್ಕ್ಸ್‌ನ ಸಿದ್ಧಾಂತವಾಗಿತ್ತು. ಲೆನಿನ್ ಮಾರ್ಕ್ಸ್‌ನ ಅನುಯಾಯಿಯಾಗಿದ್ದು, ರಷ್ಯಾದ ಕ್ರಾಂತಿಯ ರೂವಾರಿ. ಈತ ಮಾರ್ಕ್ಸ್‌ನ ವಿಚಾರಧಾರೆಯನ್ನು ರಷ್ಯಾದಲ್ಲಿ ಹರಡಿ ಕ್ರಾಂತಿಯ ಕಿಚ್ಚು ಕಾಣಿಸಿಕೊಳ್ಳುವಂತೆ ಮಾಡಿದ. ಸಮಾಜವಾದದ ತತ್ವಗಳು ಅಧಿಕಾರಯುತವಾಗಿ ಅನುಷ್ಠಾನಗೊಳ್ಳಲು ಲೆನಿನ್ ಕಾರಣನಾದ. ರಷ್ಯಾದಲ್ಲಿ ಸಮಾಜವಾದದ ಜೊತೆಯಲ್ಲಿ **ನಿಹಿಲಿಸಂ** ಎಂಬ ಪಂಥವೊಂದು ಕಾಣಿಸಿಕೊಂಡಿತು. ನಿಹಿಲಿಸ್ಟರು ಜಾರ್ ದೊರೆಗಳನ್ನು ವಿರೋಧಿಸುತ್ತಿದ್ದರು. ಇವರು ಹಳೆಯ ವ್ಯವಸ್ಥೆಗಳೆಲ್ಲವನ್ನು ನಾಶಪಡಿಸಬೇಕೆಂದು ಜನರನ್ನು ಹುರಿದುಂಬಿಸುತ್ತಿದ್ದರು. ಆದರೆ ಇವರನ್ನು ಹಿಂಸಾತ್ಮಕ ವಿಧಾನದಿಂದ ದಮನಗೊಳಿಸಲಾಯಿತು.

ಕ್ರಾಂತಿಯ ಪ್ರಮುಖ ಘಟನೆಗಳು

ರಷ್ಯಾದ ಕ್ರಾಂತಿಯಲ್ಲಿ ರಾಜಕೀಯ ಪಕ್ಷಗಳು ಮಹತ್ವದ ಪಾತ್ರವನ್ನು ವಹಿಸಿದವು. ರಷ್ಯಾದಲ್ಲಿ ಹಲವಾರು ರಾಜಕೀಯ ಪಕ್ಷಗಳಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ **ಬೋಲ್‌ಶೆವಿಕ್** ಮತ್ತು **ಮೆನ್‌ಶೆವಿಕ್** ಪಕ್ಷಗಳು, ಪ್ರಜಾಪ್ರಭುತ್ವವಾದಿ ಪಕ್ಷ ಹಾಗೂ ಉದಾರವಾದಿ ಪಕ್ಷ. ಬೋಲ್‌ಶೆವಿಕ್ ಮತ್ತು ಮೆನ್‌ಶೆವಿಕ್ ಪಕ್ಷಗಳು ಕ್ರಾಂತಿಯಲ್ಲಿ ಪ್ರಮುಖವಾಗಿ ಕಾಣಿಸಿಕೊಂಡವು. ಬೋಲ್‌ಶೆವಿಕ್‌ರು ಕ್ರಾಂತಿಯ ಮುಖ್ಯವಾಹಿನಿಯ ಪರವಾದ ಬಹುಸಂಖ್ಯಾತರು. ಅವರ ನಾಯಕ **ಲೆನಿನ್**. ಮೆನ್‌ಶೆವಿಕರು ಅಲ್ಪಸಂಖ್ಯಾತರಾಗಿದ್ದು, **ಕೆರೆನ್‌ಸ್ಕಿ** ಅವರ ನಾಯಕ. ೧೯೦೫ ರಲ್ಲಿ ಬೋಲ್‌ಶೆವಿಕ್‌ರ ನೇತೃತ್ವದಲ್ಲಿ ರೈತರು ಮತ್ತು ಕಾರ್ಮಿಕರು ವಿಫಲ ಕ್ರಾಂತಿ ನಡೆಸಿದರು. ನೂರಾರು ಕ್ರಾಂತಿಕಾರರು ಪ್ರಾಣ ಕಳೆದುಕೊಂಡರು. ಈ ಘಟನೆಯನ್ನು **ರಕ್ತಪಾತದ ಭಾನುವಾರ** ಎಂಬುದಾಗಿ ಕರೆಯಲಾಗಿದೆ. ಈ ಘಟನೆಯ ನಂತರ ಪರಿಸ್ಥಿತಿ ತೀರಾ ಹದಗೆಟ್ಟು, ಜಾರ್ ಸುಧಾರಣೆಗಳನ್ನು ತರುವ ಪ್ರಯತ್ನ ಮಾಡಿದ. 'ಡೂಮ' ಎಂಬ ಶಾಸನಸಭೆಯನ್ನು ಸ್ಥಾಪಿಸಲಾಯಿತು. ಆದರೆ ಮಂತ್ರಿಮಂಡಲವನ್ನು ನಿಯಂತ್ರಿಸುವ ಅಧಿಕಾರ ಅದಕ್ಕಿರಲಿಲ್ಲ. ಆ ಬೇಡಿಕೆಯನ್ನು ಮುಂದಿಟ್ಟಾಗ ಡೂಮಾವನ್ನೇ ವಿಸರ್ಜಿಸಲಾಯಿತು ಹಾಗೂ ಅನೇಕ ನಾಯಕರನ್ನು ಬಂಧಿಸಲಾಯಿತು. ಇದರಿಂದಾಗಿ ಹೋರಾಟ ಭೀಕರ ರೂಪವನ್ನು ಪಡೆಯಿತು.

ಮಾರ್ಚ್ ಕ್ರಾಂತಿ

೧೯೧೭ ರಲ್ಲಿ ನಡೆದ ರಷ್ಯಾದ ಕ್ರಾಂತಿ ಎರಡು ಹಂತಗಳಲ್ಲಿ ನಡೆಯಿತು. ಮಾರ್ಚ್‌ನಲ್ಲಿ ಒಂದು ಕ್ರಾಂತಿ ನಡೆದರೆ ಇನ್ನೊಂದು ಅಕ್ಟೋಬರ್‌ನಲ್ಲಿ ನಡೆಯಿತು. ಮೊದಲ ಜಾಗತಿಕ ಯುದ್ಧದಲ್ಲಿ ರಷ್ಯಾ ಭಾಗವಹಿಸಿ ಅನುಭವಿಸಿದ ಸೋಲು, ಕಷ್ಟ-ನಷ್ಟಗಳು ರಷ್ಯಾವನ್ನು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಕ್ಷೀಣಿಸುವಂತೆ ಮಾಡಿತು. ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರ ಅತೃಪ್ತಿ ಮತ್ತು ಅಸಮಾಧಾನಗಳಿಗೆ ಕಾರಣವಾಯಿತು. ೧೯೦೫ ರಿಂದ ೧೯೧೭ ರವರೆಗೆ ಕಾರ್ಮಿಕ ಮುಷ್ಕರಗಳು ನಿರಂತರವಾಗಿ ನಡೆದವು. ೧೯೧೭ ರ ಮಾರ್ಚ್ ೮ ರಂದು ಕಾರ್ಮಿಕರು **ಪೆಟ್ರೋಗ್ರಾಡ್‌**ನಲ್ಲಿ ಬೃಹತ್ ಪ್ರದರ್ಶನ ಮಾಡಿದರು. ಸುಮಾರು ೯೦,೦೦೦ ಕಾರ್ಮಿಕರು ಆಹಾರ ಮತ್ತು ಶಾಂತಿಯ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ಆರಂಭಿಸಿದರು. ಪ್ರದರ್ಶನಕಾರರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಾ ಹೋಯಿತು. ಪ್ರದರ್ಶನಕಾರರನ್ನು ಚದುರಿಸಲು ಬಂದ ಸೈನಿಕರೇ ಕ್ರಾಂತಿಕಾರರ ಜೊತೆ ಸೇರಿದರು. ಲೆನಿನ್ ಕ್ರಾಂತಿಕಾರರ ಜೊತೆ ಸೇರಿಕೊಂಡು, ಕ್ರಾಂತಿಯನ್ನು ಇನ್ನಷ್ಟು ಚುರುಕುಗೊಳಿಸಿದನು. ೧೯೧೭ ಮಾರ್ಚ್ ೧೫ ರಂದು ಜಾರ್ ಎರಡನೆಯ ನಿಕೋಲಸ್ ಅಧಿಕಾರದಿಂದ ಕೆಳಗಿಳಿದನು.

ಜಾರ್‌ನ ಕಾಲದಲ್ಲಿ ಸಂಸತ್ತಿನಲ್ಲಿದ್ದ ಬಂಡವಾಳಶಾಹಿ ಪರವಾದ ಪ್ರತಿನಿಧಿಗಳು ಪೆಟ್ರೋಗ್ರಾಡ್ ಸೋವಿಯತ್‌ನ ಕೆಲವು ಪ್ರತಿನಿಧಿಗಳ ನೆರವಿನೊಂದಿಗೆ ತಾತ್ಕಾಲಿಕ ಸರಕಾರವನ್ನು ರಚಿಸಿದರು. ಇದರಿಂದಾಗಿ ಕ್ರಾಂತಿ ವಿರೋಧಿ ಬಂಡವಾಳಶಾಹಿಗಳ ಪ್ರಭುತ್ವ ಅಸ್ತಿತ್ವಕ್ಕೆ

ಬಂತು. ಮೆನ್‌ಶೆವಿಕ್ ಪಕ್ಷದ ಮುಖಂಡ ಕೆರೆನ್‌ಸ್ಕಿ ತಾತ್ಕಾಲಿಕ ಸರಕಾರದ ನೇತಾರನಾಗಿ ಆಯ್ಕೆಗೊಂಡ. ಲೆನಿನ್ ನೇತೃತ್ವದ ಪೆಟ್ರೋಗ್ರಾಡ್ ಸೋವಿಯತ್ ಇದರಿಂದ ಸಂತುಷ್ಟಗೊಳ್ಳದಿದ್ದರೂ, ಜಾರನ ಆಳ್ವಿಕೆ ಕೊನೆಗೊಂಡಿದ್ದು ದೀರ್ಘ ಕಾಲದ ಕನಸನ್ನು ನನಸನ್ನಾಗಿಸಿತು. ತಾತ್ಕಾಲಿಕ ಸರಕಾರದ ನೇತಾರನಾದ ಕೆರೆನ್‌ಸ್ಕಿ ಜರ್ಮನ್ನರ ವಿರುದ್ಧ ಯುದ್ಧ ಮುಂದುವರಿಸಿದ್ದು ಜನರಲ್ಲಿ ಅಸಮಾಧಾನವನ್ನುಂಟು ಮಾಡಿತು. ಜನರು ಆಹಾರ ಮತ್ತು ಶಾಂತಿಗಾಗಿ ಪರಿತಪಿಸುತ್ತಿದ್ದರು. ತಾತ್ಕಾಲಿಕ ಸರಕಾರ ಕಾರ್ಮಿಕರ ಮುಷ್ಕರಗಳನ್ನು ಹತ್ತಿಕ್ಕುತ್ತಿತ್ತು. ಬೊಲ್‌ಶೆವಿಕ್‌ರನ್ನು ಸದೆಬಡಿಯಲು ಎಲ್ಲ ಕ್ರಮಗಳನ್ನು ಸರಕಾರ ತೆಗೆದುಕೊಂಡಿತು. ಲೆನಿನ್ ತಾತ್ಕಾಲಿಕ ಸರಕಾರದ ವಿರುದ್ಧ ಹೋರಾಟ ನಡೆಸಿದ. ಇದು ಇನ್ನೊಂದು ಕ್ರಾಂತಿಯ ಹುಟ್ಟಿಗೆ ಕಾರಣವಾಯಿತು.

ಅಕ್ಟೋಬರ್ ಕ್ರಾಂತಿ

ಲೆನಿನ್ ನಾಯಕತ್ವದ ಬೊಲ್‌ಶೆವಿಕ್ ಕ್ರಾಂತಿಯನ್ನು **ಅಕ್ಟೋಬರ್ ಕ್ರಾಂತಿ** ಎಂಬುದಾಗಿ ಕರೆಯಲಾಗಿದೆ. ತಾತ್ಕಾಲಿಕ ಸರಕಾರದ ದಮನಕಾರಿ ನೀತಿಗಳನ್ನು ವಿರೋಧಿಸಿದ ಬೊಲ್‌ಶೆವಿಕ್ ಪಕ್ಷ ಸರಕಾರವನ್ನು ಉರುಳಿಸುವ ಪ್ರಯತ್ನ ಮಾಡಿತು. ಅದಕ್ಕೆ ಲೆನಿನ್‌ನ ಸಮರ್ಥ ನಾಯಕತ್ವವೂ ದೊರೆಯಿತು. ಬೊಲ್‌ಶೆವಿಕ್ ಮತ್ತು ಮೆನ್‌ಶೆವಿಕ್ ಪಕ್ಷಗಳ ನಡುವೆ ಹೋರಾಟ ಆರಂಭಗೊಂಡಿತು. ಅಕ್ಟೋಬರ್ ತಿಂಗಳಿನಾದ್ಯಂತ ಬೊಲ್‌ಶೆವಿಕ್‌ರ ಹೋರಾಟ ಮುಂದುವರಿಯಿತು. ಕಾರ್ಮಿಕರು ಕೈಗಾರಿಕೆಗಳ ಆಡಳಿತದವರನ್ನು ಕಿತ್ತುಹಾಕಿ ತಾವೇ ವಹಿಸಿಕೊಂಡರು. ರೈತರು ಭೂಮಾಲೀಕರನ್ನು ಓಡಿಸಿ, ಅವರ ಭೂ ಹಿಡುವಳಿಗಳನ್ನು ಮತ್ತು ವ್ಯವಸಾಯದ ಸಲಕರಣೆಗಳನ್ನು ತಮ್ಮೊಳಗೆ ಹಂಚಿಕೊಂಡರು. ಅಕ್ಟೋಬರ್ ೨೬ ರಂದು ತಾತ್ಕಾಲಿಕ ಸರಕಾರವನ್ನು ಉರುಳಿಸಲಾಯಿತು. ಕೆರೆನ್‌ಸ್ಕಿ ತಲೆತಪ್ಪಿಸಿಕೊಂಡು ಓಡಿಹೋದನು. ತಾತ್ಕಾಲಿಕ ಸರಕಾರದ ಮಂತ್ರಿಗಳನ್ನು ದಸ್ತಗಿರಿ ಮಾಡಲಾಯಿತು. ೧೯೧೭ ರ ನವೆಂಬರ್ ತಿಂಗಳಲ್ಲಿ ಲೆನಿನ್ ಅಧಿಕಾರ ಪಡೆದು ರಷ್ಯಾದ ಜನರ ಹಕ್ಕುಗಳನ್ನು ಘೋಷಿಸಿದನು.

ಲೆನಿನ್‌ನ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಬೊಲ್‌ಶೆವಿಕ್ ಸರಕಾರ ಜನರ ಆಹಾರ, ವಸತಿ ಮತ್ತು ಬಟ್ಟೆಯ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಪ್ರಥಮ ಆದ್ಯತೆ ನೀಡಿತು. ರಷ್ಯಾದ ಎಲ್ಲ ಜನರಿಗೆ ಸಮಾನತೆ ಮತ್ತು ಸಾರ್ವಭೌಮತೆ, ಜನರಿಗೆ ಸ್ವಯಂ ನಿರ್ಧಾರದ ಹಕ್ಕು, ದೊಡ್ಡ ಪ್ರಮಾಣದಲ್ಲಿ ಸಾಕ್ಷರತಾ ಆಂದೋಲನ ಮುಂತಾದ ಮಹತ್ವದ ತೀರ್ಮಾನಗಳನ್ನು ಹೊಸ ಸರಕಾರ ತೆಗೆದುಕೊಂಡಿತು. ಲೆನಿನ್ ಅಧಿಕಾರವನ್ನು ವಹಿಸಿಕೊಂಡ ಮೇಲೆ ಜರ್ಮನಿ ಮತ್ತು ಅದರ ಮಿತ್ರ ಪಕ್ಷಗಳೊಡನೆ ಒಪ್ಪಂದವನ್ನು ಮಾಡಿಕೊಂಡು ರಷ್ಯಾವನ್ನು ಯುದ್ಧದಿಂದ ಹಿಂತೆಗೆದುಕೊಂಡನು. ಇದು ರಷ್ಯನ್ನರ ಬಹುದಿನದ ಬೇಡಿಕೆಯಾಗಿದ್ದು, ಶಾಂತಿ ನೆಲೆಸುವಂತಾಯಿತು. ಲೆನಿನ್ ತನ್ನ ಸಂಗಡಿಗನಾದ **ಟ್ರಾಟ್‌ಸ್ಕಿಯ** ನೆರವಿನೊಂದಿಗೆ **ಕೆಂಪು ಸೈನ್ಯವನ್ನು** ಸ್ಥಾಪಿಸಿ ತನ್ನೆಲ್ಲ ವಿದೇಶಿ ಮತ್ತು ಆಂತರಿಕ ವೈರಿಗಳನ್ನು ಸದೆಬಡಿದನು.

ನಾಡಿನಾದ್ಯಂತ ಹತೋಟಿಯನ್ನು ಸ್ಥಾಪಿಸಿದ ಲೆನಿನ್ ದುಡಿಯುವವರ ಪ್ರಭುತ್ವವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದ. ಕಾರ್ಲ್‌ಮಾರ್ಕ್ಸ್‌ನ ತತ್ವಗಳನ್ನು ಆಧರಿಸಿದ ಸಮತಾವಾದ ಅಥವಾ ಕಮ್ಯುನಿಸ್ಟ್ ಸರಕಾರ ರಷ್ಯಾದಲ್ಲಿ ಸ್ಥಾಪನೆಯಾಯಿತು. ಸಮಾಜವಾದದ ತತ್ವಗಳನ್ನು ವಿರೋಧಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ೧೯೧೮ ರ ಜುಲೈನಲ್ಲಿ ಎರಡನೆಯ **ನಿಕೋಲಸ್** ಮತ್ತು ಅವನ ಕುಟುಂಬದವರನ್ನು ಗುಂಡಿಕ್ಕಿ ಕೊಲ್ಲಲಾಯಿತು.

ರಷ್ಯನ್ನರು ಸಮಾಜವಾದವನ್ನು ವಿಶ್ವದಾದ್ಯಂತ ಹರಡುವ ಯೋಜನೆಯನ್ನು ಇಟ್ಟುಕೊಂಡದ್ದು ವ್ಯಾಪಕ ವಿರೋಧಕ್ಕೆ ಎಡೆಮಾಡಿಕೊಟ್ಟಿತು. **ಇಂಗ್ಲೆಂಡ್, ಫ್ರಾನ್ಸ್, ಪೋಲೆಂಡ್** ಮುಂತಾದ ದೇಶಗಳು ಬೊಲ್‌ಶೆವಿಕ್ ಸರಕಾರದ ವಿರುದ್ಧ ಯುದ್ಧ ಸಾರಿದರೂ, ಲೆನಿನ್‌ನ ಸಮರ್ಥ ನಾಯಕತ್ವದಲ್ಲಿ ಬೋಲ್‌ಶೆವಿಕರು ಯಶಸ್ವಿಯಾದರು. ಲೆನಿನ್ ಕಮ್ಯುನಿಸ್ಟ್ ತತ್ವಗಳ ಆಧಾರದ ಮೇಲೆ ರಷ್ಯಾವನ್ನು ಪುನರ್ ನಿರ್ಮಾಣ ಮಾಡುವ ದಿಟ್ಟ ಪ್ರಯತ್ನವನ್ನು ಮಾಡಿದನು. ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದು ಕಾರ್ಮಿಕರು ಮತ್ತು ರೈತರ ಜೀವನ ಮಟ್ಟವನ್ನು ಸುಧಾರಿಸಿದನು. ೧೯೨೨ ರಲ್ಲಿ ರಷ್ಯಾದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ರಷ್ಯವನ್ನು **ಯೂನಿಯನ್ ಆಫ್ ಸೋವಿಯತ್ ಸೋಶಿಯಲಿಸ್ಟ್ ರಿಪಬ್ಲಿಕ್** (ಯು.ಎಸ್.ಎಸ್.ಆರ್) ಎಂದು ಕರೆಯಲಾಯಿತು. ಸೋವಿಯತ್ ಗಣರಾಜ್ಯಗಳು ಹೊಸ ಸರಕಾರದಲ್ಲಿ ಸೇರ್ಪಡೆಯಾದವು. ಲೆನಿನ್‌ನ ನಂತರ ಅಧಿಕಾರಕ್ಕೆ ಬಂದ ಸ್ಟಾಲಿನ್ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ರಷ್ಯಾವನ್ನು ಪ್ರಗತಿಪಥದತ್ತ ಕೊಂಡೊಯ್ದ.

ಕ್ರಾಂತಿಯ ಪರಿಣಾಮಗಳು - ಮಹತ್ವ

ಕ್ರಾಂತಿಯ ಪರಿಣಾಮವಾಗಿ ಜಾರ್ ದೊರೆಗಳ ನಿರಂಕುಶಾಡಳಿತ ಕೊನೆಗೊಂಡಿತು. ಅರಸರ ಆಳ್ವಿಕೆಯಲ್ಲಿ ಶೋಷಣೆಗೊಳಗಾಗಿದ್ದ ರಷ್ಯಾದ ಜನರು ಕ್ರಾಂತಿ ನಡೆಸಿ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಂಡರು. ರಷ್ಯಾದ ಕೊನೆಯ ಜಾರ್ ಎರಡನೆಯ ನಿಕೋಲಸ್ ಮತ್ತು ಆತನ ಕುಟುಂಬದ ಸದಸ್ಯರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಆತನ ಮರಣದೊಂದಿಗೆ ದೀರ್ಘಕಾಲದವರೆಗೆ ಅಸ್ತಿತ್ವದಲ್ಲಿದ್ದ ರಾಜವಂಶವೊಂದರ ಅವನತಿಯಾಯಿತು.

ರಷ್ಯಾದಲ್ಲಿ ಕಮ್ಯುನಿಸ್ಟ್ ತತ್ವದ ಆಧಾರದ ಮೇಲೆ ಹೊಸ ಸರಕಾರವನ್ನು ರಚಿಸಲಾಯಿತು. ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತರ ಪ್ರಕಾರ ರಷ್ಯಾವನ್ನು **ಸಮಾಜವಾದಿ ಸೋವಿಯತ್ ಗಣರಾಜ್ಯಗಳ ಒಕ್ಕೂಟವಾಗಿ** ಪುನರ್ ನಿರ್ಮಿಸಲಾಯಿತು. ಬೊಲ್‌ಶೆವಿಕ್ ಪಕ್ಷ ಲೆನಿನ್‌ನ ನೇತೃತ್ವದಲ್ಲಿ ಜಾರ್ ದೊರೆಗಳ ಮತ್ತು ಮೆನ್‌ಶೆವಿಕ್ ಪಕ್ಷದ ವಿರುದ್ಧ ಹೋರಾಡಿ ಜಯಗಳಿಸಿತು. ಬೊಲ್‌ಶೆವಿಕ್ ಕ್ರಾಂತಿಯ ನಾಯಕನಾದ ಲೆನಿನ್ ಕಾರ್ಲ್‌ಮಾರ್ಕ್ಸ್‌ನ ಅನುಯಾಯಿಯಾಗಿದ್ದು, ಕಮ್ಯುನಿಸ್ಟ್ ಸಿದ್ಧಾಂತದ ಮೂಲಕ ಶೋಷಿತ ಜನರಿಗೆ ನ್ಯಾಯ ದೊರಕಿಸಿಕೊಟ್ಟ. ಇದು ರಷ್ಯಾದ ಕ್ರಾಂತಿಯ ಪ್ರಮುಖ ಸಾಧನೆಗಳಲ್ಲೊಂದು. ಕಮ್ಯುನಿಸ್ಟ್ ಸಿದ್ಧಾಂತವನ್ನು ಪ್ರಪಂಚದ ಹಲವಾರು ರಾಷ್ಟ್ರಗಳು ಸ್ವೀಕರಿಸಿದವು. ಆರ್ಥಿಕ ಅಭಿವೃದ್ಧಿಗೆ

ಹೆಚ್ಚಿನ ಒತ್ತನ್ನು ನೀಡುವ ಹಾಗೂ ಶೋಷಣೆಯ ವಿರುದ್ಧ ಹೋರಾಡುವಂತೆ ಮಾಡುವ ಈ ಸಿದ್ಧಾಂತಕ್ಕೆ ಸಹಜವಾಗಿಯೇ ಅಪಾರ ಬೆಂಬಲ ವ್ಯಕ್ತವಾಯಿತು. ಈ ಸಿದ್ಧಾಂತದಡಿಯಲ್ಲಿ ರಷ್ಯಾವು ಆರ್ಥಿಕ ಕ್ಷೇತ್ರದಲ್ಲಿ ಮಹತ್ತರವಾದ ಅಭಿವೃದ್ಧಿಯನ್ನು ಸಾಧಿಸಿತು.

ಕ್ರಾಂತಿಯ ನಂತರ ರಷ್ಯಾವು ಪ್ರಪಂಚದ ಪ್ರಮುಖ ಶಕ್ತಿಯಾಗಿ ರೂಪುಗೊಂಡಿತು. ಲೆನಿನ್ ಜಾರಿಗೊಳಿಸಿದ ಹೊಸ ಆರ್ಥಿಕ ನೀತಿ ಹಾಗೂ ಸ್ಟಾಲಿನ್ ಜಾರಿಗೆ ತಂದ ಪಂಚ ವಾರ್ಷಿಕ ಯೋಜನೆಗಳು ರಷ್ಯಾವನ್ನು ಆರ್ಥಿಕವಾಗಿ ಬಲಿಷ್ಠವನ್ನಾಗಿಸಿ, ಜಾಗತಿಕ ಮಟ್ಟದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವಂತೆ ಮಾಡಿದವು.

ಕ್ರಾಂತಿಯ ಪರಿಣಾಮವಾಗಿ ಕಾರ್ಮಿಕರು ಮತ್ತು ರೈತರು ಶೋಷಣೆಯಿಂದ ಮುಕ್ತರಾಗಿ, ಸ್ವತಂತ್ರ ಜೀವನವನ್ನು ನಡೆಸುವಂತಾಯಿತು. ಜೀತ ಮತ್ತು ಗುಲಾಮಗಿರಿಯಿಂದ ನರಳುತ್ತಿದ್ದ ರೈತರಿಗೆ ಜಮೀನ್ದಾರರ ವಿರುದ್ಧ ಸೆಟೆದು ನಿಲ್ಲುವ ಸಾಮರ್ಥ್ಯವನ್ನು ಕ್ರಾಂತಿಯು ನೀಡಿತು. ಅದೇ ರೀತಿ ಕೈಗಾರಿಕಾ ಮಾಲೀಕರಿಂದ ಶೋಷಣೆಗೊಳಗಾಗಿದ್ದ ಕಾರ್ಮಿಕರು ಕಾರ್ಮಿಕ ಸಂಘಟನೆಗಳನ್ನು ಕಟ್ಟಿಕೊಂಡು ಸಂಘಟಿತ ಹೋರಾಟ ನಡೆಸಲು ಕ್ರಾಂತಿಯು ವೇದಿಕೆಯನ್ನು ಸಜ್ಜುಗೊಳಿಸಿತು. ರೈತರು ಮತ್ತು ಕಾರ್ಮಿಕರ ನೆರವಿನೊಂದಿಗೆ ನೂತನ ರಷ್ಯಾ ನಿರ್ಮಾಣ ಗೊಂಡಿತು. ಸಮಾಜವಾದಿ ಕೆಲಸ ಕಾರ್ಯಗಳನ್ನು ಈ ಎರಡು ವರ್ಗಗಳು ಮುಂದುವರಿಸಿ ಕೊಂಡು ಹೋದವು.

ಕ್ರಾಂತಿಯಿಂದಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳಾದವು. ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಜನರಿಗೆ ತಮ್ಮ ಮಾತೃಭಾಷೆಯಲ್ಲಿ ಉಚಿತ ಶಿಕ್ಷಣ ನೀಡಲಾಯಿತು. ಹೊಸ ಸಮಾಜದ, ನೂತನ ರಷ್ಯಾದ ನಿರ್ಮಾಣಕ್ಕೆ ಸಾರ್ವತ್ರಿಕ ಶಿಕ್ಷಣದ ಅಗತ್ಯತೆಯನ್ನು ಅರಿತುಕೊಳ್ಳಲಾಯಿತು. ಇದರಿಂದಾಗಿ ಸಾಕ್ಷರತಾ ಆಂದೋಲನ ದೊಡ್ಡ ಪ್ರಮಾಣದಲ್ಲಿ ನಡೆಯಿತು.

ರಷ್ಯಾವು ಪ್ರಥಮ ಜಾಗತಿಕ ಯುದ್ಧದಲ್ಲಿ ಭಾಗವಹಿಸಿ ಅನುಭವಿಸಿದ ನಿರಂತರ ಸೋಲುಗಳು ರಷ್ಯಾದ ಜನತೆಗೆ ಅಪಾರ ಕಷ್ಟ-ನಷ್ಟಗಳನ್ನು ಉಂಟುಮಾಡಿದವು. ರಷ್ಯಾದ ಜನತೆಗೆ ಶಾಂತಿ ಬೇಕಾಗಿತ್ತು ಹಾಗೂ ಸರಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕೆನ್ನುವ ಹಂಬಲವಿತ್ತು. ಲೆನಿನ್ ಅಧಿಕಾರವನ್ನು ವಹಿಸಿಕೊಂಡ ಮೇಲೆ ಜನರ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಯುದ್ಧಗಳನ್ನು ನಿಲ್ಲಿಸುತ್ತಾ ಬಂದ. ಲೆನಿನ್‌ನ ಪ್ರಯತ್ನಗಳಿಂದಾಗಿ ರಷ್ಯಾವು ಮೊದಲನೆಯ ಜಾಗತಿಕ ಯುದ್ಧದಿಂದ ಹಿಂದಕ್ಕೆ ಸರಿಯಿತು. ಜರ್ಮನಿ ಮತ್ತು ಅದರ ಮಿತ್ರ ರಾಷ್ಟ್ರಗಳೊಡನೆ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಹೀಗೆ ಕ್ರಾಂತಿಯಿಂದಾಗಿ ರಷ್ಯಾವು ಯುದ್ಧದಿಂದ ಹಿಂದೆ ಸರಿದು ಆಂತರಿಕ ಸಮಸ್ಯೆಗಳ ನಿವಾರಣೆಗೆ ಗಮನ ಕೊಡುವಂತಾಯಿತು.

ರಷ್ಯಾದಲ್ಲಿ ಕಮ್ಯುನಿಸ್ಟ್ ಸರಕಾರ ಅಸ್ತಿತ್ವಕ್ಕೆ ಬಂದಿರುವುದು ಬಂಡವಾಳಶಾಹಿ ರಾಷ್ಟ್ರಗಳಿಗೆ ತಲೆನೋವಾಗಿ ಪರಿಣಮಿಸಿತು. ಅದರಲ್ಲೂ ಬೊಲ್‌ಶೆವಿಕರು ಮಾರ್ಕ್ಸ್‌ನ

ಸಿದ್ಧಾಂತವನ್ನು ಜಗತ್ತಿನಾದ್ಯಂತ ಹರಡುವ ಯತ್ನ ನಡೆಸಿದ್ದು ಇನ್ನಷ್ಟು ಆತಂಕಕ್ಕೆ ಕಾರಣವಾಯಿತು. ಇದು ಕಮ್ಯುನಿಸ್ಟ್ ಮತ್ತು ಕ್ಯಾಪಿಟಾಲಿಸ್ಟ್ (ಬಂಡವಾಳಶಾಹಿ) ಎನ್ನುವ ಎರಡು ಬಣಗಳ ಹುಟ್ಟಿಗೆ ಕಾರಣವಾಯಿತು. ಈ ಎರಡೂ ಬಣಗಳು ವಿಶ್ವದ ಅಗ್ರಮಾನ್ಯ ಶಕ್ತಿಗಳಾಗಿ ರೂಪುಗೊಂಡವು. ಇದರಿಂದಾಗಿ ಸೋವಿಯತ್ ಒಕ್ಕೂಟ ಕಟ್ಟಿದ ಸಮಾಜವಾದಿ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ವಿರೋಧಗಳನ್ನು ಎದುರಿಸಬೇಕಾಗಿ ಬಂತು. ಹೀಗೆ ಕ್ರಾಂತಿಯ ನಂತರ ರಷ್ಯಾವು ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವಾದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ಹುಟ್ಟುಹಾಕಿತು.

ನಿಕೊಲಾಯ್ ಲೆನಿನ್ (೧೮೭೦-೧೯೨೪)

ರಷ್ಯಾದಲ್ಲಿ ಬಂಡವಾಳಶಾಹಿ ಪ್ರಭುತ್ವವನ್ನು ಕೊನೆಗೊಳಿಸಿ, ಸಮಾಜವಾದಿ ತತ್ವದ ಆಧಾರದ ಮೇಲೆ ಹೊಸ ಸರಕಾರವನ್ನು ರಚಿಸಿದ ಲೆನಿನ್ ಆಧುನಿಕ ರಷ್ಯಾದ ರೂವಾರಿಯೆಂದೇ ಕರೆಯಲ್ಪಟ್ಟಿದ್ದಾನೆ. ನಿಕೊಲಾಯ್ ಲೆನಿನ್ ೧೮೭೦ ರ ಏಪ್ರಿಲ್ ೨೨ ರಂದು ವೋಲ್ಗಾ ನದಿ ತೀರದಲ್ಲಿನ ಸಿಂಬ್ರಿಸ್ಕ್ ಎಂಬಲ್ಲಿ ಜನಿಸಿದನು. ಲೆನಿನ್‌ನ ಮೊದಲ ಹೆಸರು ವ್ಲಾಡಿಮಿರ್ ಇಲಿಚ್ ಉಲ್ಯನಾವ್. ಲೆನಿನ್ ಚಿಕ್ಕವನಿರುವಾಗಲೇ ತತ್ವಜ್ಞಾನಿಗಳ ಕೃತಿಗಳನ್ನು ಓದುತ್ತಿದ್ದನು. ಲೆನಿನ್ ಆಕರ್ಷಿತನಾದದ್ದು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳಿಗೆ. ಮಾರ್ಕ್ಸ್‌ನ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಲೆನಿನ್ ತನ್ನ ಹೋರಾಟದ ಹಾದಿಗಳನ್ನು ರೂಪಿಸಿಕೊಂಡ. ಮಾರ್ಕ್ಸ್‌ವಾದವನ್ನು ದೇಶದ ಅಭಿವೃದ್ಧಿಗಾಗಿ ಅಳವಡಿಸಿಕೊಂಡವರಲ್ಲಿ ಲೆನಿನ್ ಮೊದಲಿಗನು.

೧೯ ನೆಯ ಶತಮಾನದ ಕೊನೆಯಲ್ಲಿ ರಷ್ಯಾದಲ್ಲಿ ಕಾಣಿಸಿಕೊಂಡ ಲೆನಿನ್ ತನ್ನ ಇರುವಿಕೆಯನ್ನು ಗಟ್ಟಿಯಾಗಿ ಸ್ಥಾಪಿಸಿಕೊಂಡ. ಜಾರ್ ದೊರೆಗಳ ನಿರಂಕುಶಾಡಳಿತ, ಭೂಮಾಲೀಕರ ಜಮೀನ್ದಾರಿ ಧೋರಣೆ ಹಾಗೂ ಕೈಗಾರಿಕಾ ಮಾಲೀಕರ ಬಂಡವಾಳಶಾಹಿ ನೀತಿಗಳ ವಿರುದ್ಧ ಲೆನಿನ್ ಸಮರ ಸಾರಿ ಯಶಸ್ವಿಯಾದ. ಕಾರ್ಮಿಕರು ಸಂಘಟಿತರಾಗಿ ಬಂಡವಾಳಶಾಹಿ ಪ್ರಭುತ್ವಗಳನ್ನು ಪದಚ್ಯುತಗೊಳಿಸಿ ತಮ್ಮ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಯಶಸ್ಸುಗೊಳಿಸಲು ಲೆನಿನ್ ಕರೆಕೊಟ್ಟನು. ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಪಕ್ಷ ಇರಬೇಕೆಂದೂ, ಅದು ತನ್ನ ಬೆಂಬಲಕ್ಕಾಗಿ ರೈತ ವರ್ಗದೊಡನೆ ಸಖ್ಯತೆ ಬೆಳೆಸಿಕೊಳ್ಳಬೇಕೆಂದೂ, ಬಂಡವಾಳಶಾಹಿಗಳನ್ನು ದಯೆ-ದಾಕ್ಷಿಣ್ಯವಿಲ್ಲದೆ ನಿಗ್ರಹಿಸಬೇಕೆಂದೂ ಹಾಗೂ ಕ್ರಾಂತಿಯನ್ನು ರಕ್ಷಿಸಲು ಕಾರ್ಮಿಕರು ಮತ್ತು ರೈತರ ಕೆಂಪು ಸೇನೆಯನ್ನು ಸಜ್ಜುಗೊಳಿಸಬೇಕೆಂದೂ ಲೆನಿನ್ ವ್ಯಾಪಕವಾಗಿ ಕರೆಕೊಟ್ಟನು. ೨೦ನೆಯ ಶತಮಾನದ ಆರಂಭದಿಂದ ಕಾರ್ಮಿಕ ವರ್ಗದ ತತ್ತ್ವಜ್ಞಾನವನ್ನು ಮಾರ್ಕ್ಸ್‌ವಾದ- ಲೆನಿನ್‌ವಾದ ಎಂದೇ ಗುರುತಿಸಲಾಗಿದೆ.

ಲೆನಿನ್ ೧೮೯೫ ರಲ್ಲಿಯೇ ಕಾರ್ಮಿಕ ವರ್ಗದ ವಿಮೋಚನೆಗಾಗಿ ಹೋರಾಟದ ಸಂಸ್ಥೆಯನ್ನು ಸ್ಥಾಪಿಸಿದನು. ೧೮೯೮ ರಲ್ಲಿ ರಷ್ಯಾದ ಸೋಶಿಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿಯನ್ನು ಸ್ಥಾಪಿಸಿದನು. ಆ ಪಕ್ಷದಿಂದಲೇ ಬೊಲ್‌ಶೆವಿಕರು ಮತ್ತು ಮೆನ್‌ಶೆವಿಕರು ಮೂಡಿಬಂದರು. ಬೊಲ್‌ಶೆವಿಕ್ ಪಕ್ಷದ ಮುಖಂಡನಾದ ಲೆನಿನ್ ಜಾರನ ನಿರಂಕುಶಾಡಳಿತ

ವನ್ನು ಹಾಗೂ ಮೆನ್‌ಶೆವಿಕರ ತಾತ್ಕಾಲಿಕ ಸರಕಾರವನ್ನು ತನ್ನ ಕ್ರಾಂತಿಯ ಪ್ರಭಾವವನ್ನು ಬಳಸಿ ಪದಚ್ಯುತಗೊಳ್ಳುವಂತೆ ಮಾಡಿದನು. ಬೊಲ್‌ಶೆವಿಕ್ ಸರಕಾರವನ್ನು ರಚಿಸಿದ ಲೆನಿನ್ ಸಮಾಜವಾದದ ತತ್ವದಡಿಯಲ್ಲಿ ತನ್ನ ಆಡಳಿತ ನೀತಿಯನ್ನು ರೂಪಿಸಿಕೊಂಡನು. ಬೊಲ್‌ಶೆವಿಕ್ ಪಕ್ಷವನ್ನು ಕಮ್ಯುನಿಸ್ಟ್ ಪಕ್ಷವನ್ನಾಗಿ ಬದಲಾಯಿಸಲಾಯಿತು.

ನಿರಂತರ ಯುದ್ಧಗಳಿಂದಾಗಿ ರಷ್ಯಾವು ಆರ್ಥಿಕವಾಗಿ ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಿ, ಆಹಾರದ ಅಭಾವದಿಂದ ತತ್ತರಿಸಿದಾಗ ಲೆನಿನ್ ರಷ್ಯಾವನ್ನು ಯುದ್ಧದಿಂದ ಹಿಂದಕ್ಕೆ ಸರಿಯುವಂತೆ ಮಾಡಿದ. ಇದರಿಂದಾಗಿ ಲೆನಿನ್ ರಷ್ಯಾದಲ್ಲಿ ಅಪಾರ ಮೆಚ್ಚುಗೆಯನ್ನು ಮತ್ತು ಬೆಂಬಲವನ್ನು ಪಡೆಯುವಂತಾಯಿತು. ಲೆನಿನ್ ಜರ್ಮನಿ ಮತ್ತು ಅದರ ಮಿತ್ರ ಪಕ್ಷಗಳೊಂದಿಗೆ ಒಪ್ಪಂದ ಮಾಡಿಕೊಂಡನು. ಇದು ಯುದ್ಧದಿಂದ ನೊಂದಿದ್ದ ರಷ್ಯನ್ನರಿಗೆ ಸಮಾಧಾನವನ್ನುಂಟು ಮಾಡಿತು. ಲೆನಿನ್ ರಷ್ಯಾದ ಆಂತರಿಕ ಸಮಸ್ಯೆಗಳ ನಿವಾರಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದನು. ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಜನರನ್ನು ಅದರಿಂದ ಮುಕ್ತಗೊಳಿಸಿ, ಸ್ವತಂತ್ರ ಜೀವನವನ್ನು ನಡೆಸುವಂತೆ ಮಾಡುವುದು ಸಾಹಸದ ಕೆಲಸವಾಗಿತ್ತು. ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಕಾರ್ಮಿಕರು ಮತ್ತು ರೈತರ ಪ್ರಾತಿನಿಧ್ಯವುಳ್ಳ ಪ್ರಾದೇಶಿಕ ಸಮಿತಿಗಳನ್ನು-ಸೋವಿಯತ್‌ಗಳನ್ನು ಸ್ಥಾಪಿಸಲಾಯಿತು.

ಲೆನಿನ್ ೧೯೨೧ ರಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಿದನು. ಇದನ್ನು ನ್ಯೂ ಎಕನಾಮಿಕ್ ಪಾಲಿಸಿ ಎಂಬುದಾಗಿ ಕರೆಯಲಾಗಿದೆ. ರಷ್ಯಾದಲ್ಲಿ ಆಹಾರದ ಅಭಾವ ತಲೆದೋರಿ ಜನರು ಕಂಗಾಲಾದಾಗ ಲೆನಿನ್ ತನ್ನ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಿದನು. ಆಹಾರ, ವಸತಿ ಮತ್ತು ಬಟ್ಟೆಯ ಸಮಸ್ಯೆಯನ್ನು ಪರಿಹರಿಸುವ ಯೋಜನೆಯನ್ನು ಸಿದ್ಧಗೊಳಿಸಲಾಯಿತು. ರಷ್ಯಾಕ್ಕೆ ಅನುಕೂಲವಾಗುವ ರೀತಿಯಲ್ಲಿ ಕಮ್ಯುನಿಸಂ ತತ್ವಗಳಿಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಯಿತು. ಕಾರ್ಮಿಕರು ಮತ್ತು ರೈತರ ನಡುವೆ ಆರ್ಥಿಕ ಮತ್ತು ರಾಜಕೀಯ ಸಾಮರಸ್ಯವನ್ನು ಏರ್ಪಡಿಸಲಾಯಿತು. ಕೃಷಿ, ವ್ಯಾಪಾರ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಯಿತು. ವಿದೇಶಿ ವ್ಯಾಪಾರ, ಬೃಹತ್ ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಖಾಸಗಿ ಉದ್ಯಮಕ್ಕೂ ಉತ್ತೇಜನ ನೀಡಲಾಯಿತು. ಕೃಷಿ ಬ್ಯಾಂಕನ್ನು ಸ್ಥಾಪಿಸಿ ರೈತರಿಗೆ ಸಾಲ ಮತ್ತು ಉಳುಮೆ ಯಂತ್ರಗಳನ್ನು ನೀಡಲಾಯಿತು. ದುಡಿಯುವ ವರ್ಗಗಳಿಗೆ ವೈದ್ಯಕೀಯ ಸೌಲಭ್ಯ, ಸಾಮೂಹಿಕ ವಿಮೆ ಮತ್ತು ರಜಾ ದಿನಗಳನ್ನು ನೀಡಲಾಯಿತು. ಹೀಗೆ ಲೆನಿನ್ ಜಾರಿಗೊಳಿಸಿದ ಹೊಸ ಆರ್ಥಿಕ ನೀತಿ ರಷ್ಯಾವನ್ನು ಅಭಿವೃದ್ಧಿಪಥದತ್ತ ಸಾಗುವಂತೆ ಮಾಡಿತು.

೧೯೧೭ ರಲ್ಲಿ ಬೊಲ್‌ಶೆವಿಕ್ ಸರಕಾರ ಸ್ಥಾಪನೆಗೊಂಡು, ಲೆನಿನ್ ಅಧಿಕಾರ ವಹಿಸಿಕೊಂಡ ಮೇಲೆ ರಷ್ಯಾ ಪ್ರಪಂಚದ ಪ್ರಮುಖ ಶಕ್ತಿಯಾಗಿ ಬೆಳೆಯಲಾರಂಭಿಸಿತು. ೧೯೧೮ ರಿಂದ ೧೯೨೧ ರವರೆಗೆ ಲೆನಿನ್ ಆಂತರಿಕ ಮತ್ತು ಬಾಹ್ಯ ಶತ್ರುಗಳ ವಿರುದ್ಧ ನಿರಂತರ ಹೋರಾಟ ನಡೆಸಿದನು. ೧೯೧೮ ರಲ್ಲಿ ಹೊಸ ಸಂವಿಧಾನವೊಂದನ್ನು ಲೆನಿನ್ ರಚಿಸಿದನು. ಈ

ಸಂವಿಧಾನದ ಪ್ರಕಾರ ಅಖಿಲ ರಷ್ಯಾ ಸೋವಿಯತ್‌ಗಳ ಕಾಂಗ್ರೆಸ್ ಕೇಂದ್ರ ಕಾರ್ಯಾಂಗ ಸಮಿತಿಯನ್ನು ಚುನಾಯಿಸಿತು. ಸೋವಿಯತ್‌ಗಳ ಚುನಾವಣೆಗಾಗಿ ೧೮ ವಯಸ್ಸಿನ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಲಾಯಿತು.

ಲೆನಿನ್‌ನೊಂದಿಗೆ ಟ್ರಾಟ್ಸ್ಕಿ ಮತ್ತು ಸ್ಟಾಲಿನ್ ಜೊತೆಗೂಡಿ ಕೆಲಸ ಮಾಡಿದರು. ಕ್ರಾಂತಿಯ ಯಶಸ್ವಿಗೆ ಇವರಿಬ್ಬರು ಲೆನಿನ್‌ನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಸಹಕರಿಸಿದರು. ಇವರೆಲ್ಲರ ಪರಿಶ್ರಮದ ಪರಿಣಾಮವಾಗಿ ೧೯೨೨ ರಲ್ಲಿ ರಷ್ಯಾವು ಯೂನಿಯನ್ ಆಫ್ ಸೋವಿಯತ್ ಸೋಶಿಯಲಿಸ್ಟ್ ರಿಪಬ್ಲಿಕ್ ಆಗಿ ರೂಪುಗೊಂಡಿತು. ಮುಂದೆ ಸೋವಿಯತ್ ಒಕ್ಕೂಟವು ಅಮೆರಿಕಾ ನೇತೃತ್ವದ ಬಂಡವಾಳಶಾಹಿ ಬಣಕ್ಕೆ ವಿರುದ್ಧವಾಗಿ ಕಮ್ಯುನಿಸ್ಟ್ ಬಣವೊಂದನ್ನು ರಚಿಸಿಕೊಂಡು ಜಾಗತಿಕ ಮಟ್ಟದಲ್ಲಿ ನಿರ್ಧಾರಕ ಶಕ್ತಿಯಾಗಿ ಬೆಳೆಯಿತು. ನೂತನ ರಷ್ಯಾದ ನಿರ್ಮಾಣಕ್ಕಾಗಿ ಹಗಲು-ರಾತ್ರಿಯೆನ್ನದೆ ದುಡಿದ ಲೆನಿನ್ ೧೯೨೪ ರ ಜನವರಿ ೨೧ ರಂದು ಮರಣ ಹೊಂದಿದನು.

ಹೆಚ್ಚಿನ ಓದಿಗಾಗಿ

೧. ಹೇನ್ ಡಿ.ಸಿ. ಮತ್ತು ಇತರರು - ದಿ ಗ್ರೇಟ್ ರಿಪಬ್ಲಿಕ್: ಎ ಹಿಸ್ಟರಿ ಆಫ್ ದಿ ಅಮೇರಿಕನ್ ಪೀಪಲ್

೨. ಗಾರ್ಡರ್ನ್ ವುಡ್ - ಕ್ರಿಯೇಶನ್ ಆಫ್ ದಿ ಅಮೆರಿಕನ್ ರಿಪಬ್ಲಿಕ್ - ೧೭೭೬-೧೭೮೭

೩. ಮೋಹನ್ ವೈ.ಆರ್ - ಅಮೆರಿಕಾಯಣ

೪. ಡೇನಿಯಲ್ ಬೂಸ್ಟಿನನ್ - ದಿ ಅಮೆರಿಕನ್ಸ್

೫. ನಾರ್ಮನ್ ಹಾಮ್‌ಪ್ಸನ್ - ದಿ ಎನ್‌ಲೈಟನ್‌ಮೆಂಟ್

೬. ಲೂಯಿ ಗಾಟ್‌ಶಾಕ್ - ಇರಾ ಆಫ್ ದಿ ಫ್ರೆಂಚ್ ರೆವಲ್ಯೂಷನ್ ೧೭೧೫-೧೮೧೫

೭. ಆಲ್ಬರ್ಟ್ ಸಬೂಲ್ - ಅಂಡರ್‌ಸ್ಟಾಂಡಿಗ್ ದಿ ಫ್ರೆಂಚ್ ರೆವಲ್ಯೂಷನ್

೮. ಡೇವಿಡ್ ಥೋಮ್ಸನ್ - ಯುರೋಪ್ ಸಿನ್ಸ್ ನೆಪೋಲಿಯನ್

೯. ಲಿಯೋ ಗೆರ್‌ಶೋಯಿ - ದಿ ಫ್ರೆಂಚ್ ರೆವಲ್ಯೂಷನ್ ಎಂಡ್ ನೆಪೋಲಿಯನ್

೧೦. ಬೋಲ್ಟಾನ್ ಕಿಂಗ್ - ಹಿಸ್ಟರಿ ಆಫ್ ಇಟಾಲಿಯನ್ ಯುನಿಟಿ

೧೧. ಎರಿಕ್ ಐಕ್ - ಬಿಸ್ಮಾರ್ಕ್ ಎಂಡ್ ದಿ ಜರ್ಮನ್ ಎಂಪಾಯರ್

೧೨. ಸೊಬೊಲೆವ್ ಪಿ.ಎಸ್. ಮತ್ತು ಇತರರು - ಅಕ್ಟೋಬರ್ ಕ್ರಾಂತಿಯ ಇತಿಹಾಸ, ಅನು: ಮಾಧವ ಮತ್ತು ಇತರರು

೧೩. ಹೇಸ್ ಸಿ.ಜೆ.ಹೆಚ್ - ಮಾಡರ್ನ್ ಯುರೋಪ್ ಟು ೧೮೭೦

೧೪. ಫಿಶರ್ ಹೆಚ್.ಎ.ಯಲ್ - ಎ ಹಿಸ್ಟರಿ ಆಫ್ ಯುರೋಪ್

೧೫. ಕೆಟಲ್‌ಬಿ ಸಿ.ಡಿ.ಎಂ - ಎ ಹಿಸ್ಟರಿ ಆಫ್ ಮಾಡರ್ನ್ ಟೈಮ್ಸ್

೧೬. ಹೇಜನ್ ಸಿ.ಡಿ - ಮಾಡರ್ನ್ ಯುರೋಪ್ ಅಪ್ ಟು ೧೯೪೫

೧೭. ತಂಬಂಡ ವಿಜಯ್ ಪೂಣಚ್ಚ (ಸಂ.) - **ಚರಿತ್ರೆ ವಿಶ್ವಕೋಶ**

೧೮. ಚಂದ್ರಶೇಖರ್ ಎಸ್ (ಸಂ.) - **ಇತಿಹಾಸ**

ಮಾದರಿ ಪ್ರಶ್ನೆಗಳು

I. ಒಂದು ವಾಕ್ಯದಲ್ಲಿ ಉತ್ತರಿಸಿ. (೧ ಅಂಕ)

೧. ಅಮೆರಿಕಾದಲ್ಲಿ ಒಟ್ಟು ಎಷ್ಟು ವಸಾಹತುಗಳಿದ್ದವು?

೨. 'ಬೋಸ್ಟನ್ ಟೀ ಪಾರ್ಟಿ' ಘಟನೆ ನಡೆದ ವರ್ಷ ಯಾವುದು?

೩. ಅಮೆರಿಕನ್ನರು ಯಾರ ನೇತೃತ್ವದಲ್ಲಿ ಬ್ರಿಟಿಷರನ್ನು ಎದುರಿಸಿದರು?

೪. ಫ್ರಾನ್ಸಿನ ಕ್ರಾಂತಿ ಆರಂಭಗೊಂಡ ಸಂದರ್ಭದಲ್ಲಿ ಫ್ರಾನ್ಸನ್ನು ಆಳುತಿದ್ದ ಅರಸನ ಹೆಸರೇನು?

೫. ಫ್ರಾನ್ಸನ್ನು ಆಳುತ್ತಿದ್ದ ಅರಸರ ವಂಶದ ಹೆಸರೇನು?

೬. ಫ್ರಾನ್ಸ್‌ನ ಸಮಾಜ ಎಷ್ಟು ವರ್ಗಗಳಾಗಿ ವಿಭಜನೆಗೊಂಡಿತ್ತು?

೭. 'ಸ್ಪಿರಿಟ್ ಆಫ್ ದಿ ಲಾಸ್' ಕೃತಿಯನ್ನು ರಚಿಸಿದ ಫ್ರೆಂಚ್ ತತ್ವಜ್ಞಾನಿಯ ಹೆಸರೇನು?

೮. ಫ್ರಾನ್ಸಿನ ಕ್ರಾಂತಿಯ ಬೈಬಲ್ ಎಂದೇ ಕರೆಯಲಾಗುವ ರೂಸೋನ ಕೃತಿಯ ಹೆಸರೇನು?

೯. ರಾಬಿಸ್ಪಿಯರ್ ಫ್ರಾನ್ಸಿನ ಯಾವ ಕ್ಲಬ್‌ಗೆ ಸೇರಿದವನು?

೧೦. ನೆಪೋಲಿಯನ್ ಬೋನಾಪಾರ್ಟೆ ಯಾವ ವರ್ಷದಲ್ಲಿ ಫ್ರಾನ್ಸ್‌ನ ಚರ್ಕವರ್ತಿಯಾದ?

೧೧. ನೆಪೋಲಿಯನ್ ಇಂಗ್ಲೆಂಡಿನ ವಿರುದ್ಧ ನಡೆಸಿದ ಆರ್ಥಿಕ ಯುದ್ಧದ ಹೆಸರೇನು?

೧೨. ನೆಪೋಲಿಯನ್ ಯಾವ ಯುದ್ಧದಲ್ಲಿ ಸಂಪೂರ್ಣವಾಗಿ ಸೋತು ಶರಣಾದನು?

೧೩. ಮ್ಯಾಜಿನಿ ಇಟಲಿಯಲ್ಲಿ ಹುಟ್ಟುಹಾಕಿದ ಸಂಸ್ಥೆಯ ಹೆಸರೇನು?

೧೪. ಇಟಲಿಯ ಏಕೀಕರಣ ಖಡ್ಗಬಲದಿಂದ ಮಾತ್ರ ಸಾಧ್ಯ ಎಂದವನು ಯಾರು?

೧೫. ರೋಮ್ ಯಾವ ದೇಶದ ರಾಜಧಾನಿ?

೧೬. ಜರ್ಮನ್ ಸಾಮ್ರಾಜ್ಯದ ಮೊದಲ ಚಕ್ರವರ್ತಿಯ ಹೆಸರೇನು?

೧೭. 'ಆಧುನಿಕ ಜರ್ಮನಿಯ ನಿರ್ಮಾಪಕ'ನೆಂದು ಯಾರನ್ನು ಕರೆಯುತ್ತಾರೆ?

೧೮. ರಷ್ಯಾದ ಅರಸರನ್ನು ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು?

೧೯. 'ವೈಜ್ಞಾನಿಕ ಸಮಾಜವಾದ'ವನ್ನು ಪ್ರತಿಪಾದಿಸಿದವನು ಯಾರು?

೨೦. ರಷ್ಯಾದಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದವನು ಯಾರು?

II. ಎರಡು ವಾಕ್ಯಗಳಲ್ಲಿ ಉತ್ತರಿಸಿ (೨ ಅಂಕಗಳು)

೧. ಅಮೆರಿಕಾದಲ್ಲಿ ವಸಾಹತುಗಳನ್ನು ಹೊಂದಿದ್ದ ಯುರೋಪಿನ ಎರಡು ರಾಷ್ಟ್ರಗಳನ್ನು ಹೆಸರಿಸಿ.

೨. ಅಮೆರಿಕಾದ ಯಾವುದಾದರೂ ಎರಡು ವಸಾಹತುಗಳನ್ನು ಹೆಸರಿಸಿ.

೩. ಟೌನ್‌ಶೆಂಡ್ ಯಾರು? ಆತ ಜಾರಿಗೊಳಿಸಿದ ಕಾಯ್ದೆಯ ಹೆಸರೇನು?

೪. ಬಿಲ್ ಆಫ್ ರೈಟ್ಸ್ ಅಥವಾ ಹಕ್ಕುಗಳ ಶಾಸನ ಎಂದರೇನು?
೫. ಫ್ರಾನ್ಸಿನಲ್ಲಿದ್ದ ಮೂರು ವರ್ಗಗಳು ಯಾವುವು?
೬. ಫ್ರಾನ್ಸಿನ ಮೂರು ತತ್ವಜ್ಞಾನಿಗಳ ಹೆಸರನ್ನು ತಿಳಿಸಿ.
೭. ಫ್ರಾನ್ಸಿನ ರಾಷ್ಟ್ರೀಯ ಸಭೆಯ ಯಾವುದಾದರೂ ಒಂದು ಸಾಧನೆಯನ್ನು ತಿಳಿಸಿ.
೮. ಫ್ರಾನ್ಸಿನ ಕ್ರಾಂತಿಯಲ್ಲಿ ಪಾಲ್ಗೊಂಡ ಕ್ಲಬ್‌ಗಳನ್ನು ಹೆಸರಿಸಿ.
೯. ನೆಪೋಲಿಯನ್ ಮತ್ತು ನೆಲ್ಸನ್ನನ ನಡುವೆ ನೌಕಾಯುದ್ಧ ಎಲ್ಲಿ ಮತ್ತು ಯಾವಾಗ ನಡೆಯಿತು?
೧೦. ನೆಪೋಲಿಯನ್ನನ ವಿರುದ್ಧದ ನಾಲ್ಕನೆಯ ಒಕ್ಕೂಟದಲ್ಲಿ ಯುರೋಪಿನ ಯಾವ ಯಾವ ರಾಷ್ಟ್ರಗಳಿದ್ದವು?
೧೧. ಇಟಲಿಯು ತನ್ನ ಏಕೀಕರಣಕ್ಕಾಗಿ ಯಾವ ಯಾವ ರಾಷ್ಟ್ರಗಳ ವಿರುದ್ಧ ಯುದ್ಧ ಮಾಡಿತು?
೧೨. ಇಟಲಿಯ ಏಕೀಕರಣದ ರೂವಾರಿಗಳನ್ನು ಹೆಸರಿಸಿ.
೧೩. ಆಸ್ಟ್ರಿಯಾದ ಅಧೀನದಲ್ಲಿದ್ದ ಇಟಲಿಯ ಪ್ರಾಂತ್ಯಗಳು ಯಾವುವು?
೧೪. ಬಿಸ್ಮಾರ್ಕ್ ಜರ್ಮನಿಯ ಏಕೀಕರಣಕ್ಕೆ ಯಾವ ನೀತಿಯನ್ನು ಅನುಸರಿಸಿದನು?
೧೫. ಬಿಸ್ಮಾರ್ಕ್ ಡೆನ್ಮಾರ್ಕ್‌ನೊಡನೆ ಯುದ್ಧ ಮಾಡಲು ಕಾರಣವಾದ ಎರಡು ಪ್ರಾಂತ್ಯಗಳು ಯಾವುವು?
೧೬. ಕಾರ್ಲ್‌ಮಾರ್ಕ್ಸ್‌ನ ಎರಡು ಕೃತಿಗಳನ್ನು ಹೆಸರಿಸಿ.
೧೭. ರಷ್ಯಾದ ಕ್ರಾಂತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಎರಡು ಪಕ್ಷಗಳು ಯಾವುವು?
೧೮. ಲೆನಿನ್ ತನ್ನ ಆರ್ಥಿಕ ನೀತಿಯಲ್ಲಿ ಒತ್ತುಕೊಟ್ಟ ಮೂರು ಪ್ರಮುಖ ವಿಚಾರಗಳು ಯಾವುವು?

III. ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ (೫ ಅಂಕಗಳು)

೧. ಅಮೆರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ.
೨. 'ಪ್ರಾತಿನಿಧ್ಯವಿಲ್ಲದೆ ತೆರಿಗೆ ಇಲ್ಲ' ಎನ್ನುವ ಅಮೆರಿಕಾ ವಸಾಹತುಗಳ ತೀರ್ಮಾನವನ್ನು ಚರ್ಚಿಸಿ.
೩. ಜಾರ್ಜ್ ವಾಷಿಂಗ್‌ಟನ್‌ನ ನೇತೃತ್ವದಲ್ಲಿ ನಡೆದ ಅಮೆರಿಕಾ ಸ್ವಾತಂತ್ರ್ಯ ಹೋರಾಟದ ಕೆಲವು ಪ್ರಮುಖ ಘಟನೆಗಳನ್ನು ತಿಳಿಸಿ.
೪. ಫ್ರಾನ್ಸಿನ ಕ್ರಾಂತಿಗೆ ಕಾರಣವಾದ 'ಹಳೆಯ ಆಳ್ವಿಕೆ'ಯ ಕುರಿತು ಬರೆಯಿರಿ.
೫. ಫ್ರೆಂಚ್ ತತ್ವಜ್ಞಾನಿ ಮಾಂಟೆಸ್ಕ್ಯೂ ಪ್ರತಿಪಾದಿಸಿದ ಅಧಿಕಾರದ ವಿಭಜನೆಯ ಕುರಿತು ಬರೆಯಿರಿ.
೬. ಫ್ರಾನ್ಸಿನಲ್ಲಿ ನಡೆದ 'ಸೆಪ್ಟೆಂಬರ್ ಕಗ್ಗೊಲೆ'ಗೆ ಕಾರಣಗಳನ್ನು ತಿಳಿಸಿ.
೭. ಫ್ರಾನ್ಸಿನ ಕ್ರಾಂತಿಯ ಪರಿಣಾಮಗಳನ್ನು ವಿವರಿಸಿ.

೮. ನೆಪೋಲಿಯನ್ನನ ಆಡಳಿತ ಸುಧಾರಣೆಗಳನ್ನು ತಿಳಿಸಿ.
೯. ನೆಪೋಲಿಯನ್ನನ ರಷ್ಯಾ ದಂಡಯಾತ್ರೆಯ ಪರಿಣಾಮಗಳ ಬಗ್ಗೆ ಬರೆಯಿರಿ.
೧೦. ಇಟಲಿಯ ಏಕೀಕರಣ ಹೋರಾಟದಲ್ಲಿ ಕೆವೂರ್‌ನ ಪಾತ್ರದ ಕುರಿತು ಬರೆಯಿರಿ.
೧೧. ಇಟಲಿಯ ಏಕೀಕರಣಕ್ಕಾಗಿ ಗ್ಯಾರಿಬಾಲ್ಡಿಯು ನಡೆಸಿದ ಹೋರಾಟದ ಬಗ್ಗೆ ತಿಳಿಸಿ.
೧೨. ಜರ್ಮನಿಯ ಏಕೀಕರಣ ಹೋರಾಟದಲ್ಲಿ ಫ್ರಾಂಕ್‌ಫರ್ಟ್ ಪಾರ್ಲಿಮೆಂಟ್ ನಿರ್ವಹಿಸಿದ ಕೆಲಸ ಕಾರ್ಯಗಳೇನು?
೧೩. ಬಿಸ್ಮಾರ್ಕ್‌ನ 'ರಕ್ತ ಮತ್ತು ಕತ್ತಿ' ನೀತಿಯ ಕುರಿತು ಬರೆಯಿರಿ.
೧೪. ರಷ್ಯಾದ ಕ್ರಾಂತಿಗೆ ಕಾರಣವಾದ ಕಾರ್ಲ್ ಮಾರ್ಕ್ಸ್‌ನ ಚಿಂತನೆಗಳನ್ನು ವಿವರಿಸಿ.
೧೫. ಲೆನಿನ್ ನೇತೃತ್ವದ ಬೋಲ್‌ಶೆವಿಕ್ ಹೋರಾಟದ ಕುರಿತು ಚರ್ಚಿಸಿ.

IV. ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ. (೧೦ ಅಂಕಗಳು)

೧. ಅಮೆರಿಕಾದ ಹದಿಮೂರು ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವನ್ನು ವಿವರಿಸಿ.
೨. ಜಾರ್ಜ್ ವಾಷಿಂಗ್‌ಟನ್‌ನ ನೇತೃತ್ವದಲ್ಲಿ ಇಂಗ್ಲೆಂಡ್‌ನ ವಿರುದ್ಧ ನಡೆದ ಯುದ್ಧದ ಕುರಿತು ಬರೆಯಿರಿ.
೩. ಅಮೆರಿಕಾ ಸ್ವಾತಂತ್ರ್ಯ ಹೋರಾಟದ ಪರಿಣಾಮಗಳನ್ನು ಚರ್ಚಿಸಿ.
೪. ಫ್ರಾನ್ಸಿನ ಕ್ರಾಂತಿಗೆ ಕಾರಣವಾದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಬೌದ್ಧಿಕ ಅಂಶಗಳ ಕುರಿತು ಬರೆಯಿರಿ.
೫. ಫ್ರಾನ್ಸಿನ ಕ್ರಾಂತಿಯ ಸಂದರ್ಭದಲ್ಲಿ ರಾಷ್ಟ್ರೀಯ ಸಭೆಯಿಂದ ಡೈರೆಕ್ಟರಿಯವರೆಗೆ ನಡೆದ ಘಟನೆಗಳನ್ನು ವಿವರಿಸಿ.
೬. ಫ್ರಾನ್ಸಿನ ಕ್ರಾಂತಿಯ ಪರಿಣಾಮಗಳನ್ನು ಚರ್ಚಿಸಿ.
೭. ನೆಪೋಲಿಯನ್ ಬೋನಾಪಾರ್ಟೆಯ 'ಖಂಡಾಂತರ ಪದ್ಧತಿ'ಯನ್ನು ವಿವರಿಸಿ.
೮. ನೆಪೋಲಿಯನ್ನನ ಯುದ್ಧಗಳ ಕುರಿತು ಬರೆಯಿರಿ.
೯. ಇಟಲಿಯ ಏಕೀಕರಣದಲ್ಲಿ ಮ್ಯಾಜಿನಿ, ಕೆವೂರ್, ಇಮ್ಮಾನ್ಯುಯಲ್ ಮತ್ತು ಗ್ಯಾರಿಬಾಲ್ಡಿ ಇವರ ಪಾತ್ರದ ಕುರಿತು ಬರೆಯಿರಿ.
೧೦. ಜರ್ಮನಿಯ ಏಕೀಕರಣದ ವಿವಿಧ ಹಂತಗಳನ್ನು ವಿವರಿಸಿ.
೧೧. ಜರ್ಮನಿಯ ಏಕೀಕರಣದಲ್ಲಿ ಬಿಸ್ಮಾರ್ಕ್‌ನ ಪಾತ್ರದ ಕುರಿತು ಬರೆಯಿರಿ.
೧೨. ರಷ್ಯಾದ ಕ್ರಾಂತಿಗೆ ಕಾರಣವಾದ ಅಂಶಗಳ ಕುರಿತು ಬರೆಯಿರಿ.
೧೩. ರಷ್ಯಾದ ಕ್ರಾಂತಿಯ ಪ್ರಮುಖ ಘಟನೆಗಳನ್ನು ತಿಳಿಸಿ.
೧೪. ಲೆನಿನ್‌ನ 'ಹೊಸ ಆರ್ಥಿಕ ನೀತಿ'ಯ ಕುರಿತು ಬರೆಯಿರಿ.

V. ಹೆಚ್ಚಿನ ಜ್ಞಾನಕ್ಕಾಗಿ ಕಾರ್ಯ-ಯೋಜನೆಗಳು (Assignments/Projects)

೧. ಅಮೆರಿಕಾದ ನಕಾಶೆಯಲ್ಲಿ ಹದಿಮೂರು ವಸಾಹತುಗಳನ್ನು ಗುರುತಿಸಿ, ಸಂಕ್ಷಿಪ್ತ ವಿವರಣೆ ನೀಡಿ.

೨. ಜಾರ್ಜ್ ವಾಷಿಂಗ್‌ಟನ್‌ನ ಜೀವನ ಮತ್ತು ಸಾಧನೆಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ.

೩. ಅಮೆರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ.

೪. ಫ್ರೆಂಚ್ ತತ್ವಜ್ಞಾನಿಗಳ ಪ್ರಸಿದ್ಧ ಹೇಳಿಕೆಗಳನ್ನು ಪಟ್ಟಿಮಾಡಿ.

೫. ಫ್ರಾನ್ಸಿನ ನಕ್ಷೆಯಲ್ಲಿ ಕ್ರಾಂತಿ ನಡೆದ ಸ್ಥಳಗಳನ್ನು ಗುರುತಿಸಿ.

೬. ಫ್ರಾನ್ಸಿನ ಕ್ರಾಂತಿಯ ಪ್ರಮುಖ ನಾಯಕರುಗಳ ಭಾವಚಿತ್ರಗಳನ್ನು ಸಂಗ್ರಹಿಸಿ.

೭. ನೆಪೋಲಿಯನ್ ಬೋನಾಪಾರ್ಟೆಯ ಸುಧಾರಣೆಗಳ ಕುರಿತು ಪ್ರಬಂಧವೊಂದನ್ನು ಸಿದ್ಧಪಡಿಸಿ.

೮. ನೆಪೋಲಿಯನ್ನನ ರಾಜ್ಯ ವಿಸ್ತರಣೆಯ ಕುರಿತಾದ ಭೂಪಟಗಳನ್ನು ತಯಾರಿಸಿ.

೯. ಮ್ಯಾಜಿನಿ, ಕೆವೂರ್ ಮತ್ತು ಗ್ಯಾರಿಬಾಲ್ಡಿ ಇವರುಗಳ ಭಾವಚಿತ್ರಗಳನ್ನು ಸಂಗ್ರಹಿಸಿ.

೧೦. ಇಟಲಿಯಲ್ಲಿ ಮ್ಯಾಜಿನಿ ಹುಟ್ಟುಹಾಕಿದ 'ಯಂಗ್ ಇಟಲಿ' ಸಂಸ್ಥೆಯ ಕುರಿತು ಪ್ರಬಂಧ ಬರೆಯಿರಿ.

೧೧. ಇಟಲಿಯ ಏಕೀಕರಣದ ಭೂಪಟವನ್ನು ತಯಾರಿಸಿ.

೧೨. ಬಿಸ್ಮಾರ್ಕ್‌ನ ಸಾಧನೆಗಳ ಕುರಿತು ಪ್ರಬಂಧ ಬರೆಯಿರಿ.

೧೩. ಜರ್ಮನಿಯ ಏಕೀಕರಣದ ಭೂಪಟವನ್ನು ತಯಾರಿಸಿ

೧೪. ರಷ್ಯಾದ ಕ್ರಾಂತಿಯಲ್ಲಿ ಲೆನಿನ್ ಪಾತ್ರವನ್ನು ಕುರಿತು ಪ್ರಬಂಧ ಸಿದ್ಧಪಡಿಸಿ.

೧೫. ಕಾರ್ಲ್‌ಮಾರ್ಕ್ಸ್, ಲೆನಿನ್ ಮತ್ತು ಸ್ಟಾಲಿನ್ ಇವರುಗಳ ಭಾವಚಿತ್ರಗಳನ್ನು ಸಂಗ್ರಹಿಸಿ.

III ಜಗತ್ತಿನ ಮಹಾಯುದ್ಧಗಳು ಹಾಗೂ ಅಂತರ್‌ರಾಷ್ಟ್ರೀಯ ಸಂಘ-ಸಂಸ್ಥೆಗಳು

ಅಧ್ಯಾಯ ೩

೩.೧ ಮೊದಲನೆಯ ಮಹಾಯುದ್ಧ (೧೯೧೪-೧೯೧೮)

ಈ ಹಿಂದೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ನಡೆದ ಯುದ್ಧಗಳಿಗಿಂತ ೧೯೧೪-೧೮ರ ಮಧ್ಯೆ ನಡೆದ ಯುದ್ಧವು ವ್ಯಾಪಕವೂ, ದೀರ್ಘಗಾಮಿ ಪರಿಣಾಮಗಳನ್ನು ಬೀರುವಂಥಾದ್ದು ಆಗಿತ್ತು. ಜಗತ್ತು ಮೊದಲ ಬಾರಿಗೆ ಈ ಯುದ್ಧದ ದೆಸೆಯಿಂದ ಅನೇಕ ಭೀಕರ ಘಟನಾವಳಿಗಳಿಗೆ ಸಾಕ್ಷಿಯಾಯಿತು. ಮೊದಲಿನಿಂದಲೂ ಯುರೋಪ್ ಅನೇಕ ಕ್ರಾಂತಿಗಳಿಗೆ, ಸಿದ್ಧಾಂತಗಳಿಗೆ ಕೇಂದ್ರವಾಗಿತ್ತು. ಅವು ಇಡೀ ಜಗತ್ತಿನ ಮೇಲೆ ಪ್ರಭಾವ ಬೀರಿವೆ. ಸುಮಾರು ೪ ವರ್ಷ ೩ ತಿಂಗಳ ಕಾಲ ನಡೆದ ಈ ಪ್ರಥಮ ವಿಶ್ವ ಯುದ್ಧಕ್ಕೂ ಯುರೋಪೇ ರಂಗಭೂಮಿಯಾಗಿತ್ತು. ಯುದ್ಧ ಆರಂಭವಾದಾಗ ಅದು ಬೇಗನೇ ಮುಗಿಯುತ್ತದೆಂದು ಬಹುತೇಕ ಜಗತ್ತು ನಂಬಿತ್ತು. ೧೯೧೪ ಜುಲೈ, ೨೮ ರಂದು ಆಸ್ಟ್ರಿಯಾ-ಹಂಗೇರಿಗಳು ಸರ್ಬಿಯಾದ ಮೇಲೆ ದಾಳಿ ಮಾಡುವುದರೊಂದಿಗೆ ಯುದ್ಧ ಆರಂಭವಾಯಿತು. ನಂತರ ಜರ್ಮನಿ ಆಗಸ್ಟ್ ೧ ರಂದು ರಷ್ಯಾ ವಿರುದ್ಧವೂ, ಆಗಸ್ಟ್ ೩ ರಂದು ಫ್ರಾನ್ಸ್ ವಿರುದ್ಧವೂ ಯುದ್ಧ ಆರಂಭಿಸಿದರೆ, ಗ್ರೇಟ್ ಬ್ರಿಟನ್ ಆಗಸ್ಟ್ ೪ ರಂದು ಜರ್ಮನಿ ವಿರುದ್ಧ ಯುದ್ಧ ಘೋಷಿಸಿತು. ಆ ವೇಳೆಗೆ ೭ ದೇಶಗಳು ಮಾತ್ರ ಯುದ್ಧದಲ್ಲಿ ಪಾಲ್ಗೊಂಡಿದ್ದವು. ನಂತರದ ದಿನಗಳಲ್ಲಿ ಬಹುತೇಕ ಎಲ್ಲಾ ದೇಶಗಳನ್ನು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಯುದ್ಧ ರಂಗಕ್ಕೆ ಎಳೆದು ತರಲಾಯಿತು. ಅನೇಕ ತಟಸ್ಥ ರಾಷ್ಟ್ರಗಳು ಕೂಡ ಯುದ್ಧಭೂಮಿಗಳಾಗಿ ಪರಿವರ್ತಿತವಾದವು.

ಯುದ್ಧ ಆರಂಭವಾದಾಗ ಯುರೋಪಿನ ರಾಷ್ಟ್ರಗಳು ಎರಡು ಗುಂಪುಗಳಾಗಿ ರೂಪುಗೊಂಡವು. ಸರ್ಬಿಯಾ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮತ್ತು ರುಮೇನಿಯಗಳು ಮಿತ್ರ ರಾಷ್ಟ್ರಗಳಾದವು. ಆಸ್ಟ್ರಿಯಾ, ಹಂಗೇರಿ, ಜರ್ಮನಿ, ಟರ್ಕಿ ಮತ್ತು ಬಲ್ಗೇರಿಯಾಗಳು ಕೇಂದ್ರಶಕ್ತಿಗಳಾಗಿ (Central Powers) ಒಗ್ಗೂಡಿದವು. ಆರಂಭದ ದಿನಗಳಲ್ಲಿ ಪರಿಸ್ಥಿತಿ ಮಿತ್ರ ಪಡೆಗಳಿಗೆ ಅನುಕೂಲಕರವಾಗಿದ್ದರೆ, ನಂತರದ ದಿನಗಳಲ್ಲಿ ವಿರುದ್ಧವಾದ ಬೆಳವಣಿಗೆಗಳಾದವು. ಬೋಲ್ಷೆವಿಕ್ ಕ್ರಾಂತಿಯ ಪರಿಣಾಮವಾಗಿ ರಷ್ಯಾ ಯುದ್ಧರಂಗದಿಂದ

ಹಿಂತೆಗೆದಿದ್ದು ಮತ್ತು ಜರ್ಮನಿಯೊಂದಿಗೆ ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದಕ್ಕೆ ಸಹಿ ಹಾಕಿದ್ದು (೧೯೧೭) ಮಿತ್ರಪಡೆಗಳಿಗೆ ಬಿದ್ದ ಬಹುದೊಡ್ಡ ಹೊಡೆತವಾಗಿತ್ತು. ಜರ್ಮನ್ನರ ಸಬ್ ಮೇರಿನ್ ಯುದ್ಧ ತಂತ್ರವು ೧೯೧೭ ಜನವರಿಯಲ್ಲಿ ಅಮೆರಿಕಾವನ್ನು ಯುದ್ಧಕ್ಕೆ ಪ್ರವೇಶಿಸುವಂತೆ ಮಾಡಿತು. ಅಮೆರಿಕಾ ಯುದ್ಧರಂಗವನ್ನು ಪ್ರವೇಶಿಸಿದ್ದು ಸೋಲಿನ ಅಂಚಿನಲ್ಲಿದ್ದ ಮಿತ್ರಪಡೆಗಳನ್ನು ರಕ್ಷಿಸಿದ್ದಲ್ಲದೆ, ಅಂತಿಮವಾಗಿ ಜರ್ಮನಿ ಮತ್ತು ಅದರ ಮಿತ್ರರ ಸೋಲಿಗೆ ಕಾರಣವಾಯಿತು.

ಈ ಯುದ್ಧದ ಮಾದರಿಯು ವಿಶಿಷ್ಟವಾಗಿದ್ದು, ಆಧುನಿಕ ತಂತ್ರಜ್ಞಾನದ ಮೂಲಗಳನ್ನು ಸಾದ್ಯಂತವಾಗಿ ಬಳಸಿಕೊಂಡು ಅನೇಕ ದೇಶಗಳನ್ನು, 'ಶಸ್ತ್ರಾಸ್ತ್ರಗಳಡಿಯಲ್ಲಿ ರಾಷ್ಟ್ರಗಳು' ಎಂಬ ಪರಿಕಲ್ಪನೆಯಡಿ ಬರುವಂತೆ ಮಾಡಿತು. ತನ್ನ ಭೀಕರತೆಯಿಂದಾಗಿ ಈ ಯುದ್ಧವು ಯುರೋಪಿನ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಈ ಯುದ್ಧವು ಅಲ್ಲಿಯವರೆಗೆ ಬಳಸದೆ ಇದ್ದಂತಹ ವಿನಾಶಕಾರಕ ಸ್ಫೋಟಕಗಳು, ಬಾಂಬುಗಳು ಮುಂತಾದ ಶಸ್ತ್ರಾಸ್ತ್ರಗಳನ್ನು ಬಳಸಿತು. ಜರ್ಮನಿಯ 'U' ಬೋಟುಗಳು ಬಳಸಿದ (ಸಬ್‌ಮೇರಿನ್ಸ್) ಜಲಾಂತರ್ಗಾಮಿಗಳು, ಮಿತ್ರರಾಷ್ಟ್ರಗಳ ಯುದ್ಧ ನೌಕೆಗಳಿಗೆ ಮತ್ತು ವಾಣಿಜ್ಯ ನೌಕೆಗಳಿಗೆ ತೀವ್ರ ತರಹದ ಹಾನಿಯನ್ನುಂಟು ಮಾಡಿದವು. ಬೃಹತ್ ಪ್ರಮಾಣದಲ್ಲಿ ನಾಗರಿಕರು ಕೂಡ ಈ ಯುದ್ಧದಿಂದ ನಾಶ ಹೊಂದಿದರು. ಅನೇಕ ರಾಷ್ಟ್ರಗಳ ಆರ್ಥಿಕತೆಯನ್ನು ಈ ಯುದ್ಧವು ನಾಶಮಾಡಿತು. ಆರ್ಥಿಕ ದೃಷ್ಟಿಯಿಂದ ಯಾವ ದೇಶವೂ ಯುದ್ಧದಲ್ಲಿ ವಿಜಯಶಾಲಿಯಾಗಲಿಲ್ಲ. ಈ ಯುದ್ಧ ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯಗಳ ಮತ್ತು ರಾಜಕೀಯ ವ್ಯವಸ್ಥೆಗಳ ಅಂತ್ಯಕ್ಕೂ ಕಾರಣವಾಯಿತು. ಇಂಥ ಭೀಕರ ಯುದ್ಧಕ್ಕೆ ಅನೇಕ ಅಂಶಗಳು ಪ್ರೇರಕವಾಗಿದ್ದವು.

ಕಾರಣಗಳು

೧. ಆರ್ಥಿಕ ಸಾಮ್ರಾಜ್ಯಶಾಹಿತ್ವ

ಕೈಗಾರಿಕಾ ಕ್ರಾಂತಿಯು ಯುರೋಪಿನಲ್ಲಿ ಕೈಗಾರಿಕೀಕರಣಕ್ಕೆ ಒಳಗಾಗಿದ್ದ ರಾಷ್ಟ್ರಗಳ ನಡುವೆ ವೈಮನಸ್ಯಕ್ಕೆ ಕಾರಣವಾಯಿತು. ಇಂಥ ರಾಷ್ಟ್ರಗಳು ಮಾರುಕಟ್ಟೆಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಿಸಿದವು. ಮಾರುಕಟ್ಟೆಗಳಿಗಾಗಿ ನಡೆದ ಈ ಪೈಪೋಟಿ, ವಸಾಹತುಗಳನ್ನು ಹೊಂದುವ ಪೈಪೋಟಿಗೆ ಕಾರಣವಾಗಿ ತನ್ಮೂಲಕ ಆರ್ಥಿಕ ಸಾಮ್ರಾಜ್ಯ ಶಾಹಿತ್ವದ ಉಗಮಕ್ಕೆ ಕಾರಣವಾಯಿತು. ಪ್ರತಿಯೊಂದು ವಸಾಹತುಶಾಹಿ ರಾಷ್ಟ್ರವು ಜಗತ್ತಿನ ವಿವಿಧ ಭಾಗಗಳಲ್ಲಿ ತಮ್ಮ ಪ್ರಭಾವ ವಲಯವನ್ನು ಸ್ಥಾಪಿಸಿದ್ದು, ಈ ರಾಷ್ಟ್ರಗಳ ನಡುವಿನ ಸಂಬಂಧ ಹದಗೆಡಲು ಕಾರಣವಾಯಿತು.

೨. ಶಸ್ತ್ರಾಸ್ತ್ರಗಳ ಪೈಪೋಟಿ

ಯುರೋಪಿನ ರಾಷ್ಟ್ರಗಳ ನಡುವಿನ ಆರ್ಥಿಕ ಪೈಪೋಟಿಯು ಶಸ್ತ್ರಾಸ್ತ್ರಗಳ ಸ್ಪರ್ಧೆಗೆ ನಾಂದಿ ಹಾಡಿತು. ೧೯ನೆಯ ಶತಮಾನದಿಂದಲೇ ಯುರೋಪಿನಲ್ಲಿ ಸೈನಿಕತ್ವ ತೀವ್ರವಾಗಿ

ಏಳಿಗೆಯಾಗುತ್ತಿತ್ತು. ಪ್ರಷ್ಯಾ ಮುಂತಾದ ರಾಷ್ಟ್ರಗಳು ತಮ್ಮ ನೆರೆಹೊರೆಯ ರಾಷ್ಟ್ರಗಳ ವಿರುದ್ಧದ ಯುದ್ಧಗಳಲ್ಲಿ ಸೈನ್ಯವನ್ನು ಸಮರ್ಥವಾಗಿ ಬಳಸಿದವು. ೧೯ನೆಯ ಶತಮಾನ ದುದ್ದಕ್ಕೂ ಸೈನಿಕ ಮತ್ತು ನೌಕಾದಳದ ವಿಸ್ತರಣೆಯಲ್ಲಿ ಗಂಭೀರ ಪೈಪೋಟಿ ಕಂಡು ಬಂದಿತು. ಶಸ್ತ್ರಾಸ್ತ್ರಗಳ ಉತ್ಪಾದನೆ ತೀವ್ರವಾಯಿತು. ಪರಸ್ಪರರ ಮೇಲಿದ್ದ ಅಪನಂಬಿಕೆ, ಭಯ ಮತ್ತು ದ್ವೇಷಾಸೂಯೆಗಳು, ಯುರೋಪಿನ ರಾಷ್ಟ್ರಗಳನ್ನು ಸದಾ ಯುದ್ಧ ಸನ್ನದ್ಧವಾಗಿರುವಂತೆ ಮಾಡಿದ್ದವು. ಈ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಗಮನಾರ್ಹವಾಗಿತ್ತು. ಸಮೂಹನಾಶಕ, ವಿಧ್ವಂಸಕ ಅಸ್ತ್ರಗಳ ತಯಾರಿಕೆಯಲ್ಲಿ ವಿಜ್ಞಾನಿಗಳು ಮಹತ್ವದ ಪಾತ್ರ ನಿರ್ವಹಿಸಿದರು. ಇದು ರಾಷ್ಟ್ರಗಳ ನಡುವೆ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಹೆಚ್ಚಿಸಿತು.

೩. ವಿವೇಚನಾ ರಹಿತ ರಾಷ್ಟ್ರೀಯತೆ

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ತೀವ್ರತರವಾದ ಅಂಧ ರಾಷ್ಟ್ರಾಭಿಮಾನ ಬೆಳವಣಿಗೆಯಾಗಿದ್ದು, ಮೊದಲನೆಯ ಮಹಾಯುದ್ಧಕ್ಕೆ ಪ್ರಚೋದನೆ ನೀಡಿದ ಒಂದು ಅಂಶವಾಗಿದೆ. ಮುಖ್ಯವಾಗಿ ಹೊಸದಾಗಿ ಉದ್ಭವಿಸಿದ ಅಥವಾ ಸ್ವತಂತ್ರವಾದ ರಾಷ್ಟ್ರಗಳಲ್ಲಿ ಈ ತೆರನಾದ ಭಾವನೆ ಹೆಚ್ಚಾಗಿತ್ತು. ತನ್ನ ದೇಶವನ್ನು ಪ್ರೀತಿಸುವುದೆಂದರೆ ಮತ್ತೊಂದು ರಾಷ್ಟ್ರವನ್ನು ದ್ವೇಷಿಸುವುದು ಎಂಬಂಥ ಪರಿಸ್ಥಿತಿ ಜರ್ಮನಿ ಮತ್ತು ಫ್ರಾನ್ಸ್‌ಗಳ ನಡುವೆ ನಿರ್ಮಾಣವಾಗಿತ್ತು. ಈ ತೀವ್ರತರವಾದ ರಾಷ್ಟ್ರೀಯತೆ, ವೈಷಮ್ಯಗಳಿಗೆ ಎಡೆಮಾಡಿಕೊಟ್ಟಿತು. ಸರ್ಬಿಯಾದಲ್ಲಿ ಬೆಳೆದ ತೀವ್ರ ರಾಷ್ಟ್ರಪ್ರೇಮದಿಂದಾಗಿ ಆಸ್ಟ್ರಿಯಾ, ಹಂಗೇರಿಗಳೊಂದಿಗಿನ ಸಂಬಂಧ ಹದಗೆಡಲು ಕಾರಣವಾಯಿತು. ಅದೇ ರೀತಿಯ ವೈಷಮ್ಯ ಜರ್ಮನಿ ಮತ್ತು ಬ್ರಿಟನ್‌ಗಳ ನಡುವೆ ಉಂಟಾಯಿತು. ಈ ಹೆಚ್ಚಿದ 'ದೇಶಭಕ್ತಿ ಮತ್ತು ರಾಷ್ಟ್ರಾಭಿಮಾನವು ಕೆಲವು ರಾಷ್ಟ್ರಗಳಲ್ಲಿ ಮೇಲರಿಮೆಯನ್ನು ಉಂಟುಮಾಡಿದವು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಜರ್ಮನಿಯ ಸಾಮ್ರಾಟ **೨ನೇ ವಿಲಿಯಂ ಕೈಸರ್**. ಆತ **ವಿಶ್ವದ ಶ್ರೇಷ್ಠ ಶಕ್ತಿ, ಇಲ್ಲವೆ ನಾಶ** ಎಂಬ ತತ್ವವನ್ನು ಪ್ರತಿಪಾದಿಸಿದ. ಈ ತತ್ವದ ಮೇಲೆ ಕೈಸರ್ ಜರ್ಮನಿಯನ್ನು ಜಗತ್ತಿನ ಅತ್ಯಂತ ಬಲಶಾಲಿ ರಾಷ್ಟ್ರವನ್ನಾಗಿ ರೂಪಿಸಲು ಬಯಸಿದ್ದ.

ಇದೇ ವೇಳೆಗೆ ಯುರೋಪಿನಲ್ಲಿ ಇದಕ್ಕೆ ಪೂರಕವಾದ ಪತ್ರಿಕೋದ್ಯಮ ಆರಂಭವಾಗಿತ್ತು. ಪತ್ರಿಕೆಗಳು ಈ ಅಂಧ ರಾಷ್ಟ್ರೀಯತೆಯನ್ನು ಹರಡುವಲ್ಲಿ ಪ್ರಧಾನ ಪಾತ್ರವಹಿಸಿದವು. ಒಂದರ್ಥದಲ್ಲಿ ಜನತೆಯನ್ನು ಮಹಾಯುದ್ಧಕ್ಕೆ ಮಾನಸಿಕವಾಗಿ ಸಿದ್ಧಗೊಳಿಸುವ ಕೆಲಸವನ್ನು ಈ ಪತ್ರಿಕೆಗಳು ಮಾಡಿದವು.

೪. ಜನಾಂಗಾಧಾರಿತ ರಾಷ್ಟ್ರವಾದ

ಇದೇ ಅವಧಿಯಲ್ಲಿ ವಿದೇಶಿ ಆಳ್ವಿಕೆಗೊಳಪಟ್ಟಿದ್ದ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯದ ಬೇಡಿಕೆ ತೀವ್ರವಾಯಿತು. ತಮ್ಮ ಜನಾಂಗದ ಪ್ರಾಬಲ್ಯತೆ ಹೊಂದಿದ ಪ್ರದೇಶಗಳನ್ನು ತಮ್ಮ ರಾಷ್ಟ್ರಕ್ಕೆ ಸೇರಿಸಿಕೊಳ್ಳುವ ಪ್ರಯತ್ನಗಳು ನಡೆದವು. ಇಟಲಿಯನ್ನರು ಬಹುಸಂಖ್ಯಾತರಾಗಿದ್ದ ಟ್ರೆಂಟಿನೊ

ಮತ್ತು ಟ್ರೈಸ್ಟ್‌ಗಳನ್ನು ಆಸ್ಟ್ರಿಯಾ-ಹಂಗೇರಿಗಳಿಂದ ಪಡೆದುಕೊಳ್ಳಲು ಇಟಲಿ ಆಶಿಸಿದ್ದಿತು. ಅದೇ ವೇಳೆಗೆ ಏಡ್ರಿಯಾಟಿಕ್ ಸಮುದ್ರದ ಮೇಲಿನ ಹಕ್ಕಿಗಾಗಿ ಇಟಲಿ ಮತ್ತು ಆಸ್ಟ್ರಿಯಾ-ಹಂಗೇರಿಗಳ ನಡುವೆ ಸ್ಪರ್ಧೆ ನಡೆಯುತ್ತಿತ್ತು.

೧೮೭೮ರ ಬರ್ಲಿನ್ ಸಮ್ಮೇಳನದ ಸಂದರ್ಭದಲ್ಲಿ ಬೋಸ್ನಿಯಾ, ಹರ್ಜೆಗೋವಿನಾಗಳನ್ನು ಆಸ್ಟ್ರಿಯಾ-ಹಂಗೇರಿಗೆ ನೀಡಿದ್ದು ಕೂಡ ಸಮಸ್ಯೆಗೆ ಕಾರಣವಾಗಿತ್ತು. ಈ ಪ್ರದೇಶಗಳನ್ನು ಆಸ್ಟ್ರಿಯಾ-ಹಂಗೇರಿಗಳು ವಶಪಡಿಸಿಕೊಂಡಾಗ ಸರ್ಬಿಯಾ ಅದನ್ನು ತೀವ್ರವಾಗಿ ಪ್ರತಿಭಟಿಸಿತು. ಒಂದೆಡೆ ಆಸ್ಟ್ರಿಯಾ-ಹಂಗೇರಿಗಳಲ್ಲಿದ್ದ ಸರ್ಬಿಯನ್ನರು, ಸರ್ಬಿಯಾಗೆ ಸೇರಲು ಆಶಿಸಿದ್ದರು. ಇನ್ನೊಂದೆಡೆ ಅದೇ ವೇಳೆಗೆ ಟ್ರಾನ್ಸಿಲ್ವೇನಿಯಾ, ಬುಕೋವಿನಾ ಮತ್ತು ಬೆಸಾರ್ಬಿಯಾಗಳಲ್ಲಿನ ರುಮೇನಿಯನ್ನರ ವಿಮೋಚನೆಗಾಗಿ ರುಮೇನಿಯಾ ಪ್ರಯತ್ನಿಸುತ್ತಿತ್ತು. ಅಂತೆಯೇ ಫ್ರಾಂಕೋ-ಪ್ರಷ್ಯನ್ ಕದನದ ನಂತರ (೧೮೭೦) ಜರ್ಮನಿಗೆ ಸೇರಿದ್ದ ಆಲ್ಸೈಸ್ ಮತ್ತು ಲೊರೈನ್ ಪ್ರಾಂತ್ಯಗಳನ್ನು ಪುನರ್‌ಗಳಿಸಲು ಫ್ರಾನ್ಸ್ ಹಾತೊರೆಯುತ್ತಿತ್ತು. ಈ ರೀತಿಯ ಪ್ರತ್ಯೇಕತಾವಾದಿ ರಾಷ್ಟ್ರೀಯತೆಯ ರಾಷ್ಟ್ರ-ರಾಷ್ಟ್ರಗಳ ನಡುವಿನ ವೈಮನಸ್ಯಗಳನ್ನು ಹೆಚ್ಚಿಸಿ ಅಂತಿಮವಾಗಿ ಅವು ಯುದ್ಧಕ್ಕೆ ಕಾರಣವಾಗುವಂತೆ ಮಾಡಿದವು.

೫. ಮೈತ್ರಿಕೂಟಗಳು ಮತ್ತು ಗುಪ್ತ ಒಪ್ಪಂದಗಳು

ಯುರೋಪಿನಲ್ಲಿ ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಮತ್ತು ೨೦ ನೆಯ ಶತಮಾನದ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದ ಮೈತ್ರಿಕೂಟಗಳು ಮತ್ತು ಗುಪ್ತ ಒಪ್ಪಂದಗಳು ಮೊದಲನೆಯ ಮಹಾಯುದ್ಧಕ್ಕೆ ಪ್ರಮುಖ ಕಾರಣವಾದವು.

ಜರ್ಮನಿ ಏಕೀಕರಣವಾದಾಗಿನಿಂದಲೂ ಅದನ್ನು ದ್ವೇಷಿಸುತ್ತಿದ್ದ ಫ್ರಾನ್ಸ್ ತನ್ನ ರಕ್ಷಣೆ ಕಡೆಗೆ ಹೆಚ್ಚಿನ ಗಮನ ನೀಡಿತು. ತನ್ನ ನಾಯಕತ್ವಕ್ಕೆ ಸವಾಲಾಗಿದ್ದರಿಂದ ಮತ್ತು ಜರ್ಮನಿಯಲ್ಲಾದ ತೀವ್ರ ಕೈಗಾರಿಕೀಕರಣದಿಂದ ಬ್ರಿಟನ್ ಕೂಡ ಜರ್ಮನಿಯನ್ನು ದ್ವೇಷಿಸುತ್ತಿತ್ತು. ಯುರೋಪಿನ ಬೆಳವಣಿಗೆಗಳ ಬಗ್ಗೆ ರಷ್ಯಾ ಅಸಮಾಧಾನ ಹೊಂದಿತ್ತು. ಬಿಸ್ಮಾರ್ಕ್‌ನ ನೀತಿಗಳಿಂದ ಬೇಸತ್ತ ಆಸ್ಟ್ರಿಯಾ ಮತ್ತು ಹಂಗೇರಿ ೧೮೭೮ ರಲ್ಲಿ ದ್ವಿಕೋನ ಒಪ್ಪಂದ ಮಾಡಿಕೊಂಡವು. ೧೮೮೨ ರಲ್ಲಿ ಇಟಲಿ ಕೂಡ ಇದಕ್ಕೆ ಸೇರಿದ್ದರಿಂದ ಇದು ತ್ರಿರಾಷ್ಟ್ರ ಮೈತ್ರಿಕೂಟವಾಯಿತು. (ಟ್ರಿಪಲ್ ಅಲೈಯನ್ಸ್) ರಷ್ಯಾ ಈ ಬೆಳವಣಿಗೆಗಳಿಂದ ದೂರವಿತ್ತು. ಇದನ್ನು ಗಮನಿಸಿ ಬಿಸ್ಮಾರ್ಕ್ ರಷ್ಯಾ ಜೊತೆಗೆ ೧೮೮೭ ರಲ್ಲಿ ಒಪ್ಪಂದವನ್ನು ಮಾಡಿಕೊಂಡನು. ಆದರೆ ಜರ್ಮನಿ ಆಸ್ಟ್ರಿಯಾದ ಜೊತೆ ಸೇರಿದುದು ರಷ್ಯಾವನ್ನು ನಿರಾಶೆಗೊಳಿಸಿ ಅದು ಫ್ರಾನ್ಸ್ ಜೊತೆ ಸೇರುವಂತೆ ಮಾಡಿತು.

ಈ ಮಧ್ಯೆ ಪರಸ್ಪರ ವೈಮನಸ್ಯಗಳನ್ನು ತೊರೆದು ಫ್ರಾನ್ಸ್ ಮತ್ತು ಬ್ರಿಟನ್ ಒಪ್ಪಂದಕ್ಕೆ ಬರಲು ತೀರ್ಮಾನಿಸಿದವು. ಪರಿಣಾಮವಾಗಿ ೧೯೦೪ ರಲ್ಲಿ ಫ್ರಾನ್ಸ್ ಮತ್ತು ಬ್ರಿಟನ್‌ಗಳು

ಅಂತಾಂತ್ ಕಾರ್ಡಿಯಲ್ (Entente Cordial) ಒಪ್ಪಂದ ಮಾಡಿಕೊಂಡು ತಮ್ಮ ನಡುವಿನ ಸಮಸ್ಯೆಗಳನ್ನು ಬಗೆಹರಿಸಿಕೊಂಡವು. ಫ್ರಾನ್ಸ್‌ನ ಮಿತ್ರ ರಾಷ್ಟ್ರವಾಗಿದ್ದ ರಷ್ಯಾ ಈ ಒಪ್ಪಂದಕ್ಕೆ ಸೇರಿದ್ದರಿಂದ ಇದು ತ್ರಿಕೋನ ಒಪ್ಪಂದವಾಗಿ ಮಾರ್ಪಟ್ಟಿತು (ಟ್ರಿಪಲ್ ಅಂತಾಂತ್). ನಂತರ ೧೯೦೭ ರಲ್ಲಿ **ಜಪಾನ್** ಈ ಒಪ್ಪಂದಕ್ಕೆ ಸೇರ್ಪಡೆಯಾಯಿತು. **ಟರ್ಕಿ** 'ಟ್ರಿಪಲ್ ಅಲೈಯನ್ಸ್'ಗೆ ಸೇರಿತು. ಈ ಬೆಳವಣಿಗೆಗಳ ಪರಿಣಾಮವಾಗಿ ೨೦ ನೆಯ ಶತಮಾನದ ಆರಂಭದ ದಶಕದಲ್ಲಿ ಯುರೋಪಿನಲ್ಲಿ ಎರಡು ಬಣಗಳು ರಚನೆಯಾಗಿದ್ದವು.

೬. ಅಂತರ ರಾಷ್ಟ್ರೀಯ ಸಂಬಂಧಗಳನ್ನು ನಿಯಂತ್ರಿಸುವ ಸಂಘಟನೆಯ ಕೊರತೆ

ಯುದ್ಧ ಪೂರ್ವದಲ್ಲಿ ಅಂತರರಾಷ್ಟ್ರೀಯ ರಾಜಕೀಯ ಪರಿಸ್ಥಿತಿಗಳು ಗೊಂದಲಮಯ ವಾಗಿದ್ದರೂ ಕೂಡ ಅವುಗಳನ್ನು ನಿಯಂತ್ರಿಸುವ, ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಪರಿಹರಿಸುವ ಯಾವುದೇ ಸಂಘಟನೆ ಇರಲಿಲ್ಲ. ಪ್ರತಿಯೊಂದು ರಾಷ್ಟ್ರವು ತನ್ನನ್ನು ತಾನೇ ಸಾರ್ವಭೌಮವೆಂದು ಭಾವಿಸಿದ್ದುದರಿಂದ ಇತರ ರಾಷ್ಟ್ರಗಳೊಂದಿಗಿನ ಸಂಬಂಧಗಳಿಗೆ ಗೌರವವೇ ನೀಡುತ್ತಿರಲಿಲ್ಲ. ೧೮೯೯ ಮತ್ತು ೧೯೦೭ ರ **ಹೇಗ್ ಸಮ್ಮೇಳನದಲ್ಲಿ** ತೆಗೆದು ಕೊಂಡ ನಿರ್ಣಯಗಳನ್ನು ಅನೇಕ ರಾಷ್ಟ್ರಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸಿ ಕೊಂಡವು. ಮೇಲೆ ತಿಳಿಸಿದಂತೆ ಅನೇಕ ಒಪ್ಪಂದಗಳು, ಮೈತ್ರಿಕೂಟಗಳು ರಚನೆಯಾದವು. ಈ ಎಲ್ಲಾ ನಿಯಂತ್ರಣವಿಲ್ಲದ ಬೆಳವಣಿಗೆಗಳು ಯುದ್ಧಕ್ಕೆ ತಮ್ಮ ಕೊಡುಗೆಗಳನ್ನು ನೀಡಿದವು.

೭. ತಕ್ಷಣದ ಕಾರಣಗಳು

ಬಾಲ್ಕನ್ ಪ್ರದೇಶದಲ್ಲಿ ಆಸ್ಟ್ರಿಯಾ-ಹಂಗೇರಿ ಮತ್ತು ಸರ್ಬಿಯಾಗಳ ನಡುವೆ ದೀರ್ಘ ಕಾಲೀನ ವೈಮನಸ್ಯ ಇದ್ದಿತು. ೧೯೧೨-೧೩ ರ **ಬಾಲ್ಕನ್ ಯುದ್ಧಗಳ** ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಇಲ್ಲಿನ ಜನಾಂಗೀಯ ಸಮಸ್ಯೆಗಳು ಇದಕ್ಕೆ ಪೂರಕವಾಗಿದ್ದವು. ಇಲ್ಲಿ ಎಲ್ಲಾ 'ಸ್ಲಾವ್' ಜನಾಂಗದವರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ **ಬ್ಲಾಕ್ ಹ್ಯಾಂಡ್**‌ನಂತಹ ಗುಪ್ತ ಸಂಘಟನೆಗಳು ಸ್ಥಾಪಿತವಾದವು. ಅದು ಬೋಸ್ನಿಯಾದ ಗವರ್ನರ್‌ನ ಹತ್ಯೆಯ ಸಂಚನ್ನು ಸಹ ರೂಪಿಸುತ್ತಿತ್ತು. ಆದರೆ ಆಸ್ಟ್ರಿಯಾದ **ಆರ್ಚ್‌ಡ್ಯೂಕ್** ಆದ **ಫ್ರಾನ್ಸಿಸ್ ಫರ್ಡಿನಾಂಡ್** ಬೋಸ್ನಿಯಾಗೆ ಬರುತ್ತಿರುವ ವಿಷಯ ತಿಳಿದು ತನ್ನ ಯೋಜನೆಯನ್ನು ಬದಲಾಯಿಸಿತು.

ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್ (ಆಸ್ಟ್ರಿಯಾದ ಸಿಂಹಾಸನದ ಉತ್ತರಾಧಿಕಾರಿ) ಬೋಸ್ನಿಯಾದ ಟೌನ್‌ಹಾಲ್ ಸಮೀಪ ಸಂಚುಗಾರನೊಬ್ಬನ ಬಾಂಬ್ ದಾಳಿಯಿಂದ ಸ್ವಲ್ಪದರಲ್ಲಿಯೇ ಪಾರಾಗಿದ್ದ. ಆದರೆ ಆತ ತನ್ನ ಪತ್ನಿಯೊಡನೆ ನಗರದ ಮ್ಯೂಸಿಯಂ ಬಳಿ ಬಂದಾಗ ಗುಪ್ತ ಸಂಘಟನೆಗೆ ಸೇರಿದ್ದ ಸಂಚುಗಾರನೊಬ್ಬ ಅವನನ್ನು ಗುಂಡಿಟ್ಟು ಕೊಲೆ ಮಾಡಿದ. ಈ ಕೊಲೆ ಆಸ್ಟ್ರಿಯಾ ಮತ್ತು ಸರ್ಬಿಯಾಗಳ ನಡುವೆ ಇದ್ದ ದ್ವೇಷವನ್ನು

ಹೆಚ್ಚಿಸಿತು. ಕೊಲೆಯ ಜವಾಬ್ದಾರಿಯನ್ನು ಸರ್ಬಿಯಾ ಹೊತ್ತುಕೊಂಡಿತು. ಇದರ ವಿರುದ್ಧ ಆಸ್ಟ್ರಿಯಾದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಆಸ್ಟ್ರಿಯಾ ಈ ಘಟನೆ ಬಗ್ಗೆ ೪೮ ಗಂಟೆಗಳ ಒಳಗೆ ತನಿಖೆ ನಡೆಸುವಂತೆ ಸರ್ಬಿಯಾಗೆ ಆದೇಶಿಸಿತು. ಇದರೊಂದಿಗೆ ಇನ್ನೂ ಅನೇಕ ಬೇಡಿಕೆಗಳನ್ನು ಆಸ್ಟ್ರಿಯಾ ಇಟ್ಟಿತ್ತು. ರಷ್ಯಾ ಕೂಡ ಇದನ್ನು ಬೆಂಬಲಿಸಿತ್ತು. ಆದರೆ ಕೊಟ್ಟ ಅವಧಿ ಮೀರುವ ಮೊದಲೇ ೨೮ನೇ ಜುಲೈ ೧೯೧೪ ರಂದು ಸರ್ಬಿಯಾದ ಮೇಲೆ ಯುದ್ಧ ಘೋಷಿಸಿತು.

ಯುದ್ಧದ ಗತಿ-ಬೆಳವಣಿಗೆಗಳು

ಸರ್ಬಿಯಾದ ಮೇಲೆ ಆಸ್ಟ್ರಿಯಾ ಯುದ್ಧ ಘೋಷಿಸಿದ ತಕ್ಷಣ ಜರ್ಮನಿ, ಸರ್ಬಿಯಾಗೆ ಸಹಾಯ ಮಾಡುತ್ತಿದ್ದ ರಷ್ಯಾಗೆ, ಅವರ ಎಲ್ಲಾ ಸೈನ್ಯ ಪಡೆಯನ್ನು ತಕ್ಷಣ ಹಿಂತೆಗೆದು ಕೊಳ್ಳುವಂತೆ ಆಜ್ಞೆ ಮಾಡಿತು. ರಷ್ಯಾ ಜರ್ಮನಿಯ ಆಜ್ಞೆಯನ್ನು ನಿರಾಕರಿಸಿದ್ದರ ಪರಿಣಾಮ ವಾಗಿ ೧ ನೇ ಆಗಸ್ಟ್ ೧೯೧೪ ರಂದು ಜರ್ಮನಿ ರಷ್ಯಾದ ಮೇಲೆ ಯುದ್ಧ ಘೋಷಿಸಿತು. ಜರ್ಮನಿಯ ದಾಳಿಗೆ ಪ್ರತಿಯಾಗಿ ರಷ್ಯಾ ಕೂಡ ಯುದ್ಧ ಆರಂಭಿಸಿತು. ಫ್ರಾನ್ಸ್‌ನ ಮಧ್ಯ ಪ್ರವೇಶವನ್ನು ನೆಪವಾಗಿಟ್ಟುಕೊಂಡು ಜರ್ಮನಿ ೩ ನೇ ಆಗಸ್ಟ್ ೧೯೧೪ ರಂದು ಫ್ರಾನ್ಸ್‌ನ ಮೇಲೆ ಯುದ್ಧ ಘೋಷಿಸಿತು. ಬೆಲ್ಜಿಯಂ ತಟಸ್ಥವಾಗಿದ್ದರೂ ಫ್ರಾನ್ಸ್‌ನ್ನು ದಮನ ಮಾಡ ಲೋಸುಗ ಜರ್ಮನಿ ಬೆಲ್ಜಿಯಂನ ಮೇಲೆ ದಾಳಿ ಮಾಡಿತು. ತಕ್ಷಣ ಬ್ರಿಟನ್ ಜರ್ಮನಿಯ ಮೇಲೆ ದಾಳಿ ಮಾಡಿತು.

ಯುದ್ಧ ಆರಂಭವಾದಾಗ ಇಟಲಿ ತಟಸ್ಥವಾಗಿತ್ತು. ಆದರೆ ಬ್ರಿಟನ್ ಮತ್ತು ಫ್ರಾನ್ಸ್ **ಲಂಡನ್ ಒಪ್ಪಂದದಲ್ಲಿ** (೧೯೧೫) ಇಟಲಿಗೆ ಅನೇಕ ಆಶ್ವಾಸನೆಗಳನ್ನು ನೀಡಿ ಯುದ್ಧರಂಗಕ್ಕೆ ಎಳೆದವು. ೧೯೧೫ ರ ವೇಳೆಗೆ ಎರಡು ಬಣಗಳು ಸ್ಪಷ್ಟವಾಗಿ ರೂಪುಗೊಂಡವು. ಬ್ರಿಟನ್, ಫ್ರಾನ್ಸ್, ರಷ್ಯಾ, ಇಟಲಿ, ರುಮಾನಿಯಾ, ಗ್ರೀಸ್, ಸರ್ಬಿಯಾ, ಬೆಲ್ಜಿಯಂ, ಪೋರ್ಚುಗಲ್, ಜಪಾನ್ ಮತ್ತು ಚೈನಾ **ಮಿತ್ರ ರಾಷ್ಟ್ರ**ಗಳಾದರೆ, ಜರ್ಮನಿ, ಆಸ್ಟ್ರಿಯಾ, ಹಂಗೇರಿ ಮತ್ತು ಟರ್ಕಿಗಳು **ಕೇಂದ್ರಶಕ್ತಿ**ಗಳಾದವು. ಅನೇಕ ವಸಾಹತುಗಳು ಯುದ್ಧದಲ್ಲಿ ಭಾಗವಹಿಸಿದ್ದವು. ಆರಂಭದಲ್ಲಿ ಜರ್ಮನಿ ಮೇಲುಗೈ ಸಾಧಿಸಿತು. ನಂತರ ಪರಿಸ್ಥಿತಿ ಬದಲಾಯಿತು. ರಷ್ಯಾ ೧೯೧೭ ರ ನಂತರ ಯುದ್ಧದಿಂದ ನಿವೃತ್ತಿಯಾಯಿತು.

ಆರಂಭದಲ್ಲಿ ಮಿತ್ರಪಡೆಗಳಿಗೆ ಸಾಕಷ್ಟು ಹಿನ್ನಡೆಯುಂಟಾಯಿತು. ಆದರೆ ಅಮೆರಿಕಾ ಯುದ್ಧರಂಗವನ್ನು ಪ್ರವೇಶಿಸಿದ್ದು ಯುದ್ಧದ ಗತಿಯನ್ನೇ ಬದಲಾಯಿಸಿತು. ತನ್ನೆಲ್ಲ ಶಕ್ತಿಯನ್ನು ಬಳಸಿದ ಅಮೆರಿಕಾ ಜರ್ಮನಿಗೆ ಸಾಕಷ್ಟು ಹೊಡೆತ ಕೊಟ್ಟಿತು. ಮೊದಲು ಬಲ್ಗೇರಿಯಾ ನಂತರದಲ್ಲಿ ಟರ್ಕಿ, ಆಸ್ಟ್ರಿಯಾ ಮತ್ತು ಹಂಗೇರಿಗಳು ಶರಣಾದವು. ಅಂತಿಮವಾಗಿ ೧೧ ನೇ ನವೆಂಬರ್ ೧೯೧೮ ರಂದು ಜರ್ಮನಿ ಬೇಷರತ್ತಾಗಿ ಶರಣಾಯಿತು. ಇದಾದ ಏಳು ತಿಂಗಳ ನಂತರ **ವರ್ಸೆಲ್ಸ್** ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಯುದ್ಧದ ಪರಿಣಾಮಗಳು

ಪ್ರಥಮ ಮಹಾಯುದ್ಧದ ಪರಿಣಾಮಗಳು ಕ್ರಾಂತಿಕಾರವೂ, ದೂರಗಾಮಿಯೂ ಆಗಿದ್ದು, ಇಡೀ ಜಗತ್ತನ್ನೇ ಪ್ರಭಾವಿಸಿದವು. ಇದು ಹೊಸ ಯುಗ ಒಂದರ ಆರಂಭಕ್ಕೆ ಮುನ್ನುಡಿಯಾಯಿತು. ಈ ಯುದ್ಧದ ಪರಿಣಾಮಗಳು ಈ ಕೆಳಗಿನಂತಿವೆ.

೧. ಅಪಾರ ಪ್ರಾಣಹಾನಿ

ಮಹಾಯುದ್ಧದಿಂದಾಗಿ ಅಪಾರ ಪ್ರಮಾಣದಲ್ಲಿ ಮಾನವ ಜನಾಂಗ ನಾಶವಾಯಿತು. ಒಂದು ಅಂದಾಜಿನಂತೆ ಈ ಯುದ್ಧದಲ್ಲಿ ಪಾಲ್ಗೊಂಡಿದ್ದ ೬೫ ಮಿಲಿಯನ್ ಜನತೆಯ ಪೈಕಿ ಸುಮಾರು ೯ ಮಿಲಿಯನ್ ಜನತೆ ಮರಣ ಹೊಂದಿದರು. ಸುಮಾರು ೨೯ ಮಿಲಿಯನ್ ಜನತೆ ಗಾಯಗೊಂಡರು. ಹಾನಿಗೊಳಗಾದವರ ಪೈಕಿ ಸೈನಿಕರಷ್ಟೇ ಅಲ್ಲದೆ ನಾಗರಿಕರು ಇದ್ದುದು ಗಮನಾರ್ಹ ಅಂಶ. ಯುದ್ಧದ ನಂತರ ಹರಡಿದ ಕ್ಷಾಮ, ಬರಗಾಲ ಮತ್ತು ಸಾಂಕ್ರಾಮಿಕ ರೋಗಗಳ ಪರಿಣಾಮವಾಗಿ ಸಾಕಷ್ಟು ಪ್ರಮಾಣದ ಜನ ಹಾನಿ ಸಂಭವಿಸಿತು.

೨. ಆರ್ಥಿಕ ನಷ್ಟ

ಮಹಾಯುದ್ಧವು ಜಗತ್ತಿನ ಆರ್ಥಿಕತೆ ಮೇಲೆ ಗಂಭೀರ ಪರಿಣಾಮಗಳನ್ನು ಬೀರಿತು. ಯುದ್ಧಕ್ಕಾಗಿ ಮಾಡಿದ ಅಪಾರ ವೆಚ್ಚ ಗೆದ್ದ ಮತ್ತು ಸೋತ ಎರಡು ಪಂಗಡಗಳ ದೇಶಗಳ ಅರ್ಥವ್ಯವಸ್ಥೆಯನ್ನು ನಾಶಮಾಡಿತು. ಮಹಾಯುದ್ಧದ ಪರಿಣಾಮ ಎಷ್ಟು ಭೀಕರವಾಗಿತ್ತೆಂದರೆ ಅನೇಕ ನಗರಗಳನ್ನು ಪುನರ್ ನಿರ್ಮಾಣ ಮಾಡಬೇಕಾಗಿ ಬಂತು. ಹೆಚ್ಚಿನ ವಿದೇಶಿ ಸಾಲ, ಹಣದುಬ್ಬರ, ನಿರುದ್ಯೋಗ, ಆಹಾರದ ಕೊರತೆ, ಅನೇಕ ರಾಷ್ಟ್ರಗಳ ಸಾಮಾನ್ಯ ಲಕ್ಷಣಗಳಾದವು. ಇದರೊಂದಿಗೆ ಕೈಗಾರಿಕೆಗಳ ನಾಶ ವ್ಯಾಪಾರ ಮತ್ತು ವಾಣಿಜ್ಯದ ಅವನತಿಯಿಂದಾಗಿ ಇಡೀ ವಿಶ್ವದ ಆರ್ಥಿಕತೆ ಕುಸಿದ ಪರಿಣಾಮವಾಗಿ ೧೯೨೯ ರ.ವೇಳೆಗೆ ಇಡೀ ಜಗತ್ತನ್ನೇ **ಮಹಾ ಆರ್ಥಿಕ ಮುಗ್ಗಟ್ಟು** ಆವರಿಸಿತು.

೩. ಸಾಮ್ರಾಜ್ಯಗಳ ಪತನ

ರಾಜಪ್ರಭುತ್ವಗಳ ಅಂತ್ಯ ಒಂದನೇ ಮಹಾಯುದ್ಧದ ಮುಖ್ಯ ಪರಿಣಾಮಗಳಲ್ಲಿ ಒಂದಾಗಿದೆ. ಈ ಯುದ್ಧದಿಂದಾಗಿ ಜರ್ಮನಿ, ಆಸ್ಟ್ರೊ-ಹಂಗೇರಿ, ರಷ್ಯಾ ಮತ್ತು ಟರ್ಕಿಗಳಲ್ಲಿ ಸಾಮ್ರಾಜ್ಯಗಳು ಅಂತ್ಯವಾದವು. ಪ್ರಪಂಚವನ್ನೇ ಗೆಲ್ಲುವ ಜರ್ಮನಿಯ **ವಿಲಿಯಂ ಕೈಸರ್**‌ನ ಕನಸು ನುಚ್ಚುನೂರಾಯಿತು. ಆತ ಸಿಂಹಾಸನವನ್ನೇ ತ್ಯಜಿಸಿದನು. ಸಾಮ್ರಾಜ್ಯಗಳ ಪತನದಿಂದಾಗಿ ಯೂರೋಪಿನ ಭೂಪಟವನ್ನು ಪುನರ್ ರಚಿಸಬೇಕಾಯಿತು.

೪. ಹೊಸ ರಾಜ್ಯಗಳ ಉದಯ

ಈ ಯುದ್ಧವು ಅನೇಕ ಹೊಸ ರಾಷ್ಟ್ರಗಳ ಉದ್ಭವಕ್ಕೂ ಕಾರಣವಾಯಿತು. **ವುಡ್ರೊ ವಿಲ್ಸನ್**‌ನ '೧೪ ಅಂಶಗಳ ಸೂತ್ರ'ದನ್ವಯ ಅನೇಕ ರಾಷ್ಟ್ರಗಳಿಗೆ ಸ್ವಯಂ ನಿರ್ಣಯದ ಹಕ್ಕು ನೀಡಲಾಯಿತು. ಇದರ ಆಧಾರದ ಮೇಲೆ ರಷ್ಯಾ, ಪ್ರಷ್ಯಾ ಮತ್ತು ಸರ್ಬಿಯಾಗಳು

ಹೊಂದಿದ್ದ ಪೊಲೀಷ್ ಪ್ರಾಂತ್ಯಗಳನ್ನು ಒಗ್ಗೂಡಿಸಿ ಪೊಲೆಂಡನ್ನ ರಚಿಸಲಾಯಿತು. ಆಸ್ಟ್ರೋ-ಹಂಗೇರಿ ಸಾಮ್ರಾಜ್ಯಗಳಿಂದ ಯುಗೋಸ್ಲಾವಿಯಾ ಮತ್ತು ಜ್ವಕೊಸ್ಲೋವಾಕಿಯಾಗಳನ್ನು ಸ್ವತಂತ್ರಗೊಳಿಸಲಾಯಿತು. ಫಿನ್‌ಲ್ಯಾಂಡ್, ಎಸ್ತೋನಿಯಾ, ಲ್ಯಾಟ್ವಿಯಾ, ಲಿಥಿವೇನಿಯಾ ಗಳನ್ನು ರಷ್ಯಾದಿಂದ ಸ್ವತಂತ್ರಗೊಳಿಸಲಾಯಿತು. ಅರಬ್ಬರಿಗೆ ಸ್ವತಂತ್ರ ನೀಡಿದ್ದಲ್ಲದೆ ಟರ್ಕಿಯ ವಿರುದ್ಧ ದಂಗೆ ಏಳಲು ಸಹಾಯ ಮಾಡಲಾಯಿತು. ಆದರೆ ಯುದ್ಧ ನಂತರ ಅವುಗಳನ್ನು ಬ್ರಿಟನ್ ಮತ್ತು ಫ್ರಾನ್ಸ್‌ಗಳ ನಿಯಂತ್ರಣದಲ್ಲಿಡಲಾಯಿತು. ಅದೇ ರೀತಿ ಬ್ರಿಟನ್ ಇರಾಕ್, ಟ್ರಾನ್ಸ್-ಜೋರ್ಡಾನ್ ಮತ್ತು ಪ್ಯಾಲಸ್ಟೈನ್‌ಗಳ ಮೇಲೆ ಹಿಡಿತ ಹೊಂದಿತು. ಫ್ರಾನ್ಸ್, ಸಿರಿಯಾ ಮತ್ತು ಲೆಬನಾನ್‌ಗಳನ್ನು ಮ್ಯಾನ್‌ಡೇಟ್‌ಗಳನ್ನಾಗಿ ಪಡೆಯಿತು. ಆಸ್ಟ್ರಿಯಾದ ಸ್ವಾತಂತ್ರ್ಯವನ್ನು ಜರ್ಮನಿ ಮನ್ನಿಸಿತು. ಜರ್ಮನಿಯ ಅನೇಕ ಪ್ರಾಂತ್ಯಗಳನ್ನು ವಿಜಯೀ ರಾಷ್ಟ್ರಗಳು ಹಂಚಿಕೊಂಡವು. ಅದರ ವಸಾಹತುಗಳನ್ನು ಮ್ಯಾನ್ ಡೇಟ್‌ಗಳನ್ನಾಗಿ ಮಾಡಲಾಯಿತು.

೫. ಶಾಂತಿ ಒಪ್ಪಂದಗಳು

ಒಂದನೇ ಮಹಾಯುದ್ಧ ಮುಗಿದ ತಕ್ಷಣ ಜರ್ಮನಿ ಯುದ್ಧ ವಿರಾಮ ಒಪ್ಪಂದಕ್ಕೆ ಸಹಿ ಹಾಕಿತು. ಜನವರಿ ೧೯೧೯ ರಲ್ಲಿ ಶಾಂತಿ ಸಮ್ಮೇಳನ ಪ್ಯಾರಿಸ್‌ನಲ್ಲಿ ಜರುಗಿತು. ಈ ಸಮ್ಮೇಳನ ಸೋತ ರಾಷ್ಟ್ರಗಳೊಂದಿಗೆ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುವ ಉದ್ದೇಶ ಹೊಂದಿತ್ತು. ಇದರ ಅನ್ವಯ ಐದು ಒಪ್ಪಂದಗಳಿಗೆ ಸಹಿಗಳಾದವು. ವರ್ಸೈಲ್ಸ್ ಒಪ್ಪಂದವನ್ನು ಜರ್ಮನಿಯೊಂದಿಗೆ, ಸೈಂಟ್ ಜರ್ಮನ್ ಒಪ್ಪಂದವನ್ನು ಆಸ್ಟ್ರಿಯಾದೊಂದಿಗೆ, ನೇಲಿ ಒಪ್ಪಂದ ವನ್ನು ಬಲ್ಗೇರಿಯಾದೊಂದಿಗೆ, ಟ್ರಿಯಾನಾನ್ ಒಪ್ಪಂದವನ್ನು ಹಂಗೇರಿಯೊಂದಿಗೆ ಮತ್ತು ಸಿವರ್ಸ್ ಒಪ್ಪಂದವನ್ನು ಟರ್ಕಿಯೊಂದಿಗೆ ಮಾಡಿಕೊಳ್ಳಲಾಯಿತು.

ಈ ಸಮ್ಮೇಳನದಲ್ಲಿ ನಾಲ್ವರು ದೊಡ್ಡಣ್ಣ (Big four)ಗಳು ಪ್ರಮುಖ ಪಾತ್ರ ವಹಿಸಿದ್ದರು. ಅವರೆಂದರೆ ಅಮೇರಿಕಾದ ಅಧ್ಯಕ್ಷ ವುಡ್ರೊವಿಲ್ಸನ್, ಬ್ರಿಟನ್ನಿನ ಲಾಯ್ಡ್ ಜಾರ್ಜ್, ಫ್ರಾನ್ಸ್‌ನ ಕ್ಲೆಮನ್ಸೋ, ಇಟಲಿಯ ಆರ್ಲ್ಯಾಂಡೋ. ಈ ಎಲ್ಲಾ ಒಪ್ಪಂದಗಳ ಪೈಕಿ ವರ್ಸೈಲ್ಸ್ ಒಪ್ಪಂದ ಹೆಚ್ಚು ಪ್ರಮುಖವಾಗಿತ್ತು. ಇದೇ ಎರಡನೆ ಮಹಾಯುದ್ಧಕ್ಕೆ ಒಂದು ಪ್ರಮುಖ ಕಾರಣವಾಯಿತು.

೬. ಲೀಗ್ ಆಫ್ ನೇಷನ್ಸ್‌ದ ಸ್ಥಾಪನೆ

ಜನವರಿ ೧೯೧೯ರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾದ ಪ್ರಮುಖ ತೀರ್ಮಾನವೆಂದರೆ ಲೀಗ್ ಆಫ್ ನೇಷನ್ಸ್‌ದ ಸ್ಥಾಪನೆ. ಯುದ್ಧಗಳನ್ನು ತಡೆಗಟ್ಟಿ ರಾಷ್ಟ್ರಗಳ ನಡುವೆ ಸಹಕಾರ, ಶಾಂತಿ ಮತ್ತು ಸೌಹಾರ್ದಯುತ ಸಂಬಂಧಗಳನ್ನು ಬೆಳೆಸುವ ಉದ್ದೇಶದಿಂದ ಲೀಗ್‌ನ್ನು ಸ್ಥಾಪಿಸಲಾಯಿತು. ಲೀಗ್‌ನ ಸ್ಥಾಪನೆಯ ಹಿಂದೆ ಅಮೇರಿಕಾದ ಅಧ್ಯಕ್ಷ ವುಡ್ರೊ ವಿಲ್ಸನ್‌ನ ಪಾತ್ರ ಪ್ರಮುಖವಾಗಿತ್ತು.

೭. ಹೊಸ ಸಿದ್ಧಾಂತಗಳ ಉದಯ

ಯುದ್ಧಾ ನಂತರ ಅನೇಕ ಹೊಸ ಸಿದ್ಧಾಂತಗಳು ಬೆಳೆದು ಯುರೋಪಿನ ರಾಜಕೀಯವನ್ನು ಕದಡಿತು. ೧೯೧೭ರ **ಬೋಲ್ಶೆವಿಕ್ ಕ್ರಾಂತಿಯ** ಪರಿಣಾಮವಾಗಿ ರಷ್ಯಾದಲ್ಲಿ **ಕಮ್ಯುನಿಸಂ** ಪ್ರಬಲವಾಗಿ ಬೆಳೆಯಿತು. ಇಟಲಿಯಲ್ಲಿ **ಫ್ಯಾಸಿಸಂ** ಮತ್ತು ಜರ್ಮನಿಯಲ್ಲಿ **ನ್ಯಾಜಿಸಂ**ಗಳು ಬೆಳೆದು ಏಳಿಗೆಯಾದವು. ಈ ಬೆಳವಣಿಗೆಗಳು ಯುರೋಪಿನ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಅನುಮಾನ ಮತ್ತು ಆತಂಕಗಳನ್ನು ಹುಟ್ಟು ಹಾಕಿತು. ಇದರಿಂದಾಗಿ ಒಂದು ರೀತಿಯ ತ್ರಿಕೋನ ಘರ್ಷಣೆ ಆರಂಭವಾಯಿತು. ಮಹಾಯುದ್ಧಗಳ ಮಧ್ಯದ ಅವಧಿಯಲ್ಲಿ. ಈ ಮೂರು ಸಿದ್ಧಾಂತಗಳ ರಾಷ್ಟ್ರಗಳು ತಮ್ಮ ತಮ್ಮ ಪ್ರಭಾವಗಳನ್ನು ಇತರ ದೇಶಗಳ ಮೇಲೆ ಬೀರಲು ಪ್ರಯತ್ನಿಸಿದವು. ಇದು ಅಂತಿಮವಾಗಿ ಎರಡನೇ ಮಹಾಯುದ್ಧಕ್ಕೆ ಒಂದು ಕಾರಣವಾಯಿತು.

೮. ಯುದ್ಧಾ ನಂತರದ ಜರ್ಮನಿ

ಯುದ್ಧದ ನಂತರ ಜರ್ಮನಿಯಲ್ಲಿ ಪರಿಸ್ಥಿತಿ ಗಂಭೀರವಾಗಿತ್ತು. ಅದನ್ನು 'ಯುದ್ಧಕೋರ ರಾಷ್ಟ್ರ'ವೆಂದು ಪರಿಗಣಿಸಿ ಅದರ ಮೇಲೆ ಸಾಕಷ್ಟು ಸೈನಿಕ, ಆರ್ಥಿಕ ನಿರ್ಬಂಧಗಳನ್ನು ಹೇರಲಾಗಿತ್ತು. ಅದರ ಆರ್ಥಿಕತೆ ಕುಸಿದು ಹೋಯಿತು. ಕೈಗಾರಿಕೆಗಳು ನಿಲ್ಲಿಸಲ್ಪಟ್ಟವು. ನಿರುದ್ಯೋಗ, ಹಣದುಬ್ಬರ ಮತ್ತು ಆಹಾರದ ಕೊರತೆಗಳು ತೀವ್ರವಾದವು. ಈ ಪರಿಸ್ಥಿತಿಗಳು ಹಿಟ್ಲರ್‌ನ ಏಳಿಗೆಗೆ ಸಹಾಯಕವಾದವು.

೯. ಶಕ್ತಿಶಾಲಿ ನಾಯಕನಾಗಿ ಅಮೆರಿಕಾದ ಏಳಿಗೆ

ಒಂದನೇ ಮಹಾಯುದ್ಧದಲ್ಲಿ ಅಮೆರಿಕಾ ನಿರ್ವಹಿಸಿದ ಪಾತ್ರ ಅದರ ಸ್ಥಾನವನ್ನು ಹೆಚ್ಚಿಸಿತು. ಯುದ್ಧದ ನಂತರವೂ ಗೆದ್ದ ಮತ್ತು ಸೋತ ರಾಷ್ಟ್ರಗಳೆರಡೂ ಅಮೆರಿಕಾದ ಮೇಲೆ ಅವಲಂಬಿಸಬೇಕಾಯಿತು. ಮಿತ್ರ ರಾಷ್ಟ್ರಗಳು ಆಂತರಿಕವಾಗಿ ಅಮೆರಿಕಾದಿಂದ ಸಾಲಪಡೆದು, ಜರ್ಮನಿ ಕೂಡ ಯುದ್ಧ ನಷ್ಟ ಪರಿಹಾರ ತುಂಬಲು ಅಮೆರಿಕಾವನ್ನೇ ಆಶ್ರಯಿಸಿದ್ದು ಅದನ್ನು ಆರ್ಥಿಕ ರಂಗದಲ್ಲಿ ನಾಯಕನನ್ನಾಗಿ ಮಾಡಿತು. ಆದರೆ ಅಮೆರಿಕಾ ಯೂರೋಪಿನ ರಾಜಕೀಯದಿಂದ ತಟಸ್ಥವಾಗಿಯೇ ಉಳಿಯಿತು.

ವರ್ಸೈಲ್ಸ್ ಒಪ್ಪಂದ

ಮೊದಲನೆಯ ಮಹಾಯುದ್ಧದ ನಂತರ ಪ್ಯಾರಿಸ್‌ನಲ್ಲಿ ಶಾಂತಿ ಸಮ್ಮೇಳನ ನಡೆಯಿತು (೧೮ನೆಯ ಜನವರಿ ೧೯೧೯). ಅಮೆರಿಕಾದ ಅಧ್ಯಕ್ಷ ವುಡ್ರೋವಿಲ್ಸನ್‌ನು ತನ್ನ ೧೪ ಅಂಶಗಳ ಮುಖೇನ ವಿಶ್ವದಲ್ಲಿ ಶಾಂತಿ ನೆಲೆಸಲು ಬಯಸಿದ್ದ. ಆದರೆ ಅವನು ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಮಂಡಿಸಿದ್ದ ವಿಚಾರಗಳು ಶಾಂತಿಗೆ ಬದಲಾಗಿ ದ್ವೇಷಕ್ಕೂ ಮೊಳಕೆ ಯೊಡೆಯುವಂತೆ ಮಾಡಿದ್ದವು. ಈ ಸಮ್ಮೇಳನದಲ್ಲಿನ ನಾಲ್ಕು ಒಪ್ಪಂದಗಳಲ್ಲಿ ವರ್ಸೈಲ್ಸ್ ಒಪ್ಪಂದವೂ ಸಹ ಒಂದು. ಇದು ಗೆದ್ದ ಮಿತ್ರ ರಾಷ್ಟ್ರಗಳು ಸೋತ ಜರ್ಮನಿಯೊಂದಿಗೆ

ಮಾಡಿಕೊಂಡ ಶಾಂತಿ ಒಪ್ಪಂದ ಆಗಿತ್ತು. ೨೮ನೆಯ ಜೂನ್ ೧೯೧೯ ರಂದು ಈ ಒಪ್ಪಂದವು ವರ್ಸೆಲ್ಸ್‌ನಲ್ಲಿ ನಡೆಯಿತು. ಆದ್ದರಿಂದ ಇದನ್ನು ವರ್ಸೆಲ್ಸ್ ಒಪ್ಪಂದವೆಂದೇ ಕರೆಯಲಾಗಿದೆ.

ಜರ್ಮನಿಯ ಸ್ವಾಭಿಮಾನಕ್ಕೆ, ಘನತೆ-ಗೌರವಗಳಿಗೆ ಆಘಾತವನ್ನುಂಟು ಮಾಡಿದ ಈ ಒಪ್ಪಂದ ಅದು ಮಿತ್ರ ರಾಷ್ಟ್ರಗಳೊಂದಿಗೆ ಸೇಡಿಗಾಗಿ ಕಾಯುವಂತೆ ಮಾಡಿತ್ತು. ಈ ಒಪ್ಪಂದದಲ್ಲಿ ೪೪೦ ಅನುಸೂಚನೆಗಳಿದ್ದವು. ಅಲ್ಲದೆ ಕೆಲವು ಹೇಯವಾದ ನಿಯಮಾವಳಿಗಳಿಂದ ಕೂಡಿತ್ತು. ಜರ್ಮನಿಯನ್ನು ಆರ್ಥಿಕ, ಸೈನಿಕ, ಕಾನೂನು ಹಾಗೂ ರಾಜಕಾರಣ ಮೊದಲಾದ ಕ್ಷೇತ್ರಗಳಲ್ಲಿ ಮತ್ತೆ ತಲೆ ಎತ್ತಲಾರದಂತೆ ಮಾಡುವುದೇ ಈ ಒಪ್ಪಂದದ ಮುಖ್ಯ ಉದ್ದೇಶವಾಗಿತ್ತು. ಜರ್ಮನಿಗೆ ಮಾರಕವಾಗಿದ್ದ ಈ ಒಪ್ಪಂದ ಅದರ ನಕಾಶೆಯನ್ನೇ ಬದಲಿಸಿತ್ತು. ಬಲಾತ್ಕಾರದಿಂದ ಸಹಿ ಹಾಕಬೇಕಾದ ಈ ಶಾಂತಿ ಒಪ್ಪಂದದ ಪ್ರಸಂಗ ಜರ್ಮನಿಯರನ್ನು ಸೇಡಿನ ಮನೋಭಾವಕ್ಕಾಗಿ ಪ್ರೇರೆಪಿಸಿತ್ತು. ಅಲ್ಲದೆ ಇಂಥ ನಿಕೃಷ್ಟ ಶಾಂತಿ ಒಪ್ಪಂದದ ಬಗೆಗೆ ಅನೇಕ ಟೀಕೆ-ಟಿಪ್ಪಣಿಗಳು ಜಗತ್ತಿನಾದ್ಯಂತ ಮಂಡಿತವಾದವು. ಇದರ ಅಂತಿಮ ಪರಿಣಾಮವೆ ಎರಡನೆಯ ಮಹಾಯುದ್ಧ.

೩.೨ ಎರಡನೆಯ ಮಹಾಯುದ್ಧ (೧೯೩೯-೧೯೪೫)

೧೯೩೯ ರಲ್ಲಿ ಜಗತ್ತು ಮೊದಲನೆಯ ಮಹಾಯುದ್ಧಕ್ಕಿಂತ (೧೯೧೪-೧೯೧೮) ಭೀಕರವಾದ ಮತ್ತು ವಿನಾಶಕಾರಿಯಾದ ಮಹಾಯುದ್ಧದ ಆರಂಭವನ್ನು ಕಂಡಿತು. ಈ ಯುದ್ಧವು ಪ್ರಾದೇಶಿಕವಾಗಿದ್ದು (ಯೂರೋಪಿನ ಕೆಲ ದೇಶಗಳಿಗೆ ಮಾತ್ರ ಸೀಮಿತವಾಗಿ) ಅಲ್ಪಾಯುವಾಗಿರುತ್ತದೆಂದು ಆಶಿಸಲಾಗಿತ್ತು. ಆದರೆ, ಸೆಪ್ಟೆಂಬರ್ ೩, ೧೯೩೯ ರ ನಂತರದ ಘಟನೆಗಳ ಬೇರೆಯದೇ ಆದ ರೀತಿಯಲ್ಲಿ ಬೆಳವಣಿಗೆಯಾದವು. ವಿಜ್ಞಾನಿಗಳು ಮತ್ತು ತಂತ್ರಜ್ಞರ ಪಾಲ್ಗೊಳ್ಳುವಿಕೆಯಿಂದ ಈ ಯುದ್ಧ ವಿನಾಶಕಾರಿಯಾಗಿ ರೂಪುಗೊಂಡಿತು. ಯುದ್ಧಕ್ಕೆ ಕಾರಣಗಳು ಅನೇಕ ಮತ್ತು ವಿಭಿನ್ನವಾಗಿವೆ.

ಕಾರಣಗಳು

೧. ವರ್ಸೈಲ್ಸ್ ಒಪ್ಪಂದದ ದೋಷಗಳು

ವರ್ಸೈಲ್ ಒಪ್ಪಂದವು ಕೇವಲ ೨೦ ವರ್ಷಗಳಲ್ಲೇ ತನ್ನ ಅಂತ್ಯವನ್ನು ಕಂಡಿತು. ಪ್ಯಾರಿಸ್‌ನಲ್ಲಿ ತಮ್ಮ ರಾಷ್ಟ್ರಕ್ಕೆ ಆದ ಅಪಮಾನವನ್ನು ದೇಶಭಕ್ತ ಜರ್ಮನ್ನರು ಮರೆತಿರಲಿಲ್ಲ. ಸೋತು ನಿಶಸ್ತ್ರವಾಗಿದ್ದ ಜರ್ಮನಿಯನ್ನು ವಿಜಯೀ ರಾಷ್ಟ್ರಗಳ ಕರುಣೆಯಡಿಯಲ್ಲಿ ಇಡಲಾಗಿತ್ತು. ಒಪ್ಪಂದದ ಷರತ್ತುಗಳು ಕಠಿಣವಾಗಿಯೂ ಮತ್ತು ಪ್ರತೀಕಾರಾತ್ಮಕವಾಗಿಯೂ ಇದ್ದವು. ಜರ್ಮನಿಯನ್ನು ಯುದ್ಧಕೋರ ರಾಷ್ಟ್ರವೆಂದು ಒಪ್ಪಿಕೊಳ್ಳುವಂತೆ ಮಾಡಿದ್ದಲ್ಲದೆ, ಯುದ್ಧದ ಅಪಾರಹಾನಿಯ ಜವಾಬ್ದಾರಿಯನ್ನು ಅದರ ಮೇಲೆ ಹೊರಿಸಲಾಯಿತು. ಒಪ್ಪಂದದ ಷರತ್ತುಗಳನ್ವಯ ಯೂರೋಪಿನಲ್ಲಿ ಹಾಗೂ ವಿದೇಶದ ತನ್ನ ವಸಾಹತುಗಳಲ್ಲಿ ಜರ್ಮನಿಯು ಅನೇಕ ಪ್ರದೇಶಗಳನ್ನು ಕಳೆದುಕೊಂಡಿತು. ಜರ್ಮನಿ ಸಂಪೂರ್ಣವಾಗಿ ನಿಸ್ಸೈನಿಕೀಕರಣಕ್ಕೆ ಒಳಗಾಗಿದಲ್ಲದೆ ಅದರ ಕೈಗಾರಿಕೀಕರಣವೂ ನಿಲ್ಲಿಸಲ್ಪಟ್ಟಿತು. ಅಷ್ಟೇ ಅಲ್ಲದೆ ನಿಶಸ್ತ್ರೀಕರಣವನ್ನು ಅದರ ಮೇಲೆ ಹೇರಲಾಯಿತು. ಎಲ್ಲಕ್ಕೂ ಮೇಲೆ ಜರ್ಮನಿ ಅಪಾರ ಪ್ರಮಾಣದ ಯುದ್ಧನಷ್ಟ ಪರಿಹಾರವನ್ನು ನೀಡಬೇಕಾಯಿತು. ಜರ್ಮನಿಯಲ್ಲಿ ಸ್ಥಾಪಿತವಾದ ಹೊಸ ವೀಮರ್ ಗಣರಾಜ್ಯಕ್ಕೆ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವಾಗಿತ್ತು. ಇವೆಲ್ಲಕ್ಕು ಕಲಶವಿಟ್ಟಂತೆ ಜರ್ಮನಿಯಲ್ಲಿ ವಿದೇಶಿ ಪಡೆಗಳು ನೆಲೆಗೊಂಡಿದ್ದಲ್ಲದೆ, ಫ್ರೆಂಚ್ ಮತ್ತು ಬೆಲ್ಜಿಯಂ ಪಡೆಗಳು 'ರೂರ್' ಪ್ರಾಂತ್ಯವನ್ನು ಆಕ್ರಮಿಸಿಕೊಂಡವು. ಈ ಎಲ್ಲಾ ಅಂಶಗಳು ಯುದ್ಧೋತ್ತರ ಸನ್ನಿವೇಶದಲ್ಲಿ ಜರ್ಮನಿ ಸಹಜ ಸ್ಥಿತಿಗೆ ಮರಳದಂತೆ ತಡೆದವು.

೨. ಸರ್ವಾಧಿಕಾರತ್ವದ ಏಳಿಗೆ

ಎರಡು ಮಹಾಯುದ್ಧಗಳ ನಡುವಿನ ಕಾಲಾವಧಿಯಲ್ಲಿ ಸರ್ವಾಧಿಕಾರಿಗಳ ಏಳಿಗೆಯು ಯೂರೋಪಿನ ಶಾಂತಿಗೆ ಬಹುದೊಡ್ಡ ಬೆದರಿಕೆಯನ್ನು ಒಡ್ಡಿದವು. ನಿರಂಕುಶ ಸರ್ಕಾರಗಳು

ಏಳಿಗೆಯಾದವು. ಇಟಲಿ ಮತ್ತು ಜಪಾನ್‌ಗಳು ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ತಮ್ಮ ಬೇಡಿಕೆಗಳು ಈಡೇರಲಿಲ್ಲವೆಂಬ ಕಾರಣಕ್ಕೆ ತಮ್ಮನ್ನು 'ಉಳ್ಳದವರು' (Have Not's) ಎಂದು ಕರೆದುಕೊಂಡವು. ನಂತರ ಈ ಗುಂಪಿಗೆ ಜರ್ಮನಿ ಸೇರಿಕೊಂಡಿತು. ಅಲ್ಲದೆ ಬ್ರಿಟನ್, ಫ್ರಾನ್ಸ್‌ಗಳನ್ನು ಉಳ್ಳವರು (Have) ಎಂದು ವರ್ಗೀಕರಿಸಿದವು. ಈ ರಾಷ್ಟ್ರಗಳಲ್ಲಿ ಸೈನಿಕ ಆಡಳಿತವು ತಲೆ ಎತ್ತಲಾರಂಭಿಸಿತು. 'ರೋಂನ ಮೇಲೆ ದಾಳಿ' ನಡೆದ ನಂತರ ಇಟಲಿಯಲ್ಲಿ **ಮುಸೋಲಿನಿ** ಅಧಿಕಾರಕ್ಕೆ ಬಂದನು. ಇದು ಫ್ಯಾಸಿಸಂನ ಏಳಿಗೆಗೆ ಕಾರಣವಾಯಿತು. ಅದೇ ರೀತಿ ಜರ್ಮನಿಯಲ್ಲಿ **ಹಿಟ್ಲರ್**, ಜಪಾನ್‌ನಲ್ಲಿ ಜನರಲ್ **ಟನಾಕ** ಅಧಿಕಾರಕ್ಕೆ ಬಂದರು.

೩. ಆಕ್ರಮಣಕಾರಿ ರಾಷ್ಟ್ರೀಯತೆ ಮತ್ತು ಸಾಮ್ರಾಜ್ಯಶಾಹಿ ನೀತಿಗಳ ಬೆಳವಣಿಗೆ

ಮಹಾಯುದ್ಧಗಳ ಮಧ್ಯಂತರ ಅವಧಿಯಲ್ಲಿ ಯುರೋಪ್ ಮತ್ತು ಏಷ್ಯಾಗಳಲ್ಲಿ ಆಕ್ರಮಣಕಾರಿ ರಾಷ್ಟ್ರೀಯತೆ ತಲೆ ಎತ್ತಿತು. ಮುಖ್ಯವಾಗಿ ಯುರೋಪ್‌ನಲ್ಲಿ ಜರ್ಮನಿ ಮತ್ತು ಇಟಲಿಗಳಲ್ಲಿ ಹಾಗೂ ಏಷ್ಯಾದ ಜಪಾನ್‌ನಲ್ಲಿ ಬೆಳೆದ ನಿರಂಕುಶತ್ವ ಮತ್ತು ಸೈನಿಕತ್ವ ಸರ್ಕಾರಗಳು ಆಕ್ರಮಣಕಾರಿ ರಾಷ್ಟ್ರೀಯತ್ವವನ್ನು ಅಳವಡಿಸಿಕೊಂಡವು. ಇಲ್ಲಿ ಹೆಚ್ಚಿದ ಜನಸಂಖ್ಯೆ, ಕೈಗಾರಿಕೀಕರಣ, ಮೊದಲ ಮಹಾಯುದ್ಧದ ಪರಿಣಾಮವಾದ 'ಮಹಾ ಆರ್ಥಿಕ ಮುಗ್ಗಟ್ಟು' ಇತ್ಯಾದಿಗಳು ಈ ರಾಷ್ಟ್ರಗಳನ್ನು ಹೊಸ ವಸಾಹತುಗಳನ್ನು ಹುಡುಕುವಂತೆ ಮಾಡಿದವು. ಇದರ ಪರಿಣಾಮವಾಗಿ ಇಟಲಿ, ಇಥಿಯೋಪಿಯಾ ಮತ್ತು ಆಲ್ಬೇನಿಯಾಗಳನ್ನು ಆಕ್ರಮಿಸಿದರೆ, ಜಪಾನ್ ಮಂಚೂರಿಯಾದ ಮೇಲೆ ದಾಳಿಮಾಡಿತು. ಜರ್ಮನಿ ಕೂಡ ಈ ನಿಟ್ಟಿನಲ್ಲಿ ಹಿಂದೆ ಬೀಳಲಿಲ್ಲ. ಈ ಮೂರು ಆಕ್ರಮಣಶೀಲ ರಾಷ್ಟ್ರಗಳು ಅಂತಿಮವಾಗಿ **ರೋಂ-ಬರ್ಲಿನ್-ಟೋಕಿಯೋ ಅಕ್ಷ** (ಒಪ್ಪಂದ)ದಡಿ ಒಂದಾದವು. ಇದು ಎರಡನೇ ಮಹಾಯುದ್ಧವನ್ನು ಶೀಘ್ರಗೊಳಿಸಿತು.

೪. ಲೀಗ್ ಆಫ್ ನೇಷನ್ಸ್‌ನ ವಿಫಲತೆ

ಲೀಗ್ ಆಫ್ ನೇಷನ್ಸ್ ಅಥವಾ **ರಾಷ್ಟ್ರಗಳ ಸಂಘ** ಸ್ಥಾಪನೆಯಾದಾಗ ಅದು ಯುದ್ಧಗಳನ್ನು ತಡೆಗಟ್ಟಿ, ರಾಷ್ಟ್ರಗಳ ನಡುವೆ ಸಹಕಾರ, ಶಾಂತಿ ಮತ್ತು ಸೌಹಾರ್ದಯುತ ಸಂಬಂಧಗಳನ್ನು ಬೆಳೆಸುತ್ತದೆಂದು ಆಶಿಸಲಾಗಿತ್ತು. ಆದರೆ ನಂತರದ ಬೆಳವಣಿಗೆಗಳು ಲೀಗ್‌ನ ಉದ್ದೇಶಗಳು ವಿಫಲವಾಗಿದ್ದನ್ನು ತೋರಿಸಿಕೊಟ್ಟವು. ಲೀಗ್ ಕೆಲವು ಯಶಸ್ಸನ್ನು ಸಾಧಿಸಿದರೂ (ಉದಾಹರಣೆಗೆ ಆಲ್ಯಾಂಡ್ ದ್ವೀಪಗಳು) ಬಹಳಷ್ಟು ಸಂದರ್ಭಗಳಲ್ಲಿ ಅದರ ದೌರ್ಬಲ್ಯಗಳು ಎದ್ದು ಕಂಡವು. ಆಕ್ರಮಣಶೀಲ ರಾಷ್ಟ್ರಗಳು ಶಕ್ತಿ ಬಳಸಿ ತಮಗೆ ಬೇಕಾದುದನ್ನು ಪಡೆದುಕೊಂಡಾಗ ಲೀಗ್ ಏನೂ ಕ್ರಮ ಕೈಗೊಳ್ಳಲಾಗಲಿಲ್ಲ. ಮುಖ್ಯವಾಗಿ ತನ್ನದೇ ಆದ ಸೈನ್ಯವನ್ನು ಹೊಂದಿಲ್ಲದ ಕಾರಣದಿಂದ ಲೀಗ್ ತನ್ನ ನಿರ್ಧಾರಗಳನ್ನು ಸಮರ್ಥವಾಗಿ ಜಾರಿಗೆ ತರಲಾಗುತ್ತಿರಲಿಲ್ಲ. ಸದಸ್ಯ ರಾಷ್ಟ್ರಗಳು ಸೈನಿಕವಾಗಿ ಸಾಕಷ್ಟು ಸಮರ್ಥವಾಗಿದ್ದರೂ, ಆಂತರಿಕ ಕಾರಣಗಳಿಂದಾಗಿ, ಲೀಗ್‌ಗೆ ಸೈನಿಕ ಸಹಾಯ ನೀಡಲಿಲ್ಲ. ಮೊದಲನೇ ಮಹಾಯುದ್ಧದ

ಸಂದರ್ಭದಲ್ಲಿ ಈ ರಾಷ್ಟ್ರಗಳಲ್ಲಿ ಅಪಾರ ಸಾವು-ನೋವು ಸಂಭವಿಸಿದ್ದು, ಮತ್ತು ಸೈನ್ಯದ ಬಳಕೆಯನ್ನು ಜನತೆ ಸಹಿಸುವುದಿಲ್ಲವೆಂಬ ಭಯ ಈ ಬಲಿಷ್ಠ ರಾಷ್ಟ್ರಗಳಿಗೆ ಇತ್ತು. ಮೇಲಾಗಿ ಲೀಗ್‌ನ್ನು ಫ್ರಾನ್ಸ್ ಮತ್ತು ಬ್ರಿಟನ್‌ಗಳು ನಿಯಂತ್ರಿಸುತ್ತಿದ್ದವು. ಇನ್ನು ಕೆಲವು ರಾಷ್ಟ್ರಗಳು ಈ ಸಂಘಟನೆಯನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಂಡವು. ಲೀಗ್ ಒಂದು ಅಂತ ರಾಷ್ಟ್ರೀಯ ಸಂಘಟನೆಯಾಗುವುದಕ್ಕೆ ಬದಲು ಒಂದು 'ಯೂರೋಪಿಯನ್ ಸಂಘಟನೆ' ಯಾಗಿ ಹೋಯಿತು. ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಕೈಗೊಂಡಿದ್ದ ತೀರ್ಮಾನಗಳನ್ನು ಜಾರಿಗೆ ತರುವಲ್ಲಿನ ವಿಫಲತೆ ಲೀಗ್‌ನ್ನು ಮತ್ತಷ್ಟು ದುರ್ಬಲಗೊಳಿಸಿತು. ನಿರಂಕುಶಾಧಿಕಾರಿ ಗಳ ಏಳಿಗೆ ಹಾಗೂ ಆಕ್ರಮಣಕಾರಿ ವಿದೇಶಾಂಗ ನೀತಿಗಳು ಲೀಗ್‌ನ್ನು ವಿಫಲಗೊಳಿಸುವಲ್ಲಿ ಬಹುಮಟ್ಟಿಗೆ ಕಾರಣವಾದವು.

೫. ಸ್ವಯಂ ನಿರ್ಣಯದ ತತ್ವ

ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಯೂರೋಪ್‌ನ್ನು ಪುನರ್ ರಚಿಸಲಾಗಿತ್ತು. ಗೆದ್ದ ರಾಷ್ಟ್ರಗಳು ಸೋತ ರಾಷ್ಟ್ರಗಳ ಪ್ರಾಂತ್ಯಗಳನ್ನು ಹಂಚಿಕೊಂಡವಲ್ಲವೆ, ಅನೇಕ ಹೊಸ ರಾಷ್ಟ್ರಗಳ ಉದ್ಭವಕ್ಕೂ ಕಾರಣವಾಗಿದ್ದವು. ಈ ಸಂದರ್ಭದಲ್ಲಿ ವಿಜಯೀ ರಾಷ್ಟ್ರಗಳು ಜನಾಂಗೀಯ ಅಲ್ಪಸಂಖ್ಯಾತರನ್ನು ಗಮನಿಸಲೇ ಇಲ್ಲ. ಈ ಅಲ್ಪ ಸಂಖ್ಯಾತರು ಶಾಂತಿ ಸಮ್ಮೇಳನದ ನಂತರದ ದಿನಗಳಲ್ಲಿ ಅಭದ್ರತೆಯ ಆತಂಕದಿಂದ ನರಳಿದರು. ವಿವಿಧ ರಾಷ್ಟ್ರ-ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಅವರು ಒಗ್ಗೂಡಲು, ಇಲ್ಲವೆ ಸ್ವತಂತ್ರರಾಗಲು ಆಶಿಸಿದರು. ಇದಕ್ಕೆ ಪೂರಕವಾಗಿ ಅವರಿಗೆ ವುಡ್ರೋ ವಿಲ್ಸನ್‌ರ ೧೪ ಅಂಶಗಳಲ್ಲಿ ಪ್ರಸ್ತಾಪಿಸಲಾಗಿದ್ದ 'ಸ್ವಯಂ ನಿರ್ಣಯದ ತತ್ವ' ಇದ್ದಿತು. ಈ ತತ್ವವನ್ನು ಎಲ್ಲೆಡೆಗಳಲ್ಲಿಯೂ ಯಶಸ್ವಿಯಾಗಿ ಜಾರಿಗೊಳಿಸಲಾಗಲಿಲ್ಲ. ಈ ಬಗ್ಗೆ ಇಟಲಿಗೂ ಅಸಮಾಧಾನವಿದ್ದಿತು. ಆದರೆ ಇದೇ ಸ್ವಯಂ ನಿರ್ಣಯದ ತತ್ವವನ್ನು ಸಮರ್ಥವಾಗಿ ತಮ್ಮ ಸ್ವಾರ್ಥಕ್ಕೆ ಬಳಸಿ ಕೊಂಡವರು ನ್ಯಾಜಿಗಳು. ಹಿಟ್ಲರ್ ಆಸ್ಟ್ರೀಯಾ, ಜೆಕೋಸ್ಲೋವಾಕಿಯಾ ಮತ್ತು ಪೋಲೆಂಡ್ ಗಳನ್ನು ಕಬಳಿಸಲು ಇದನ್ನು ಅಸ್ತ್ರವಾಗಿ ಬಳಸಿದ. ಈ ತತ್ವದನ್ವಯ ಕೆಲವು ವಿಷಯಗಳನ್ನು ಬಗೆಹರಿಸಲಾಯಿತಾದರೂ, ಅದರಿಂದ ತೃಪ್ತನಾಗದ ಹಿಟ್ಲರ್ ಈ ಮೂರು ದೇಶಗಳ ಮೇಲೆ ಆಕ್ರಮಣವೆಸಗಿದ. ಪೋಲೆಂಡ್‌ನ ಆಕ್ರಮಣ ಅಂತಿಮವಾಗಿದ್ದು, ಯುದ್ಧದ ಆರಂಭಕ್ಕೆ ತಕ್ಷಣದ ಕಾರಣವಾಯಿತು.

೬. ರಷ್ಯಾದ ಬಗೆಗಿನ ಭೀತಿ ಮತ್ತು ಓಲೈಸುವ ನೀತಿ

ಬೋಲ್ಶೆವಿಕ್ ಕ್ರಾಂತಿಯ ನಂತರ ರಷ್ಯಾದಲ್ಲಿ ಕಮ್ಯುನಿಸ್ಟ್‌ರ ಏಳಿಗೆಯನ್ನು ಯೂರೋಪಿನ ಬಂಡವಾಳಶಾಹಿ ರಾಷ್ಟ್ರಗಳು ಭಯ ಮಿಶ್ರಿತ ಆತಂಕದಿಂದಲೇ ಗಮನಿಸು ತ್ತಿದ್ದರು. ಕಮ್ಯುನಿಸ್ಟ್‌ರ ನೀತಿಗಳು ಪ್ರಜಾಪ್ರಭುತ್ವಕ್ಕೆ ಮತ್ತು ಬಂಡವಾಳಶಾಹಿ ನೀತಿಗಳಿಗೆ ಹಾಕಿದ ಸವಾಲು ಎಂದು ಭಾವಿಸಿದ ಯೂರೋಪಿಯನ್ ರಾಷ್ಟ್ರಗಳು, ಅದನ್ನು ತಡೆಯುವ

ಭರದಲ್ಲಿ ನಿರಂಕುಶಾಧಿಕಾರಿಗಳೊಡನೆ ಓಲೈಸುವ ನೀತಿ ಅನುಸರಿಸಿದವು. ಜರ್ಮನಿ, ಇಟಲಿ, ಮತ್ತು ಜಪಾನ್‌ಗಳು ಆಕ್ರಮಣಕಾರಿ ನೀತಿ ಅನುಸರಿಸಿದರೂ, ಕಮ್ಯುನಿಸಂನ ಹರಡುವಿಕೆಯನ್ನು ತಡೆಯುವ ಭರದಲ್ಲಿ ಈ ಆಕ್ರಮಣಗಳನ್ನು ಕಡೆಗಣಿಸಲಾಯಿತು. ಈ ನೀತಿಯನ್ನು ಹಿಟ್ಲರ್ ತನ್ನ ಅನುಕೂಲಕ್ಕೆ ಬಳಸಿಕೊಂಡನು. ಫ್ರಾನ್ಸ್, ಬ್ರಿಟನ್‌ಗಳ ಈ ನೀತಿಯ ಫಲವಾಗಿ ಲೀಗ್ ಆಫ್ ನೇಷನ್ಸ್ ದುರ್ಬಲಗೊಂಡಿತು. ಪರಿಣಾಮವಾಗಿ ಜಪಾನ್ ಮಂಚೂರಿಯಾವನ್ನು ಆಕ್ರಮಿಸಿದಾಗ ಲೀಗ್ ಏನೂ ಕ್ರಮ ಕೈಗೊಳ್ಳಲಾಗಲಿಲ್ಲ. ಈ ಎಲ್ಲಾ ಅಂಶಗಳು ಮುಸೋಲಿನಿ ಮತ್ತು ಹಿಟ್ಲರ್‌ಗೆ ಇನ್ನು ಹೆಚ್ಚಿನ ಆಕ್ರಮಣಗಳನ್ನು ಮಾಡಲು ಸಹಾಯಕವಾದವು. ಇದೇ ಕಮ್ಯುನಿಸಂ ಹರಡುವ ನೆಪವೊಡ್ಡಿ ಹಿಟ್ಲರ್ ಮತ್ತು ಮುಸೋಲಿನಿ ಸ್ಪೈನ್‌ನ ಅಂತರ್ಯುದ್ಧದಲ್ಲಿ ತಲೆಹಾಕಿದರು. ಮುಸೋಲಿನಿ ಆಲ್ಬೇನಿಯಾ ಮತ್ತು ಇಥಿಯೋಪಿಯಾವನ್ನು ಆಕ್ರಮಿಸಿದ. ಅದೇ ರೀತಿ ಹಿಟ್ಲರ್ ಆಸ್ಟ್ರಿಯಾವನ್ನು ಜರ್ಮನ್ ಒಕ್ಕೂಟಕ್ಕೆ ಸೇರಿಸಿಕೊಂಡನು ಮತ್ತು ಜೆಕೋಸ್ಲೋವಾಕಿಯಾ ಮತ್ತು ಪೋಲೆಂಡ್‌ಗಳ ಮೇಲೆ ದಾಳಿ ಮಾಡಿದ. ಮಿತ್ರ ರಾಷ್ಟ್ರಗಳ ಈ ನೀತಿಗಳೇ ರೂಸೋ-ಜರ್ಮನ್ ಅನಾಕ್ರಮಣ ಒಪ್ಪಂದಕ್ಕೆ ಕಾರಣವಾದವು. ಇಂಥ ಉಗ್ರ ಬೆಳವಣಿಗೆಗಳನ್ನು ತಡೆಯುವ ಯಾವುದೇ ರಾಷ್ಟ್ರ ಅಥವಾ ಶಕ್ತಿ ಅಂದು ಇರಲಿಲ್ಲ.

೭. ಅಂತರರಾಷ್ಟ್ರೀಯ ಒಪ್ಪಂದಗಳ ಉಲ್ಲಂಘನೆ

ಇಡೀ ಯುರೋಪಿನ ರಾಜಕೀಯ ಮೇಲ್ಕಾಣಿಸಿದ ಗೊಂದಲಗಳಲ್ಲಿ ಮುಳುಗಿದ್ದಾಗ, ಅನೇಕ ರಾಷ್ಟ್ರಗಳು ತಾವು ಮಾಡಿಕೊಂಡಿದ್ದ ಒಪ್ಪಂದದ ಅಂಶಗಳನ್ನು ಉಲ್ಲಂಘಿಸಿದವು. ವರ್ಸೈಲ್ಸ್ ಒಪ್ಪಂದವನ್ನು ಗಾಳಿಗೆ ತೂರಲಾಯ್ತು. ಅದೇ ರೀತಿ ಲೊಕಾರ್ನೋ (೧೯೨೫) ಕೆಲ್ಲಾಗ್ - ಬ್ರಿಯಾಂಡ್ (೧೯೨೮) ಒಪ್ಪಂದಗಳನ್ನು ಕಡೆಗಣಿಸಲಾಯಿತು. ಇಲ್ಲಿ ಅನೇಕ ಒಪ್ಪಂದಗಳು ಶಾಂತಿಯ ಭರವಸೆಯನ್ನು ನೀಡಿದ್ದರೂ, ಭದ್ರತೆಯ ದೃಷ್ಟಿಯಿಂದ ಆಶಾದಾಯಕವಾಗಿರಲಿಲ್ಲ. ಲೀಗ್‌ನ ಅಶಕ್ತತೆಯೂ ಈ ಒಪ್ಪಂದಗಳ ವಿಫಲತೆಗೆ ಕಾಣಿಕೆಯನ್ನು ನೀಡಿತು.

೮. ಫ್ಯಾಸಿಸ್ಟ್ ಸರ್ವಾಧಿಕಾರತ್ವದ ಏಳಿಗೆ

ಮಹಾಯುದ್ಧಗಳ ಕಾಲಾವಧಿಯು ಇಟಲಿ ಮತ್ತು ಜರ್ಮನಿಗಳಲ್ಲಿ ಸರ್ವಾಧಿಕಾರತ್ವದ ಏಳಿಗೆಯನ್ನು ಕಂಡಿತು. ಇಟಲಿಯಲ್ಲಿ ಬೆನಿಟೋ ಮುಸೋಲಿನಿ ಮತ್ತು ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಏಳಿಗೆಯಾಗಿದ್ದು ಎರಡನೇ ಮಹಾಯುದ್ಧವನ್ನು ತ್ವರಿತಗೊಳಿಸಿತು.

ಬೆನಿಟೋ ಮುಸೋಲಿನಿ (೧೮೮೩-೧೯೪೫)

ಮುಸಲೋನಿಯು ೧೮೮೩ ರಲ್ಲಿ ಇಟಲಿಯ ರೋಮಾಗ್ನ ಪ್ರದೇಶದ ಪ್ರಿಡಾಪಿಯೋ ಎಂಬಲ್ಲಿ ಹುಟ್ಟಿದ. ತಂದೆ ಅಲೆಸ್ಸಾಂಡ್ರೋ ಒಬ್ಬ ಕಮ್ಮಾರ. ತಾಯಿ ಶಾಲಾಶಿಕ್ಷಕಿ.

ಮುಸಲೋನಿಯನ್ನು ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರತ್ವದ ಸ್ಥಾಪಕನೆಂತಲೇ ಕರೆಯಲಾಗಿದೆ. ಆವಂತಿ, ಪೊಪೊಲೊ-ಡಿ-ಇಟಾಲಿಯಾ ಪತ್ರಿಕೆಗಳನ್ನು ಹುಟ್ಟುಹಾಕಿದ್ದ.

ಇಟಲಿ ಮೊದಲನೇ ಮಹಾಯುದ್ಧದಲ್ಲಿ ಅತೃಪ್ತ ವಿಜಯೀ ರಾಷ್ಟ್ರವಾಗಿ ಹೊರ ಹೊಮ್ಮಿತು. ಯುದ್ಧೋತ್ತರ ಇಟಲಿಯಲ್ಲಿ ರಾಜಕೀಯ ಅನಿಶ್ಚಿತತೆ, ಅರಾಜಕತೆ, ಆರ್ಥಿಕ ಮತ್ತು ಸಾಮಾಜಿಕ ಅವನತಿ, ನಿರುದ್ಯೋಗಗಳು ತಾಂಡವಾಡುತ್ತಿದ್ದವು. ತಾನು ಕೇಳಿದ್ದ ಪ್ರದೇಶಗಳನ್ನು ಶಾಂತಿ ಒಪ್ಪಂದದ ಸಮಯದಲ್ಲಿ ನೀಡದಿದ್ದುದರಿಂದ ಇಟಲಿ ವಿಜಯೀ ರಾಷ್ಟ್ರವಾಗಿದ್ದರೂ, ನಷ್ಟದ ಭಾವನೆಯಿಂದ ನರಳುತ್ತಿತ್ತು. ಮುಷ್ಕರಗಳು, ಲಾಕ್ ಔಟ್‌ಗಳಿಂದ ಕೈಗಾರಿಕೆಗಳು ತೊಂದರೆಗೊಳಗಾಗಿದ್ದವು. ಅದರ ಹಣ 'ಲಿರಾ' ಅಪಮೌಲ್ಯಕ್ಕೆ ಒಳಗಾಗಿತ್ತು. ಅಶಾಂತಿ, ಅವ್ಯವಸ್ಥೆ ಮತ್ತು ಗೊಂದಲದ ಪರಿಸ್ಥಿತಿಗಳು ದೇಶಾದ್ಯಂತ ಕಂಡುಬರುತ್ತಿದ್ದವು. ಅನೇಕ ಕ್ರಾಂತಿಕಾರಿ ಸಂಘಟನೆಗಳು ಪರಿಸ್ಥಿತಿಯ ಲಾಭ ಪಡೆಯಲು ತಲೆಎತ್ತಿದ್ದವು. ಅದರಲ್ಲಿ ಅತ್ಯಂತ ಮುಖ್ಯವಾದುದ್ದೆಂದರೆ **ಫ್ಯಾಸಿಸ್ಟ ಪಕ್ಷ**.

ಬೆನಿಟೋ ಮುಸೋಲಿನಿ ನೇತೃತ್ವದ ಫ್ಯಾಸಿಸ್ಟರು ಸಾಮೂಹಿಕ ರ್‍ಯಾಲಿಗಳನ್ನು ನಡೆಸುವ ಮೂಲಕ ಸರ್ಕಾರದ ಮೇಲೆ ಸಾಕಷ್ಟು ಒತ್ತಡ ತಂದರು. ಮುಸೋಲಿನಿ ೧೯೧೯ ರಲ್ಲಿ ಮಿಲಾನ್‌ನಲ್ಲಿ **ಫ್ಯಾಸಿಯೋ** (Foscio)ವನ್ನು ಸ್ಥಾಪಿಸಿದ್ದಲ್ಲದೆ **ಕಪ್ಪಂಗಿ ದಳ** (Black Shirts) ವನ್ನು ಸಂಘಟಿಸಿದ. ೧೯೨೧ ರ ಚುನಾವಣೆಗಳಲ್ಲಿನ ಯಶಸ್ಸು ಆತನನ್ನು ೧೯೨೨ ರಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳುವಂತೆ ಮಾಡಿತು. ಆತ ಸಂಘಟಿಸಿದ 'ರೋಂನ ಮೇಲೆ ದಾಳಿ' (March on Rome)ಗೆ ಬೆದರಿದ ದೊರೆ ಮುಸೋಲಿನಿಯನ್ನು ಸರ್ಕಾರ ರಚಿಸಲು ಆಹ್ವಾನಿಸಿದ. ಅನಂತರ ಇಟಲಿಯಲ್ಲಿ ಏಕ ಪಕ್ಷದ ಆಳ್ವಿಕೆ ಆರಂಭವಾಯಿತು. ರಾಜ್ಯವೆ ಪರಮೋಚ್ಚವಾಯಿತು. ಪ್ರಜಾಪ್ರಭುತ್ವ, ಉದಾರವಾದ ಮತ್ತು ವ್ಯಕ್ತಿ ಸ್ವಾತಂತ್ರ್ಯ ಗಳಿಗೆ ಪ್ಯಾಸಿಸ್ಟ್ ಆಳ್ವಿಕೆಯಲ್ಲಿ ಸ್ಥಾನವೇ ಇರಲಿಲ್ಲ.

ಒಂದು ನಿರಂಕುಶ ಸರ್ಕಾರ ಸ್ಥಾಪಿಸಲ್ಪಟ್ಟಿತು. ಅಧಿಕಾರವನ್ನು ವಶಪಡಿಸಿಕೊಂಡ ನಂತರ ಮುಸೋಲಿನಿ ಕೃಷಿ, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಅನೇಕ ಸುಧಾರಣೆಗಳನ್ನು ತರಲು ಪ್ರಯತ್ನಿಸಿದ. ಹೊಸ ವ್ಯವಸ್ಥೆಯಲ್ಲಿ ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಸಂಘಗಳು ನಿಷೇಧಿಸಲ್ಪಟ್ಟವು. **ಲ್ಯಾಟರ್ನ ಅಕಾರ್ಡ್** ಒಪ್ಪಂದದೊಂದಿಗೆ **ವ್ಯಾಟಿಕನ್ ಚರ್ಚ್** ಕೂಡ ಸುಮ್ಮನಾಯಿತು. ಯುವಕರಿಗೆ ಸೈನಿಕ ಶಿಕ್ಷಣ 'ಬೆಲಿಲಾ'ವನ್ನು ಕಡ್ಡಾಯಗೊಳಿಸಲಾಯಿತು. ಅದರೂ ಮುಸೋಲಿನಿ ಆತಂಕವಾಗಿ ಹೆಚ್ಚಿನ ಯಶಸ್ಸನ್ನು ಕಾಣಲಾಗಲಿಲ್ಲ. ಈ ಆಂತರಿಕ ವಿಫಲತೆಯನ್ನು ಮರೆಮಾಚಲು ಆತ ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಲಾರಂಭಿಸಿದ.

ರಾಷ್ಟ್ರೀಯ ವೈಭವವನ್ನು ಪ್ರತಿಪಾದಿಸುತ್ತಾ ಮುಸೋಲಿನಿ "ಇಟಲಿ ವಿಸ್ತಾರವಾಗಲೇ ಬೇಕು ಇಲ್ಲವೆ ನಾಶವಾಗಬೇಕು" ಎಂದು ಘೋಷಿಸಿದ. ಮತ್ತು ಮುಂದುವರೆದು "ಇಟಲಿಯ ಸ್ಥಾನ ಸೂರ್ಯನಲ್ಲಿ" ಎಂದು ಹೇಳಿದ. ೧೯೨೩ ರಲ್ಲಿ ಆತ **ಕಾರ್ಫು**ವನ್ನು ವಶಪಡಿಸಿಕೊಂಡ.

ನಂತರ ಪ್ಯೂಂನ್ನು ತನ್ನದಾಗಿಸಿಕೊಂಡ. ೧೯೩೬ ರಲ್ಲಿ ಹಿಟ್ಲರ್ ಜೊತೆ ಸೇರಿ ಸ್ಪೈನ್‌ನ ಅಂತರ್‌ಯುದ್ಧದಲ್ಲಿ ಮಧ್ಯಪ್ರವೇಶ ಮಾಡಿದ ಮುಸೋಲಿನಿ ಜನರಲ್ ಫ್ರಾಂಕೋಗೆ ಸಹಾಯ ಮಾಡಿದ. ಅದೇ ವರ್ಷ ಆತ ಜಪಾನ್ ಮತ್ತು ಜರ್ಮನಿಗಳೊಂದಿಗೆ **ಆಂಟಿ-ಕೊಮಿನ್‌ಟನ್ ಒಪ್ಪಂದಕ್ಕೆ** ಸಹಿ ಹಾಕುವುದರೊಂದಿಗೆ **ರೋಂ - ಬರ್ಲಿನ್ - ಟೋಕಿಯೊ ಅಕ್ಷ (ಒಪ್ಪಂದ)** ಅಸ್ತಿತ್ವಕ್ಕೆ ಬಂದಿತು. ೧೯೩೬ ರಲ್ಲಿ ಆತ ಇಥಿಯೋಪಿಯಾದ ಮೇಲೆ ಕ್ರೂರ ಆಕ್ರಮಣವೆಸಗಿದ. ಲೀಗ್ ಇದನ್ನು ಖಂಡಿಸಿ ಇಟಲಿ ಮೇಲೆ ಆರ್ಥಿಕ ದಿಗ್ಭಂದನಗಳನ್ನು ಹೇರಿತು. ಆದರೆ ಮುಸೋಲಿನಿ ಅದನ್ನು ಲಕ್ಷಿಸಲಿಲ್ಲ. ೧೯೩೯ ರಲ್ಲಿ ಆತ ಅಲ್ಬೇನಿಯಾವನ್ನು ವಶಪಡಿಸಿಕೊಂಡ. ೨ನೆಯ ಮಹಾಯುದ್ಧ ಆರಂಭವಾದಾಗ ಆತ ೧೯೪೦ ರಲ್ಲಿ ಜರ್ಮನಿಯ ಜೊತೆ ಕೈಗೂಡಿಸಿದ. ಈ ಯುದ್ಧದ ಅವಧಿಯಲ್ಲಿ ಇಟಲಿಯಲ್ಲಿ ಫ್ಯಾಸಿಸ್ಟ್ ಆಡಳಿತದ ವಿರುದ್ಧ ಅಸಮಾಧಾನ ವ್ಯಾಪಕವಾಯಿತು. ಮಿತ್ರ ಪಕ್ಷಗಳು ರೋಂನ ಮೇಲೆ ಬಾಂಬ್ ದಾಳಿ ಮಾಡಿದಾಗ ಫ್ಯಾಸಿಸ್ಟ್ ವಿರೋಧಿ ಚಳವಳಿ ತೀವ್ರವಾಯಿತು. ಯುದ್ಧ ಮುಂದುವರೆದಂತೆಲ್ಲಾ ಫ್ಯಾಸಿಸ್ಟ್ ಬಲ ಕುಗ್ಗಿತು. ಕೊನೆಗೆ ಮುಸೋಲಿನಿ ಬಂಧಿತನಾದ. ೧೯೪೫ ರಲ್ಲಿ ಉತ್ತರ ಇಟಲಿಯನ್ನು ಮಿತ್ರಪಡೆಗಳು ವಶಪಡಿಸಿಕೊಂಡಾಗ ರೊಚ್ಚಿಗೆದ್ದಿದ್ದ ಇಟಲಿಯನ್ನರು ಮುಸೋಲಿನಿ ಮತ್ತವನ ಪತ್ನಿಯನ್ನು ಕೊಂದು ಸಾರ್ವಜನಿಕವಾಗಿ ಆತನ ಶವವನ್ನು ಪ್ರದರ್ಶಿಸಿದರು. ತನ್ಮೂಲಕ ಇಟಲಿಯಲ್ಲಿ ಫ್ಯಾಸಿಸ್ಟ್ ಆಳ್ವಿಕೆ ಅಂತ್ಯವನ್ನು ಕಂಡಿತು.

ಅಡಾಲ್ಫ್ ಹಿಟ್ಲರ್ (೧೮೮೯-೧೯೪೫)

ಆಸ್ಟ್ರಿಯಾದ **ಬ್ರಾನಾವ್** ಎಂಬಲ್ಲಿ ೧೮೮೯ ರಲ್ಲಿ ಹಿಟ್ಲರ್ ಜನಿಸಿದ. ತಂದೆ **ಅಲಾಯಿಸ್**. ತಾಯಿ **ಕ್ಲಾರ ಪೊಲ್ಜಲ್**. ಬಾಲ್ಯದಲ್ಲಿಯೇ ಇಬ್ಬರನ್ನೂ ಕಳೆದುಕೊಂಡ ಹಿಟ್ಲರ್ ಬದುಕಿಗಾಗಿ ಚಿತ್ರಗಳನ್ನು ಬಿಡಿಸಿ ಮಾರತೊಡಗಿದ. ಯಹೂದಿಗಳ ಬಗೆಗೆ ದ್ವೇಷವನ್ನೂ, ಜರ್ಮನಿ ಜನಾಂಗದ ಬಗೆಗೆ ಹೆಮ್ಮೆಯನ್ನು ಬೆಳೆಸಿಕೊಂಡು ಜರ್ಮನಿ ಸೈನ್ಯದಲ್ಲಿ ಕಾರ್ಯನಿರತನಾದ. **ಮ್ಯೂನಿಚ್**‌ನಲ್ಲಿ ಗೂಢಚಾರ ವೃತ್ತಿಯನ್ನು ಹಿಟ್ಲರ್ ಆರಂಭಿಸಿದ್ದ. ತಾನು ಸೇರಿದ್ದ ರಾಷ್ಟ್ರೀಯ ಸಮಾಜವಾದಿ ಜರ್ಮನ್ ಕಾರ್ಮಿಕ ಪಕ್ಷಕ್ಕೆ ನಾಯಕನೂ ಆದ. ಮುಂದೆ ಇದೇ ಪಕ್ಷವೇ **ನಾಜಿ ಪಕ್ಷ**ವಾಗಿ ಹೆಸರು ಪಡೆಯಿತು.

ಮೊದಲನೇ ಮಹಾಯುದ್ಧದಲ್ಲಿ ತೀವ್ರವಾಗಿ ಹಾನಿಗೊಳಗಾಗಿದ್ದ ದೇಶಗಳಲ್ಲಿ ಜರ್ಮನಿ ಒಂದಾಗಿತ್ತು. ಜರ್ಮನ್ ಸಾಮ್ರಾಜ್ಯದ ಪತನ, ಅಪಮಾನಕರ **ವರ್ಸೈಲ್ಸ್** ಒಪ್ಪಂದದ ಹೇರಿಕೆ, ಅತ್ಯಧಿಕ ಯುದ್ಧ ನಷ್ಟ ಪರಿಹಾರ, 'ರೂರ್'ನ ಆಕ್ರಮಣ ತೀವ್ರತರ ಆರ್ಥಿಕ ಕುಸಿತ, ಆಹಾರದ ಸಮಸ್ಯೆ, ಹಣದುಬ್ಬರ, ನಿರುದ್ಯೋಗ ಹೀಗೆ ಹತ್ತು ಹಲವು ಸಮಸ್ಯೆಗಳು ಜರ್ಮನಿಯನ್ನು ಹಣ್ಣು ಮಾಡಿದ್ದವು. ಜರ್ಮನ್ನರು ಅನುಭವಿಸುತ್ತಿದ್ದ ನೋವು, ನಿರಾಶೆ, ಅಪಮಾನಗಳು ಮತ್ತು ಆಗಬಹುದಾದ ಯಾವುದೇ ಬದಲಾವಣೆಗಳು ಭವಿಷ್ಯವನ್ನು ಉತ್ತಮಗೊಳಿಸಲೆಂದೇ ಆಗುತ್ತವೆ ಎಂಬ ಆಶಾಭಾವನೆಗಳೇ ಜರ್ಮನಿಯಲ್ಲಿ ನಾಜಿವಾದದ ಏಳಿಗೆಗೆ ವೇದಿಕೆಯನ್ನು ಸಿದ್ಧಪಡಿಸಿದವು. ಯುದ್ಧ ನಂತರ ಸ್ಥಾಪಿತವಾದ 'ವೀಮರ್ ಗಣರಾಜ್ಯ'ದ

ವಿಫಲತೆ ನಾಜಿಗಳ ಏಳಿಗೆಗೆ ಪೂರಕವಾಗಿದ್ದ ಮತ್ತೊಂದು ಅಂಶ. ನಾಜಿಗಳ ನಾಯಕ ಅಡಾಲ್ಫ್ ಹಿಟ್ಲರ್ ಮೂಲತಃ ಆಸ್ಟ್ರಿಯಾದವನು ಆತ **ಜರ್ಮನ್ ವರ್ಕರ್ಸ್ ಪಾರ್ಟಿ**ಯನ್ನು ಸೇರಿ ಅದನ್ನು ವ್ಯವಸ್ಥಿತವಾಗಿ ಸಂಘಟಿಸಿದ. ೧೯೨೩ ರಲ್ಲಿ ಆತ ಸರ್ಕಾರವನ್ನು ಉರುಳಿಸುವ **ಬಿಯರ್ ಹಾಲ್ ಸಂಚಿ**ನಲ್ಲಿ ವಿಫಲವಾಗಿ ಸೆರೆಮನೆಯನ್ನು ಸೇರಬೇಕಾಯಿತು. ಈ ಸೆರೆವಾಸದ ಅವಧಿಯಲ್ಲಿ ಆತ 'ನಾಜಿವಾದದ ಬೈಬಲ್' ಎಂದೇ ಹೆಸರಾದ ತನ್ನ ಆತ್ಮಚರಿತ್ರೆ **ಮೈನ್ ಕಾಂಫ್** (Mein Kampf)ನ್ನು ರಚಿಸಿದ.

೧೯೩೨ ರ ಚುನಾವಣೆಗಳಲ್ಲಿ ನಾಜಿ ಪಕ್ಷವು ಹೆಚ್ಚಿನ ಸ್ಥಾನಗಳನ್ನು ಗಳಿಸಿದ ಪರಿಣಾಮವಾಗಿ ಸಮ್ಮಿಶ್ರ ಸರಕಾರವನ್ನು ರಚಿಸುವಂತಾಯಿತು. ಆದರೆ ಆ ಸರ್ಕಾರವು ೧೯೩೩ ರಲ್ಲಿ ಕೊನೆಗೊಂಡಿತು. ಹಿಟ್ಲರ್ ಏಕಪಕ್ಷೀಯ ನಿರಂಕುಶ ಸರ್ಕಾರ ಸ್ಥಾಪಿಸಿದ. ೧೯೩೪ ರಲ್ಲಿ ಅಧ್ಯಕ್ಷ **ಹಿಂಡೆನ್ ಬರ್ಗ್**ನ ಮರಣದ ತರುವಾಯ ಹಿಟ್ಲರ್ ತನ್ನನ್ನು ತಾನೆ ಜರ್ಮನಿಯ ಅಧ್ಯಕ್ಷ ಮತ್ತು ಛಾನ್ಸೆಲರ್ ಆಗಿ ಘೋಷಿಸಿಕೊಂಡನು. ನಾಜಿವಾದದ ಲಕ್ಷಣಗಳೆಂದರೆ, ಒಂದು ಪಕ್ಷ, ಪೂರ್ಣ ನಿಯಂತ್ರಿತ ನಿರಂಕುಶ ಸರ್ಕಾರ, ಬಂಡವಾಳಶಾಹಿಗೆ ವಿರುದ್ಧ, ಮಾರ್ಕ್ಸ್‌ವಾದಕ್ಕೆ ವಿರುದ್ಧ ಮತ್ತು ಜನಾಂಗವಾದಕ್ಕೆ ವಿರುದ್ಧವಾಗಿತ್ತು. ಆತ ಜರ್ಮನ್ನರ ಮತ್ತು ಆರ್ಯನ್ನರ ಜನಾಂಗೀಯ ಶ್ರೇಷ್ಠತೆಯನ್ನು ಪ್ರತಿವಾದಿಸಿದ. ಅದೇ ವೇಳೆಗೆ ಇತರ ಜನಾಂಗಗಳನ್ನು ಮುಖ್ಯವಾಗಿ ಯಹೂದಿಗಳನ್ನು ನಿರ್ಮೂಲನ ಮಾಡಲು ಆರಂಭಿಸಿದ.

ಅಧಿಕಾರಕ್ಕೆ ಬಂದ ನಂತರ ಹಿಟ್ಲರ್ ಇಡೀ ವ್ಯವಸ್ಥೆಯ **ನಾಜೀಕರಣ** ಆರಂಭಿಸಿದ. ಸರ್ಕಾರ, ಸೈನ್ಯ, ಆರ್ಥಿಕತೆ, ಕಲೆ, ಸಾಹಿತ್ಯ, ವಿಜ್ಞಾನ, ಹೀಗೆ ಎಲ್ಲವೂ ಹೊಸ ಸಿದ್ಧಾಂತದ ಅನುಗುಣವಾಗಿ ಪುನರ್ ರೂಪಿಸಲ್ಪಟ್ಟವು. **ದಿ ರೈಕ್ ಛೇಂಬರ್ ಆಫ್ ಕಲ್ಚರ್** ಶಿಕ್ಷಣ ಸಂಸ್ಥೆಗಳು, ಸಂಸ್ಕೃತಿ ಮತ್ತು ಮಾಧ್ಯಮಗಳನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಿತ್ತು. ಪ್ರಜೆಗಳು ಮೂಲಭೂತ ಹಕ್ಕುಗಳಿಂದ ವಂಚಿತರಾದರು. ಮುಸೋಲಿನಿಯಂತೆ ಹಿಟ್ಲರ್ ಕೂಡ ಸೈನಿಕತ್ವದಲ್ಲಿ, ಸಾಮ್ರಾಜ್ಯಶಾಹಿತ್ವದಲ್ಲಿ ಮತ್ತು ಆಕ್ರಮಣ ಶೀಲ ರಾಷ್ಟ್ರೀಯತ್ವದಲ್ಲಿ ನಂಬಿಕೆ ಹೊಂದಿದ್ದ "ನಾನು ಈ ಜಗತ್ತಿನ ಜನರನ್ನು ಉದ್ಧರಿಸಲು ಬಂದಿಲ್ಲ. ಆದರೆ ಅವರ ದೌರ್ಬಲ್ಯಗಳ ಲಾಭ ಪಡೆಯಲು ಬಂದಿದ್ದೇನೆ" ಎಂದು ಹಿಟ್ಲರ್‌ನೇ ಘೋಷಿಸಿದ್ದ. ಆತನನ್ನು 'ಹಿಂಸೆಯ ಶ್ರೇಷ್ಠ ಆರಾಧಕ' ಎಂದು ಕರೆಯಲಾಗುತ್ತಿತ್ತು. ೧೯೩೪ ರಿಂದಲೇ ಯುದ್ಧದ ಸಿದ್ಧತೆಗಳನ್ನು ಆರಂಭಿಸಿದ್ದ ಹಿಟ್ಲರ್ ಇದೇ ತತ್ವಗಳನ್ನು ತನ್ನ ವಿದೇಶಾಂಗ ನೀತಿಯಲ್ಲಿ ಅಳವಡಿಸಿಕೊಂಡಿದ್ದ.

ಲೀಗ್ ಆಫ್ ನೇಷನ್ಸ್ ಮತ್ತು **ನಿಶ್ಯಸ್ತ್ರೀಕರಣ ಸಮ್ಮೇಳನ**ಗಳಿಂದ ಹಿಟ್ಲರ್ ಹೊರಬಂದ. ಅವರ ಏಳಿಗೆಯು ಜಗತ್ತಿನ ಶಾಂತಿಗೆ ಅಪಾಯದ ಕರೆಗಂಟೆಯಂತಿತ್ತು. ಜರ್ಮನಿಯ ಹೊರಗೆ ನಾಜಿಗಳ ಗುಪ್ತ ಚಟುವಟಿಕೆಗಳಿಗೆ ವ್ಯಾಪಕ ಬೆಂಬಲ ನೀಡಲಾಯಿತು. ಮೊದಲನೇ ಮಹಾಯುದ್ಧದ ನಂತರ ಕಳೆದುಕೊಂಡಿದ್ದ ಪ್ರದೇಶಗಳನ್ನು ಮರಳಿ ಪಡೆಯುವ ನಿಟ್ಟಿನಲ್ಲಿ

ಮೊದಲ ಹೆಜ್ಜೆಯಾಗಿ ಆತ ೧೯೩೫ ರಲ್ಲಿ **ಸಾರ್** ಪ್ರಾಂತ್ಯವನ್ನು ಆಕ್ರಮಿಸಿದ. ಅದೇ ವರ್ಷ ಸೈನಿಕ ಕಾನೂನನ್ನು ಜಾರಿಗೊಳಿಸಿದ್ದಲ್ಲದೆ, ಅನೇಕ ನಿರ್ಬಂಧಗಳನ್ನು ಹೇರಲಾಯಿತು. ೧೯೩೬ ರಲ್ಲಿ ಜರ್ಮನಿಯಲ್ಲಿ ಪುನರ್ ಸೈನಿಕೀಕರಣವನ್ನು ಆರಂಭಿಸಿದ್ದಲ್ಲದೆ ಜಪಾನ್‌ದೊಂದಿಗೆ **ಆಂಟಿ ಕೋಮಿನಟನ್** ಒಪ್ಪಂದಕ್ಕೆ ಸಹಿ ಹಾಕಿದ. ಇದೇ ಮುಂದೆ **ರೋಂ - ಬರ್ಲಿನ್ - ಟೋಕಿಯೋ ಅಕ್ಷ (ಒಪ್ಪಂದ)**ವಾಗಿ ರೂಪುಗೊಂಡಿತು. ೧೯೩೮ ರಲ್ಲಿ ಆಸ್ಟ್ರಿಯಾವನ್ನು ಜರ್ಮನ್ ಒಕ್ಕೂಟದಲ್ಲಿ ಸೇರಿಸಿದ. ಇಲ್ಲಿ ಆತ ಆಸ್ಟ್ರಿಯನ್ನರ ರಾಷ್ಟ್ರೀಯ ಭಾವನೆಗಳಿಗೆ ಕಿಂಚಿತ್ತೂ ಗೌರವ ನೀಡಲಿಲ್ಲ.

ಹಿಟ್ಲರ್ ಅಲ್ಲಿಗೆ ತನ್ನ ಆಕ್ರಮಣಗಳನ್ನು ನಿಲ್ಲಿಸದೇ ಜೆಕೋಸ್ಲೋವಾಕಿಯಾದತ್ತ ತಿರುಗಿದ. ಜೆಕೋಸ್ಲೋವಾಕಿಯಾ ಸರ್ಕಾರ **ಸುಡೇಟ**ನ ಜರ್ಮನ್ನರಿಗೆ ಹಿಂಸೆ ನೀಡುತ್ತಿದ್ದಾರೆ ಎಂದು ನಾಜಿಗಳು ಕಪೋಲ ಕಲ್ಪಿತ ಕಥೆಗಳನ್ನು ಹುಟ್ಟುಹಾಕಿದರು. ಅವರು ಜೆಕ್ ಸರ್ಕಾರದ ಮೇಲೆ ತೀವ್ರ ಒತ್ತಡ ತಂದರು. ಈ ಸಮಸ್ಯೆಯನ್ನು ಪರಿಹರಿಸಲು ಬ್ರಿಟನ್, ಫ್ರಾನ್ಸ್, ಇಟಲಿ ಮತ್ತು ಜರ್ಮನಿಗಳು ೧೯೩೮ ರ ಸೆಪ್ಟೆಂಬರ್‌ನಲ್ಲಿ ಮ್ಯೂನಿಕ್‌ನಲ್ಲಿ ಸಭೆ ಸೇರಿದವು. ಆದರೆ ಸಮಸ್ಯೆಯ ಕೇಂದ್ರಬಿಂದುವಾಗಿದ್ದ ಜೆಕೋಸ್ಲೋವಾಕಿಯಾವನ್ನಾಗಲಿ ಅಥವಾ ರಷ್ಯಾವನ್ನಾಗಲಿ ಈ ಸಭೆಗೆ ಆಹ್ವಾನಿಸಲಿಲ್ಲ. ಸುದೀರ್ಘ ಚರ್ಚೆಯ ನಂತರ **ಮ್ಯೂನಿಕ್ ಒಪ್ಪಂದ**ಕ್ಕೆ ಸಹಿ ಹಾಕಲಾಯಿತು. ಇದು ಜೆಕೋಸ್ಲೋವಾಕಿಯನ್ನರಲ್ಲಿ ವ್ಯಾಪಕ ಅಸಮಾಧಾನಕ್ಕೆ ಕಾರಣವಾಯಿತು. ಬ್ರಿಟನ್‌ನ **ಛೇಂಬರಲಿನ್**, ಫ್ರಾನ್ಸ್‌ನ **ಡ್ಯಾಲಡೀರ್** ಈ ಸಂದರ್ಭದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ್ದು. ಈ ರಾಷ್ಟ್ರಗಳು ಅನುಸರಿಸುತ್ತಿದ್ದ ಓಲೈಸುವ ನೀತಿಗೆ ಈ ಒಪ್ಪಂದ ಉತ್ತಮ ಉದಾಹರಣೆಯಾಗಿತ್ತು. ಹಿಟ್ಲರ್ ಬಗ್ಗೆ ಅಪನಂಬಿಕೆ ಇದ್ದರೂ ಈ ರಾಷ್ಟ್ರಗಳು ಅವನನ್ನು ನಂಬಿದ್ದವು.

ತನ್ನ ಆಕ್ರಮಣಕಾರಿ ನೀತಿಯನುಸಾರವಾಗಿ ಹಿಟ್ಲರ್ ಮಾರ್ಚ್ ೧೫, ೧೯೩೯ ರಂದು ಜೆಕೋಸ್ಲೋವಾಕಿಯೋವನ್ನು ಆಕ್ರಮಿಸಿದ. ಅದೇ ವರ್ಷ **ಸೆಪ್ಟೆಂಬರ್** ೧ ರಂದು ಪೋಲೆಂಡ್‌ನ್ನು ಆಕ್ರಮಿಸುವುದರೊಂದಿಗೆ ಹಿಟ್ಲರ್ ೨ನೇ ಮಹಾಯುದ್ಧಕ್ಕೆ ನಾಂದಿ ಹಾಡಿದ. ಹಿಟ್ಲರನ ಆಕ್ರಮಣಕ್ಕೆ **ಸೆಪ್ಟೆಂಬರ್** ೩ ರಂದು ಬ್ರಿಟನ್ ಪ್ರತ್ಯಾಕ್ರಮಣವನ್ನು ಆರಂಭಿಸುವುದರೊಂದಿಗೆ ೨ನೇ ಮಹಾಯುದ್ಧ ಪ್ರಾರಂಭವಾಯಿತು.

ಯುದ್ಧದ ಗತಿಯನ್ನು ಗಮನಿಸಿದಾಗ ಆರಂಭದಲ್ಲಿ ಹಿಟ್ಲರ್ ಮೇಲುಗೈ ಸಾಧಿಸಿದ್ದ. ಆದರೆ ರಷ್ಯಾದ ಮೇಲಿನ ದಾಳಿಯ ನಂತರ ಪರಿಸ್ಥಿತಿ ಅವನಿಗೆ ವಿರುದ್ಧವಾಯಿತು. ೧೯೪೫ ರಲ್ಲಿ ಮಿತ್ರ ರಾಷ್ಟ್ರಗಳು ಜರ್ಮನಿ ವಿರುದ್ಧ ಜಂಟಿ ಕಾರ್ಯಾಚರಣೆ ನಡೆಸಿದವು. ಮೇ ೨, ೧೯೪೫ ರಂದು ರಷ್ಯಾದ **ಕೆಂಪು ಸೈನ್ಯ** ಬರ್ಲಿನ್‌ನನ್ನು ಪ್ರವೇಶಿಸಿತು. ಆದರೆ ಮೇ ೧ ರಂದೇ ಹಿಟ್ಲರ್ ಮರಣ ಹೊಂದಿದನೆಂದು ಘೋಷಿಸಲಾಗಿತ್ತು.

ಯುದ್ಧದ ಗತಿ - ಬೆಳವಣಿಗೆ

ಸೆಪ್ಟೆಂಬರ್ ೩ ರಂದು ಯುದ್ಧ ಆರಂಭವಾಯಿತು. ಬಿಳಿ ರಷ್ಯನ್ನರ ಕಾರಣ ಮುಂದಿಟ್ಟು ರಷ್ಯಾ ಕೂಡ ಪೋಲೆಂಡಿನ ಮೇಲೆ ಆಕ್ರಮಣವೆಸಗಿತು. ಆದರೆ ಅಂತಿಮವಾಗಿ ಪೋಲೆಂಡ್ ಜರ್ಮನಿಯ ವಶವಾಯಿತು. ೧೯೩೯ ನವೆಂಬರ್‌ನಲ್ಲಿ ರಷ್ಯಾ ಫಿನ್‌ಲ್ಯಾಂಡ್ ಮೇಲೆ ಆಕ್ರಮಣ ಮಾಡಿತು. ೩ ನೆ ಸೆಪ್ಟಂಬರ್ ೧೯೩೯ ರಿಂದ ೨೨ ನೇ ಜನವರಿ ೧೯೪೧ ರ ಮಧ್ಯೆ ಜರ್ಮನಿ ಪೋಲ್ಯಾಂಡ್ ಅಲ್ಲದೆ, ನಾರ್ವೆ, ಡೆನ್‌ಮಾರ್ಕ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಲಕ್ಸೆಂಬರ್ಗಗಳನ್ನು ವಶಪಡಿಸಿಕೊಂಡಿತು. ಫ್ರಾನ್ಸ್ ಮತ್ತು ಗ್ರೀಸ್‌ಗಳು ಸಹ ಹಿಟ್ಲರ್‌ನ ವಶವಾದವು. ಇದರ ಪರಿಣಾಮವಾಗಿ ಬ್ರಿಟನ್‌ನಲ್ಲಿ ರಾಜಕೀಯ ಬದಲಾವಣೆಗಳು ನಡೆದವು. **ಛೇಂಬರ್‌ಲಿನ್**‌ನ ವಿರುದ್ಧ ಪ್ರಬಲ ಜನಾಭಿಪ್ರಾಯ ರೂಪುಗೊಂಡು ಸರ್ಕಾರ ಪತನವಾಗಿ **ಚರ್ಚಿಲ್** ಬ್ರಿಟನ್‌ನ ಪ್ರಧಾನಮಂತ್ರಿಯಾಗಿ ನೇಮಕಗೊಳ್ಳುವಂತಾಯಿತು.

ತನ್ನ ಮೇಲಿನ ದಾಳಿಗಳನ್ನು ತಡೆಯುವಲ್ಲಿ ಫ್ರಾನ್ಸ್ ವಿಫಲವಾಯಿತು. ಮುಸೋಲಿನಿ ಕೂಡ ಹಿಟ್ಲರ್‌ನೊಂದಿಗೆ ಕೈ ಜೋಡಿಸಿದ್ದರಿಂದ ಕೇವಲ ನಾಲ್ಕೈದು ದಿನಗಳಲ್ಲಿ ಫ್ರಾನ್ಸ್ ಸೋಲನ್ನೊಪ್ಪಿತು. ಸೋತ ಫ್ರಾನ್ಸ್ ಜರ್ಮನಿಯ ಜೊತೆಗೆ ಯುದ್ಧ ನಿಲುಗಡೆ ಒಪ್ಪಂದ ಮಾಡಿಕೊಂಡಿತು. ಹಿಟ್ಲರ್‌ನ ದಾಳಿಗಳ ತೀಕ್ಷ್ಣತೆಯಿಂದಾಗಿ ಬ್ರಿಟಿಷ್ ಪಡೆಗಳು ಕೂಡ ಕೆಲಕಾಲ ಇಂಗ್ಲೀಷ್ ಕಡಲ್ಗಾಲುವೆಯನ್ನು ತೆರವು ಮಾಡಬೇಕಾಗಿ ಬಂದಿತು. ಯುದ್ಧವನ್ನು ಮುಂದುವರೆಸಲು ಚರ್ಚಿಲ್ ಫ್ರಾನ್ಸ್‌ನ್ನು ಒತ್ತಾಯಿಸಿದ. ಆದರೆ ಫ್ಯಾರಿಸ್ಸಿನ ಪತನ ಹಾಗೂ ನಾಜಿಗಳೊಂದಿಗೆ ಫ್ಯಾಸಿಸ್ಟರು ಸೇರಿದ್ದರಿಂದ ಫ್ರಾನ್ಸ್ ಸೋತು ಆಕ್ರಮಿತ ಮತ್ತು ಅನಾಕ್ರಮಿತ ಎನ್ನೆದು ಎರಡು ಭಾಗವಾಯಿತು.

ಫ್ರಾನ್ಸ್‌ನ ಪತನ ನಂತರ ಬ್ರಿಟನ್‌ನ ಶರಣಾಗತಿಯನ್ನು ಹಿಟ್ಲರ್ ನಿರೀಕ್ಷಿಸಿದ್ದ. ಬ್ರಿಟನ್ ಶರಣಾಗದಿದ್ದಾಗ ಸೆಪ್ಟೆಂಬರ್ ೮, ೧೯೪೦ ರಿಂದ ಬ್ರಿಟನ್‌ನ ಮೇಲೆ ನಾಜಿಗಳ ದಾಳಿ ಆರಂಭವಾಯಿತು. ಇದೇ **ಬ್ಯಾಟಲ್ ಆಫ್ ಬ್ರಿಟನ್**. ಲಂಡನ್ ನಗರದ ಮೇಲೆ ನಿರಂತರ ಬಾಂಬ್ ದಾಳಿಗಳಾದವು. ಲಂಡನ್ ಕದನ ಮುಂದುವರಿದಂತೆ ಮ್ಯಾನ್‌ಚಸ್ಟರ್, ಬ್ರಿಸ್ಟಲ್, ಬರ್ನಿಂಗ್‌ಹ್ಯಾಮ್, ಷಫಿಲ್ಡ್, ಸೌತ್ ಹ್ಯಾಂಮ್‌ಟನ್, ಕಾರ್‌ಡೀಫ್ ಮತ್ತಿತರ ನಗರಗಳು ಬಾಂಬ್ ದಾಳಿಗೆ ತುತ್ತಾದವು. ಆರು ತಿಂಗಳುಗಳ ಈ ಯುದ್ಧದಲ್ಲಿ ಬ್ರಿಟನ್‌ನ ಜನತೆ ಒಂದು ಸಮುದಾಯವಾಗಿ ಹೋರಾಡಿತು. ಆದರೆ ಹಿಟ್ಲರ್ ಈ ಯುದ್ಧವನ್ನು ಅರ್ಧದಲ್ಲೇ ಕೈಬಿಟ್ಟು, ತನ್ನ ಗಮನವನ್ನು ರಷ್ಯಾದತ್ತ ತಿರುಗಿಸಿದ. ಇದೇ ವೇಳೆಗೆ ಇನ್ನೊಂದೆಡೆ **ಇಟಲಿ**, **ಈಜಿಪ್ಟ್** ಮತ್ತು ಲಿಬಿಯಾಗಳನ್ನು ವಶಪಡಿಸಿಕೊಂಡಿದ್ದಲ್ಲದೆ, **ಆಫ್ರಿಕಾ**ದಲ್ಲಿ ಯುದ್ಧವನ್ನು ಮುಂದುವರಿಸಿತ್ತು.

ಜೂನ್ ೨೨, ೧೯೪೧ ರಂದು ರಷ್ಯಾದ ಮೇಲೆ ಆಕ್ರಮಣವೆಸಗಿದ ಹಿಟ್ಲರ್ ಅದನ್ನು **ಆಪರೇಷನ್ ಬಾರ್ ಬರೋಸ** ಎಂದು ಕರೆದ, ನಾಜಿಗಳು ಆರಂಭದಲ್ಲಿ **ಲೆನಿನ್ ಗ್ರಾಡ**ನ್ನು ವಶಪಡಿಸಿಕೊಂಡು ನಂತರ ಇತರ ನಗರಗಳನ್ನು ವಶಪಡಿಸಿಕೊಳ್ಳುವ ಯೋಜನೆ ರೂಪಿಸಿದ್ದರು.

ರಷ್ಯಾದ ಗುಪ್ತಾಚಾರ ಇಲಾಖೆ ಈ ಬಗ್ಗೆ ಮೊದಲೆ ಸಂಪೂರ್ಣ ಮಾಹಿತಿ ನೀಡಿತ್ತು. ಯುದ್ಧ ಮುಂದುವರೆದಂತೆಲ್ಲ ನಾಜಿಗಳು ಲೆನಿನ್ ಗ್ರಾಡ್ ಮತ್ತು ಮಾಸ್ಕೋಗಳನ್ನು ಆಕ್ರಮಿಸಿದಾಗ ರಷ್ಯನ್ನರು ಪೂರ್ವಯೋಜಿತವಾಗಿ ಯಾವುದೇ ಪ್ರತಿರೋಧ ನೀಡಲಿಲ್ಲ. ನಾಜಿ ಸೈನ್ಯ ಒಳಬಂದ ನಂತರ ಎಲ್ಲೆಡೆಗಳಿಂದಲೂ ಆಕ್ರಮಿಸುವ ಯೋಜನೆಯನ್ನು ರಷ್ಯನ್ನರು ರೂಪಿಸಿದ್ದರು. ಕಮಾಂಡರ್ ಝುಕೋವ್ ಆಜ್ಞೆಯ ಮೇರೆಗೆ ರಷ್ಯನ್ನರು 'ಸ್ಕಾರ್ಚಡ್ ಅರ್ಥ್ ಪಾಲಿಸಿ' (Scorched Earth Policy) ಯನ್ನು ಅಂದರೆ ಶತ್ರುವಿಗೆ ಸಹಾಯಕವಾಗುವ ಎಲ್ಲವನ್ನೂ ನಾಶಗೊಳಿಸುವ ನೀತಿ ಅಳವಡಿಸಿಕೊಂಡರು. ಸ್ಟ್ಯಾಲಿನ್ ಗ್ರ್ಯಾಡ್‌ನಲ್ಲಿ ರಷ್ಯಾದ ಕೆಂಪು ಸೈನ್ಯಕ್ಕೂ ನಾಜಿಗಳಿಗೂ ಪ್ರಬಲವಾದ ಯುದ್ಧ ಸಂಭವಿಸಿತು. ಆದರೆ ನಾಜಿ ಪಡೆಗಳು ರಷ್ಯಾದ ಭೀಕರ ಚಳಿಯನ್ನು ಎದುರಿಸಲಾಗಲಿಲ್ಲ. ೧೯೪೪ ರ ಹೊತ್ತಿಗೆ ನಾಜಿ ಪಡೆಗಳು ಬರ್ಲಿನ್‌ವರೆಗೆ ಹಿಮ್ಮೆಟ್ಟಬೇಕಾಯಿತು.

ಇದೇ ವೇಳೆಗೆ ೧೯೪೧ ರಲ್ಲಿ ಜಪಾನ್ ಅಮೆರಿಕಾಕ್ಕೆ ಸೇರಿದ ಪರ್ಲ್ ಹಾರ್ಬರ್‌ನ ಮೇಲೆ ದಾಳಿ ಮಾಡಿದ್ದು ಇಲ್ಲಿಯವರೆಗೂ ತಟಸ್ಥವಾಗಿದ್ದ ಅಮೆರಿಕಾವನ್ನು ಯುದ್ಧರಂಗಕ್ಕೆ ಎಳೆದು ತಂದಿತು. ಇದು ಯುದ್ಧದ ಗತಿಯನ್ನೇ ಬದಲಾಯಿಸಿತು. ತಮ್ಮೆಲ್ಲಾ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಮಿತ್ರ ರಾಷ್ಟ್ರಗಳು ಆಕ್ಸಿಸ್ ಶಕ್ತಿಗಳ ವಿರುದ್ಧ ತೀವ್ರ ಹೋರಾಟ ಆರಂಭಿಸಿದವು.

ಇತ್ತ ಏಷ್ಯಾದಲ್ಲಿ ಜಪಾನ್ ಮುನ್ನಡೆ ಸಾಧಿಸುತ್ತಿತ್ತು. ಅದು ಮಾರ್ತಾಬಾನ್ ಕೊಲ್ಲಿ ಮೂಲಕ ರಂಗೂನ್ ಅನ್ನು ತಲುಪಿತ್ತು. ಜಪಾನ್ ಅಂತಿಮವಾಗಿ ಭಾರತದ ಬಾಗಿಲಿಗೆ ಬಂದಾಗ ಇಲ್ಲಿದ್ದ ಬ್ರಿಟಿಷ್ ಪಡೆಗಳು ಪ್ರಶಂಸಾರ್ಹ ಪ್ರತಿರೋಧ ನೀಡಿದವು. ೧೯೪೩ ರ ಆರಂಭದ ವೇಳೆಗ ಜಪಾನ್‌ನ ಮುಂದುವರಿಕೆಯನ್ನು ಸಾಕಷ್ಟು ನಿಯಂತ್ರಿಸಲಾಗಿತ್ತು.

ಯೂರೋಪಿನಲ್ಲಿ ಆಕ್ಸಿಸ್ ಶಕ್ತಿ ಕುಂದಲಾರಂಭಿಸಿತು. ಮಿತ್ರ ರಾಷ್ಟ್ರಗಳು ಇಟಲಿಯ ಮೇಲೆ ತೀವ್ರ ದಾಳಿ ಆರಂಭಿಸಿ ಅಂತಿಮವಾಗಿ ಮುಸೋಲಿನಿಯನ್ನು ಪದಚ್ಯುತಗೊಳಿಸಿ ಇಟಲಿಯನ್ನು ವಶಪಡಿಸಿಕೊಂಡವು. ೧೯೪೫ ರ ಏಪ್ರಿಲ್ ಅಂತ್ಯದ ವೇಳೆಗೆ ನಾಜಿ ಪಡೆಗಳು ತೀವ್ರ ಹಿನ್ನೆಡೆ ಕಂಡವು. ಮೇ ೨, ೧೯೪೫ ರಂದು ರಷ್ಯಾದ ಕೆಂಪು ಸೈನ್ಯ ಬರ್ಲಿನ್‌ನಲ್ಲಿ ವಿಜಯ ಪತಾಕೆ ಹಾರಿಸುವ ವೇಳೆಗಾಗಲೇ ಹಿಟ್ಲರ್‌ನ ಮರಣವನ್ನು ಘೋಷಿಸಲಾಗಿತ್ತು. ಆದರೂ ಜಪಾನ್ ಯುದ್ಧವನ್ನು ಮುಂದುವರೆಸಿತ್ತು. ಮಿತ್ರ ರಾಷ್ಟ್ರಗಳ ಎಚ್ಚರಿಕೆಯನ್ನು ಅದು ಪರಿಗಣಿಸಲಿಲ್ಲ. ಕೊನೆಗೆ ಅಮೆರಿಕಾ ಆಗಸ್ಟ್ ೬ ರಂದು ಜಪಾನ್‌ನ ಹಿರೋಷಿಮಾ ನಗರದ ಮೇಲೆ ಪ್ರಥಮ ಅಣುಬಾಂಬ್‌ನ್ನು ಹಾಕಿತು. ಮತ್ತೆ ಆಗಸ್ಟ್ ೯ ರಂದು ನಾಗಸಾಕಿ ನಗರದ ಮೇಲೆ ಅಣುಬಾಂಬ್ ದಾಳಿಯಾಯಿತು. ಅಂತಿಮವಾಗಿ ಜಪಾನ್ ಶರಣಾಗತಿ ಜೊಂದಿಗೆ ೨ ನೆಯ ಮಹಾಯುದ್ಧ ಕೊನೆಗೊಂಡಿತು.

ಯುದ್ಧದ ಪರಿಣಾಮಗಳು

ಹಿಂದಿನ ಎಲ್ಲಾ ಯುದ್ಧಗಳಿಗಿಂತ ಭೀಕರವಾದ ಮತ್ತು ವಿನಾಶಕಾರಿಯಾದ ಪರಿಣಾಮಗಳನ್ನು ಎರಡನೆಯ ಮಹಾಯುದ್ಧ ತಂದಿತು. ಈ ಯುದ್ಧದ ಪ್ರಭಾವಗಳು ಇಂದಿಗೂ ಕಂಡುಬರುವುದೇ ಇದಕ್ಕೆ ಸಾಕ್ಷಿ.

೧. ಆಸ್ತಿ ಮತ್ತು ಜೀವ ಹಾನಿ

ಎರಡನೇ ಮಹಾಯುದ್ಧದ ದೆಸೆಯಿಂದ ಸುಮಾರು ೨೫ ಮಿಲಿಯನ್ ಜನರು ವಿಶ್ವದಾದ್ಯಂತ ಮರಣ ಹೊಂದಿದರು. ಸುಮಾರು ೫೦ ಮಿಲಿಯನ್ ಜನತೆ ಹಾನಿ ಗೊಳಗಾದರು. **ಹಿರೋಷಿಮ** ಮತ್ತು **ನಾಗಸಾಕಿ**ಗಳ ಮೇಲಿನ ಅಣುಬಾಂಬ್ ದಾಳಿ ಊಹಿಸಲಾಗದಷ್ಟು ಜೀವಹಾನಿ ಮತ್ತು ಆಸ್ತಿ ನಷ್ಟವನ್ನು ಉಂಟುಮಾಡಿತು. ಇದರಲ್ಲಿ ಭಾಗವಹಿಸಿದ್ದ ಬಹುತೇಕ ಎಲ್ಲ ದೇಶಗಳ ಆರ್ಥಿಕತೆ ಸಂಕಷ್ಟಕ್ಕೆ ಈಡಾಯಿತು. ಎಲ್ಲೆಡೆ ಆಹಾರ, ಬಟ್ಟೆಗಳ ಸಮಸ್ಯೆಗಳು ಕಂಡುಬಂದವು.

೨. ತಕ್ಷಣದ ಸಮಸ್ಯೆಗಳು

ಯುದ್ಧ ಮುಗಿದ ತಕ್ಷಣವೆ ಸಮಸ್ಯೆಗಳ ಸರಮಾಲೆಯೇ ಆರಂಭವಾಯಿತು. ಲಕ್ಷಾಂತರ ನಿರಾಶ್ರಿತರ ಪುನರ್ ವ್ಯವಸ್ಥೆ, ನಾಶವಾಗಿದ್ದ ಆರ್ಥಿಕತೆಯ ಮರು ನಿರ್ಮಾಣ, ಯುದ್ಧ ಖೈದಿಗಳ ವಿಚಾರಣೆ ಮತ್ತು ಅಳಿದುಳಿದಿದ್ದ ನಾಜಿಗಳ ನಾಶದ ಸಮಸ್ಯೆಗಳು ಪ್ರಮುಖ ವಾಗಿದ್ದವು. ಮುಖ್ಯವಾಗಿ ರಾಷ್ಟ್ರ ರಾಷ್ಟ್ರಗಳ ನಡುವೆ ಪುನರ್ ಹೊಂದಾಣಿಕೆ ಅತ್ಯಾವಶ್ಯಕ ವಾಗಿದ್ದು, ಈ ನಿಟ್ಟಿನಲ್ಲಿ ಶಾಂತಿ ಒಪ್ಪಂದಗಳನ್ನು ನಡೆಸುವ ಪ್ರಯತ್ನಗಳಾಗಬೇಕಿತ್ತು. ಇದರೊಂದಿಗೆ ಯುದ್ಧದಿಂದ ಅಸ್ತವ್ಯಸ್ತಗೊಂಡಿದ್ದ ಯುರೋಪಿನ ಭೂಪಟವನ್ನು ಪುನರ್ ರಚಿಸಬೇಕಾಗಿತ್ತು. ಮುಖ್ಯವಾಗಿ ಎರಡನೇ ಮಹಾಯುದ್ಧದ ವಿನಾಶ ಇನ್ನು ಕಣ್ಣು ಮುಂದೆಯೇ ಇದ್ದುದರಿಂದ ನಿಶ್ಯಸ್ತ್ರೀಕರಣವನ್ನು ತುರ್ತಾಗಿ ಜಾರಿಗೊಳಿಸಬೇಕಾಗಿತ್ತು.

೩. ಮಿತ್ರ ರಾಷ್ಟ್ರಗಳ ಐಕ್ಯತೆಯ ಅಂತ್ಯ

ಯುದ್ಧ ಕಾಲದಲ್ಲಿಯೇ ಪ್ರಜಾಪ್ರಭುತ್ವ ರಾಷ್ಟ್ರಗಳಾದ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ಕಮ್ಯುನಿಸ್ಟ್ ರಷ್ಯಾಗಳ ನಡುವೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಸಾಮಾನ್ಯ ಶತ್ರುವನ್ನು ಎದುರಿಸುವುದಕ್ಕಾಗಿ ಅವು ಒಂದಾಗಿದ್ದವು. ಯುದ್ಧ ಮುಗಿದ ತಕ್ಷಣ ಈ ಭಿನ್ನಾಭಿಪ್ರಾಯಗಳು ಸ್ಫೋಟಗೊಂಡವು. ಅಮೆರಿಕಾ ಮಿತ್ರ ರಾಷ್ಟ್ರಗಳಿಗೆ ತಿಳಿಸದೆಯೇ ಅಣುಬಾಂಬ್‌ನ್ನು ತಯಾರಿಸಿದ್ದು, ಅದನ್ನು ಜಪಾನಿನ ಮೇಲೆ ಪ್ರಯೋಗಿಸಿದ್ದು ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಿತ್ತು. ಇದು ಮುಖ್ಯವಾಗಿ ಅಮೆರಿಕಾ ಮತ್ತು ರಷ್ಯಾಗಳ ನಡುವಿನ ಭಿನ್ನತೆಗಳು ದ್ವಿ-ದೃವ ರಾಜಕೀಯಕ್ಕೆ ಎಡೆಮಾಡಿಕೊಟ್ಟಿತು.

೪. ಆಕ್ಸಿಸ್ ಶಕ್ತಿಗಳ ಅಂತ್ಯ

ಯುದ್ಧದಲ್ಲಿ ಆಕ್ಸಿಸ್ ರಾಷ್ಟ್ರಗಳಾದ ಜರ್ಮನಿ, ಇಟಲಿ ಮತ್ತು ಜಪಾನ್‌ಗಳು ಸಂಪೂರ್ಣ ನಾಶವಾದವು. ಮುಖ್ಯವಾಗಿ ಜರ್ಮನಿಯನ್ನು ಮೊದಲು ನಾಲ್ಕು ಭಾಗಗಳಾಗಿ ವಿಭಜಿಸಿ, ಬರ್ಲಿನ್ ಅನ್ನು ನಾಲ್ಕು ಭಾಗಗಳಾಗಿ ವಿಭಾಗಿಸಲಾಯಿತು. ನಂತರ ಇದನ್ನು ಒಗ್ಗೂಡಿಸಿ ಇಡೀ ಜರ್ಮನಿಯನ್ನು ಎರಡು ಭಾಗಗಳಾಗಿ ಮಾಡಲಾಯಿತು. ಪಶ್ಚಿಮ ಜರ್ಮನಿಯ ಮೇಲೆ ಅಮೆರಿಕಾ ಮತ್ತು ಪೂರ್ವ ಜರ್ಮನಿಯ ಮೇಲೆ ರಷ್ಯಾ ಹಿಡಿತ ಸಾಧಿಸಿದವು. ಇಟಲಿಯ ಸಾಮ್ರಾಜ್ಯ ನಾಶವಾದುದಲ್ಲದೆ, ಅದರ ಮೇಲೆ ಯುದ್ಧ ನಷ್ಟ ಪರಿಹಾರವೂ ಹೇರಲ್ಪಟ್ಟಿತು. ಅಣುಬಾಂಬ್ ದಾಳಿಗೆ ತುತ್ತಾಗಿ ವಿನಾಶದ ಅಂಚಿನಲ್ಲಿದ್ದ ಜಪಾನ್ ಅಮೆರಿಕಾದ ಮೇಲ್ವಿಚಾರಣೆಗೆ ಒಳಪಟ್ಟಿತು. ಜರ್ಮನಿಯ ಯುದ್ಧ ಖೈದಿಗಳ ವಿಚಾರಣೆ **ನ್ಯೂರೆಂಬರ್ಗ್**ನಲ್ಲಿ ನಡೆಯಿತು.

೫. ಶಕ್ತಿ ಸಮತೋಲನದಲ್ಲಿ ಏರುಪೇರು

ಯುದ್ಧದ ಪರಿಣಾಮವಾಗಿ ಯೂರೋಪಿನ ರಾಜಕೀಯ ಶಕ್ತಿ ಸಮತೋಲನ ಏರುಪೇರಾಯಿತು. ಯುದ್ಧದಲ್ಲಿನ ಸಕ್ರಿಯ ಪಾತ್ರದಿಂದಾಗಿ ಅಮೆರಿಕಾ ಮತ್ತು ರಷ್ಯಾ ಯುದ್ಧದ ತರುವಾಯ **ಶ್ರೇಷ್ಠ ಶಕ್ತಿ**ಗಳಾಗಿ (Super Powers) ಹೊರಹೊಮ್ಮಿದವು. ಯುದ್ಧ ಪೂರ್ವದಲ್ಲಿ ಯೂರೋಪಿನ ನಾಯಕರಂತಿದ್ದ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಎರಡನೇ ದರ್ಜೆಗೆ ಇಳಿದವು. ಯುದ್ಧದ ಹೊಡೆತ ಅವುಗಳನ್ನು ಆರ್ಥಿಕವಾಗಿ ಕಂಗೆಡಿಸಿತ್ತು.

೬. ಸೈದ್ಧಾಂತಿಕ ಘರ್ಷಣೆಗಳು

ಯುದ್ಧದ ತರುವಾಯ ಪಶ್ಚಿಮದ ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ರಷ್ಯಾದ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ತೀವ್ರವಾದವು. ಪೂರ್ವ ಮತ್ತು ಮಧ್ಯ ಯೂರೋಪ್‌ನ ಅನೇಕ ರಾಷ್ಟ್ರಗಳು ಕಮ್ಯುನಿಸ್ಟ್ ರಷ್ಯಾದ ಪ್ರಭಾವಕ್ಕೆ ಒಳಗಾಗಿದ್ದು ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಕಸಿವಿಸಿಯನ್ನುಂಟು ಮಾಡಿತು. ಅಮೆರಿಕಾ ರಷ್ಯಾದ ವಿರೋಧಿ ಬಣದ ನಾಯಕತ್ವ ವಹಿಸಿಕೊಂಡ ಪರಿಣಾಮವಾಗಿ ವಿಶ್ವ ಎರಡು ಬಣಗಳಾಗಿ ಒಡೆದು ದ್ವಿ ಧ್ರುವ ರಾಜಕೀಯ ಆರಂಭವಾಯಿತು. ಅಮೆರಿಕಾ ನಾಯಕತ್ವದಲ್ಲಿ **ನ್ಯಾಟೋ** (NATO) ಮತ್ತು ರಷ್ಯಾದ ನಾಯಕತ್ವದಲ್ಲಿ **ವಾರ್ಸಾ** (WARSAW) ಎಂಬ ಸೈನಿಕ ಕೂಟಗಳು ರಚನೆಯಾದವು. ಏಷ್ಯಾದಲ್ಲಿ ಚೀನಾ ಶ್ರೇಷ್ಠ ಶಕ್ತಿಯಾಗಿ ಹೊರಹೊಮ್ಮಿತು.

೭. ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ರಾಷ್ಟ್ರೀಯತೆಗೆ ಪ್ರಚೋದನೆ

ದ್ವಿತೀಯ ವಿಶ್ವ ಸಮರದ ಪ್ರಭಾವದಿಂದ ಏಷ್ಯಾ ಮತ್ತು ಆಫ್ರಿಕಾಗಳ ಅನೇಕ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಅಥವಾ ವಸಾಹತು ವಿರೋಧಿ ಚಳವಳಿಗಳು ತೀವ್ರಗೊಂಡವು. ಭಾರತ, ಇಂಡೋನೇಷಿಯಾ, ಬರ್ಮಾ, ಶ್ರೀಲಂಕಾಗಳು ಯುದ್ಧದ ತರುವಾಯ ಸ್ವತಂತ್ರವಾದವು.

ಅದೇ ರೀತಿ ಇಂಡೋ ಚೈನಾ, ವಿಯೆಟ್ನಾಂ, ಕಾಂಬೋಡಿಯಾ ಮತ್ತು ಲಾವೋಸ್‌ಗಳೂ ಸ್ವತಂತ್ರ ಗಳಿಸಿಕೊಂಡವು. ಕ್ಯಾಮರೂನ್, ಮಾಲೀ, ನೈಜೀರಿಯಾ, ಸೋಮಾಲಿ ಲ್ಯಾಂಡ್, ಕಾಂಗೋ, ಟಾಂಗೋನಿಸ್‌ಕಾದಂತಹ ಆಫ್ರಿಕನ್ ರಾಷ್ಟ್ರಗಳು, ಕೆಲವು ಮಧ್ಯ ಪ್ರಾಚ್ಯದ ರಾಷ್ಟ್ರಗಳು ಸ್ವತಂತ್ರಗೊಂಡವು. ಚೀನಾದಲ್ಲಿ **ಕಮ್ಯುನಿಸ್ಟ್ ಸರ್ಕಾರ** ರಚನೆಯಾಯಿತು.

೮. ವಿಶ್ವಸಂಸ್ಥೆಯ ಸ್ಥಾಪನೆ

ದ್ವಿತೀಯ ವಿಶ್ವ ಸಮರದ ತಕ್ಷಣದ ಪರಿಣಾಮವೆಂದರೆ **ವಿಶ್ವಸಂಸ್ಥೆ** ಅಸ್ತಿತ್ವಕ್ಕೆ ಬಂದಿದ್ದು. ಹಿಂದಿನ **ಲೀಗ್ ಆಫ್ ನೇಷನ್ಸ್‌**ನ ವಿಫಲತೆ ಯುದ್ಧಕ್ಕೆ ಒಂದು ಕಾರಣವಾಗಿತ್ತು. ಹಾಗಾಗಿ ಮಿತ್ರ ರಾಷ್ಟ್ರಗಳ ನಾಯಕರು ಯುದ್ಧ ಸಮಯದಲ್ಲಿಯೇ ಅನೇಕ ಸಮ್ಮೇಳನಗಳಲ್ಲಿ ವಿಶ್ವಸಂಸ್ಥೆ ಸ್ಥಾಪನೆ ಬಗ್ಗೆ ಚರ್ಚಿಸಿದ್ದರು. ತತ್ಫಲವಾಗಿ ಯುದ್ಧ ಮುಗಿದ ತಕ್ಷಣವೇ ಅಕ್ಟೋಬರ್ ೨೪, ೧೯೪೫ ರಂದು **ವಿಶ್ವಸಂಸ್ಥೆ** ಅಸ್ತಿತ್ವಕ್ಕೆ ಬಂದಿತು.

೩.೩ ವಿಶ್ವಸಂಸ್ಥೆ

ವಿಶ್ವಸಂಸ್ಥೆಯ ಮೂಲ : ಮೊದಲನೇ ಮಹಾಯುದ್ಧದ ನಂತರ ಪ್ರಾರಂಭವಾದ ಲೀಗ್ ಸಂಪೂರ್ಣವಾಗಿ ವಿಫಲವಾಗಿತ್ತು. ಲೀಗ್‌ನ ಅಶಕ್ತತೆ ಎರಡನೇ ಮಹಾಯುದ್ಧದ ಪ್ರಮುಖ ಕಾರಣವಾಯಿತು. ಎರಡನೇ ಮಹಾಯುದ್ಧದ ಭೀಕರ ಪರಿಣಾಮಗಳನ್ನು ಕಾಣುತ್ತಿದ್ದ ಮಿತ್ರ ರಾಷ್ಟ್ರಗಳು ಭವಿಷ್ಯದಲ್ಲಿ ವಿನಾಶಕಾರಿ ಯುದ್ಧಗಳಿಂದ ಮಾನವ ಜನಾಂಗವನ್ನು ರಕ್ಷಿಸುವ ಕುರಿತು ಯೋಜಿಸಲಾರಂಭಿಸಿದವು. ಇದಕ್ಕಾಗಿ ಅಂತರರಾಷ್ಟ್ರೀಯ ಸಂಸ್ಥೆಯೊಂದರ ಅವಶ್ಯಕತೆಯನ್ನು ಮನಗಂಡ ಮಿತ್ರ ರಾಷ್ಟ್ರಗಳು ವಿಶ್ವಸಂಸ್ಥೆಯ ಸ್ಥಾಪನೆಗೆ ಬುನಾದಿ ಹಾಕಿದವು. ಆ ಮೂಲಕ ಯುದ್ಧಗಳನ್ನು, ಹಿಂಸೆಯನ್ನು, ಆರ್ಥಿಕ ನಷ್ಟವನ್ನು ತಡೆಯುವುದಲ್ಲದೆ ಜಗತ್ತಿನ ಏಳಿಗೆಯನ್ನು, ಶಾಂತಿ ಸುವ್ಯವಸ್ಥೆಯನ್ನು ಅವರು ಬಯಸಿದ್ದರು.

ವಿಶ್ವಸಮರ ನಡೆಯುತ್ತಿದ್ದ ವೇಳೆಯಲ್ಲಿಯೇ ವಿಶ್ವಸಂಸ್ಥೆಯ ಸ್ಥಾಪನೆಯ ಪ್ರಯತ್ನಗಳು ಆರಂಭವಾಗಿದ್ದವು. ೧೯೪೧ ಜೂನ್‌ನಲ್ಲಿ ನಡೆದ ಲಂಡನ್ ಸಮ್ಮೇಳದಲ್ಲಿ ಬ್ರಿಟನ್, ಕೆನಡ, ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕಾದ ಪ್ರತಿನಿಧಿಗಳು, ವಿಶ್ವಮಟ್ಟದ ಸಂಘಟನೆ ಯೊಂದರ ಸ್ಥಾಪನೆಗೆ ಅನುಮೋದನೆ ನೀಡಿದರು. ೧೯೪೧ ರ ಆಗಸ್ಟ್‌ನಲ್ಲಿ ಅಮೆರಿಕಾದ ಅಧ್ಯಕ್ಷ **ರೂಸ್‌ವೆಲ್ಟ್** ಮತ್ತು ಬ್ರಿಟನ್‌ನ ಪ್ರಧಾನಿ **ಚರ್ಚಿಲ್‌**ರವರು ಯುದ್ಧದ ಧ್ಯೇಯೋದ್ದೇಶಗಳನ್ನು ಸೂಚಿಸುವ **ಅಟ್ಲಾಂಟಿಕ್ ಚಾರ್ಟರ್**‌ಗೆ ಸಹಿ ಮಾಡಿದರು. ಇದರಲ್ಲಿ ಎಲ್ಲರ ಭದ್ರತೆಯನ್ನು ಕಾಪಾಡುವ ಖಾಯಂ ವ್ಯವಸ್ಥೆಯ ಅವಶ್ಯಕತೆಯನ್ನು ಸೂಚಿಸಿತ್ತು. ಮುಂದೆ **೧೯೪೨ ರ ಜನವರಿಯಲ್ಲಿ ವಾಷಿಂಗ್‌ಟನ್‌**ನಲ್ಲಿ ೨೬ ರಾಷ್ಟ್ರಗಳು ಸಭೆ ಸೇರಿ ವಿಶ್ವಸಂಸ್ಥೆಯ ಆರಂಭಕ್ಕೆ ಒಪ್ಪಿಗೆ ಸೂಚಿಸಿದವು. ೧೯೪೩ ರ ಮಾಸ್ಕೋ ಪ್ರಕಟನೆಯಲ್ಲಿ, ಬ್ರಿಟನ್, ಅಮೆರಿಕಾ, ರಷ್ಯ ಮತ್ತು ಚೀನಾಗಳ ವಿದೇಶಾಂಗ ಮಂತ್ರಿಗಳು ವಿಶ್ವಸಂಸ್ಥೆಯ ಸ್ಥಾಪನೆಯನ್ನು ಬೆಂಬಲಿಸಿದರು.

೧೯೪೫ ರ ಯಲ್ಟಾ ಸಮಾವೇಶ ವಿಶ್ವಸಂಸ್ಥೆಯ ಅಧಿವೇಶನವನ್ನು ಕರೆಯಲು ತೀರ್ಮಾನಿಸಿತು. ರೂಸ್‌ವೆಲ್ಟ್, ಸ್ಟ್ಯಾಲಿನ್ ಮತ್ತು ಚರ್ಚಿಲ್ ಈ ಬಗ್ಗೆ ಒಮ್ಮತ ಸೂಚಿಸಿರು. ಅದರಂತೆ ಜೂನ್ ೧೯೪೫ ರಲ್ಲಿ ವಿಶ್ವಸಂಸ್ಥೆಯ ಪ್ರಥಮ ಅಧಿವೇಶನವನ್ನು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಕರೆಯಲಾಯಿತು. ಇದರಲ್ಲಿ ೫೧ ರಾಷ್ಟ್ರಗಳ ಪ್ರತಿನಿಧಿಗಳು ವಿಶ್ವಸಂಸ್ಥೆಯ ಸಂವಿಧಾನಕ್ಕೆ (CHARTER) ಸಹಿ ಹಾಕಿದರು. ಇದರನ್ವಯ **ಅಕ್ಟೋಬರ್** ೨೪, ೧೯೪೫ ರಂದು ವಿಶ್ವಸಂಸ್ಥೆ ಕಾರ್ಯರೂಪಕ್ಕೆ ಬಂದಿತು.

ವಿಶ್ವಸಂಸ್ಥೆಯ ಸಂವಿಧಾನದಲ್ಲಿ ಅದರ ಗುರಿ ಮತ್ತು ಉದ್ದೇಶಗಳನ್ನು ಹಾಗೂ ಅದನ್ನು ಸಾಧಿಸಲು ಬೇಕಾದ ನಿಯಮಗಳನ್ನು ವಿವರಿಸಲಾಗಿದೆ.

ವಿಶ್ವಸಂಸ್ಥೆಯ ಧ್ಯೇಯ ಮತ್ತು ಉದ್ದೇಶಗಳು

೧. ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.

೨. ವಿಶ್ವದ ರಾಷ್ಟ್ರಗಳ ಮಧ್ಯೆ ಸಹಕಾರ ಭಾವನೆಯನ್ನು ವೃದ್ಧಿಗೊಳಿಸುವುದು.

೩. ಮೂಲಭೂತ ಹಕ್ಕುಗಳ ರಕ್ಷಣೆ ಮತ್ತು ಮಾನವ ಜನಾಂಗದ ಬಗ್ಗೆ ಗೌರವ ಮೂಡಿಸುವುದು.

೪. ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸುವುದು.

೫. ಅಂತರರಾಷ್ಟ್ರೀಯ ಕಾನೂನುಗಳನ್ನು ಗೌರವಿಸುವುದು ಮತ್ತು ರಕ್ಷಿಸುವುದು.

ವಿಶ್ವಸಂಸ್ಥೆಯ ಆಡಳಿತ ಕೇಂದ್ರ ನ್ಯೂಯಾರ್ಕ್‌ನಲ್ಲಿದೆ. ನೀಲಿ ಬಣ್ಣದ ಮೇಲೆ ಬಿಳಿಯ ಗುರುತನ್ನು ಹೊಂದಿರುವ **ಬಾವುಟವನ್ನು** ವಿಶ್ವಸಂಸ್ಥೆ ಹೊಂದಿದ್ದು ಅದರ **ಚಿನ್ಹೆಯಲ್ಲಿ** ಗೋಳದ ಭೂಪಟವು ಎರಡು ಕಡೆ ಆಲೀವ್ ಕೊಂಬೆಗಳನ್ನು ಹೊಂದಿದೆ. ವಿಶ್ವಸಂಸ್ಥೆಯು, ಇಂಗ್ಲೀಷ್, ಫ್ರೆಂಚ್, ಚೀನಿ, ಅರೇಬಿಕ್ ಮತ್ತು ಸ್ಪಾನಿಷ್ ಭಾಷೆಗಳನ್ನು ವ್ಯವಹಾರಿಕ ಭಾಷೆಗಳಾಗಿ ಹೊಂದಿದೆ. ಆದರೆ ಇಂಗ್ಲೀಷ್ ಮತ್ತು ಫ್ರೆಂಚ್‌ಗಳನ್ನು ಕಾರ್ಯನಿರ್ವಹಣಾ ಭಾಷೆಗಳನ್ನಾಗಿ ಬಳಸುತ್ತದೆ.

ಸದಸ್ಯತ್ವದ ನಿಯಮಾವಳಿಗಳು

ಶಾಂತಿಯನ್ನು ಬಯಸುವ, ಸಂಸ್ಥೆಯ ಧ್ಯೇಯ ಮತ್ತು ಉದ್ದೇಶಗಳನ್ನು ಗೌರವಿಸುವ, ಸಂವಿಧಾನವನ್ನು ಅನುಸರಿಸುವ ಎಲ್ಲ ರಾಷ್ಟ್ರಗಳಿಗೂ ವಿಶ್ವಸಂಸ್ಥೆಯ ಸದಸ್ಯತ್ವ ಮುಕ್ತವಾಗಿದೆ. ಹೊಸ ಸದಸ್ಯರು ಭದ್ರತಾ ಮಂಡಳಿಯಿಂದ ಸೂಚಿಸಲ್ಪಟ್ಟು, ಮಹಾಸಭೆಯಲ್ಲಿ ೨/೩ನೇ ಬಹುಮತವನ್ನು ಪಡೆದಾಗ ಸದಸ್ಯತ್ವಕ್ಕೆ ಅರ್ಹವಾಗುತ್ತಾರೆ. ಪ್ರಸ್ತುತ ವಿಶ್ವಸಂಸ್ಥೆಯ ಒಟ್ಟು ಸದಸ್ಯರ ಸಂಖ್ಯೆ ೧೯೧.

ವಿಶ್ವಸಂಸ್ಥೆಯ ಪ್ರಧಾನ ಅಂಗ-ಸಂಸ್ಥೆಗಳು

ವಿಶ್ವಸಂಸ್ಥೆ ತನ್ನದೇ ಆದ ಪ್ರಮುಖ ಅಂಗ-ಸಂಸ್ಥೆಗಳನ್ನು ಹೊಂದಿದೆ. ವಿಶ್ವಸಂಸ್ಥೆ ತನ್ನ **ಶಾಸಕಾಂಗ, ಕಾರ್ಯಾಂಗ** ಮತ್ತು **ನ್ಯಾಯಾಂಗದ** ಕೆಲಸಗಳನ್ನು ನಿರ್ವಹಿಸಲು ಆರು ಪ್ರಮುಖ ಅಂಗಗಳನ್ನು ಹೊಂದಿದೆ. ಅವು -

೧. ಮಹಾಸಭೆ

೨. ಭದ್ರತಾ ಮಂಡಳಿ

೩. ಆರ್ಥಿಕ ಮತ್ತು ಸಾಮಾಜಿಕ ಸಮಿತಿ

೪. ಧರ್ಮದರ್ಶಿ ಮಂಡಳಿ

೫. ಅಂತರರಾಷ್ಟ್ರೀಯ ನ್ಯಾಯಾಲಯ

೬. ಕಾರ್ಯಾಲಯ

೧. ಮಹಾಸಭೆ

ವಿಶ್ವಸಂಸ್ಥೆಯ ಎಲ್ಲಾ ಸದಸ್ಯರು ಈ ಸಭೆಯ ಸದಸ್ಯರಾಗಿರುತ್ತಾರೆ. ಮಹಾಸಭೆ ವಿಶ್ವಸಂಸ್ಥೆಯ ಶಾಸಕಾಂಗೀಯ ಕಾರ್ಯಗಳನ್ನು ನಿರ್ವಹಿಸುತ್ತದೆ. ವರ್ಷಕ್ಕೆ ಒಮ್ಮೆ ಸಾಮಾನ್ಯ ಸಭೆ ಸೇರುವ ಇದು, ಅವಶ್ಯಕವಾದರೆ ವಿಶೇಷ ಸಭೆಗಳನ್ನು ನಡೆಸುತ್ತದೆ. ಮಹಾಸಭೆಯು ಧರ್ಮದರ್ಶಿ ಮಂಡಳಿಯ ಮತ್ತು ವಿಶ್ವಸಂಸ್ಥೆಯ ಹಣಕಾಸು ವ್ಯವಹಾರಗಳ ಮೇಲ್ವಿಚಾರಣೆಯನ್ನು ನಡೆಸುತ್ತದೆ. ಇದು ಸದಸ್ಯರ ನೇಮಕ, ಅಮಾನತು ಹಾಗೂ ವಜಾ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಪ್ರತೀ ಸದಸ್ಯ ರಾಷ್ಟ್ರದಿಂದ ಐದು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಬಹುದಾಗಿದ್ದು, ಒಂದು ಮತ ಮಾತ್ರ ಚಲಾಯಿಸಬಹುದಾಗಿದೆ. ಮಹಾಸಭೆಯ ಅಧ್ಯಕ್ಷರು ಪ್ರತಿ ವರ್ಷ ಚುನಾಯಿಸಲ್ಪಡುತ್ತಾರೆ. ಇಲ್ಲಿ ವಿಶ್ವದ ಶಾಂತಿ, ಭದ್ರತೆ, ನಿಶ್ಯಸ್ತ್ರೀಕರಣ, ಮಾನವಹಕ್ಕುಗಳು ಇತ್ಯಾದಿಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ.

೨. ಭದ್ರತಾಮಂಡಳಿ

ಇದು ವಿಶ್ವಸಂಸ್ಥೆಯ ಕಾರ್ಯಕಾರಿ ಮಂಡಳಿಯಾಗಿ ಕಾರ್ಯ ನಿರ್ವಹಿಸುತ್ತದೆ. ಇದರಲ್ಲಿ ಖಾಯಂ ಮತ್ತು ತತ್ಕಾಲಿಕ ಎಂಬ ಎರಡು ಬಗೆಯ ಸದಸ್ಯತ್ವವಿದೆ. ಅಮೇರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೈನಾಗಳು ಖಾಯಂ ಸದಸ್ಯರು. ೧೦ ಜನ ತತ್ಕಾಲಿಕ ಸದಸ್ಯರು, ಎರಡು ವರ್ಷದ ಅವಧಿಗೆ ಮಹಾಸಭೆಯಿಂದ ಆಯ್ಕೆಯಾಗುತ್ತಾರೆ. ಖಾಯಂ ಸದಸ್ಯರಿಗೆ ಮಾತ್ರ ವಿಟೋ (ನಿಷೇದಾಧಿಕಾರ) ಚಲಾಯಿಸುವ ಹಕ್ಕು ಇದೆ. ಭದ್ರತಾಮಂಡಳಿ ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುವ, ಹೊಸ ಸದಸ್ಯರನ್ನು ಶಿಫಾರಸ್ಸು ಮಾಡುವ, ಸೆಕ್ರೆಟರಿ ಜನರಲ್‌ರನ್ನು ನೇಮಿಸುವ, ಶಾಂತಿ, ಭದ್ರತೆ, ನಿಶ್ಯಸ್ತ್ರೀಕರಣಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ.

೩. ಆರ್ಥಿಕ ಮತ್ತು ಸಾಮಾಜಿಕ ಸಮಿತಿ

ಮಹಾಸಭೆಯಿಂದ ಮೂರು ವರ್ಷಗಳ ಅವಧಿಗೆ ಆಯ್ಕೆಯಾದ ೨೭ ಸದಸ್ಯರಿಂದ ಈ ಸಮಿತಿ ರೂಪುಗೊಳ್ಳುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಅಭಿವೃದ್ಧಿಯ ಗುರಿ ಹೊಂದಿದೆ. ಇದರೊಂದಿಗೆ ಮಾನವ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಗೌರವಿಸಿ ಪ್ರೋತ್ಸಾಹಿಸುವುದು ಇದರ ಇನ್ನೊಂದು ಉದ್ದೇಶ. ಈ ಸಮಿತಿ ವರ್ಷದಲ್ಲಿ ಕನಿಷ್ಠ ಎರಡು ಬಾರಿ ಸಮಾವೇಶಗೊಳ್ಳುತ್ತದೆ.

೪. ಧರ್ಮದರ್ಶಿ ಮಂಡಳಿ

ಈ ಸಮಿತಿಯ ಮುಖ್ಯ ಉದ್ದೇಶವೆಂದರೆ, ಮೊದಲನೆಯ ಮಹಾಯುದ್ಧದ ನಂತರ ಲೀಗ್‌ನ ಮೇಲ್ವಿಚಾರಣೆಯಡಿ ಇದ್ದ ರಾಷ್ಟ್ರಗಳ (ಮ್ಯಾನ್‌ಡೇಟ್‌ಗಳ) ಆಡಳಿತವನ್ನು ನೋಡಿ

ಕೊಳ್ಳುವುದು ಹಾಗೂ ಅವುಗಳ ಶಾಂತಿ ಮತ್ತು ಭದ್ರತೆಯ ರಕ್ಷಣೆ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಸಾಧಿಸುವುದು ಮತ್ತು ರಾಷ್ಟ್ರಗಳ ಸ್ವಯಂ ಆಡಳಿತಕ್ಕೆ ಅಥವಾ ಸ್ವಾತಂತ್ರ್ಯ ಸಾಧನೆಗೆ ಬೆಂಬಲ ನೀಡುವುದು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮತ್ತು ಮಹಾಸಭೆಯ ಖಾಯಂ ಸದಸ್ಯರಿಂದ ಆಯ್ಕೆಯಾದ ಸದಸ್ಯರನ್ನು ಧರ್ಮದರ್ಶಿ ಮಂಡಳಿ ಹೊಂದಿರುತ್ತದೆ. ಪ್ರತಿ ಸದಸ್ಯನಿಗೂ ಒಂದು ಮತದ ಹಕ್ಕು ಇರುತ್ತದೆ.

೫. ಅಂತರರಾಷ್ಟ್ರೀಯ ನ್ಯಾಯಾಲಯ

ಇದು ವಿಶ್ವಸಂಸ್ಥೆಯ ಪ್ರಮುಖ ಅಂಗ. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ವಿಶ್ವಸಂಸ್ಥೆಯು ಭದ್ರತಾಮಂಡಳಿಯ ಸಹಕಾರದೊಂದಿಗೆ ನೇಮಿಸುತ್ತದೆ. ಇಲ್ಲಿ ಒಟ್ಟು ೧೫ ನ್ಯಾಯಾಧೀಶರಿದ್ದು ಅವರ ಅಧಿಕಾರಾವಧಿ ೯ ವರ್ಷಗಳು. ಈ ನ್ಯಾಯಾಲಯ, ಅಂತರರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವ ಪ್ರಮುಖ ಕಾರ್ಯವನ್ನು ನಿರ್ವಹಿಸುತ್ತದೆ. ವರ್ಷ ಪೂರ್ತಿ ಕಾರ್ಯನಿರ್ವಹಿಸುವ ಅಂತರರಾಷ್ಟ್ರೀಯ ನ್ಯಾಯಾಲಯದ ಪ್ರಧಾನ ಕಛೇರಿ ಹಾಲೆಂಡಿನ **ಹೇಗ್** ನಗರದಲ್ಲಿದೆ.

೬. ಕಾರ್ಯಾಲಯ

ಕಾರ್ಯಾಲಯವು ವಿಶ್ವಸಂಸ್ಥೆಯ ಎಲ್ಲಾ ಅಂಗಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುತ್ತದೆ. ಭದ್ರತಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ಮಹಾಸಭೆಯು **ಸೆಕ್ರೆಟರಿ ಜನರಲ್**‌ರನ್ನು ನೇಮಿಸುತ್ತದೆ. ಇವನು ಕಾರ್ಯಾಲಯ ಮುಖ್ಯಸ್ಥ. ಸೆಕ್ರೆಟರಿ ಜನರಲ್‌ರ ಅಧಿಕಾರಾವಧಿ ಐದು ವರ್ಷಗಳಾಗಿದ್ದರೂ, ಅವನನ್ನು ಮರು ನೇಮಕ ಮಾಡಬಹುದು. ಸೆಕ್ರೆಟರಿ ಜನರಲ್ ವಿಶ್ವಸಂಸ್ಥೆಯ ಕಾರ್ಯ ಕಲಾಪಗಳ ಬಗ್ಗೆ ಪ್ರತಿ ವರ್ಷ ಮಹಾಸಭೆಗೆ ವರದಿ ಸಲ್ಲಿಸಬೇಕು. ಕಾರ್ಯಾಲಯದ ಪ್ರಧಾನ ಕಛೇರಿ **ನ್ಯೂಯಾರ್ಕ್**‌ನಲ್ಲಿದೆ.

ಇಲ್ಲಿಯವರೆಗೆ ಕಾರ್ಯಾಲಯದ ಸೆಕ್ರೆಟರಿ ಜನರಲ್‌ಗಳಾಗಿ ಕಾರ್ಯ ನಿರ್ವಹಿಸಿದವರೆಂದರೆ :

೧. ನಾರ್ವೆಯ **ಟ್ರಿಗ್ವೇ ಲೀ** - ೧೯೪೬-೫೩

೨. ಸ್ವೀಡನ್ನಿನ **ಡ್ಯಾಗ್ ಹ್ಯಾಮರ್ ಸಾಲ್ಡ್** - ೧೯೫೩-೬೧

೩. ಬರ್ಮದ **ಊ ಥಾಂಟ್** - ೧೯೬೧-೭೧

೪. ಆಸ್ಟ್ರಿಯಾದ **ಕರ್ಟ್ ವಾಲ್‌ಡೈಮ್** - ೧೯೭೧-೮೧

೫. ಪೆರುವಿನ **ಜಾವಿಯರ್ ಪೆರೇಸ್ ಡಿ ಕೂಲರ್** - ೧೯೮೧-೯೧

೬. ಈಜಿಪ್ಟಿನ **ಬೂತ್‌ರೋಸ್ ಬೂತ್‌ರೋಸ್ ಘಾಲಿ** - ೧೯೯೨-೯೭

೭. ಘಾನದ **ಕೋಫಿ ಅನ್ನಾನ್** ೧೯೯೭ -

ವಿಶ್ವಸಂಸ್ಥೆಯ ವಿಶೇಷ ಸಮಿತಿಗಳು

ಈ ಮೇಲಿನ ಪ್ರಧಾನ ಅಂಗಗಳ ಜೊತೆಗೆ ಅನೇಕ ವಿಶೇಷ ಸಮಿತಿಗಳ ಮೂಲಕವೂ ವಿಶ್ವಸಂಸ್ಥೆ ಕಾರ್ಯನಿರ್ವಹಿಸುತ್ತದೆ.

೧. ಆಹಾರ ಮತ್ತು ಕೃಷಿ ಸಮಿತಿ (F.A.O)

ಪ್ರಪಂಚದ ಆಹಾರದ ಸಮಸ್ಯೆಯನ್ನು ನೀಗಿಸುವ, ಗ್ರಾಮೀಣ ಜನರ ಪರಿಸ್ಥಿತಿಯನ್ನು ಸುಧಾರಿಸುವ, ಸಸ್ಯ ಮತ್ತು ಪ್ರಾಣಿಗಳ ರೋಗಗಳನ್ನು ತಡೆಯುವ, ಹಸಿವಿನಿಂದ ಬಳಲುವ ಜನರಿಗೆ ಸಹಾಯ ಮಾಡುವ ಮತ್ತು ಅರಣ್ಯ ಹಾಗೂ ಮೀನುಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಉದ್ದೇಶಗಳನ್ನು ಈ ಸಮಿತಿಯು ಹೊಂದಿದೆ. ಇದು ೧೯೪೫ ರ ಅಕ್ಟೋಬರ್‌ನಲ್ಲಿ ಪ್ರಾರಂಭವಾಯಿತು. ಇದರ ಕೇಂದ್ರ ಕಛೇರಿ ರೋಂನಲ್ಲಿದೆ.

೨. ಅಂತರರಾಷ್ಟ್ರೀಯ ಕಾರ್ಮಿಕರ ಸಮಿತಿ (I.L.O)

ಈ ಸಮಿತಿ ಕಾರ್ಮಿಕರ ಪರಿಸ್ಥಿತಿಯನ್ನು ಉತ್ತಮಪಡಿಸುವ, ಜೀವನ ಮಟ್ಟವನ್ನು ಸುಧಾರಿಸುವ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸ್ಥಿರತೆಯನ್ನು ಕಾಪಾಡುವ ಉದ್ದೇಶಗಳನ್ನು ಹೊಂದಿದೆ. ಇದು ೧೯೪೬ ರಲ್ಲಿ ಸ್ಥಾಪನೆಯಾಗಿದ್ದು, ಜಿನೀವಾದಲ್ಲಿದೆ.

೩. ವಿಶ್ವ ಆರೋಗ್ಯ ಸಂಸ್ಥೆ (W.H.O)

ಇದು ೧೯೪೮ ರಲ್ಲಿ ಅಸ್ತಿತ್ವಕ್ಕೆ ಬಂದಿತು. ವಿಶ್ವದ ಜನರ ಆರೋಗ್ಯ ಮಟ್ಟವನ್ನು ಹೆಚ್ಚಿಸುವ, ಆರೋಗ್ಯ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ಉತ್ತೇಜಿಸುವ ಮತ್ತು ಹೊಸ ಸಂಶೋಧನೆಗಳನ್ನು ಪ್ರಚಾರ ಮಾಡುವ ಉದ್ದೇಶಗಳನ್ನು W.H.O ಹೊಂದಿದೆ. ಇದು ಸಹ ಜಿನೀವಾದಲ್ಲಿದೆ.

೪. ಅಂತರರಾಷ್ಟ್ರೀಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿ (UNESCO)

ಈ ಸಮಿತಿ ರಾಷ್ಟ್ರಗಳ ನಡುವೆ ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಹಕಾರ ತರುವ ಉದ್ದೇಶ ಹೊಂದಿದೆ. ಈ ಸಂಸ್ಥೆಯು ವಿಶ್ವದಾದ್ಯಂತ ನ್ಯಾಯದ ಬಗ್ಗೆ ಗೌರವ ಹುಟ್ಟಿಸುವ, ಕಾನೂನಿನ ಶ್ರೇಷ್ಠತೆಯನ್ನು ಕಾಪಾಡುವ ಮತ್ತು ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಉದ್ದೇಶವನ್ನು ಹೊಂದಿದೆ. ಇದು ೧೯೪೬ ರಲ್ಲಿ ಸ್ಥಾಪನೆ ಆಯಿತು. ಪ್ಯಾರಿಸ್‌ನಲ್ಲಿದೆ.

೫. ಅಂತರರಾಷ್ಟ್ರೀಯ ಹಣಕಾಸು ನಿಧಿ (I.M.F)

ಇದು ಅಂತರರಾಷ್ಟ್ರೀಯ ಆರ್ಥಿಕಾಭಿವೃದ್ಧಿಗಾಗಿ ಶ್ರಮಿಸುತ್ತಿದೆ. ರಾಷ್ಟ್ರಗಳ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಸಾಲವನ್ನು ಒದಗಿಸುತ್ತದೆ. ಅದೇ ರೀತಿ ಅಲ್ಪಾವಧಿ ಸಾಲಗಳನ್ನು ನೀಡುವ ಮೂಲಕ ವ್ಯಾಪಾರದ ಸಮತೋಲನವನ್ನು ಕಾಪಾಡುತ್ತದೆ. ೧೯೪೧ ರಲ್ಲಿ ವಾಷಿಂಗ್‌ಟನ್‌ನಲ್ಲಿ ಸ್ಥಾಪನೆ ಆಯಿತು.

೬. ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ (UNICEF)

ಇದು ವಿಶ್ವದ ಮಕ್ಕಳ ರಕ್ಷಣೆಗಾಗಿ ಶ್ರಮಿಸುತ್ತದೆ. ರಾಷ್ಟ್ರಗಳು ಮತ್ತು ವ್ಯಕ್ತಿಗಳು ಸ್ವಪ್ರೇರಣೆಯಿಂದ ನೀಡುವ ಧನ ಸಹಾಯದ ಮೂಲಕ ಇದು ವಿಶ್ವಾದ್ಯಂತ ಮಕ್ಕಳನ್ನು ಕಾಡುವ ಅನೇಕ ರೋಗಗಳ ನಿರ್ಮೂಲನೆಗಾಗಿ ಶ್ರಮಿಸುತ್ತಿದೆ. ೧೯೬೫ ರಲ್ಲಿ ಶಾಂತಿ ಸ್ಥಾಪನೆಗಾಗಿ ನೀಡುವ ನೊಬೆಲ್ ಪ್ರಶಸ್ತಿಯನ್ನು UNICEF ಗೆ ನೀಡಲಾಯಿತು. ಇದು ನ್ಯೂಯಾರ್ಕ್‌ನಲ್ಲಿದ್ದು, ೧೯೪೬ ರಲ್ಲಿ ಸ್ಥಾಪನೆಯಾಯಿತು.

೭. ಅಂತರರಾಷ್ಟ್ರೀಯ ಪರಮಾಣು ಆಯೋಗ (I.A.E.A.)

ಇದು ಶಾಂತಿಯುತ ಉದ್ದೇಶಗಳಿಗಾಗಿ ಪರಮಾಣು ಶಕ್ತಿಯ ಬಳಕೆಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ. ಇದು ೧೯೫೭ ರಲ್ಲಿ ವಿಯೆನ್ನಾದಲ್ಲಿ ಸ್ಥಾಪನೆಯಾಯಿತು.

೮. ಅಂತರರಾಷ್ಟ್ರೀಯ ಪುನರ್ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್ (I.B.R.D)

ಇದು ಎರಡನೇ ಮಹಾಯುದ್ಧದಿಂದ ನಾಶ ಹೊಂದಿದ್ದ ರಾಷ್ಟ್ರಗಳ ಆರ್ಥಿಕತೆಯ ಪುನರ್‌ನಿರ್ಮಾಣ ಇದರ ಪ್ರಮುಖ ಉದ್ದೇಶ. ಮುಖ್ಯವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಖಾಸಗಿ ಮತ್ತು ವಿದೇಶಿ ಬಂಡವಾಳಗಳನ್ನು ಇದು ಉತ್ತೇಜಿಸುತ್ತದೆ. ಇದು ೧೯೪೭ ರಲ್ಲಿ ವಾಷಿಂಗ್‌ಟನ್‌ನಲ್ಲಿ ಸ್ಥಾಪನೆ ಆಯಿತು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (I.F.C.)

I.C.O, I.T.O.U, E.S.C.A.P, ಮುಂತಾದ ಅಂಗಸಂಸ್ಥೆಗಳ ಸಹಕಾರದೊಂದಿಗೆ ವಿಶ್ವಸಂಸ್ಥೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತದೆ. ಇದರ ಕೇಂದ್ರ ಕಛೇರಿ ವಾಷಿಂಗ್‌ಟನ್ ನಲ್ಲಿದೆ. ಇದು ೧೯೫೬ ರಲ್ಲಿ ಸ್ಥಾಪನೆ ಆಯಿತು.

ವಿಶ್ವಸಂಸ್ಥೆಯ ಸಾಧನೆಗಳು

ತನ್ನ ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲ ವಿಶ್ವದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ವಿಶ್ವಸಂಸ್ಥೆ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಅದರ ಸಾಧನೆಗಳನ್ನು ರಾಜಕೀಯ ಮತ್ತು ರಾಜಕೀಯೇತರ ಸಾಧನೆಗಳೆಂದು ವಿಭಾಗಿಸಬಹುದು.

ರಾಜಕೀಯ ಸಾಧನೆಗಳು

ಅನೇಕ ವಿಫಲತೆಗಳ ನಡುವೆಯೂ ವಿಶ್ವಸಂಸ್ಥೆ ರಾಜಕೀಯವಾಗಿ ಅನೇಕ ಸಾಧನೆಗಳನ್ನು ಮಾಡಿದೆ. ಮುಖ್ಯವಾಗಿ ಮೂರನೇ ಮಹಾಯುದ್ಧ ನಡೆಯದಂತೆ ತಡೆದಿರುವುದು ಅದರ ಮಹತ್ ಸಾಧನೆ. ಶೀತಲ ಯುದ್ಧ ತನ್ನ ಪರಾಕಾಷ್ಠತೆಯನ್ನು ತಲುಪಿದ್ದಾಗಲು ಯುದ್ಧ ಸಂಭವಿಸದಂತೆ ವಿಶ್ವಸಂಸ್ಥೆ ತಡೆಯಿತು. ಇದರೊಂದಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಈ ಕೆಳಕಂಡ ವಿವಾದಗಳನ್ನು ಯಸ್ವಿಯಾಗಿ ಪರಿಹರಿಸಿತು.

ಸಿರಿಯಾ, ಲೆಬನಾನ್ ವಿವಾದ - ೧೯೪೬, ಈಜಿಪ್ಟ್‌ನಲ್ಲಿ ಬ್ರಿಟಿಷ್ ಸೈನ್ಯದ ವಿವಾದ - ೧೯೪೭, ಇಂಡೋನೇಷ್ಯದ ಮೇಲೆ ಡಚ್ಚರ ಆಕ್ರಮಣ, ಜಕೋಸ್ಲೋವಾಕಿಯದಲ್ಲಿ ಕಮ್ಯುನಿಸ್ಟರ ಕ್ರಾಂತಿ, ಬರ್ಲಿನ್ ಬ್ಲಾಕೇಡ್, ದಕ್ಷಿಣ ರೊಡೇಷಿಯಾದ ವಿವಾದ, ನಮೀಬಿಯಾದ ಸ್ವಾತಂತ್ರ್ಯ. ಅದೇ ರೀತಿ ವಿಶ್ವಸಂಸ್ಥೆಯ ಮಹಾಸಭೆಯು ಪ್ಯಾಲೆಸ್ಟೈನ್, ಬಾಲ್ಕನ್, ಮೊರಾಕೋ, ಟ್ಯುನೀಷಿಯಾ ಮತ್ತು ಆಲ್‌ಜೀರಿಯಾ ಹಾಗೂ ಕಾಂಗೋ ಬಿಕ್ಕಟ್ಟುಗಳನ್ನು ಬಗೆ ಹರಿಸಿತು. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮತ್ತು ಮಹಾಸಭೆಗಳು ಸೇರಿ ಗ್ರೀಸ್, ಅರಬ್-ಪ್ಯಾಲೆಸ್ಟೈನ್, ಕೊರಿಯಾ ಬಿಕ್ಕಟ್ಟು, ಸುಯೆಜ್ ಕಾಲುವೆ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿತು. ಅನೇಕ ಕಡೆ ತನ್ನ ಶಾಂತಿಪಾಲನೆ ಪಡೆಗಳನ್ನು ವಿಶ್ವಸಂಸ್ಥೆಯು ಕಳುಹಿಸಿತು. ಮುಖ್ಯವಾಗಿ ಸುಯೆಜ್ ಕಾಲುವೆ ವಿವಾದ, ಕಾಂಗೋ, ಸಿನಾಯ್, ಗೋಲಾನ್ ಹೈಟ್ಸ್, ಲೆಬನಾನ್ ಮತ್ತು ಕುವೈತ್-ಇರಾಕ್ ಬಿಕ್ಕಟ್ಟಿನ ಸಂದರ್ಭಗಳಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನ ಪಡೆಗಳು ಗಮನಾರ್ಹ ಪಾತ್ರ ನಿರ್ವಹಿಸಿದವು. ಶೀತಲಯುದ್ಧದ ನಂತರದಲ್ಲಿ ವಿಶ್ವದ ರಾಜಕೀಯ ಸಮತೋಲನದಲ್ಲಿ ಏರುಪೇರು ಉಂಟಾಗದಂತೆ ತಡೆಯಲು ವಿಶ್ವಸಂಸ್ಥೆ ಪ್ರಯತ್ನಿಸುತ್ತಿದೆ. ೧೯೪೪ ರ ಮೇ ನಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಶಾಂತಿಪಾಲನೆ ಕಾರ್ಯಾಚರಣೆಗಳಿಗೆ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿತು. ಇದಕ್ಕೆ ಪೂರಕವಾಗಿ ೧೯೫೫ ಜನವರಿಯಲ್ಲಿ ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಒಂದು ಸಲಹೆ ನೀಡಿ ಸುಮಾರು ೪೦೦೦-೫೦೦೦ ಸೈನಿಕರ ಒಂದು ಸದಾ ಸನ್ನದ್ಧ ಸೈನ್ಯದ ತುಕಡಿಯ ರಚನೆಗೆ ಸಲಹೆ ನೀಡಿದ್ದಾರೆ. ತನ್ನೆಲ್ಲಾ ಹಣಕಾಸಿನ ಕೊರೆತೆಯ ನಡುವೆಯೂ ವಿಶ್ವಸಂಸ್ಥೆ ತನ್ನ ಈ ಕಾರ್ಯಗಳನ್ನು ಮುಂದುವರೆಸುತ್ತಲೆ ಇದೆ.

ರಾಜಕೀಯೇತರ ಸಾಧನೆಗಳು

ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶ್ವಸಂಸ್ಥೆ ಮಹತ್ತರ ಸಾಧನೆಗಳನ್ನು ಮಾಡಿದೆ. ಸ್ಥಾಪನೆಯಾದ ಒಂದೇ ವರ್ಷದಲ್ಲಿ ಅಂದರೆ ಡಿಸೆಂಬರ್ ೧೯೪೮ ರಲ್ಲಿ ಮಾನವನ ಮೂಲಭೂತ ಹಕ್ಕುಗಳ ಘೋಷಣೆ ಹೊರಡಿಸಿತು. ತನ್ನ ಉಪ ಅಂಗಗಳಾದ ಆಹಾರ ಮತ್ತು ಕೃಷಿ ಸಮಿತಿ, ಅಂತರರಾಷ್ಟ್ರೀಯ ಕಾರ್ಮಿಕರ ಸಮಿತಿ, ವಿಶ್ವ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿ, ಅಂತರರಾಷ್ಟ್ರೀಯ ಹಣಕಾಸು ನಿಧಿ, ಅಂತರರಾಷ್ಟ್ರೀಯ ಮಕ್ಕಳ ನಿಧಿ, ಅಂತರರಾಷ್ಟ್ರೀಯ ಪರಮಾಣು ಆಯೋಗ, ಅಂತರರಾಷ್ಟ್ರೀಯ ಪುನರ್ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್ ಇತ್ಯಾದಿಗಳ ಮೂಲಕ ಮುಖ್ಯವಾಗಿ ಹಿಂದುಳಿದ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಮಾರಕ ರೋಗಗಳಾದ ಪೋಲಿಯೋ, ಕ್ಷಯ, ಮಲೇರಿಯಾ, ಸಿಡುಬು, ಏಡ್ಸ್, ಸಿಫಿಲಿಸ್, ಕುಷ್ಠ ಮುಂತಾದವುಗಳ ವಿರುದ್ಧ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ವಿಶ್ವದಾದ್ಯಂತ ಮಾದಕ ದ್ರವ್ಯ ಸೇವನೆ ವಿರುದ್ಧ ತೀವ್ರ ಹೋರಾಟ ನಡೆಸುತ್ತಿದೆ.

ರೈತರಿಗೆ ಕೀಟನಾಶಕಗಳು, ಆಧುನಿಕ ಕೃಷಿ ಉಪಕರಣಗಲು ಮುಂತಾದವುಗಳನ್ನು ಒದಗಿಸುವುದರೊಂದಿಗೆ ವಿಜ್ಞಾನ-ತಂತ್ರಜ್ಞಾನವನ್ನು ಕೃಷಿಗೆ ಪೂರಕವಾಗಿ ಬಳಸುತ್ತಿದೆ. ಜಗತ್ತಿನ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ. ಮಹಾಸಭೆಯು ೧೯೭೬-೮೫ ರ ದಶಕವನ್ನು ವಿಶ್ವಸಂಸ್ಥೆಯ ಮಹಿಳಾ ದಶಕವನ್ನಾಗಿ ಘೋಷಿಸಿತ್ತು. ಅಂತೆಯೇ ಯೂನೆಸ್ಕೊ ಮೂಲಕ ಶಿಕ್ಷಣದ ಗುಣಮಟ್ಟದ ಅಭಿವೃದ್ಧಿಗಾಗಿ, ಅನಕ್ಷರತೆ ನಿವಾರಣೆಗಾಗಿ ಪ್ರಯತ್ನಿಸುತ್ತಿದೆ. ಅಂತೆಯೇ ಜನತೆಯಲ್ಲಿ ವೈಜ್ಞಾನಿಕ ಅರಿವನ್ನು ಹೆಚ್ಚುಸುವಲ್ಲಿ ಶ್ರಮಿಸುತ್ತಿದೆ.

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಯೂನಿಸೆಫ್ (UNICEF) ಮೂಲಕ ಗಮನಹರಿಸುತ್ತಿದೆ. ಅಂತೆಯೇ ಬಾಲ ಕಾರ್ಮಿಕರ ನಿವಾರಣೆಗೂ ಶ್ರಮಿಸುತ್ತಿದೆ. ನಿರಾಶ್ರಿತರ ಸಮಸ್ಯೆ ನಿವಾರಣೆಗಾಗಿ ಅಂತರರಾಷ್ಟ್ರೀಯ ನಿರಾಶ್ರಿತರ ಹೈಕಮೀಷನರ್ (UNHCR) ಮೂಲಕ ಪ್ರಯತ್ನಿಸುತ್ತಿದೆ. ಅದೇ ರೀತಿ ಅಂಗವಿಕಲರು, ಬುದ್ಧಿಮಾಂದ್ಯರು ಮತ್ತು ವೃದ್ಧರ ಯೋಗ ಕ್ಷೇಮದ ಕಡೆಗೂ ವಿಶ್ವಸಂಸ್ಥೆ ಗಮನಹರಿಸಿದೆ. ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸುವಲ್ಲಿ ವಿಶ್ವಸಂಸ್ಥೆ ಗಮನಾರ್ಹ ಪಾತ್ರ ನಿರ್ವಹಿಸಿದೆ.

ವಿಶ್ವಸಂಸ್ಥೆಯ ಮಿತಿಗಳು

ಮೇಲಿನ ಹಲವಾರು ಸಾಧನೆಗಳ ನಡುವೆಯೂ ವಿಶ್ವಸಂಸ್ಥೆ ಅನೇಕ ವೈಫಲ್ಯಗಳನ್ನು ಕಂಡಿದೆ. ಮುಖ್ಯವಾಗಿ ಶೀತಲಯುದ್ಧದ ಸಂದರ್ಭದಲ್ಲಿ ಅಮೆರಿಕಾ - ರಷ್ಯಾಗಳ ನಡುವಿನ ಜಗ್ಗಾಟದಲ್ಲಿ ವಿಶ್ವಸಂಸ್ಥೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗಲಿಲ್ಲ. ರಷ್ಯಾ ಅತಿ ಹೆಚ್ಚು ಬಾರಿ ವಿಟೋ ಅಧಿಕಾರವನ್ನು ಚಲಾಯಿಸಿದ್ದು, ಅದರ ಕಲಾಪಗಳ ಮೇಲೆ ದುಷ್ಪರಿಣಾಮ ಬೀರಿತು. ಎಷ್ಟೇ ಪ್ರಯತ್ನಪಟ್ಟರೂ ಇಂದಿಗೂ ನಿಶ್ಯಸ್ತ್ರೀಕರಣವನ್ನು ಜಾರಿಗೊಳಿಸಲು ಆಗಿಲ್ಲ. ಕೊರಿಯಾ, ಇಂಡೋನೇಷಿಯಾ, ಕಾಶ್ಮೀರ, ಪ್ಯಾಲಸ್ಟೈನ್ ಸಮಸ್ಯೆಗಳು ಇನ್ನು ಜೀವಂತವಿದೆ. ಎಲ್ಲಕ್ಕೂ ಮುಖ್ಯವಾಗಿ ಅಮೆರಿಕಾದ ಪರೋಕ್ಷ ನಿಯಂತ್ರಣದಿಂದ ವಿಶ್ವಸಂಸ್ಥೆ ಮುಕ್ತವಾಗಿಲ್ಲ. ಶೀತಲಯುದ್ಧದ ಅಂತ್ಯದ ನಂತರ ಅಮೆರಿಕಾ ದೊಡ್ಡಣ್ಣನಂತೆ ವರ್ತಿಸುತ್ತಿದೆ. ಕೊರಿಯಾ, ಇರಾಕ್-ಕುವೈತ್ ಸಮಸ್ಯೆಗಳಿಂದ ಹಿಡಿದು ಇತ್ತೀಚಿನ ಆಫ್ಘಾನಿಸ್ಥಾನ ಹಾಗೂ ಇರಾಕ್ ಸಮಸ್ಯೆಗಳಲ್ಲಿ ಅಮೆರಿಕಾ ವಿಶ್ವಸಂಸ್ಥೆಯನ್ನು ಗಣನೆಗೇ ತೆಗೆದುಕೊಂಡಿಲ್ಲ. ಇಂದಿಗೂ ಸ್ವಂತ ಸೈನ್ಯ ಹೊಂದಿಲ್ಲದಿರುವುದು ಹಾಗೂ ಹಣಕಾಸಿನ ಕೊರತೆ ವಿಶ್ವಸಂಸ್ಥೆಯ ವಿಫಲತೆಯ ಪ್ರಮುಖ ಕಾರಣವಾಗಿದೆ.

ಭಾರತ ಹಾಗೂ ವಿಶ್ವಸಂಸ್ಥೆ

ಆರಂಭದಿಂದಲೂ ಅಂದರೆ ಜೂನ್ ೧೯೪೫ ರ ವಿಶ್ವಸಂಸ್ಥೆಯ ಸ್ಥಾಪಕ ಸ್ಯಾನ್ ಫ್ರಾನ್ಸಿಸ್ಕೋ ಅಧಿವೇಶನದ ಕಾಲದಿಂದಲೂ ಭಾರತ ವಿಶ್ವಸಂಸ್ಥೆಯೊಂದಿಗೆ ಸಂಬಂಧ ಹೊಂದಿದೆ. ವಿಶ್ವಸಂಸ್ಥೆಯ ಸಂವಿಧಾನಕ್ಕೆ ಜೂನ್ ೨೬, ೧೯೪೫ ರಂದು ಸಹಿ ಮಾಡಿದ ೫೧

ಸ್ಥಾಪಕ ಸದಸ್ಯರಲ್ಲಿ ಭಾರತವು ಒಂದು. ಸ್ವಾತಂತ್ರ್ಯಾನಂತರ ಭಾರತ ವಿಶ್ವಸಂಸ್ಥೆಯಲ್ಲಿ ತನ್ನ ನಂಬಿಕೆಯನ್ನು ಮುಂದುವರೆಸಿತು. ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಅದರ ಬದ್ಧತೆ, ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದಗಳನ್ನು ಗೌರವಿಸುವಲ್ಲಿ ಹಾಗೂ ಇತರ ರಾಷ್ಟ್ರಗಳೊಂದಿಗೆ ಗೌರವಯುತ ಸಂಬಂಧ ಹೊಂದುವಲ್ಲಿ ಭಾರತ ವಿಶ್ವ ಸಂಸ್ಥೆಯ ತತ್ವಾನುಸಾರ ನಡೆಯುತ್ತಿದೆ. ಅನೇಕ ಒಪ್ಪಂದಗಳಿಗೆ ಹಾಗೂ ಘೋಷಣೆಗಳಿಗೆ ಸಹಿ ಹಾಕುವಲ್ಲಿ ವಿಶ್ವಸಂಸ್ಥೆಯ ಸಂವಿಧಾನಕ್ಕೆ ಅನುಗುಣವಾಗಿ ಭಾರತ ವರ್ತಿಸಿದೆ.

೧೯೫೬ ರಲ್ಲಿ ಎಲ್ಲಾ ಬಗೆಯ ಪರಮಾಣು ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ನಿಷೇಧಿಸುವಂತೆ ಭಾರತವು ವಿಶ್ವಸಂಸ್ಥೆಯನ್ನು ಕೇಳಿಕೊಂಡಿತು. ಅದೇ ರೀತಿ ವಿಶ್ವಸಂಸ್ಥೆಯ ವಿಸ್ತರಣೆಯನ್ನು ಬೆಂಬಲಿಸಿತು. ಪರಸ್ಪರ ವಿರೋಧಿ ಬಣ್ಣಗಳ ರಾಷ್ಟ್ರಗಳ ಸದಸ್ಯರಾಗದಂತೆ **ಅಮೆರಿಕಾ** ಮತ್ತು **ಸೋವಿಯತ್ ಯೂನಿಯನ್**‌ಗಳು ತಡೆವೊಡ್ಡಿದಾಗ ಭಾರತ ಸದಸ್ಯತ್ವದ ಪರವಾಗಿ ಬೆಂಬಲಿಸಿತು. ಅದೇ ರೀತಿ ಕೆಂಪು ಚೈನಾಗೆ ಸದಸ್ಯತ್ವ ನೀಡಿಕೆಯನ್ನೂ ಭಾರತ ಎತ್ತಿ ಹಿಡಿಯಿತು.

ಭಾರತದ ಅನೇಕ ಉನ್ನತ ವ್ಯಕ್ತಿಗಳು ವಿಶ್ವಸಂಸ್ಥೆಯ ಅನೇಕ ಹುದ್ದೆಗಳನ್ನು ಅಲಂಕರಿಸಿದ್ದಾರೆ. **ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್**‌ರವರು ವಿಶ್ವಸಂಸ್ಥೆಯ ಮಹಾಸಭೆಯ ಪ್ರಥಮ ಮಹಿಳಾ ಅಧ್ಯಕ್ಷರಾಗಿಯೂ ಮತ್ತು ಜಗತ್ತಿನ ಪ್ರಥಮ ಮಹಿಳೆ ರಾಯಭಾರಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರೊಂದಿಗೆ **ಮೌಲಾನಾ ಅಬುಲ್ ಕಲಾಂ ಆಜಾದ್** ಮತ್ತು **ಡಾ. ಎಸ್. ರಾಧಾಕೃಷ್ಣನ್** (ಯೂನೆಸ್ಕೊದ ಅಧ್ಯಕ್ಷರಾಗಿ) ರಾಜಕುಮಾರಿ **ಅಮೃತ್ ಕೌರ್** (W.H.O ಅಧ್ಯಕ್ಷರಾಗಿ) **ಹೆಚ್.ಜೆ. ಬಾಬಾ** (ಶಾಂತಿಗಾಗಿ ಅಣುಶಕ್ತಿ ಆಯೋಗದ ಅಧ್ಯಕ್ಷರಾಗಿ) ಹಾಗೂ ಇತರರು ಕಾರ್ಯ ನಿರ್ವಹಿಸಿದ್ದಾರೆ. ಆರು ಖಾಯಂ ಅಲ್ಲದೆ ಅವಧಿಗೆ ಭದ್ರತಾಮಂಡಳಿಯ ಸದಸ್ಯತ್ವ ಹೊಂದಿದ್ದ ಭಾರತ ಅನೇಕ ಪ್ರಮುಖ ನಿರ್ಣಯ ತೆಗೆದುಕೊಳ್ಳುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಮಹಾಸಭೆಯ ಚರ್ಚೆಗಳಲ್ಲಿ ಸಕ್ರಿಯ ಪಾತ್ರವಹಿಸುವ ಭಾರತ ಅಭಿವೃದ್ಧಿಶೀಲ ರಾಷ್ಟ್ರಗಳ ಪರವಾಗಿ ಧ್ವನಿ ಎತ್ತಿದೆ. ಅಂತರರಾಷ್ಟ್ರೀಯ ಶಾಂತಿಪಾಲನೆ ಪಡೆಗೂ ಭಾರತ ತನ್ನ ಕೊಡುಗೆ ನೀಡಿದೆ. ಅನೇಕ ರಾಷ್ಟ್ರಗಳಲ್ಲಿನ ಸ್ವಾತಂತ್ರ್ಯ ಹೋರಾಟವನ್ನು ಭಾರತ ಬೆಂಬಲಿಸಿದೆ. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಿಂದ ಪ್ರಾಯೋಜಿಸಲ್ಪಟ್ಟ ಅನೇಕ ಕಾರ್ಯ ಕ್ರಮಗಳ ಜಾರಿಯಲ್ಲಿ ಭಾರತ ಸಕ್ರಿಯ ಪಾತ್ರ ನಿರ್ವಹಿಸುತ್ತಾ ಬಂದಿದೆ.

ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾರತದ ಪಾತ್ರ

ಭಾರತ ಅಲಿಪ್ತ ನೀತಿಯನ್ನು ಅನುಸರಿಸಿದರೂ ವಿಶ್ವಶಾಂತಿಯ ಪಾಲನೆಗಾಗಿ ಅನೇಕ ಸಂದರ್ಭಗಳಲ್ಲಿ ಮಹತ್ವಪೂರ್ಣ ಕಾರ್ಯಾಚರಣೆ ನಡೆಸಿದೆ. ಎರಡು ತತ್ವಗಳಾದ

ಸೌಹಾರ್ದಯುತ ಪರಿಹಾರ ಹಾಗೂ ನಿಶ್ಯಸ್ತ್ರೀಕರಣದಲ್ಲಿ ನಂಬಿಕೆ ಇಟ್ಟು, ಅಂತರರಾಷ್ಟ್ರೀಯ ಶಾಂತಿ ಸ್ಥಾಪನೆಗಾಗಿ ಭಾರತ ೧೯೫೦ ರಿಂದೀಚೆಗೆ ವಿಶ್ವಸಂಸ್ಥೆಯ ಮಾರ್ಗದರ್ಶನದಲ್ಲಿ ಅನೇಕ ಶಾಂತಿಪಾಲನಾ ಕಾರ್ಯಾಚರಣೆಗಳನ್ನು ಕೈಗೊಂಡಿದ್ದು, ಅದರಿಂದ ಗೌರವಯುತ ಸ್ಥಾನವನ್ನು ಪಡೆದುಕೊಂಡಿದೆ.

ಭಾರತ ಕೈಗೊಂಡ ಮೊದಲ ಶಾಂತಿಪಾಲನಾ ಕಾರ್ಯಾಚರಣೆಯೆಂದರೆ **ಕೊರಿಯಾದ್ದು**. ಅಲ್ಲಿ ಭಾರತೀಯ ಸೈನ್ಯ ವೈದ್ಯಕೀಯ ರಂಗದಲ್ಲಿ ಸ್ಮರಣಾರ್ಹ ಸೇವೆ ಸಲ್ಲಿಸಿತು. ಯುದ್ಧ ನಿಲುಗಡೆಯಾದ ನಂತರ, ಸೂಕ್ಷ್ಮವಾದ ಯುದ್ಧ ಖೈದಿಗಳ ಸಮಸ್ಯೆಯನ್ನು **ಲೆ.ಜ. ಕೆ.ಎಸ್. ತಿಮ್ಮಯ್ಯ**, ಅಧ್ಯಕ್ಷರು, ಎನ್.ಎನ್.ಆರ್.ಸಿ. (Neutral National Repatriation Commission) ಮತ್ತು **ಎಸ್.ಪಿ.ಪಿ. ಥೊರಾಟ್**, ಕಸ್ಟೋಡಿಯನ್ ಫೋರ್ಸ್ ಕಮಾಂಡರ್ ಸಮರ್ಥವಾಗಿ ನಿಭಾಯಿಸಿದರು. ೧೯೫೬ ರಲ್ಲಿ ಈಜಿಪ್ಟ್ ಮತ್ತು ಆಂಗ್ಲೋ-ಫ್ರೆಂಚ್ ಸೈನ್ಯಗಳ ನಡುವಿನ ಘರ್ಷಣೆಯ ನಿರ್ವಹಣೆ ಸಂಬಂಧದಲ್ಲಿ ವಿಶ್ವಸಂಸ್ಥೆಯ ತುರ್ತುಪಡೆಯ (United Nations Emergency Force) ಸೇವೆ ಸಲ್ಲಿಸಿತು. **ಸಿನೈ** ಪರ್ಯಾಯ ದ್ವೀಪದಿಂದ ಇಸ್ರೇಲಿ ಪಡೆಗಳ ಹಿಂತೆಗೆತದ ಕಾರ್ಯಾಚರಣೆಯಲ್ಲಿ ಭಾರತ ಸಕ್ರಿಯ ಪಾತ್ರ ನಿರ್ವಹಿಸಿತು. ಅಂತೆಯೇ ಘಾಜಾ ಪಟ್ಟಿಯಲ್ಲಿ ೧೯೬೭ ರವರೆಗೆ ಶಾಂತಿ ಕಾಪಾಡುವಲ್ಲಿ ಯಶಸ್ವಿ ಕಾರ್ಯ ನಿರ್ವಹಿಸಿತು. ೧೯೬೧ ರಲ್ಲಿ **ಕಾಂಗೋ** ಹಾಗೂ **ಅಂಗೋಲ**ಗಳಲ್ಲಿ ಸೈನಿಕ ಕಾರ್ಯಾಚರಣೆಯನ್ನು ನಡೆಸಿದ ಭಾರತ ಅಂತಿಮವಾಗಿ **ಕಾಂಗೋದ** ಪುನರ್ ಏಕೀಕರಣವನ್ನು ಸಾಧ್ಯವಾಗಿಸಿತು. **ಕಾಂಬೋಡಿಯ** ಸಮಸ್ಯೆ ಉದ್ಭವಿಸಿದಾಗ ಭಾರತ ಅಲ್ಲಿಗೆ ಸೈನ್ಯ, ತುರ್ತು ವೈದ್ಯಕೀಯ ಸೇವೆ, ಸೈನಿಕ ವೀಕ್ಷಕರು ಇತ್ಯಾದಿ ಸೇವೆಗಳನ್ನು ಒದಗಿಸಿತು. **ಸೊಮಾಲಿಯಾದ**ಲ್ಲಿ ರಾಜಕೀಯ ಮತ್ತು ಆರ್ಥಿಕ ಪುನಶ್ಚೇತನದ ಸಂಬಂಧದಲ್ಲಿ ಭಾರತ ಸ್ಮರಣೀಯ ಸೇವೆ ಸಲ್ಲಿಸಿತು. UNOSCOM II ನ ಒಂದು ಭಾಗಿ ಭಾರತ ಸೊಮಾಲಿಯಾದಲ್ಲಿ ಅನೇಕ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಮಾನವಿಕ ನೆಲೆಯಲ್ಲಿ ಸಹಾಯ ಮಾಡಿತು. **ನಮೀಬಿಯಾದ**ಲ್ಲಿ SWAPO ಗೆ ಅಧಿಕಾರವನ್ನು ಹಸ್ತಾಂತರಿಸುವಲ್ಲಿ ಭಾರತ ಪ್ರಮುಖ ಪಾತ್ರವಹಿಸಿತು. ಇದೇ ರೀತಿಯ ಪಾತ್ರವನ್ನು **ಸಿಯಾರಾ ಲಿಯೋನ್**ನ ಸಂದರ್ಭದಲ್ಲಿಯೂ ವಹಿಸಿತು. ಈ ಸಂದರ್ಭದಲ್ಲಿ ಭಾರತೀಯ ಶಾಂತಿಪಾಲನಾ ಪಡೆ ಮತ್ತು ರಾಜಕೀಯ ವೀಕ್ಷಕರನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಂಡಾಗಲೂ ಭಾರತ ಸ್ಮರಣೆ ಕೊಳೆದುಕೊಳ್ಳಲಿಲ್ಲ. ೧೯೭೮ ರಲ್ಲಿ ವಿಶ್ವಸಂಸ್ಥೆಯ ಮಧ್ಯಂತರ ಸೈನ್ಯಕ್ಕೆ ಸಹಾಯಕಾರಿಯಾಗಿ **ಲೆಬನಾನ್**ನಲ್ಲಿ ಸೇವೆ ಸಲ್ಲಿಸಿತು. ಭಾರತೀಯ ಪಡೆಗಳು ಹಿಜಬುಲ್ ಗುಂಪು ಮತ್ತು ಇಸ್ರೇಲಿ ಸೈನಿಕರ ನಡುವಿನ ಹಿಂಸಾಚಾರವನ್ನು ತಡೆಗಟ್ಟುವಲ್ಲಿ ಶ್ರಮಿಸಿವೆ. **ಕೊಸಾವೊ**ದಲ್ಲಿನ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿಯೂ (UNMIK) ಭಾಗವಹಿಸಿದ್ದಲ್ಲದೆ, ಅಲ್ಲಿನ ನಾಗರೀಕ ಆಡಳಿತಕ್ಕೂ ಸಹಾಯ ಮಾಡಿತು. ೨೦೦೦ನೇ ಇಸವಿಯಲ್ಲಿ **ಇಥಿಯೋಪಿಯಾ**

ಮತ್ತು ಎರಿಟ್ರಿಯ ಸಂಬಂಧದ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಗಳಲ್ಲಿಯೂ ಭಾರತ ಪಾಲ್ಗೊಂಡಿತು. ಹೀಗೆ ವಿಶ್ವಶಾಂತಿಯ ಪಾಲನೆ ನಿಟ್ಟಿನಲ್ಲಿ ಭಾರತ ವಿಶ್ವಸಂಸ್ಥೆಗೆ ಗಣನೀಯ ಸಹಕಾರ ನೀಡಿದೆ.

ಭದ್ರತಾ ಮಂಡಳಿಯಲ್ಲಿನ ಖಾಯಂ ಸ್ಥಾನಕ್ಕಾಗಿ ಭಾರತದ ಹಕ್ಕು ಪ್ರತಿಪಾದನೆ

ವಿಶ್ವಸಂಸ್ಥೆಯ ಶಕ್ತಿಶಾಲಿ ಅಂಗಗಳಲ್ಲಿ ಭದ್ರತಾಮಂಡಳಿಯೂ ಒಂದು. ಆರಂಭದಲ್ಲಿ ೫೧ ಸ್ಥಾಪಕ ರಾಷ್ಟ್ರಗಳ ಪೈಕಿ ೧೧ ರಾಷ್ಟ್ರಗಳಿಗೆ ಮಾತ್ರ ಭದ್ರತಾಮಂಡಳಿಯಲ್ಲಿ ಸ್ಥಾನವಿದ್ದಿತು. ೧೯೬೩ ರಲ್ಲಿ ಮಂಡಳಿಯನ್ನು ೧೫ ಕ್ಕೆ ವಿಸ್ತರಿಸಲಾಯಿತು. ಆಗ ಒಟ್ಟು ೧೧೩ ಸದಸ್ಯರಿದ್ದರು. ಇಂದು ೧೯೧ ಸದಸ್ಯರಿದ್ದರೂ ಭದ್ರತಾಮಂಡಳಿಯಲ್ಲಿ ಕೇವಲ ೯% ಮಾತ್ರ ಪ್ರಾತಿನಿಧ್ಯ ನೀಡಲಾಗಿದೆ. **ಜಪಾನ್** ಮತ್ತು **ಜರ್ಮನಿಗೆ** ಖಾಯಂ ಸ್ಥಾನ ನೀಡುವಲ್ಲಿ ಅಮೆರಿಕಾ ಪ್ರಧಾನ ಪಾತ್ರ ವಹಿಸಿತು. ಇದನ್ನು ಕಾರ್ಯರೂಪಕ್ಕೆ ತರಲು ತೃತೀಯ ಜಗತ್ತಿನ ಮೂರು ರಾಷ್ಟ್ರಗಳಿಗೂ ಸದಸ್ಯತ್ವದ ಅವಕಾಶ ನೀಡುವ ಮೂಲಕ ಒಟ್ಟು ಸದಸ್ಯರ ಸಂಖ್ಯೆಯನ್ನು ೨೦ಕ್ಕೆ ಏರಿಸುವ ಸಲಹೆ ನೀಡಲಾಗಿದೆ. ಈ ನಿಟ್ಟಿನಲ್ಲಿ ತನ್ನ ಹಕ್ಕನ್ನು ಮಂಡಿಸಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದು. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ, ತೀವ್ರವಾದ ಆರ್ಥಿಕಾಭಿವೃದ್ಧಿಯನ್ನು ಸಾಧಿಸುತ್ತಿರುವ ಭಾರತ ಅಂತರರಾಷ್ಟ್ರೀಯ ಶಾಂತಿ ಸ್ಥಾಪನೆಗಾಗಿ ವಿಶ್ವಸಂಸ್ಥೆಯ ಮಾರ್ಗದರ್ಶನದಲ್ಲಿ ಅನೇಕ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡಿದೆ. ಹೀಗಾಗಿ ಭದ್ರತಾಮಂಡಳಿಗೆ ಭಾರತದ ಸೇರ್ಪಡೆ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ನೀಡುವ ಪ್ರಾತಿನಿಧ್ಯ ಮಾತ್ರ ಆಗಿರದೆ, ಪ್ರಮುಖವಾದ ತೀರ್ಮಾನಗಳ ಸಂದರ್ಭಗಳಲ್ಲಿ, ತೃತೀಯ ಜಗತ್ತಿನ ರಾಷ್ಟ್ರವೇ ಆಗಿರುವ ಭಾರತ ಆ ರಾಷ್ಟ್ರಗಳ ಸಮಸ್ಯೆಗಳನ್ನು ಸಮರ್ಥವಾಗಿ ಪ್ರತಿನಿಧಿಸಲು ಅವಕಾಶ ಜಗತ್ತಿನ ರಾಷ್ಟ್ರವೇ ಆಗಿರುವ ಭಾರತ ಆ ರಾಷ್ಟ್ರಗಳ ಸಮಸ್ಯೆಗಳನ್ನು ಸಮರ್ಥವಾಗಿ ಪ್ರತಿನಿಧಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದೇ ವೇಳೆ ಅಲಿಪ್ತ ರಾಷ್ಟ್ರವೊಂದರ ಅಸ್ತಿತ್ವ, ಪ್ರಮುಖ ತೀರ್ಮಾನಗಳ ಸಂದರ್ಭದಲ್ಲಿ ಮಹತ್ವ ಪಡೆಯುತ್ತದೆ. ಅಂತೆಯೇ **ವಿಟೋ ಅಧಿಕಾರ** ಚಲಾವಣೆ ಇತಿಹಾಸವನ್ನೇ ಬದಲಾಯಿಸಬಹುದು.

ಇದೇ ವೇಳೆಗೆ ಭಾರತ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳ ಸಕ್ರಿಯ ಪಾಲುದಾರ. ವಿಶ್ವಸಂಸ್ಥೆಯ ಇತರ ಕಾರ್ಯಕ್ರಮಗಳಲ್ಲಿಯೂ ಅದು ಭಾಗವಹಿಸುತ್ತದೆ. ೧೯೯೬ ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದಲ್ಲಿ, ವಿಶ್ವ ಆಹಾರ ಶೃಂಗಸಭೆಯಲ್ಲಿ, ಇಸ್ತಾಂಬುಲ್‌ನಲ್ಲಿ ನಡೆದ ಹ್ಯಾಬಿಟಟ್-II ನಲ್ಲಿ, ಹರಾರೆಯಲ್ಲಿ ೧೯೯೬ ರಲ್ಲಿ ವಿಶ್ವ ಸೌರ ಶೃಂಗಸಭೆಗಳಲ್ಲಿ ಪಾಲ್ಗೊಂಡಿತ್ತು. ಅದು ಮಹಾಸಭೆಯಲ್ಲಿ, ಮಹಿಳಾ ಸಬಲೀಕರಣ, ಮಾದಕ ದ್ರವ್ಯ ಸೇವನೆ ನಿಷೇಧ ಮತ್ತಿತರ ವಿಷಯಗಳ ಬಗ್ಗೆ ವಿಶ್ವಸಂಸ್ಥೆಯ ನಿಲುವನ್ನು ಬೆಂಬಲಿಸಿದೆ. ಭಾರತ ತನ್ನಲ್ಲಿಯೂ ವೈಜ್ಞಾನಿಕ

ಸಾಮರ್ಥ್ಯವಿರುವುದನ್ನು ಈಗಾಗಲೇ ಸಾಬೀತು ಪಡಿಸಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಬಗ್ಗೆ ತನಗಿರುವ ಕಾಳಜಿಯನ್ನು ಈಗಾಗಲೇ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ಭಾರತ ವಿಶ್ವ ಸಂಸ್ಥೆಯ ಭದ್ರತಾಮಂಡಳಿಯಲ್ಲಿ ತನ್ನ ಹಕ್ಕುದಾರಿಕೆಯನ್ನು ಪ್ರತಿಪಾದಿಸುತ್ತಿದೆ.

ಅಂತರರಾಷ್ಟ್ರೀಯ ಸಮುದಾಯದ ಬೆಂಬಲವೂ ಮುಖ್ಯವಾಗಿ ಯು.ಕೆ., ಪೋರ್ಚುಗಲ್, ಫ್ರಾನ್ಸ್, ಅರ್ಮೀನಿಯ, ಐಸ್‌ಲ್ಯಾಂಡ್ ಮತ್ತಿತರ ರಾಷ್ಟ್ರಗಳು ಭಾರತದ ಪರವಾಗಿಯೇ ಇದೆ. ಬ್ರಿಟನ್‌ನ ಪ್ರಧಾನಿ **ಟೋನಿಬ್ಲೇರ್** "ಈ ಗುರಿಯನ್ನು ಸಾಧಿಸಲು ಬ್ರಿಟನ್ ಭಾರತದೊಂದಿಗೆ ಶ್ರಮಿಸುತ್ತದೆ" ಎಂದಿದ್ದರೆ, ರಷ್ಯಾ 'ಭಾರತ ಒಂದು ಪ್ರಬಲ ಮತ್ತು ಸೂಕ್ತ ಅಭ್ಯರ್ಥಿ' ಎಂದಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ **ಕೋಫಿ ಅನ್ನಾನ್** ಭಾರತದ ಹಕ್ಕು ಪ್ರತಿಪಾದನೆ ಬಗ್ಗೆ ಯಾವುದೇ ಸ್ಪಷ್ಟ ಅಭಿಪ್ರಾಯಕ್ಕೆ ಬದ್ಧರಾಗಿಲ್ಲ. ಈ ಕುರಿತು ಕೋಫಿ ಅನ್ನಾನ್ ವಿಶ್ವಸಂಸ್ಥೆಗೆ ಯಾರು ಸೈನಿಕವಾಗಿ ಮತ್ತು ರಾಜತಾಂತ್ರಿಕವಾಗಿ ಹೆಚ್ಚಿನ ಸಹಾಯ ಮಾಡುತ್ತಿದ್ದಾರೋ ಅವರು ಉನ್ನತ ಸ್ಪರ್ಧೆಗೆ ಅರ್ಹರು ಎಂದಿದ್ದಾರೆ. ಅದೇ ವೇಳೆಗೆ ರಾಷ್ಟ್ರಗಳು ವಿಟೋ ಅಧಿಕಾರವನ್ನು ಮಾತ್ರವೇ ಗಮನದಲ್ಲಿಟ್ಟುಕೊಳ್ಳಬಾರದು ಎಂದು ಅನ್ನಾನ್ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಭಾರತ ತನ್ನ ಕಡೆಯಿಂದ ಯಾವುದೇ ತುಂಡು ತುಂಡಾದ ವಿಸ್ತರಣೆಯ ಪ್ರಸ್ತಾಪವನ್ನು ನಿರಾಕರಿಸಿದೆ. ವಿಶ್ವಸಂಸ್ಥೆಗೆ ಭಾರತದ ರಾಯಭಾರಿಯಾಗಿರುವ **ಕಮಲೇಶ ಶರ್ಮ** "ಭಾರತವು ಯಾವುದೇ ನೆಲೆಗಟ್ಟಿನಲ್ಲಿಯೂ ಖಾಯಂ ಸದಸ್ಯತ್ವಕ್ಕೆ ಅರ್ಹ" ಎಂದಿದ್ದಾರೆ. ಎಲ್ಲಾ ೧೯೧ ಸದಸ್ಯರೂ ಈ ಕುರಿತು ಒಂದು ಉದಾರ ಒಪ್ಪಂದಕ್ಕೆ ಬರುತ್ತಾರೆಂದು ಆಶಿಸುತ್ತಿದೆ.

೩.೪ ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ಅವರ ಐತಿಹಾಸಿಕ ಕೊಡುಗೆಗಳು

೧. ಮಾವೋತ್ಸೆ ತುಂಗ್

ಮಾವೋತ್ಸೆ ತುಂಗ್ ಆಧುನಿಕ ಚೀನಾದ ಇತಿಹಾಸದಲ್ಲಿ ಬಹುಮುಖ್ಯವಾದ ವ್ಯಕ್ತಿತ್ವ. ಚೀನಾದಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಸ್ಥಾಪಿಸಿ, ಅದರ ಸರ್ವತೋಮುಖ ಏಳಿಗೆಗೆ ಕಾರಣವಾದ ಮಾವೋ ಧೃತಿಗೆಡದ ಹೋರಾಟಗಾರನಾಗಿದ್ದನು. ೧೮೮೩ ಡಿಸೆಂಬರ್ ೨೬ ರಂದು ಚೀನಾದ **ಹುನಾನ್ ಪ್ರಾಂತ್ಯ**ದ **ಶಾವೋಶಾನ್** ಎಂಬ ಹಳ್ಳಿಯಲ್ಲಿ ಜನಿಸಿದ ಮಾವೋನ ತಂದೆ ಸಾಮಾನ್ಯ ರೈತನಾಗಿದ್ದನು. ತನ್ನ ೧೩ನೆಯ ವಯಸ್ಸಿನಲ್ಲಿಯೇ ತಂದೆಯ ಒತ್ತಾಯದಿಂದ ವಿದ್ಯಾಭ್ಯಾಸವನ್ನು ನಿಲ್ಲಿಸಿದ ಮಾವೋ, ಆತನ ವ್ಯವಹಾರದಲ್ಲಿ ಸಹಾಯಕನಾಗಿ ದುಡಿಮೆ ಆರಂಭಿಸಿದ. ಮನೆಯಲ್ಲಿ ಮದುವೆಯ ಪ್ರಯತ್ನಗಳು ಆರಂಭವಾದಾಗ, ಮಾವೋ ಮನೆಬಿಟ್ಟು ಓಡಿ ಹೋಗಿ ಪಟ್ಟಣವನ್ನು ಸೇರಿದ. ಅಲ್ಲಿ ಚೀನಾದ ಸಾಂಪ್ರದಾಯಿಕ ವಿದ್ಯಾಭ್ಯಾಸದಿಂದ ದೂರವಾದ ಪಾಶ್ಚಾತ್ಯ ವಿದ್ಯಾಭ್ಯಾಸ ಆರಂಭಿಸಿದ. ವಿದ್ಯಾರ್ಥಿ ದೆಸೆಯಲ್ಲಿಯೇ ಕ್ರಾಂತಿಕಾರಿಯಾಗಿದ್ದು, ಚೀನಾ ಸಾಂಪ್ರದಾಯಿಕ ಸಮಾಜದಲ್ಲಿ ಬದಲಾವಣೆಗಳನ್ನು ತರಲು ಆಶಿಸುತ್ತಿದ್ದ. ಅದೇ ವೇಳೆಗೆ ಆತ ರಿಪಬ್ಲಿಕನ್ ಸೇನೆಗೂ ಸೇರಿಕೊಂಡ. ೧೯೧೮ ರಲ್ಲಿ ಆತ ಪದವಿಯನ್ನು ಪಡೆದುಕೊಂಡು **ಪೀಕಿಂಗ್ ವಿಶ್ವವಿದ್ಯಾಲಯ**ದಲ್ಲಿ ಗ್ರಂಥಾಲಯ ಸಹಾಯಕನಾಗಿ ಕೆಲಸಕ್ಕೆ ಸೇರಿದ.

ಗ್ರಂಥಾಲಯದಲ್ಲಿ ಕಾರ್ಯನಿರ್ವಹಿಸುವಾಗಲೇ ಮಾವೋ **ಕಮ್ಯುನಿಸಂ**ನತ್ತ ಆಕರ್ಷಿತನಾದ. ಅದಕ್ಕೆ ಸಂಬಂಧಪಟ್ಟ ಗ್ರಂಥಗಳ ಅಭ್ಯಾಸ ಮಾಡಿದ ಮಾವೋ ಅದನ್ನು ಚೀನೀ ಸಮಾಜಕ್ಕೆ ಅಳವಡಿಸುವ ಬಗ್ಗೆ ಚಿಂತಿಸುತ್ತಿದ್ದ. ಅದೇ ವೇಳೆಗೆ ಅಸ್ತಿತ್ವದಲ್ಲಿದ್ದ ಸರ್ಕಾರದ ವಿರುದ್ಧ ಹುನಾನ್ ಪ್ರಾಂತ್ಯದಲ್ಲಿ ಹೋರಾಟ ಆರಂಭವಾಯಿತು. ಮಾವೋ ಕಮ್ಯುನಿಸ್ಟರ ಜೊತೆ ಸೇರಿದ. ಆತ **ಗೆರಿಲ್ಲಾ ತಂತ್ರ**ವನ್ನು ಹೋರಾಟದಲ್ಲಿ ಅಳವಡಿಸಿಕೊಂಡನು. ಇದು ಹಿರಿಯ ಕಮ್ಯುನಿಸ್ಟ್ ನಾಯಕರಿಗೆ ಸರಿ ಕಾಣವಿಲ್ಲ. ಈ ಭಿನ್ನಾಭಿಪ್ರಾಯದಿಂದಾಗಿ ಮಾವೋ ಪಕ್ಷವನ್ನು ತೊರೆದು ಸ್ವತಂತ್ರವಾಗಿ ಜನತೆಯನ್ನು ಸಂಘಟಿಸಿ ಹೋರಾಟವನ್ನು ಮುಂದುವರೆಸಿದ. ಇದೇ ವೇಳೆಗೆ **ಚುತೆ** ಎಂಬ ಸೈನ್ಯಾಧಿಕಾರಿ ತನ್ನ ೧೦,೦೦೦ ಸೈನಿಕರೊಡನೆ ಮಾವೋನನ್ನು ಸೇರಿದ. ಇಲ್ಲಿಂದ ಮುಂದೆ ಇವರಿಬ್ಬರೂ ಒಂದಾಗಿ ಚು-ಮಾವೋ ಎಂದೇ ಹೆಸರಾದರು. ಇಬ್ಬರೂ ಸೇರಿ **ಕೆಂಪು ಸೈನ್ಯ**ವನ್ನು ಸ್ಥಾಪಿಸಿದರು. ಇದರೊಂದಿಗೆ **ಚೌ-ಎನ್-ಲಾಯ್** ಕೂಡ ಸೇರಿದ.

ಚು-ಮಾವೋ ನೇತೃತ್ವದಲ್ಲಿ ಕೆಂಪು ಸೈನ್ಯ ಚಿಯಾಂಗ್ ಕೈ ಶೇಕ್‌ನ ಸರ್ಕಾರದ ವಿರುದ್ಧ ಗೆರಿಲ್ಲಾ ಹೋರಾಟವನ್ನು ತೀವ್ರಗೊಳಿಸಿತು. ಚಿಯಾಂಗ್ ಕೈ ಶೇಕ್ ಕಮ್ಯುನಿಸ್ಟರನ್ನು ಸಂಪೂರ್ಣ ದಮನ ಮಾಡಲು ಪ್ರಯತ್ನಿಸಿದ. **ಕೊಮಿನ್ ಟಾನ್** ಸರಕಾರದ ಧಾಳಿಯನ್ನು

ಕಮ್ಯುನಿಸ್ಟರು ಸಮರ್ಥವಾಗಿಯೇ ಎದುರಿಸುತ್ತಿದ್ದರು. ಕಮ್ಯುನಿಸ್ಟರ ಕೇಂದ್ರವಾದ ಕಿಯಾಂಗ್ಸಿಯ ಮೇಲೆ ಸರ್ಕಾರದ ಸೈನ್ಯ 'ಸತ್ತುಪರೆದು ಧಾಳಿ'ಯನ್ನು ಆರಂಭಿಸಿತು. ಆಗ ಕೆಂಪು ಸೈನ್ಯ ಅದರಿಂದ ಪಾರಾಗಲು ಕಿಯಾಂಗ್ಸಿಯನ್ನು ಬಿಟ್ಟು ಯೆನಾನ್‌ಗೆ ತೆರಳುವ ಯೋಜನೆ ರೂಪಿಸಿತು. ಅಕ್ಟೋಬರ್ ೧೬, ೧೯೩೪ ರಂದು ಆರಂಭವಾದ ಈ ಮಹಾ ಮುನ್ನಡೆ (Long March) ಪ್ರಪಂಚದ ಇತಿಹಾಸದಲ್ಲಿಯೇ ವಿಶೇಷವಾದ ಮನ್ನಣೆ ಪಡೆದಿದೆ. ಸುಮಾರು ಒಂದು ಲಕ್ಷ ಸೈನಿಕರು, ೧೨,೬೦೦ ಮೈಲಿಗಳಷ್ಟು ದೂರವನ್ನು ಒಟ್ಟು ೩೭೦ ದಿನಗಳಲ್ಲಿ ಕ್ರಮಿಸಿದರು. ಮಾರ್ಗ ಮಧ್ಯದಲ್ಲಿ ಸಾವಿರಾರು ಸೈನಿಕರು, ಆಹಾರದ ಕೊರತೆ, ಚಳಿ, ಇತ್ಯಾದಿಗಳಿಂದಾಗಿ ಮರಣ ಹೊಂದಿದರು. ಆದರೂ ಕೆಂಪು ಸೈನ್ಯ ಹಿಮ್ಮೆಟ್ಟಲಿಲ್ಲ.

೨ನೆಯ ಮಹಾಯುದ್ಧದಲ್ಲಿಯೂ ಕೆಂಪು ಸೈನ್ಯವನ್ನು ಚು-ಮಾವೋ ಅವರುಗಳು ಜಪಾನ್‌ನ ಧಾಳಿಗಳಿಂದ ಚೀನಾದ ರಕ್ಷಣೆಗಾಗಿ ಬಳಸಿದರು. ಅಂತಿಮವಾಗಿ ೧೯೪೯ ರ ವೇಳೆಗೆ ಕೆಂಪು ಸೈನ್ಯ, ಗೆಲುವುಗಳನ್ನು ಸಾಧಿಸಲಾರಂಭಿಸಿತು. ಚಿಯಾಂಗ್ ಕೈ ಶೇಕ್ ಕಮ್ಯುನಿಸ್ಟರನ್ನು ಎದುರಿಸಲಾಗದೆ ಪಲಾಯನ ಮಾಡಿದ. ೧೯೪೯ ಅಕ್ಟೋಬರ್ ೧ ರಂದು ಮಾವೋತ್ಸೆತುಂಗ್ ಚೀನಾದ ಅಧ್ಯಕ್ಷನಾಗಿ ಅಧಿಕಾರ ಸ್ವೀಕಾರ ಮಾಡಿದ. ಅಲ್ಲಿಂದ ಆತನ ಮರಣದವರೆವಿಗೂ (ಸೆಪ್ಟೆಂಬರ್ ೬, ೧೯೭೬) ಮಾವೋ ಚೀನಾದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ. ಕಮ್ಯುನಿಸಂನ್ನು ಚೀನಾದ ಸಾಮಾಜಿಕ ಪರಿಸ್ಥಿತಿಗಳಿಗನುಸಾರವಾಗಿ ಅರ್ಥೈಸಿದ ಮಾವೋ ತನ್ನ ಆಡಳಿತಾವಧಿಯಲ್ಲಿ ಚೀನಾದ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರಯತ್ನಿಸಿದ. ಚೀನಾದಲ್ಲಿ ರಷ್ಯನ್ನರ ಪ್ರಭಾವವನ್ನು ತಡೆದು, ಅದಕ್ಕೆ ತನ್ನದೇ ಆದ ರೂಪ ಕೊಡಲು ಆತ ಸಾಂಸ್ಕೃತಿಕ ಕ್ರಾಂತಿಯನ್ನು ನಡೆಸಿದ. ಚೀನಾದ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ಬದಲಾಗಿ ಆಧುನಿಕ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿದ. ಮಾವೋ ಒಬ್ಬ ಉತ್ತಮ ಆಡಳಿತಗಾರನಲ್ಲದೆ ಒಬ್ಬ ಒಳ್ಳೆಯ ಕವಿಯೂ ಆಗಿದ್ದ. ಮಾವೋನ ಮರಣದ ವೇಳೆಗೆ ಚೀನ ಏಷ್ಯಾದಲ್ಲಿಯೆ ಒಂದು ಪ್ರಬಲ ಶಕ್ತಿಯಾಗಿ ರೂಪುಗೊಂಡಿತ್ತು.

೨. ನೆಲ್ಸನ್ ರೋಲಿಹ್ಲಾಲ್ ಮಂಡೇಲ

ವರ್ಣಭೇದ ನೀತಿಯ ವಿರುದ್ಧದ ಹೋರಾಟದಲ್ಲಿ ಪ್ರಮುಖವಾಗಿ ಕೇಳಿಬರುವ ಹೆಸರೆಂದರೆ ನೆಲ್ಸನ್ ಮಂಡೇಲರದು. ದಕ್ಷಿಣ ಆಫ್ರಿಕಾದಲ್ಲಿ ಕರಿಯರ ಪರವಾಗಿ ಸುದೀರ್ಘ ಹೋರಾಟ ನಡೆಸಿ ಅಂತಿಮವಾಗಿ ಅಲ್ಲಿ ವರ್ಣ ತಾರತಮ್ಯವನ್ನು ಅಂತ್ಯಗೊಳಿಸುವಲ್ಲಿ ಮಂಡೇಲಾರ ಪಾತ್ರ ಪ್ರಮುಖವಾದದ್ದು. ಅದರಲ್ಲೂ ಗಾಂಧೀಜಿಯವರ ತತ್ವಗಳು ಮಂಡೇಲಾರನ್ನು ಪ್ರಭಾವಿಸಿದ್ದವು.

ದಕ್ಷಿಣ ಆಫ್ರಿಕಾದ ಉಮ್ ಟಟಾ ಸಮೀಪದ ಕ್ವೆನು ಎಂಬಲ್ಲಿ ೧೮ನೇ ಜುಲೈ ೧೯೧೮ ರಲ್ಲಿ ಜನಿಸಿದ ನೆಲ್ಸನ್ ಮಂಡೇಲಾರ ತಂದೆ ಅಲ್ಲಿನ ಮ್ಯಾಗ್ದಲ ಮಂಡೇಲಾ ಅಲ್ಲಿನ ಥೆಂಬು ಲ್ಯಾಂಡ್‌ನ ರಾಜನಾಗಿದ್ದ. ತಂದೆಯ ಮರಣಾ ನಂತರ ಮಂಡೆಲ ಅಲ್ಲಿನ ರಾಜರಾದರು.

ಪ್ರಾಥಮಿಕ ಶಿಕ್ಷಣದ ನಂತರ ಉನ್ನತ ಶಿಕ್ಷಣಕ್ಕಾಗಿ **ಪೋರ್ಟ್ ಹೇರ್‌ಗೆ** ತೆರಳಿದರು. ಅಲ್ಲಿ ಬಿ.ಎ. ಪದವಿಗಾಗಿ ಅಭ್ಯಾಸ ಮಾಡುತ್ತಿದ್ದಾಗ, 'ಸ್ಟೂಡೆಂಟ್ಸ್ ರೆಪ್ರೆಸೆಂಟೆಟಿವ್ ಕೌನ್ಸಿಲ್'ನ ಸದಸ್ಯನಾಗಿ ಅನೇಕ ವಿದ್ಯಾರ್ಥಿ ಚಳವಳಿಗಳಲ್ಲಿ ಭಾಗವಹಿಸಿದರು. ಪರಿಣಾಮವಾಗಿ ಕಾಲೇಜಿನಿಂದ ವಜಾ ಆದರು. ನಂತರ ಅಂಚೆ ಮೂಲಕ ಪದವಿಯನ್ನು ಪಡೆದುಕೊಂಡರು. ಅನಂತರ ಕಾನೂನು ಪದವಿ ತರಗತಿಗೆ ಸೇರಿದರು. ೧೯೪೨ ರಲ್ಲಿ ಮಂಡೇಲಾ **ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್** (ANC) ಸೇರಿದರು. ೨ನೆಯ ಮಹಾಯುದ್ಧದ ಕಾಲದಲ್ಲಿ ಸ್ನೇಹಿತರ ಜೊತೆ ಸೇರಿ ANCಯನ್ನು ಒಂದು ಸಾಮೂಹಿಕ ಚಳವಳಿಯನ್ನಾಗಿಸುವ ಪ್ರಯತ್ನ ಮಾಡಿದರು.

೧೯೪೪ ರಲ್ಲಿ ಎ.**ಎನ್.ಸಿ.ಯೂತ್ ಲೀಗ್‌**ನ ಸ್ಥಾಪನೆಯಲ್ಲಿ ಸಕ್ರಿಯ ಪಾತ್ರವಹಿಸಿದರು. ೧೯೪೮ ರಲ್ಲಿ ಲೀಗ್‌ನ ಕಾರ್ಯದರ್ಶಿಯಾಗಿ, ೧೯೫೦ ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಮಂಡೇಲ ದೇಶದಲ್ಲಿ ರಾಜಕೀಯ ಜಾಗೃತಿಗಾಗಿ ವ್ಯಾಪಕ ಪ್ರವಾಸಗಳನ್ನು ಕೈಗೊಂಡರು. ಅದೇ ವೇಳೆಗೆ ಮಂಡೇಲಾ **ವರ್ಣಭೇದ** ನೀತಿಯ ವಿರುದ್ಧ ಹೋರಾಟ ಆರಂಭಿಸಿದ್ದರು. ೧೯೫೨ ರಲ್ಲಿ ಅವರು **ಟ್ಯಾಂಬೋ**ರವರ ಜೊತೆ ಸೇರಿ ಕರಿಯರ ಹಕ್ಕುಗಳಿಗಾಗಿ ಹೋರಾಡಲು **ಬ್ಲ್ಯಾಕ್ ಲೀಗಲ್ ಪೋರಂ** ಎಂಬ ವೇದಿಕೆಯೊಂದನ್ನು ತೆರೆದರು. ಕರಿಯರನ್ನು ಸಂಘಟಿಸಿ ತಾರತಮ್ಯನೀತಿಯ ವಿರುದ್ಧ ರಾಜದ್ರೋಹದ ಮೊಕದ್ದಮೆ ಹಾಕಲಾಯಿತು. ೧೯೬೦ ರ **ಶಾರ್ಪ್ ವಿಲ್ಲೆ ಹತ್ಯಾಕಾಂಡ**ದ ನಂತರ ಸರ್ಕಾರ ಮಂಡೇಲಾರನ್ನು ೧೯೬೧ ರ ವರೆಗೆ ಸ್ಥಾನಬದ್ಧತೆಯಲ್ಲಿಟ್ಟಿತು. ಬಿಡುಗಡೆಯ ನಂತರ ಮಂಡೇಲಾ ಭೂಗತರಾಗಿ ರಾಷ್ಟ್ರೀಯ ಹೋರಾಟವನ್ನು ಸಂಘಟಿಸಿದರು. ೧೯೬೨ ರಲ್ಲಿ ಮಂಡೇಲಾ ಸೈನಿಕ ತರಬೇತಿಗಾಗಿ **ಅಲ್ಜೀರಿಯ**ಗೆ ತೆರಳಿದರು. ಅಲ್ಲಿಂದ ಮರಳಿದ ನಂತರ ಅವರನ್ನು ಕಾನೂನಿಗೆ ವಿರುದ್ಧವಾಗಿ ದೇಶಬಿಟ್ಟು, ತೆರಳಿದ ಅಪರಾಧದ ಮೇಲೆ ಬಂಧಿಸಲಾಯಿತು.. ಅಂತೆಯೇ ಅವರ ವಿರುದ್ಧ ಮೊಕದ್ದಮೆ ಹೂಡಲಾಯಿತು. ೧೯೬೨ ರ ನವೆಂಬರ್‌ನಲ್ಲಿ ಮಂಡೇಲಾರಿಗೆ ೫ ವರ್ಷಗಳ ಸೆರೆವಾಸವನ್ನು ವಿಧಿಸಲಾಯಿತು. ಸೆರೆಯಲ್ಲಿರುವಾಗಲೇ ಮಂಡೇಲಾ ಅವರ ಮೇಲೆ **ರಿವೋನಿಯಾ** ಮೊಕದ್ದಮೆ ಹೂಡಿ, ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು.

ಶಿಕ್ಷಣ ಎಲ್ಲರಿಗೂ ಮುಕ್ತವಾಗಿರಬೇಕೆಂದು ಬಯಸುತ್ತಿದ್ದ ಮಂಡೇಲಾ **ಬೆನ್ ಐಲ್ಯಾಂಡ್‌**ನಲ್ಲಿ ಸೆರೆಯಲ್ಲಿದ್ದಾಗ ಅದನ್ನು ಶಿಕ್ಷಣದ ಕೇಂದ್ರವನ್ನಾಗಿ ರೂಪಿಸಿದ್ದರು. ಸೆರೆಯಲ್ಲಿದ್ದಾಗಲೂ ಮಂಡೇಲಾ ತಮ್ಮ ರಾಜಕೀಯ ಸಿದ್ಧಾಂತಗಳೊಂದಿಗೆ ರಾಜೀ ಮಾಡಿಕೊಳ್ಳಲಿಲ್ಲ. ಹಾಗಾಗಿಯೇ ಅವರು ೧೯೭೦ ರ ದಶಕದಲ್ಲಿ ಮತ್ತು ೧೯೮೦ ರ ದಶಕದಲ್ಲಿ ಎರಡು ಬಾರಿ ಷರತ್ತುಬದ್ಧ ಬಿಡುಗಡೆಗೆ ಒಪ್ಪಲಿಲ್ಲ. ಅಂತಿಮವಾಗಿ **ಫೆಬ್ರವರಿ ೧೧, ೧೯೯೦** ರಂದು ಮಂಡೇಲಾರ ಬಿಡುಗಡೆಯಾಯಿತು. ಮಂಡೇಲಾ ಸಶಸ್ತ್ರ ಹೋರಾಟವನ್ನು ನಿಲ್ಲಿಸಲು ಒಪ್ಪಿದರು. ದಕ್ಷಿಣ ಆಫ್ರಿಕಾದ, ಪ್ರಥಮ ಚುನಾಯಿತ ಕರಿಯ **ಅಧ್ಯಕ್ಷರಾಗಿ ನೆಲ್ಸನ್ ಮಂಡೇಲಾ** ೧೦ನೆಯ ಮೇ, ೧೯೯೪ ರಂದು ಅಧಿಕಾರ ವಹಿಸಿಕೊಂಡರು. ದಶಕಗಳ ಹೋರಾಟದ ನಂತರ ದಕ್ಷಿಣ ಆಫ್ರಿಕಾದಲ್ಲಿ ಕರಿಯರ ಪರವಾಗಿ, ತಾರತಮ್ಯವನ್ನು

ಅಂತ್ಯಗೊಳಿಸುವಲ್ಲಿ ಮಂಡೇಲಾರ ಪಾತ್ರ ಪ್ರಮುಖವಾದದು. ಜೂನ್ ೧೯೯೯ ರಲ್ಲಿ ಮಂಡೇಲಾ ತಮ್ಮ ಪದವಿಯನ್ನು ಬಿಟ್ಟು ಕೊಟ್ಟರು. ಮಂಡೇಲಾರ ಈ ಹೋರಾಟವನ್ನು ಗುರುತಿಸಿ ಐವತ್ತಕ್ಕೂ ಹೆಚ್ಚಿನ ವಿಶ್ವವಿದ್ಯಾಲಯಗಳು ಗೌರವ ಪದವಿ ನೀಡಿ ಗೌರವಿಸಿವೆ. ಭಾರತ ಸರ್ಕಾರ ೧೯೯೦ ರಲ್ಲಿ ನೆಲ್ಸನ್ ಮಂಡೇಲಾರನ್ನು ತನ್ನ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ **ಭಾರತ ರತ್ನ** ನೀಡಿ ಗೌರವಿಸಿದೆ. ೧೯೯೩ ರಲ್ಲಿ ತಮಗೆ ಕೊಡಮಾಡಿದ **ನೊಬೆಲ್ ಶಾಂತಿಪ್ರಶಸ್ತಿ**ಯನ್ನು ಎಲ್ಲಾ ಕರಿಯ ಹೋರಾಟಗಾರರ ಹಾಗೂ ಅವರ ತ್ಯಾಗದ ಪರವಾಗಿ ಸ್ವೀಕರಿಸಿದರು.

೩. ಮಿಖೈಲ್ ಸರ್ಗೈವಿಕ್ ಗೋರ್ಬಚೆವ್

ಮಿಖೈಲ್ ಸರ್ಗೈವಿಕ್ ಗೋರ್ಬಚೆವ್ ಜನಿಸಿದ್ದು ೧೯೩೧ ರಲ್ಲಿ, **ಸ್ಟಾವ್ರೋಪೋಲ್**ನಲ್ಲಿ. ೧೯೫೫ ರಲ್ಲಿ ಕಾನೂನು ಪದವಿಯನ್ನು ಪಡೆದನಂತರ ಅವರು ಸ್ಥಳೀಯ **ಕಮ್ಯುನಿಸ್ಟ್ ಪಕ್ಷ**ವನ್ನು ಸೇರಿದರು. ೧೯೭೦ ರಲ್ಲಿ ಅವರು ಸ್ಟಾವ್ರೋಪೋಲ್‌ನಲ್ಲಿ ಪಕ್ಷದ ನಾಯಕರಾದರು. ನಂತರ **ಸುಪ್ರೀಂ ಸೋವಿಯತ್ ಆಫ್ ಯು.ಎಸ್. ಎಸ್.ಆರ್**.ಗೆ ಆಯ್ಕೆಯಾದರು. ತಮ್ಮ ಸುಧಾರಣೆಗಳಿಗೆ ಮತ್ತು ರಾಜಕೀಯ ನಿಪುಣತೆಗೆ ಹೆಸರಾಗಿದ್ದ ಗೋರ್ಬಚೆವ್ ಕಮ್ಯುನಿಸ್ಟ್ ಪಕ್ಷದ ಸಚಿವಾಲಯದಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿಯಾದರು. ೧೯೮೦ ರಲ್ಲಿ ಅವರು ಪಾಲಿಟ್ ಬ್ಯೂರೋದ ಸದಸ್ಯರಾದರು. ೧೯೯೩ ರಲ್ಲಿ ಇಡೀ ಆರ್ಥಿಕತೆ ಅವರ ಅಧೀನಕ್ಕೆ ಬಂದಿತು.

೧೯೮೫ ರಲ್ಲಿ **ಕಾಂಸ್ಟಾಂಟಿನ್ ಚೆರ್ನೆನ್ಕೋವ್** ಮರಣದ ನಂತರ ಗೋರ್ಬಚೆವ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾದರು. ಯು.ಎಸ್.ಎಸ್.ಆರ್.ನಲ್ಲಿ ಪ್ರಜಾ ಪ್ರಭುತ್ವವನ್ನು ಎಲ್ಲ ಹಂತಗಳಲ್ಲಿ ಅಳವಡಿಸಲು ಪ್ರಾರಂಭಿಸಿದ ಅವರು, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಉದಾರೀಕರಣವನ್ನು ಜಾರಿಗೊಳಿಸಿದರು. ಅದೇ **ಗ್ಲಾಸ್‌ನಾಸ್ತ್** (ಮುಕ್ತತೆ) ಮತ್ತು **ಪೆರೆಸ್ಟ್ರೊಯಿಕ್** (ಪುನರ್ ನಿರ್ಮಾಣ). ೧೯೮೬ ರಲ್ಲಿ ಸಂಭವಿಸಿದ **ಚರ್ನೋಬಿಲ್ ದುರಂತ**ವು ಅವರನ್ನು ಹೆಚ್ಚಿನ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡುವಂತೆ ಮಾಡಿತು. ನಂತರ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲಾಯಿತು. ಭ್ರಷ್ಟಾಚಾರವನ್ನು ತಡೆಗಟ್ಟುವ ಪ್ರಯತ್ನ ಮಾಡಲಾಯಿತು. ರಾಜಕೀಯ ದಮನಕಾರಿ ಕ್ರಮಗಳನ್ನು ಕೈಬಿಟ್ಟು ಸೆನ್ಸಾರ್ ಶಿಪ್‌ನ್ನು ಸಡಿಲಗೊಳಿಸಲಾಯಿತು. ರಷ್ಯಾದ ಗುಪ್ತಾಚಾರ ಪಡೆ ಕೆ.ಜಿ.ಬಿ.ಯ ಅಧಿಕಾರಗಳನ್ನು ಕಡಿತಗೊಳಿಸಲಾಯಿತು. ಅಷ್ಟೇ ಅಲ್ಲದೆ ರಷ್ಯಾದ ಐತಿಹಾಸದ ಪುನರ್‌ಪರಿಶೀಲನೆಗೂ ಅವಕಾಶ ನೀಡಲಾಯಿತು.

ಅಮೇರಿಕಾದೊಂದಿಗಿನ ಯು.ಎಸ್.ಎಸ್.ಆರ್.ನ. ಸಂಬಂಧಗಳಲ್ಲಿ ವ್ಯಾಪಕ ಬದಲಾವಣೆಗಳಾದವು. ಅಣ್ವಸ್ತ್ರಗಳ ಭೀತಿಯನ್ನು ತಗ್ಗಿಸುವ ಪ್ರಯತ್ನಗಳಾದವು. ಈ ನಿಟ್ಟಿನಲ್ಲಿ ಆದ ಒಂದು ಪ್ರಮುಖ ಬೆಳವಣಿಗೆಯೆಂದರೆ **ಐ.ಎನ್.ಎಫ್**. (Intermediate

Forces Arms Limitation Treaty) ಒಪ್ಪಂದಕ್ಕೆ ೧೯೮೭ ಸಹಿ ಹಾಕಿದ್ದು. ೧೯೮೮ ರಲ್ಲಿ ಆಫ್ಘಾನಿಸ್ತಾನದಿಂದ ಸೋವಿಯತ್ ಪಡೆಗಳನ್ನು ಹಿಂತೆಗೆದುಕೊಳ್ಳುವಲ್ಲಿ ಈ ನೀತಿ ಪ್ರಮುಖ ಪಾತ್ರವಹಿಸಿತ್ತು. ಈ ಎಲ್ಲಾ ಶಾಂತಿ ಸ್ಥಾಪನೆಯ ಪ್ರಯತ್ನಗಳು ಗೋರ್ಬಚೆವ್ ಅವರಿಗೆ **ನೊಬೆಲ್ ಶಾಂತಿಪ್ರಶಸ್ತಿ**ಯನ್ನು ತಂದುಕೊಟ್ಟವು.

ಗೋರ್ಬಚೆವ್ ಜಾರಿಗೆ ತಂದ ಉದಾರ ನೀತಿಗಳು ಬಾಲ್ಟಿಕ್ ಪ್ರದೇಶದಲ್ಲಿ ರಷ್ಯಾದ ಅಂಗಗಳಾಗಿದ್ದ ರಾಜ್ಯಗಳಲ್ಲಿ ಅಂತರ್ಗತವಾಗಿದ್ದ ಜನಾಂಗೀಯ ಮತ್ತು ರಾಷ್ಟ್ರೀಯ ಉದ್ವೇಗ ಗಳಿಗೆ ಕಾರಣವಾಯಿತು. ಮುಖ್ಯವಾಗಿ ಎಸ್ಟೋನಿಯಾ, **ಲಿಥುವೇನಿಯಾ**, ಲ್ಯಾಟ್ವಿಯಾ, ಈ ಭಾವನೆಗಳು ಸ್ಫೋಟಗೊಂಡವು. ಸೆನ್ಸಾರ್‌ಶಿಪ್‌ನ್ನು ಸಡಿಲಗೊಳಿಸಲಾಗಿದ್ದು ಮಾಧ್ಯಮದ ಮೇಲಿದ್ದ ನಿಯಂತ್ರಣವನ್ನು ಸರ್ಕಾರ ಕಳೆದುಕೊಳ್ಳುವಂತೆ ಮಾಡಿತು. ಪರಿಣಾಮವಾಗಿ ಮಾಧ್ಯಮಗಳಿಂದ ರಾಷ್ಟ್ರದಲ್ಲಿದ್ದ ಆರ್ಥಿಕ ಸಮಸ್ಯೆಗಳು, **ಸ್ಟ್ಯಾಲಿನ್ ಯುಗದ** ಹಿಂಸಾಚಾರ, ಬಡತನ, ಮದ್ಯವ್ಯಸನ, ವಸತಿ ಸಮಸ್ಯೆ, ಮಹಿಳೆಯರ ಸ್ಥಿತಿಗತಿಗಳು ಅನಾವರಣಗೊಂಡವು. ಅವನ ಈ ನೀತಿಗಳು ಉದ್ದೇಶಪೂರ್ವಕವಲ್ಲದ ಬೆಳವಣಿಗೆಗಳನ್ನು ತಂದವು. ನಂತರದ ಚುನಾವಣೆಗಳಲ್ಲಿ ರಾಷ್ಟ್ರೀಯವಾದಿಗಳು ಬಹುಮತವನ್ನು ಗಳಿಸಿದರು. ಗೋರ್ಬಚೆವ್ ಗಣ ರಾಜ್ಯಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರಾದರೂ ಆ ವೇಳೆಗಾಗಲೇ ಕೇಂದ್ರ ಸರಕಾರವೇ ವಿಫಲವಾಗಿದ್ದರಿಂದ ಪರಿಸ್ಥಿತಿ ಅವರ ನಿಯಂತ್ರಣವನ್ನು ಮೀರಿತ್ತು. ಈ ನಡುವೆ **ಲಿಥುವೇನಿಯಾ** ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು. ೧೯೯೧ ರಲ್ಲಿ ಗೋರ್ಬಚೆವ್ **ಕ್ರಿಮಿಯಾ**ದಲ್ಲಿ ರಜಾ ಕಾಲವನ್ನು ಕಳೆಯುತ್ತಿದ್ದಾಗ ಅವರ ವಿರೋಧಿ ಬಣ್ಣದ ತೀವ್ರವಾದಿಗಳು ಗೋರ್ಬಚೆವ್ ವಿರುದ್ಧ ಸಂಚನ್ನು ರೂಪಿಸಿದರು. ಆದರೆ ಆ ಸಂಚು ವಿಫಲವಾಯಿತು. ನಂತರ **ರಷ್ಯನ್** ರಿಪಬ್ಲಿಕ್ಸ್‌ನ ಅಧ್ಯಕ್ಷ **ಬೋರಿಸ್ ಯೆಲ್ಸಿನ್**‌ರವರಿಗೆ ಹೆಚ್ಚಿನ ಅಧಿಕಾರಿಗಳು ವರ್ಗಾವಣೆಯಾದವು. ಗೋರ್ಬಚೆವ್ ಕಮ್ಯುನಿಸ್ಟ್ ಪಕ್ಷವನ್ನು ವಿಸರ್ಜಿಸಿ, **ಬಾಲ್ಟಿಕ್ ರಾಜ್ಯಗಳಿಗೆ** ಸ್ವಾತಂತ್ರ್ಯ ನೀಡಿ ಉಳಿದ ಗಣರಾಜ್ಯಗಳನ್ನು ಆರ್ಥಿಕ ಸಮುದಾಯವನ್ನಾಗಿ ರೂಪಿಸುವ ಪ್ರಸ್ತಾವನೆಯನ್ನು ಇಟ್ಟರು. **ಡಿಸೆಂಬರ್ ೮, ೧೯೯೧** ರಂದು **ಕಾಮನ್ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್** ಅಸ್ತಿತ್ವಕ್ಕೆ ಬಂದಿದ್ದರಿಂದ **ಸೋವಿಯಟ್ ಯೂನಿಯನ್** ಕರಗಿಹೋಯಿತು. ಡಿಸೆಂಬರ್ ೧೫, ೧೯೯೧ ಗೋರ್ಬಚೆಟ್ ರಾಜೀನಾಮೆ ನೀಡಿ ಬೋರಿಸ್ ಯೆಲ್ಸಿನ್‌ರವರಿಗೆ ಅಧಿಕಾರವನ್ನು ಹಸ್ತಾಂತರಿಸಿದರು. ಇದರಿಂದ ಸುಪ್ರೀಂ ಸೋವಿಯತ್ ವಿಸರ್ಜನೆಯಾಯಿತು. ರಷ್ಯಾ ಇದರಿಂದಾಗಿ ತನ್ನ **ಸೂಪರ್ ಪವರ್** ಸ್ಥಾನವನ್ನು ಕಳೆದುಕೊಂಡಿದ್ದಲ್ಲದೆ, ತನ್ಮೂಲಕ **ಶೀತಲ ಯುದ್ಧದ** ಉದ್ವಿಗ್ನತೆಯನ್ನು ನಿವಾರಿಸಿತು. ೧೯೯೨ ರಿಂದೀಚೆಗೆ ಗೋರ್ಬಚೆವ್ ಅನೇಕ ಸಂಘಟನೆಗಳೊಂದಿಗೆ ತನ್ನನ್ನು ಗುರುತಿಸಿ ಕೊಂಡಿದ್ದು, ಅನೇಕ ಪುಸ್ತಕಗಳನ್ನೂ ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುದೆಂದರೆ ಮೈ **ಕಂಟ್ರಿ ಅಂಡ್ ದಿ ವರ್ಲ್ಡ್**.

ಹೆಚ್ಚಿನ ಓದಿಗಾಗಿ

೧. ಫಿಷರ್ ಎಚ್.ಎ.ಎಲ್ - ಎ ಹಿಸ್ಟರಿ ಆಫ್ ಯೂರೋಪ್

೨. ಡೇವೀಸ್ ಎಚ್.ಎ - ಎನ್ ಔಟ್‌ಲೈನ್ ಆಫ್ ದಿ ವರ್ಲ್ಡ್ ಹಿಸ್ಟರಿ

೩. ಕೆಟಲ್‌ಬೇ ಸಿ.ಡಿ.ಎಮ್ - ಎ ಹಿಸ್ಟರಿ ಆಫ್ ಮಾಡರ್ನ್ ಟೈಮ್ಸ್

೪. ಎನ್.ಸಿ.ಇ.ಆರ್.ಟಿ (ಪ್ರ) - ಕಂಟೆಂಪರರಿ ವರ್ಲ್ಡ್ ಹಿಸ್ಟರಿ

೫. ಮರಿವಾಲಾ ಮತ್ತು ಇತರರು - ಲ್ಯಾಂಡ್‌ಮಾರ್ಕ್ಸ್ ಇನ್ ವರ್ಲ್ಡ್ ಹಿಸ್ಟರಿ

ಮಾದರಿ ಪ್ರಶ್ನೆಗಳು

I. ಒಂದು ವಾಕ್ಯದಲ್ಲಿ ಉತ್ತರಿಸಿ. (೧ ಅಂಕ)

೧. ಮೊದಲನೇ ಮಹಾಯುದ್ಧದ ಕಾಲಾವಧಿ ಯಾವುದು?

೨. ಮೊದಲನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

೩. ಮೊದಲನೇ ಮಹಾಯುದ್ಧದ ನಂತರ ಶಾಂತಿಸಮ್ಮೇಳನಗಳು ಎಲ್ಲಿ ಜರುಗಿದವು?

೪. ವರ್ಸೈಲ್ಸ್ ಒಪ್ಪಂದವನ್ನು ಯಾವ ರಾಷ್ಟ್ರದೊಡನೆ ಮಾಡಿಕೊಳ್ಳಲಾಯಿತು?

೫. ಲೀಗ್ ಆಫ್ ನೇಷನ್ಸ್ ಸ್ಥಾಪನೆಯಾದ ವರ್ಷ ಯಾವುದು?

೬. ೧೪ ಅಂಶಗಳ ಸೂತ್ರವನ್ನು ನೀಡಿದವರು ಯಾರು?

೭. ಎರಡನೆಯ ಮಹಾಯುದ್ಧ ಎಂದು ಆರಂಭವಾಯಿತು?

೮. ಎರಡನೆಯ ಮಹಾಯುದ್ಧ ಆರಂಭಕ್ಕೆ ತಕ್ಷಣದ ಕಾರಣವೇನು?

೯. ರೋಂನ ಮೇಲೆ ಧಾಳಿಯನ್ನು ಸಂಘಟಿಸಿದವರು ಯಾರು?

೧೦. ಹಿಟ್ಲರ್ ಯಾವ ದೇಶದವನು?

೧೧. ವೀಮರ್ ಗಣರಾಜ್ಯ ಎಲ್ಲಿ ಸ್ಥಾಪಿತವಾಯಿತು?

೧೨. ಜನರಲ್ ಟನಾಕ ಯಾವ ದೇಶದವನು?

೧೩. ವಿಶ್ವಸಂಸ್ಥೆಯ ಸ್ಥಾಪನೆಯ ವರ್ಷ ಯಾವುದು?

೧೪. ವಿಶ್ವಸಂಸ್ಥೆಯ ಪ್ರಥಮ ಕಾರ್ಯದರ್ಶಿ ಯಾರು?

೧೫. ವಿಶ್ವಸಂಸ್ಥೆಯ ಪ್ರಸ್ತುತ ಕಾರ್ಯದರ್ಶಿ ಯಾರು?

೧೬. ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ ಎಲ್ಲಿದೆ?

೧೭. ಡಬ್ಲ್ಯು.ಹೆಚ್.ಒ. ಅನ್ನು ವಿಸ್ತರಿಸಿ ಬರೆಯಿರಿ.

೧೮. ಅಂತರರಾಷ್ಟ್ರೀಯ ನ್ಯಾಯಾಲಯದ ಪ್ರಧಾನ ಕಛೇರಿ ಎಲ್ಲಿದೆ?

II. ಎರಡು ವಾಕ್ಯಗಳಲ್ಲಿ ಉತ್ತರಿಸಿ (೨ ಅಂಕಗಳು)

೧. ಟ್ರಿಪಲ್ ಅಂಥಾಂತ್ ನ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.

೨. ಆರ್ಚ್ ಡ್ಯೂಕ್ ಫರ್ಡಿನ್ಯಾಂಡ್ ಯಾವ ದೇಶದವನು? ಅವನನ್ನು ಎಲ್ಲಿ ಹತ್ಯೆ ಮಾಡಲಾಯಿತು?

೩. ಪ್ಯಾರೀಸ್ ಶಾಂತಿ ಸಮ್ಮೇಳನದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ ನಾಲ್ವರು ದೊಡ್ಡ ನಾಯಕರು ಯಾರು?

೪. 'ವಿಶ್ವದ ಶ್ರೇಷ್ಠ ಶಕ್ತಿ ಇಲ್ಲವೆ ನಾಶ' ಎಂಬ ತತ್ವವನ್ನು ಪ್ರತಿಪಾದಿಸಿದವರು ಯಾರು? ಯಾವ ದೇಶದವರು?

೫. ಮೊದಲನೇ ಮಹಾಯುದ್ಧದ ಯಾವುದಾದರೂ ಎರಡು ತಕ್ಷಣದ ಪರಿಣಾಮಗಳನ್ನು ಬರೆಯಿರಿ?

೬. ಮೊದಲನೇ ಮಹಾಯುದ್ಧದ ನಂತರ ಏಳಿಗೆಯಾದ ಹೊಸ ಸಿದ್ಧಾಂತಗಳು ಯಾವುವು?

೭. ರೋಂ-ಬರ್ಲಿನ್-ಟೋಕಿಯೋ ಅಕ್ಷ (ಒಪ್ಪಂದ)ದ ಸದಸ್ಯ ರಾಷ್ಟ್ರಗಳು ಯಾವುವು?

೮. ಕಪ್ಪಂಗಿ ದಳ(black shirts)ವನ್ನು ಸಂಘಟಿಸಿದವರು ಯಾರು ಎಲ್ಲಿ?

೯. ಹಿಟ್ಲರ್‌ನ ಆತ್ಮ ಚರಿತ್ರೆ ಯಾವುದು? ಅದನ್ನು ಏನೆಂದು ಕರೆಯಲಾಗಿದೆ?

೧೦. 'ಆಪರೇಷನ್ ಬಾರ್‌ಬರೋಸ'ವನ್ನು ಯಾರು ಎಲ್ಲಿ ಜಾರಿಗೆ ತಂದರು?

೧೧. ಎರಡನೆ ಮಹಾಯುದ್ಧದ ತರುವಾಯ ಅಸ್ತಿತ್ವಕ್ಕೆ ಬಂದ ಎರಡು ಬಣಗಳು ಯಾವುವು?

೧೨. ಎರಡನೆ ಮಹಾಯುದ್ಧದಲ್ಲಿ ಅಣುಬಾಂಬ್ ಧಾಳಿಗೆ ತುತ್ತಾದ ಪ್ರದೇಶಗಳು ಯಾವುವು?

೧೩. ವಿಶ್ವಸಂಸ್ಥೆಯ ಎರಡು ವ್ಯವಹಾರಿಕ ಭಾಷೆಗಳನ್ನು ಹೆಸರಿಸಿ.

೧೪. ವಿಶ್ವಸಂಸ್ಥೆಯ ಎರಡು ಪ್ರಧಾನ ಅಂಗಗಳನ್ನು ತಿಳಿಸಿ.

೧೫. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಎರಡು ಖಾಯಂ ರಾಷ್ಟ್ರಗಳನ್ನು ಹೆಸರಿಸಿ.

೧೬. ವಿಶ್ವಸಂಸ್ಥೆಯ ಯಾರಾದರೂ ಇಬ್ಬರು ಸೆಕ್ರಟರಿ ಜನರಲ್‌ಗಳನ್ನು ಹೆಸರಿಸಿ.

೧೭. ವಿಶ್ವಸಂಸ್ಥೆಯ ಎರಡು ವಿಶೇಷ ಸಮಿತಿಗಳನ್ನು ಹೆಸರಿಸಿ.

೧೮. ಯುನಿಸೆಫ್ ಯಾವುದಕ್ಕೆ ಸಂಬಂಧಿಸಿದೆ?

III. ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ (೫ ಅಂಕಗಳು)

೧. ಮೊದಲನೇ ಮಹಾಯುದ್ಧದ ಕಾರಣಗಳನ್ನು ತಿಳಿಸಿ.

೨. ಮೊದಲನೇ ಮಹಾಯುದ್ಧದ ನಂತರ ಶಾಂತಿ ಸಮ್ಮೇಳನದಲ್ಲಿ ಆದ ಒಪ್ಪಂದಗಳ ಬಗ್ಗೆ ಬರೆಯಿರಿ.

೩. ಮೊದಲನೇ ಮಹಾಯುದ್ಧದಲ್ಲಿ ಅಮೆರಿಕಾ ಪ್ರವೇಶಿಸಲು ಕಾರಣವೇನು? ಅದರ ಪರಿಣಾಮಗಳೇನು?

೪. ಎರಡನೇ ಮಹಾಯುದ್ಧದ ಕಾರಣಗಳನ್ನು ತಿಳಿಸಿ.

೫. ಮುಸಲೋನಿ ಬಗ್ಗೆ ಟಿಪ್ಪಣಿ ಬರೆಯಿರಿ.

೬. ಎರಡನೇ ಮಹಾಯುದ್ಧದ ಪರಿಣಾಮಗಳನ್ನು ತಿಳಿಸಿ.

೭. ಶಾಂತಿ ಪಾಲನಾ ಕಾರ್ಯಚರಣೆಗಳಲ್ಲಿ ಭಾರತದ ಪಾತ್ರವನ್ನು ವಿವರಿಸಿ.
೮. ಭದ್ರತಾ ಮಂಡಳಿಯಲ್ಲಿನ ಖಾಯಂ ಸ್ಥಾನಕ್ಕೆ ಭಾರತದ ಹಕ್ಕು ಪ್ರತಿಪಾದನೆ ಬಗ್ಗೆ ಟಿಪ್ಪಣಿ ಬರೆಯಿರಿ.
೯. ವಿಶ್ವಸಂಸ್ಥೆಯ ಮಿತಿಗಳು ಯಾವುವು?

IV. ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ (೧೦ ಅಂಕಗಳು)

೧. ಮೊದಲನೇ ಮಹಾಯುದ್ಧದ ಕಾರಣಗಳನ್ನು ಮತ್ತು ಪರಿಣಾಮಗಳನ್ನು ವಿವರಿಸಿ.
೨. ಎರಡನೇ ಮಹಾಯುದ್ಧದ ಕಾರಣಗಳನ್ನು ಮತ್ತು ಪರಿಣಾಮಗಳನ್ನು ವಿವರಿಸಿ.
೩. ಹಿಟ್ಲರ್‌ನ ಏಳಿಗೆಗೆ ಕಾರಣವಾದ ಅಂಶಗಳು ಯಾವುವು?
೪. ವಿಶ್ವಸಂಸ್ಥೆಯ ಸಾಧನೆಗಳನ್ನು ವಿವರಿಸಿ.
೫. ವಿಶ್ವಸಂಸ್ಥೆಯ ಅಂಗಗಳ ಬಗ್ಗೆ ಟಿಪ್ಪಣಿ ಬರೆಯಿರಿ.
೬. ಮಾವೋತ್ಸೆ ತುಂಗ್ ಅವರ ಜೀವನ ಹಾಗೂ ಸಾಧನೆಗಳನ್ನು ಕುರಿತು ವಿವರಿಸಿ.
೭. ನೆಲ್ಸನ್ ಮಂಡೇಲಾ ಅವರ ವ್ಯಕ್ತಿತ್ವ ಹಾಗೂ ಅವರ ಐತಿಹಾಸಿಕ ಕೊಡುಗೆಗಳನ್ನು ಕುರಿತು ವಿವರಿಸಿ.
೮. ಮಿಖೈಲ್ ಗೊರ್ಬಚೆವ್ ಅವರ ಜೀವನ ಹಾಗೂ ಸಾಧನೆಗಳನ್ನು ಕುರಿತು ವಿಶ್ಲೇಷಿಸಿ.

V. **ಹೆಚ್ಚಿನ ಜ್ಞಾನಕ್ಕಾಗಿ ಕಾರ್ಯ-ಯೋಜನೆಗಳು (Assignments/Projects)**

೧. ಮೊದಲನೆಯ ಮಹಾಯುದ್ಧವು ನಡೆದ ಪ್ರದೇಶಗಳನ್ನು ಭೂಪಟದಲ್ಲಿ ಗುರುತಿಸಿ, ಅವುಗಳ ಸಂಬಂಧವನ್ನು ಕುರಿತು ವಿವರಿಸಿ.
೨. ಮೊದಲನೆಯ ಮಹಾಯುದ್ಧ ನಡೆಯಲು ಜರ್ಮನಿಯೇ ಮೂಲಕಾರಣವೆನ್ನಲು ಇರುವಂಥ ಅಂಶಗಳು ಯಾವುವು ಎಂಬುದನ್ನು ಕುರಿತು ಪ್ರಬಂಧ ರಚಿಸಿ.
೩. ಎರಡನೆಯ ಮಹಾಯುದ್ಧವು ನಡೆದ ಪ್ರಮುಖ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸಿ ಹಾಗೂ ಅಣುಬಾಂಬ್‌ಗಳ ದುಷ್ಪರಿಣಾಮವನ್ನು ಕುರಿತು ವಿವರಿಸಿ.
೪. ವಿಶ್ವಸಂಸ್ಥೆ ಹಾಗೂ ಅದರ ಅಂಗಸಂಸ್ಥೆಗಳ ರಚನೆಯನ್ನು ಕುರಿತು ವಿವರಿಸುವ ಚಿತ್ರಗಳನ್ನು, ರೇಖಾಚಿತ್ರಗಳನ್ನು ರಚಿಸಿ.
೫. ಮಾವೋತ್ಸೆ ತುಂಗ್, ಮಂಡೇಲ ಹಾಗೂ ಗೊರ್ಬಚೆವ್ ಅವರುಗಳ ಭಾವಚಿತ್ರಗಳನ್ನು ಸಂಗ್ರಹಿಸಿ.

ಭಾಗ - ಬಿ

IV ಭಾರತಕ್ಕೆ ಯುರೋಪಿಯನ್ನರ ಆಗಮನ

IV ಭಾರತಕ್ಕೆ ಯುರೋಪಿಯನ್ನರ ಆಗಮನ

ಅಧ್ಯಾಯ ೪

೪.೧ ಪೋರ್ಚುಗೀಸರು-ಡಚ್ಚರು-ಫ್ರೆಂಚರು ಹಾಗೂ ಇಂಗ್ಲಿಷರು ಇವರ ವಸಾಹತು ನೆಲೆಗಳ ಸಂಕ್ಷಿಪ್ತ ನೋಟ

ಹಿನ್ನೆಲೆ : ಭಾರತವು ಬಹು ಹಿಂದಿನಿಂದಲೂ ಪಾಶ್ಚಾತ್ಯ ಪ್ರಪಂಚದೊಡನೆ ಸಂಪರ್ಕವಿರಿಸಿಕೊಂಡಿತ್ತು. ಬಹುಮುಖ್ಯವಾಗಿ ಇಲ್ಲಿ ಅಲೆಗ್ಸಾಂಡರ್‌ನ ದಾಳಿಯನ್ನು ಸೂಚಿಸಬಹುದು. ತದನಂತರದ ಯುರೋಪಿನ ರಾಜಕೀಯ ದಾಳಿಗಳು ಕಡಿಮೆಯಾದವು. ಆದರೆ ಭಾರತ ಯುರೋಪಿನೊಂದಿಗೆ ವ್ಯಾಪಾರ ಸಂಪರ್ಕ ಇಟ್ಟುಕೊಂಡಿದ್ದುದನ್ನು ಗಮನಿಸಬಹುದು. ಏಕೆಂದರೆ ಭಾರತದ ಸರಕುಗಳಿಗೆ ಯುರೋಪಿನಲ್ಲಿ ಬಹು ಬೇಡಿಕೆಯಿತ್ತು. ಭಾರತದ ಸಂಪರ್ಕವನ್ನು ಬಲಪಡಿಸಿದ್ದಿತು. ಆದರೆ ಸ್ವಲ್ಪಕಾಲ ಮಾತ್ರ ಭಾರತದ ವ್ಯಾಪಾರ ತೊಂದರೆ ಅನುಭವಿಸಬೇಕಾಯಿತು. ಏಕೆಂದರೆ ೧೪೫೩ ರಲ್ಲಿ ಕಾನ್‌ಸ್ಟಾಂಟಿನೋಪಲನ್ನು ಟರ್ಕರು ವಶಪಡಿಸಿಕೊಂಡಿದ್ದರಿಂದ ಭೂಮಾರ್ಗದ ಸಂಪರ್ಕ ಮುಚ್ಚಲ್ಪಟ್ಟಿತು. ಆದರೆ ಯುರೋಪಿಯನ್ನರಿಗೆ ಭಾರತದ ಸರಕುಗಳು ಅತ್ಯವಶ್ಯವಾಗಿದ್ದರಿಂದ ಅಗತ್ಯವಾಗಿ ಪರ್ಯಾಯ ಮಾರ್ಗ ಕಂಡುಹಿಡಿಯುವುದು ಅನಿವಾರ್ಯವಾಯಿತು. ಈ ನಿಟ್ಟಿನಲ್ಲಿ ಹೊಸಮಾರ್ಗವನ್ನು ಶೋಧಿಸುವ ಕಾರ್ಯದಲ್ಲಿ ಮುಂದಾದ ದೇಶಗಳೆಂದರೆ ಸ್ಪೈನ್ ಮತ್ತು ಪೋರ್ಚುಗಲ್. ಈ ಭೌಗೋಳಿಕ ಸಂಶೋಧನೆಗಳಿಗೆ ಸಾಂಪ್ರದಾಯಿಕ ಪ್ರೋತ್ಸಾಹ ನೀಡಿದ ಕೀರ್ತಿ ಪೋರ್ಚುಗಲ್ ದೊರೆಗೆ ಸೇರಬೇಕು. ಕ್ರಿ.ಶ. ೧೪೯೩-೧೪೬೦ ಕಿಂಗ್ ಇಮ್ಯನುಯಲ್ ನೀಡಿದ ಪ್ರೋತ್ಸಾಹದಿಂದ ಅವನನ್ನು 'ನಾವಿಕ ಹೆನ್ರಿ ಅಥವಾ ಸಮುದ್ರ ಶೋಧಕ ಹೆನ್ರಿ' ಎಂದು ಕರೆಯಲಾಗುತ್ತಿತ್ತು. ಅಥವಾ 'ಸಮುದ್ರ ಶೋಧಕರ ಚಕ್ರವರ್ತಿ ಅಥವಾ ರಾಜ ಕುಮಾರ' ಎಂದು ಕರೆಯಲಾಗುತ್ತಿತ್ತು. ತದನಂತರ ವಾಸ್ಕೋಡಿಗಾಮನು ಸಮುದ್ರಯಾನ ಕೈಗೊಂಡು ೧೪೯೮ ರಲ್ಲಿ ಕ್ಯಾಲಿಕಟ್ (ಕಲ್ಲಿಕೋಟೆ) ತಲುಪಿದನು. ಅಲ್ಲಿ ವಾಸ್ಕೋಡಿಗಾಮ ಮತ್ತು ಜಾಮೋರಿನ್ ದೊರೆಯ ನಡುವಿನ ಸೌಹಾರ್ದ ವ್ಯಾಪಾರ ಮಾತುಕತೆಯಿಂದ ಭಾರತ ಮತ್ತು ಯುರೋಪಿನ ವ್ಯಾಪಾರ-ವಾಣಿಜ್ಯ ಬಲವರ್ಧನೆಗೊಂಡಿತು.

ಭಾರತದಲ್ಲಿ ಪೋರ್ಚುಗೀಸರು

ಕಲ್ಲಿಕೋಟೆ ಜಲಮಾರ್ಗದ ಸಂಶೋಧನೆಯು ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣವಾದುದಾಗಿದೆ. ಯುರೋಪಿನಿಂದ ಭಾರತಕ್ಕೆ ಈ ಹೊಸ ಸಮುದ್ರ ಮಾರ್ಗದ ಶೋಧನೆ ಹೊಸ ಯುಗಕ್ಕೆ ನಾಂದಿಯಾಯಿತು. ಭಾರತ ಮತ್ತು ಪೋರ್ಚುಗೀಸ್ ಮಧ್ಯೆ ಸ್ನೇಹಯುತ ಬಾಂಧವ್ಯ ಸ್ಥಾಪಿತವಾಯಿತು. ತದನಂತರ ಪೋರ್ಚುಗೀಸರು ಭಾರತದ ವ್ಯಾಪಾರದ ಮೇಲೆ ಏಕಸ್ವಾಮ್ಯ ಸ್ಥಾಪಿಸಿದ್ದ ಅರಬ್ಬರನ್ನು ಸೋಲಿಸಿ ಭಾರತದ ತೀರ ಪ್ರದೇಶಗಳ ಮೆಲೆ ಹಿಡಿತ ಸಾಧಿಸಿದರು. **ವಾಸ್ಕೋಡಿ ಗಾಮ**ನು ಮೂರು ತಿಂಗಳ ನಂತರ ಭಾರತದ ಸರಕುಗಳೊಂದಿಗೆ ಯುರೋಪ್‌ಗೆ ಹಿಂತಿರುಗಿದಾಗ ಪೋರ್ಚುಗೀಸರಿಗೆ ಆಶ್ಚರ್ಯವನ್ನುಂಟು ಮಾಡಿತು. ಆದ್ದರಿಂದ ಅವನನ್ನು ಎರಡನೇ ಬಾರಿ ೧೫೦೧ ರಲ್ಲಿ ಭಾರತಕ್ಕೆ ಕಳುಹಿಸಿದರು. ಆಗ ಅವನು **ಕಣ್ಣಾನೂರಿ**ನಲ್ಲಿ ಒಂದು **ಕಾರ್ಖಾನೆ** (ಕೋಠಿ)ಯನ್ನು ಸ್ಥಾಪಿಸಿ ೧೫೦೩ ರಲ್ಲಿ ಹಿಂತಿರುಗಿದನು. ಅಂದಿನಿಂದ ವ್ಯಾಪಾರದ ಸಂಬಂಧ ನಿರಂತರಗೊಂಡಿತು.

ಭೌಗೋಳಿಕ ಸಂಶೋಧನೆಯು ಯುರೋಪಿನ ದೇಶಗಳು ಭಾರತಕ್ಕೆ ಪ್ರವೇಶಿಸಲು ಮಹತ್ತರ ಮಾರ್ಗವನ್ನು ಕಲ್ಪಿಸಿತು. ಪೋರ್ಚುಗೀಸರನ್ನು ಅನುಸರಿಸಿ ಇತರ ಯುರೋಪಿನ ಶಕ್ತಿಗಳು ಅವರನ್ನು ಹಿಂಬಾಲಿಸಿದವು. ಅದರಲ್ಲಿ ಮುಖ್ಯವಾಗಿ **ಡಚ್ಚರು, ಆಂಗ್ಲರು** ಮತ್ತು **ಫ್ರೆಂಚರು** ಪ್ರಮುಖರಾದವರು. ವಿಶೇಷವಾಗಿ ಪೋರ್ಚುಗೀಸರು ಮೊದಲನೆಯವರಾಗಿ ಮತ್ತು ಕೊನೆಯವರಾಗಿ ಭಾರತದಿಂದ ಹಿಂತಿರುಗಿದರು. ಅವರು ಒಂದು ಶತಮಾನಕ್ಕೂ ಹೆಚ್ಚು ಕಾಲ ಸ್ವತಂತ್ರರಾಗಿ ಮತ್ತು ಪ್ರತಿಸ್ಪರ್ಧಿ ಇಲ್ಲದೆ ಉಳಿದಿದ್ದರು. ಆದರೆ ಕ್ರಮೇಣ ಇತರೆ ಯುರೋಪಿಯನ್ ದೇಶಗಳ ಸ್ಪರ್ಧೆಯನ್ನು ಎದುರಿಸಬೇಕಾಯಿತು.

ಭಾರತದಲ್ಲಿ ಪೋರ್ಚುಗೀಸರ ಅಧಿಕಾರದ ಏಳಿಗೆ

ಮೊದಲನೆಯದಾಗಿ ಸಮುದ್ರ ಮಾರ್ಗವನ್ನು ಕಂಡುಹಿಡಿದ ದೇಶವೇ ಸಹಜವಾಗಿ ಭಾರತದೊಂದಿಗೆ ವ್ಯಾಪಾರ ಸಂಪರ್ಕ ಬೆಳೆಸಿತು. ಪೋರ್ಚುಗೀಸರು ಶೀಘ್ರವೇ **ಕೊಚಿನ್, ಕ್ಯಾಲಿಕಟ್, ಕಣ್ಣಾನೂರು** ಈ ಪಶ್ಚಿಮ ತೀರ ಪ್ರದೇಶಗಳಲ್ಲಿ ತಮ್ಮ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿದರು. ಇಲ್ಲಿ ಆ ಸಮಯದಲ್ಲಿ ವ್ಯಾಪಾರ ವಾಣಿಜ್ಯ ಚಟುವಟಿಕೆಗಳು ಅರಬ್ಬರ ಹಿಡಿತದಲ್ಲಿದ್ದಿತು. ಅಲ್ಲದೆ ಅವರು ಸುಲಭವಾಗಿ ತಮ್ಮ ಈ ವ್ಯಾಪಾರ ಏಕಸ್ವಾಮ್ಯವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. **ಜಾಮೋರಿನ್ನ**ನ್ನು ಪೋರ್ಚುಗೀಸ್‌ರ ವಿರುದ್ಧ ಎತ್ತಿ ಕಟ್ಟುವುದರ ಮೂಲಕ ಪ್ರಬಲ ಪ್ರತಿರೋಧ ವ್ಯಕ್ತಪಡಿಸಿದರು. ಆಗ ವಾಸ್ಕೋಡಗಾಮ ೧೫೦೩ ರಲ್ಲಿ ಪೋರ್ಚುಗಲ್ಲಿಗೆ ಹಿಂತಿರುಗಿದ್ದರಿಂದ ಸ್ವಲ್ಪ ತೊಂದರೆಗೆ ಸಿಲುಕಿದ.

ಜಾಮೋರಿನ್ ಪೋರ್ಚುಗೀಸರ ಕೋಠಿಗಳನ್ನು ಮುತ್ತಿಗೆ ಹಾಕಲು ಅಜ್ಞಾಪಿಸಿದ. ಆದರೆ ಕಟ್ಟಕಡೆಗೆ ಪೋರ್ಚುಗೀಸರೆ ಪ್ರಬಲರಾದುದ್ದರಿಂದ ಸೋಲಿಗೆ ಶರಣಾದನು. ಆಗ ಅವರು ತಕ್ಷಣ ಭಾರತದ ಪಶ್ಚಿಮ ತೀರ ಪ್ರದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದರು. ಪ್ರಥಮ

ವೈಸರಾಯ್‌ಯಾಗಿ (೧೫೦೫-೧೫೦೯) ಫ್ರಾನ್ಸಿಸ್ ಡಿ ಅಲ್ಮೆಡಾ ನೇಮಕಗೊಂಡ ನಂತರ ಅವರ ಅಧಿಕಾರ ಏಳಿಗೆಗೆ ಕಾರಣವಾಯಿತು. ಅಲ್ಲದೆ ಭಾರತದ ಮೇಲೆ ಪೋರ್ಚುಗೀಸ್ ಹಿಡಿತದಲ್ಲಿ ಬದಲಾವಣೆಯಾಯಿತು. ಭೂವಿಸ್ತಾರಕ್ಕಿಂತಲೂ ಸಮುದ್ರ ಶಕ್ತಿಯನ್ನು, ನೌಕಾ ಶಕ್ತಿಯನ್ನು ಹೆಚ್ಚಿಸುವುದರತ್ತ ಗಮನಹರಿಸಿ, ಭೂವಿಸ್ತಾರಕ್ಕಿಂತಲೂ ಸಮುದ್ರ ತೀರ ಪ್ರದೇಶಗಳ ಬಲಪಡಿಸುವಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡಿದನು. ಅಲ್ಮೇಡಿನ ಈ ನೀತಿಯು ಬ್ಲೂ ವಾಟರ್ ಪಾಲಿಸಿ ಎಂದೇ ಹೆಸರಾಗಿದೆ. ಅವನ ಈ ನೀತಿಯೇ ಅರಬ್ಬರನ್ನು ಸೋಲಿಸಲು ಸಾಧ್ಯವಾಯಿತು. ಇದರಿಂದ ಪೋರ್ಚುಗೀಸ್‌ರ ನೌಕಾಶಕ್ತಿ ಹೆಚ್ಚಿತು. ಮತ್ತು ಭಾರತದ ಸಮುದ್ರ ತೀರದ ಒಡೆಯರನ್ನಾಗಿಸಿತು. ಅಲ್ಮೇಡಾ ಇಷ್ಟೆಲ್ಲಾ ಸಾಧಿಸಿದ ನಂತರ ೧೫೦೯ ರಲ್ಲಿ ಈಜಿಪ್ಟ್ ಪ್ರಜೆಯೊಬ್ಬನಿಂದ ಹತನಾದನು.

ಆಲ್ಮೇಡನ ತರುವಾಯ ಅಲ್ಫೋನ್ಸೊ ಆಲ್ಬುಕರ್ಕ್ (Alphonso Alburqueque) (೧೫೦೯-೧೫೧೫) ನ ವೈಸರಾಯ್‌ಯಾಗಿ ಅಧಿಕಾರ ರೂಢನಾದ ನಂತರ ಪೋರ್ಚುಗೀಸರ ಪ್ರಾಬಲ್ಯ ಮತ್ತಷ್ಟು ಹೆಚ್ಚಿತು. ಕ್ರಿ.ಶ. ೧೫೧೦ ರಲ್ಲಿ ಗೋವಾದ ಮೇಲೆ ದಾಳಿ ಮಾಡಿ ಬಿಜಾಪುರದ ಸುಲ್ತಾನನಿಂದ ವಶಪಡಿಸಿಕೊಂಡು ಅದನ್ನು ಭಾರತದಲ್ಲಿ ಪೋರ್ಚುಗೀಸರ ಪ್ರಧಾನ ಕೇಂದ್ರವನ್ನಾಗಿಸಿ ಅರಬ್ಬರನ್ನು ನೆಲಕಚ್ಚಿಸಿದ. ೧೫೧೧ ರಲ್ಲಿ ದೂರ ಪ್ರಾಚ್ಯದ ಮಲಕ್ಕಾವನ್ನು ಆಕ್ರಮಿಸಿದ. ೧೫೧೫ ರಲ್ಲಿ ಅರ್ಮುಜ್ (Ormuz) ಪರ್ಶಿಯಾದ ಗಲ್ಫ್‌ನ ಒಂದು ದ್ವೀಪ ವಶಪಡಿಸಿಕೊಂಡನು. ಅವನು ಬರೀ ಪೋರ್ಚುಗೀಸ್ ಸಾಮ್ರಾಜ್ಯವನ್ನು ವಿಸ್ತರಿಸಲಿಲ್ಲ. ಜೊತೆಗೆ ಅದನ್ನು ರಕ್ಷಿಸಿದ. ಅವನು ಸ್ಥಳೀಯರ ಅನುಮತಿಯಿಂದ ಕೊಚ್ಚಿನ್‌ನಲ್ಲಿ ಕೋಟೆಯೊಂದನ್ನು ನಿರ್ಮಿಸಿ ವಿಶೇಷವಾಗಿ ಭಾರತೀಯ ಮುಸ್ಲಿಮರೊಂದಿಗೆ ಪೋರ್ಚುಗೀಸರು ವೈವಾಹಿಕ ಸಂಬಂಧ ಹೊಂದುವಂತೆ ತಮ್ಮ ವಸಾಹತುಶಾಹಿಯನ್ನು ಮಾರ್ಗದರ್ಶಿಸಿದ. ಅವನು ಮುಸಲ್ಮಾನರನ್ನು ದ್ವೇಷಿಸುತ್ತಿದ್ದ. ಅದಕ್ಕಾಗಿ ಅವನು ಅವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಒತ್ತಾಯಿಸಿದ. ಆಡಳಿತದಲ್ಲಿ ಹಿಂದೂಗಳಿಗೆ ಉದ್ಯೋಗ ಒದಗಿಸಿ, ಅವರ ವಿದ್ಯಾಭ್ಯಾಸಕ್ಕೆ ಶಾಲೆಗಳನ್ನು ತೆರೆದ. ಆಲ್ಬುಕರ್ಕ್ ಒಬ್ಬ ನಿಜವಾದ ಪೋರ್ಚುಗೀಸ್ ಸಾಮ್ರಾಜ್ಯದ ಸ್ಥಾಪಕನಾಗಿದ್ದಾನೆ. ಅವನು ಧೈರ್ಯ ಸಾಹಸಗಳಿಗೆ, ಏಕತೆ ಮತ್ತು ದೇಶಭಕ್ತಿಗೆ ಹೆಸರಾಗಿದ್ದಾನೆ. ಆದರೆ ಇವನು ೧೫೧೫ ರಲ್ಲಿ ಅಲ್ಪಕಾಲದಲ್ಲಿ ನಿಧನ ಹೊಂದಿದನು. ಗೋವಾದಲ್ಲಿ ಅವನ ಶವಸಂಸ್ಕಾರ ನಡೆಸಲಾಯಿತು. ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ಸ್ಥಾಪನೆಗೆ ಕ್ಲೈವ್ ಹೇಗೆ ಕಾರಣನೋ ಹಾಗೆ ಅವನು ಪೋರ್ಚುಗೀಸ್ ಸಾಮ್ರಾಜ್ಯವನ್ನು ಉನ್ನತಿಗೇರಿಸಿದವನಾಗಿದ್ದಾನೆ. ಅವನು ಪ್ರಾರಂಭಿಸಿದ ನೀತಿ ಅವನ ಮರಣದ ನಂತರವೂ ಮುಂದುವರಿಯಿತು. ೧೫೩೪ ರಲ್ಲಿ ಡಿಯು ಮತ್ತು ಬಸೀನ್, ೧೫೩೮ ರಲ್ಲಿ ಡಮನ್, ೧೫೩೮ ರಲ್ಲಿ ಗೋವಾದಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನು. ಬಾಂಬೆ, ಸಾಲ್ಸೆಟ್, ಹೂಗ್ಲಿ ಮತ್ತು ಚಿಟಾಗಾಂಗ್‌ಗಳು ಅವರ ಇತರ ನೆಲೆಗಳಾದವು.

೧೫೮೦ ರಲ್ಲಿ ಸ್ಪೈನಿನ ದೊರೆಗೆ ಪೋರ್ಚುಗಲ್ ಐಕ್ಯಗೊಂಡ ನಂತರ ಗೋವಾ, ಡಿಯು ದಮನ್ ಪ್ರದೇಶಗಳನ್ನು ಹೊರತುಪಡಿಸಿ ತಮ್ಮ ಪ್ರಭುತ್ವ ಕಳೆದುಕೊಂಡರು. ೧೭ನೆ ಶತಮಾನದ ಪ್ರಾರಂಭದಿಂದ ಇವರು ಅವನತಿಯ ಹಾದಿ ತುಳಿದರು.

ರಾಜಕೀಯ ಕ್ಷೇತ್ರದಲ್ಲಿ ಪೋರ್ಚುಗೀಸರು ಬಿಜಾಪುರ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಂಡಿದ್ದರಿಂದ ಶತೃತ್ವ ಬೆಳೆಸಿಕೊಂಡರು.

ವಿಜಯನಗರದೊಂದಿಗೆ ಸ್ನೇಹತ್ವವಿದ್ದರೂ, ಅವರ ಸ್ನೇಹ ಮುಸ್ಲಿಮರೊಡನೆ ಹೋರಾಟದಲ್ಲಿ ಯಾವುದೇ ಸಹಾಯಕ್ಕೆ ಬರಲಿಲ್ಲ. ಈಗಾಗಲೇ ಗೊಂದಲಮಯದ ರಾಜಕೀಯ ವ್ಯವಸ್ಥೆಯೊಳಗೆ ಪೋರ್ಚುಗೀಸರು ಕೂಡ ಸೇರಿದಂತಾಗಿತ್ತು.

ಭಾರತೀಯ ವ್ಯಾಪಾರದಲ್ಲಿ ಅವರು ಭಾರತದ ಸರಕುಗಳ ರಫ್ತು ವಿಸ್ತರಣೆಯಲ್ಲಿ ಯಾವುದೇ ಪ್ರಭಾವ ಬೀರಲಿಲ್ಲ. ಮೆಣಸು ಮಾತ್ರ ಯುರೋಪನ್ನು ತಲುಪುತ್ತಿದ್ದವು. ಭಾರತೀಯ ಸರಕುಗಳಿಗೆ ಪ್ರತಿಯಾಗಿ ವಿನಿಮಯ ಮಾಡಿಕೊಳ್ಳುತ್ತಿದ್ದ ಬೆಳ್ಳಿ ಮತ್ತು ಭೋಗವಸ್ತುಗಳು ಅಲ್ಪಪ್ರಮಾಣದಲ್ಲಿದ್ದವು. ಆದರೆ ತಮ್ಮ ತೀರ ಪ್ರದೇಶದ ವ್ಯಾಪಾರ ನೀತಿಯನ್ನು ಅಭಿವೃದ್ಧಿಗೊಳಿಸಿತು. ಗನ್‌ಬೋಟ್‌ಗಳ ಮುಖೇನ ಕಟ್ಟುನಿಟ್ಟಿನ ಭದ್ರತೆ ಒದಗಿಸಲಾಯಿತು. ಆದರೆ ಲೈಸೆನ್ಸ್ ಶುಲ್ಕ, ಕಪ್ಪ ಅಧಿಕವಾಯಿತು. ಶುಲ್ಕ ನೀತಿಯಲ್ಲಿ ಏರುಪೇರಾಯಿತು.

ಪೋರ್ಚುಗೀಸರ ಅವನತಿಗೆ ಕಾರಣಗಳು

ಪೋರ್ಚುಗೀಸ್ ವಿಫಲತೆ ಮತ್ತು ಅವನತಿಗೆ ಹಲವು ಕಾರಣಗಳಲ್ಲಿ ಕೆಲವು -

೧. ಪೋರ್ಚುಗೀಸರು ಸರ್ಕಾರಿ ಅಧಿಕಾರಿಗಳಿಗೆ ವ್ಯಾಪಾರ ನಡೆಸಲು ಅನುಮತಿ ನೀಡಿದರು. ಇದು ಅವರು ಸ್ವಂತ ಲಾಭ ಹೊಂದಲು ಕಾರ್ಯ ಪ್ರವೃತ್ತರನ್ನಾಗಿಸಿತು.

೨. ಕ್ರಿ.ಶ. ೧೫೮೦ ರಲ್ಲಿ ಸ್ಪೈನ್ ಪೋರ್ಚುಗೀಸ್‌ನ ವಿಲೀನದೊಂದಿಗೆ ಅದರ ಮೇಲೆ ಹಿಡಿತ ಸಾಧಿಸಿತು. ಅದರಿಂದ ಭಾರತೀಯರ ಹಿತಾಸಕ್ತಿಯ ಬಗ್ಗೆ ಆಸಕ್ತಿ ವಹಿಸಲಾಗಲಿಲ್ಲ.

೩. ಅವರ ಧಾರ್ಮಿಕ ನೀತಿಯಲ್ಲಿ ಮುಸ್ಲಿಮರಿಗೆ ನೀಡಿದ ಕಿರುಕುಳ ಮತ್ತು ಹಿಂದೂ-ಮುಸ್ಲಿಮರ ನಡುವಿನ ಸಮಸ್ಯೆಯನ್ನು ಉತ್ತೇಜಿಸಿತು. ಅಥವಾ ಅವರ ಕ್ರೈಸ್ತ ಮತಾಂತರ ನೀತಿ ಮತ್ತು ಧಾರ್ಮಿಕ ಅಸಹಿಷ್ಣುತಾ ನೀತಿಗಳು ಅವರ ವಿಫಲತೆಗೆ ಕಾರಣವಾದವು.

೪. ಮೊಗಲರ ಪ್ರಬಲ ಪ್ರಭುತ್ವವು ಅವರ ಅವನತಿಗೆ ಕಾರಣವಾಯಿತು.

೫. ಇತರ ಯುರೋಪಿಯನ್ನರ ಆಗಮನ ಮುಖ್ಯವಾಗಿ ಡಚ್ಚರು, ಆಂಗ್ಲರು ಭಾರತದಲ್ಲಿ ಪೋರ್ಚುಗೀಸರ ಹಿತಾಸಕ್ತಿಗೆ ಅಡ್ಡಿಯಾದರು.

೬. ಇವರು ಜಾರಿಗೊಳಿಸಿದ ಅಂತರ್ ವಿವಾಹ ನೀತಿಯಿಂದ ಜನಿಸಿದ ಮಕ್ಕಳು, 'ಲೂಸೊ-ಇಂಡಿಯನ್ಸ್' ಎಂಬ ಮಿಶ್ರ ಜನಾಂಗ ಸೃಷ್ಟಿಯಾಗಿ ಮೂಲತಃ ಉತ್ತಮವಾದುದಾಗಿರಲಿಲ್ಲ ಮತ್ತು ಇದು ಸಮಾಜದಿಂದಲೂ ಒಪ್ಪಿಗೆಯಾಗಿರಲಿಲ್ಲ.

೭. ಪೋರ್ಚುಗೀಸರು ಬ್ರೆಜಿಲ್‌ನ್ನು ಜಯಿಸಿದ್ದರಿಂದ ಭಾರತಕ್ಕಿಂತ ಅದರ ಬಗ್ಗೆ ಹೆಚ್ಚು ಆಸಕ್ತರಾದರು.

ಭಾರತದಲ್ಲಿ ಡಚ್ಚರು

ಭಾರತದ ಲಾಭದಾಯಕ ವ್ಯಾಪಾರ ಇತರ ಯುರೋಪಿಯನ್ನರನ್ನು ಆಕರ್ಷಿಸಿತು. ೧೫೯೨ ರಲ್ಲಿ **ಕಾರ್ನಲೀಯಸ್ ಹೌಟ್‌ಮನ್** (Cornelius Houtman) ಭಾರತಕ್ಕೆ ಬಂದು ೧೫೯೭ ರಲ್ಲಿ ಅಪಾರ ಸಂಪತ್ತಿನೊಂದಿಗೆ ಹಿಂತಿರುಗಿದನು. ಅನಂತರ ಇತರ ಬೇರೆ ಡಚ್ ಕಂಪನಿಗಳು ಇದನ್ನು ಹಿಂಬಾಲಿಸಿದರು. ಡಚ್ಚರದು ಶ್ರೇಷ್ಠ ವ್ಯಾಪಾರಿಗಳ ಮತ್ತು ಸಮುದ್ರ ಕೆಲಸಕ್ಕೆ ಸೇರಿದ ಕಂಪನಿಯು ಆಗಿತ್ತು. ಮೊದಲು ಬಂದ ಎಲ್ಲ ಡಚ್ ಖಾಸಗಿ ಕಂಪನಿಗಳಿಂದ ಒಟ್ಟುಗೂಡಿದ **ಡಚ್ ಈಸ್ಟ್ ಇಂಡಿಯಾ ಕಂಪನಿ** ೧೬೦೧ ರಲ್ಲಿ ಸ್ಥಾಪಿತಗೊಂಡಿತು. ಪಾಶ್ಚಾತ್ಯ ವ್ಯಾಪಾರದ ಉದ್ದೇಶಕ್ಕಾಗಿ ಅಂದಿನಿಂದ ಭಾರತದ ತೀರ ಪ್ರದೇಶದ ಮೇಲೆ ೧೭ನೆಯ ಶತಮಾನದ ವೇಳೆಗೆ ಸಂಪೂರ್ಣ ಹಿಡಿತ ಸಾಧಿಸಿದರು. ಒಂದು ಚಾರ್ಟರ್ ಜಾರಿಗೊಳಿಸುವ ಮೂಲಕ ವ್ಯಾಪಾರದ ಮೇಲೆ ಏಕಸ್ವಾಮ್ಯ ಹೊಂದಲು ಅನುವು ನೀಡಿತು. ಅದು ಅವರ ಬಲವರ್ಧನೆಗೆ ಯುದ್ಧ ಹೂಡುವ, ಒಪ್ಪಂದ ಮಾಡಿಕೊಳ್ಳುವ, ಭೂಪ್ರದೇಶ ವಶಪಡಿಸಿ ಕೊಳ್ಳಲು ಮತ್ತು ಅಲ್ಲಿ ಕೋಟೆಗಳನ್ನು ಕಟ್ಟಲು ಅನುವು ಮಾಡಿಕೊಟ್ಟಿತು.

ಡಚ್ಚರ ಮುಖ್ಯ ಉದ್ದೇಶ ಪೂರ್ವ ದೇಶಗಳ ಮೇಲೆ ಅಥವಾ ಸಾಂಬಾರ ಪದಾರ್ಥಗಳ ಮೇಲೆ ಹಿಡಿತ ಸಾಧಿಸುವುದಾಗಿತ್ತು. ಪಾಶ್ಚಾತ್ಯ ದೇಶಗಳಲ್ಲಿ ಸಾಂಬಾರ ಪದಾರ್ಥಗಳಿಗೆ ಹೆಚ್ಚು ಬೇಡಿಕೆ ಇದ್ದುದರಿಂದ ಸಾಂಬಾರ ಪದಾರ್ಥಗಳ ವ್ಯಾಪಾರ ತುಂಬಾ ಲಾಭದಾಯಕ ವಾಗಿತ್ತು. ಈ ಉದ್ದೇಶದಿಂದ **ಜಾವ**ವನ್ನು ಆಕ್ರಮಿಸಿ **ಬಟಾವಿಯ**ವನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಈ ಲಾಭದಾಯಕ ವ್ಯಾಪಾರಕ್ಕಾಗಿ ಆಂಗ್ಲರೊಡನೆ ಬಲಯುತ ಪೈಪೋಟಿ ನಡೆಸಬೇಕಾಗಿದ್ದರಿಂದ ಭಾರತದ ಶಕ್ತಿಗಳೊಡನೆ ಮೈತ್ರಿತ್ವ ಬೆಳೆಸಿದರು. ಡಚ್ಚರು ಉಳಿದ ಇಂಗ್ಲಿಷ್ ಕಂಪನಿಗಳ ಜೊತೆ ರಾಜಿ ಪ್ರಯತ್ನವನ್ನು ನಡೆಸಿದರು. ಆದರೆ ಅದರಲ್ಲಿ ಯಶಸ್ವಿ ಯಾಗಲಿಲ್ಲ. ಪ್ರಾರಂಭದಲ್ಲಿ ಬ್ರಿಟಿಷರು ಮತ್ತು ಡಚ್ಚರು ಸ್ನೇಹತ್ವದಿಂದಿದ್ದು ಪ್ರಾಟೆಸ್ಟಂಟ್ ಪಂಥದ ಬಗ್ಗೆ ಒಂದೇ ಧಾರ್ಮಿಕ ಮನೋಭಾವ ಹೊಂದಿದವರಾಗಿದ್ದರು. ಇಬ್ಬರೂ ಕ್ಯಾಥೋಲಿಕ್‌ರಾದ ಸ್ಪೈನ್ ಮತ್ತು ಪೋರ್ಚುಗೀಸ್‌ರ ವಿರೋಧಿಗಳಾಗಿದ್ದರು. ಕ್ರಮೇಣ ಇವರಲ್ಲಿ (ಡಚ್ಚರು ಮತ್ತು ಆಂಗ್ಲರಲ್ಲಿ) ಭಿನ್ನಾಭಿಪ್ರಾಯ ಉದ್ಭವಿಸಿದವು. ಆದ್ದರಿಂದ ಆಂಗ್ಲರು ಒಗ್ಗೂಡುವಿಕೆಗೆ ಒಪ್ಪದಾದರು. ಹೀಗಾಗಿ ಡಚ್ಚರು ತಮ್ಮ ಪರ ಸ್ವಾಮ್ಯ ಉಳಿಸಿ ಕೊಳ್ಳಲು ಇಚ್ಛಿಸಿದರು. ಎರಡೂ ರಾಷ್ಟ್ರಗಳ ನಡುವೆ ಘರ್ಷಣೆ ಮುಂದುವರಿಯಿತು. ಕೊನೆಯಲ್ಲಿ ಬ್ರಿಟಿಷರು ೧೬೨೩ ರಲ್ಲಿ **ಎಂಬೈನಾ** (Amboyna) ಕದನದಲ್ಲಿ ಉಚ್ಚಾಟಿಸ ಲ್ಪಟ್ಟರು. ಈ ಮಹತ್ವದ ಎಂಬೈನಾ ಘಟನೆ ಸಂಭವಿಸಿದ್ದರಿಂದ ಬ್ರಿಟಿಷರು ಸಾಂಬಾರು ದ್ವೀಪಗಳಿಂದ ಸಂಪೂರ್ಣ ಹೊರಹಾಕಲ್ಪಟ್ಟರು. ತದನಂತರ ಭಾರತದ ಪ್ರಮುಖ ಭಾಗಗಳ ಮೇಲೆ ಹೆಚ್ಚು ಆಸಕ್ತಿ ತಳೆದರು. ೧೬೫೪ ರವರೆಗೂ ಆಂಗ್ಲರು ಡಚ್ಚರ ವಿರುದ್ಧ ಯಾವುದೇ

ಕಾರ್ಯಾಚರಣೆಗೆ ಕೈಹಾಕಲಿಲ್ಲ. **ಕ್ರಾಮ್‌ವೆಲ್**‌ನ ಕಾಲದಲ್ಲಿ ಬಲಿಪಶುಗಳಾದವರಿಗೆ ಮತ್ತು ಕಂಪನಿಗಾಗಿ ಪರಿಹಾರ ಒದಗಿಸುವಂತೆ ಒತ್ತಾಯಿಸಲಾಯಿತು.

ಡಚ್ಚರು ಪೋರ್ಚುಗೀಸರಿಂದ **ಮಲಾಕ್ಕ** ಮತ್ತು **ಸಿಲೋನ್**‌ಗಳನ್ನು ವಶಪಡಿಸಿಕೊಂಡರು. ಬಂಗಾಳದ **ಚಿನ್ಸುರ**ದಲ್ಲಿ ಮತ್ತು **ನಾಗಪಟ್ಟಣ**ಗಳ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದರು. ಆದರೆ ಭಾರತದಲ್ಲಿನ ಭೂಪ್ರದೇಶಗಳನ್ನು ಕಳೆದುಕೊಂಡರೂ **ಮಲಯು**ಗಳಲ್ಲಿ ಪ್ರಬಲರಾಗುಳಿದರು.

ಡಚ್ಚರ ಅವನತಿ

ಡಚ್ಚರು ವಿಫಲರಾದರು ಏಕೆಂದರೆ -

೧. ಇಂಗ್ಲೀಷರು ಭಾರತದಲ್ಲಿ ಪ್ರಭಾವಶಾಲಿಯಾಗಿ ಬೆಳೆದರು ಮತ್ತು ಡಚ್ಚರ ಚಿನ್ಸುರ, ನಾಗಪಟ್ಟಣಗಳು ಆಂಗ್ಲರ ವಶವಾದವು.

೨. ಡಚ್ಚರ ಸೋಲಿನೊಂದಿಗೆ ಅವರ ಕಂಪನಿಯೂ ಸರ್ಕಾರದೊಂದಿಗೆ ವಿಲೀನವಾಯಿತು. ಅಲ್ಲದೆ ಅವರ ಹಿತಾಸಕ್ತಿಗಳು ಅಂದಿನ ಯುರೋಪಿನ ರಾಜಕೀಯ ವಲಯದ ತುಳಿತಕ್ಕೊಳಗಾದವು.

೩. ಅಂದಿನ ಯುರೋಪಿನಲ್ಲಿನ ಯುದ್ಧಗಳು ಭಾರತದಲ್ಲಿ ಅವರ ಹಣೆಬರೆಹವನ್ನು ನಿರ್ಧರಿಸಿದವು.

ಡೇನರು

ಡೇನರು ಮತ್ತೊಂದು ಯುರೋಪಿನ ಶಕ್ತಿ. ೧೬೨೦ ರಲ್ಲಿ ತಂಜಾವೂರು ಜಿಲ್ಲೆಯ **ಟ್ರಾಂಖೂಬಾರ್** ಎಂಬಲ್ಲಿ **ಡೆನ್ಮಾರ್ಕಿ**ನಿಂದ ಬಂದ ಡೇನರು ಒಂದು ಕೋಠಿಯನ್ನು ಸ್ಥಾಪಿಸಿದರು. ಮತ್ತು ೧೬೭೬ ರಲ್ಲಿ **ಸರೆಂಪುರ್** ಎಂಬಲ್ಲಿ ಮತ್ತೊಂದು ಕೋಠಿಯನ್ನು ತೆರೆದರು. ಆದರೆ ಅವರಿಗೆ ಒಂದು ಸ್ಥಿರವಾದ ನೆಲೆ ದೊರೆಯಲಿಲ್ಲ. ಆದ್ದರಿಂದ ೧೮೪೫ ರಲ್ಲಿ ಅವರು ತಮ್ಮ ನೆಲೆಗಳನ್ನು ಬ್ರಿಟಿಷರಿಗೆ ಮಾರಾಟ ಮಾಡಿದರು.

ಭಾರತದಲ್ಲಿ ಫ್ರೆಂಚರು

ಫ್ರೆಂಚರು ಆಂಗ್ಲರಿಗೆ ಮೊದಲೇ ಭಾರತಕ್ಕೆ ಬಂದವರಾಗಿದ್ದರು. ೧೫೨೭ ರಲ್ಲಿ **ದಿಯು** ಎಂಬಲ್ಲಿ ನೆಲೆಸಿದರು. ಆದರೆ ಇದು ಪೌರಾತ್ಯ ವ್ಯಾಪಾರದ ಬೆಳವಣಿಗೆಗೆ ಬರೀ ವೈಯಕ್ತಿಕ ಪ್ರಯತ್ನವಾಗಿತ್ತು. ಆದರೆ ಫ್ರಾನ್ಸ್‌ನಲ್ಲಿ ಬ್ರಿಟಿಷ್ ಜನಸಾಮಾನ್ಯರಂತೆ ಫ್ರಾನ್ಸ್‌ನ ಜನತೆಯು ಆಸಕ್ತಿವಹಿಸಲಿಲ್ಲ. ೧೬೧೧ ರಲ್ಲಿ **೧೩ನೇ ಲೂಯಿಯ** (ದೊರೆ) ಪೌರಾಸ್ತ್ಯ ವ್ಯಾಪಾರ ನಡೆಸಲು ಫ್ರಾನ್ಸಿನ ಸಂಸ್ಥೆಗೆ ವ್ಯಾಪಾರದ ಸಂಪೂರ್ಣ ಹಕ್ಕು ನೀಡಿದರು. ಅದು ಸಹ ವಿಫಲವಾಯಿತು. ನಂತರ ೧೬೪೨ ರಿಂದಲೂ ೩ ಕಂಪನಿಗಳನ್ನು ಸ್ಥಾಪಿಸಿದರು. ಆದರೆ ಅವು ಯಾವುವೂ ಉಳಿಯಲಿಲ್ಲ. ಕಾರಣ ಅಧಿಕಾರಿಗಳ ಮಧ್ಯಪ್ರವೇಶ. ನಂತರ ೧೪ನೇ ಲೂಯಿಯ ಕಾಲದಲ್ಲಿ ಮಂತ್ರಿ **ಕಾಲ್ಬರ್ಟ್** ಮತ್ತೊಂದು ಕಂಪನಿಯನ್ನು ೧೬೬೪ ರಲ್ಲಿ ಪ್ರಾರಂಭಿಸಿದನು. ಈ ಕಂಪನಿ ಮೂರು ಉದ್ದೇಶಗಳನ್ನು ಹೊಂದಿತ್ತು.

೧. ರಾಜಕೀಯ ಅಧಿಕಾರದ ಸ್ಥಾಪನೆ
೨. ರಾಜನ ಅಧಿಕಾರವನ್ನು ಹೆಚ್ಚಿಸುವುದು. ಮತ್ತು
೩. ಕ್ರೈಸ್ತ ಧರ್ಮದ ಪ್ರಚಾರ. ಈ ಬಾರಿಯೂ ಕೂಡ ಫ್ರಾನ್ಸಿನ ಜನತೆ ಸೀಮಿತ ಆಸಕ್ತಿ ಹೊಂದಿದ್ದರಿಂದ ೧೬೬೬ ರ ಹೊತ್ತಿಗೆ ಅದೂ ಕಡಿಮೆಯಾಗಿ ಫ್ರೆಂಚ್ ಕಂಪನಿ ಸರ್ಕಾರದ ಇಲಾಖೆಯಾಗಿ ಉಳಿಯಿತು.

ಭಾರತದಲ್ಲಿ ಫ್ರೆಂಚರ ಪ್ರತಿನಿಧಿ ಬರ್ಬರ್ ಮೊಘಲ್ **ಔರಂಗಜೇಬನಿಂದ** ಫರ್ಮಾನೊಂದನ್ನು ಪಡೆದ ನಂತರ ಮೊದಲ ಫ್ರೆಂಚರ ಕೋಠಿ ಡಿಸೆಂಬರ್ ೧೬೬೭ ರಲ್ಲಿ **ಸೂರತ್**ನಲ್ಲಿ ಪ್ರಾರಂಭವಾಯಿತು. ೧೬೬೯ ರಲ್ಲಿ **ಮಚಲೀಪಟ್ಟಣದಲ್ಲೂ** ಪ್ರಾರಂಭವಾಯಿತು. ನಂತರ ಫ್ರೆಂಚರ ವ್ಯಾಪಾರದ ಡೈರೆಕ್ಟರ್ ಜನರಲ್ ಆದ **ಫ್ರಾನ್ಸಿಸ್ ಕೆರಾನ್**ರವರ ನೇತೃತ್ವದಲ್ಲಿ ವೃದ್ಧಿಸಿತು.

ಭಾರತದಲ್ಲಿ ಫ್ರೆಂಚರ ಮೊದಲ ಹಂತವನ್ನು ಡಚ್ಚರ ವಿರುದ್ಧ ಅವರ ಹೋರಾಟದ ಮೂಲಕ ಗುರುತಿಸಬಹುದಾಗಿದೆ. ಕೆರಾನ್ ಸಲಹೆಯ ಮೇರೆಗೆ **ಡಿಲಾಹೇ** ಎಂಬುವನ ನಾಯಕತ್ವದಲ್ಲಿ ಫ್ರೆಂಚರ ನೌಕಾಪಡೆ ಡಚ್ಚರನ್ನು ಎದುರಿಸುವ ಪ್ರಯತ್ನ ನಡೆಯಿತು. ಆದರೆ ಡಚ್ಚರ ಪ್ರಾಬಲ್ಯದ ವಿರುದ್ಧ ಇದು ವಿಫಲವಾಯಿತು. ೧೬೭೨ ರಲ್ಲಿ ಕೆರಾನ್ನನ್ನು ಫ್ರಾನ್ಸ್ ಸರ್ಕಾರ ವಾಪಸ್ ಕರೆಸಿಕೊಂಡಿತು. ಅವನ ಬದಲಿಗೆ **ಫ್ರಾನ್ಸಸ್ ಮಾರ್ಟಿನ್**ರನ್ನು ನೇಮಿಸಿತು. **ಗೋಲ್ಕಂಡ** ರಾಜನೊಂದಿಗೆ **ಬಿಜಾಪುರದ** ಸುಲ್ತಾನನಾದ **ಶೇರ್‌ಖಾನ್** ಲೂಧಿಯನ್ನು ಎತ್ತಿಕಟ್ಟಿ **ಪಾಂಡಿಚೇರಿ** ನೆಲೆಯನ್ನು ಬಿಜಾಪುರದ ಸುಲ್ತಾನನಿಂದ ಪಡೆದುಕೊಂಡ. ಭಾರತದಲ್ಲಿ ಇದು ಫ್ರೆಂಚರ ಪ್ರಮುಖ ನೆಲೆಯಾಯಿತು. ೧೬೯೩ ರಲ್ಲಿ ಸ್ವಲ್ಪ ಕಾಲ ಡಚ್ಚರು ಪಾಂಡಿಚೇರಿಯನ್ನು ಪಡೆದರು. ಆದರೆ ೧೬೯೭ 'ರಿಸ್ವಿಕ್ ಒಪ್ಪಂದ'ದ ಪ್ರಕಾರ ಫ್ರೆಂಚರು ಮತ್ತೆ ಪಾಂಡಿಚೇರಿಯನ್ನು ಪಡೆದರು. ಮಾರ್ಟಿನ್ ಪಾಂಡಿಚೇರಿಯಲ್ಲಿ ಫ್ರೆಂಚರ ಗೌರ್‍ನರ್ ಆಗಿ ೧೭೦೬ ರವರೆವಿಗೂ ಅಂದರೆ ಅವನ ಸಾವಿನವರೆಗೂ ಅದನ್ನು ಅಲಂಕರಿಸಿದ್ದನು.

ಮಾರ್ಟಿನ್ ಸಾವಿನ ನಂತರ ಫ್ರೆಂಚರ ಕಂಪನಿಯ ಗೊಂದಲದ ಜೊತೆಗೆ ಆರ್ಥಿಕ ಮುಗ್ಗಟ್ಟು ಕಂಡುಬಂದಿತು. ಎರಡನೆಯ ಹಂತದಲ್ಲಿ ಫ್ರೆಂಚರ ಕಂಪನಿಯನ್ನು ಪುನಃ ರಚಿಸುವ ನಿಟ್ಟಿನಲ್ಲಿ ೧೭೧೪ ರಲ್ಲಿ ಪ್ರಯತ್ನಿಸಲಾಯಿತು. ೧೯೨೦ ರ ಹೊತ್ತಿಗೆ **ಜಾನ್ ಲಾ** ಎಂಬುವನು ಕಂಪನಿಯನ್ನು ಮತ್ತೆ ವಾಣಿಜ್ಯ ಬೆಳವಣಿಗೆಯ ಪಥದಲ್ಲಿ ಮುನ್ನಡೆಸಿದನು. ಈ ಹಂತದಲ್ಲಿ ಫ್ರೆಂಚರು ೧೭೨೪ ರಲ್ಲಿ **ಮಾಹೆ**, ೧೭೩೯ ರಲ್ಲಿ **ಕಾರೈಕಲ್**, **ಕಾಸೀಂಬಜಾರ್**, **ಚಂದ್ರನಾಗೂರ್** ಮತ್ತು **ಬಾಲಸೋರ್**ಗಳನ್ನು ಪಡೆದುಕೊಂಡರು. ೧೭೩೪ ರಲ್ಲಿ **ಡ್ಯೂಮಸ್** ಎಂಬುವನು ಪಾಂಡಿಚೇರಿಯ ಗವರ್ನರ್ ಆದನು. **ದೆಹಲಿಯ** ಮೊಘಲರಿಂದ ಅನುಮತಿ ಪಡೆದು ಸ್ವತಂತ್ರ ನಾಣ್ಯ ಮುದ್ರಣದ ಅಧಿಕಾರ ಪಡೆದುಕೊಂಡರು. ೧೭೪೦ ರ ಹೊತ್ತಿಗೆ ಎರಡನೆಯ ಹಂತದ ಕೊನೆಯ ವೇಳೆಗೆ ಮತ್ತೆ ಪುನರ್ ರಚನೆಗೊಂಡಿತು.

ಭಾರತದಲ್ಲಿ ಇಂಗ್ಲಿಷರು

೧೫೮೮ ರ ಸ್ಪ್ಯಾನಿಷ್ ಆರ್ಮೆಡಾವನ್ನು ಸೋಲಿಸಿದ ಘಟನೆಯಿಂದ ಬ್ರಿಟಿಷರು ಜಯಗಳಿಸಿದ್ದರಿಂದ ಇಂಗ್ಲೆಂಡ್‌ನ ವಾಣಿಜ್ಯ-ವ್ಯಾಪಾರದ ಮೇಲೆ ಗಮನಾರ್ಹ ಪ್ರಭಾವ ಬೀರಿತು. ಈ ಘಟನೆಯ ನಂತರ ಬ್ರಿಟಿಷರಿಗೆ ಭಾರತದ ಜೊತೆ ನೇರವಾಗಿ ವ್ಯಾಪಾರ ಬೆಳೆಸುವ ಇಚ್ಛೆ ಮೂಡಿತು. ಆ ಕಾರಣದಿಂದ ಲಂಡನ್ ವ್ಯಾಪಾರಿಗಳ ಗುಂಪು ತಮ್ಮನ್ನು ಒಂದು ಕಂಪನಿಯಾಗಿ 'ಈಸ್ಟ್ ಇಂಡೀಸ್' ಜೊತೆ ವ್ಯಾಪಾರ ಮಾಡುವ ಸಲುವಾಗಿ ಸ್ಥಾಪಿತವಾಯಿತು. ಡಿಸೆಂಬರ್ ೧೬೦೦ ರಲ್ಲಿ ಒಂದನೇ ಎಲಿಜಬೆತ್ ರಾಣಿಯು ಚಾರ್ಟರ್ ಸನ್ನದ್ಧನ್ನು ಜಾರಿಗೊಳಿಸುವ ಮೂಲಕ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಮುಕ್ತ ವ್ಯಾಪಾರ ನಡೆಸುವ ಹಕ್ಕು ನೀಡಲಾಯಿತು. ಈಸ್ಟ್ ಇಂಡೀಸ್‌ನಿಂದ ಮತ್ತು ಈಸ್ಟ್ ಇಂಡೀಸ್‌ಗೆ ವ್ಯಾಪಾರ ನಡೆಸುವ ಅಧಿಕಾರವಿದ್ದು ಈ ಚಾರ್ಟರ್ ಅವಧಿ ೧೫ ವರ್ಷಗಳವರೆಗೆ ಇದ್ದು ಅದನ್ನು ಎರಡು ವರ್ಷ ಮುಂಚಿತವಾಗಿ ನೋಟಿಸ್ ನೀಡುವುದರ ಮೂಲಕ ರದ್ದುಗೊಳಿಸುವ ಅಧಿಕಾರವೂ ರಾಣಿಗಿತ್ತು. ಮೊದಲಿಗೆ ಈಸ್ಟ್ ಇಂಡಿಯಾ ಕಂಪನಿಗೆ ಸ್ಪೈಸ್ ಐಲ್ಯಾಂಡ್‌ನಲ್ಲಿ ವ್ಯಾಪಾರದ ಆಸಕ್ತಿ ಇತ್ತು. ಆದರೆ ಅಲ್ಲಿ ಅವರಿಗೆ ಡಚ್ಚರಿಂದ ಪ್ರತಿರೋಧ ವ್ಯಕ್ತವಾದ್ದರಿಂದ ಭಾರತದಲ್ಲಿ ಮಾತ್ರ ತಮ್ಮ ವ್ಯಾಪಾರ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡರು.

ಕ್ರಿ.ಶ. ೧೬೦೮ ರಲ್ಲಿ **ಕ್ಯಾಪ್ಟನ್ ಹಾಕಿನ್ಸ್** ಜಹಾಂಗೀರನನ್ನು ಭೇಟಿ ಮಾಡಿ, **ಸೂರತ್**‌ನಲ್ಲಿ ವ್ಯಾಪಾರ ಕೋಠಿಯನ್ನು ಸ್ಥಾಪಿಸಲು ಒಪ್ಪಿಗೆಯನ್ನು ಪಡೆದುಕೊಂಡನು. ಮೊದಲಿಗೆ ಆಂಗ್ಲರಿಗೆ ಪ್ರೋತ್ಸಾಹ, ಸಹಕಾರ ದೊರೆತರೂ ಪೋರ್ಚುಗೀಸರ ಪ್ರಭಾವದಿಂದ ಜಹಾಂಗೀರನು ಇವರಿಗೆ ನೀಡಿದ್ದ ಸವಲತ್ತನ್ನು ವಾಪಸ್ಸು ಪಡೆದುಕೊಂಡನು.

ಕ್ರಿ.ಶ. ೧೬೧೨ ಕ್ಯಾಪ್ಟನ್ ಬೆಸ್ಟ್ ಸೂರತ್ ಬಳಿಯ ಸ್ವಾಲಿ ಎಂಬಲ್ಲಿ ಪೋರ್ಚುಗೀಸರನ್ನು ಸೋಲಿಸಿದ್ದರಿಂದ ಅಲ್ಲಿ ಅವರ ಪ್ರಭಾವ ಕಡಿಮೆಯಾಗಿ ಮತ್ತೆ ಸೂರತ್‌ನಲ್ಲಿ ಆಂಗ್ಲರ ವ್ಯಾಪಾರ ಕೋಠಿಯೊಂದನ್ನು ಸ್ಥಾಪಿಸಿ ಪ್ರಾಬಲ್ಯ ಹೆಚ್ಚುವಂತಾಯಿತು.

ಕ್ರಿ.ಶ. ೧೬೧೫ ರಲ್ಲಿ **ಒಂದನೇ ಜೇಮ್ಸ್‌ನ** ರಾಯಭಾರಿಯಾಗಿ **ಸರ್ ಥಾಮಸ್ ರೋ** ಜಹಾಂಗೀರ್‌ನ ಆಸ್ಥಾನಕ್ಕೆ ಭೇಟಿ ನೀಡಿ ಸೂರತ್‌ನಲ್ಲಿ ಹೆಚ್ಚು ವ್ಯಾಪಾರ ಕೋಠಿಗಳನ್ನು ನಿರ್ಮಿಸಲು ಅನುಮತಿ ಪಡೆದುಕೊಂಡನು. ಹೀಗಾಗಿ ಸೂರತ್ ಭಾರತದಲ್ಲಿ ಇಂಗ್ಲಿಷರ ವ್ಯಾಪಾರದ ಕೇಂದ್ರವಾಗಿ ಸ್ಥಾಪಿತವಾಯಿತು. ಸರ್ ಥಾಮಸ್‌ರೋ ಮೂರು ವರ್ಷಗಳ ಕಾಲ ಜಹಾಂಗೀರ್‌ನ ಆಸ್ಥಾನದಲ್ಲುಳಿದು **ಬ್ರೋಚ್, ಅಹಮದಾಬಾದ್** ಮತ್ತು **ಆಗ್ರಾ**ಗಳಲ್ಲೂ ವ್ಯಾಪಾರ ರಿಯಾಯಿತಿ ಪಡೆಯುವಲ್ಲಿ ಯಶಸ್ವಿಯಾದನು. ಹೀಗಾಗಿ ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರದ ವ್ಯಾಪ್ತಿ ಹೆಚ್ಚುವಂತಾಯಿತು.

೧೬೩೩ ರಲ್ಲಿ **ಮಚಲಿಪಟ್ಟಣ**ದಲ್ಲಿ ವ್ಯಾಪಾರ ಕೋಠಿ ಮತ್ತು ೧೬೩೯ ರಲ್ಲಿ **ಮದ್ರಾಸ್** ನಗರ ನಿರ್ಮಾಣ ಪ್ರಾರಂಭವಾಯಿತು. ೧೬೪೦ ರಲ್ಲಿ ಮದ್ರಾಸ್‌ನಲ್ಲಿಯೇ **ಫೋರ್ಟ್ ಸೇಂಟ್ ಜಾರ್ಜ್ ಕೋಟೆ**ಯನ್ನು ನಿರ್ಮಾಣ ಮಾಡಲಾಯಿತು.

೧೬೫೧ ರಲ್ಲಿ ಹುಗ್ಲಿಯಲ್ಲಿ ವ್ಯಾಪಾರಿ ಕೋಠಿ ಸ್ಥಾಪಿಸಲಾಯಿತು. ನಂತರ ಇಂಗ್ಲೆಂಡ್‌ನ ರಾಜಕೀಯ ಸಮಸ್ಯೆಗಳಿಂದ ಈಸ್ಟ್ ಇಂಡಿಯ ಕಂಪನಿಯ ಚಟುವಟಿಕೆಗಳು ಕುಂಠಿತ ಗೊಂಡವು. ಆದರೆ ೧೬೬೧ ರ ನಂತರ ೨ನೆಯ ಚಾರ್ಲ್ಸ್‌ನ ಹೊಸ ಚಾರ್ಟರ್ ಮೂಲಕ ಕೆಲವು ರಿಯಾಯಿತಿಗಳು ದೊರೆತವು. ಮುಖ್ಯವಾಗಿ ಕಂಪನಿ ನಾಣ್ಯ ಮುದ್ರಣ, ಕೋಠಿಗಳ ನಿರ್ಮಾಣ, ಭಾರತದಲ್ಲಿ ನೆಲೆಸಿದ ಆಂಗ್ಲರ ಮೇಲೆ ಸಂಪೂರ್ಣ ಅಧಿಕಾರ. ಭಾರತದಲ್ಲಿ ಯುದ್ಧ ಮತ್ತು ಒಪ್ಪಂದ ಮಾಡಿಕೊಳ್ಳುವ ಅಧಿಕಾರವು ದೊರೆತವು. ಇದಾದ ನಂತರ ಬೊಂಬಾಯಿ ದ್ವೀಪವನ್ನು ೧೬೬೮ ರಲ್ಲಿ ಕಂಪನಿಗೆ ಪ್ರತಿ ವರ್ಷ ಕೇವಲ ೧೦ ಪೌಂಡ್ ಬಾಡಿಗೆಗೆ ನೀಡಲಾಯಿತು. ೨ನೆಯ ಚಾರ್ಲ್ಸ್‌ನು ಬೊಂಬಾಯಿಯನ್ನು ಪೋರ್ಚುಗೀಸ್‌ರಿಂದ ವರದಕ್ಷಿಣೆಯಾಗಿ ಪಡೆದುಕೊಂಡಿದ್ದನು.

ಪೂರ್ವ ತೀರದಲ್ಲೂ ಕೂಡ ಕಂಪನಿಯ ಕೆಲವು ವ್ಯಾಪಾರಿ ಕೋಠಿಗಳನ್ನು ನಿರ್ಮಾಣ ಮಾಡಲಾಯಿತು. ೧೬೬೮ ರಲ್ಲಿ ಜಾಬ್ ಚಾರ್ನಾಕ್ ಎಂಬುವನು ಕಲ್ಕತ್ತಾದಲ್ಲಿ ಒಂದು ನೆಲೆಯನ್ನು ಸ್ಥಾಪಿಸಲು ಪ್ರಯತ್ನಿಸಿದಾಗ ಮೊಗಲ್ ಗವರ್ನರ್ ಷಹಿಸ್ತಾಖಾನ್‌ನ ಪ್ರತಿ ರೋಧದಿಂದ ಅದು ವಿಫಲವಾಯಿತು. ಆದ್ದರಿಂದ ಅಲ್ಲಿ ಬರೀ ವ್ಯಾಪಾರಕ್ಕೆ ಮಾತ್ರ ತಮ್ಮ ಚಟುವಟಿಕೆ ಸೀಮಿತಗೊಳಿಸುವಂತಾಯಿತು. ತದನಂತರ ೧೬೮೬ ರಲ್ಲಿ ಜೋಸಯ್ಯ ಚೈಲ್ಡ್ ಎಂಬುವನನ್ನು ಸೂರತ್ ಕೋಠಿಯ ಗವರ್ನರ್ ಆದ ನಂತರ ಆಂಗ್ಲರ ನೀತಿಯಲ್ಲಿ ಕೆಲವು ಮಾರ್ಪಾಟುಗಳಾದವು. ಅವನು ೨ನೆಯ ಜೇಮ್ಸ್ ದೊರೆಯೊಡನೆ ಮಾತುಕತೆ ನಡೆಸಿ ಮೊಗಲರ ಅಧಿಕಾರ ಕುಂದುತ್ತಿದ್ದುದರಿಂದ ಅವರ ಮೇಲೆ ಯುದ್ಧ ಘೋಷಿಸಲು ಅನುಮತಿ ಕೋರಿದನು.

ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಪ್ರಗತಿಯಲ್ಲಿದ್ದರೂ ಇಂಗ್ಲೆಂಡ್‌ನಿಂದ (ಯುರೋಪ್) ಭಾರತೀಯ ಸರಕುಗಳಿಗೆ ಪ್ರತಿಯಾಗಿ ಚಿನ್ನ, ಬೆಳ್ಳಿ ಭಾರತಕ್ಕೆ ಹರಿದು ಬರುತ್ತಿತ್ತು. ಅಂದಿನ ವ್ಯಾಪಾರ ವಾಣಿಜ್ಯ ನೀತಿಯ ಪ್ರಕಾರ ಯಾವ ದೇಶಕ್ಕೆ ಚಿನ್ನ ಮತ್ತು ಬೆಳ್ಳಿಯ ಹರಿವು ಹೆಚ್ಚುತ್ತದೆಯೋ ಅದು ಅಭಿವೃದ್ಧಿಶೀಲ ದೇಶವೆಂದು ಗುರುತಿಸಲ್ಪಡುತ್ತಿತ್ತು. ಈ ದೃಷ್ಟಿಯಿಂದ ಭಾರತ ಅಭಿವೃದ್ಧಿ ರಾಷ್ಟ್ರವಾಗಿದ್ದುದರಿಂದ ಇಂಗ್ಲೆಂಡ್‌ನಲ್ಲಿ ಇದರ ಬಗ್ಗೆ ಟೀಕೆ ಇತ್ತು. ಈ ಸಮಸ್ಯೆ ಅಂದು ಹೆಚ್ಚು ಗಂಭೀರತೆ ಪಡೆದಿತ್ತು. ಕಾರಣ ಡಚ್ಚರಿಗೆ ಈ ಸಮಸ್ಯೆ ಇರಲಿಲ್ಲ. ಅದರ ರಫ್ತು ಮೌಲ್ಯವನ್ನು ಡಚ್ ಈಸ್ಟ್ ಇಂಡಿಯಾ ಕಂಪನಿಯ ಕಂದಾಯದಿಂದ ಸರಿದೂಗಿಸಲಾಯಿತು. ೧೬೮೬ ರಲ್ಲಿ ಜೋಸಯ್ಯ ಚೈಲ್ಡ್ ಮದ್ರಾಸ್ ಕೌನ್ಸಿಲ್‌ಗೆ ಬರೆದ ಸಾರ ಈ ರೀತಿ ಇತ್ತು. "ವ್ಯಾಪಾರ ಸಮತೋಲನದಲ್ಲಿ ಕಂದಾಯ ಮೌಲ್ಯ ಹೆಚ್ಚಿರದಿದ್ದರೆ ಭಾರತದಲ್ಲಿ ನಾವು ಸುಭದ್ರತೆ ಪಡೆಯಲು ಸಾಧ್ಯವಾಗುವುದಿಲ್ಲ. ಕಂದಾಯದ ಮೂಲವಾಗಿ ಇಲ್ಲ ರಾಜಕೀಯ ಪ್ರಾಬಲ್ಯವನ್ನು ನಾವು ಸ್ಥಾಪಿಸಲೇ

ಬೇಕಾಗುತ್ತದೆ. ಇದು ಸಾಧ್ಯವಾಗದಿದ್ದರೆ ಡಚ್ಚರು ಮತ್ತು ಸ್ಥಳೀಯರೇ ನಮ್ಮನ್ನು ಇಲ್ಲಿಂದ ಕಾಲ್ತೆಗೆಸುವ ಸಂದರ್ಭ ಬರಬಹುದು". ೧೬೮೬ ರಲ್ಲಿನ ಈ ಪತ್ರದ ಸಾರವನ್ನು ಅವಲೋಕಿಸಿದಾಗ, ರಾಜಕೀಯ ಪ್ರಾಬಲ್ಯವನ್ನು ಸ್ಥಾಪಿಸುವುದು ಈಸ್ಟ್ ಇಂಡಿಯ ಕಂಪನಿಯ ಧ್ಯೇಯವಾಗಿತ್ತೆಂಬುದು ಅರ್ಥವಾಗುತ್ತದೆ. ಬ್ರಿಟಿಷರ ಈ ಚಟುವಟಿಕೆಗಳಿಂದ (ಉಪಟಳಗಳಿಂದ) ಬೇಸತ್ತು **ಔರಂಗಜೇಬ್** ಕೂಡ ಅವರ ಮೇಲೆ ಯುದ್ಧ ಘೋಷಿಸಲು ಮುಂದಾದನು. ಅದರಂತೆ **ಪಾಟ್ನಾ, ಕಾಸಿಂಬಜಾರ್, ಮಚಲಿಪಟ್ನಂ, ವಿಶಾಖಪಟ್ಟಣ**ಗಳಲ್ಲಿದ್ದ ಬ್ರಿಟಿಷ್ ಕೋಠಿಗಳನ್ನು ವಶಪಡಿಸಿಕೊಂಡನು. ಪಶ್ಚಿಮ ತೀರದಲ್ಲಿ ಕೂಡ ಯುದ್ಧ ಮುಂದುವರಿದು ಸೂರತ್ ಕೋಠಿಯನ್ನು ವಶಪಡಿಸಿಕೊಂಡನು. ಬ್ರಿಟಿಷರನ್ನು ಮೊಗಲ್ ಸಾಮ್ರಾಜ್ಯದಾದ್ಯಂತ ಹೊರಹಾಕುವ ಫರ್ಮಾನನ್ನು ಹೊರಡಿಸಿದನು. ಸೋತ ಬ್ರಿಟಿಷರು ಔರಂಗಜೇಬ್‌ನೊಂದಿಗೆ ಶಾಂತಿ, ಮನ್ನಣೆಯ ಒಪ್ಪಂದವನ್ನು ೧೬೯೦ ರಲ್ಲಿ ಮಾಡಿಕೊಂಡರು. ಆ ಪ್ರಕಾರ ಬ್ರಿಟಿಷ್ ಕಂಪನಿ ೧೫,೦೦೦ ಪೌಂಡ್ ಹಣವನ್ನು ಕಪ್ಪವಾಗಿ ಕೊಡಲೊಪ್ಪಿತು. ಮುಂದೆ ಶಾಂತಿ ಸೌಹಾರ್ದಯುತವಾಗಿ ನಡೆಯಬೇಕೆಂಬ ನಿಯಮವನ್ನು ಔರಂಗಜೇಬ ಜಾರಿಗೊಳಿಸಿದ. ೧೬೯೦ ರಲ್ಲಿ ಜಾಬ್ ಚಾರ್ನಕ್‌ಗೆ ಕಲ್ಕತ್ತಾದಲ್ಲಿ ಕೋಠಿಯನ್ನು ನಿರ್ಮಿಸಲು ಅನುಮತಿ ನೀಡಲಾಯಿತು. (೧೬೯೬ ರಲ್ಲಿ **ಫೋರ್ಟ್‌ವಿಲಿಯಂ** ಕೋಠಿಯನ್ನು ಕಲ್ಕತ್ತಾದಲ್ಲಿ ನಿರ್ಮಿಸಲಾಯಿತು).

ಇದಾದ ನಂತರ ಕಂಪನಿಯು ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅಧಿಕಾರ ರಿಯಾಯಿತಿಗಳು ಹೆಚ್ಚಾದ್ದರಿಂದ ಕಂಪನಿಯ ಕಾರ್ಯನಿರ್ವಹಣೆಯ ಬಗ್ಗೆ ವಿಚಾರಣಾ ಆಯೋಗವೊಂದನ್ನು ನೇಮಿಸಲಾಯಿತು. ಆದರೆ ಜೋಸಯ್ಯ ಚೈಲ್ಡ್ ಇಂಗ್ಲಿಷ್ ಮಂತ್ರಿಗಳನ್ನು ಹಣದ ಮೂಲಕ ಬೆಂಬಲ ಗಳಿಸಿ ೧೬೯೩ ರಲ್ಲಿ ಚಾರ್ಟರನ್ನು ಕಂಪನಿಯ ಮುಂದುವರಿಕೆಗೆ ಪಡೆದುಕೊಂಡನು.

೧೬೯೮ ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಮತ್ತೊಂದು ಇಂಗ್ಲಿಷ್ ಕಂಪನಿಯೊಂದಿಗೆ ಪೈಪೋಟಿ (ಇಂಗ್ಲಿಷ್ ಕಂಪನಿ ಆಫ್ ಮರ್ಚಂಟ್) ಪ್ರಾರಂಭವಾಯಿತು. ಭಾರತೀಯ ವ್ಯಾಪಾರದ ಏಕಸ್ವಾಮ್ಯಕ್ಕಾಗಿ ಘರ್ಷಣೆ ಉಂಟಾಗಿ ಇದು ಸುಮಾರು ೧೦ ವರ್ಷಗಳವರೆಗೆ ಮುಂದುವರಿದು ಅಂತಿಮವಾಗಿ ೧೭೦೮ ರಲ್ಲಿ ಎರಡೂ ಕಂಪನಿಗಳು ವಿಲೀನಗೊಂಡು **ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ** ಎಂದು ಕರೆಯಲಾಯಿತು.

ಇತ್ತ ಮೊಗಲ್ ರಾಜಕೀಯದಲ್ಲಿ ೧೭೦೭ ರಲ್ಲಿ ಔರಂಗಜೇಬನ ಮರಣ ಮೊಗಲ್‌ರ ಅವನತಿಗೆ ಕಾರಣವಾಯಿತು. ಮತ್ತೊಮ್ಮೆ ಕಂಪನಿ ಬಂಗಾಳದ ಗವರ್ನರ್ ಜೊತೆ (ಡ್ಯೂಟಿ ಫ್ರೀ ಟ್ರೇಡ್) ಮುಕ್ತ ವ್ಯಾಪಾರದ ವಿಶೇಷ ರಿಯಾಯಿತಿ ನೀಡದಿದ್ದರಿಂದ ೧೭೧೫ ರಲ್ಲಿ **ಜಾನ್ ಸರ್ಮನ್** ಎಂಬುವನು **ವಿಲಿಯಂ ಹ್ಯಾಮಿಲ್ಟನ್** ಎಂಬ ವೈದ್ಯನೊಡನೆ ಮೊಗಲ್

ದೊರೆ ಫಾರುಕ್ಸಿಯೂರನನ್ನು ಭೇಟಿ ಮಾಡಿದನು. (ವಿಲಿಯಂ ಹ್ಯಾಮಿಲ್ಟನ್ ಮೊಗಲ್ ದೊರೆಯನ್ನು ಗುಣಪಡಿಸಿದ ವೈದ್ಯ). ಸರ್ಮನ್ ೧೭೧೭ ರಲ್ಲಿ ಬ್ರಿಟಿಷರ ಕಂಪನಿಗೆ ಹೊಸ ರಿಯಾಯಿತಿ ಪಡೆದುಕೊಂಡನು. ಈ ಹೊಸ ಫರ್ಮಾನಿನ ಪ್ರಕಾರ ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಪ್ರತಿವರ್ಷ ೩೦೦೦ ರೂ. ಕಪ್ಪ ನೀಡುವುದರ ಮೂಲಕ ಈಸ್ಟ್ ಇಂಡಿಯಾ ಕಂಪನಿ ಕಲ್ಕತ್ತಾ ಸುತ್ತಮುತ್ತ ಎಲ್ಲಿ ಬೇಕಾದರೂ ನೆಲಸಲು ಬಾಡಿಗೆ ಸೌಲಭ್ಯ ದೊರಕಿಸಲಾಯಿತು. ಇದರಿಂದ ಕಂಪನಿಯ ಸ್ಥಾನಮಾನ ಹೆಚ್ಚಾಯಿತು. ಮೊಗಲ್ ದೊರೆ ಮಂತ್ರಿಗಳ ಕೈಗೊಂಬೆ ಎಂಬುದು ಸ್ಪಷ್ಟವಾಯಿತು. ಬ್ರಿಟಿಷರ ಕಂಪನಿಗೆ ಇದೊಂದು ಮಹತ್ತ್ವದ ಯಶಸ್ಸು ಎಂದು ಹೇಳಬಹುದು.

೪.೨ ಭಾರತದಲ್ಲಿ ಬ್ರಿಟಿಷರ ಸಾರ್ವಭೌಮತ್ವ (ಪ್ರಾಬಲ್ಯ) - ೧೮೫೭ ರವರೆಗೆ

೧೭ನೆಯ ಶತಮಾನದ ಕೊನೆಯ ವೇಳೆಗೆ ಇಂಗ್ಲಿಷರು, ಡಚ್ಚರ ಮತ್ತು ಪೋರ್ಚುಗೀಸರ ಅಧಿಕಾರವನ್ನು ಸಂಪೂರ್ಣವಾಗಿ ಹತ್ತಿಕ್ಕಿದ್ದರು. ಅಷ್ಟೊತ್ತಿಗೆ ಅವರ ಎದುರಾಳಿಗಳಾಗಿ ಉಳಿದವರು ಫ್ರೆಂಚರು ಮಾತ್ರ ಬ್ರಿಟಿಷರು ಮತ್ತು ಫ್ರೆಂಚರು ಭಾರತದಲ್ಲಿ ವ್ಯಾಪಾರ ಏಕಸ್ವಾಮ್ಯವನ್ನು ಬಯಸಿದ್ದರು. ಈ ಕಾರಣಕ್ಕಾಗಿ ಎರಡೂ ದೇಶಗಳ ಮಧ್ಯೆ ಹೋರಾಟ ನಡೆಯಿತು. ಮೇಲಾಗಿ ಈ ಎರಡೂ ದೇಶಗಳು ಯುರೋಪಿನಲ್ಲೂ ಕೂಡ ಎದುರಾಳಿಗಳಾಗಿದ್ದವು. ವಾಲ್ಟೇರ್ ಹೇಳುವಂತೆ 'ಪ್ರಥಮವಾಗಿ ಯುರೋಪಿನಲ್ಲಿ ಹಾರಿಸಲ್ಪಟ್ಟ ತೂಫಾಕಿ ಗುಂಡಿನ ಜ್ವಾಲೆಗಳು ಅಮೆರಿಕಾ ಮತ್ತು ಏಷ್ಯಾಗಳಲ್ಲೂ ಪ್ರಜ್ವಲಿಸುತ್ತಿತ್ತು'.

ಆದರೆ ಭಾರತದ ಪಶ್ಚಿಮ ತೀರದಲ್ಲಿ ಮರಾಠರು ಪ್ರಬಲರಾಗಿದ್ದುದರಿಂದ ಬಂಗಾಳ ಮತ್ತು ಕರ್ನಾಟಿಕ್ ಭಾಗಗಳಿಗೆ ಮಾತ್ರ ಬ್ರಿಟಿಷರ ಮತ್ತು ಫ್ರೆಂಚರ ಘರ್ಷಣೆಗಳು ಸೀಮಿತ ಗೊಂಡವು. ಆದ್ದರಿಂದ ಈ ಕದನಗಳನ್ನು **ಕರ್ನಾಟಿಕ್ ಯುದ್ಧ**ಗಳೆಂದು ಕರೆಯಲಾಗಿದೆ.

೧೭೪೪ ರ ಹೊತ್ತಿಗೆ ಬ್ರಿಟಿಷ್ ಕಂಪನಿ ಫ್ರೆಂಚ್ ಕಂಪನಿಗಿಂತ ಸಂಘಟಿತವಾಗಿ ಸಂಪದ್ಭರಿತವಾದುದಾಗಿತ್ತು. ಮೇಲಾಗಿ ಅದು ಖಾಸಗಿ ವ್ಯಕ್ತಿಗಳ ಗುಂಪಾಗಿದ್ದು ಸರ್ಕಾರ ವನ್ನಾವಲಂಭಿಸಿರಲಿಲ್ಲ. ಆದರೆ ಫ್ರೆಂಚರದು ಸರ್ಕಾರದ ನೆರವಿಲ್ಲದೆ ಬೆಳೆಯಲು ಸಾಧ್ಯವಿರಲಿಲ್ಲ.

ಆಂಗ್ಲೋ-ಫ್ರೆಂಚರ ಸಂಘರ್ಷಗಳು (ಕರ್ನಾಟಿಕ್ ಯುದ್ಧಗಳು)

ಮೊದಲನೆಯ ಕರ್ನಾಟಿಕ್ ಯುದ್ಧ (೧೭೪೬-೪೮)

ಯೂರೋಪಿನಲ್ಲಿ ನಡೆದ **ಆಸ್ಟ್ರಿಯಾದ** ಹಕ್ಕುದಾರಿಕೆ ಯುದ್ಧದ ಪ್ರತಿಧ್ವನಿ ಭಾರತದಲ್ಲಿ ಫ್ರೆಂಚರ ಮತ್ತು ಬ್ರಿಟಿಷರ ನಡುವಿನ ಪ್ರಥಮ ಕರ್ನಾಟಿಕ್ ಯುದ್ಧಕ್ಕೆ ಕಾರಣವಾಯಿತು. ಫ್ರೆಂಚ್ ನೌಕಾ ಸೈನ್ಯದ ನಾಯಕ **ಲಾಬೋಡಿನೆ** ಪಾಂಡಿಚೇರಿ ತಲುಪಿದ ನಂತರ (ಜುಲೈ ೧೭೪೬) ಮದ್ರಾಸನ್ನು ಮುತ್ತಿ ಅದನ್ನು ವಶಪಡಿಸಿಕೊಂಡನು. ಆದರೆ ಬೂಡಿನೆ ಮತ್ತು ಫ್ರೆಂಚ್ ಗವರ್ನರ್ **ಡ್ಯೂಪ್ಲೆ** ಮಧ್ಯೆ ನಡೆದ ವೈಮನಸ್ಸಿನಿಂದ ಲಾಬೋಡಿನೆ **ಮಾರಿಷಿಯಸ್**ಗೆ ಹಿಂತಿರುಗಿದನು. ಮದ್ರಾಸ್‌ನ ಫೋರ್ಟ್ ಸೇಂಟ್ ಡೇವಿಡ್ ಕೋಟೆಯ ಮೇಲೆ ಮುತ್ತಿಗೆ ಹಾಕಿದ್ದು ಯಶಸ್ವಾಗಲಿಲ್ಲ. ಬ್ರಿಟಿಷ್ ನಾಯಕನಾದ **ಸ್ಟ್ರಿಂಜರ್ ಲಾರೆನ್ಸ್‌**ನ ಪ್ರಬಲ ಪ್ರತಿರೋಧ ಅದಕ್ಕೆ ತಡೆಯೊಡ್ಡಿತು.

ಬ್ರಿಟಿಷರು ಪಾಂಡಿಚೇರಿಯನ್ನು ಮುತ್ತುವ ಪ್ರಯತ್ನವೂ ವಿಫಲವಾಯಿತು. ೧೭೪೮ ರಲ್ಲಿ ಆಸ್ಟ್ರಿಯಾದ ಉತ್ತರಾಧಿಕಾರತ್ವ ಯುದ್ಧ ಮುಕ್ತಾಯಗೊಂಡಿದ್ದರಿಂದ ಭಾರತದಲ್ಲೂ

ಕೂಡ ಮೊದಲನೆಯ ಕರ್ನಾಟಿಕ ಯುದ್ಧವೂ ಮುಕ್ತಾಯಗೊಂಡಿತು. ಫ್ರೆಂಚರು ಮದ್ರಾಸನ್ನು ಮರಳಿ ಬ್ರಿಟಿಷರಿಗೆ ಹಿಂತಿರುಗಿಸಿದರು.

ಈ ಯುದ್ಧದಿಂದ ಭಾರತೀಯ ರಾಜಕೀಯ ವಲಯದಲ್ಲಿದ್ದ ದುರ್ಬಲತೆಯು ಪ್ರಕಟಗೊಂಡಿತು. ಆಂಗ್ಲರು ಮತ್ತು ಫ್ರೆಂಚರಿಗೆ ತಮ್ಮ ವಸಾಹತು ಪ್ರದೇಶದ ನೂರು ಮೈಲಿ ಸುತ್ತಳತೆಯ ಪ್ರದೇಶದ ಪರಿಚಯವಾಯಿತು. ಪಾಶ್ಚಾತ್ಯರ ಸೈನಿಕ ಪ್ರಾಬಲ್ಯವೂ ಕುಸಿದಂತಾಯಿತು. ಯೂರೋಪಿಯನ್ನರ ಸೈನ್ಯದ ಪ್ರಾಬಲ್ಯ ಮತ್ತು ಶಿಸ್ತುಗಳು ನಿರೂಪಿತ ಗೊಂಡವು. ನೌಕಾಪಡೆಯ ಪ್ರಾಧಾನ್ಯತೆ ಎದ್ದು ಕಾಣುವಂತಾಯಿತು.

ಎರಡನೆಯ ಕರ್ನಾಟಿಕ್ ಯುದ್ಧ (೧೭೪೮-೧೭೫೪)

ಹೈದಾರಾಬಾದಿನ **ನಿಜಾಂ ಉಲ್‌ಮುಲ್ಕ್** ಮೊಘಲ್ ಸಾಮ್ರಾಜ್ಯದಿಂದ ೧೭೨೪ ರಲ್ಲಿ ಸ್ವತಂತ್ರನೆಂದು ಘೋಷಿಸಿಕೊಂಡು ನಂತರ ೧೭೪೮ ರಲ್ಲಿ ನಿಧನ ಹೊಂದಿದ. ಅವನ ನಂತರ ಸಿಂಹಾಸನಕ್ಕಾಗಿ ಅವನ ಮಗನಾದ **ನಾಸಿರ್‌ಜಂಗ್** ಮತ್ತು ಮೊಮ್ಮಗನಾದ **ಮುಜಾಫರ್ ಜಂಗ್**‌ನೊಡನೆ ಘರ್ಷಣೆ ಉಂಟಾದಾಗ, ಮುಜಾಫರ್‌ಜಂಗ್ **ಚಂದಾಸಾಹೇಬ** ನೊಂದಿಗೆ ಒಪ್ಪಂದ ಮಾಡಿಕೊಂಡನು. ಆ ವೇಳೆಗಾಗಲೆ ಕರ್ನಾಟಿಕ್ ನವಾಬನ ಸ್ಥಾನಕ್ಕಾಗಿ ಚಂದಾಸಾಹೇಬ್ ಮತ್ತು **ಅನ್ವರುದ್ದೀನ್**‌ನ ಮಧ್ಯೆಯೂ ಘರ್ಷಣೆ ಉಂಟಾಗಿತ್ತು. ಈ ಮಧ್ಯೆ ಮುಜಾಫರ್‌ಜಂಗ್ ಮತ್ತು ಚಂದಾಸಾಹೇಬ್ ಫ್ರೆಂಚ್ ಸಹಾಯ ಬಯಸಿದಾಗ ಡ್ಯೂಪ್ಲೆಯು ಅವರಿಗೆ ಬೆಂಬಲಿಸಿದನು. ಇದಕ್ಕೆ ಹೈದರಾಬಾದ್ ಮತ್ತು ಕರ್ನಾಟಿಕ್ ಭಾಗಗಳಿಗೂ ಫ್ರೆಂಚರ ಪ್ರಭಾವ ಹರಡುತ್ತದೆ ಎಂಬ ಉದ್ದೇಶದಿಂದ ಡ್ಯೂಪ್ಲೆ ಬೆಂಬಲಿಸಿ ದನು. ಈ ಮೂರು ಒಕ್ಕೂಟ ಸೈನ್ಯ ಅನ್ವರುದ್ದೀನನ್ನು ಸೋಲಿಸಿ, ಕೊಂದ ನಂತರ ಚಂದಾಸಾಹೇಬ್ ಕರ್ನಾಟಿಕ್‌ಕ್ಕೆ ನವಾಬನಾದನು. ಅನಂತರ ಫ್ರೆಂಚರ ಸಹಾಯಕ್ಕೆ ಪ್ರತಿಯಾಗಿ ೮೦ ಹಳ್ಳಿಗಳನ್ನು ನೀಡಿದನು. ಈ ನಡುವೆ ಅನ್ವರುದ್ದೀನನ ಮಗ ಮಹಮದ್‌ಅಲಿ ಆಂಗ್ಲರ ಸಹಾಯ ಪಡೆದು **ತಿರುಚಿನಾಪಲ್ಲಿ** ತಲುಪಿದನು.

ಹೈದರಾಬಾದ್‌ನಲ್ಲಿ ನಾಸಿರ್‌ಜಂಗ್ ಮತ್ತು ಮುಜಾಫರ್‌ಜಂಗ್ ನಡುವಿನ ಘರ್ಷಣೆ ಯಲ್ಲಿ ಮುಜಾಫರ್‌ಜಂಗ್ ವಿಜಯಿಯಾಗಿ ಸುಬೇದಾರನಾಗಿ ನಿಯುಕ್ತನಾದನು. ಮುಂದೆ ಈ ಅಂತರ್ಯುದ್ಧದಲ್ಲಿ ಮುಜಾಫರ್‌ಜಂಗನೂ ಮರಣ ಹೊಂದಿದನು. ಆಗ ಫ್ರೆಂಚ್ ಜನರಲ್ **ಬಸ್ಸಿ** ನಿಜಾಂ ಉಲ್‌ಮುಲ್ಕ್‌ನ ಮತ್ತೊಬ್ಬ ಮಗ **ಸಲಾಬತ್‌ಜಂಗ್**‌ನನ್ನು ನಿಜಾಮನಾಗಿ ಅಧಿಕಾರಕ್ಕೇರಿಸಿದನು. ಈ ಮಧ್ಯೆ ಕರ್ನಾಟಿಕ್‌ದಲ್ಲಿ ಚಂದಾಸಾಹೇಬ್ ಫ್ರೆಂಚ್‌ರೊಡನೆ ತಿರುಚಿನಾಪಳ್ಳಿಗೆ ಮುತ್ತಿಗೆ ಹಾಕಿದನು. ಆ ವೇಳೆಗೆ **ರಾಬರ್ಟ್‌ಕ್ಲೈವ್** ಬ್ರಿಟಿಷರ ಸೇನೆಯ ಯುವ ಕಮಾಂಡರು ಆಗಿದ್ದ **ಆರ್ಕಾಟ್** ವಶಪಡಿಸಿಕೊಳ್ಳುವಂತೆ ಸಲಹೆ ನೀಡಿದನು. ಇದರಿಂದ ಚಂದಾಸಾಹೇಬ್ ತಿರುಚಿನಾಪಳ್ಳಿಯಿಂದ ಹಿಂತಿರುಗಿಸುವ ಉದ್ದೇಶ ಅವನಾದಾಗಿತ್ತು. ನಂತರ ಕ್ಲೈವ್‌ನ ನೇತೃತ್ವದಲ್ಲಿ ಬ್ರಿಟಿಷರ ಸೇನೆ ೫೦ ದಿನಗಳವರೆಗೆ ಆರ್ಕಾಟನ್ನು ಮುತ್ತಿಗೆ ಹಾಕಿ ಚಂದಾಸಾಹೇಬನನ್ನು ಸೋಲಿಸಿ ತಿರುಚಿನಾಪಲ್ಲಿಯನ್ನು

ವಶಪಡಿಸಿಕೊಂಡರು. ಚಂದಾಸಾಹೇಬನು ಆ ಘರ್ಷಣೆಯಲ್ಲಿ ಮರಣಿಸಿದ. ಆಗ ಅನ್ವರುದ್ದೀನನ ಮಗ **ಮಹಮ್ಮದ್** ಅಲಿಯನ್ನು ನವಾಬನನ್ನಾಗಿ ಘೋಷಿಸಲಾಯಿತು.

ಫ್ರೆಂಚರ ಈ ದುರಾದೃಷ್ಟಕರ ಸೋಲಿನಿಂದ ಡ್ಯೂಪ್ಲೆಯನ್ನು ಫ್ರೆಂಚ್ ಸರ್ಕಾರ ವಾಪಸ್ ಕರೆಸಿಕೊಂಡಿತು. ಅವನ ನಂತರ **ಗೋಡೆಹ್ಯೂ** ಗವರ್ನರ್ ಆಗಿ ೧೭೫೫ ರಲ್ಲಿ ಬ್ರಿಟಿಷರೊಡನೆ ಶಾಂತಿ ಒಪ್ಪಂದ ಮಾಡಿಕೊಂಡನು. ಅದೇ 'ಪಾಂಡಿಚೇರಿ ಒಪ್ಪಂದ'.

ಆ ಪ್ರಕಾರ ಎರಡೂ ಕಂಪನಿಗಳು ವಶಪಡಿಸಿಕೊಂಡ ಪ್ರದೇಶಗಳನ್ನು ಪರಸ್ಪರ ಹಿಂತಿರುಗಿಸಿದರು. ಅಲ್ಲದೆ ಭಾರತದ ದೇಶಿಯ ಸಂಸ್ಥಾನಗಳ ಆಂತರಿಕ ವ್ಯವಹಾರದಲ್ಲಿ ಕೈ ಹಾಕುವುದಿಲ್ಲವೆಂದು ಪರಸ್ಪರ ಒಪ್ಪಿದರು.

ಮೂರನೆಯ ಕರ್ನಾಟಿಕ್ ಯುದ್ಧ (೧೭೫೬-೬೩)

ಆಂಗ್ಲರು ಮತ್ತು ಫ್ರೆಂಚರ ನಡುವಿನ ಪಾಂಡಿಚೇರಿ ಒಪ್ಪಂದ ಬಹುಕಾಲ ಉಳಿಯಲಿಲ್ಲ. ಏಕೆಂದರೆ ಯೂರೋಪಿನಲ್ಲಿ ಸಪ್ತವಾರ್ಷಿಕ ಯುದ್ಧ ಪ್ರಾರಂಭವಾಯಿತು. ಆ ಪ್ರತಿಧ್ವನಿ ಭಾರತದಲ್ಲೂ ಆಂಗ್ಲರು-ಫ್ರೆಂಚರು ಪರಸ್ಪರ ಮತ್ತೆ ಘರ್ಷಿಸಲು ಪ್ರೇರೇಪಿಸಿತು. ಫ್ರೆಂಚ್ ಕಮಾಂಡರ್ ಲ್ಯಾಲಿ ಸಾಹಸಿಯಾದರೂ ಕೂಡ ಅವನು ಭಾರತ ತಲುಪುವಷ್ಟರಲ್ಲಿ ೧೭೫೮ ರ ವೇಳೆಗೆ ಆಂಗ್ಲರ ಪ್ರಭಾವ ೧೭೫೭ರ 'ಪ್ಲಾಸಿ ಕದನ'ದ ನಂತರ ವೃದ್ಧಿಸಿತು. ಅವನು ಭಾರತ ತಲುಪಿದ ನಂತರ ಫೋರ್ಟ್‌ಸೇಂಟ್ ಡೇವಿಡ್‌ನ್ನು ವಶಪಡಿಸಿಕೊಂಡನು. ಆದರೆ ಮದ್ರಾಸ್ ಮುತ್ತಿಗೆ ಹಾಕುವಲ್ಲಿ ಸೋಲಬೇಕಾಯಿತು. ಈ ನಡುವೆ ಹೈದಾರಾಬಾದಿನಿಂದ ಫ್ರೆಂಚ್ ಪ್ರತಿನಿಧಿ ಬಸ್ಸಿಯನ್ನು ವಾಪಸ್ಸು ಕರೆಸಿಕೊಂಡನು. ಆದರೆ ಲ್ಯಾಲಿಯ ದರ್ಪದ ಸ್ವಭಾವದಿಂದ ಅವನ ಅಧೀನವರ್ತಿಗಳು ಅವಿಧೇಯರಾದರು. ಜೊತೆಗೆ ಹಣದ ಅಭಾವ, ಪಾಂಡಿಚೇರಿ ಗವರ್ನರ್ ಜೊತೆ ಅವನ ಸಂಬಂಧ ಸರಿಯಿರದಿದ್ದುದು. ಫ್ರೆಂಚರ ನೌಕಾಬಲ ಆಂಗ್ಲರಿಗಿಂತ ಉತ್ತಮವಾಗಿದ್ದರೂ, ಬ್ರಿಟಿಷರ ವಿರುದ್ಧ ಯಶಸ್ಸಾಗಲಿಲ್ಲ. ೧೭೬೦ ರಲ್ಲಿ ಬ್ರಿಟಿಷ್ ಕಮಾಂಡರ್ ಸರ್ **ಎರ್‌ಕೂಟ್** ವಿರುದ್ಧ ಲ್ಯಾಲಿ **ವಾಂಡಿವಾಷ್** ಕದನದಲ್ಲಿ ಸೋಲಬೇಕಾಯಿತು. ಬಸ್ಸಿಯೂ ಕೂಡ ಸೆರೆಯಾದನು. ಪಾಂಡಿಚೇರಿಯೂ ವಶವಾಗಿ, ಲ್ಯಾಲಿಯನ್ನು ಸೆರೆಯಾಗಿಸಿ ಇಂಗ್ಲೆಂಡ್‌ಗೆ ಕಳಿಸಿದರೂ ಅಲ್ಲಿ ಅವನು ಬಿಡುಗಡೆಗೊಂಡು, ಫ್ರಾನ್ಸ್‌ನಲ್ಲಿ ಅವನ ವಿಚಾರಣೆ ನಡೆಸಿ ಅವನಿಗೆ ಮರಣದಂಡನೆ ವಿಧಿಸಲಾಯಿತು. ಹೀಗಾಗಿ ೧೭೬೧ ರ ಹೊತ್ತಿಗೆ ಫ್ರೆಂಚ್ ಎಲ್ಲ ಮಿಲಿಟರಿ ನೆಲೆಗಳನ್ನು ಆಂಗ್ಲರು ವಶಪಡಿಸಿಕೊಂಡರು. ಅದರಲ್ಲಿ ಪ್ರಮುಖವಾಗಿ ಪಾಂಡಿಚೇರಿ, ಕಾರೈಕಲ್ ಸೇರಿದ್ದವು. ಕೊನೆಗೆ ೧೭೬೩ ರಲ್ಲಿ 'ಪ್ಯಾರೀಸ್ ಒಪ್ಪಂದ'ದ ಪ್ರಕಾರ **ಸಪ್ತವಾರ್ಷಿಕ ಯುದ್ಧ** ಮುಕ್ತಾಯಗೊಂಡಿತು. ಅದರಂತೆ ಭಾರತದಲ್ಲಿ ಇವರೀರ್ವರ ಘರ್ಷಣೆ ಕೊನೆಗೊಂಡಿತು.

ಇದರಿಂದ ಯುರೋಪ್‌ನಲ್ಲಿ ಫ್ರೆಂಚ್ ಪ್ರಾಬಲ್ಯ ಕಡಿಮೆಯಾಯಿತು. ಭಾರತದಲ್ಲೂ ಅವರ ಸೇನಾ ಪ್ರಾಬಲ್ಯ ಕುಸಿಯಿತು. ಬಂಗಾಳದಲ್ಲಿ ವ್ಯಾಪಾರಕ್ಕಾಗಿ ಮಾತ್ರ ಅವರ ಚಟುವಟಿಕೆ

ಸೀಮಿತಗೊಂಡು ಬೇರೆ ಯಾವುದೇ ಚಟುವಟಿಕೆಗಳಿಗೆ ಅವಕಾಶವಿರಲಿಲ್ಲ. ಜೊತೆಗೆ ಫ್ರೆಂಚರ ಉತ್ತರದ ಸರ್ಕಾರಗಳು ಬ್ರಿಟಿಷರ ವಶವಾದವು.

ಬ್ರಿಟಿಷರ ಗೆಲುವಿಗೆ ಕಾರಣಗಳು

೧. ಬ್ರಿಟಿಷರ ಆರ್ಥಿಕ ಮತ್ತು ವಾಣಿಜ್ಯ ಚಟುವಟಿಕೆಗಳು ಸಮೃದ್ಧವಾಗಿತ್ತು.

೨. ಫ್ರೆಂಚ್ ಕಂಪನಿಗೆ ಸರ್ಕಾರದ ಹಸ್ತಕ್ಷೇಪ ಹೆಚ್ಚಿದ್ದರಿಂದ, ಸಾಹಸೋದ್ಯಮಿಗಳು ಆಗಲಿಲ್ಲ ಮತ್ತು ಮುಂಚೂಣಿ ಸ್ಥಾನವನ್ನು ಗಳಿಸಲಾಗಲಿಲ್ಲ.

೩. ಬ್ರಿಟಿಷರಿಗೆ ವ್ಯವಸ್ಥಿತ ಆಡಳಿತದ ಲಾಭವಿತ್ತು.

೪. ಫ್ರೆಂಚರಿಗೆ ಯೂರೋಪ್‌ನ ಯುದ್ಧಗಳ ಬಗ್ಗೆಯೇ ಹೆಚ್ಚಿನ ಆಸಕ್ತಿಯಿದ್ದು, ಭಾರತ ದಲ್ಲಿನ ವಾಣಿಜ್ಯ ವ್ಯಾಪಾರಗಳ ಬಗ್ಗೆ, ವಸಾಹತುಗಳ ಬಗ್ಗೆ ಆಸಕ್ತಿ ವಹಿಸಲಾಗಲಿಲ್ಲ.

೫. ಯುದ್ಧದ ಸಮಯದಲ್ಲಿ ಫ್ರೆಂಚರು ವ್ಯಾಪಾರೋದ್ಯಮವನ್ನು ಸಂಪೂರ್ಣ ನಿರ್ಲಕ್ಷಿಸಿದರು. ಆದರೆ ಆಂಗ್ಲರು ಅದನ್ನು ಉತ್ತೇಜಿಸಿ ಮುನ್ನಡೆದರು.

೬. ಸೇನಾ ದೃಷ್ಟಿಯಿಂದಲೂ ಇಂಗ್ಲೀಷ್‌ರಿಗೆ ಯೋಗ್ಯ ಹಾಗೂ ನಿಷ್ಠಾವಂತರ ನಾಯಕತ್ವವಿತ್ತು. ಆದರೆ ಫ್ರೆಂಚರಲ್ಲಿ ಅಯೋಗ್ಯ ಮತ್ತು ಅವರವರಲ್ಲೇ ಕಿತ್ತಾಟ ಮಾಡುವವರಿದ್ದರು.

೭. ಬ್ರಿಟಿಷರಿಗೆ ಬಂಗಾಳದಲ್ಲಿ ಪ್ಲಾಸಿ ಕದನದ ವಿಜಯದಿಂದ ಆರ್ಥಿಕ ಲಾಭದ ಆಧಾರ ದೊರೆತಂತಾಯಿತು.

೮. ಬ್ರಿಟಿಷರು ಹೊಂದಿದ್ದ ಬಲಿಷ್ಠ ನೌಕಾಪಡೆ ಮತ್ತು ಸಮುದ್ರ ಅಧಿಪತ್ಯ ಅವರ ಪ್ರಾಬಲ್ಯಕ್ಕೆ ಅನುಕೂಲವಾಯಿತು.

ಬಂಗಾಳದಲ್ಲಿ ನವಾಬರ ಪತನ ಹಾಗೂ ಆಂಗ್ಲರ ಏಳಿಗೆ

ಮೊಘಲರ ಅವನತಿಯ ನಂತರ ಬಂಗಾಳದ ನವಾಬನಾಗಿದ್ದ **ಅಲಿವರ್ದಿಖಾನ್** ೧೭೪೧ ರಲ್ಲಿ ಸ್ವತಂತ್ರನಾದನು. ಅವನು ಆಂಗ್ಲರ ವ್ಯವಹಾರಗಳ ಬಗ್ಗೆ ಎಚ್ಚರಿಕೆಯುಳ್ಳವನಾಗಿದ್ದನು. ಅವನ ನಂತರ ಅಧಿಕಾರಕ್ಕೆ ಬಂದ **ಸಿರಾಜುದ್ದೌಲ** ಯುವಕನಾಗಿದ್ದು ಅವನೂ ಕೂಡ ಆಂಗ್ಲರು ನಂಬಿಕೆಗೆ ಅನರ್ಹರೆಂದು ಭಾವಿಸಿದ್ದನು. ಈ ವೇಳೆಗೆ ಯೂರೋಪ್‌ನಲ್ಲೂ ಯುದ್ಧ ಸಂಭವಿಸುತ್ತದೆಂದು ತಿಳಿದು ಫ್ರೆಂಚರು ಮತ್ತು ಆಂಗ್ಲರು ತಮ್ಮ ವಸಾಹತುಗಳನ್ನು ಭದ್ರಪಡಿಸಲು ಮುಂದಾದರು ಮತ್ತು ನವಾಬನು ಅವರಿಗೆ ಇದನ್ನು ಕೈಗೊಳ್ಳದಂತೆ ಎಚ್ಚರಿಸಿದಾಗ ಫ್ರೆಂಚರು ನವಾಬನನ್ನು ಅನುಸರಿಸಿದರೂ, ಆಂಗ್ಲರು ಅದನ್ನು ನಿರಾಕರಿಸಿದರು. ಜೊತೆಗೆ ನವಾಬನಿಗೆ ಯಾವುದೇ ಗೌರವ ನೀಡಲಿಲ್ಲ ಮತ್ತು ಅವನು ನೀಡಿದ್ದ ವ್ಯಾಪಾರಿ ರಿಯಾಯಿತಿಗಳನ್ನು ದುರುಪಯೋಗಪಡಿಸಿಕೊಂಡರು. ನವಾಬನಿಗೆ ಆಂಗ್ಲರನ್ನು ಬಂಗಾಳ ದಿಂದ ಕಾಲ್ತೆಗೆಸುವ ಇಚ್ಛೆಯಿದ್ದರೂ ಹಿಂದೂಗಳು ನವಾಬನನ್ನು ಇಷ್ಟಪಡದ ಕಾರಣ ಇದು ಆಂಗ್ಲರಿಗೆ ಅನುಕೂಲಕರವಾದುದಾಗಿತ್ತು. ಇದರ ಜೊತೆಗೆ ಹಿಂದೂ ಶೇಟ್‌ಗಳು

ಸೇರಿ ನವಾಬನನ್ನು ಕೆಳಗಿಳಿಸುವ ಸಂಚು ಮಾಡಿದರು. ನವಾಬನು **ಕಾಸಿಂಬಜಾರ್** ಕೋಠಿಯನ್ನು ವಶಪಡಿಸಿಕೊಂಡು ಕಲ್ಕತ್ತಾವರೆಗೂ ಮುಂದುವರಿದನು. ಅಲ್ಲಿದ್ದ ಗವರ್ನರ್ ಮತ್ತು ಇತರರು ಅಲ್ಲಿಂದ ಕಾಲ್ತೆಗೆದರು. **ಹಾಲ್ವೆಲ್** ಎಂಬ ಆಂಗ್ಲ ಅಧಿಕಾರಿ ಈ ಸಮಯದಲ್ಲಿ ನಾಯಕತ್ವ ವಹಿಸಿ ಅವನೂ ಕೂಡ ಕೊನೆಗೆ ಶರಣಾದನು. ಈ ಘಟನೆಯನ್ನು **ಬ್ಲಾಕ್ ಹೋಲ್ ಟ್ರಾಜಿಡಿ** (ಕಪ್ಪು ಕೋಣೆ ದುರಂತ) ಎಂದು ಕರೆಯಲಾಗಿದೆ. ಹಾಲೆಲ್ ಜೊತೆ ೧೪೬ ಆಂಗ್ಲರನ್ನು ಒಂದು ಚಿಕ್ಕ (೮x೧೫ ಅಡಿ)ದಾದ ಕೋಣೆಯಲ್ಲಿ ಬಂಧಿಸಿದ್ದೇ ಈ ಕಪ್ಪು ಕೋಣೆಯ ದುರಂತ. ಇಷ್ಟು ಚಿಕ್ಕ ಕೋಣೆಯಲ್ಲಿ ಅಷ್ಟೊಂದು ಜನರನ್ನು ಬಂಧಿಸಿದ್ದರಿಂದ ಉಸಿರಾಟ ತೊಂದರೆಯಿಂದ ಸತ್ತರೆಂಬ ಸುದ್ದಿ ಸಿರಾಜುದ್ದೌಲನ ವಿರುದ್ಧ ಹರಡಿಸಿತು. ಆದರೆ ಈ ದುರಂತದಲ್ಲಿ ಅವನ ಪಾತ್ರ ಎಷ್ಟಿತ್ತೆಂಬುದರ ಸತ್ಯಾಸತ್ಯತೆ ಪ್ರಶ್ನಾರ್ಥಕವಾದ್ದುದಾಗಿದೆ.

ಈ ಸುದ್ದಿ ತಕ್ಷಣ ಮದ್ರಾಸ್‌ಗೆ ತಲುಪಿ **ಕ್ಲೈವ್** ಮತ್ತು **ವ್ಯಾಟ್ಸನ್**‌ರನ್ನು ಕಲ್ಕತ್ತಾಗೆ ಕಳುಹಿಸಲಾಯಿತು. ಇದರಿಂದ ಸೈನ್ಯದ ಬಲ ಹೆಚ್ಚಿ ಕಲ್ಕತ್ತವನ್ನು ಮತ್ತೆ ಪಡೆದರು. ಚಂದ್ರನಾಗೋರನ್ನು ವಶಪಡಿಸಿಕೊಂಡರು. ನವಾಬನ ವಿರುದ್ಧ **ಮೀರ್‌ಜಾಫರ್** ಸಂಚು ನಡೆಸಿದ, ಅಮೀನ್‌ಚಂದ್ ಎಂಬುವವನ ಮಧ್ಯಸ್ಥಿಕೆಯಲ್ಲಿ ಆಂಗ್ಲರೊಡನೆ ಕೈ ಜೋಡಿಸಿ, ಮೀರ್ ಜಾಫರ್‌ಗೆ ನವಾಬ ಸ್ಥಾನವನ್ನು ಕೊಡುವುದಾಗಿ, ಇದಕ್ಕೆ ಪ್ರತಿಯಾಗಿ ಅವನು ಆಂಗ್ಲರಿಗೆ ಮತ್ತೆ ಕೆಲವು ರಿಯಾಯಿತಿ, ಒಂದು ಕೋಟಿ ಯುದ್ಧನಷ್ಟವನ್ನು ತುಂಬಿಕೊಡುವುದು, ೨೪ ಪರಗಣಗಳ **ಜಮೀನ್ದಾರಿ ಹಕ್ಕನ್ನು** ಆಂಗ್ಲರಿಗೆ ಕೊಡಬೇಕೆಂಬುದು ಅದರ ಪಿತೂರಿಯಾಗಿತ್ತು.

ಪ್ಲಾಸಿ ಕದನ (೧೭೫೭)

ಫೆಬ್ರವರಿ ೧೭೫೭ ರಲ್ಲಿ ಆಂಗ್ಲರು ಕಲ್ಕತ್ತಾವನ್ನು ವಶಪಡಿಸಿಕೊಂಡ ನಂತರ ಮಾಡಿಕೊಂಡ ಒಪ್ಪಂದದ ಪ್ರಕಾರ ಸಿರಾಜುದ್ದೌಲ ಒಪ್ಪಂದವನ್ನು ಉಲ್ಲಂಘಿಸಿದನೆಂದು ಆಪಾದಿಸಿ ಕ್ಲೈವ್ ಎಚ್ಚರಿಸಿದರೂ ಪ್ರತ್ಯುತ್ತರಿಸದ ನವಾಬನ ವಿರುದ್ಧ ಜೂನ್ ೧೭೫೭ ರಲ್ಲಿ ಪ್ಲಾಸಿ ಬಳಿ ನವಾಬನ ಸೇನೆಯನ್ನು ಸೋಲಿಸಿದರು. ಅವನನ್ನು ಸೆರೆಹಿಡಿದು ನಂತರ ಮೀರ್‌ಜಾಫರ್‌ನ ಮಗ ಮಿರಾನ್ ಎಂಬುವನು ನವಾಬನನ್ನು ಕೊಂದನು. ಅನಂತರ ಮೀರ್‌ಜಾಫರ್ ನವಾಬನಾದನು. ಇದಕ್ಕೆ ಪ್ರತಿಯಾಗಿ ಕ್ಲೈವ್‌ಗೆ ૩೦,೦೦೦ ಪೌಂಡ್ ಹಣವನ್ನು ಮೀರ್‌ಜಾಫರ್ ನೀಡುವುದೆಂದು ತೀರ್ಮಾನಿಸಲಾಯಿತು. ಆದರೆ ಕೆಲವೇ ದಿನಗಳಲ್ಲಿ ಕಲ್ಕತ್ತಾ ಕೌನ್ಸಿಲ್ ಸದಸ್ಯರು ಕೇಳಿದ್ದೆಲ್ಲವನ್ನು ಒದಗಿಸಲು ಸಾಧ್ಯವಾದುದರಿಂದ ಮೀರ್‌ಜಾಫರ್‌ಗೆ ತಾನು ಮಾಡಿದ ಅಪರಾಧಗಳ ಅರಿವಾಯಿತು. ಜೊತೆಗೆ ಹಿಂದೂ ಅಧಿಕಾರಿಗಳು ವಿಶ್ವಾಸಘಾತುಕರಾದರು. ಆದಾಯವು ಕಡಿಮೆಯಾದ್ದರಿಂದ ಕಂಪನಿ ಕೇಳಿದ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಇದರಿಂದ ಆಂಗ್ಲರು ಅವನನ್ನು ಕೆಳಗಿಳಿಸಿ ಅವನ ಅಳಿಯ ಮೀರ್‌ಖಾಸಿಂನನ್ನು ನವಾಬನನ್ನಾಗಿ ನೇಮಿಸಿದರು. ಈ ಅವಧಿಯಲ್ಲಿ ಆಂಗ್ಲ ಅಧಿಕಾರಿಗಳು

ಗರಿಷ್ಠ ಬೇಡಿಕೆಗಳನ್ನು ಈಡೇರಿಸಿಕೊಂಡು ಸಂಪದ್ಭರಿತರಾದರು. ಮೀರ್‌ಖಾಸಿಂ ಕೂಡ ಆನಂತರ ಆಂಗ್ಲರ ಬೇಡಿಕೆಗಳನ್ನು ಈಡೇರಿಸದಾದ. ಆಂಗ್ಲರಿಂದ ಸ್ವತಂತ್ರ ನೀತಿ ಅನುಸರಿಸುವಂತಾದ. ಆಂಗ್ಲರ ಪದೇ ಪದೇ ಹೆಚ್ಚಾದ ಬೇಡಿಕೆಗಳಿಂದ ಬೇಸತ್ತ ಮೀರ್‌ಖಾಸಿಂ ಆಂಗ್ಲರನ್ನು ಎದುರಿಸಲು ಮುಂದಾದಾಗ ಘರ್ಷಣೆಗೆ ಕಾರಣವಾಯಿತು. ಕಂಪನಿ ಯಾವುದೇ ತೆರಿಗೆ ನೀಡದೆ ವ್ಯಾಪಾರ ಮಾಡುವ ಅನುಮತಿ ಪಡೆದಿರುತ್ತದೆ. ಆದರೆ ಅವರು ಖಾಸಗೀ ವ್ಯಾಪಾರಕ್ಕೆ ಈ ಸೌಲಭ್ಯ ಬಳಸಿಕೊಂಡಿದ್ದರಿಂದ, ದಸ್ತಕ್‌ಗಳನ್ನು ಕಂಪನಿಯ ಅಧಿಕಾರಿಗಳ ಹೆಸರಿನಲ್ಲಿ ಪಡೆದು ಸ್ಥಳೀಯ ವ್ಯಾಪಾರಿಗಳಿಗೆ ಲಾಭಕ್ಕೆ ಮಾರಾಟ ಮಾಡುವ ವ್ಯವಸ್ಥೆ ರೂಢಿಸಿಕೊಂಡಿದ್ದರು. ಇದರಿಂದ ನವಾಬನ ಖಜಾನೆಗೆ ಅಧಿಕ ನಷ್ಟವಾಗುತ್ತಿತ್ತು. ಈ ಬಗ್ಗೆ ಆಂಗ್ಲ ಅಧಿಕಾರಿಗಳಿಗೆ (ಕಂಪನಿ)ಗೆ ದೂರು ನೀಡಿದರೂ ಯಾವುದೇ ಕ್ರಮ ತೆಗೆದುಕೊಳ್ಳದ್ದರಿಂದ ಬೇಸತ್ತ ಅವನು ಎಲ್ಲ ವ್ಯಾಪಾರವನ್ನು ಮುಕ್ತಗೊಳಿಸಿ, ಅನಿರ್ಬಂಧಿತ ನೀತಿ ಪಾಲಿಸುವ ಆಜ್ಞೆ ಮಾಡಿದನು. ಇದನ್ನು ವಿರೋಧಿಸಿದ ಆಂಗ್ಲರು ಅವನ ವಿರುದ್ಧ ಕ್ರಮ ಕೈಗೊಂಡು ಅವನನ್ನು ನವಾಬನ ಸ್ಥಾನದಿಂದ ಇಳಿಸಿ ಮತ್ತೆ ಮೀರ್‌ಜಾಫರನನ್ನೇ ನವಾಬನನ್ನಾಗಿ ನೇಮಿಸಿದರು.

ಬಕ್ಸರ್ ಕದನ (೧೭೬೪)

ತದನಂತರ ಮೀರ್ ಖಾಸಿಂ, ಮೊಘಲ್ ಚಕ್ರವರ್ತಿ **ಷಾ ಆಲಂ** ಮತ್ತು **ಔದ್** ನವಾಬನೊಡನೆ ಒಪ್ಪಂದ ಮಾಡಿಕೊಂಡು ಒಕ್ಕೂಟ ರಚಿಸಿ ಆಂಗ್ಲರ ವಿರುದ್ಧ ಅಕ್ಟೋಬರ್ ೧೭೬೪ ರಲ್ಲಿ **ಬಕ್ಸರ್**‌ನಲ್ಲಿ ಆಂಗ್ಲರನ್ನು ಎದುರಿಸಿ ಸೋಲಪ್ಪಿದನು. ಮೇಜರ್ **ಮನ್ರೋ** ಬ್ರಿಟಿಷ್ ಪಡೆಯ ನಾಯಕತ್ವ ವಹಿಸಿದ್ದನು. ಮೀರ್‌ಖಾಸಿಂನ ಸೋಲಿಗೆ ಅವನ ಮಿತ್ರ ಪಡೆ ಪೂರ್ಣಮನಸ್ಸಿನಿಂದ ಸಹಕರಿಸದಿದ್ದುದೇ ಕಾರಣವಾಯಿತು.

ಪ್ಲಾಸಿ ಕದನವು ಬ್ರಿಟಿಷರ ಪ್ರಾಬಲ್ಯಕ್ಕೆ ಅಡಿಪಾಯ ಹಾಕಿದರೆ ಬಕ್ಸರ್ ಕದನವು ಅದರ ಬಲವನ್ನು ದೃಢೀಕರಿಸಿತು. ಇದರಿಂದ ಭಾರತದಲ್ಲಿ ಆಂಗ್ಲರ ಬಲ ವೃದ್ಧಿಸಿತು. ಮೊಘಲರ ಪ್ರಾಬಲ್ಯ ಕುಸಿಯುವುದರ ಮೂಲಕ ಆಂಗ್ಲರು ಭಾರತದಲ್ಲಿ ಬಲವಾದರು.

ಸಹಾಯಕ ಸೈನ್ಯ ಪದ್ಧತಿ

ಸಂದಿಗ್ಧ ಪರಿಸ್ಥಿತಿಗಳನ್ನು ಮನಗಂಡ ವೆಲ್ಲೆಸ್ಲಿಯು ಭಾರತೀಯ ದೇಶಿಯ ಸಂಸ್ಥಾನಗಳ ಮೇಲೆ ಬ್ರಿಟಿಷರ ಹಿಡಿತ ಸ್ಥಾಪಿಸಲು ಈ 'ಸಹಾಯಕ ಸೈನ್ಯ ಪದ್ಧತಿ'ಯನ್ನು ಜಾರಿಗೊಳಿಸಿದನು. ಇದು ಹೊಸ ಪದ್ಧತಿಯೇನಾಗಿರಲಿಲ್ಲ. **ಕ್ಲೈವ್** ಮತ್ತು **ಹೇಸ್ಟಿಂಗ್ಸ್** ಈ ಮೊದಲು ಇದನ್ನು ಜಾರಿಗೊಳಿಸಿದ್ದರು. ಇಲ್ಲಿನ ಆಳ್ವಿಕೆ ನಡೆಸುತ್ತಿದ್ದ ರಾಜರಿಗೆ ಸೈನ್ಯದ ರಕ್ಷಣೆ ಕೊಟ್ಟು, ಅದಕ್ಕೆ ಪ್ರತಿಯಾಗಿ ಕಪ್ಪ ಪಡೆಯುತ್ತಿದ್ದರು. ಹಾಗೇನಾದರೂ ಅವರು ಕಪ್ಪ ಕೊಡದೆ ಬಾಕಿ ಉಳಿಸಿಕೊಂಡಿದ್ದರೆ ಅಂತಹವರು ತಮ್ಮ ಪ್ರದೇಶಗಳನ್ನು ಬ್ರಿಟಿಷರಿಗೆ ಬಿಟ್ಟು ಕೊಡಬೇಕಾಗಿತ್ತು. ಇದು ಮೊದಲಿದ್ದ ಪದ್ಧತಿಯಾಗಿತ್ತು. **ವೆಲ್ಲೆಸ್ಲಿ** ಇದನ್ನು ಮತ್ತಷ್ಟು ಉತ್ತಮಗೊಳಿಸಿ

ಜಾರಿಗೊಳಿಸಿದನು. ಯಾವ ಭಾರತೀಯ ಆಡಳಿತಗಾರ ಈ ಪದ್ಧತಿಯನ್ನು ಒಪ್ಪುವನೋ ಅವನು ಬ್ರಿಟಿಷರನ್ನು ಅಧಿಕಾರ ಶ್ರೇಷ್ಠರೆಂದು ಒಪ್ಪಬೇಕಾಗಿತ್ತು. ಅಂತಹ ದೇಶಿಯ ಆಡಳಿತಗಾರರ ಸೇವೆಗೋಸ್ಕರ ಬ್ರಿಟಿಷ್ ಸೇನಾಪಡೆ ನೇಮಕಗೊಳಿಸಿ ಅದರ ನಿರ್ವಹಣಾ ವೆಚ್ಚವನ್ನು ಆಡಳಿತಗಾರರೇ ಭರಿಸಬೇಕಾಗಿತ್ತು. ಅಲ್ಲದೆ ಬ್ರಿಟಿಷರ ಹೊರತು ಬೇರೆ ಯಾವ ವಿದೇಶಿಯರನ್ನು ಅವರು ತಮ್ಮ ಸಂಸ್ಥಾನದಲ್ಲಿ ನೇಮಕ ಮಾಡಿಕೊಳ್ಳುವಂತಿರಲಿಲ್ಲ. ಜೊತೆಗೆ ಬ್ರಿಟಿಷ್ ರೆಸಿಡೆಂಟ್ ಎಂಬ ಒಬ್ಬ ಅಧಿಕಾರಿಯನ್ನು ಸಂಸ್ಥಾನದಲ್ಲಿ ನೇಮಕ ಮಾಡಲಾಗುತ್ತಿತ್ತು.

ಈ ಪದ್ಧತಿಯಿಂದ ಆಂಗ್ಲರ ಸ್ಥಾನಮಾನ ಸಾಮರ್ಥ್ಯ ಮತ್ತೆ ಹೆಚ್ಚಾಯಿತು. ಬಹು ಮುಖ್ಯವಾಗಿ ಯಾವುದೇ ಖರ್ಚುವೆಚ್ಚ ಮಾಡದೆ ಒಂದು ದೊಡ್ಡ ಸೈನ್ಯವನ್ನು ಕಟ್ಟಲು ಸಹಾಯಕವಾಯಿತು. ಈ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದ ಪ್ರತಿ ದೇಶಿಯ ಸಂಸ್ಥಾನದ ದೊರೆಗಳು ತಮ್ಮ ವಿದೇಶ ವ್ಯವಹಾರ ನೀತಿಯನ್ನು ಬ್ರಿಟಿಷರ ಅಧೀನಕ್ಕೊಳ ಪಡಿಸಿದ್ದರಿಂದ ಬ್ರಿಟಿಷರಿಗೆ ಇತರ ಯುರೋಪ್‌ನ ದೇಶಗಳು ತಮ್ಮ ಮೇಲೆ ಆಕ್ರಮಣ ಮಾಡಲು ಸಾಧ್ಯವಿಲ್ಲವೆಂದು ಖಚಿತಪಡಿಸಿಕೊಂಡಂತಾಯಿತು. ಭಾರತೀಯ ದೇಶಿಯ ಸಂಸ್ಥಾನಗಳ ದೊರೆಗಳು ವಿದೇಶಿ ಆಕ್ರಮಣದಿಂದ ಬಿಡುಗಡೆ ಹೊಂದಲು ಸಾಧ್ಯವಾಯಿತು. ಮತ್ತು ಆಂತರೀಕವಾದಂತಹ ದಂಗೆಗಳಿಂದಲೂ ಕೂಡ ಅವರಿಗೆ ರಕ್ಷಣೆ ದೊರೆತಂತಾಯಿತು. ಜೊತೆಗೆ ಅವರು ನಿಷ್ಪ್ರಯೋಜಕವಾಗಿ ಆಡಳಿತವನ್ನು ನಿರ್ಲಕ್ಷಿಸುವಂತಾದರು. ಅಲ್ಲದೆ ಅವರ ದಿನನಿತ್ಯದ ಆಡಳಿತದಲ್ಲಿ ದುರಾವಸ್ಥೆ, ದುರಾಡಳಿತ ಮತ್ತು ದೌರ್ಜನ್ಯಗಳು ತಲೆದೋರುವಂತಾದವು. ಮುಂದೆ ಬ್ರಿಟಿಷರು ಈ ನೆಪದಲ್ಲಿ ಅವರ ಸಂಸ್ಥಾನಗಳನ್ನು ಕಬಳಿಸಲು ಅನುಕೂಲವಾದಂತಾಯಿತು. ಈ ವ್ಯವಸ್ಥೆಯ ಜಾರಿಯಿಂದ ದೇಶಿಯ ಸಂಸ್ಥಾನಗಳ ರಾಜರಿಗೆ ಇದ್ದ ಆಸಕ್ತಿ ಹುರುಪು ಕ್ರಮೇಣ ಕಡಿಮೆಯಾದಂತಾಯಿತು.

ಈ ಪದ್ಧತಿಯನ್ನು ಪ್ರಥಮವಾಗಿ ಒಪ್ಪಿಕೊಂಡವನೆಂದರೆ ಹೈದರಾಬಾದ್‌ನ ನಿಜಾಮ ೧೭೯೮ ರಲ್ಲಿ. ೧೮೦೧ ರಲ್ಲಿ ಔದ್‌ನ ನವಾಬ, **ಪೇಶ್ವೆ ೨ನೇ ಬಾಜಿರಾವ್**, ಬರೋಡಾದ ರಾಜ, **ಟ್ರಾವೆಂಕೂರ್** ಮತ್ತು ರಜಪೂತ ರಾಜ್ಯಗಳು ಕ್ರಮೇಣ ಈ ಪದ್ಧತಿಗೊಳಪಟ್ಟವು. ಮುಂದೆ **ಸಿಂಧ್ಯಾ**, **ಭೋಂಸ್ಲೆ**ಯವರೂ ಒಪ್ಪಿದರು. ಮೈಸೂರಿನ **ಟಿಪ್ಪು** ಇದನ್ನು ನಿರಾಕರಿಸಿದನು.

ದತ್ತು ಮಕ್ಕಳಿಗೆ ಹಕ್ಕಿಲ್ಲ - ಎಂಬ ನೀತಿ

ಲಾರ್ಡ್ ಡಾಲ್‌ಹೌಸಿ (೧೮೪೮-೫೬)

ಭಾರತಕ್ಕೆ ಬಂದ ಗವರ್ನರ್ ಜನರಲ್‌ಗಳಲ್ಲೇ ಅತ್ಯಂತ ಪ್ರಖ್ಯಾತಿ ಪಡೆದವನಾಗಿದ್ದಾನೆ. ಇವನೊಬ್ಬ ಸಾಮ್ರಾಜ್ಯವಾದಿ. ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗಾಗಿ ಎಷ್ಟು ಸಾಧ್ಯವೋ ಅಷ್ಟು ಸಾಧ್ಯವಾದ ಎಲ್ಲ ನೀತಿಗಳನ್ನು ಅನುಸರಿಸಿದ. ಅವನು ಜಾರಿಗೊಳಿಸಿದ ಸುಧಾರಣೆಗಳು ಬಹು ಉಪಯುಕ್ತವಾದವುಗಳು. ಇವನು ಅನುಸರಿಸಿದ ಗಡಿನೀತಿಯು ಸಫಲವಾದುದಾಗಿತ್ತು.

ಪಂಜಾಬನ್ನು ವಶಪಡಿಸಿಕೊಂಡದ್ದು ಸಿಖ್ಖರಿಗೆ ನೋವುಂಟು ಮಾಡಿದುದಾದರೂ ಹೊರಗಿನ ಶತ್ರುಗಳ ಆಕ್ರಮಣವನ್ನು ನಿಯಂತ್ರಿಸಲು ಇದು ತುಂಬಾ ಸಹಕಾರಿಯಾದುದಾಯಿತು. ೧೮೫೨ ರಲ್ಲಿ ಬರ್ಮಾವನ್ನು ವಶಪಡಿಸಿಕೊಂಡಿದ್ದರಿಂದ ಪೂರ್ವ ಗಡಿಭಾಗದಲ್ಲಿ ಬ್ರಿಟಿಷರು ಪ್ರಾಬಲ್ಯ ಹೊಂದಲು ಮತ್ತು ಸಿಕ್ಕಿಂ ಟೀ ಪ್ರದೇಶಗಳು ಮತ್ತು ಈ ಭಾಗದ ಭತ್ತ, ಟೀಕ್ (ಬೀಟೆ) ಬೆಳೆಯುವ ಫಲವತ್ತಾದ ಪ್ರದೇಶಗಳು ಅವರ ವಶವಾಗಲಾಗಿ ಮತ್ತಷ್ಟು ಪ್ರಾಬಲ್ಯ ಹೊಂದಲು ಸಾಧ್ಯವಾಯಿತು. ಡಾಲ್‌ಹೌಸಿಯು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದ ಹೆಚ್ಚು ಪ್ರಖ್ಯಾತಿ ಪಡೆದವನಾಗಿದ್ದಾನೆ. ಭಾರತೀಯರಿಗೆ ಬ್ರಿಟಿಷರ ಆಡಳಿತದಿಂದ ಹೆಚ್ಚು ಲಾಭ ಮತ್ತು ಅನುಕೂಲವಾಗಿದೆ ಎಂದು ಅವನು ನಂಬಿದ್ದನು. ಅವನು ಭಾರತದಲ್ಲಿದ್ದ ರಾಜ್ಯಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಿದ್ದನು. ಮೊದಲನೆಯದಾಗಿ, ಸಂಪೂರ್ಣ ಸ್ವತಂತ್ರವಾಗಿದ್ದ ದೇಶಿಯ ಸಂಸ್ಥಾನಗಳಲ್ಲಿ ಅಲ್ಲಿನ ದೊರೆ ಸತ್ತಾಗ ಬ್ರಿಟಿಷರಿಗೆ ತಕ್ಕುದಾದ ಸಹಾಯ, ಅನುಕೂಲ ಮಾಡುವ ಉತ್ತರಾಧಿಕಾರಿಯನ್ನು ಹುಡುಕುವುದು.

ಎರಡನೆಯದಾಗಿ, ಬ್ರಿಟಿಷರ ಶ್ರೇಷ್ಠತೆಯನ್ನು ಒಪ್ಪಿಕೊಂಡ ದೇಶಿಯ ಸಂಸ್ಥಾನಗಳು. ಮೂರನೆಯದಾಗಿ, ಬ್ರಿಟಿಷರ ಆಶ್ರಿತ ಮತ್ತು ಅವಲಂಬಿತ ರಾಜ್ಯಗಳು. ಇವುಗಳು ಬ್ರಿಟಿಷರೇ ಸೃಷ್ಟಿಸಿದ ರಾಜ್ಯಗಳಾಗಿದ್ದವು. ಡಾಲ್‌ಹೌಸಿಯು ದತ್ತು ಮಕ್ಕಳನ್ನು ಪಡೆಯುವ ಹಕ್ಕು ಮೊದಲ ಮತ್ತು ಎರಡನೆಯ ರಾಜ್ಯಗಳಿಗೆ ಒಪ್ಪಿಕೊಂಡನಾದರೂ ಮೂರನೆಯ ಬ್ರಿಟಿಷರ ಆಶ್ರಿತ ರಾಜ್ಯಗಳಿಗೆ ಈ ಹಕ್ಕಿರಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಅವನು **ದತ್ತು ಮಕ್ಕಳಿಗೆ ಹಕ್ಕಿಲ್ಲ** ಎಂಬ ನೀತಿಯನ್ನು ಜಾರಿಗೊಳಿಸಲು ಮುಂದಾದ. ಆ ಪ್ರಕಾರ ಸ್ವಂತ ಉತ್ತರಾಧಿಕಾರಿ ಇಲ್ಲದೆ ಹೋದಾಗ ಅಂತಹ ರಾಜ್ಯಗಳು ಬ್ರಿಟಿಷ್ ಸಾರ್ವಭೌಮತ್ವಕ್ಕೆ ಸೇರುತ್ತವೆ ಎಂದು ಘೋಷಿಸಿದನು. ಹಿಂದೂ ಪದ್ಧತಿಯ ಪ್ರಕಾರ ಮಕ್ಕಳಿಲ್ಲದ ಹಿಂದೂಗಳು ಅವರ ಅಂತ್ಯ ಸಂಸ್ಕಾರಕ್ಕಾಗಿ ದತ್ತು ಮಕ್ಕಳನ್ನು ಪಡೆಯುವ ಹಕ್ಕು ಇದ್ದರೂ, ಖಾಸಗಿ ಆಸ್ತಿಯನ್ನು ದತ್ತು ಮಕ್ಕಳು ಹೊಂದಬಹುದಾಗಿತ್ತು. ಆದರೆ ಸಂಸ್ಥಾನದ ಉತ್ತರಾಧಿಕಾರವನ್ನು ಬ್ರಿಟಿಷರ ಅನುಮತಿ ಇಲ್ಲದೆ ನೀಡುವಂತಿರಲಿಲ್ಲವೆಂಬುದನ್ನು ಅವನು ಸ್ಪಷ್ಟಪಡಿಸಿದ. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯು ಅನೇಕ ವಿರೋಧಗಳನ್ನು ಎದುರಿಸಿದರೂ ಅದನ್ನು ಲೆಕ್ಕಿಸದೆ ಕೆಲವು ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ವಶಪಡಿಸಿಕೊಳ್ಳಲು ಸಾಧ್ಯವಾಯಿತು. **ಸತಾರ** ದೊರೆಯಾದ **ಅಪ್ಪಾ ಸಾಹೇಬ** ಸತ್ತ ನಂತರ ೧೮೪೮ ರಲ್ಲಿ ಅವನ ಉತ್ತರಾಧಿಕಾರಿ ಇಲ್ಲದ ಕಾರಣ ಸತಾರ ಬ್ರಿಟಿಷರ ವಶವಾಯಿತು. ಇದೇ ರೀತಿ **ಜೈಪುರ್** (೧೮೫೦), **ಸಂಬಲ್‌ಪುರ** (೧೮೫೦), **ಉದಯಪುರ** (೧೮೫೨), **ಝಾನ್ಸಿ** (೧೮೫೩) ಮತ್ತು **ನಾಗಪುರ** (೧೮೫೪)ಗಳು ವಶವಾದವು.

ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ ಬರೀ ಉತ್ತರಾಧಿಕಾರತ್ವಕ್ಕಲ್ಲದೆಯೆ ಮತ್ತು ಅವರ ಗೌರವ ಪದವಿ, ಬಿರುದು, ಪ್ರಶಸ್ತಿಗಳನ್ನು ಸಹ ನಿರ್ಬಂಧಿಸಲಾಯಿತು. ಕರ್ನಾಟಿಕ್ ನವಾಬ ಮತ್ತು ತಂಜಾವೂರಿನ ರಾಜರ ರಾಜ್ಯಗಳು ಈ ಪ್ರಕಾರದಲ್ಲಿ ವಶವಾದವು. ದುರಾಡಳಿತದ ನೆಪದಲ್ಲಿ **ಔದ್** ರಾಜ್ಯವನ್ನು ವಶಪಡಿಸಿಕೊಳ್ಳಲಾಯಿತು.

೪.೩ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ

೧೮೫೭ ರ ದಂಗೆಯು ಬ್ರಿಟಿಷ್ ಪ್ರಭುತ್ವದ ವಿರುದ್ಧದ ಬೃಹತ್ ರಾಜಕೀಯ ಹೋರಾಟವೆನಿಸಿದೆ. ಇದೊಂದು ಅತೃಪ್ತಿಯ ಪ್ರಮುಖ ಸ್ಫೋಟವಾಗಿದ್ದು, ಇಡೀ ರಾಷ್ಟ್ರವನ್ನೇ ದಿಗ್ಭ್ರಮೆಗೊಳಿಸಿದ ಈ ಒಂದು ಘಟನೆಯು ಸಟ್ಲೇಜ್‌ನಿಂದ ನರ್ಮದೆಯವರೆಗೂ ಪ್ರಸರಿಸಿತ್ತು. ಈ ಹೋರಾಟದ ಸ್ವರೂಪದ ಬಗ್ಗೆ ವಿವಾದಾತ್ಮಕ ಅಭಿಪ್ರಾಯಗಳಿವೆ. ಕೆಲವರ ಪ್ರಕಾರ, 'ಇದೊಂದು ಸೈನಿಕರಿಗೆ ಸಂಬಂಧಿಸಿದ ದಂಗೆಯಾಗಿದ್ದು, ಉಳಿದ ನಾಗರಿಕ ಪ್ರಜೆಗಳಾರೂ ಅವರಿಗೆ ಯಾವುದೇ ಸಹಕಾರ ನೀಡಲಿಲ್ಲ' ಎಂದಿರುವರು. ಮತ್ತೆ ಕೆಲವರು 'ಇದೊಂದು ಬ್ರಿಟಿಷ್ ಪ್ರಭುತ್ವದ ವಿರುದ್ಧದ ಬೃಹತ್ ಕ್ರಾಂತಿಯಾಗಿದ್ದು ಸೈನಿಕರು ಮುಂದಾಳತ್ವ ವಹಿಸಿದ್ದರು' ಎಂದಿರುವರು.

ಇನ್ನೂ ಕೆಲವರು, ಇದು ಧಾರ್ಮಿಕ ಹೋರಾಟವೆಂದೂ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಜರುಗಿದ ಹೋರಾಟವೆಂದು ಹೇಳಿದ್ದಾರೆ.

ಭಾರತೀಯರ ಈ ದಂಗೆಯನ್ನು ಮುಖ್ಯವಾಗಿ ಭಾರತೀಯ ಸೈನಿಕರು ಬ್ರಿಟಿಷ್ ಅಧಿಕಾರಿಗಳ ಶೋಷಣೆಯ ವಿರುದ್ಧ ಪ್ರಾರಂಭಿಸಿದ್ದರಿಂದ ಇದೊಂದು **ಸೈನಿಕ ಬಂಡಾಯ** ವೆಂದು ಅಭಿಪ್ರಾಯಿಸಲಾಗಿದೆ.

ಈ ದಂಗೆಯು ಭಾರತೀಯರ ಒಂದು **ರಾಷ್ಟ್ರೀಯ ಹೋರಾಟ** ಅಲ್ಲದೆ ಭಾರತೀಯ **ಪ್ರಥಮ ಸ್ವಾತಂತ್ರ್ಯ ಸಂಗ್ರಾಮ**ವೆಂದೂ, **ವಿ.ಡಿ. ಸಾವರ್ಕರ್** ಕರೆದಿದ್ದಾರೆ. ಜನರಲ್ **ಔಟ್ರಮ್**‌ರವರ ಪ್ರಕಾರ ಇದೊಂದು **ಮುಸ್ಲಿಮರು ನಡೆಸಿದ ಪಿತೂರಿ** ಎಂದಿದ್ದಾರೆ.

ಬ್ರಿಟಿಷರು ಸೈನಿಕರಿಗೆ ಹೊಸ ಗನ್ ಬಳಕೆಯ ಒತ್ತಾಯವನ್ನು **ಮೀರತ್** ಸೈನ್ಯ ಶಿಬಿರದಲ್ಲಿ ಹೇರಿದ್ದರಿಂದ ಸೈನಿಕರ ನಿರಾಕರಣೆಯ ವಿರೋಧದ ಅತೃಪ್ತಿಕರ ಕಿಡಿ ಮೀರತ್‌ನಿಂದ ಪ್ರಾರಂಭವಾಯಿತು.

ದಂಗೆಯ ಸ್ವರೂಪದ ಬಗ್ಗೆ ಈ ರೀತಿ ವಿವಾದಾತ್ಮಕತೆ ಇದೆ. ಇದು ಆಧುನಿಕ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮುನ್ನುಡಿಯಾಯಿತೆ ಅಥವಾ ಈ ಘಟನೆಯು ಸಂಪ್ರದಾಯಿಕ ಭಾರತದ ಕೊನೆಯ ಪ್ರಯತ್ನವೊ ಎಂದು ಹೇಳುವುದು ಸ್ವಲ್ಪ ಕಷ್ಟಕರ.

ಆದಾಗ್ಯೂ ಈ ೧೮೫೭ ರ ಮಹಾನ್ ಬಂಡಾಯದ ಸ್ವರೂಪದ ಬಗ್ಗೆ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿದೆ. ಅವು -

ಒಂದು ವರ್ಗದ ಪ್ರಕಾರ 'ಈ ದಂಗೆಯು ಮೂಲತಃ ಮತ್ತು ಪ್ರಮುಖವಾಗಿ ಸೈನಿಕರ ದಂಗೆಯಾಗಿತ್ತು'. ಬ್ರಿಟಿಷ್ ಇತಿಹಾಸಕಾರರನ್ನು ಅನುಸರಿಸುವ ಕೆಲ ಭಾರತೀಯ ಲೇಖಕರ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತಾ ಇದು ಯಾವ ವಿಧದಲ್ಲೂ ರಾಷ್ಟ್ರೀಯ ಹೋರಾಟದ ಲಕ್ಷಣವನ್ನು ಒಳಗೊಂಡಿರಲಿಲ್ಲ. ಏಕೆಂದರೆ ಇದೊಂದು ಕೇವಲ ಕೆಲ ಅತೃಪ್ತ ಭಾರತೀಯ ಸೈನಿಕರು ತಮ್ಮ ಸ್ವಹಿತಾಸಕ್ತಿಗಾಗಿ ಪ್ರಾರಂಭಿಸಿದ ಹೋರಾಟ ಮಾತ್ರವೇ ಆಗಿತ್ತೆಂದು

ಹೇಳಿದ್ದಾರೆ. ಅಲ್ಲದೆ ಭಾರತದ ಎಲ್ಲ ಕಡೆ ಇದರ ಪ್ರಭಾವ ವಿಸ್ತರಿಸಿರಲಿಲ್ಲ. ಮುಖ್ಯವಾಗಿ ಹೇಳುವುದಾದರೆ, ಬಂಗಾಳ ಮತ್ತು ಪಂಜಾಬ್ ಪ್ರದೇಶಗಳು ಇದರಿಂದ ಮುಕ್ತಗೊಂಡ (ಹೊರತಾದಂಥ) ಭಾಗಗಳಾಗಿದ್ದವು. ಅಲ್ಲದೆ ಭಾರತದ ದಕ್ಷಿಣ ಭಾಗಕ್ಕೆ ವ್ಯಾಪಿಸಿರಲಿಲ್ಲ. ಹಾಗೂ ಉತ್ತರ ಭಾರತದಲ್ಲೂ ಎಲ್ಲಾ ಸ್ಥಳಗಳಲ್ಲೂ ಸಾರ್ವತ್ರಿಕತೆ ಪಡೆದಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದು ವರ್ಗದ ಪ್ರಕಾರ, 'ಇದೊಂದು ಜನತೆಯ ಹೋರಾಟವಾಗಿದ್ದು, ಕೇವಲ ಸೈನಿಕರಿಗೆ ಮಾತ್ರ ಸೀಮಿತವಾದುದಲ್ಲ'.

ಈ ರಾಷ್ಟ್ರೀಯ ಹೋರಾಟವು ನಿರ್ದಿಷ್ಟ ಉದ್ದೇಶಗಳೊಂದಿಗೆ ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಯನ್ನು ತಡೆಗಟ್ಟಿ ಸ್ವಾತಂತ್ರ್ಯ ಹೊಂದುವುದೇ ಆಗಿತ್ತು. ಆದ್ದರಿಂದ ಇದು ರಾಷ್ಟ್ರೀಯ ಹೋರಾಟದ ಮನೋಭಾವ ಹೊಂದಿತ್ತೆಂದು ಅಭಿಪ್ರಾಯಿಸುವರು.

ಈ ಹೋರಾಟವು ರಾಷ್ಟ್ರೀಯವಾಗಿದ್ದು ಕೋಮುಭಾವನೆಯಿಂದ ಹೊರತಾದುದಾಗಿತ್ತು. ಮುಖ್ಯವಾಗಿ ಈ ದಂಗೆಯೂ ಸೈನಿಕರ ಹೊಸ ಕಾರ್ಟ್‌ರಿಡ್ಜ್ ಬಳಕೆಯ ನಿರಾಕರಣೆ, ವೇತನ, ಬಡ್ತಿ ಸೇವೆ, ಸೇವಾ ವ್ಯವಸ್ಥೆ, ಮತಾಧಾರಿತ, ತಾರತಮ್ಯತೆ ಮೊದಲಾದುವು ಅವರ ಅಸಮಾಧಾನಕ್ಕೆ ಕಾರಣವಾದವು.

ಇನ್ನುಳಿದಂತೆ, ಅಸಂಖ್ಯಾತ ಸೈನಿಕೇತರ ಜನತೆ ಬ್ರಿಟಿಷರ ವಿರುದ್ಧ, ತಮ್ಮದೇ ಸಮಸ್ಯೆಗಳ ನಿವಾರಣೆಗಾಗಿ ಮುಖ್ಯ ನಾಯಕರಾದ **ನಾನಾಸಾಹೇಬ, ಝಾನ್ಸಿ ರಾಣಿ, ಬಹದ್ದೂರ್‌ಷಾ** ಇವರುಗಳ ನಾಯಕತ್ವದಲ್ಲಿ ಭಾಗವಹಿಸಿದ್ದರು ಎಂಬ ಅಭಿಪ್ರಾಯ ಇದೆ.

ಈ ಬಗ್ಗೆ ಅಭಿಪ್ರಾಯಿಸುತ್ತಾ ಬ್ರಿಟಿಷ್ ಇತಿಹಾಸಕಾರ, ಜಸ್ಟೀಸ್ ಮ್ಯಾಕ್‌ಕರ್ತಿ, 'ಇದೊಂದು ಕೇವಲ ಸೈನಿಕ ದಂಗೆಯಾಗಿರಲಿಲ್ಲ. ಸೈನಿಕರ ಅಸಮಾಧಾನದ ಜೊತೆಗೆ ರಾಷ್ಟ್ರೀಯ ಮತ್ಸರ ಮತ್ತು ಧಾರ್ಮಿಕ ಮತಾಂಧತೆಗಳು ಬ್ರಿಟಿಷರ ಭಾರತದ ಆಕ್ರಮಣದ ವಿರುದ್ಧ ಇದ್ದವು. ಅದರ ಉದ್ದೀಪನಗೊಂಡ ದ್ವೇಷ ಮತ್ತು ನಿಷ್ಕಾರುಣದ ಅಂಶಗಳು ಈ ಮಹಾನ್ ಬೃಹತ್ ಚಳವಳಿಗೆ ಪೂರಕವಾದವು' ಎಂದಿರುವರು.

ಎಸ್.ಎನ್. **ಸೇನ್**‌ರವರ ಪ್ರಕಾರ 'ದಂಗೆಯು ಸೈನಿಕರಿಂದ ಆರಂಭಿಸಲ್ಪಟ್ಟರೂ, ತಕ್ಷಣ ಅದು ರಾಜಕೀಯ ಸ್ವರೂಪ ಪಡೆಯಿತು. ಅದು ಮೀರತ್‌ನಿಂದ ದೆಹಲಿಯಲ್ಲಿ ದೊರೆಯ ನೇಮಕದೊಂದಿಗೆ ಕೇಂದ್ರೀಕೃತಗೊಂಡಿತು. ದಂಗೆಯು ಸಂಕೀರ್ಣವಾಗುತ್ತಾ ವಿಶಾಲವಾಗಿ ವ್ಯಾಪಿಸಿದ್ದು, ಅಲ್ಲದೆ ಇದರಲ್ಲಿ ಹಿಂದೂ, ಮುಸ್ಲಿಂ, ಜಮೀನ್ದಾರರು, ಬಂಧಿತರು, ದೊರೆಗಳು, ಸಾಹಸಿಗರು ಎಲ್ಲಾ ವರ್ಗದವರು ಭಾಗವಹಿಸಿದ್ದರು' ಎಂದಿರುವರು.

ಈ ನಡುವೆ ಬ್ರಿಟಿಷ್ ಇತಿಹಾಸಕಾರರಾದ **ಮ್ಯಾಲ್‌ಸನ್ .ಡಫ್. ಕೆಯ್** ಮತ್ತು **ಬಾಲ್**‌ರವರು ಈ ಬಂಡಾಯದ ಬಗ್ಗೆ 'ಬ್ರಿಟಿಷರನ್ನು ಭಾರತದಿಂದ ಹೊರದೂಡಲು ಕೆಲ ಭಾರತೀಯರು ರೂಪಿಸಿದ ವ್ಯವಸ್ಥಿತ ಸಂಚು' ಎಂದು ಅಭಿಪ್ರಾಯಿಸಿದ್ದಾರೆ.

ಮುಂದುವರೆದು, ಇಂಥ ಪಿತೂರಿಗಳ ಬಗ್ಗೆ ೧೮೫೭ ಕ್ಕಿಂತ ಮುಂಚೆ ಚಾಲ್ತಿಯಲ್ಲಿದ್ದ ಚಪಾತಿಯ ತಯಾರಿಯ ಕಟ್ಟುಕತೆ (ದನದ ಮೂಳೆಯ ಪುಡಿಯನ್ನು ಚಪಾತಿ ಹಿಟ್ಟಿಗೆ ಬೆರೆಸುತ್ತಿದ್ದರೆಂಬುದು). ಇದರ ಸತ್ಯಾಸತ್ಯತೆಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಚಪಾತಿಯ ಹಂಚುವಿಕೆ ಸಾಂಕ್ರಮಿಕ ರೋಗಗಳನ್ನು ತಡೆಗಟ್ಟುವುದು ಎಂದು, ಇನ್ನೊಂದು ಅಭಿಪ್ರಾಯದ ಪ್ರಕಾರ ಭಾರತೀಯರ ಮೇಲೆ ಕ್ರೈಸ್ತಧರ್ಮ ಹೇರುವಿಕೆ ಎಂದು ಹೇಳುವುದರಿಂದ ಚಪಾತಿ ಹಂಚುವಿಕೆಯ ಪದ್ಧತಿ ಯಾವುದೇ ರೀತಿಯಿಂದಲೂ ಈ ದಂಗೆಗೆ ಸಂಬಂಧವಿತ್ತು ಎಂದು ಹೇಳಲಾಗುವುದಿಲ್ಲ.

ಸೈನಿಕರ ಸಂಘಟನೆಯ ಬಗ್ಗೆ ಭಿನ್ನಾಭಿಪ್ರಾಯವಿದೆ. ದಂಗೆಕಾರರ ಮಧ್ಯೆ ಪತ್ರ ವ್ಯವಹಾರದ ಸಂಪರ್ಕ ಇತ್ತೆಂಬುದು ಸತ್ಯ. ಒಂದೆರಡು ತಿಂಗಳಲ್ಲಿಯೆ ಭಾರತದ ಇತರೆಡೆ ವಿಶಾಲವಾಗಿ ದಂಗೆ ಹರಡಿದ್ದರಿಂದ ಇತರರೊಂದಿಗೆ ಸಂಪರ್ಕ ಇತ್ತೆಂದು ಅರ್ಥವಾಗುತ್ತದೆ. ಸಿಪಾಯಿಗಳು ಅನೇಕ ಕಂಟೋನ್‌ಮೆಂಟ್‌ಗಳಲ್ಲಿ ಸಂಪರ್ಕವಿರಿಸಿಕೊಂಡಿದ್ದರೂ, ಖಚಿತವಾದ ಯೋಜನೆಯನ್ನಳವಡಿಸಿಕೊಂಡಿರಲಿಲ್ಲ. ಈ ಸಂಪರ್ಕ ಮುಂದೆ (ಸಂಘಟಿತ) ಸಂಚಿಗೆ ಕಾರಣವಾಯಿತು ಎಂದು ಹೇಳುವುದು ಕಷ್ಟಕರ. ಆದರೆ ಅಂಥ ಹಂತ ಮೇ ೧೦, ೧೮೫೭ ರ ಮೀರತ್‌ನಲ್ಲಿ ತಲುಪಿರಲಿಲ್ಲ. ಯಾವುದೇ ಸಲಹೆ, ತಯಾರಿ ಮತ್ತು ಮಾರ್ಗದರ್ಶನವಿಲ್ಲದೆ ಮೇ ೧೦ ರಂದು ಮೀರತ್‌ನಲ್ಲಿ ಪ್ರಾರಂಭವಾದ ಕೆಲವೇ ಸೈನಿಕರ ದಂಗೆ ಮಾತ್ರವಾಗಿ ಪರಿಣಮಿಸಿತು.

ಕಾರಣಗಳು

ಈ ಘಟನೆ ನಡೆಯಲು ಹಲವಾರು ಅಂಶಗಳು ಕಾರಣವಾಗಿದ್ದವು.

೧. ಸಾಕಷ್ಟು ಸಂಖ್ಯೆಯಲ್ಲಿ ಇತರ **ಅತೃಪ್ತ ನಾಗರೀಕರು** ವ್ಯಾಪಕ ರೀತಿಯಲ್ಲಿ ಸಿಪಾಯಿಗಳ ದಂಗೆಗೆ ಉತ್ತೇಜಿಸಿದರು. ಮುಖ್ಯವಾಗಿ ಜಮೀನ್ದಾರರು. ರೈತರು ಜಮೀನ್ದಾರರಿಂದ ಶೋಷಣೆಗೊಳ್ಳುತ್ತಿದ್ದರಿಂದ ಅವರ ಸ್ಥಾನಮಾನ, ಹಕ್ಕು ಬಾಧ್ಯತೆಗಳು ಕುಂಠಿತಗೊಂಡವು. ಇದರಿಂದ ಕೋಪಿತಗೊಂಡಿದ್ದ ಅವರು ಬ್ರಿಟಿಷ್‌ಶಾಹಿಯ ವಿರುದ್ಧ ನಡೆಯುವ ಹೋರಾಟಕ್ಕೆ ದಂಗೆಕೋರರನ್ನು ಬೆಂಬಲಿಸಿದರು. ಜೊತೆಗೆ ಇನ್ನಿತರರು ಇಂಥ ಸಂದರ್ಭದಲ್ಲಿ ಸಾಕಷ್ಟು ಸಂಪತ್ತು ದೋಚುವ ಮತ್ತು ಲೂಟಿ ಮಾಡುವ ಆಸೆಯಿಂದ ಬೆಂಬಲಿಸಿದರು.

೨. **ರಾಜಕೀಯ ಅಂಶಗಳು** ಈ ಮಹಾದಂಗೆಗೆ ಪೂರಕ ವಾತಾವರಣ ಒದಗಿಸಿದವು. ಪ್ರಮುಖವಾಗಿ ಹಳೆಯ ಆಡಳಿತ ವರ್ಗಗಳು, ಹಿಂದು ಮುಸ್ಲಿಮರು ಅವರವರ ಆಚರಣೆ ಪದ್ಧತಿಗನುಗುಣವಾದ ಸಂಘಟನೆ, ಚಿಂತನೆಗಳೊಂದಿಗೆ ಸ್ವತಂತ್ರವಾಗಿ ಅವಶ್ಯ ರೀತಿಯಲ್ಲಿ ಮೈತ್ರೀಯ ಸೌಹಾರ್ದತೆ ರೂಢಿಸಿಕೊಂಡಿದ್ದರು. ಬ್ರಿಟಿಷರು ಒಂದೊಂದೇ ದೇಶಿಯ ಸಂಸ್ಥಾನಗಳನ್ನು ವಶಪಡಿಸಿಕೊಂಡಂತೆ. ಅಲ್ಲಿ ಭಾರತೀಯ ರಾಜರಿಂದ ಶೋಷಿತರಾದ ಜನತೆ ಮುಕ್ತರಾದರೂ, ಮುಂದೆ ಭಾರತೀಯರು ಅಲ್ಲಿನ ಉನ್ನತ ಸ್ಥಾನಗಳಿಂದ ವಂಚಿತರಾಗು

ವಂತಾಯಿತು. ಮುಖ್ಯವಾಗಿ ಲಾರ್ಡ್ ಡಾಲ್‌ಹೌಸಿಯ ಸಾಮ್ರಾಜ್ಯ ವಿಸ್ತರಣಾ ನೀತಿ, ಸಾಮ್ರಾಜ್ಯ ಸ್ವಾಧೀನಪಡಿಸಿಕೊಳ್ಳುವ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಗಳ ಮೂಲಕ ಅನೇಕ ಭಾರತೀಯ ರಾಜ್ಯಗಳನ್ನು ಬಲತ್ಕಾರವಾಗಿ ವಶಪಡಿಸಿಕೊಳ್ಳಲಾಯಿತು. ಇವುಗಳಲ್ಲಿ **ಪಂಜಾಬ್, ಸತಾರ, ನಾಗಪುರ, ಝಾನ್ಸಿ** ಮತ್ತು **ಬೀರಾರ್** ಬ್ರಿಟಿಷ್ ಭಾರತಕ್ಕೆ ಸೇರಿತು. ಅತಿ ಮುಖ್ಯವಾಗಿ ಬ್ರಿಟಿಷರಿಗೆ ವಿಧೇಯರಾಗಿದ್ದರೂ ಅಸಮರ್ಪಕ ಆಡಳಿತದ ನೆಪದಿಂದ **ಔದ್** ಸಂಸ್ಥಾನವು ಬ್ರಿಟಿಷರ ವಶವಾಯಿತು. ಹಿಂದುಗಳು ನಾನಾಸಾಹೇಬನಿಗೆ ನಿವೃತ್ತಿ ವೇತನ ನಿರಾಕರಿಸಿದುದರಿಂದ ದ್ವೇಷಿಸಲಾರಂಭಿಸಿದರು. ಮುಸ್ಲಿಮರು **ಮೊಘಲ್ ಚಕ್ರವರ್ತಿಯ** ಸಿಂಹಾಸನ ತೆರವುಗೊಳಿಸಿದುದು ಹಾಗೂ ಸುಲ್ತಾನನ ಸ್ಥಾನಮಾನ ಹಿಂತೆಗೆದು ಕೊಂಡಿದ್ದರಿಂದ ದ್ವೇಷ ಬೆಳೆಯಲಾರಂಭಿಸಿತು.

ಈ ಬದಲಾದ ರಾಜಕೀಯ ವಿದ್ಯಮಾನಗಳ ಪರಿಣಾಮವಾಗಿ ಅಲ್ಲಿ ಉನ್ನತ ಸ್ಥಾನಮಾನಗಳ ಆಶ್ರಿತರಾಗಿದ್ದ ಜಮೀನ್ದಾರರು, ಜಹಗೀರುದಾರರು ತಮ್ಮ ಸ್ಥಾನಗಳಿಂದ ವಂಚಿತರಾಗುವಂತಾಯಿತು. **ಖಾಯಂ ಜಮೀನ್ದಾರಿ ಪದ್ಧತಿಯಿಂದ** ಬಂಗಾಳ ಪ್ರಾಂತದಲ್ಲಿ ಅವರ ಸ್ಥಾನಮಾನಗಳಿಗೆ ಕುಂದುಂಟಾಯಿತು. ಇದರಿಂದ ಬ್ರಿಟಿಷರ ವಿರುದ್ಧ ದ್ವೇಷ ಹೆಚ್ಚಾಯಿತು.

೩. 'ಈಸ್ಟ್ ಇಂಡಿಯಾ ಕಂಪನಿ'ಯು **ದೇಶಿಯ ವ್ಯಾಪಾರದಲ್ಲಿ ಏಕಸ್ವಾಮ್ಯ** ಸ್ಥಾಪಿಸಿ, ದೇಶಿಯ ವ್ಯಾಪಾರಿಗಳ ಹಕ್ಕು ಬಾಧ್ಯತೆಗಳನ್ನು ನಿರ್ಬಂಧಿಸಲಾಯಿತು. ಕ್ರಮೇಣ ಅವರ ಸ್ಥಾನದಲ್ಲಿ ಭಾರತೀಯ ವ್ಯಾಪಾರಿಗಳನ್ನು ಬ್ರಿಟಿಷ್ ಏಜೆಂಟರ ಸ್ಥಾನಕ್ಕೆ ಇಳಿಸಲಾಯಿತು. ವಂಶಪಾರಂಪರ್ಯವಾಗಿ ಹೊಂದಿದ್ದ ಭೂ ಸ್ವಾಮ್ಯದ ಹಕ್ಕನ್ನು ಅವರಿಂದ ಕಸಿದುಕೊಂಡರು. ದೇಶದಾದ್ಯಂತ ವಿವಿಧ ಭಾಗಗಳಲ್ಲಿ ವಿವಿಧ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಕಂದಾಯ ಪಾವತಿಯ ಅಸಮರ್ಥತೆ, ಹೆಚ್ಚಿನ ಕಂದಾಯ ವಸೂಲಿಗೆ ಒತ್ತಾಯ ಮುಂತಾದ ಅನೀತಿಯುತ ಮಾರ್ಗಗಳಿಂದ ಜಮೀನುಗಳನ್ನು ನೇರವಾಗಿ ಅಧೀನಗೊಳಿಸಿಕೊಂಡರು. ಸಣ್ಣ ಮತ್ತು ಗೃಹ ಕೈಗಾರಿಕೆಗಳಿಗೂ ಪ್ರೋತ್ಸಾಹದಾಯಕವಾಗದ ಅವರ ನೀತಿಗಳಿಂದ ನಷ್ಟ ಸಂಭವಿಸಿ ಅವರೂ ಬ್ರಿಟಿಷ್ ವಿರೋಧಿಗಳಾಗುವಂತಾಯಿತು.

೪. ಬ್ರಿಟಿಷರು ಜಾರಿಗೊಳಿಸಿದ **ಪಾಶ್ಚಿಮಾತ್ಯ ಹೊಸ ಪದ್ಧತಿಗಳು** ಸಂಪ್ರದಾಯಸ್ಥ ಹಿಂದೂ ಮುಸ್ಲಿಮರು ಅನುಮೋದಿಸಲಿಲ್ಲ. ಸಾಮಾಜಿಕವಾಗಿ ಕ್ರೂರ ಆಚರಣೆಗಳೆನಿಸಿದ್ದ ಸತಿ ಮತ್ತು ಶಿಶು ಹತ್ಯಾ ನಿಷೇಧದ ಶಾಸನಗಳನ್ನು ಸಂಪ್ರದಾಯಸ್ಥ ಹಿಂದೂಗಳು ಮಾನ್ಯ ಮಾಡಲಿಲ್ಲ. ಜೊತೆಗೆ ಯುರೋಪಿನ ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ ಪದ್ಧತಿ, ಪಾಶ್ಚಿಮಾತ್ಯ ಶಿಕ್ಷಣ, ರೈಲ್ವೆ ಮತ್ತು ಟೆಲಿಗ್ರಾಫ್ ಸುಧಾರಣೆಗಳನ್ನು ಸಂಪ್ರದಾಯಸ್ಥರು ಪ್ರಶ್ನಾರ್ಥಕವಾಗಿ ನೋಡುವಂತಾಯಿತು. ವಿಧವಾ ಪುನರ್ವಿವಾಹ ಮತ್ತು ಉತ್ತರಾಧಿಕಾರತ್ವದ ಶಾಸನಗಳೂ ಹಿಂದು ಸಂಪ್ರದಾಯಸ್ಥರ ಪ್ರಶ್ನಾರ್ಥಕ ಅಂಶಗಳಾಗಿದ್ದವು.

ಮುಸ್ಲಿಮರಲ್ಲಿ ಮೌಲ್ವಿಗಳು ತಮ್ಮ ಹೆಸರಾಂತ ಕ್ರಿಮಿನಲ್ ಕೋರ್ಟ್‌ಗಳ ನ್ಯಾಯಸ್ಥ ಸ್ಥಾನಮಾನಗಳನ್ನು ಕಳೆದುಕೊಂಡರು ಹಾಗೂ ಔದ್‌ನ ನವಾಬನನ್ನು ನಿವೃತ್ತಗೊಳಿಸಿ ಅದನ್ನು ವಶಪಡಿಸಿಕೊಂಡಿದ್ದರಿಂದ ಅವರೂ ದ್ವೇಷಿಸಲಾರಂಭಿಸಿದರು.

೫. ಬ್ರಿಟಿಷರು ಅನುಸರಿಸಿದ ಮತ್ತೊಂದು ಪ್ರಮಾದಕರ ವಿಷಯವೆಂದರೆ ಸಿಪಾಯಿಗಳ ಧಾರ್ಮಿಕ ಪಾವಿತ್ರತೆಗೆ ಅಪಮಾನವಾಗುವ ರೀತಿ ಸೈನಿಕರ ಟೋಪಿಯ ತುರಾಯಿಯನ್ನು ಚರ್ಮದಿಂದ ತಯಾರಿಸಿದುದನ್ನು ಧರಿಸಲು ಒತ್ತಾಯಿಸಿದ್ದುದರಿಂದ ಹಿಂದೂ ಸೈನಿಕರು ವಿರೋಧಿಗಳಾದರು. ಇದು ತಮ್ಮ ಪವಿತ್ರ ಧರ್ಮಕ್ಕೆ ಧಕ್ಕೆ ತರುವುದೆಂದೂ, ಸಂಪ್ರದಾಯಸ್ಥರ ದೃಷ್ಟಿಯಲ್ಲಿ ತಮ್ಮ ಸ್ಥಾನ ಕುಂದುವುದೆಂದೂ ಭಾವಿಸಿದರು. ಈ ಅನಾವಶ್ಯಕ ಹೊಸ ಪದ್ಧತಿಗಳ ವಿರುದ್ಧ ಪ್ರತಿಭಟಿಸುವಂತಾದರು. ಮೇಲಾಗಿ ಕ್ರೈಸ್ತ ಧರ್ಮದ ಉನ್ನತಿಯ ಬಗ್ಗೆ ಪ್ರಚಾರದಲ್ಲಿ ತೊಡಗಿದುದು ಮತ್ತು ಕೆಲ ಮಿಷನರಿಗಳು ಅನುಸರಿಸಿದ ಮತಾಂತಾರ ನೀತಿಯ ಬಗ್ಗೆಯು ಅತೃಪ್ತ ಭಾವನೆ ವ್ಯಕ್ತವಾಗುವಂತಾಯಿತು.

೬. ದಂಗೆಗೆ ಪ್ರಮುಖ ಕಾರಣವೆಂದರೆ ಸೈನಿಕರ ಅಸಮಾಧಾನ, ಭಾರತೀಯ ಸೈನಿಕರಿಗೂ ಬ್ರಿಟಿಷ್ ಸೈನಿಕರಿಗೂ ಇದ್ದ ತಾರತಮ್ಯ ಭಾವನೆ. ಅಂದರೆ ಅವರ ವೇತನ, ಬಡ್ತಿಗಳಲ್ಲಿ ಅಗಾಧ ವ್ಯತ್ಯಾಸವಿತ್ತು. ಇದರಿಂದ ಅವರು ಅತೃಪ್ತಿಗೊಂಡಿದ್ದರು. ಜೊತೆಗೆ ಸಮುದ್ರ ದಾಟಿಯೂ ಬ್ರಿಟಿಷರ ಪರ ಯುದ್ಧ ಮಾಡಬೇಕೆಂಬ ಕಡ್ಡಾಯ ಕಾಯಿದೆ ಜಾರಿಗೊಳಿಸಿದ್ದರ ವಿರುದ್ಧ (ಬರ್ಮಾ, ಕ್ರಿಮಿಯಾ ಯುದ್ಧ) ಸಂಪ್ರದಾಯಸ್ಥ ಹಿಂದೂ ಸೈನಿಕರು ಸಮುದ್ರ ದಾಟಿ ಪ್ರಯಾಣ ಮಾಡುವುದು ತಮ್ಮ ಧರ್ಮಕ್ಕೆ ನಿಷಿದ್ಧವೆಂದು ಭಾವಿಸಿ ಅದರ ವಿರುದ್ಧವೂ ಅತೃಪ್ತಗೊಂಡರು.

೭. ದಂಗೆ ಪ್ರಾರಂಭವಾಗಲು ಇಷ್ಟೆಲ್ಲಾ ಅತೃಪ್ತಿ, ಅಸಮಾಧಾನಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಂಡುಬಂದರೂ ಇವೆಲ್ಲ ಅಂಶಗಳು ಆ ದಂಗೆಗೆ ಇಂಧನವಾಗಿ ಪರಿಣಮಿಸಿದವು. ದಂಗೆಯ ಜ್ವಾಲೆ ಪ್ರಜ್ವಲಿಸಿ ಹರಡಲು ಪ್ರಮುಖವಾದ ಕಿಡಿ ಯಾವುದೆಂದರೆ, ಸೈನ್ಯದಲ್ಲಿ ಹಳೆಯ ರೈಫಲ್ಸ್ ಬದಲಿಗೆ ಹೊಸ ಎನ್‌ಫೀಲ್ಡ್ ರೈಫಲ್ಸ್‌ನ ಕಾರ್ಟ್‌ರಿಡ್ಜ್‌ಗಳು ಕೊಬ್ಬು ಸವರಿದವುಗಳಾಗಿದ್ದವು. ದನದ ಮತ್ತು ಹಂದಿಯ ಕೊಬ್ಬನ್ನು ಸವರಲಾಗಿದ್ದ ಕಾಟ್‌ರಿಡ್ಜ್‌ಗಳನ್ನು ಬಳಸಲು ಒತ್ತಾಯಿಸಿದ್ದು ಅವುಗಳನ್ನು ಬಳಸಬೇಕಾದರೆ ಬಾಯಿಂದ ಕಚ್ಚಿ ಪ್ರಯೋಗಿಸಬೇಕಿತ್ತು. ಆಗ ಕೊಬ್ಬು ಸಹಜವಾಗಿ ಬಾಯಿಗೆ ತಾಕುತ್ತಿತ್ತು. ಇದರಿಂದ ಹಿಂದೂ ಸೈನಿಕರಿಗೆ ಹಸು ಪವಿತ್ರ ಪ್ರಾಣಿಯಾದರೆ, ಮುಸ್ಲಿಮರಿಗೆ ಹಂದಿ ನಿಷಿದ್ಧ ಪ್ರಾಣಿ, ಬರೀ ಕಚ್ಚಿ ತೆಗೆಯುವುದರಿಂದ ತಾವು ಮಾತ್ರವೇ ಅಪವಿತ್ರಗೊಳ್ಳುತ್ತಿರಲಿಲ್ಲ. ಇದು ಸಂಪ್ರದಾಯಸ್ಥರಿಗೆ ತಿಳಿದರೆ ಇಡೀ ಸಮಾಜದಿಂದಲೇ ಬಹಿಷ್ಕರಿಸುವರೆಂಬ ಭಯ ಅವರನ್ನು ದಂಗೆಗೆ ಉತ್ತೇಜಿಸಿತು. ಇದು ಬ್ರಿಟಿಷರು ಬೇಕೆಂತಲೇ ತಮ್ಮ ಧಾರ್ಮಿಕತೆಯನ್ನು ಅಪವಿತ್ರ ಗೊಳಿಸಲು ಯತ್ನಿಸಿರುವರೆಂಬ ರೋಷ ದಂಗೆಯ ಪ್ರಾರಂಭದ ಕಿಡಿಯಾಯಿತು.

ಸೈನಿಕರು ಈ ಕೊಬ್ಬು ಸವರಿದ ಮದ್ದುಗುಂಡುಗಳನ್ನು ಬಳಸಲು ವಿವಿಧ ರೆಜಿಮೆಂಟು ಗಳಲ್ಲಿ ತಿರಸ್ಕರಿಸಿದರು. ಮೊಟ್ಟಮೊದಲು **ಬ್ಯಾರಕ್‌ಪುರ್**‌ದಲ್ಲಿ (ಬಂಗಾಳದ ಸಿಪಾಯಿಗಳು) ಪ್ರತಿಭಟಿಸಿದರು. ಅನಂತರ ಫೆಬ್ರವರಿ ೨೬, ೧೮೫೭ ರಲ್ಲಿ **ಬೆಹ್ರಾಂಪುರ್**‌ದ ಸ್ಥಳೀಯ ರೆಜಿಮೆಂಟ್‌ನಲ್ಲೂ ಸೈನಿಕರು ಈ ತುಫಾಕಿಗಳನ್ನು ಬಳಸಲು ನಿರಾಕರಿಸಿದರು. ಜೊತೆಗೆ ಇವರನ್ನು ಬ್ಯಾರಕ್‌ಪುರ್‌ದವರೆಗೆ ಕರೆದೊಯ್ದು ವಜಾಗೊಳಿಸಿದರೂ **ಮೀರತ್**‌ನಲ್ಲೂ ಸೈನಿಕರು ತೋಟಾಗಳನ್ನು ಬಳಸಲು ನಿರಾಕರಿಸಿದ್ದರಿಂದ **'ಕೋರ್ಟ್ ಮಾರ್ಷಲ್'** ಪ್ರಕಾರ ಅವರನ್ನು ಬಂಧಿಸಲಾಯಿತು. ಮೇ ೧೦, ೧೮೫೭ ರಂದು ಅವರ ಸಹಪಾಠಿಗಳೇ ಅವರನ್ನು ಬಿಡುಗಡೆಗೊಳಿಸಿದರು. ಅನಂತರ ಉದ್ರಿಕ್ತಗೊಂಡ ಸೈನಿಕರು ಯುರೋಪಿಯನ್ನರ ಮನೆಗಳಿಗೆ ಬೆಂಕಿ ಹಚ್ಚಿ ಧ್ವಂಸಗೊಳಿಸಿದರು. ತದನಂತರ ದೆಹಲಿಗೆ ಪಯಣಿಸಿ ಅಲ್ಲಿದ್ದ ಮೊಘಲ್ ಸುಲ್ತಾನನಾದ **೨ನೆಯ ಬಹದ್ದೂರ್ ಷಾ ಜಾಫರ್**‌ನನ್ನು 'ಚಕ್ರವರ್ತಿ' ಎಂದು ಘೋಷಿಸಿದರು. ದೇಶಾದ್ಯಂತ ಹಬ್ಬಿದ ಈ ಸುದ್ದಿ ಅತೃಪ್ತ ಭಾರತೀಯರೆಲ್ಲರೂ ಎಚ್ಚೆತ್ತು ಹೋರಾಡಲು ಪ್ರೇರೇಪಿಸಿತು.

ಇದು ಬಹಳ ವೇಗವಾಗಿ **ರೋಹಿಲ್‌ಖಂಡ್** ಮತ್ತು ಭಾರತದ ಮಧ್ಯಭಾಗಗಳಲ್ಲಿ ಪ್ರತಿಧ್ವನಿಸಿತು. **ಬರೇಲಿ, ಲಕ್ನೋ, ಕಾನ್ಪುರ್, ಬನಾರಸ್**‌ಗಳಲ್ಲಿ ಸೈನಿಕರು ಬಹಿರಂಗವಾಗಿ ಬ್ರಿಟಿಷರ ವಿರುದ್ಧ ಹೋರಾಟ ಕೈಗೊಂಡರು.

ದಂಗೆಯ ಮೂರು ಹಂತಗಳು

ಬ್ರಿಟಿಷರು ದಂಗೆಯನ್ನು ನಿಯಂತ್ರಿಸಲು ಮತ್ತು ದಂಗೆಯು ಪರಿಣಾಮಕಾರಿಯಾಗು ವುದನ್ನು ತಡೆಯಲು ಪ್ರಯತ್ನಿಸಿದರು. ಮೊದಲನೆಯ ಹಂತದಲ್ಲಿ ಅದನ್ನು ಶೀಘ್ರವಾಗಿ ಬೇರೆಡೆ ಹರಡುವ ಮೊದಲು ನಿಯಂತ್ರಿಸುವುದು ಮತ್ತು ಜನತೆಯನ್ನು ಉತ್ತೇಜಿಸುವ ಮೊದಲೆ ಅದನ್ನು ಶೀಘ್ರವಾಗಿ ಹತ್ತಿಕ್ಕುವುದು. ಎರಡನೆಯ ಹಂತದಲ್ಲಿ ಪ್ರಮುಖ ದಂಗೆಯ ಕೇಂದ್ರವಾದ **ಲಕ್ನೋ**ದಲ್ಲಿ ಕಾರ್ಯಾಚರಣೆ ಕೈಗೊಂಡರು. ಮೂರನೆಯ ಹಂತದಲ್ಲಿ ಬ್ರಿಟಿಷ್ ಸೇನಾನಿಗಳಾದ **ಸರ್ ಕಾಲಿನ್ ಕ್ಯಾಂಪ್‌ಬೆಲ್** ಮತ್ತು **ಸರ್ ಹ್ಯೂರೋಸ್**‌ರವರ ಮುಂದಾಳತ್ವದ ಪಡೆಗಳು ಒಟ್ಟಾಗಿ ಇಡೀ ಭಾರತೀಯ ದಂಗೆಯ ಬಲವನ್ನೇ ೧೮೫೮ ರ ಹೊತ್ತಿಗೆ ಹತ್ತಿಕ್ಕಿ, ದಂಗೆಯ ಶಕ್ತಿಯನ್ನೇ ನಾಶಗೊಳಿಸಿದರು. ಅಂತಿಮವಾಗಿ **ತಾತ್ಯಾಟೋಪೆ** ಯನ್ನು ಏಪ್ರಿಲ್ ೧೮೫೯ ರಲ್ಲಿ ಬಂಧಿಸುವುದರ ಮೂಲಕ ಇಡೀ ಭಾರತೀಯರ ದಂಗೆಯ ಬಲವನ್ನೇ ನಾಶಗೊಳಿಸಿದಂತಾಯಿತು. ಬ್ರಿಟಿಷರನ್ನು ಭಾರತದಿಂದ ಕಾಲ್ತೆಗೆಸುವ ಪ್ರಯತ್ನದ ಪ್ರಾರಂಭ ದೃಢತೆ ಮತ್ತು ಸಾಹಸದಿಂದ ಕೂಡಿತ್ತಾದರೂ ವಿಫಲವಾಯಿತು. ಈ ದಂಗೆಯಲ್ಲಿ ಭಾರತೀಯರ ಪ್ರಾಬಲ್ಯ ಕುಸಿಯಲು ಮತ್ತು ಬ್ರಿಟಿಷರ ಪ್ರಾಬಲ್ಯ ಹೆಚ್ಚಲು ಹಲವಾರು ಅಂಶಗಳು ಕಾರಣವಾದವು.

ದಂಗೆಯ ವಿಫಲತೆ

ಬಹುತೇಕ ಉತ್ತರ ಭಾರತದ ಭಾಗಗಳು ಇದರಲ್ಲಿ ಪಾಲ್ಗೊಳ್ಳದಿದ್ದುದು ಆಫ್ಘನ್ ಭಾಗಗಳು ತಟಸ್ಥನೀತಿ ಅನುಸರಿಸದ್ದರಿಂದ, ಸಿಖ್ ಮತ್ತು ಗೂರ್ಖರು ಈ ದಂಗೆಯ ಸಮಯದಲ್ಲಿ ಬ್ರಿಟಿಷರಿಗೆ ಸಹಾಯ ಹಸ್ತ ನೀಡಿದ್ದರಿಂದಲೂ ವಿಫಲವಾಯಿತು.

ವಿಫಲತೆಗೆ ಅತೀ ಮುಖ್ಯ ಕಾರಣವೆಂದರೆ ರಾಷ್ಟ್ರೀಯ ಭಾವೈಕ್ಯತೆಯ ಕೊರತೆ ಇತ್ತು. ಈ ಒಂದು ದಂಗೆಗೆ ಸಂಘಟನೆಯ ಮತ್ತು ಯೋಗ್ಯ ನಾಯಕರ ಕೊರತೆ ಇತ್ತು. ಇಲ್ಲಿನ ನಾಯಕರಿಗೆ ಯಾವುದೇ ನಿರ್ದಿಷ್ಟವಾದ ಗುರಿ ಇರಲಿಲ್ಲ. ಮುಸ್ಲಿಮರ ಮಹತ್ವಾಕಾಂಕ್ಷೆ ಮೊಘಲ್ ಚಕ್ರಾಧಿಪತ್ಯದ ಸ್ಥಾಪನೆಯಾದರೆ, ಹಿಂದೂಗಳಿಗೆ ನಾನಾಸಾಹೇಬನ ನಾಯಕತ್ವದಲ್ಲಿ ಭಾರತೀಯರ ಅಧಿಕಾರ ಸ್ಥಾಪಿಸುವ ಬಯಕೆ ಇದ್ದುದು ಪರಸ್ಪರ ವಿರೋಧ ಭಾವನೆಯನ್ನು ಸೂಚಿಸುತ್ತದೆ. ಭಾರತದ ಹಲವು ರಾಜಮನೆತನಗಳು ಬ್ರಿಟಿಷರ ಪರ ಸಹಕರಿಸಿದ್ದು ಅವರಲ್ಲಿ ಸಿಂಧಿಯ, ಹೋಳ್ಕರ್, ನಿಜಾಂ ಮತ್ತು ರಜಪೂತ ನಾಯಕರು ಮುಖ್ಯರಾಗಿದ್ದರು.

ಇಲ್ಲಿ ನಾಯಕರು ಸ್ವಾತಂತ್ರ್ಯದ ಉದ್ದೇಶವನ್ನಿಟ್ಟುಕೊಂಡು ಹೋರಾಡಿದವರಾಗಿರಲಿಲ್ಲ. ಸಂಪತ್ತಿನ ವ್ಯಾಮೋಹಕ್ಕಾಗಿ ಸ್ವಾರ್ಥ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಿದರೇ ವಿನಃ, ಸ್ವಾತಂತ್ರ್ಯ ಸಾಧಿಸುವ ಮನೋಭಾವದಿಂದಲ್ಲ. ಭಾರತೀಯ ಹೋರಾಟಗಾರರಿಗೆ ಸಂಪನ್ಮೂಲ ಗಳ ಮತ್ತು ಶಸ್ತ್ರಾಸ್ತ್ರಗಳ ಕೊರತೆಯಿತ್ತು.

ಬ್ರಿಟಿಷರ ಬಳಿಯಿದ್ದ ಉತ್ತಮ ನಿಸ್ವಾರ್ಥ ಸೇನಾನಾಯಕರು, ಅಲ್ಲದೆ ಸಾಕಷ್ಟು ಮದ್ದುಗುಂಡು, ಶಸ್ತ್ರಾಸ್ತ್ರಗಳ ಸರಬರಾಜು ಉತ್ತಮದಾಗಿದ್ದರಿಂದ ಅವರು ಮೇಲುಗೈ ಸಾಧಿಸಿದರು.

ನಮ್ಮಲ್ಲಿನ ಕೆಲ ಭಾರತೀಯರು (ವಿದ್ಯಾವಂತರು) ಮೂಢನಂಬಿಕೆ ಮತ್ತು ಸಂಪ್ರದಾಯ ಗಳನ್ನು ತೆಗೆದುಹಾಕಲು ದಂಗೆಕಾರರಿಗೆ ಬೆಂಬಲಿಸದೇ ಹೋದರು. ಬ್ರಿಟಿಷರಿಗೆ ಒಲಿದ ಸಂದರ್ಭದ ಅದೃಷ್ಟ, ಅಂತರರಾಷ್ಟ್ರೀಯ ಬಿಕ್ಕಟ್ಟುಗಳಿಂದ ಮುಖ್ಯವಾಗಿ ಕ್ರಿಮಿಯಾ ಮತ್ತು ಚೀನಾ ಯುದ್ಧಗಳು ಆಗ ತಾನೆ ಮುಕ್ತಾಯಗೊಂಡಿದ್ದರಿಂದ ಅಲ್ಲಿಂದ ಹಿಂತಿರುಗಿದ ಬ್ರಿಟಿಷ್ ಸೇನೆ ಸಂಪೂರ್ಣವಾಗಿ ಈ ದಂಗೆಯನ್ನು ಹತ್ತಿಕ್ಕಲು ಬಳಸಲ್ಪಟ್ಟಿದ್ದರಿಂದ ಮೇಲುಗೈ ಸಾಧಿಸುವಂತಾಯಿತು.

ಬ್ರಿಟಿಷರು ಆ ವೇಳೆಗೆ ಸಂಪೂರ್ಣ ಕಡಲ ಪಕಸ್ವಾಮ್ಯ ಸಾಧಿಸಿದ್ದರಿಂದಲೂ, ಅಂಚೆ ಮತ್ತು ತಂತಿ ಸಂಪರ್ಕ ಸುಗಮಗೊಂಡಿದ್ದರಿಂದ ಸೇನಾ ಕಾರ್ಯಾಚರಣೆ ಸುಲಭಗೊಂಡಿದ್ದ ರಿಂದಲೂ ಅವರು ಮೇಲುಗೈ ಪಡೆದರು.

ದಂಗೆಕೋರರು ಮಾಡಿದ ಒಂದು ಪ್ರಮಾದವೆಂದರೆ ಇಲ್ಲಿನ ಬಹುಸಂಖ್ಯಾತ ರೈತರ ಬೆಂಬಲಗಳಿಸದಿದ್ದುದು, ಹೀಗಾಗಿ ಅವರ ದಂಗೆ ಯಶಸ್ವಿಯಾಗಲು ಸಾಧ್ಯವಾಗದಾಯಿತು.

ದಂಗೆಯ ಪರಿಣಾಮ ಹಾಗೂ ಮಹತ್ವ

೧. ಈ ದಂಗೆಯ ಪರಿಣಾಮವಾಗಿ ಭಾರತೀಯ ಆಡಳಿತದಲ್ಲಿ ಕೆಲವು ಮೂಲಭೂತ ಬದಲಾವಣೆಗೆ ಕಾರಣವಾಯಿತು. ಬಹುಕಾಲದ 'ಈಸ್ಟ್ ಇಂಡಿಯಾ ಕಂಪನಿ'ಯ ಆಡಳಿತ ಕೊನೆಗೊಂಡು, ಬ್ರಿಟಿಷ್ ರಾಣಿಯ ನೇರ ಆಳ್ವಿಕೆಗೆ ಒಳಪಟ್ಟಿತು.

೨. ಸೈನಿಕ ಇಲಾಖೆಯಲ್ಲಿ ಅನೇಕ ಮಾರ್ಪಾಡುಗಳನ್ನು ತಂದು ಬ್ರಿಟಿಷ್-ಭಾರತೀಯ ಸೇನೆಗಳ ನಡುವೆ ೨:೧ ರಂತೆ ನಿಯಂತ್ರಿಸಲಾಯಿತು.

೩. ಈ ದಂಗೆಯು ದೇಶಿಯ ಸಂಸ್ಥಾನಗಳ ಮತ್ತು ಬ್ರಿಟಿಷ್ ಸರ್ಕಾರದ ನಡುವೆ ಸೌಹಾರ್ದಯುತ ಬದಲಾವಣೆ ತಂದು ವಿಸ್ತರಣಾ ನೀತಿ ಕೈ ಬಿಡಲಾಯಿತು. ದತ್ತಾಧಿಕಾರ ನೀತಿಯನ್ನು ಪಾಲಿಸಲು ಆಶ್ವಾಸನೆ ನೀಡಲಾಯಿತು. ಮುಸ್ಲಿಮರೊಂದಿಗೆ ಕ್ರೂರ ನೀತಿ ಅನುಸರಿಸುವುದರ ಮೂಲ ಮರಣ ದಂಡನೆ ಮತ್ತು ಹಕ್ಕು ಮಾನ್ಯತೆಗಳ ಹಿಂಪಡೆತಗಳಿಂದ, ಮುಸಲ್ಮಾನರು ಹಿಂದುಳಿಯುವಂತಾಯಿತು.

೪. ಈ ದಂಗೆಯು ದೀರ್ಘಕಾಲದವರೆಗೆ ಪ್ರಭಾವ ಬೀರಿತು. **ಜೂಲಿಯಸ್ ಸೀಸರ್** ಬದುಕಿದ್ದಾಗಿಂತಲೂ ಸತ್ತ ನಂತರ ಹೆಚ್ಚು ಶಕ್ತಿಶಾಲಿಯಾಗಿದ್ದ. ಹಾಗೆಯೇ ಈ ಘಟನೆಯೂ, ದಂಗೆಯ ಮೂಲಭೂತ ಸ್ವರೂಪ ಏನೇ ಆದರೂ, ಬ್ರಿಟಿಷರ ಚಕ್ರಾಧಿಪತ್ಯಕ್ಕೆ ಅದು ಒಂದು ಸವಾಲಿನ ಸಂಕೇತವಾಯಿತು.

೫. ಭಾರತೀಯರಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಲು **ರಾಷ್ಟ್ರೀಯತೆಯ** ಉಗಮಕ್ಕೆ ಪ್ರೇರಕವಾಯಿತು. ಇದು ಬ್ರಿಟಿಷರ ವಿರುದ್ಧದ ಭಾರತೀಯರ ಮೊದಲ ಸ್ವಾತಂತ್ರ್ಯ ಹೋರಾಟವೆಂಬ ಶ್ರೇಯಸ್ಸು ಪಡೆದಿದೆ. ಇದೊಂದು ಭಾರತೀಯರ ರಾಷ್ಟ್ರೀಯ ಬಂಡಾಯವಾಗಿದ್ದೂ **ನಾನಾಸಾಹೇಬ, ಲಕ್ಷ್ಮಿಬಾಯಿ** ಮತ್ತು ಇತರರು ಬ್ರಿಟಿಷರ ವಿರುದ್ಧದ ರಾಷ್ಟ್ರೀಯ ಹೋರಾಟಕ್ಕೆ ಮೊದಲ ನಾಯಕರಾದರು. ನಂತರದ ೫೦ ವರ್ಷಗಳವರೆಗೂ ಭಾರತೀಯರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಸಕಲ ಸಿದ್ಧತೆಗಳೊಂದಿಗೆ ಸಕ್ರಿಯವಾಗಿ ಹೋರಾಡಲು ೧೮೫೭ ರ ದಂಗೆ ಪ್ರೇರಣೆಯಾಯಿತು. ಬ್ರಿಟಿಷ್ ಪ್ರಭುತ್ವದ ವಿರುದ್ಧ ಎದ್ದ ಮೊದಲ ಕಿಡಿ ಈ ಘಟನೆ ಎನ್ನಬಹುದು.

೬. ಬ್ರಿಟಿಷರು ಈ ದಂಗೆಯಿಂದ ಭಾರತದಲ್ಲಿ ಅವರ ಸಂಬಂಧವನ್ನು ಹೊಸದಾಗಿ ಗುರುತಿಸಲು ಸಾಧ್ಯವಾಯಿತು. ಭಾರತೀಯರಲ್ಲಿ ಅಡಗಿದ ಸಾಂಪ್ರದಾಯಿಕ ಶಕ್ತಿಯನ್ನು ಗುರುತಿಸಿದರು. ಬ್ರಿಟಿಷರ ಆತ್ಮವಿಶ್ವಾಸ ಸ್ವಲ್ಪ ಕುಗ್ಗಿತು ಮತ್ತು ಭಾರತೀಯರ ಬಗ್ಗೆ ಎಚ್ಚರಿಕೆಯ ನೀತಿಯನ್ನು ಅನುಸರಿಸಲಾರಂಭಿಸಿದರು.

೭. ಈ ಘಟನೆಯಿಂದ ಭಾರತೀಯರು ಕೂಡ ಪಾಠ ಕಲಿಯುವಂತಾಯಿತು. ಶಸ್ತ್ರಾಸ್ತ್ರ ವಿಧಾನದ ಮೂಲಕ, ಹಿಂಸೆಯ ಮೂಲಕ ಸ್ವಾತಂತ್ರ್ಯ ಸಾಧಿಸುವುದು ಅಸಾಧ್ಯವೆಂದು ಅರಿವಾಯಿತು. ರೈತರು ಮತ್ತು ಎಲ್ಲ ವರ್ಗದವರ ಸಹಾಯ ಸಹಕಾರವಿಲ್ಲದೆ ಸ್ವಾತಂತ್ರ್ಯ

ಗಳಿಸಲಾಗುವುದಿಲ್ಲವೆಂಬ ತಿಳುವಳಿಕೆ ಮೂಡಿತು. ಈ ಘಟನೆಯಿಂದ ಒಂದು ಅಂಶ ಸ್ಪಷ್ಟವಾಯಿತು. ಅದೇನೆಂದರೆ ಭಾರತೀಯ ಸೇನೆಯಲ್ಲಿ ದೇಶಭಕ್ತಿಯ ಮನೋಭಾವವಿದೆ ಎಂದು ಎಲ್ಲೆಡೆ ಸ್ಪಷ್ಟವಾಯಿತು. ದಂಗೆಯನ್ನು ಬ್ರಿಟಿಷರು ಹತ್ತಿಕ್ಕಿದ ರೀತಿಯಿಂದ ಮುಂದೆ ರಾಷ್ಟ್ರೀಯತೆ ಹೆಚ್ಚಾಗಲು ಕಾರಣವಾಯಿತು.

೮. ಜೊತೆಗೆ **ಭಾರತೀಯ ರಾಷ್ಟ್ರೀಯ ಕಾಂಗ್ರೆಸ್** ೧೮೮೫ ರಲ್ಲಿ ಸ್ಥಾಪನೆಯಾಗಲು ಸಹಕಾರಿಯಾಯಿತು. ಭಾರತೀಯರು ಪ್ರಾರಂಭಿಸಿದ ಸಂಸ್ಥೆಗಳು ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕ ಸುಧಾರಣೆಗೆ ನೆರವಾಗಲು ಇದು ಪ್ರೇರೇಪಿಸಿತು.

೪.೪ ಭಾರತದ ಆರ್ಥಿಕತೆ ಹಾಗೂ ಶಿಕ್ಷಣ ವ್ಯವಸ್ಥೆಯ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವ

ಹಿನ್ನೆಲೆ

೧೭೫೭ ಕ್ಕಿಂತ ಮುಂಚೆ ನಗರ ಆರ್ಥಿಕ ವ್ಯವಸ್ಥೆಯಲ್ಲಿ ಭಾರತ ಪ್ರಗತಿಯನ್ನು ಹೊಂದಿದ್ದರೂ ಕೂಡ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಸ್ವಯಂ ಪರಿಪೂರ್ಣತೆಯ ಲಕ್ಷಣ ಗಳನ್ನು ಸೀಮಿತವಾದ ರೀತಿಯಲ್ಲಿ ಹೊಂದಿದುದಾಗಿತ್ತು. ಭಾರತದ ಗ್ರಾಮೀಣ ಭಾಗವನ್ನು ಪ್ರತಿನಿಧಿಸಿದ್ದ ಹಳ್ಳಿಗಳಲ್ಲಿ ಸ್ವಯಂ ಗ್ರಾಮಾಡಳಿತ ವ್ಯವಸ್ಥೆ ಜಾರಿಯಲ್ಲಿದ್ದು, ಅವುಗಳಲ್ಲಿ ಹಳ್ಳಿಗಳ ಹೆಚ್ಚಿನ ಅವಶ್ಯಕತೆಯನ್ನು ಅವೇ ಪೂರೈಸುತ್ತಿದ್ದವು. ಆದರೆ ಕೆಲ ವಿಷಯಗಳಲ್ಲಿ ಹೊರ ಸಂಪರ್ಕವನ್ನು ರೂಢಿಸಿಕೊಂಡಿದ್ದವು. ರೈತರೇ ಗ್ರಾಮೀಣ ವ್ಯವಸ್ಥೆಯಲ್ಲಿ ಬಹು ಸಂಖ್ಯಾತರಾಗಿದ್ದರು. ರೈತನು ಕೇವಲ ಕೃಷಿಕನಾಗಿರದೆ, ಕರಕುಶಲಗಾರನೂ ಆಗಿದ್ದನು. ಆದ್ದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ವಿಶೇಷ ನೈಪುಣ್ಯತೆ ಮತ್ತು ಶ್ರಮವಿಭಜನೆ ಎಂಬುದಿರಲಿಲ್ಲ. ರೈತ ಗ್ರಾಮ ಪಂಚಾಯಿತಿ ನೀಡಿದ ಭೂಮಿಯಲ್ಲೇ ಉಳುಮೆ ಮಾಡುತ್ತಿದ್ದು, ಖಾಸಗೀ ಆಸ್ತಿಯ ಹಕ್ಕು ಎಂಬುದು ಸ್ಪಷ್ಟವಾಗಿರಲಿಲ್ಲ. ಸಮುದಾಯದ ಒಡೆತನ ಇತ್ತು. ಗ್ರಾಮ ಪಂಚಾಯಿತಿಗಳು ಹಳ್ಳಿಗಳ ಯಾವುದೇ ವಿವಾದಗಳನ್ನು ಇತ್ಯರ್ಥ ಪಡಿಸುತ್ತಿದ್ದವು. ಹಳ್ಳಿಗಳಲ್ಲಿ ಸಾರಿಗೆ ಸಂಪರ್ಕ ಉತ್ತಮವಾಗಿರಲಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳು ಗತಿರಹಿತವಾಗಿತ್ತು. ಈ ಕಾರಣದಿಂದ ಅವರಲ್ಲಿ ಸ್ಪರ್ಧಾತ್ಮಕತೆ ಇರಲಿಲ್ಲ. ಆದ್ದರಿಂದ ಅವರು ಪ್ರಗತಿಪರರಾಗುವಂಥ ಯಾವುದೇ ಅಂಶಗಳನ್ನು ಹೊಂದಿದವ ರಾಗಿರಲಿಲ್ಲ. ಅದರಲ್ಲೂ ಕರಕುಶಲಕರ್ಮಿಗಳು ತಯಾರಿಸುವ ವಸ್ತುಗಳನ್ನು ಉತ್ತಮಗೊಳಿಸು ವಂಥ ಮನೋಭಾವ ಬೆಳೆಯಲಿಲ್ಲ. ನಗರಗಳಲ್ಲಿ ಕೈಗಾರಿಕೆಗಳು ನಗರದ ಆರ್ಥಿಕ ವ್ಯವಸ್ಥೆ ಯಲ್ಲಿ ಉತ್ತಮ ಸ್ಥಾನ ಹೊಂದಿದ್ದು ಅವರು ತಯಾರಿಸುತ್ತಿದ್ದ ವಸ್ತುಗಳ ಗುಣಮಟ್ಟವು ಹೆಚ್ಚಿದ್ದು ಕೈಗಾರಿಕ ಕರ್ಮಿಗಳೂ ತಯಾರಿಸುತ್ತಿದ್ದ ವಸ್ತುಗಳು ವಿಶ್ವಖ್ಯಾತಿಗಳಿಸಿದ್ದವು. ಇಂಗ್ಲೆಂಡ್‌ನಲ್ಲೂ ಕೂಡ ಅವು ಬಹುಬೇಡಿಕೆ ಹೊಂದಿದವು. ಜವಳಿ ಉದ್ಯಮದ ಪ್ರಮುಖ ಕೇಂದ್ರಗಳಾದ **ಡಾಕಾ, ಸೂರತ್, ಭ್ರೋಚ್, ಅಹಮದಾಬಾದ್, ಮಥುರಾ, ಲಾಹೋರ್, ಆಗ್ರಾ, ಮುಲ್ತಾನ್, ಬನಾರಸ್** ಮತ್ತು **ಮಚಲೀಪಟ್ಟಣ**ಗಳು ಪ್ರಸಿದ್ಧಿ ಪಡೆದಿದ್ದವು.

ಲೋಹ ಉದ್ದಿಮೆಗಳಾದ ಕಬ್ಬಿಣ ಮತ್ತು ಉಕ್ಕು, ತಾಮ್ರ, ಕಂಚು, ಚಿನ್ನ, ಬೆಳ್ಳಿಗಳೂ ಇದಲ್ಲದೆ ಹಡಗು ನಿರ್ಮಾಣ ಕೈಗಾರಿಕೆಗಳೂ ಪ್ರಸಿದ್ಧವಾದವುಗಳಾಗಿದ್ದವು. ಪ್ರಮುಖವಾಗಿ **ಗೋವಾ, ಬೆಸೀನ್, ಸೂರತ್, ಚಿತ್ತಗಾಂಗ್** ಮತ್ತು **ಮಚಲೀಪಟ್ಟಣ**ಗಳನ್ನು ಗುರುತಿಸ ಬಹುದು. ಈ ಎಲ್ಲ ವ್ಯಾಪಾರಗಳಿಗೆ ಅನುಕೂಲವಾಗಲು ಭಾರತದಲ್ಲಿ ಒಳ್ಳೆಯ ಬ್ಯಾಂಕಿಂಗ್ ವ್ಯವಸ್ಥೆಯೂ ಇತ್ತು.

ಇಂಥ ಪರಿಸ್ಥಿತಿಯು ೧೭೫೭ ರಲ್ಲಿ ಬ್ರಿಟಿಷ್ ಸಾಮ್ರಾಜ್ಯ ಪ್ಲಾಸಿ ಕದನದ ವಿಜಯದೊಂದಿಗೆ ಅಸ್ತಿತ್ವಕ್ಕೆ ಬಂದಿತು.

ಬ್ರಿಟಿಷರ ವ್ಯಾಪಾರ-ವಾಣಿಜ್ಯ ಪದ್ಧತಿ (೧೭೫೭ ರಿಂದ ೧೮೦೦)

ವ್ಯಾಪಾರ-ವಾಣಿಜ್ಯದ ಉದ್ದೇಶ : ಭಾರತದಲ್ಲಿ ಹೆಚ್ಚು ದೊರೆಯುತ್ತಿದ್ದ ವಸ್ತುಗಳನ್ನು ಯೂರೋಪ್‌ನಲ್ಲಿ ಅಭಾವವಿದ್ದ ವಸ್ತುಗಳಿಗಾಗಿ ಅಲ್ಲಿಗೆ ಸಾಗಿಸಿ ಹೆಚ್ಚು ಲಾಭ ಗಳಿಸುವ ನೀತಿ ಇದಾಗಿತ್ತು. ಇದರಿಂದ ಪ್ರಾರಂಭದಲ್ಲಿ ಬ್ರಿಟಿಷರ ಆಡಳಿತವಿದ್ದರೂ ಕೂಡ ವ್ಯಾಪಾರ-ವಾಣಿಜ್ಯದಲ್ಲಿ ಅಂತಹ ಭಾರಿ ವ್ಯತ್ಯಾಸವೇನು ಕಂಡುಬರಲಿಲ್ಲ.

೧೯ನೆಯ ಶತಮಾನದ ಪ್ರಾರಂಭದವರೆಗೂ ಕೂಡ ಭಾರತದ ಅರ್ಥವ್ಯವಸ್ಥೆಯಲ್ಲಿ ನಗರ ಕೈಗಾರಿಕೆಗಳು ಉತ್ತಮ ಸ್ಥಾನದಲ್ಲೇ ಮುಂದುವರೆದವು. ಆದರೆ ೧೮೦೦ ರ ನಂತರ ಕೈಗಾರಿಕೆಗಳು ಅವನತಿ ಹೊಂದಲು ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆ ಮತ್ತು ದೇಶೀಯ ಸಂಸ್ಥಾನಗಳ ಅವನತಿಯಿಂದ ಕರಕುಶಲಕರ್ಮಿಗಳು ಪ್ರೋತ್ಸಾಹ ಕಳೆದುಕೊಂಡದ್ದು ಪ್ರಮುಖವಾದುದು. ಇದಕ್ಕೂ ಬಹುಮುಖ್ಯ ಕಾರಣ ಬ್ರಿಟಿಷರು ಭಾರತದ ಮೇಲೆ ಪಡೆದುಕೊಂಡ ರಾಜಕೀಯ ಹಿಡಿತ ಮತ್ತು ಇಂಗ್ಲೆಂಡ್‌ನಲ್ಲಿ ಜರುಗಿದ ಕೈಗಾರಿಕಾ ಕ್ರಾಂತಿಯ ಪ್ರಭಾವ. ಕೈಗಾರಿಕಾ ಕ್ರಾಂತಿಯ ಪ್ರಭಾವದಿಂದ ಬೃಹತ್ ಉತ್ಪಾದನೆ ಸಾಧ್ಯವಾದುದರಿಂದ ಇಂಗ್ಲೆಂಡ್‌ಗೆ ಹೆಚ್ಚಿನ ಕಚ್ಚಾ ವಸ್ತುಗಳ ಅವಶ್ಯಕತೆ ಉಂಟಾಯಿತು. ಮೇಲಾಗಿ ಭಾರತೀಯರಿಂದ ತಯಾರಾದಂಥ ವಸ್ತುಗಳ ಮಾರಾಟವನ್ನು ಬ್ರಿಟನ್‌ನಲ್ಲಿ ವಿರೋಧಿಸುತ್ತಿದ್ದರಿಂದ ಮ್ಯಾಂಚೆಸ್ಟರ್ ಮತ್ತು ಲ್ಯಾಂಕಶೈರ್ ಉದ್ಯಮಿಗಳು ಬ್ರಿಟನ್ ಸರ್ಕಾರದ ಮೇಲೆ ಒತ್ತಡ ತರಲು ಕಾರಣರಾದರು. ಬ್ರಿಟನ್ ಸರ್ಕಾರ ಕಂಪನಿಗೆ ಭಾರತದಿಂದ ಕಚ್ಚಾವಸ್ತುಗಳ ರಫ್ತು ಮಾಡಿ ಮತ್ತು ಬ್ರಿಟನ್‌ನಲ್ಲಿ ತಯಾರಾದ ವಸ್ತುಗಳನ್ನು ಭಾರತದಲ್ಲಿ ಮಾರಾಟಕ್ಕಾಗಿಯೂ ಒತ್ತಾಯ ಹೇರಿತು. ಈ ರೀತಿ ಯುಕ್ತಿಯಿಂದ ನಿರ್ವಹಿಸಿದ ವ್ಯಾಪಾರ ನೀತಿಯಿಂದ ಭಾರತವನ್ನು ಬ್ರಿಟಿಷರಿಗೆ ಕಚ್ಚಾವಸ್ತು ಪೂರೈಕೆ ಮಾಡುವ ದೇಶವನ್ನಾಗಿ ಪರಿವರ್ತಿಸಿದಂತಾಯಿತು. ಬ್ರಿಟನ್‌ನಿಂದ ಭಾರತಕ್ಕೆ ಬಂದ ವಸ್ತುಗಳಿಗೆ ಹೆಚ್ಚಿನ ಸುಂಕವಿರಲಿಲ್ಲ. ಆದರೆ ಭಾರತದಿಂದ ಬ್ರಿಟನ್‌ಗೆ ರಫ್ತಾಗುವ ತಯಾರಾದ ವಸ್ತುಗಳಿಗೆ ಅಧಿಕ ಸುಂಕ ವಿಧಿಸಲಾಗುತ್ತಿತ್ತು. ಇದು ಬ್ರಿಟಿಷರು ಜಾರಿಗೊಳಿಸಿದ ವ್ಯಾಪಾರ ನೀತಿಯಾಗಿತ್ತು. ಆದ್ದರಿಂದ ಈ ವ್ಯಾಪಾರ-ವಾಣಿಜ್ಯ ನೀತಿಯಿಂದ ಭಾರತೀಯ ಕೈಗಾರಿಕೆಗಳು ನಾಶ ಹೊಂದುವಂತಾಯಿತು.

ಸಂಪತ್ತಿನ ಸೋರುವಿಕೆ

ಆಡಂಸ್ಮಿತ್‌ರವರು ಭಾರತದಿಂದ ಹೊರ ಹೋಗುತ್ತಿದ್ದ ವಸ್ತುಗಳ ಬಗ್ಗೆ 'ಕೋರ್ಟ್ ಆಫ್ ಪ್ರೊಪ್ರೈಟರ್ಸ್ ಭಾರತವನ್ನು ಲೂಟಿ ಮಾಡಲು ನೇಮಕಗೊಂಡ ಸಭೆ' ಎಂದಿರುವರು. ಈ ಲೂಟಿಯ ಬಗ್ಗೆ ಮುಂದೆ ಭಾರತದಿಂದ ಇಂಗ್ಲೆಂಡ್‌ಗೆ **ಸಂಪತ್ತಿನ ಸೋರುವಿಕೆ** ಎಂದು **ದಾದಾಭಾಯಿ ನವರೋಜಿ** ಪ್ರತಿಪಾದಿಸಿದರು. ಸಂಪತ್ತಿನ ಸೋರುವಿಕೆಯ ಬಗ್ಗೆ

ಭಾರತೀಯರಲ್ಲಿ ಅರಿವನ್ನು ಮೂಡಿಸಿದವರಲ್ಲಿ ಇವರು ಮೊದಲನೆಯವರಾಗಿದ್ದರು. ಅವರ ಕೃತಿ ಪಾವರ್ಟಿ ಅಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ ಅದರಲ್ಲಿ ಅವರು ಸಂಪತ್ತಿನ ಸೋರುವಿಕೆಯ ವಿಧಾನ, ಪ್ರಮಾಣ, ಪರಿಣಾಮ ಮತ್ತು ಪರಿಹಾರಗಳನ್ನು ಸೂಚಿಸಿದ್ದಾರೆ.

ಸಂಪತ್ತಿನ ಸೋರುವಿಕೆಯ ವಿಧಾನಗಳು ಹಲವಾರು. ೧೯ನೆ ಶತಮಾನದ ಮಧ್ಯಭಾಗದ ವರೆವಿಗೂ ಸೋರುವಿಕೆ ಕಾಣುವ ರೀತಿಯಲ್ಲಿತ್ತು. ಇದು ಭಾರತೀಯ ದೇಶಿಯ ಸಂಸ್ಥಾನದ ರಾಜರು ಕಂಪನಿಗೆ ಸಲ್ಲಿಸುತ್ತಿದ್ದ ಕಪ್ಪ ಎಂದು ಹೇಳಬಹುದು. ಆದರೆ ೧೮೫೭ ರ ನಂತರ ಈ ಸೋರುವಿಕೆ ಕಾಣಿಸುವಂತಹುದಾಗಿರಲಿಲ್ಲ. ಇದೂ ಬ್ರಿಟಿಷರ ರಾಜಕೀಯ ಸಾರ್ವಭೌಮತ್ವದಿಂದ ವ್ಯಾಪಾರ ಜಕಾತಿನೀತಿಯನ್ನು ಹಿಡಿತಗೊಳಿಸಿಕೊಂಡಿದ್ದರಿಂದ ಸೋರುವಿಕೆ ನಿರಾತಂಕವಾಗಲು ಸಾಧ್ಯವಾಯಿತು.

ಸಂಪತ್ತಿನ ಸೋರುವಿಕೆಯ ವಿಧಾನಗಳು

೧. ಆಮದು ಕಡಿಮೆ ಇದ್ದು ರಫ್ತು ಹೆಚ್ಚಾಗಿದ್ದರೂ ಕೂಡ ಪ್ರತಿಫಲ ದೊರೆಯಲಿಲ್ಲ.
೨. ಹೋಂಚಾರ್ಜ್, ಅಂದರೆ ಭಾರತದ ಪರವಾಗಿ ಇಂಗ್ಲೆಂಡ್ ಮಾಡಿದಂಥ ವೆಚ್ಚಗಳು. ಎಲ್ಲ ಬ್ರಿಟಿಷ್ ಅಧಿಕಾರಿಗಳ ವೇತನವನ್ನು ಭಾರತದ ಬೊಕ್ಕಸದಿಂದಲೇ ನೀಡುತ್ತಿದ್ದುದು. ಇದರಿಂದ ಭಾರತೀಯರ ಮೇಲೆ ಹೆಚ್ಚಿನ ತೆರಿಗೆ ಹೊರೆ ಬಿತ್ತು. ಇಂಗ್ಲೆಂಡಿನಲ್ಲಿ ಶೇ. ೬ ರಷ್ಟು ತೆರಿಗೆ ಇದ್ದರೆ ಭಾರತೀಯರು ಶೇ. ೧೪.೯ ರಷ್ಟು ಕಟ್ಟುತ್ತಿದ್ದರು.
೩. ವಿದೇಶಿ ಬಂಡವಾಳದ ಮೇಲೆ ನೀಡುತ್ತಿದ್ದ ಬಡ್ಡಿ, ರೈಲ್ವೆ ಮತ್ತು ನೀರಾವರಿ ಯೋಜನೆಗಳಿಗೆ ಬಳಸಿಕೊಂಡ ವಿದೇಶಿ ಬಂಡವಾಳ ಇದಾಗಿತ್ತು.
೪. ಬ್ಯಾಂಕಿಂಗ್, ಶಿಪ್ಪಿಂಗ್ ಮತ್ತು ವಿಮಾ ವೆಚ್ಚಗಳು

ಕೆಲ ಚಿಂತಕರು ಈ ಸೋರುವಿಕೆಯ ಪ್ರಮಾಣದ ಅಂದಾಜನ್ನು ಅಂಕಿ-ಅಂಶಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ನವರೋಜಿ ಪ್ರಕಾರ ೧೯೦೫ ರಲ್ಲಿ ಸೋರುವಿಕೆ ೫೧.೫ ಕೋಟಿ ರೂ. ದಿನ್‌ಷಾ ವಾಚ್ಚ ಪ್ರಕಾರ ೧೯೦೧ ರಲ್ಲಿ ರೂ. ೩೦-೪೦ ಕೋಟಿ ಪ್ರತಿ ವರ್ಷ.

ಸಂಪತ್ತಿನ ಸೋರುವಿಕೆಯಿಂದಾದ ಪರಿಣಾಮಗಳು

ನವರೋಜಿಯವರು ವಿವರಿಸಿರುವ ಸೋರುವಿಕೆಯಿಂದ ಭಾರತದ ಬಡತನಕ್ಕೆ ಕಾರಣ ವಾಯಿತೆಂದು ಹೇಳಿದ್ದಾರೆ. ವಿಲಿಯಂ ಡಿಗ್ಬಿಯವರೂ ಕೂಡ ಇದನ್ನೇ ಅನುಮೋದಿಸಿದ್ದಾರೆ. ಭಾರತದ ಸಂಪತ್ತಿನ ಸೋರುವಿಕೆಯಿಂದ ಭಾರತದಲ್ಲಿ ಯಾವುದೇ ರೀತಿಯಾದ ಉಳಿತಾಯ ವಾಗಲಿಲ್ಲ. ಉಳಿತಾಯವಿಲ್ಲದೆ ಬಂಡವಾಳದ ಕ್ರೋಢೀಕರಣ ಸಾಧ್ಯವಾಗದಿದ್ದರಿಂದ ಆಧುನಿಕ ಕೈಗಾರಿಕೆಗಳು ಸ್ಥಾಪಿತವಾಗಲಿಲ್ಲ. ಆದ್ದರಿಂದ ಕೈಗಾರಿಕೀಕರಣವಾಯಿತು. ಸೋರುವಿಕೆ

ನಿವಾರಣೆಗಾಗಿ ನವರೋಜಿಯವರು ಸೂಚಿಸಿದ ಪರಿಹಾರಗಳಲ್ಲಿ ಆಡಳಿತದಲ್ಲಿ ಭಾರತೀಯರನ್ನೇ ಹೆಚ್ಚು ನೇಮಕ ಮಾಡುವುದು ಮತ್ತು ಸೈನ್ಯದ ವೆಚ್ಚ ತಗ್ಗಿಸುವುದು ಪ್ರಧಾನವಾದುದು.

ಇವರ ನಂತರ ಬಂದ ರಾಷ್ಟ್ರೀಯವಾದಿಗಳು 'ಸ್ವದೇಶಿ'ಗೆ ಪ್ರೋತ್ಸಾಹಿಸುವುದರ ಮೂಲಕ ಮತ್ತು ವಿದೇಶಿ ಬಹಿಷ್ಕಾರವನ್ನು ಪರಿಹಾರವಾಗಿ ಸೂಚಿಸಿದರು.

ಭೂ ಕಂದಾಯದ ನೀತಿ

ಬ್ರಿಟಿಷ್ ಆಡಳಿತದಲ್ಲಿ ಭಾರತದ ಕೃಷಿಯ ಮೇಲೆ ಗಮನಾರ್ಹ ಪ್ರಭಾವ ಉಂಟಾಯಿತು. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಬ್ರಿಟಿಷರು ಜಾರಿಗೆ ತಂದ ಭೂ ಕಂದಾಯ ಪದ್ಧತಿ ಪ್ರಭಾವ ಬೀರಿತು. ಗ್ರಾಮ ಸಮುದಾಯವು ಭೂ ಕಂದಾಯ ವ್ಯವಸ್ಥೆಯಲ್ಲಿ ಬಹು ಹಿಂದಿನಿಂದಲೂ ಪ್ರಮುಖ ಪಾತ್ರವಹಿಸಿತ್ತು. ಖಾಸಗಿ ಆಸ್ತಿಯ ಹಕ್ಕು ಎಂಬುದಿರಲಿಲ್ಲ. ಗ್ರಾಮದ ಮುಖ್ಯಸ್ಥ ಭೂ ಕಂದಾಯ ವಸೂಲಿಗಾರನಾಗಿದ್ದನು. ಉತ್ಪಾದನೆಯಲ್ಲಿ ೧/೬ ಭಾಗದಿಂದ ೧/೩ ಭಾಗದವರೆಗೆ ವಸೂಲಿ ಮಾಡಲಾಗುತ್ತಿತ್ತು. ಭೂ ಕಂದಾಯ ಬಹು ಹಿಂದಿನಿಂದಲೂ ಸರ್ಕಾರದ ಬಹು ಮುಖ್ಯ ಆದಾಯದ ಮೂಲವಾಗಿತ್ತು. ಆದ್ದರಿಂದ ಬ್ರಿಟಿಷ್ ಆಡಳಿತಾವಧಿಯಲ್ಲಿ ಕೂಡ ಭೂ ಕಂದಾಯ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ೧೭೬೫ ರಲ್ಲಿ ಈಸ್ಟ್ ಇಂಡಿಯಾ ಕಂಪನಿ 'ದಿವಾನಿ ಹಕ್ಕ'ನ್ನು ಪಡೆದುಕೊಂಡಿದ್ದರಿಂದ **ಬಿಹಾರ, ಬಂಗಾಳ,** ಒರಿಸ್ಸಾಗಳಲ್ಲಿನ ಭೂ ಕಂದಾಯ ವಸೂಲಿಯ ಹಕ್ಕನ್ನು ಪಡೆದುಕೊಂಡರು. ಆದರೆ, ಅವರಿಗೆ ಭಾರತದಲ್ಲಿದ್ದ ಭೂ ಕಂದಾಯ ಪದ್ಧತಿಯ ಬಗ್ಗೆ ಏನೂ ಅರಿವಿರಲಿಲ್ಲ. ಅವರಿಗೆ ಒಂದು ತರಹದ ಗೊಂದಲವುಂಟಾಯಿತು. ಆದ್ದರಿಂದ ಅವರು ಮೊಘಲ್ ಕಾಲದ ಭೂ ಕಂದಾಯ ವ್ಯವಸ್ಥೆಯನ್ನು ಮುಂದುವರಿಸಲು ನಿರ್ಧರಿಸಿದರು. ಆ ವೇಳೆಗೆ ಇದ್ದಂಥ ಪದ್ಧತಿ ಎಂದರೆ ಭೂ ಕಂದಾಯ ವಸೂಲಿಯನ್ನು ಹರಾಜು ಮೂಲಕ ಹಂಚಲಾಗುತ್ತಿದ್ದುದು. ರೈತರು ಇದರಿಂದ ತುಂಬಾ ಶೋಷಿತರಾಗಿ ನಷ್ಟ ಹೊಂದುವಂತಾದರು. ಹೆಚ್ಚು ಕಂದಾಯ ಸಲ್ಲಿಸಲಾಗದ ರೈತರು ಉಳುಮೆಯನ್ನು ನಿಲ್ಲಿಸುವಂತಾಯಿತು. ಇದರಿಂದಾಗಿ ಕ್ಷಾಮಗಳು ತಲೆದೋರಿದವು. ಆದ್ದರಿಂದ ಹೊಸದಾದ ಭೂ ಕಂದಾಯ ಪದ್ಧತಿಯ ಅವಶ್ಯಕತೆ ಉಂಟಾಯಿತು. ಈ ದಿಸೆಯಲ್ಲಿ **ವಾರನ್‌ಹೇಸ್ಟಿಂಗ್ಸ್** ಪ್ರಥಮವಾಗಿ ಭೂ ಕಂದಾಯ ನೀತಿಯಲ್ಲಿ ಪ್ರಯೋಗ ನಡೆಸಿದವನಾಗಿದ್ದನು. ಇವನ ನಂತರ **ಕಾರ್ನ್‌ವಾಲೀಸ್** ಬಂಗಾಳದಲ್ಲಿ 'ಖಾಯಂ ಜಮೀನ್ದಾರಿ ಪದ್ಧತಿ'ಯನ್ನು ೧೭೯೩ ರಲ್ಲಿ ಜಾರಿಗೆ ತಂದನು.

ಖಾಯಂ ಜಮೀನ್ದಾರಿ ಪದ್ಧತಿ

ಇದರ ಪ್ರಕಾರ ಎರಡು ಅಂಶಗಳೆಂದರೆ: ೧. ಮೊದಲು ಕೇವಲ ಕಂದಾಯ ವಸೂಲಿಗಾರರಾಗಿದ್ದ ಜಮೀನ್ದಾರರು ಭೂ ಮಾಲೀಕರಾದರು. ಜೊತೆಗೆ ಕಂದಾಯ ವಸೂಲಿ

ಮಾಡುವ ಅಧಿಕಾರವನ್ನು ಹೊಂದಿದರು. ಇದರಿಂದ ಮೊದಲು ಒಡೆಯನಾಗಿದ್ದ ರೈತ ಇನ್ನು ಮುಂದೆ ಗೇಣಿದಾರನಾಗುವಂತಾಯಿತು.

೨. ಭೂ ಕಂದಾಯ ನಿಗದಿತ ಅವಧಿಯವರೆಗೆ ಖಾಯಂಗೊಂಡಿತು. ಶೇ. ೯೦ ರಷ್ಟನ್ನು ಜಮೀನ್ದಾರರು ಸರ್ಕಾರಕ್ಕೆ ಒಪ್ಪಿಸುವುದು ಮತ್ತು ಉಳಿದ ಶೇ. ೧೦ ರಷ್ಟನ್ನು ಕಮೀಷನ್ ಆಗಿ ಜಮೀನ್ದಾರನೇ ಉಳಿಸಿಕೊಳ್ಳುವುದು.

ಬಂಗಾಳದಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೊಳಿಸಲು ಪ್ರಮುಖ ಕಾರಣವೆಂದರೆ ಅವರಿಗೆ ಮೊದಲು ಇಲ್ಲಿಯ ಭೂ ಕಂದಾಯ ವ್ಯವಸ್ಥೆಯ ಬಗ್ಗೆ ಅರಿವಿಲ್ಲದಿದ್ದುದು ಮತ್ತು ತರಬೇತಿ ಹೊಂದಿದ ವಸೂಲಿಗಾರರ ಕೊರತೆ.

ಹೊಸ ಪದ್ಧತಿಯನ್ನು ಜಾರಿಗೊಳಿಸುವುದರ ಮೂಲಕ ಭೂ ಅಭಿವೃದ್ಧಿಗೊಳಿಸಬಹುದು. ಇದರಿಂದ ಹೆಚ್ಚು ಕಂದಾಯ ವಸೂಲಿಯನ್ನು ಮಾಡಬಹುದೆಂಬ ಉದ್ದೇಶ ಅವರದಾಗಿತ್ತು. ಮೇಲಾಗಿ ಅವರ ಉದ್ದೇಶ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠಾವಂತರಾದ ಒಂದು ವರ್ಗವನ್ನು ಸೃಷ್ಟಿಸುವ ಅಭಿಲಾಷೆ ಅವರದಾಗಿತ್ತು.

ಬಂಗಾಳದ ಖಾಯಂ ಜಮೀನ್ದಾರಿ ಪದ್ಧತಿ ಅದರಲ್ಲೂ ಭೂ ಒಡೆತನದ ಬಗ್ಗೆ ತುಂಬಾ ಟೀಕೆಗಳು ಕೇಳಿಬಂದವು. ಅಲ್ಲದೆ ಶೋಷಣೆ ಹೆಚ್ಚಿತು. ಅನಾವಶ್ಯಕವಾಗಿ ಮಧ್ಯವರ್ತಿಗಳು ಪ್ರವೇಶಿಸುವಂತಾಯಿತು. ಬಂಗಾಳದ ನಂತರ ಬನಾರಸ್ ಮತ್ತು ಉತ್ತರದ ಸಿರ್ಕಾಗಳಿಗೂ (northern circars) ಈ ಪದ್ಧತಿ ವಿಸ್ತರಣೆಗೊಂಡಿತು. ಈ ಪದ್ಧತಿಯ ಬಗ್ಗೆ ಅನೇಕ ವಿರೋಧಗಳುಂಟಾದವು. ಗೇಣಿದಾರರ ರಕ್ಷಣೆಗಾಗಿ ಕಾಯಿದೆಯ ಮೂಲಕ ಪ್ರಯತ್ನಿಸಲಾಯಿತಾದರೂ ಯಾವುದೇ ಉಪಯೋಗವಾಗಲಿಲ್ಲ.

ಮಹಲ್‌ವಾರಿ ಪದ್ಧತಿ

ಆಗ್ರಾ, ಔದ್ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಗ್ರಾಮ ಒಡೆತನದ ಸಭೆಗಳಿದ್ದೂ ಸರ್ಕಾರ ಇವಕ್ಕೆ ಮಾನ್ಯತೆ ನೀಡಿದ್ದು, ಅವುಗಳ ಸಾಮೂಹಿಕ ಅಧಿಕಾರದಲ್ಲಿ ಸರ್ಕಾರಕ್ಕೆ ಸಲ್ಲುವ ಭೂ ಕಂದಾಯಕ್ಕೆ ಸಾಮೂಹಿಕ ಮತ್ತು ವೈಯಕ್ತಿಕ ಹೊಣೆಗಾರಿಕೆ ಹೊಂದಿದ್ದರು. ಈ ಭೂ ಕಂದಾಯ ಪದ್ಧತಿ ಒಂದು ಗ್ರಾಮ ಅಥವಾ ಎಸ್ಟೇಟ್‌ನೊಡನೆ ಮಾಡಿಕೊಳ್ಳಲಾಗುತ್ತಿತ್ತು. ಇದಕ್ಕೆ ಉತ್ತರ ಭಾರತದಲ್ಲಿ ಗ್ರಾಮ ಅಥವಾ ಎಸ್ಟೇಟ್‌ಗೆ 'ಮಹಲ್' ಎಂಬ ಹೆಸರಿದ್ದರಿಂದ 'ಮಹಲ್‌ವಾರಿ' ಎಂಬ ಹೆಸರಿನಿಂದಲೆ ಕರೆಯಲಾಯಿತು. ಇದು ೩೦ ವರ್ಷಗಳ ನಿಗದಿತ ಅವಧಿಗೆ ಮಾಡಿಕೊಂಡ ಒಪ್ಪಂದವಾಗಿದ್ದು, ಇದರಲ್ಲಿ ಸರ್ಕಾರದ ಪಾಲು ಉತ್ಪಾದನೆಯಲ್ಲಿ ೧/೨ ಭಾಗವಾಗಿತ್ತು.

ಮಾಲ್ ಗುಜಾರಿ ಪದ್ಧತಿ

ಇದು ಬ್ರಿಟಿಷ್ ಪೂರ್ವ ಭಾರತದಲ್ಲಿ ಮರಾಠರು ಭೂ ಕಂದಾಯ ವಸೂಲಿ ಹಕ್ಕನ್ನು 'ಮಾಲ್ ಗುಜಾರ್' ಎಂಬ ಕಂದಾಯ ವಸೂಲಿ ಅಧಿಕಾರಿಗಳಿಗೆ ನೇಮಿಸಿದ್ದರು. ಇದು

ತದನಂತರ ಬ್ರಿಟಿಷ್ ಆಡಳಿತದಲ್ಲೂ ಮುಂದುವರಿಯಿತು. ಗ್ರಾಮೀಣ ಭಾಗಗಳಲ್ಲಿ ಇವರಿಗೆ ಮುಖ್ಯಸ್ಥರ ಸ್ಥಾನವನ್ನು ಕಲ್ಪಿಸಲಾಯಿತು. ರೈತರು/ಗೇಣಿದಾರರು ಭೂ ಬಾಡಿಗೆಯನ್ನು ಕಟ್ಟುತ್ತಿದ್ದರು. ಭೂ ಕಂದಾಯವನ್ನು ಮಾಲ್‌ಗುಜಾರ್‌ಗಳು ಸರ್ಕಾರಕ್ಕೆ ಸಲ್ಲಿಸುತ್ತಿದ್ದರು. ನಿಗದಿತ ದರವನ್ನು ಉತ್ತರ ಭಾರತದಲ್ಲಿದ್ದ 'ಮಹಲ್‌ವಾರಿ ಪದ್ಧತಿ'ಯನ್ನೇ ಆಧರಿಸಿ ನಿರ್ಧರಿಸಲಾಗುತ್ತಿತ್ತು.

ರೈತ್ವಾರಿ ಪದ್ಧತಿ

ರೈತ್ವಾರಿ ಪದ್ಧತಿಯನ್ನು ೧೭೯೨ ರಲ್ಲಿ **ಮದ್ರಾಸ್**‌ನಲ್ಲಿ ಜಾರಿಗೆ ತರಲಾಯಿತು. **ಕ್ಯಾಪ್ಟನ್ ರೀಡ್** ಎಂಬುವವನು ಇದರ ಮೊದಲ ಪ್ರಯೋಗ ನಡೆಸಿದನು. ಆದರೆ ಇದು ನಿಯಮಿತವಾಗಿ ಜಾರಿಯಾಗಲಿಲ್ಲ. **ಥಾಮಸ್ ಮನ್ರೋ** ಮದ್ರಾಸ್ ಗವರ್ನರ್ ಆಗಿ ನೇಮಕಗೊಂಡ ನಂತರ ೧೮೧೮ ರಲ್ಲಿ ಮದ್ರಾಸ್‌ನಲ್ಲಿ ಇದನ್ನು ಜಾರಿಗೊಳಿಸಲಾಯಿತು. ಮೊದಲ ಬಾರಿ ಕ್ಯಾಪ್ಟನ್ ರೀಡ್ ಪ್ರಯೋಗಾರ್ಥವಧಿಯಲ್ಲಿ ಮನ್ರೋ ಆತನ ಸಹಾಯಕನಾಗಿ ಅನುಭವವನ್ನು ಪಡೆದಿದ್ದನು. ಆ ಆಧಾರದ ಮೇಲೆಯೆ ಈ ಪದ್ಧತಿಯನ್ನು ಜಾರಿಗೊಳಿಸಿದನು.

ರೈತ್ವಾರಿ ಪದ್ಧತಿಯ ಪ್ರಕಾರ

೧. ಉಳುವವನಿಗೆ ಭೂ ಒಡೆತನದ ಹಕ್ಕು ಹೊಂದಿ ಕಡ್ಡಾಯವಾಗಿ ನಿಗದಿತ ಕಂದಾಯವನ್ನು ಪಾವತಿಸಬೇಕಿತ್ತು.

೨. ರೈತ ಭೂ ಕಂದಾಯವನ್ನು ಸಲ್ಲಿಸದಿದ್ದಾಗ ಮಾತ್ರ ಅವನ ಹಕ್ಕುದಾರಿಕೆಯನ್ನು ಹಿಂತೆಗೆದುಕೊಳ್ಳಲಾಗುತ್ತಿತ್ತು.

೩. ಭೂ ಒಡೆಯನಾದ ರೈತನಿಗೆ ಭೂಮಿಯನ್ನು ಒತ್ತೆಯಿಡುವ ಅಥವಾ ಮಾರಾಟ ಮಾಡುವ ಸ್ವಾತಂತ್ರ್ಯ ಇರುತ್ತಿತ್ತು.

೪. ಈ ಪದ್ಧತಿಯಲ್ಲಿ ರೈತನಿಗೆ ಸರ್ಕಾರದೊಡನೆ ನೇರ ಸಂಪರ್ಕವಿತ್ತು. ಯಾವುದೇ ಮಧ್ಯವರ್ತಿಗೆ ಅವಕಾಶವಿರಲಿಲ್ಲ.

೫. ರೈತನು ಭೂಮಿಯನ್ನು ವರ್ಗಾಯಿಸುವ ಇಲ್ಲವೆ ಪರಂಪರಾಗತವಾಗಿ ಅನುಭವಿಸುವ ಸ್ವಾತಂತ್ರ್ಯ ಹೊಂದಿದ್ದನು.

ಭೂ ಕಂದಾಯವನ್ನು ನಿಗದಿಪಡಿಸಲು ಭೂಮಿಯನ್ನು ಅಳತೆ ಮಾಡಿ, ವರ್ಗೀಕರಿಸಿ, ಆದರೆ ಬೆಳೆಯ ಪ್ರಮಾಣವನ್ನಾಧರಿಸಿ ಹಣದ ಮೌಲ್ಯವನ್ನು ಕಂಡುಹಿಡಿಯಬೇಕಿತ್ತು. ಅದರಲ್ಲಿ ಶೇ. ೧೫ ರಷ್ಟನ್ನು ಕಳೆದು, ಉಳಿದಿದ್ದರಲ್ಲಿ ಅರ್ಧ ಭಾಗವನ್ನು ಸರ್ಕಾರ ಭೂ ಕಂದಾಯವಾಗಿ ವಸೂಲಿ ಮಾಡುತ್ತಿತ್ತು. ಈ ಮಾದರಿಯ ಕಂದಾಯ ಪದ್ಧತಿಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೊಳಿಸಲಾಗಿತ್ತು. ಬಾಂಬೆ ಪ್ರೆಸಿಡೆನ್ಸಿಯಲ್ಲಿಯೂ ೧೮೧೭ ರಲ್ಲಿ ಜಾರಿಗೊಳಿಸುವಲ್ಲಿ ಎಲ್ಫಿನ್‌ಸ್ಟನ್ ಎಂಬುವವನು ಇದಕ್ಕೆ ಕಾರಣಕರ್ತನಾದ. ಇಲ್ಲಿಯೂ

ಕೂಡ ಮದ್ರಾಸ್ ಮಾದರಿಯ ಭೂ ಕಂದಾಯ ಲಕ್ಷಣವನ್ನು ಹೊಂದಿದ್ದರೂ ಇನ್ನೂ ಹೆಚ್ಚಾಗಿ ವಿವರವಾದ ಪದ್ಧತಿಯನ್ನು ಅನುಸರಿಸಲಾಯಿತು ಹಾಗೂ ಸ್ಥಳೀಯ ಪರಿಸ್ಥಿತಿಗಳ ಬಗ್ಗೆ ಅವರಿಗೆ ಹೆಚ್ಚಿನ ತಿಳುವಳಿಕೆ ಅವಶ್ಯಕವಿತ್ತು.

ದೋಷಗಳು

೧. ಗ್ರಾಮೀಣ ಸಮುದಾಯದಲ್ಲಿದ್ದ, ಸಾಂಪ್ರದಾಯಿಕ ಐಕ್ಯತಾ ಮನೋಭಾವ ಕಾಣೆಯಾಯಿತು.

೨. ಭೂ ಕಂದಾಯ ಬಹಳ ಅಧಿಕವಾಗಿದ್ದುದರಿಂದ ಎಷ್ಟೋ ವೇಳೆ ಭೂ ಉಳುಮೆಯನ್ನೇ ಕೈಬಿಡಲಾಗುತ್ತಿತ್ತು.

೩. ವೈಯಕ್ತಿಕ ಮತ್ತು ನೇರ ಸಂಪರ್ಕವನ್ನು ರೈತ ಸರ್ಕಾರದೊಂದಿಗೆ ಹೊಂದಿದ್ದರಿಂದ ಸಾಮುದಾಯಿಕವಾಗಿ ಮಾಡುತ್ತಿದ್ದ ವ್ಯವಹಾರದಿಂದ ಅವನು ವಂಚಿತನಾಗ ಬೇಕಾಯಿತು.

೪. ನಿಗದಿತ ಅವಧಿಗೆ ಕಂದಾಯವನ್ನು ವಸೂಲಿ ಮಾಡಬೇಕಾದ್ದರಿಂದ ಸರ್ಕಾರಕ್ಕೆ ಹೆಚ್ಚಿನ ಕಾರ್ಯದ ಹೊರೆಯಾಯಿತು.

ಬ್ರಿಟಿಷರ ಆಳ್ವಿಕೆಯಿಂದ ಕೃಷಿ ಕ್ಷೇತ್ರದ ಮೇಲೆ ಹಲವಾರು ಪ್ರತಿಕೂಲ ಪರಿಣಾಮ ಗಳುಂಟಾದವು. ಮೇಲ್ಕಂಡಂಥ ಹಲವಾರು ಭೂ ಕಂದಾಯ ಪದ್ಧತಿಗಳ ಜಾರಿಯಿಂದ, ಹೆಚ್ಚಿನ ಭೂ ಕಂದಾಯ ವಿಧಿಸುತ್ತಿದ್ದರಿಂದಲ್ಲದೆ ಕಡ್ಡಾಯವಾಗಿ ವಸೂಲಿ ಮಾಡುತ್ತಿದ್ದುದ ರಿಂದ ಭಾರತದ ಕೃಷಿ ಮತ್ತು ರೈತರ ಮೇಲೆ ದುಷ್ಪಾರಿಣಾಮ ಉಂಟಾಯಿತು. ಜೊತೆಗೆ ಭಾರತೀಯರ ಕೃಷಿ ಕಾರ್ಯದ ಗತಿಯೇ ಬದಲಾಯಿತು. ಕೃಷಿ ವಾಣಿಜ್ಯೀಕರಣ ಉಂಟಾಯಿತು. ಸಾಂಪ್ರದಾಯಿಕ ಸ್ವ ಅನುಭೋಗ ವಸ್ತುಗಳ ಕೃಷಿ ಬೆಳೆಯನ್ನು ಬಿಟ್ಟು ಮಾರುಕಟ್ಟೆ ವ್ಯಾಪಾರ ಕ್ಕಾಗಿ ಒಂದು ಅಥವಾ ಎರಡು ಬೆಳೆಗಳನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯುವಂತಾಯಿತು. ಅಲ್ಲದೆ ವಾಣಿಜ್ಯ ಬೆಳೆಗಳ ಉತ್ಪಾದನೆ ಲಾಭದಾಯಕವಾದರೂ ಭವಿಷ್ಯದಲ್ಲಿ ಆಹಾರದ ಅಭಾವಕ್ಕೆ ಕಾರಣವಾಯಿತು.

ಶಿಕ್ಷಣದ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವ

೧೮೧೩ ರಲ್ಲಿನ ಚಾರ್ಟರ್ ಕಾಯಿದೆ ಭಾರತೀಯರಿಗೆ ಶಿಕ್ಷಣ ಸೌಲಭ್ಯ ಕಲ್ಪಿಸಲು ಸೂಚಿಸಿತು. ಆ ಪ್ರಕಾರ ಡೈರೆಕ್ಟರ್‌ಗಳು ಪ್ರತಿವರ್ಷ ಒಂದು ಲಕ್ಷ ರೂ. ಗಳನ್ನು ಪ್ರಾಚ್ಯ ಶಿಕ್ಷಣಕ್ಕಾಗಿ ವಿನಿಯೋಗಿಸಬೇಕಾಯಿತು. ಭಾರತೀಯರ ಶಿಕ್ಷಣದ ಹಕ್ಕುಗಳನ್ನು ಗುರುತಿಸುವಲ್ಲಿ ಇದು ಮೊದಲನೆಯ ಶಾಸನಬದ್ಧ ಕಾಯಿದೆಯಾಯಿತು. ಆದರೆ ಈಸ್ಟ್ ಇಂಡಿಯಾ ಕಂಪನಿಯು ತಮ್ಮ ಆಡಳಿತದ ಉದ್ದೇಶಕ್ಕಾಗಿ ಸಂಸ್ಕೃತ, ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗಳ ಕಲಿಕೆಗೆ ಈ ಹಣವನ್ನು ವಿನಿಯೋಗಿಸಿತು.

ಪಾಶ್ಚಾತ್ಯ ಶಿಕ್ಷಣದ ಪ್ರವೇಶ

೧೮೧೭ ರಲ್ಲಿ **ಡೇವಿಡ್ ಹೇರ್** ಮತ್ತು **ರಾಜಾ ರಾಮಮೋಹನ ರಾಯ್** ಅವರು ಯೂರೋಪಿಯನ್ ಸಾಹಿತ್ಯ ಮತ್ತು ಬೋಧನೆಗಾಗಿ ಕಲ್ಕತ್ತಾದಲ್ಲಿ 'ಹಿಂದೂ ಕಾಲೇಜು' ಸ್ಥಾಪಿಸಿದರು. ಇದರ ನಂತರ ಮಿಷನರಿಗಳು **ಸೆರಂಪೂರ್** ಕಾಲೇಜನ್ನು ತೆರೆದರು. ೧೮೨೦ ರಲ್ಲಿ **ಅಲೆಕ್ಸ್ ಡಫ್** ಕಲ್ಕತ್ತಾದಲ್ಲಿ ಮತ್ತೊಂದು ಕಾಲೇಜನ್ನು ತೆರೆದನು. ೧೮೨೩ ರಲ್ಲಿ ಕಲ್ಕತ್ತಾದಲ್ಲಿ ಸಂಸ್ಕೃತ ಕಾಲೇಜನ್ನು **ಲಾರ್ಡ್ ಆ್ಯಮ್‌ಹರ್ಸ್ಟ್** ಸ್ಥಾಪಿಸಿದಾಗ ಅದನ್ನು ರಾಜಾ ರಾಮಮೋಹನ ರಾಯ್ ವಿರೋಧಿಸಿದರು. ಕಾರಣ ಸಂಸ್ಕೃತ ಕಲಿಕೆ ಕಾರ್ಯಶೀಲ ವಾದುದಲ್ಲ ಎಂಬುದಾಗಿತ್ತು. ಅಲ್ಲಿಯವರೆಗೂ ಸರ್ಕಾರ ಇಂಗ್ಲೀಷ್ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಗುರುತಿಸಿರಲಿಲ್ಲ. ಆದರೆ ೧೮೨೦ ರ ವೇಳೆಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಕಲ್ಕತ್ತಾದ ಹಿಂದೂ ಕಾಲೇಜ್‌ಗೆ ಆಂಗ್ಲಭಾಷಾ ಶಿಕ್ಷಣಕ್ಕಾಗಿ ಸರ್ಕಾರದ ಅನುದಾನ ನೀಡಲಾಯಿತು. ೧೮೨೩ ರಲ್ಲಿ 'ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್' (ಸಾಮಾನ್ಯ ಸಾರ್ವಜನಿಕ ಶಿಕ್ಷಣ ಸಮಿತಿ) ನೇಮಕವಾಯಿತು. ಕಾರಣ ೧೮೧೩ ರಲ್ಲಿ **ಚಾರ್ಟರ್ ಆಕ್ಟ್** ಪ್ರಕಾರ ಒದಗಿಸಲಾದ ಹಣ ಯಾವ ಮಾಧ್ಯಮಕ್ಕೆ ಉಪಯೋಗಿಸಿದರೆ ಹೆಚ್ಚು ಅನುಕೂಲ ಎಂಬುದನ್ನು ವರದಿ ಮಾಡಲು. ಆದರೆ ಕಮಿಟಿ ಸದಸ್ಯರಲ್ಲಿಯೇ ಶಿಕ್ಷಣ ಮಾಧ್ಯಮದ ಬಗ್ಗೆ ಭಿನ್ನಾಭಿಪ್ರಾಯಗಳುಂಟಾದವು.

ಓರಿಯಂಟಲಿಸ್ಟ್‌ರಾದ **ಹೆಚ್.ಹೆಚ್.** ವಿಲ್ಸನ್ ಮತ್ತು **ಹೆಚ್.ಟಿ. ಪ್ರಿನ್ಸೆಪ್** ಸಂಸ್ಕೃತ ಮತ್ತು ಭಾರತೀಯ ಕಲಿಕೆಗೆ ಪ್ರೋತ್ಸಾಹಿಸಿದರು. ಆದರೆ ಆಂಗ್ಲ ಭಾಷಾವಾದಿಗಳಾದ **ಟ್ರವೆಲಿಯನ್** ಮತ್ತು **ಮೆಕಾಲೆ** ಇಂಗ್ಲೀಷ್ ಮಾಧ್ಯಮದ ಶಿಕ್ಷಣ ಬೋಧನೆಯನ್ನು ಒತ್ತಾಯಿಸಿದರು.

ಎರಡೂ ಗುಂಪುಗಳು ತಮ್ಮ ವಾದವಿವಾದಗಳನ್ನು ಪ್ರಬಲವಾಗಿ ಮತ್ತು ಸಮರ್ಥವಾಗಿ ಮಂಡಿಸಿದವು. ತದನಂತರ ಗವರ್ನರ್ ಜನರಲ್ **ವಿಲಿಯಂ ಬೆಂಟಿಂಕ್**, **ಲಾರ್ಡ್ ಮೆಕಾಲೆ** ಯನ್ನು 'ಪಬ್ಲಿಕ್ ಇನ್‌ಸ್ಟ್ರಕ್ಷನ್ ಕಮಿಟಿ'ಗೆ ಚೇರ್ಮನ್ ಆಗಿ ನೇಮಿಸಿದ. "ಭಾರತೀಯರು ಆಂಗ್ಲಭಾಷಾ ಮಾಧ್ಯಮದಿಂದ ವಿದ್ಯಾವಂತರಾಗಿ ಯೂರೋಪಿನ ಸಂಸ್ಥೆಗಳನ್ನು ಸ್ಥಾಪಿಸಲು ಬೇಡಿಕೆ ಮಾಡುವಾಗ ಬ್ರಿಟಿಷ್ ಇತಿಹಾಸದಲ್ಲೇ ಹೆಮ್ಮೆಪಡುವ ದಿನ ಕಾಣುವುದು" ಎಂದು ಮೆಕಾಲೆ ಹೇಳಿಕೆ ನೀಡಿದನು. ಮೆಕಾಲೆ ಕಮಿಟಿಯ ಇತರೆ ಸದಸ್ಯರ ಒಪ್ಪಿಗೆ ಪಡೆಯದೆಯೇ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದನು.

ಮೆಕಾಲೆಯ ವರದಿ (೧೮೩೫)

ಮೆಕಾಲೆ ದೇಶಿಯ ಭಾಷಾ ಮಾಧ್ಯಮವನ್ನು ತುಂಬಾ ಖಂಡಿಸಿ, ಆಂಗ್ಲ ಭಾಷಾ ಮಾಧ್ಯಮ ವನ್ನು ಪ್ರಬಲವಾಗಿ ಸಮರ್ಥಿಸಿದವನಾಗಿದ್ದಾನೆ. ಅವನ ಉದ್ದೇಶ ಎಂತಹ ಭಾರತೀಯ

ವರ್ಗವನ್ನು ಸೃಷ್ಟಿಸಬೇಕೆಂದರೆ ಬಣ್ಣ ಮತ್ತು ರಕ್ತ ಭಾರತೀಯವಾಗಿದ್ದು, ಅವರ ಅಭಿರುಚಿ, ಅಭಿಪ್ರಾಯ, ನೀತಿಗಳು ಮತ್ತು ಅವರ ಬುದ್ಧಿಶಕ್ತಿ ಆಂಗ್ಲರದಾಗಿರಬೇಕೆಂದು ಬಯಸಿದ್ದನು. **ಮಾರ್ಚ್ ೭ ನೆಯ** ೧೮೩೫ ರಲ್ಲಿ ಅವನ ವರದಿಯನ್ನು ಸರ್ಕಾರ ಒಪ್ಪಿ ಜಾರಿಗೊಳಿಸಿತು. ಆ ಪ್ರಕಾರ ಸರ್ಕಾರದ ಎಲ್ಲ ಅನುದಾನ ಇಂಗ್ಲಿಷ್ ಸಾಹಿತ್ಯ ಮತ್ತು ವಿಜ್ಞಾನದ ಕಲಿಕೆಗೆ ಉಪಯುಕ್ತವಾಗಬೇಕಿತ್ತು.

ಮೆಕಾಲೆಯವರ ನಿರ್ಣಯ ಭಾರತೀಯ ಸಮಾಜದ ಮೇಲೆ ಆಳವಾದ ಪ್ರಭಾವ ಬೀರಿತು. ಪಾಶ್ಚಿಮಾತ್ಯ ಶಿಕ್ಷಣದ ಹೊಸ ಕ್ಷೇತ್ರಗಳಲ್ಲಿ ಬುದ್ಧಿಶಕ್ತಿ ಬೆಳೆಯಲು ಕಾರಣವಾಯಿತು. ಸ್ಥಳೀಯ ಮನೋಭಾವ ತೊಡೆದು ಹಾಕಲು ಕಾರಣವಾಯಿತು. ಎಲ್ಲರಿಗೂ ಸಾಮಾನ್ಯವಾಗಿ ಅರ್ಥವಾಗುವ ಭಾಷೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಯಿತು. ಭಾಷಾವಾರು ಅಡೆತಡೆ ನಿವಾರಿಸಲು ಸಾಧ್ಯವಾಯಿತು. ಭಾರತೀಯರಿಗೆ ಭಾರತದಿಂದ ಹೊರಗೆ ನಡೆಯುತ್ತಿದ್ದ ಚಳವಳಿಗಳ ಬಗ್ಗೆ ಅರಿವು ಮೂಡಿ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣ ವಾಯಿತು. ಆದರೆ **ದೇಶಿಯ ಭಾಷಾ ಶಿಕ್ಷಣ**ದ ಅಭಿವೃದ್ಧಿಯಲ್ಲಿ ಕುಂದುಂಟಾಯಿತು. ನಂತರ **ಲಾರ್ಡ್ ಆಕ್ಲೆಂಡ್** ಅವರ ಅವಧಿಯಲ್ಲಿ (೧೮೩೯) ದೇಶಿಯ ಭಾಷಾ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೊಳಿಸಲು ಒಪ್ಪಲಾಯಿತು. ಜೊತೆಗೆ ಸರ್ಕಾರದ ವಿದ್ಯಾರ್ಥಿ ವೇತನವನ್ನು ಅಂತಹ ಸಂಸ್ಥೆಗಳಿಗೆ ದೊರಕಿಸಲಾಯಿತು. ೧೮೩೫-೧೮೫೩ರ ಅವಧಿಯಲ್ಲಿ ಹೆಚ್ಚು ಹೆಚ್ಚು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಜೊತೆಗೆ ಮಿಷನರಿ ಸಂಸ್ಥೆಗಳೂ ಕೂಡ ಇದೇ ವೇಳೆಗೆ ತೆರೆಯಲಾಯಿತು. ೧೮೪೩-೫೩ ವಾಯುವ್ಯ ಪ್ರಾಂತ್ಯಗಳಲ್ಲಿ **ಜೇಮ್ಸ್ ಥಾಮಸನ್** ಎಂಬುವನ ಪ್ರಯತ್ನದಿಂದ 'ದೇಶಿಯ ಭಾಷೆ ಮಾಧ್ಯಮ'ದಲ್ಲಿ ಗ್ರಾಮೀಣ ಶಿಕ್ಷಣ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಆಂಗ್ಲ ಭಾಷಾ ಮಾಧ್ಯಮ ಪ್ರಾಥಮಿಕ ಹಂತದಲ್ಲಿ ನಾಶವಾಗಿ, ಕಾಲೇಜು ಹಂತದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಒದಗಿಸಲಾಯಿತು. ಆದರೆ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ತರ ತಿರುವು ದೊರೆತದ್ದು ೧೮೫೪ ರಲ್ಲಿ ವುಡ್ಸ್ ವರದಿ ಜಾರಿಯಾದಾಗ.

ವುಡ್ಸ್ ವರದಿ (೧೮೫೪)

ಸರ್ **ಚಾರ್ಲ್ಸ್ ವುಡ್ಸ್** ಎಂಬುವನು 'ಬೋರ್ಡ್ ಆಫ್ ಕಂಟ್ರೋಲ್'ನ ಪ್ರೆಸಿಡೆಂಟ್ ಆಗಿದ್ದಾಗ ಇಂಗ್ಲೀಷ್ ಸಂಸ್ಥೆಗಳು ವಿಶ್ವದಲ್ಲೇ ಮಾದರಿಯಾಗಿವೆ ಎಂದು ನಂಬಿದ್ದನು. ಇಲ್ಲಿನ ಜನಾಂಗಗಳು ಬದಲಾವಣೆಗೆ ವಿರೋಧಿಗಳಾಗಿದ್ದು, ಅವರು ಧಾರ್ಮಿಕ ಪೂರ್ವ ಗ್ರಹಿತರಾಗಿದ್ದರು. ಆದ್ದರಿಂದ ಬ್ರಿಟಿಷರ ಶಿಕ್ಷಣ ಪ್ರಯೋಗವು ಬದಲಾವಣೆಯತ್ತ ಸಾಗಬೇಕಾಗಿದ್ದು ಎಂದು ಅವನು ೧೮೫೪ ರಲ್ಲಿ ತನ್ನ ವರದಿಯನ್ನು ಅದರಂತೆ ಸಲ್ಲಿಸಿದನು. ಅದನ್ನು **ವುಡ್ಸ್ ವರದಿ** ಎಂದು ಕರೆಯಲಾಯಿತು.

ಸುಸಂಘಟಿತವಾದ ಶಿಕ್ಷಣ ವ್ಯವಸ್ಥೆಯನ್ನು ಅಖಿಲ ಭಾರತ ಮಟ್ಟದಲ್ಲಿ ನೀಡ ಬೇಕೆಂಬುದು ಅವನ ಯೋಜನೆಯಾಗಿತ್ತು. ಈ ಪ್ರಕಾರ -

೧. ಸರ್ಕಾರದ ಶಿಕ್ಷಣ ನೀತಿಯ ಉದ್ದೇಶ ಪಾಶ್ಚಿಮಾತ್ಯ ಬೋಧನೆಯಲ್ಲಿ ಯೂರೋಪಿನ ಕಲೆ, ವಿಜ್ಞಾನ ಮತ್ತು ದರ್ಶನದ ಹರಡುವಿಕೆಯಾಗಿರಬೇಕು.

೨. ಉನ್ನತ ಶಿಕ್ಷಣದಲ್ಲಿ ಆಂಗ್ಲ ಭಾಷಾ ಮಾಧ್ಯಮ ಅತ್ಯುತ್ತಮ ಎಂದು ಘೋಷಿಸಿ ದೇಶಿಯ ಭಾಷಾ ಪ್ರಾಮುಖ್ಯತೆಗೂ ಕೂಡ ಒತ್ತು ನೀಡಲಾಗಿತ್ತು. ಯಾಕೆಂದರೆ ದೇಶಿಯ ಭಾಷೆ ಮಾಧ್ಯಮದ ಮೂಲಕ ಹೆಚ್ಚಿನ ಜನರಿಗೆ ಯೂರೋಪಿನ ಜ್ಞಾನ ತಲುಪಲು ಸಾಧ್ಯ ಎಂದು.

೩. ಮೊದಲು ದೇಶಿಯ ಭಾಷಾ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು, ನಂತರ ಆಂಗ್ಲ ಭಾಷಾ ಮಾಧ್ಯಮದ ಪ್ರೌಢ ಶಾಲೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿತ್ತು.

೪. ಶಿಕ್ಷಣದಲ್ಲಿ ಖಾಸಗೀ ಸಹಭಾಗತ್ವವನ್ನು ಪ್ರೋತ್ಸಾಹಿಸಲು ಸರ್ಕಾರ ಅನುದಾನ ದೊರಕಿಸುವುದು, ಅದು ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಶಿಕ್ಷಕರಿಗೆ ದೊರಕುವುದು.

೫. ಪ್ರತಿಯೊಂದು ಪ್ರಾಂತ್ಯದಲ್ಲೂ ನಿರ್ದೇಶಕನೊಬ್ಬನ ಮೇಲ್ವಿಚಾರಣೆಯಲ್ಲಿ ಶಿಕ್ಷಣ ಪ್ರಗತಿ ಮತ್ತು ವಾರ್ಷಿಕ ವರದಿಯನ್ನು ಸಲ್ಲಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸುವುದು.

೬. ಕಲ್ಕತ್ತಾ, ಬಾಂಬೆ, ಮದ್ರಾಸ್‌ಗಳಲ್ಲಿ ಲಂಡನ್ ವಿಶ್ವವಿದ್ಯಾಲಯದ ಮಾದರಿಯಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಮತ್ತು ಅದರಲ್ಲಿ ಸೆನೆಟ್, ಉಪಕುಲಪತಿ, ಕುಲಪತಿಗಳನ್ನು ಸರ್ಕಾರವೇ ನೇಮಿಸುವುದು. ಈ ವಿಶ್ವವಿದ್ಯಾಲಯಗಳ ಮೂಲಕ ಪರೀಕ್ಷೆಗಳನ್ನು ನಡೆಸಿ ಪದವಿಗಳನ್ನು ವಿತರಿಸುವುದು.

೭. ವೃತ್ತಿಪರ ಮತ್ತು ತಾಂತ್ರಿಕ ಶಾಲಾ ಮತ್ತು ಕಾಲೇಜುಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಲಾಯಿತು.

೮. ಇಂಗ್ಲೀಷ್ ಮಾದರಿಯ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು.

೯. ಮಹಿಳಾ ಶಿಕ್ಷಣಕ್ಕೂ ಆದ್ಯತೆ ನೀಡುವುದು.

ಈ ಮೇಲ್ಕಂಡ ವುಡ್ಸ್ ವರದಿಯ ಎಲ್ಲ ಅಂಶಗಳನ್ನು ಜಾರಿಗೊಳಿಸಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ (೧೮೫೫) ಹಾಗೂ ವಿಶ್ವವಿದ್ಯಾಲಯಗಳನ್ನು ೧೮೫೭ ರಲ್ಲಿ ಸ್ಥಾಪಿಸಲಾಯಿತು.

೪.೫ ಭಾರತೀಯ ಪುನರುಜ್ಜೀವನ

ಹಿನ್ನೆಲೆ

ಭಾರತದ ಮಟ್ಟಿಗೆ ಆಧುನಿಕತೆಯ ಪ್ರಾರಂಭವೆಂದರೆ ಹತ್ತೊಂಬತ್ತನೆ ಶತಮಾನದ ತಿರುವಿನಿಂದಲೇ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಅದಕ್ಕೂ ಮುಂಚಿನ ಭಾರತೀಯ ಸಮಾಜ ಜಾತಿ, ಲಿಂಗಾಧಾರಿತ ಅಸಮತೆ ಹಾಗೂ ಹಲವಾರು ಅಮಾನವೀಯ ಆಚರಣೆಗಳಿಂದ ಕೂಡಿತ್ತು. ಆದ್ದರಿಂದಲೇ ಅಂದಿನ ಎಲ್ಲ ಸುಧಾರಕರೂ ಅಪಾರ ಮಾನವೀಯ ಕಳಕಳಿಯಿಂದ ಈ ಅಸಮತೆಯನ್ನು ಹೋಗಲಾಡಿಸಲು ಶ್ರಮಿಸಿದರು. ಈ ಅಸಮತೆ, ಅಮಾನವೀಯತೆಗಳೇ ಭಾರತದ ಆರ್ಥಿಕ ಮತ್ತು ರಾಜಕೀಯ ಹಿಂದುಳಿಯುವಿಕೆಗೆ ಕಾರಣವೆಂದವರು ರಾಜಾ ರಾಮಮೋಹನ ರಾಯರಂಥವರು. ಅಷ್ಟೇ ಏಕೆ ಭಾರತೀಯರಲ್ಲಿ ದೇಶಾಭಿಮಾನದ ಕೊರತೆಗೂ ಇವೇ ಕಾರಣವೆಂದು ಅವರು ಸಾರಿದರು. ಬಹುತೇಕ ಎಲ್ಲ ಮೂಢನಂಬಿಕೆ ಮತ್ತು ಸಾಮಾಜಿಕ ಪಿಡುಗುಗಳನ್ನೂ ಅವು ಧರ್ಮಾಧಾರಿತವೆಂದು ನಂಬಿಸಲಾಗಿತ್ತು. ಆದ್ದರಿಂದಲೇ ಎಲ್ಲ ಸಮುದಾಯಗಳಲ್ಲಿ ಆರಂಭವಾದ ಸಮಾಜ ಸುಧಾರಣೆಗಳನ್ನು, 'ಧಾರ್ಮಿಕ ಸುಧಾರಣೆ'ಗಳೆಂದೂ ಕರೆಯಲಾಯಿತು. ಈ ಸುಧಾರಣೆಗಳನ್ನು ಭಾರತೀಯ ಪುನರುಜ್ಜೀವನ ಅಥವಾ ಭಾರತೀಯ ನವೋದಯವೆಂದೂ ತಿಳಿಯಲಾಗಿದೆ.

ಭಾರತೀಯ ನವೋದಯ ಪ್ರವರ್ತಕರೆಲ್ಲಾ ಮಾನವೀಯತೆ, ವೈಚಾರಿಕತೆ ಮತ್ತು ಮಾನವ ಘನತೆ ಎಂಬ ತತ್ವಗಳಿಂದ ಆಳವಾಗಿ ಪ್ರಭಾವಿತರಾಗಿದ್ದರು. ಭಾರತವನ್ನು ತಮ್ಮ ಕ್ರೌರ್ಯದಿಂದ ಮಣಿಸಿದ ಬ್ರಿಟಿಷರು, ಒಂದು ರೀತಿಯ ಶಿಸ್ತನ್ನು, ಏಕರೂಪದ ಆಡಳಿತವನ್ನು ಹಾಗೂ ಆ ಮೂಲಕ ತಮ್ಮ ರಾಜಕೀಯ-ಆರ್ಥಿಕ ಹಿಡಿತವನ್ನು ಬಿಗಿಗೊಳಿಸಿದ್ದೂ ಇದೆ. ಅದನ್ನೇ ಅವರು ಭಾರತದಲ್ಲಿ ಶಾಂತಿ-ರಕ್ಷಣೆ ನೆಲೆಗೊಳಿಸಿರುವೆವೆಂದು ಪ್ರಚಾರ ಮಾಡಿದರು. ಬ್ರಿಟಿಷರ ಸಂಪರ್ಕಕ್ಕೆ ಬಂದ ಪಾಶ್ಚಾತ್ಯ ವಿದ್ಯೆ-ಉದಾರವಾದಗಳಿಂದ ಪ್ರಭಾವಿತರಾದ ನಮ್ಮ ಆಧುನಿಕರು ಗತ್ಯಂತರವಿಲ್ಲದೆ ಅದನ್ನೇ ನಂಬಿದರು. ಇಂಗ್ಲಿಷ್ ವಿದ್ಯೆ ಮತ್ತು ಆ ಮೂಲಕ ತಾವು ಪಡೆದ ಜ್ಞಾನ, ಪರಿಸರ ಮತ್ತು ಸವಲತ್ತುಗಳು ಮೊದಲ ಎರಡು ಪೀಳಿಗೆಗಳ ಕೆಲವು ಭಾರತೀಯರನ್ನು ತಮ್ಮ ಸಮಾಜ, ದೇಶಗಳ ಬಗ್ಗೆ ಗಂಭೀರ ಚಿಂತನೆಗೆ ಹಚ್ಚಿದವು. ತರ್ಕ ಮತ್ತು ವೈಚಾರಿಕತೆಗಳ ಸುಳಿಗೆ ಸಿಕ್ಕ ಈ ಜನ ತಮ್ಮ ಸಾಂಪ್ರದಾಯಿಕ ಪರಿಸರದಿಂದ ಸ್ವಲ್ಪ ದೂರ ನಿಂತು, ವಸ್ತುನಿಷ್ಠವಾಗಿ ಯೋಚಿಸಲು ಪ್ರಾರಂಭಿಸಿದರು. ವೈಚಾರಿಕತೆ ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಇದ್ದದ್ದೇ. ಅದು ಸಂಘಟಿತವಾಗಿ ಭಾರತದೆಲ್ಲೆಡೆ ಒಮ್ಮೆಗೇ ಕಾಣದಿರಬಹುದು. ಆದರೆ ಆಧುನಿಕತೆಯ ಬೆಳಕಿನಲ್ಲಿ ಅದನ್ನು ಎಲ್ಲೆಡೆ ವಿಸ್ತರಿಸಲು ಸಾಧ್ಯವೆಂದು ಮನಗಂಡರು. ಅಮೆರಿಕಾ ಮತ್ತು ಫ್ರಾನ್ಸ್ ದೇಶಗಳಲ್ಲಾದ ಕ್ರಾಂತಿಕಾರಕ ಬದಲಾವಣೆಗಳೂ ಅದರ ಮೇಲೆ ಪರೋಕ್ಷವಾಗಿಯಾದರೂ ಪ್ರಭಾವ ಬೀರಿದವು. ಈ ಎಲ್ಲ ಬೆಳವಣಿಗೆಗಳು, ಪ್ರಭಾವಗಳು ಭಿನ್ನ ರೀತಿಯ ಪ್ರತಿಕ್ರಿಯೆಗಳಿಗೆ ಕಾರಣವಾದರೂ,

ಎಲ್ಲರೂ ಬದಲಾವಣೆಯ ಅಗತ್ಯವನ್ನು ಒಪ್ಪಿದರು. ಈ ಅಗತ್ಯ ಮನಗಂಡವರ ಸಾಮಾಜಿಕ ನೆಲೆ ಆಗತಾನೆ ರೂಪುಗೊಳ್ಳುತ್ತಿದ್ದ ಮೇಲ್ಜಾತಿಯವರಿಂದಲೇ ತುಂಬಿದ್ದ ಮಧ್ಯಮವರ್ಗ. ನಿಯಮವೋ ಎಂಬಂತೆ ಈ ವರ್ಗದ ಎಲ್ಲರೂ ಪಾಶ್ಚಾತ್ಯ ವಿದ್ಯೆ ಕಲಿತವರು. ಈ ಸಾಮಾಜಿಕ-ಸಾಂಸ್ಕೃತಿಕ ಪುನರುಜ್ಜೀವನ ವಸಾಹತುಶಾಹಿ ಬ್ರಿಟಿಷರ ಇರುವಿಕೆಯಿಂದ ಪ್ರಭಾವಿತವಾಯಿತು. ಆದರೆ ವಸಾಹತುಶಾಹಿಯೇ ಅದನ್ನು ಸೃಷ್ಟಿಸಿದ್ದಲ್ಲ.

ಈ ಪುನರುಜ್ಜೀವನ-ನವೋದಯಗಳ ಹರಿಕಾರರು ಹಲವರು. ರಾಜಾ ರಾಮಮೋಹನ ರಾಯ್, ಹೆನ್ರಿ ಡೊರಾಜಿಯೋ, ದಯಾನಂದ ಸರಸ್ವತಿ, ಮಹದೇವ ಗೋವಿಂದ ರಾನಡೆ, ಜೋತಿರಾವ್ ಪೂಲೆ, ಸ್ವಾಮಿ ವಿವೇಕಾನಂದ, ಸೈಯ್ಯದ್ ಅಹಮದ್ ಖಾನ್, ಕರ್ಕಿ ವೆಂಕಟರಮಣ ಶಾಸ್ತ್ರಿ, ಕುಡುಮಲ ರಂಗರಾವ್ ಮುಂತಾದವರು ಇವರಲ್ಲಿ ಪ್ರಮುಖರು. ಬಂಗಾಳದಲ್ಲಿ ರಾಜಾರಾಮ ಮೋಹನರಾಯರಿಂದ ಪ್ರಾರಂಭವಾದ ಈ ಸುಧಾರಣಾ ಗಾಳಿ ದೇಶದೆಲ್ಲೆಡೆ ವ್ಯಾಪಿಸಿತು. ಆಗ ತಾನೆ ಆರಂಭಿಸಲಾದ ದೇಶೀ ಪತ್ರಿಕೋದ್ಯಮ ಈ ಪ್ರಚಾರಕ್ಕೆ ಒತ್ತಾಸೆಯಾಗಿ ನಿಂತಿತು. ರಾಜಾ ರಾಮಮೋಹನರಾಯರು ೧೮೨೮ ರಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿ ಸುಧಾರಣೆಗೆ ಸಂಘಟಿತ ಚಾಲನೆ ನೀಡಿದರು. ದೇಶದ ಮುಖ್ಯ ನಗರಗಳಲ್ಲಿ ಅದರ ಶಾಖೆಗಳು ಪ್ರಾರಂಭವಾದವು. ಪ್ರಾರ್ಥನ ಸಮಾಜ ಮತ್ತು ಪರಮಹಂಸ ಮಂಡಳಿಗಳು ಮಹಾರಾಷ್ಟ್ರದಲ್ಲಿ, ಆರ್ಯಸಮಾಜ ಪಂಜಾಬ್ ಮತ್ತು ಉತ್ತರ ಭಾರತದಲ್ಲಿ, ವೇದ ಸಮಾಜ ದಕ್ಷಿಣ ಭಾರತದಲ್ಲಿ ಪ್ರಾರಂಭವಾಗಿ ಹಿಂದೂ ಸಮಾಜದಲ್ಲಿ ಒಂದು ಸಣ್ಣ ಪ್ರಮಾಣದ 'ಸಾಮಾಜಿಕ-ಧಾರ್ಮಿಕ ಆಂದೋಲನ'ವನ್ನೇ ಉಂಟುಮಾಡಿದವು. ಹಾಗೆಯೇ ಕೆಲವು ಪ್ರಾಂತ್ಯ ಮತ್ತು ಜಾತಿ ಚೌಕಟ್ಟುಗಳಿಗೆ ಒಳಪಟ್ಟು ಹಲವಾರು ಸಂಸ್ಥೆಗಳು ಹುಟ್ಟಿದವು. ಬಂಗಾಳದ ನಾಮಶೂದ್ರ, ಪಂಜಾಬಿನ ಆದಿಧರ್ಮ, ಉತ್ತರ ಪ್ರದೇಶದ ಕಾಯಸ್ಥಸಭಾ ಈ ರೀತಿಯವು. ಇವುಗಳಿಗಿಂತ ಹೆಚ್ಚು ವ್ಯಾಪಕವಾಗಿ ಆರಂಭವಾಗಿ ಶೂದ್ರಾತಿ ಶೂದ್ರ ವರ್ಗಗಳಲ್ಲಿ ಉದಾರವಾದವನ್ನು, ಜಾಗೃತಿಯನ್ನು ಹರಡಿದ ಸಂಘಟನೆಗಳೆಂದರೆ ಜ್ಯೋತಿ ರಾವ್ ಫುಲೆಯವರ ಸತ್ಯ ಶೋಧಕ ಚಳವಳಿ, ನಾರಾಯಣಗುರು ಅವರ ಶ್ರೀನಾರಾಯಣ ಧರ್ಮಪಾಲನ ಸಭೆ ಮುಂತಾದವು. ಮುಸ್ಲಿಮರಲ್ಲಿ ಅಲಿಘರ್ ಮತ್ತು ಅಹ್ಮದೀಯ ಚಳವಳಿಗಳು, ಸಿಖ್ಖರಲ್ಲಿ ಸಿಂಗ್‌ಸಭಾ ಹೀಗೆ ಹಲವು-ಹತ್ತು ಸಂಸ್ಥೆಗಳು ಹುಟ್ಟಿ ಆಧುನಿಕತೆ-ವೈಚಾರಿಕತೆಗಳನ್ನು ಹರಡಲು ತೊಡಗಿದವು.

ಎಲ್ಲ ಸಂಸ್ಥೆಗಳ ಪ್ರಮುಖ ಕಾಳಜಿ ಧಾರ್ಮಿಕ ಸುಧಾರಣೆಯಾದರೂ, ಯಾವ ಸಂಸ್ಥೆಯೂ ಸಂಪೂರ್ಣ ಸಾಂಸ್ಥಿಕ ಧರ್ಮಕ್ಕೆ ಕಟ್ಟು ಬೀಳಲಿಲ್ಲ. ಮುಕ್ತಿ, ಬೇರೆ ಲೋಕಗಳ ಪರಿಕಲ್ಪನೆಗಳು ಯಾವುದೇ ಸಂಸ್ಥೆಯ ಕೇಂದ್ರ ಕಾಳಜಿಯಾಗಿರಲಿಲ್ಲ. ದಾಸರ ಪದ ಒಂದರಲ್ಲಿ ಹೇಳಿರುವಂತೆ 'ಈಸಬೇಕು ಇದ್ದು ಜೈಸಬೇಕು' ಎನ್ನುವ ತತ್ವದಲ್ಲಿ ನಂಬಿಕೆಯಿಟ್ಟು ದುಡಿದ ಸಂಸ್ಥೆಗಳವು. ಸಂಕುಚಿತ ಜಾತಿ-ಮತಗಳನ್ನು ಮೀರಿದ ಮಾನವೀಯತೆಯೇ ಅವುಗಳ ಹೆಗ್ಗುರಿ. ಸ್ವರ್ಗ-ನರಕ, ಅತೀಂದ್ರಿಯತೆಗಳ ಬಗ್ಗೆ ಅವರು ಯಾರೂ ತಲೆಕೆಡಿಸಿಕೊಂಡವರಲ್ಲ. ದೇವರ

ಇರುವಿಕೆಯ ಬಗ್ಗೆ ಕೇಳಲಾದ ಪ್ರಶ್ನೆಯೊಂದಕ್ಕೆ **ಈಶ್ವರಚಂದ್ರ ವಿದ್ಯಾಸಾಗರರು** 'ನನಗೆ ದೇವರ ಬಗ್ಗೆ ಚಿಂತಿಸಲು ಸಮಯವೆಲ್ಲಿದೆ. ಈ ನೆಲದಲ್ಲಿ ಮಾಡಬೇಕಾದ್ದು ಬೇಕಾದಷ್ಟಿದೆ' ಎಂದು ಗೊಣಗಿದರಂತೆ. ವಿವೇಕಾನಂದರಂತೂ 'ಹಸಿದವರಿಗೆ ಧರ್ಮ-ದೇವರುಗಳನ್ನು ಬೋಧಿಸಬೇಡಿ' ಎಂದೇ ಹೇಳಿದವರು. ಆದರೆ ಧರ್ಮ-ಆಧ್ಯಾತ್ಮಗಳನ್ನು ಜಾತ್ಯಾತೀತವಾಗಿ ಬಳಸಿಕೊಂಡು ಮಾನವನ ಭೌತಿಕ ಇರವನ್ನು ವಿವರಿಸಿದರು.

ಪುನರುಜ್ಜೀವನಕ್ಕೆ ಕಾರಣವಾಗಿದ್ದ ಅಂಶಗಳು

ಆಧುನಿಕ ಪೂರ್ವ ಭಾರತೀಯ ಸಮಾಜ ಮೂಢನಂಬಿಕೆ, ಅಮಾನವೀಯ ಸಂಪ್ರದಾಯಗಳಿಂದ ತುಂಬಿತ್ತು. ಪ್ರಾಣಿ ಬಲಿಯೇ ಏಕೆ, ಸತಿಪದ್ಧತಿ, ನರಬಲಿ, ದೈಹಿಕ ಹಿಂಸೆ ಮುಂತಾದವು ದೇವರ ಪೂಜೆಯ ಜಾಗ ಪಡೆದುಕೊಂಡಿದ್ದವು. ಸಾಮಾನ್ಯ ಜನರ ಮನಸ್ಸು ಸ್ವಾರ್ಥಿ ಪುರೋಹಿತಶಾಹಿಯ ರೋಗಿಷ್ಠ ಪ್ರಭಾವದಿಂದ ಸೆರೆಹಿಡಿಯಲ್ಪಟ್ಟಿತ್ತು. ಜನಸಾಮಾನ್ಯರಿಗೆ ನಿರಾಕರಿಸಲ್ಪಟ್ಟ ಧರ್ಮಗ್ರಂಥಗಳ ಓದು, ಪುರೋಹಿತರ ಏಕಸ್ವಾಮ್ಯಕ್ಕೆ ಒಳಪಟ್ಟು ಅವರು ಹೇಳಿದ್ದೇ ವೇದವಾಕ್ಯವಾಗಿತ್ತು. ಜನರ ಅಜ್ಞಾನ, ಮೂಢನಂಬಿಕೆ, ಭಯ, ಭಕ್ತಿಗಳೇ ಬಂಡವಾಳವಾಗಿ, ಪುರೋಹಿತಶಾಹಿ ಇಡೀ ಸಮಾಜವನ್ನು ತನ್ನ ಕಪಿಮುಷ್ಟಿಗೆ ಸಿಲುಕಿಸಿಕೊಂಡಿತ್ತು. ದೇವರು-ಧರ್ಮಗಳಲ್ಲಿ ನಂಬಿಕೆಯೆಂದರೆ, ಅದು ಕೇವಲ ಅಷ್ಟಕ್ಕೆ ಸೀಮಿತವಾಗದೆ, ಪುರೋಹಿತರ ಇಷ್ಟಾನಿಷ್ಟಗಳಿಗೂ ವಿಸ್ತರಿಸಿತ್ತು. ಧರ್ಮದ ಹೆಸರಿನಲ್ಲಿ ನಡೆಯಬಾರದ್ದೆಲ್ಲಾ ಅನೈತಿಕವಾದದ್ದೂ ಸೇರಿ ನಡೆಯುತ್ತಿತ್ತು.

ಒಟ್ಟು ಜನಸಮುದಾಯದ ಅರ್ಧದಷ್ಟಿದ್ದ ಮಹಿಳೆಯರ ಸ್ಥಿತಿಯಂತೂ ಶೋಚನೀಯವಾಗಿತ್ತು. ಹೆಣ್ಣು ಮಗುವಿನ ಜನನವೇ ಸ್ವಾಗತಾರ್ಹವಾದುದಾಗಿರಲಿಲ್ಲ. ಹೆಣ್ಣು ಶಿಶುಗಳ ಹತ್ಯೆ ಹಲವಾರು ಸಮುದಾಯ-ಪ್ರಾಂತ್ಯಗಳಲ್ಲಿ ನೆಲೆಯೂರಿತ್ತು. 'ಬಾಲ್ಯ ವಿವಾಹ'ಗಳಂತೂ ಸರ್ವೆಸಾಮಾನ್ಯವಾಗಿದ್ದವು. 'ಬಹುಪತ್ನಿತ್ವ' ಸಮಾಜದ ಸ್ವಾಸ್ಥ್ಯವನ್ನೇ ಕಲಕಿತ್ತು. ಕೆಲವು ಜಾತಿಗಳಲ್ಲಂತೂ ಈ ಪಿಡುಗು ಹೆಣ್ಣಿಗೆ ವೈವಾಹಿಕ ಜೀವನದ ಬಗ್ಗೆಯೇ ಜುಗುಪ್ಸೆ ಹುಟ್ಟಿಸಿತ್ತು. ಈ ಪದ್ಧತಿ ಎಂತಹ ಅವಾಂತರಗಳಿಗೆ ಕಾರಣವಾಗಿತ್ತೆಂದರೆ, ಬಂಗಾಳದ ಎಂಬತ್ತು ವರ್ಷದ ಮುದುಕನೊಬ್ಬನಿಗೆ ಎರಡು ನೂರು ಹೆಂಡಂದಿರಿದ್ದರು. ಮತ್ತು ಅವನ ಕಿರಿಯ ಹೆಂಡತಿಯ ವಯಸ್ಸು ಎಂಟು ವರ್ಷ! ಅವರಿಗೆಲ್ಲಾ ಎಂಥ ದಾಂಪತ್ಯ ಜೀವನ ದೊರಕಿರಬಹುದು. ಹೋಗಲಿ ಎಂದರೆ ಗಂಡ ಸತ್ತನೆಂದರೆ ಅವನ ಹೆಂಡಂದಿರೆಲ್ಲಾ ಅವನ ಜೊತೆಗೆ ಚಿತೆಯೇರಿ ಸತಿಯರಾಗಬೇಕಿತ್ತು. ಈ ಪದ್ಧತಿ ಕೆಲವು ಪ್ರಾಂತ್ಯಗಳಲ್ಲಿ ಆಚರಣೆಯಲ್ಲಿತ್ತು. ಗಂಡ ಸತ್ತವರು ಸತಿಯಾಗದೆ ಉಳಿದರೆ ಅವರು ಜೀವನ ಪರ್ಯಂತ ವಿಧವೆಯರಾಗಿ, ಎಲ್ಲ ಅಸಡ್ಡೆ, ಮೂದಲಿಕೆ, ಅವಮಾನಗಳನ್ನು ಸಹಿಸಿಕೊಂಡು ದುರ್ಭರ ಜೀವನ ನಡೆಸಬೇಕಾಗಿತ್ತು. ಹಿಂದೂ ಸಮಾಜವನ್ನು ಕಾಡುತ್ತಿದ್ದ ಮತ್ತೊಂದು ಸಮಸ್ಯೆಯೆಂದರೆ 'ಜಾತಿವ್ಯವಸ್ಥೆ'. ಹುಟ್ಟಿನೊಂದಿಗೆ ಜಾತಿಯ ಹಣೆಪಟ್ಟಿ ಹಚ್ಚಿಕೊಂಡೇ ಬರುತ್ತಿದ್ದ

ಮನುಷ್ಯ ಜೀವನ ಪರ್ಯಂತ ಹಾಗೆಯೇ ತೊಳಲಾಡಬೇಕಾದ ಸ್ಥಿತಿಯಿತ್ತು. ಯಾವುದೇ ಸಾಮಾಜಿಕ ಚಲನೆ ಅಲ್ಲಿ ಸಾಧ್ಯವಿರಲಿಲ್ಲ. ಮೇಲ್ಜಾತಿಯವರಿಗೆ ಈ ವ್ಯವಸ್ಥೆ ಒಂದು ರೀತಿಯ ಸಮಸ್ಯೆಯಾದರೆ ಶೂದ್ರಾತಿ ಶೂದ್ರರಿಗೆ ಅದು ಭೀಕರ ಸಮಸ್ಯೆಯಾಗಿತ್ತು. 'ಅಸ್ಪೃಶ್ಯತೆ'ಯಂತೂ ತಾಂಡವವಾಡುತ್ತಿತ್ತು. ಈ ಎಲ್ಲವೂ ಹಿಂದೂ ಸಮಾಜದ ಅವನತ ಸ್ಥಿತಿಯ ಕುರುಹುಗಳು. ಮುಸ್ಲಿಮರು, ಸಿಖ್ಖರು ಮತ್ತು ಪಾರ್ಸಿ ಮತದವರಲ್ಲಿಯೂ ಹಲವಾರು ಸಾಮಾಜಿಕ ಪಿಡುಗುಗಳು ಧರ್ಮದ ಹೆಸರಿನಲ್ಲಿ ಮನೆಮಾಡಿಕೊಂಡಿದ್ದವು. ವಿವಾಹ, ಹೆಣ್ಣಿನ ಸ್ಥಾನಮಾನ, ವಿದ್ಯೆಯ ಅವಕಾಶ ಮುಂತಾದವು ಈ ಧರ್ಮಗಳ ಅನುಯಾಯಿಗಳನ್ನು ಕಾಡುತ್ತಿದ್ದವು. ಒಟ್ಟಾರೆ ಭಾರತದ ಸಾಮಾಜಿಕ ಪರಿಸರದಲ್ಲಿ ವೈಚಾರಿಕತೆ, ಮಾನವೀಯತೆ ಮತ್ತು ಉದಾತ್ತತೆಗಳು ಮರೆಗೆ ಸರಿದು ಅವೈಚಾರಿಕತೆ, ಅಮಾನವೀಯತೆ ಮತ್ತು ಸಂಕುಚಿತ ಮನೋಭಾವಗಳೇ ಮನೆ ಮಾಡಿಕೊಂಡು ಸಾಮಾಜಿಕ ಅಸ್ವಸ್ಥತೆಗೆ ಕಾರಣವಾಗಿದ್ದವು. ಎಲ್ಲವೂ ಧರ್ಮದ ಹೆಸರಿನಲ್ಲೇ ಪ್ರಚಲಿತವಾಗಿದ್ದುದು ನಿಜಕ್ಕೂ ದುರದೃಷ್ಟಕರ. ಯಾಕೆಂದರೆ ಯಾವುದೇ ಧರ್ಮ ಅವೈಚಾರಿಕತೆ, ಅಮಾನವೀಯತೆ ಮತ್ತು ಅನುದಾರತೆಯನ್ನು ಒಳಗೊಂಡಿರಲು ಸಾಧ್ಯವಿರಲಿಲ್ಲ. ಆದರೆ ಧರ್ಮಗಳ ಹೆಸರಿನಲ್ಲಿ ಭಾರತದ ವಿವಿಧ ಸಮುದಾಯಗಳು ಅನುಸರಿಸುತ್ತಿದ್ದುದು, ಆಚರಿಸುತ್ತಿದ್ದುದು, ಧರ್ಮವಾಗಿರದೆ ವಿಕೃತಗೊಂಡ ಆಚರಣೆಗಳಾಗಿದ್ದವು.

ಈ ಸಂದರ್ಭದಲ್ಲಿ ನಿಜ ಧರ್ಮ ಯಾವುದು. ಧಾರ್ಮಿಕ ನಂಬಿಕೆ, ನಡವಳಿಕೆ ಯಾವುವು ಎನ್ನುವ ಪ್ರಶ್ನೆಗಳಿಗೆ ಸಾಮಾಜಿಕ-ಧಾರ್ಮಿಕ ಸುಧಾರಕರು ಉತ್ತರ ಕಂಡು ಹಿಡಿಯಲು ತೊಡಗಿದರು. ಸುಧಾರಕರು ಅವನತಿಯ ಹಾದಿಯನ್ನು ತೊರೆದು ಹೊಸ ಆಧುನಿಕ ಸಮಾಜವೊಂದರ ನಿರ್ಮಿತಿಗೆ ಸಹಾಯಕವಾಗಬಲ್ಲ ಬೌದ್ಧಿಕ-ಸಾಮಾಜಿಕ ಪರಿಸರ ಸೃಷ್ಟಿಸಲು ಆರಂಭಿಸಿದರು. ಹಾಗೆಂದು ಅವರು ಹಳೆಯದೆಲ್ಲವನ್ನು ತಿರಸ್ಕರಿಸಲಿಲ್ಲ. ಸಂಪ್ರದಾಯದಲ್ಲಿ ವಂದನೀಯವಾದದ್ದನ್ನು ಉಳಿಸಿ ಬೆಳೆಸುತ್ತಾ, ಖಂಡನೀಯವಾದದ್ದನ್ನು ತಿರಸ್ಕರಿಸಿ ಹೊಸ ಸಮಾಜಸೃಷ್ಟಿಗೆ ತೊಡಗಿದರು. 'ಸತಿಪದ್ಧತಿ'ಗೆ ಧರ್ಮದಲ್ಲಿ ಯಾವುದೇ ಸಮರ್ಥನೆಯಿಲ್ಲವೆಂದು **ರಾಜಾ ರಾಮಮೋಹನರಾಯರು** ಸಾಬೀತುಪಡಿಸಿದರೆ, **ವಿದ್ಯಾಸಾಗರ್** ಅವರು 'ವಿಧವಾವಿವಾಹ'ಕ್ಕೆ ಧರ್ಮಶಾಸ್ತ್ರಗಳ ಸಮ್ಮತಿಯಿದೆಯೆಂದು ಎತ್ತಿ ತೋರಿಸಿದರು. ಹಾಗೆಯೇ **ಕೇಶವಚಂದ್ರ ಸೇನ್, ದಯಾನಂದ ಸರಸ್ವತಿ, ರಾನಡೆ** ಮುಂತಾದವರು ವೇದಗಳಲ್ಲಿ ಜಾತಿಪದ್ಧತಿಗೆ ಯಾವುದೇ ಸಮರ್ಥನೆಯಿಲ್ಲವೆಂದು ಪ್ರಚುರಪಡಿಸಿದರು. ಅದೇ ರೀತಿ ಪ್ರಾಚೀನವಾದುದು ಎಷ್ಟೇ 'ಪೂಜ್ಯ'ವೆಂದು ಆಚರಣೆಯಲ್ಲಿದ್ದರೂ ಅದು ಇಂದಿನ ಮಾನವ ಕಲ್ಯಾಣಕ್ಕೆ ಸರಿಹೊಂದದಿದ್ದರೆ ಅದನ್ನು ತಿರಸ್ಕರಿಸಬೇಕೆಂದು ಸುಧಾರಕರು ನಂಬಿದ್ದರು. ಅಂದರೆ ಯಾವುದೇ ಸಂಪ್ರದಾಯಕ್ಕೆ ಸಾಮಾಜಿಕ ಪ್ರಸ್ತುತತೆ ಅವಶ್ಯಕ. ಅಪ್ಪ ಹಾಕಿದ ಆಲದ ಮರವೆಂದು ಅದಕ್ಕೆ ನೇಣು ಹಾಕಿಕೊಳ್ಳಬೇಕಾದ್ದಿಲ್ಲ ಎನ್ನುವ ಧೋರಣೆ ಆ

ಮಹನೀಯರದು. ರಾಜಾ ರಾಮಮೋಹನ ರಾಯ್, ರಾನಡೆ, ಅಕ್ಷಯಕುಮಾರದತ್ತ ಮುಂತಾದವರು ಸ್ಪಷ್ಟವಾಗಿ ವೈಚಾರಿಕವಾಗಿ ವಿವರಿಸಲು ಸಾಧ್ಯವಿಲ್ಲದ್ದನ್ನು ಒಪ್ಪಿಕೊಳ್ಳಬೇಕಾದ್ದಿಲ್ಲವೆಂದೆ ಸಾರಿದರು. ತರ್ಕ-ವೈಚಾರಿಕ ನಿಕಷಗಳಿಗೆ ನಿಲುಕದ್ದನ್ನು ತ್ಯಜಿಸುವುದೇ ಸಮಾಜದ ಆರೋಗ್ಯದ ದೃಷ್ಟಿಯಿಂದ ಸರಿ ಎಂದು ಅವರು ಪ್ರತಿಪಾದಿಸಿದರು.

ವೈಚಾರಿಕ ನಿಲುವುಗಳೆ ಅವರನ್ನು ಪ್ರಚಲಿತ ಸಾಮಾಜಿಕ-ಧಾರ್ಮಿಕ ಆಚರಣೆಗಳನ್ನು ನಿಕಷಕ್ಕೆ ಒಡ್ಡಿ ಅವನ್ನು ಒಪ್ಪುವ ಅಥವಾ ತಿರಸ್ಕರಿಸುವುದಕ್ಕೆ ಸಹಾಯಕವಾದವು. ಈ ನಿಲುವು ಬ್ರಹ್ಮಸಮಾಜವನ್ನು 'ವೇದಗಳ ಪ್ರಾಮಾಣ್ಯ'ವನ್ನು ಪ್ರಶ್ನಿಸುವಲ್ಲಿಗೆ ಕೊಂಡೊಯ್ಯಿತು. ಅಲಿಗಢ ಚಳವಳಿಯ ನೇತಾರ ಸೈಯ್ಯದ್ ಅಹಮದ್‌ಖಾನರೂ ಪವಿತ್ರ ಖುರ್-ಆನ್ ಅನ್ನು ಅದೇ ರೀತಿ ವೈಚಾರಿಕ ದೃಷ್ಟಿಯಿಂದ ಅರ್ಥೈಸಿದರು. ಆಧುನಿಕ ಕಾಲದ ಅಗತ್ಯಗಳನ್ನು ಮನಗಂಡು ಇಸ್ಲಾಂ ಧರ್ಮವನ್ನು ಪುನರ್ ವ್ಯಾಖ್ಯಾನಿಸಿದ ಧೀಮಂತ ಸೈಯ್ಯದ್ ಅಹಮದ್. ಬದಲಾಗುವ ಪ್ರಕ್ರಿಯೆಗೆ, ಮಾನವನ ಪ್ರಗತಿಗೆ ತೆರೆದುಕೊಳ್ಳದ ಎಲ್ಲವೂ ಧರ್ಮಶಾಸ್ತ್ರಗಳೂ ಸೇರಿ ಪಳೆಯುಳಿಕೆಗಳಾಗಿ ಚೈತನ್ಯ ಹೀನವಾಗಿ ಬಿಡುತ್ತವೆಂದು ಅವರು ಸಾರಿಸಾರಿ ಹೇಳುತ್ತಿದ್ದರು. ಆದ್ದರಿಂದಲೇ ಅವರು ತಮ್ಮ ಶಾಲಾ-ಕಾಲೇಜುಗಳಲ್ಲಿ ಸಾಂಪ್ರದಾಯಿಕ ಧಾರ್ಮಿಕ ಶಿಕ್ಷಣದ ಜೊತೆಗೆ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಪಾಶ್ಚಾತ್ಯ ವಿದ್ಯೆಗೆ ಒತ್ತು ಕೊಟ್ಟರು.

ಕೆಲವು ಸುಧಾರಕರಂತೂ ಸಾಮಾಜಿಕ ಪ್ರಗತಿ ಮತ್ತು ಮನುಕುಲದ ಒಳಿತಿಗಾಗಿ ಧರ್ಮಶಾಸ್ತ್ರಗಳ ಹಂಗಿನಿಂದ ಬಿಡಿಸಿಕೊಳ್ಳಬೇಕೆಂದು ಕರೆಯಿತ್ತರು. ಯಾವುದೇ ಧರ್ಮ ಸಮಾಜ ಕಂಟಕವಾಗಿರುವುದಿಲ್ಲ. ಹಾಗೇನಾದರೂ ಅದು ಕಂಡುಬಂದಲ್ಲಿ ಧರ್ಮಶಾಸ್ತ್ರವನ್ನೇ ಬದಲಾಯಿಸಬೇಕು. ಯಾಕೆಂದರೆ ಧರ್ಮಶಾಸ್ತ್ರಗಳೂ ಮಾನವ ನಿರ್ಮಿತ. ಆಯಾ ಕಾಲದ ಸಮಾಜ-ಮಾನವರು ತಮ್ಮ ಸಂದರ್ಭಕ್ಕೆ ತಕ್ಕ ಶಾಸ್ತ್ರಗಳನ್ನು ರಚಿಸಿ, ಅನುಸರಿಸುತ್ತಿದ್ದರು. ಎಲ್ಲವೂ ಎಲ್ಲ ಕಾಲಕ್ಕೂ ಸಲ್ಲಲಾರದು. ಆದ್ದರಿಂದ ಇಂದಿನ ಸಮಾಜಕ್ಕೆ ಸಂದರ್ಭಕ್ಕೆ ಮಾನವನ ಅಭ್ಯುದಯಕ್ಕೆ ಸಹಾಯಕವಾಗಬಲ್ಲದ್ದನ್ನು ಆಚರಿಸಬೇಕೆಂಬುದೇ ಮಹಾರಾಷ್ಟ್ರದ ರಾನಡೆ, ಗೋಪಾಲ ಹರಿದೇಶ್‌ಮುಖ್ ಮತ್ತು ಅಗರ್‌ಕರ್ ಪ್ರತಿಪಾದಿಸಿದರು.

ಬಹುತೇಕ ಎಲ್ಲ ಸುಧಾರಕರ ಧಾರ್ಮಿಕ ದೃಷ್ಟಿಕೋನ ವಿಶ್ವಾತ್ಮಕವಾದದ್ದೇ. ರಾಜಾ ರಾಮಮೋಹನರಾಯ್, ಕೇಶವಚಂದ್ರಸೇನ್, ಸೈಯ್ಯದ್ ಅಹಮದ್‌ಖಾನ್ ಎಲ್ಲರೂ ಎಲ್ಲ ಧರ್ಮಗಳ ವಿಶ್ವಾತ್ಮಕತೆಯಲ್ಲಿ ನಂಬಿಕೆ ಇದ್ದವರೇ. ಆದರೂ ರಾಜಾ ರಾಮರು ಹಿಂದೂಗಳಲ್ಲಿದ್ದ ಬಹುಪತ್ನಿತ್ವ ಮತ್ತು ವಿಗ್ರಹಾರಾಧಾನೆಯನ್ನು ಟೀಕಿಸಿದರು. ಕೇಶವ ಚಂದ್ರಸೇನರಂತೂ 'ನಿಜದೈವವನ್ನು ದಿನನಿತ್ಯವೂ ಆರಾಧಿಸುವವನು ತನ್ನ ದೇಶಭಾಂಧವರೆಲ್ಲಾ ತನ್ನ ಸೋದರರರೆಂದೇ ಪರಿಗಣಿಸುವುದನ್ನು ಕಲಿಯಬೇಕು. ಅಂಥ ಸಮಾಜದಲ್ಲಿ ಜಾತಿ ನಿರ್ನಾಮವಾಗುತ್ತದೆ, 'ನನ್ನ ದೇವರು ಒಬ್ಬನೇ ಅವನೇ ನಮ್ಮೆಲ್ಲರ ಸೃಷ್ಟಿಕರ್ತ ಎಂದು

ನಾನು ನಂಬುವುದಾದರೆ, ಅಂತರ್‌ಪ್ರೇರಣೆ ಮತ್ತು ಸಹಜ ಅಂತಃಕರಣ ಮತ್ತು ಪ್ರೀತಿಯಿಂದ ನನ್ನ ಸುತ್ತಲಿನ ಎಲ್ಲರನ್ನೂ - ಪಾರ್ಸಿ, ಹಿಂದೂ, ಮುಸ್ಲಿಂ, ಯುರೋಪಿಯನ್ ಯಾರೇ ಇರಲಿ - ನನ್ನ ಸಹೋದರರರೆಂದೇ ನಡೆದುಕೊಳ್ಳಬೇಕು' ಎಂದೇ ಹೇಳುತ್ತಿದ್ದರು.

ಮತೀಯ ನಿರ್ದಿಷ್ಟತೆ ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಕಾಣಿಸಿಕೊಳ್ಳುವ ವರೆಗೆ, ಎಲ್ಲ ಸುಧಾರಕರು ಮತ್ತು ಸುಧಾರಣಾ ಚಳವಳಿಗಳಲ್ಲಿ ಕಾಣುವುದು ಸಮನ್ವಯ ಮತ್ತು ವಿಶ್ವಾತ್ಮಕ ಧೋರಣೆಯೇ. ಆ ಸುಧಾರಕರ ತಾತ್ವಿಕತೆ ಉದಾರವಾದ, ವೈಚಾರಿಕತೆ, ಸಂಪ್ರದಾಯದಲ್ಲಿದ್ದ ಪ್ರಗತಿಪರತೆ ಮತ್ತು ಆಧುನಿಕ ಜ್ಞಾನಗಳಿಂದ ಪ್ರೇರಿತವಾಗಿತ್ತು. ಆದರೆ ೧೮೭೦ರ ನಂತರ ಬ್ರಿಟಿಷ್ ವಸಾಹತುಶಾಹಿ ಆಡಳಿತ, ಭಾರತದ ಇತಿಹಾಸ ಕುರಿತ ಅವರ ಬರವಣಿಗೆಗಳು ಮತ್ತು ಒಡೆದು ಆಳುವ ನೀತಿಗಳು ಭಾರತೀಯ ಸಮಾಜದಲ್ಲಿ 'ಕೋಮುವಾದಿ ಬೀಜ'ಗಳನ್ನು ನೆಟ್ಟವು. ಇದನ್ನು ಅರ್ಥಮಾಡಿಕೊಳ್ಳಲಾಗದ ಕೆಲವು ಭಾರತೀಯರು ಬ್ರಿಟಿಷರ ಕೈಯಲ್ಲಿ ದಾಳಗಳಾದರು. ಅಲ್ಲಿಯವರೆಗೂ ಭಾರತದ ಸಾರ್ವಜನಿಕ ಚಟುವಟಿಕೆಗಳಲ್ಲಿ ಕಾಣಿಸಿಕೊಳ್ಳದಿದ್ದ ಮತೀಯ ಮತ್ತು 'ಚಾರಿತ್ರಿಕ ಸಂಕೇತ'ಗಳು ಕಾಣಿಸಿಕೊಳ್ಳತೊಡಗಿದವು. ದುರಾದೃಷ್ಟವಶಾತ್ ಈ ಸಂಕೇತಗಳು ಬಿಂಬಿತವಾದದ್ದು ನೈಜರೂಪದಲ್ಲಿ ಅಲ್ಲ. ಅವನ್ನು ವಿಕೃತಗೊಳಿಸಿ ಬಳಸಿಕೊಳ್ಳಲಾಯಿತು. ಅದರ ಪರಿಣಾಮವೆಂದರೆ ಮತೀಯತೆಯ ಬೀಜಾಂಕುರ. ಅದರ ಚರ್ಚೆ ಇಲ್ಲಿ ಅಪ್ರಸ್ತುತ.

ಜಾತಿವ್ಯವಸ್ಥೆಯು ಜನತಂತ್ರ ಮತ್ತು ದೇಶಾಭಿಮಾನಗಳಿಗೆ ಕಂಟಕ ಪ್ರಾಯವೆಂಬ ಇಂಗಿತ ಸುಧಾರಣಾವಾದಿಗಳ ನಿಲುವಿನಲ್ಲಿ ಸೂಚ್ಯವಾಗಿಯಾದರೂ ಇತ್ತು. ಆದರೂ ಆರ್ಯ ಸಮಾಜ ಚಾತುರ್ವರ್ಣವನ್ನು ಆದರ್ಶೀಕರಿಸಿತು. ಜಾತಿ ವಿರೋಧಿ ನಿಲುವು ಸ್ಪಷ್ಟವಾಗಿ ಕಾಣಿಸಿ ಕೊಂಡದ್ದು ಕೆಳಜಾತಿ-ವರ್ಗಗಳ ಸುಧಾರಕರ ಚಳವಳಿಗಳಲ್ಲೇ. ನಾಮಶೂದ್ರ, ಆದಿಧರ್ಮ, ಜಾತಿಪಥ ತೋಡಕ್ ಮಂಡಳಿ, ಸತ್ಯ ಶೋಧಕ ಸಮಾಜ ಮತ್ತು ನಾರಾಯಣ ಗುರು ಧರ್ಮಪರಿಪಾಲನ ಸಂಘಗಳ ಚಳವಳಿಗಳಲ್ಲಿ ಜಾತಿವ್ಯವಸ್ಥೆಯನ್ನು ತೊಡೆದುಹಾಕುವ ಹಂಬಲ ಕಾಣಿಸಿತು. ನಾರಾಯಣ ಗುರುಗಳಂತೂ ಮಾನವಕುಲಕ್ಕೆಲ್ಲಾ 'ಒಂದೇ ಧರ್ಮ, ಒಂದೇ ಜಾತಿ ಮತ್ತು ಒಂದೇ ದೈವ'ವೆಂದು ಸಾರಿದರು. ಇದು ಪಂಪ ಮಹಾಕವಿಯ 'ಮನುಜಕುಲಂ ತಾನೊಂದೆ ವಲಂ' ಎಂಬುದನ್ನು ನೆನಪಿಗೆ ತರುತ್ತದೆ. ಸಂಪ್ರದಾಯ ಮತ್ತು ಜನತೆಗೆ ಆ ಬಗ್ಗೆ ಇದ್ದ ನಿಷ್ಠೆ, ಭಾವುಕ ಸಂಬಂಧಗಳ ವಿರುದ್ಧ ಸುಧಾರಣಾ ಚಳವಳಿಗಳನ್ನು ನಡೆಸುವುದು ಅತ್ಯಂತ ಕಷ್ಟದ ಕೆಲಸವೇ ಸರಿ. ವೈಯಕ್ತಿಕ ಜೀವನದಲ್ಲೇ ಈ ಸಮಸ್ಯೆಯನ್ನು ಎದುರಿಸಿದವರು ಅನೇಕ. ರಾನಡೆ, ತೆಲಂಗ್, ಗೋಪಾಲ ಹರಿದೇಶ್‌ಮುಖ್, ಕೇಶವ ಚಂದ್ರಸೇನ್ ಮತ್ತು ಸುಬ್ರಹ್ಮಣ್ಯ ಅಯ್ಯರ್ ಮುಂತಾದವರು ಈ ಸಮಸ್ಯೆ ಎದುರಿಸಿ ಮಾನಸಿಕ ಕ್ಷೋಭೆಗೆ ಒಳಗಾದರು.

ಈ ಎಲ್ಲ ಬೆಳವಣಿಗೆಗಳ ನಡುವೆ ಭಾರತೀಯ ಸಂಸ್ಕೃತಿ, ಸಮಾಜ, ಧರ್ಮಗಳನ್ನು ಬೇಕೆಂದೇ ಅವಹೇಳನ ಮಾಡುತ್ತಿದ್ದ ಬ್ರಿಟಿಷ್ ವಸಾಹತುವಾದಿಗಳು, ಕ್ರೈಸ್ತ ಮಿಶನರಿಗಳನ್ನು ದೇಶೀಯರು ಗಮನದಲ್ಲಿಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು. ದೇಶಿಯಾದಿ ಎಲ್ಲವೂ ತಿರಸ್ಕಾರಕ್ಕೆ ಯೋಗ್ಯ ಎಂದಾದರೆ, ಭಾರತೀಯವಾದದ್ದು, ತಮ್ಮದಾದದ್ದು ಎಲ್ಲವೂ ವರ್ಜ್ಯವೇ ಎಂದಾಗುತ್ತಿತ್ತು. ಹಾಗಾದಾಗ ಭಾರತೀಯರಲ್ಲಿ ಸ್ವಾಭಿಮಾನ, ತಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಮತ್ತು ಅದರ ಮೂಲಕ ದೇಶಾಭಿಮಾನ, ರಾಷ್ಟ್ರಭಕ್ತಿ ಅಂಕುರಿಸುವುದಾದರೂ ಹೇಗೆ? ಈ ಪ್ರಶ್ನೆ ಸುಧಾರಣಾವಾದಿಗಳನ್ನು ಕಾಡಿತು. ಆದ್ದರಿಂದಲೇ ಅವರು ಸಂಪ್ರದಾಯಗಳಲ್ಲಿ ವೈಚಾರಿಕ-ಆಧ್ಯಾತ್ಮಿಕ ನೆಲೆಯಲ್ಲಿ ಸಮರ್ಥಿಸಿಕೊಳ್ಳಬಹುದಾದದ್ದನ್ನು ಸಮರ್ಥಿಸಿಕೊಂಡರು. ಹಾಗೆಯೇ ಸಮಾಜ ಕಂಟಕವಾದದ್ದನ್ನು ತಿರಸ್ಕರಿಸಿದರು. ಬಹುತೇಕ ಧರ್ಮಶಾಸ್ತ್ರ-ಪರಂಪರೆಗಳ ಸಹಾಯದಿಂದಲೇ ಈ ತಿರಸ್ಕಾರಕ್ಕೂ ಅವರು ಸಮರ್ಥನೆಯನ್ನು ಒದಗಿಸಿಕೊಂಡರು. ಈ ಪ್ರಕ್ರಿಯೆಯಲ್ಲೇ ಆಧುನಿಕವಾದ ರಾಷ್ಟ್ರಾಭಿಮಾನ, ಜನತಂತ್ರ, ಜಾತ್ಯಾತೀತತೆ, ಸಹಬಾಳ್ವೆ ಮುಂತಾದ ಪರಿಕಲ್ಪನೆಗಳು ಮೂಡಿಬಂದವು. ಈ ಪರಿಕಲ್ಪನೆಗಳೇ ನಮ್ಮ ಸ್ವಾತಂತ್ರ್ಯ ಚಳವಳಿಯ ಆಧಾರ ಸ್ತಂಭಗಳಾಗಿದ್ದವು ಎನ್ನುವುದು ಇಲ್ಲಿ ಒತ್ತಿ ಹೇಳಬೇಕಾದ ಮಾತು. ಆಧುನಿಕ ಭಾರತದಲ್ಲಿ ಈ ಪರಿಕಲ್ಪನೆಗಳು ಬೇರೂರಲು ಕಾರಣವಾದವರು ಅನೇಕರು. ಅವರಲ್ಲಿ ಮುಖ್ಯರಾದವರೆಂದರೆ, **ರಾಜಾ ರಾಮಮೋಹನ ರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಸಯ್ಯದ್ ಅಹ್ಮದ್‌ಖಾನ್, ಅನ್ನಿಬೆಸೆಂಟ್** ಮುಂತಾದವರು. ಈ ಮಹನೀಯರ ಕಾಣ್ಕೆ-ಕೊಡುಗೆಗಳನ್ನು ಇಲ್ಲಿ ತಿಳಿಯುವುದು ಅಗತ್ಯ.

ರಾಜಾ ರಾಮಮೋಹನ ರಾಯ್ (೧೭೭೨-೧೮೩೩)

ನವೋದಯದ ಹರಿಕಾರರಲ್ಲಿ ರಾಜಾ ರಾಮಮೋಹನರಾಯರನ್ನು **ಆಧುನಿಕ ಭಾರತದ ಪಿತನೆಂದು** ಕರೆಯಲಾಗಿದೆ. ೧೭೭೨ ರಲ್ಲಿ ಬಂಗಾಳದ (**ರಾಧಾಪುರ**)ಲ್ಲಿ ಹುಟ್ಟಿದ ರಾಯರು ಕಾಶಿ, ಪಾಟ್ನಾಗಳಲ್ಲಿ ಸಂಸ್ಕೃತ, ಅರೆಬಿಕ್, ಪರ್ಷಿಯನ್ ಭಾಷೆ, ಸಾಹಿತ್ಯಗಳನ್ನು ಕಲಿತು, ಅನಂತರ ಇಂಗ್ಲಿಷ್, ಗ್ರೀಕ್, ಹಿಬ್ರೂ ಭಾಷೆಗಳಲ್ಲಿ ಪರಿಣತಿ ಪಡೆದ ಬಹುಭಾಷಾ ಪರಿಣಿತರೆನಿಸಿದರು. ಜಗತ್ತಿನ ಮುಖ್ಯ ಧರ್ಮಗಳನ್ನು ಅಭ್ಯಸಿಸಿ ಕರಗತ ಮಾಡಿಕೊಂಡ ರಾಯರು ಎಲ್ಲ ಧರ್ಮಗಳ ತಿರುಳು ಒಂದೇ; ಮಾನವ ಪ್ರೀತಿ, ಸಹಬಾಳ್ವೆ. ಆದರೆ ಪ್ರಚಲಿತ ಧರ್ಮಗಳನ್ನು ಈ ತತ್ವಗಳಿಗೆ ಅನುಗುಣವಾಗಿ ಅನುಸರಿಸುತ್ತಿಲ್ಲವೆಂದು ಖಿನ್ನರಾದರು. ಹಿಂದೂ-ಇಸ್ಲಾಂ ಧರ್ಮಗಳ ಆಚರಣೆಗಳಲ್ಲಿ ನುಸುಳಿಕೊಂಡಿರುವ ಸಮಾಜಕಂಟಕವಾದುವನ್ನು ತ್ಯಜಿಸಿ, ಅವುಗಳ ಪಾವಿತ್ರ್ಯವನ್ನು ಮತ್ತೆ ಎತ್ತಿ ಹಿಡಿಯುವುದು ಅತ್ಯಗತ್ಯವೆಂದು ಅರಿತು ಆ ದಿಕ್ಕಿನಲ್ಲಿ ಕಾರ್ಯನಿರತರಾದರು. ಭಾರತ ಆಧುನಿಕಗೊಳ್ಳುವುದು ಅನಿವಾರ್ಯ ಮತ್ತು ಹೊರಗಿನ ಜ್ಞಾನ-ವಿಜ್ಞಾನಗಳ ಕಲಿಕೆ ಅದಕ್ಕೆ ಅತ್ಯಗತ್ಯವೆಂದು ಮನಗಂಡರು. ಹಾಗೆಯೇ ಜಾತಿಪದ್ಧತಿ ಮತ್ತು ಮಹಿಳೆಯರ ಸ್ಥಿತಿಗಳಲ್ಲಿ ಪ್ರಗತಿಪರ ಬದಲಾವಣೆಗಳು ಆಗದಿದ್ದಲ್ಲಿ

ಭಾರತೀಯ ಸಮಾಜ ಪೂರ್ಣ ಕೊಳೆತು ಹೋಗುತ್ತದೆಂದು ಅರಿತರು. ಬಾಲ್ಯವಿವಾಹ, ಸತಿಪದ್ಧತಿ, ವಿಧವಾ ವಿವಾಹ ಈ ಬಗ್ಗೆ ದಿಟ್ಟ ನಿಲುವು ತಳೆದ ರಾಯರು ಆ ಬಗ್ಗೆ ಬೌದ್ಧಿಕ ಮತ್ತು ಸಂಘಟನಾತ್ಮಕ ಹೋರಾಟ ಪ್ರಾರಂಭಿಸಿದರು. ಈ ಪ್ರಕ್ರಿಯೆಯಲ್ಲಿ ರಾಯರು ಕರ್ಮಠರ ದಾಳಿಗೆ ತುತ್ತಾದರು. ಬ್ರಿಟಿಷ್ ಭಾರತದ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕ್ ಸರ್ಕಾರ 'ಸತಿಪದ್ಧತಿ'ಯನ್ನು ನಿಷೇಧಿಸುವುದರೊಂದಿಗೆ ರಾಯರ ಹೋರಾಟ ಫಲನೀಡತೊಡಗಿತು.

ತಮ್ಮ ಹೋರಾಟಕ್ಕೆ ಆಧುನಿಕ ಸಂಘಟಿತ ರೂಪ ಕೊಡಬೇಕಾದ ಅನಿವಾರ್ಯತೆಯನ್ನು ಮನಗಂಡ ರಾಯರು ೧೮೨೮ ರಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ವಿಗ್ರಹಾರಾಧನೆಯನ್ನು ತಿರಸ್ಕರಿಸಿದ ಈ ಸಂಸ್ಥೆ, ಏಕದೇವತೋಪಾಸನೆಯನ್ನು ಎತ್ತಿಹಿಡಿಯಿತು. ಇದು ಎಲ್ಲ ಮತ-ಧರ್ಮಗಳ ಅನುಯಾಯಿಗಳು ಜೊತೆಯಲ್ಲಿಯೇ ಪ್ರಾರ್ಥನೆ ಸಲ್ಲಿಸಲು ಅನುವು ಮಾಡಿಕೊಟ್ಟಿತು. ಸಾಂಪ್ರದಾಯಿಕ ಕಲಿಕೆಯೊಂದಿಗೆ ಪಾಶ್ಚಾತ್ಯ ವಿಜ್ಞಾನ-ಚಿಂತನೆಗಳನ್ನು ಭಾರತೀಯರು ಅಭ್ಯಸಿಸಬೇಕೆಂದು ಚಳವಳಿಯನ್ನೇ ಕೈಗೊಂಡರು. ಅವರಂಥವರ ಪ್ರಯತ್ನಗಳಿಂದಾಗಿಯೇ ೧೮೧೩ ರಿಂದ ಬ್ರಿಟಿಷ್ ಕಂಪನಿ ಒಂದು ಲಕ್ಷ ರೂಪಾಯಿಗಳನ್ನು ಭಾರತೀಯರ ಶಿಕ್ಷಣಕ್ಕಾಗಿ ಖರ್ಚುಮಾಡಬೇಕೆಂದು ತೀರ್ಮಾನವಾಯಿತು. ವ್ಯಕ್ತಿಯ ಘನತೆ ಮತ್ತು ಸ್ವಾತಂತ್ರ್ಯಗಳಲ್ಲಿ ಅಪಾರ ನಂಬಿಕೆಯಿದ್ದ ರಾಯರು ಪತ್ರಿಕಾ ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ರೂಪಿಸಿದರು. ೧೮೩೩ ರಲ್ಲಿ ರಾಯರು ಇಂಗ್ಲೆಂಡಿನಲ್ಲಿ ನಿಧನರಾದರು. ಅವರ ತರುವಾಯ ಅವರ ಶಿಷ್ಯರಾದ ದೇವೇಂದ್ರನಾಥ್ ಠಾಕೂರ್ ಮತ್ತು ಕೇಶವ ಚಂದ್ರಸೇನರು ಬ್ರಹ್ಮ ಸಮಾಜದ ಕೆಲಸವನ್ನು ಮುನ್ನಡೆಸಿದರು.

ದಯಾನಂದ ಸರಸ್ವತಿ (೧೮೨೪-೧೮೩೩)

ದಯಾನಂದ ಸರಸ್ವತಿ ಅವರು ೧೮೨೪ ರಲ್ಲಿ ಗುಜರಾತಿನಲ್ಲಿ ಜನಿಸಿದರು. ವೇದಗಳ ನೆಲೆಯಲ್ಲಿ ಹಿಂದೂ ಸಮಾಜವನ್ನು ಸುಧಾರಿಸಲು ಹೊರಟ ದಯಾನಂದರು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಜಾತಿಪದ್ಧತಿ, ಅಸ್ಪೃಶ್ಯತೆಗಳನ್ನು ಖಂಡಿಸಿ, ಚಳವಳಿ ರೂಪಿಸಿದ ಅವರು ೧೮೭೫ ರಲ್ಲಿ ಆರ್ಯಸಮಾಜವನ್ನು ಸ್ಥಾಪಿಸಿದರು. ವೇದಕಾಲದ ಸಮಾಜ ಸಮಾನತೆ-ಸ್ವಾಸ್ಥ್ಯಗಳಿಂದ ಕೂಡಿತ್ತು ಎಂದು ಪ್ರತಿಪಾದಿಸಿದ ದಯಾನಂದರು ಇಂದಿನ ಸಮಾಜ ಸುಧಾರಣೆ ವೇದಕಾಲೀನ ಮಾದರಿಯಲ್ಲೇ ಪುನರ್‌ಸಂಘಟಿತವಾಗಬೇಕೆಂದು 'ವೇದಗಳಿಗೆ ಹಿಂದಿರುಗಿ' ಎಂದು ಕರೆಯಿತ್ತರು. ಬಾಲಿಕೆಯರ ಶಿಕ್ಷಣಕ್ಕೆ ಒತ್ತು ಕೊಟ್ಟು, ಉತ್ತರ ಭಾರತದ ಹಲವೆಡೆ ದಯಾನಂದ ಆಂಗ್ಲೋ-ವರ್ನಾಕುಲರ್ ಶಾಲೆ-ಕಾಲೇಜುಗಳನ್ನು ಸ್ಥಾಪಿಸಿದರು. ಹಿಂದಿಯಲ್ಲಿ ಸತ್ಯಾರ್ಥ ಪ್ರಕಾಶವೆಂಬ ಗ್ರಂಥ ರಚಿಸಿ ತಮ್ಮ ಚಿಂತನೆಗಳನ್ನು ಪ್ರಚುರಪಡಿಸಿದರು. 'ಆರ್ಯ ಸಮಾಜ' ಹಿಂದೂ ಸಮಾಜದ ಪುನರುಜ್ಜೀವನಕ್ಕೆ ಸಹಾಯಕವಾಯಿತು. ಹಾಗೆಯೇ ಜನರಲ್ಲಿ ರಾಷ್ಟ್ರೀಯ ಭಾವನೆ ಮೂಡಲು ಕಾರಣವಾಯಿತು.

'ಮೂರ್ತಿ ಪೂಜೆ'ಯನ್ನು ವಿರೋಧಿಸಿದ ದಯಾನಂದರು ಹಿಂದಿಯಲ್ಲೇ ಬರೆದು, ಪ್ರವಚನ ನೀಡುವುದರ ಮೂಲಕ ಸಾಮಾನ್ಯರಿಗೂ ತಲುಪಲು ಸಾಧ್ಯವಾಯಿತು. **ಗುಜರಾತ್, ರಾಜಸ್ಥಾನ್, ಉತ್ತರ ಪ್ರದೇಶ, ಪಂಜಾಬ್**ಗಳಲ್ಲಿ ಜನಪ್ರಿಯತೆ ಗಳಿಸಿದ 'ಆರ್ಯ ಸಮಾಜ' ಬಹುತೇಕ ಮೇಲ್‌ಮಧ್ಯಮ ವರ್ಗದವರಿಂದ ತುಂಬಿತ್ತು. 'ಆರ್ಯ ಸಮಾಜ'ದ ಸದಸ್ಯರು ಹತ್ತು ತತ್ವಗಳನ್ನು ಪಾಲಿಸಬೇಕಾಗಿತ್ತು. ವೇದಗಳ ಅಧ್ಯಯನವೂ ಅದರಲ್ಲಿ ಒಂದು. ಮಿಕ್ಕೆಲ್ಲವೂ ನೈತಿಕತೆ, ಸನ್ನಡತೆಗಳಿಗೆ ಸಂಬಂಧಿಸಿವೆ. ಜಾತಿ ಮತ್ತು ಅಸಮತೆಗಳನ್ನು ಖಂಡಿಸಿದ ಆರ್ಯಸಮಾಜ ಬಾಲ್ಯವಿವಾಹ ಮತ್ತು ವಿಧವಾ ವಿವಾಹಗಳಿಗೆ ಪ್ರೋತ್ಸಾಹ ಕೊಟ್ಟಿತು. ಎಲ್ಲ ವಿಚಾರಗಳಲ್ಲೂ ವೇದಗಳೇ ಅಂತಿಮವೆಂದ ದಯಾನಂದರು ಆ ಮೂಲಕ ಹಿಂದೂಗಳಿಗೆ ಒಂದು ಖಚಿತ ಧಾರ್ಮಿಕ ನಂಬಿಕೆ ಒದಗಿಸಿ ಅವರಲ್ಲಿ ಒಂದು ಬಗೆಯ ರಜೋಗುಣ ಬೆಳೆಯಲು ಕಾರಣವಾದರು. ಇತರ ಧರ್ಮಗಳಿಗೆ ಮತಾಂತರಗೊಂಡಿದ್ದ ಹಿಂದೂಗಳನ್ನು ಮರು ಮತಾಂತರಿಸಿ ಆರ್ಯ ಧರ್ಮ ಸಂಘಟನೆಗೆ ತೊಡಗಿದ ಆರ್ಯಸಮಾಜ, ಅದಕ್ಕಾಗಿ ಕ್ರಮವಾಗಿ **ಶುದ್ಧಿ** ಮತ್ತು **ಸಂಘಟನೆ** ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಈ ಕಾರ್ಯಕ್ರಮ ವಿವಾದಗಳನ್ನು ಸೃಷ್ಟಿ ಮಾಡಿತು. ಇತರ ಸುಧಾರಕರು ಧರ್ಮಶಾಸ್ತ್ರಗಳಲ್ಲಿದ್ದ ಅವೈಚಾರಿಕವಾದುದನ್ನು ಪ್ರಶ್ನಿಸಿ ತಿರಸ್ಕರಿಸಿದರೆ ಆರ್ಯಸಮಾಜ ವೇದವೇ ಪ್ರಮಾಣವೆಂದು, ವೇದಗಳೇ ಅಂತಿಮ ಸತ್ಯವೆಂದು ಸಾರಿತು. **ಲಾಲಾ ಲಜಪತರಾಯ್, ಸ್ವಾಮಿ ಶ್ರದ್ಧಾನಂದ** ಮುಂತಾದ ಅಪ್ಪಟ ಸ್ವಾತಂತ್ರ್ಯ ಯೋಧರು ಆರ್ಯಸಮಾಜದ ಹಿನ್ನಲೆಯಿಂದ ಬಂದವರು. ಹೀಗೆ ಆರ್ಯ ಸಮಾಜಕ್ಕೂ ಭಾರತ ರಾಷ್ಟ್ರೀಯ ಚಳವಳಿಗೂ ಅವಿನಾಭಾವ ಸಂಬಂಧವಿತ್ತು.

ವಿವೇಕಾನಂದ (೧೮೬೩-೧೯೦೨)

ಸ್ವಾಮಿ ವಿವೇಕಾನಂದರು ೧೮೬೩ ರಲ್ಲಿ **ಕಲ್ಕತ್ತಾ**ದಲ್ಲಿ ಹುಟ್ಟಿದರು. ಇವರ ಪೂರ್ವಾಶ್ರಮದ ಹೆಸರು 'ನರೇಂದ್ರದತ್ತ'. ವಿವೇಕಾನಂದರನ್ನು 'ವೀರ ಸನ್ಯಾಸಿ' ಎಂದು ಕರೆಯಲಾಗುತ್ತದೆ. ತರುಣ ವಿವೇಕಾನಂದರ ಪೌರ್ವಾತ್ಯ-ಪಾಶ್ಚಾತ್ಯ ದರ್ಶನಗಳನ್ನು ಅರಗಿಸಿ ಕೊಂಡವರು. ಉಪನಿಷತ್ ಮತ್ತು ವೇದಾಂತಗಳಿಂದ ಅಪಾರವಾಗಿ ಪ್ರೇರಣೆ ಪಡೆದ ಆಧ್ಯಾತ್ಮಿ. ಅವರು ತಮ್ಮ ಹಲವಾರು ಧಾರ್ಮಿಕ-ಆಧ್ಯಾತ್ಮಿಕ ಪ್ರಶ್ನೆಗಳಿಗೆ ಅಂತಿಮವಾಗಿ ಉತ್ತರ ಕಂಡುಕೊಂಡದ್ದು ತಮ್ಮ ಗುರು **ರಾಮಕೃಷ್ಣ ಪರಮಹಂಸ**ರಿಂದ. 'ಸರ್ವಧರ್ಮ ಸಮನ್ವಯದ ಹರಿಕಾರ'ರಾದ ಪರಮಹಂಸರು, ಅಪ್ಪಟ ದೇಸಿ ಚಿಂತನೆಯ ಮೂಸೆಯಲ್ಲಿ ಅರಳಿದವರು. ಪಾಶ್ಚಾತ್ಯ ಭೌತವಾದ ಮತ್ತು ತೀಕ್ಷ್ಣ ವೈಚಾರಿಕತೆಗಳಿಂದ ಗೊಂದಲಗೊಂಡ ಸಮಕಾಲೀನ ಭಾರತೀಯ ಸುಧಾರಕರು-ಬುದ್ಧಿಜೀವಿಗಳೆಲ್ಲಾ ರಾಮಕೃಷ್ಣರ ಬಳಿ ಚರ್ಚಿಸಿ ಅವನ್ನು ಪರಿಹರಿಸಿ ಕೊಳ್ಳುತ್ತಿದ್ದರು. ದೇಸೀ ಪರಿಭಾಷೆಯಲ್ಲಿ ತಮ್ಮ ಸುತ್ತಲಿನ ಜನಜೀವನ-ದೃಷ್ಟಾಂತಗಳಿಂದಲೇ ಎಂಥ ಜಟಿಲ ಪ್ರಶ್ನೆ-ಸಮಸ್ಯೆಗಳಿಗೂ ತಣ್ಣಗೆ ಪರಿಹಾರ ಸೂಚಿಸುತ್ತಿದ್ದ ರಾಮಕೃಷ್ಣರನ್ನು ವಿವೇಕಾನಂದರು ತಮ್ಮ 'ಗುರು'ವೆಂದು ಸ್ವೀಕರಿಸಿದರು. ಸರ್ವಧರ್ಮ ಸಮನ್ವಯವೇ

ಅಂದಿನ ಎಲ್ಲ ಸಾಮಾಜಿಕ-ಧಾರ್ಮಿಕ ಸಂಘರ್ಷಗಳಿಗೆ ಪರಿಹಾರವೆಂದು ಅರಿತ ವಿವೇಕಾನಂದರು ಅದರ ಪ್ರಚಾರಕ್ಕೆ ಕಂಕಣಕಟ್ಟಿ ನಿಂತರು. ಈ ತತ್ವದ ಅನುಷ್ಠಾನಕ್ಕಾಗಿ ತನ್ನ ಗುರುವಿನ ಹೆಸರಿನಲ್ಲಿ ೧೮೯೭ ರಲ್ಲಿ **ರಾಮಕೃಷ್ಣ ಆಶ್ರಮವನ್ನು** ಸ್ಥಾಪಿಸಿದರು. 'ಜನಸೇವೆಯೇ ಜನಾರ್ಧನ ಸೇವೆ' ರಾಮಕೃಷ್ಣ ಆಶ್ರಮದ ಮೂಲಮಂತ್ರವಾಯಿತು. ಇಡೀ ಜಗತ್ತಿನ ಜನರನ್ನು **ಸಹೋದರ-ಸಹೋದರಿಯರೆಂದೇ** ಸಂಭೋದಿಸಿದ ಸ್ವಾಮಿ ವಿವೇಕಾನಂದರು, ಅವರಲ್ಲಿದ್ದ ಅಜ್ಞಾನ-ಅಂಧಕಾರಗಳ ನಿರ್ಮೂಲನೆಗೆ ಪಣತೊಟ್ಟು ಕಾರ್ಯೋನ್ಮುಕರಾದರು. ಈ ಕೆಲಸ ಅವರನ್ನು ಜಗತ್ತಿನ ಮೂಲೆ ಮೂಲೆಗೂ ಕರೆದೊಯ್ಯಿತು. **ಷಿಕಾಗೋ** ಪಟ್ಟಣದಲ್ಲಿ ೧೮೯೩ ರಲ್ಲಿ ನಡೆದ ಸರ್ವಧರ್ಮಗಳ ವಿಶ್ವ ಸಂಸತ್ತಿನಲ್ಲಿ ಅವರು 'ಭಾರತೀಯ ವೇದಾಂತ ದರ್ಶನ'ದ ಬಗ್ಗೆ ನೀಡಿದ ಪ್ರವಚನ ಜಗತ್‌ಪ್ರಸಿದ್ಧಿಯಾಯಿತು. ಪಾಶ್ಚಾತ್ಯರು ಆಧ್ಯಾತ್ಮವನ್ನು ಕಡೆಗಣಿಸಿ ಐಹಿಕ ಭೋಗಗಳಲ್ಲಿ ತೊಡಗಿ ನೆಮ್ಮದಿ ಇಲ್ಲದೆ ದಾರಿ ತಪ್ಪಿದವರಂತಾಗಿರುವುದನ್ನು ಎತ್ತಿ ಹೇಳಿದ ವಿವೇಕಾನಂದರು, ಪೌರ್ವಾತ್ಯ ಆಧ್ಯಾತ್ಮ ಎಲ್ಲರಿಗೂ ನೆಮ್ಮದಿ-ಶಾಂತಿಗಳನ್ನು ದೊರಕಿಸಿಕೊಡಬಲ್ಲದೆಂದು ಸಾರಿದರು. ದೀನ-ದಲಿತರನ್ನು ಧರ್ಮದ ಹೆಸರಿನಲ್ಲಿ ಶೋಷಿಸುತ್ತಿದ್ದ ಪುರೋಹಿತ ಮತ್ತು ಶ್ರೀಮಂತರನ್ನು ತರಾಟೆಗೆ ತೆಗೆದುಕೊಂಡ ಸ್ವಾಮೀಜಿ ನವಭಾರತದ ನಿರ್ಮಾಣ ಗುಡಿಸಲಿನಲ್ಲಿ ವಾಸಿಸುವ ಶ್ರಮಜೀವಿಗಳಿಂದಲೇ ಸಾಧ್ಯ. ಹಸಿದವರಿಗೆ ಧರ್ಮ-ದೇವರುಗಳ ಬಗ್ಗೆ ಪ್ರವಚನ ಬೇಡ. ಅವರಿಗೆ ಅನ್ನ-ವಿದ್ಯೆ ಅಗತ್ಯ. ಅವನ್ನು ಕೊಡುವುದು ದೇಶ ಪ್ರೇಮಿಗಳ-ಶ್ರೀಮಂತರ, ಧಾರ್ಮಿಕ ನಾಯಕರ ಕರ್ತವ್ಯವೆಂದು ಒತ್ತಿ ಹೇಳಿದರು. ಭಾರತೀಯ ವೈಚಾರಿಕತೆಯನ್ನು, ಆಧ್ಯಾತ್ಮವನ್ನು ಎತ್ತಿಹಿಡಿದ ವಿವೇಕಾನಂದರು ಮಹಾ ರಾಷ್ಟ್ರೀಯವಾದಿ. ಹಾಗೆಯೇ ಶ್ರಮಜೀವಿಗಳ ಬದುಕನ್ನು ಹಸನುಗೊಳಿಸಲು ಶ್ರಮಿಸಿದ ಅಪ್ಪಟ ಸಮಾಜವಾದಿ. ಯುವ ಪೀಳಿಗೆಗೆ ಅವರು ನೀಡಿದ ಕರೆ ಏಳಿ ಎದ್ದೇಳಿ, **ಗುರಿ ಮುಟ್ಟುವವರೆಗೂ** ನಿಲ್ಲದಿರಿ ಎಂದು. ಅವರು ೧೯೦೨ ರಲ್ಲಿ ನಿಧನ ಹೊಂದಿದರು.

ಸೈಯ್ಯದ್ ಅಹ್ಮದ್‌ಖಾನ್ (೧೮೧೭-೧೮೯೮)

ಎಲ್ಲಾ ಮೇಲ್‌ಮಧ್ಯಮ ವರ್ಗದ ಸಮುದಾಯಗಳಂತೆಯೇ ಮುಸ್ಲಿಮ ಸಮುದಾಯದಲ್ಲೂ ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಸುಧಾರಣಾ ಪ್ರಕ್ರಿಯೆ ಕಾಣಿಸಿಕೊಂಡಿತು. ಬ್ರಿಟಿಷ್ ಆಳರಸರ ಆಘಾತಕ್ಕೆ ಸಿಕ್ಕ ಭಾರತೀಯ ಸಂಸ್ಕೃತಿ-ಧರ್ಮಗಳು ಒತ್ತಡಗಳಿಗೆ ಒಳಗಾಗಿದ್ದು ಸಹಜ. ಪಾಶ್ಚಾತ್ಯ ಚಿಂತನೆಯ ಪ್ರಭಾವಕ್ಕೆ ಮುಸ್ಲಿಂ ಸಮುದಾಯ ಒಳಗಾದದ್ದು ಸ್ವಲ್ಪ ತಡವಾಗಿ. ಆದ್ದರಿಂದಲೇ ವಸಾಹತು ಸನ್ನಿವೇಶದಲ್ಲಿ ಲಭ್ಯವಿದ್ದ ಸೀಮಿತ ಅವಕಾಶ ಮುಸ್ಲಿಮರಿಗೆ ದೊರಕಿದ್ದೂ ತಡವಾಗಿಯೇ. ಸಂಪ್ರದಾಯಗಳಿಗೆ ಕಟ್ಟುಬಿದ್ದು ಆಗುತ್ತಿದ್ದ ಬದಲಾವಣೆಗಳಿಗೆ ತೆರೆದುಕೊಳ್ಳದೆ ಹಿಂದುಳಿದ ಮುಸ್ಲಿಮರನ್ನು ಆಧುನಿಕತೆ ಹೊಂದಿಕೊಳ್ಳುವಂತೆ ಪ್ರೇರೇಪಿಸಿದ್ದು **ಅಹಮದೀಯ** ಮತ್ತು ಅಲಿಘರ್

ಚಳವಳಿಗಳು. ಇಸ್ಲಾಮಿನ ತತ್ವಗಳು ಆಧುನಿಕ ಯುಗದ ಅವಶ್ಯಕತೆಗಳಿಗೆ ತೆರೆದುಕೊಳ್ಳಬೇಕಾದ್ದು ಅತ್ಯಗತ್ಯವೆಂದು ಈ ಚಳವಳಿ ವಿಶೇಷವಾಗಿ ಅಲಿಗಢ ಚಳುವಳಿ ಒತ್ತಿ ಹೇಳಿತು. ಅಲಿಗಢ ಚಳವಳಿಯ ಸಂಸ್ಥಾಪಕ ಉತ್ತರ ಪ್ರದೇಶದ ಬರೇಲಿಯವರಾದ **ಸೈಯದ್ ಅಹಮದ್‌ಖಾನ್**. ಮುಸ್ಲಿಮರು ಕಳೆದುಹೋದ ವೈಭವದ ದಿನಗಳನ್ನು ನೆನಪಿಸಿಕೊಳ್ಳುತ್ತಲೆ ಖಿನ್ನರಾಗಿ ಕುಳಿತುಕೊಳ್ಳುವುದು ಆತ್ಮಹತ್ಯಾತ್ಮಕವೆಂದು, ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ನಿಲುವು ನಂಬಿಕೆಗಳನ್ನು ಬದಲಾಯಿಸಿಕೊಂಡು ಬದುಕುವುದು ಮುಖ್ಯವೆಂದು 'ಅಲಿಘರ್ ಚಳವಳಿ' ಪ್ರಾರಂಭವಾಯಿತು. ೧೮೫೭ರ ಮೊದಲ ಸ್ವಾತಂತ್ರ ಚಳವಳಿಯಲ್ಲಿ ಅಪಾರ ಕಷ್ಟ-ನಷ್ಟಗಳಿಗೆ ಒಳಗಾದ ಉತ್ತರ ಭಾರತದ ಜನಸಮುದಾಯದಲ್ಲಿ ಮುಸ್ಲಿಮರ ಪಾಲು ಸಾಕಷ್ಟಿತ್ತು. ಬ್ರಿಟಿಷ್ ವಿರೋಧಿ **ವಹಾಬಿ ಚಳವಳಿಯಿಂದ** ಪ್ರೇರಿತವಾಗಿದ್ದ ಮುಸ್ಲಿಂ ಸಮುದಾಯದ ನಿಲುವನ್ನು ಬದಲಾಯಿಸುವ ಕಷ್ಟಕರ ಕೆಲಸವನ್ನು ಸೈಯದ್ ಅಹ್ಮದ್ ಕೈಗೆತ್ತಿಕೊಂಡರು. ಅದಕ್ಕಾಗಿ ಹಲವಾರು ಪುಸ್ತಕಗಳನ್ನು ಬರೆದ ಅವರು **ಖುರ್-ಆನ್** ಅನ್ನು **ಪರ್ಶಿಯನ್** ಭಾಷೆಯಿಂದ **ಉರ್ದು**ವಿಗೆ ಭಾಷಾಂತರಿಸಿದರು. ಇಸ್ಲಾಂ ಬೇರೆ ಯಾವುದೇ ಧರ್ಮದ ಜೊತೆಗೆ ಸಹಬಾಳ್ವೆ ಬಯಸುತ್ತದೆ. ಆಳುವವರು ಯಾವ ಧರ್ಮೀಯರೆ ಆದರೂ ನಮ್ಮ ಧರ್ಮದ ಆಚರಣೆಗಳಿಗೆ ಪ್ರತಿಬಂಧ ಒಡ್ಡುವುದಿಲ್ಲವೋ ಅಲ್ಲಿಯವರೆಗೆ ಆ ಆಳ್ವಿಕೆಯನ್ನು ಒಪ್ಪಿಕೊಳ್ಳಲು ಅಡ್ಡಿಯಿಲ್ಲ. ಬ್ರಿಟಿಷ್ ಆಡಳಿತ ಯಾವುದೇ ಧರ್ಮದ ವಿರುದ್ಧವಲ್ಲ. ಆದ್ದರಿಂದ ಸರ್ಕಾರವನ್ನು ಒಪ್ಪಿ, ಅಲ್ಲಿ ಲಭ್ಯವಿರುವ ಸವಲತ್ತು-ಅವಕಾಶಗಳನ್ನು ಇತರ ಭಾರತೀಯರಂತೆಯೇ ಮುಸ್ಲಿಮರೂ ಬಳಸಿಕೊಳ್ಳಬೇಕೆಂದು ಪ್ರತಿಪಾದಿಸಿದರು. **ಮೊಹಮ್ಮಡನ್ ಶಿಕ್ಷಣ ಸಂಘ**ವನ್ನು ಸ್ಥಾಪಿಸಿದ ಖಾನರು ಅಲಿಘಡದಿಂದ ಪ್ರಾರಂಭಿಸಿ ಹಲವಾರು ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದರು. ಪಾಶ್ಚಾತ್ಯ ವಿಜ್ಞಾನ-ದರ್ಶನಗಳನ್ನು ಇಂಗ್ಲಿಷಿನಲ್ಲು ಕಲಿಸುವ ಕಾಯಕ ಕೈಗೊಂಡರು. ಪಾಶ್ಚಾತ್ಯ-ಪೌರ್ವಾತ್ಯ ಜ್ಞಾನಗಳ ಸಮ್ಮಿಳನದಿಂದಲೇ ಎಲ್ಲರ ಉದ್ಧಾರ ಸಾಧ್ಯವೆಂದು ಸಾರಿದರು. ಕಲಕತ್ತಾದ **ನವಾಬ್ ಅಬ್ದುಲ್ ಲತೀಫ್** ತಮ್ಮ **ಮೊಹಮ್ಮಡನ್ ಸಾಹಿತ್ಯ ಸಂಘಟನೆ**ಯ ಮೂಲಕ ಇದೇ ಕೆಲಸ ಮಾಡಿದರು. ಅಲಿಗಢದಲ್ಲಿ ಖಾನರು ಸ್ಥಾಪಿಸಿದ ಶಾಲೆ ಮುಂದೆ **ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯವಾಗಿ** ಬೆಳೆಯಿತು. ಹಿಂದೂ-ಮುಸ್ಲಿಮ ಸಮುದಾಯಗಳು ಭಾರತವೆಂಬ ಸುಂದರ ಹೆಣ್ಣಿನ ಎರಡು ಕಣ್ಣಾಲಿಗಳು. ಯಾವುದಕ್ಕೆ ಧಕ್ಕೆಯಾದರೂ ಆ ಹೆಣ್ಣಿನ ಸೌಂದರ್ಯಕ್ಕೆ ಕುಂದು ಉಂಟಾಗುತ್ತದೆ ಎಂಬ ಉದಾತ್ತ ಭಾವನೆಯಿದ್ದವರು ಖಾನರು. ಆದರೆ ಹಲವಾರು ರಾಜಕೀಯ ಬೆಳವಣಿಗೆಗಳಿಂದಾಗಿ ಅನಂತರ ರಾಷ್ಟ್ರೀಯ ಕಾಂಗ್ರೆಸ್ಸಿನ ಜೊತೆಗೆ ಗುರುತಿಸಿಕೊಳ್ಳದೆ ಅದರಿಂದ ದೂರ ಇದ್ದರು. ತಮ್ಮ ಶಾಲಾ-ಕಾಲೇಜುಗಳಲ್ಲಿ ಎಲ್ಲರಿಗೂ ಪ್ರವೇಶ ನೀಡಿ ಪ್ರೋತ್ಸಾಹಿಸಿದ ಖಾನರು ವಿಶೇಷವಾಗಿ ಮುಸ್ಲಿಮರಲ್ಲಿ ಆಧುನಿಕತೆಯನ್ನು ಹರಡಲು ಕಾರಣಕರ್ತರಾದರು. ಆ ಕಾರಣದಿಂದಲೇ ಹಲವಾರು ಸಂಪ್ರದಾಯವಾದಿ ಮುಸ್ಲಿಮರ ಆಕ್ರೋಶಕ್ಕೂ ತುತ್ತಾಗಬೇಕಾಯಿತು.

ಅನಿ ಬೆಸೆಂಟ್ (೧೮೪೭-೧೯೩೩)

ಭಾರತದಲ್ಲಿ ನೆಲೆಸಿ, ಧಾರ್ಮಿಕ-ಸಾಂಸ್ಕೃತಿಕ ರಂಗದಲ್ಲಿ ಅಪಾರ ಕೆಲಸ ಮಾಡಿ, ರಾಜಕೀಯ ರಂಗದಲ್ಲೂ ತಮ್ಮ ವ್ಯಕ್ತಿತ್ವದ ಮುದ್ರೆಯೊತ್ತಿದವರು ಶ್ರೀಮತಿ ಅನಿಬೆಸೆಂಟ್. ಅನಿಬೆಸೆಂಟರು ಭಾರತೀಯ ಆಧ್ಯಾತ್ಮದಿಂದ ಆಕರ್ಷಿತರಾದರು. ಅದಕ್ಕೂ ಮುಂಚೆ ಐರ್ಲೆಂಡಿನ ಕ್ರಾಂತಿಕಾರಿ ಮಹಿಳಾ ಸಂಘಟನೆಗಳಲ್ಲಿ ದುಡಿದರು. **ಥಿಯಾಸಫಿಕಲ್ ಸೊಸೈಟಿಯ** ದರ್ಶನ, ಧ್ಯೇಯ-ಉದ್ದೇಶಗಳಿಂದ ಸ್ಫೂರ್ತಿಗೊಂಡ ಬೆಸೆಂಟರು ೧೮೯೩ ರಲ್ಲಿ ಭಾರತಕ್ಕೆ ಬಂದು **ಮದ್ರಾಸ್‌ನಲ್ಲಿ** ನೆಲೆಗೊಂಡರು. ಎಲ್ಲ ಪ್ರಾಚೀನ ಧರ್ಮಗಳು ಸಾರುವ ಸತ್ಯವನ್ನು ಥಿಯಾಸಫಿಗಳು ಒಪ್ಪಿದರು. ಅವನತಿಯ ಹಾದಿ ಹಿಡಿದಿದ್ದ ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಅವರು ಶ್ರಮ ಪಟ್ಟರು. ಎಲ್ಲರಲ್ಲಿ ಸಮಾನತೆ-ಸಹೋದರರತ್ವದ ಭಾವನೆ ಬೆಳೆಸುವುದೇ ಥಿಯಾಸಫಿಗಳ ಮುಖ್ಯ ಉದ್ದೇಶವಾಗಿತ್ತು. ಭಾರತೀಯ ಧರ್ಮ-ದರ್ಶನಗಳಲ್ಲಿದ್ದ ಮೌಲ್ಯ ಪ್ರಸಾರಕ್ಕೆ ಅವರು ಹೆಚ್ಚು ಒತ್ತುಕೊಟ್ಟರು. ಆತ್ಮಕ್ಕೆ ಲಿಂಗವಿಲ್ಲ. ಹೆಣ್ಣಾಗಲಿ-ಗಂಡಾಗಲಿ ಆತ್ಮ ಒಂದೇ ಎನ್ನುವುದು ಅವರ ಇನ್ನೊಂದು ತತ್ವ.

ಥಿಯಾಸಫಿಕಲ್ ಸೊಸೈಟಿ ಅಧ್ಯಕ್ಷರಾದ ಬೆಸೆಂಟರು ಬ್ರಿಟಿಷ್ ಆಡಳಿತ ಭಾರತದಲ್ಲಿ ನಡೆಸುತ್ತಿದ್ದ ದಬ್ಬಾಳಿಕೆಯಿಂದ ರೋಸಿದರು. ತಮ್ಮ ಸಂಸ್ಥೆ ಮತ್ತು ಪತ್ರಿಕೆಗಳ ಮೂಲಕ ಸರ್ಕಾರದ ನೀತಿಯನ್ನು ಖಂಡಿಸತೊಡಗಿದರು. **ನ್ಯೂ ಇಂಡಿಯ** ಮತ್ತು **ಕಾಮನ್ ವೀಲ್** ಬೆಸೆಂಟರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು. ಭಾರತೀಯ ಸಂಸ್ಕೃತಿಯನ್ನು ತನ್ನದಾಗಿಸಿಕೊಂಡು, ಅದರ ಪ್ರಚಾರದಲ್ಲಿ ನಿರತರಾಗಿದ್ದ ಬೆಸೆಂಟರು, ಬ್ರಿಟಿಷ್ ಸರ್ಕಾರವನ್ನು ವಿರೋಧಿಸಿದಾಗ ಅದು ಸಹಜವಾಗಿತ್ತು. ಭಾರತೀಯ ಅಕ್ಷರಸ್ಥ ಮಧ್ಯಮವರ್ಗ ಮತ್ತು ಹೊಸದಾಗಿ ಸ್ತ್ರೀಯರು ಬೆಸೆಂಟರಿಂದ ಆಕರ್ಷಿತರಾದರು. ೧೯೧೬ ರಲ್ಲಿ ಬೆಸೆಂಟ್ **ಹೋಂ ರೂಲ್** ಚಳವಳಿಯನ್ನು ಪ್ರಾರಂಭಿಸಿದರು. ಸರ್ಕಾರವನ್ನು ಕಟು ಟೀಕೆಗೆ ಗುರಿಪಡಿಸಿದರು. ಆ ಹೊತ್ತಿಗಾಗಲೇ ಅವರು **ಕಾಶಿಯಲ್ಲಿ ಹಿಂದೂ ಕಾಲೇಜನ್ನು** ಸ್ಥಾಪಿಸಿದ್ದರು. ಹಲವು ಶಾಲೆಗಳನ್ನು ನಡೆಸುತ್ತಾ ಭಾರತೀಯ ಕಲೆ, ಸಂಸ್ಕೃತಿ ಮತ್ತು ದರ್ಶನಗಳ ಅಧ್ಯಯನಕ್ಕೆ ಅಲ್ಲಿ ಪ್ರಾಶಸ್ತ್ಯ ಕೊಟ್ಟರು. ಮಂದಗಾಮಿ- ತೀವ್ರಗಾಮಿಗಳ ನಡುವಿನ ಒಡಕಿನಿಂದ ರಾಷ್ಟ್ರೀಯ ಚಳವಳಿಯ ನಾಯಕತ್ವದಲ್ಲಿ ಉಂಟಾದ ಕೊರತೆಯನ್ನು ಬೆಸೆಂಟ್ ತಮ್ಮ ವಾಕ್ಪಟುತ್ವ, ಚಾಣ್ಮೆ, ಸೇವಾ ಮನೋಭಾವದಿಂದ ತುಂಬಿದರು. ಬೆಸೆಂಟರ ತೀಕ್ಷ್ಣ ಟೀಕೆಗಳಿಂದ ರೊಚ್ಚಿಗೆದ್ದ ಬ್ರಿಟಿಷ್ ಸರ್ಕಾರ ಅವರ ಪತ್ರಿಕೆಗಳನ್ನು ನಿಷೇಧಿಸಿ, ಅವರನ್ನು ಬಂಧಿಸಿತು. ಬೆಸೆಂಟರಿಗೆ ಬಹುತೇಕ ವಿದೇಶಗಳೂ ಸೇರಿ ಎಲ್ಲ ಕಡೆಯಿಂದ ಬೆಂಬಲ ವ್ಯಕ್ತವಾಯಿತು. ಅವರ ಬಿಡುಗಡೆಯೂ ಆಗಿ ೧೯೧೭ರ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಪಟ್ಟ ದೊರೆಯಿತು. ಭಾರತೀಯ ಸ್ವಾತಂತ್ರ ಚಳವಳಿಗೆ ಅನಿಬೆಸೆಂಟರ ಕೊಡುಗೆ ಅಪಾರ. ಭಾರತೀಯ ಸಂಸ್ಕೃತಿ-ದರ್ಶನಗಳ ಕುರಿತ ಅವರ ವಿಚಾರಗಳೂ ಮನನೀಯ.

೪.೬ ರಾಷ್ಟ್ರೀಯ ಚಳವಳಿ

ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾದ ಅಂಶಗಳು

ವ್ಯಾಪಾರಕ್ಕಾಗಿ ಬಂದ ಬ್ರಿಟಿಷ್ ಕಂಪನಿಯೊಂದು ಭಾರತದ ಆಡಳಿತ ಚುಕ್ಕಾಣಿ ಹಿಡಿದ ಕತೆ ರೋಚಕವಾಗಿದೆ. 'ವ್ಯಾಪಾರಂ ದ್ರೋಹ ಚಿಂತನಂ' ಎಂಬ ನಾಣ್ಣುಡಿಯೊಂದಿದೆ. ಇದು ಪೂರ್ಣ ನಿಜವಲ್ಲದಿರಬಹುದು. ಆದರೆ **ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ**ಯೆಂಬ ವ್ಯಾಪಾರಿ ಸಂಸ್ಥೆಯಂತೂ ಅದನ್ನು ನಿಜವೆಂದು ಸಾಬೀತುಗೊಳಿಸಿತು. ಭಾರತದಲ್ಲಿದ್ದ ಅರಾಜಕ ಸ್ಥಿತಿಯನ್ನು ಬಳಸಿಕೊಂಡು. ಒಬ್ಬ ರಾಜನನ್ನು ಇನ್ನೊಬ್ಬನ ವಿರುದ್ಧ ಎತ್ತಿಕಟ್ಟಿ, 'ಒಡೆದು ಆಳುವ ನೀತಿ'ಯನ್ನು ಅನುಸರಿಸಿ ಭಾರತದ ಎಲ್ಲ ಭೂ ಭಾಗಗಳನ್ನು ಕ್ರಮೇಣ ತನ್ನ ವಶಕ್ಕೆ ತೆಗೆದುಕೊಂಡಿತು. ತನ್ನ ಸ್ವಂತ ಲಾಭದ ಉದ್ದೇಶಗಳಿಗೆ ಅನುಗುಣವಾಗಿ ಆಡಳಿತ ನೀತಿ ರೂಪಿಸಿಕೊಂಡು ಭಾರತದ ಸಂಪತ್ತನ್ನು ಕೊಳ್ಳೆಹೊಡೆಯಿತು. ಸಂಪದ್ಭರಿತವಾಗಿದ್ದ ಭಾರತದಲ್ಲಿ ದಾರಿದ್ರ್ಯ ತಾಂಡವವಾಡತೊಡಗಿತು. ಇಲ್ಲಿಯ ಕೃಷಿ, ಗೃಹ ಕೈಗಾರಿಕೆಗಳು ಬ್ರಿಟಿಷ್ ವಸಾಹತುವಾದಿ ಆಡಳಿತದ ಅವಗಣನೆ, ಶೋಷಣೆಗೆ ತುತ್ತಾಗಿ ಅವನತಿಹೊಂದಿದವು. ಜೊತೆಗೆ ದುಬಾರಿ ತೆರಿಗೆ, ಅಸಮ ಆಮದು-ರಫ್ತು ನೀತಿ, ಭಾರತೀಯ ಮಾರುಕಟ್ಟೆಗಳ ಮೇಲೆ ವಿದೇಶೀ ವಸ್ತುಗಳ ಹೇರಿಕೆ, ವಾಣಿಜ್ಯ ಬೆಳೆಗಳ ಹೆಚ್ಚಳ ಮುಂತಾದುವೆಲ್ಲಾ ಭಾರತದ ಅರ್ಥವ್ಯವಸ್ಥೆಗೆ ಮಾರಕವಾಗಿ ಪರಿಣಮಿಸಿದವು.

ಜನಸಮುದಾಯಕ್ಕೆ ಅಗತ್ಯವಾಗಿದ್ದ ವಸ್ತುಗಳನ್ನು ತಮ್ಮ ಗೃಹ ಕೈಗಾರಿಕೆಗಳಲ್ಲಿ ಉತ್ಪಾದಿಸಿ ಪೂರೈಸುತ್ತಿದ್ದ ಉತ್ಪಾದಕರು, ಬ್ರಿಟಿಷ್ ಉತ್ಪಾದಕ-ವ್ಯಾಪಾರಿಗಳ ಪೈಪೋಟಿಗೆ ತಾಳಿಕೊಳ್ಳಲಾಗದೆ ತಮ್ಮ ಉತ್ಪಾದನೆಯನ್ನೇ ನಿಲ್ಲಿಸಬೇಕಾದ ಪರಿಸ್ಥಿತಿ ಏರ್ಪಟ್ಟಿತು. ಬ್ರಿಟಿಷ್ ಆಡಳಿತ ಅನುಸರಿಸಿದ ಮಾರುಕಟ್ಟೆ, ತೆರಿಗೆ ನೀತಿ ಆ ರೀತಿಯದು. ಅಂದರೆ ವಿಸ್ತಾರವಾದ ಭಾರತೀಯ ಮಾರುಕಟ್ಟೆ ಬ್ರಿಟಿಷ್ ವ್ಯಾಪಾರಿಗಳ ಕೈವಶವಾಗಬೇಕು. ಭಾರತೀಯರು ಉತ್ಪಾದನೆ, ಮಾರಾಟ ಮಾಡುವುದನ್ನು ಬಿಟ್ಟು, ಗ್ರಾಹಕರು-ಕೊಳ್ಳುವವರು ಆಗಿ ಬ್ರಿಟಿಷರ ಕಿಸೆತುಂಬಿ ಅವರ ಏಕಸ್ವಾಮ್ಯ ಒಪ್ಪಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿಗೆ ಸಿಲುಕಿದರು. ಕೃಷಿಗೆ ಮಳೆಯನ್ನೇ ನೆಚ್ಚಿಕೂತಿದ್ದ ಭಾರತೀಯ ಕೃಷಿಕರು ಅಪಾರ ಕಷ್ಟ-ನಷ್ಟಗಳಿಗೆ ಗುರಿಯಾದರು. ಬ್ರಿಟಿಷ್ ಆಡಳಿತ ಭಾರತದಲ್ಲಿದ್ದ ಸಾಂಪ್ರದಾಯಿಕ ನೀರಾವರಿ ವ್ಯವಸ್ಥೆಯನ್ನು ಸಂಪೂರ್ಣ ಕಡೆಗಣಿಸಿತು. ಕೆರೆ-ಕಟ್ಟೆಗಳು ಹೂಳು ತುಂಬಿ ಅವುಗಳ ಸಾಮರ್ಥ್ಯ ಕ್ಷೀಣಿಸುತ್ತಾ ಸಾಗಿ ಕೊನೆಗೆ ಮಳೆ ಬಂದಾಗ, ಹರಿಯುವ ನೀರನ್ನು ಹಿಡಿದಿಡಲು ಸಾಧ್ಯವಾಗದಂತಾಯಿತು. ವಾಣಿಜ್ಯ ಬೆಳೆಗಳ ಹೆಚ್ಚಳದಿಂದಾಗಿ ಅಗತ್ಯ ಆಹಾರ ಧಾನ್ಯ ಬೆಳೆಯುತ್ತಿದ್ದ ಭೂಮಿಯ ಪ್ರಮಾಣವೂ ಕಡಿಮೆಯಾಗುತ್ತಾ ಹೋಯಿತು. ಇದೇ ವೇಳೆ ಸರ್ಕಾರ ವಿಧಿಸಿದ ಅಧಿಕ ಭೂ ತೆರಿಗೆಯಿಂದ ಕೃಷಿ ಭೂಮಿ ವಿಸ್ತರಿಸದಂತೆ ಕಡಿವಾಣ ಹಾಕಿತು. ಹೀಗಾಗಿ ಪ್ರತಿಬಾರಿಯೂ ಮಳೆಯಾದರೆ ಸರಿ, ಇಲ್ಲದಿದ್ದರೆ ಆಹಾರ ಧಾನ್ಯಗಳ ಕೊರತೆ ಎದ್ದು ಕಾಣಲಾರಂಭಿಸಿತು.

ಗೃಹ ಕೈಗಾರಿಕೆಗಳ ಮೇಲೆ ಆದ ಆಘಾತ ಕೃಷಿಕರ ಹೆಚ್ಚುವರಿ ದುಡಿಮೆಯನ್ನು ಇಲ್ಲವಾಗಿಸಿತು. ಎಲ್ಲವನ್ನು ಕೊಳ್ಳಬೇಕಾದ ಸ್ಥಿತಿಯಲ್ಲಿ ಬರ-ಕ್ಷಾಮ ಸಾಮಾನ್ಯವಾಯಿತು. ಸಿಟ್ಟಿಗೆದ್ದ ರೈತರು ಅಲ್ಲಲ್ಲಿ ಆಗಾಗ ತಿರುಗಿ ಬೀಳುತ್ತಿದ್ದುದುಂಟು. ಆದರೆ ಅಸಂಘಟಿತವಾಗಿ-ಚದುರಿದಂತೆ ನಡೆಯುತ್ತಿದ್ದ ಘಟನೆಗಳನ್ನು 'ಬಡವನ ಸಿಟ್ಟು ದವಡೆಗೆ ಮೂಲ'ವೆಂಬಂತೆ ಸರ್ಕಾರ ಮತ್ತು ಅದರ ಹಿಂಬಾಲಕರಿಂದ ಹತ್ತಿಕ್ಕಲಾಗುತ್ತಿತ್ತು. ನೂರಾರು ಹಿಂಸಾತ್ಮಕ ಪ್ರತಿಭಟನೆಗಳನ್ನು ಬ್ರಿಟಿಷ್ ಸರ್ಕಾರ ನಿರ್ದಯವಾಗಿ ಹೊಸಕಿಹಾಕಿತು. ಹೊಸ ಭೂನೀತಿ ಜಾರಿಗೆ ತಂದು ಜಮೀನ್ದಾರಿ ವರ್ಗ ಒಂದನ್ನು ಸೃಷ್ಟಿಸಿತು. ದೇಶೀ ರಾಜರು, ನಿಜಾಮರಿಗೆ ಕೆಲವು ಸವಲತ್ತುಗಳನ್ನು ಕೊಟ್ಟು ಅವರೆಲ್ಲಾರನ್ನೂ ತನ್ನ ಅಧೀನರನ್ನಾಗಿಸಿ ಒಪ್ಪಂದಗಳ ಮೂಲಕ ವಸಾಹತು ಸರ್ಕಾರಕ್ಕೆ ಬೆಂಬಲ ನೀಡುವಂತೆ ಮಾರ್ಪಡಿಸಿತು. ಅಂದರೆ ಭಾರತದಲ್ಲಿದ್ದ ಪ್ರಭಾವಿ ಸಾಮಾಜಿಕ ಶಕ್ತಿಗಳನ್ನು ತನ್ನೆಡೆಗೆ ಸೆಳೆದುಕೊಂಡು, ಅವರ ನೆರವಿನಿಂದ ಸಾಮಾನ್ಯ ಜನತೆಯನ್ನು ಹತ್ತಿಕ್ಕಿ ಅವರ ದುಡಿಮೆಯನ್ನು ಹೀರಿಕೊಳ್ಳತೊಡಗಿತು. ಇದರ ಫಲಿತಾಂಶವೆಂದರೆ ಹೆಚ್ಚಿದ ಬಡತನ, ನಿರುದ್ಯೋಗ, ಕ್ಷಾಮ ಮತ್ತು ಇತರ ನೈಸರ್ಗಿಕವೆನ್ನಲಾದ ಕ್ಷೋಭೆಗಳು.

ಆದರೂ ಕೆಲವು ದೇಶೀರಾಜರು-ನವಾಬರು ೧೮೫೭ ರಲ್ಲಿ ಸಡಿಲವಾದೊಂದು ಒಕ್ಕೂಟ ರಚಿಸಿಕೊಂಡು ದಂಗೆ ಎದ್ದರು. 'ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮ'ವೆಂದು ಬಣ್ಣಿಸಲ್ಪಟ್ಟ ಈ ಸಂಗ್ರಾಮವನ್ನು ಬ್ರಿಟಿಷ್ ಸರ್ಕಾರ, ತನ್ನ ದೇಶೀ ಸಹಾಯಕರೊಂದಿಗೆ, ಕ್ರೂರವಾಗಿ ಹತ್ತಿಕ್ಕಿತು. ಇದನ್ನೇ ನೆಪವಾಗಿಸಿಕೊಂಡ ಬ್ರಿಟನ್ ಸರ್ಕಾರ, ಭಾರತವನ್ನು ತನ್ನ ನೇರ ನಿಯಂತ್ರಣಕ್ಕೆ ಒಳಪಡಿಸಿಕೊಂಡಿತು. ಬ್ರಿಟಿಷ್ ಸರ್ಕಾರ, ದೇಶೀಯರಿಗೆ ಹಲವು ಆಶ್ವಾಸನೆಗಳನ್ನು ಕೊಟ್ಟಿತಾದರೂ, ಯಾವ ಆಶ್ವಾಸನೆಗಳೂ ನಿಜ ಅರ್ಥದಲ್ಲಿ ಜಾರಿಗೊಳ್ಳಲಿಲ್ಲ. ಆದರೆ ಅತೃಪ್ತ ಭಾರತೀಯರು ತಮ್ಮ ಹೋರಾಟಕ್ಕೆ ಬೇರೆ ಆಯಾಮಗಳನ್ನು ಒದಗಿಸಿಕೊಂಡರು. ಈಗಾಗಲೇ ನಾವು ಸುಧಾರಣಾ ಚಳವಳಿ- ತಾತ್ವಿಕತೆಗಳ ಬಗ್ಗೆ ಚರ್ಚಿಸಿದ್ದೇವೆ. ಕ್ರಮೇಣ ಭಾರತೀಯ ಮಧ್ಯಮ ವರ್ಗದ ನಾಯಕತ್ವ ಒಂದು ಹುಟ್ಟಿಕೊಂಡಿತು. ಪಾಶ್ಚಾತ್ಯ ಉದಾರವಾದ, ಜನತಂತ್ರ ಮುಂತಾದ ತತ್ವಗಳಿಂದ ಪ್ರಭಾವಿತವಾದ ಈ ನಾಯಕತ್ವ ಹೊಸ ರೀತಿಯ-ಆಧುನಿಕ ಕಾರ್ಯತಂತ್ರವನ್ನು ರೂಪಿಸಿಕೊಂಡಿತು. ಈ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯು ಉಗಮವಾಗಿ, ಬೆಳೆಯತೊಡಗಿತು.

ಈ ಮಧ್ಯೆ ಹಿಂಸಾತ್ಮಕ ಪ್ರತಿಭಟನೆ-ದಂಗೆಗಳು ಮುಂದುವರೆದವು. ಸೈಯದ್ ಅಹ್ಮದ್ ಬ್ರೆಲ್ವಿ ನೇತೃತ್ವದ ವಹಾಬಿ ಚಳವಳಿ, ಗುರು ರಾಮ್‌ಸಿಂಗ್ ನೇತೃತ್ವದಲ್ಲಿ ಕೂಕ ಚಳವಳಿ, ಬಂಗಾಳದ ನೀಲಿ ಬೆಳೆಗಾರರ ಚಳವಳಿ, ಮಧ್ಯಭಾರತದ ಗುಡ್ಡಗಾಡು ಜನರ ದಂಗೆಗಳು ಬಹಳ ಮುಖ್ಯವಾದವು. ಬಿಹಾರದಲ್ಲಿ ಬಿರ್ಸಮುಂಡ ಎಂಬುವವನ ನೇತೃತ್ವದ ಬುಡಕಟ್ಟು ಜನರ ದಂಗೆಯನ್ನು ಇಲ್ಲಿ ಹೆಸರಿಸಬೇಕಿದೆ. ಹಾಗೆಯೇ ಮಹಾರಾಷ್ಟ್ರದ ವಾಸುದೇವ ಬಲವಂತ ಫಡ್ಕೆ ನೇತೃತ್ವದ ದಂಗೆ ಮತ್ತೊಂದು ಮಹತ್ವದ ವಸಾಹತು ವಿರೋಧಿ ದಂಗೆ. ಈ ಎಲ್ಲ

ದಂಗೆಗಳನ್ನೂ ಬ್ರಿಟಿಷ್ ಸರ್ಕಾರ ನಿರ್ದಯವಾಗಿ ಅಣಗಿಸಿ, ಅವುಗಳ ನಾಯಕರನ್ನು ಗಲ್ಲಿಗೇರಿಸಿತು.

ಭಾರತ ರಾಷ್ಟ್ರೀಯ ಕಾಂಗ್ರೆಸ್

ಕ್ರಮೇಣ ಭಾರತೀಯ ಜನತೆಯ ಆಶೋತ್ತರಗಳನ್ನು ಒಂದು ರಾಷ್ಟ್ರವೆಂದು ಅಭಿವ್ಯಕ್ತಗೊಳಿಸುವ ಚಳವಳಿಯೊಂದು ಬೆಳೆಯತೊಡಗಿತು. ಈ ಚಳವಳಿ, ಹಿಂದಿನ ದಂಗೆಗಳಂತೆ ಯಾವುದೇ ಒಂದು ಗುಂಪಿನ, ಅಥವಾ ಪ್ರಾಂತ್ಯದ ಸಮಸ್ಯೆಗಳನ್ನು ಪ್ರತಿನಿಧಿಸದೆ, ಬಹುಜನರ, ಒಮ್ಮೊಮ್ಮೆ ಇಡೀ ದೇಶದ ಸಮಸ್ಯೆ-ಅಭೀಪ್ಸೆಗಳನ್ನು ವ್ಯಕ್ತಪಡಿಸಲು ಪ್ರಾರಂಭಿಸಿತು. ಇದರೊಂದಿಗೆ ಭಾರತ 'ಒಂದು ದೇಶ', 'ಒಂದು ರಾಷ್ಟ್ರ'ವೆಂಬ ಭಾವನೆ ಬೆಳೆಯತೊಡಗಿತು. ಇದರೊಂದಿಗೆ ದೇಶಾಭಿಮಾನ, ರಾಷ್ಟ್ರಾಭಿಮಾನವೂ ಗರಿಗಟ್ಟಿತು. ಹಲವಾರು ಸಂಸ್ಥಾನ, ರಾಜ್ಯಗಳಲ್ಲಿ ಹಂಚಿಹೋಗಿದ್ದ ಯುರೋಪ್ ಖಂಡದ ಇಟಲಿ, ಜರ್ಮನಿಗಳ ಏಕೀಕರಣಗಳು, ಮತ್ತು ಪರಕೀಯರ ಆಳ್ವಿಕೆಗೆ ಒಳಪಟ್ಟ ದೇಶಗಳಲ್ಲಿ ಚುರುಕಾಗುತ್ತಿದ್ದ ರಾಷ್ಟ್ರೀಯ ವಿಮೋಚನಾ ಚಳವಳಿಗಳು ಭಾರತೀಯರಿಗೆ ಸ್ಫೂರ್ತಿ ನೀಡಿದವು. ಹಲವಾರು ದೇಶಗಳಲ್ಲಿ ಜನತೆ ಉಳಿಗಮಾನ್ಯ ಶಕ್ತಿಗಳ ವಿರುದ್ಧ ಸೆಟೆದು ನಿಂತು ಜನತಾಂತ್ರಿಕ ವ್ಯವಸ್ಥೆಗಾಗಿ, ಜನ ಸಾಮಾನ್ಯರಿಂದ ಆರಿಸಲ್ಪಟ್ಟ ಸರ್ಕಾರಕ್ಕಾಗಿ ಚಳವಳಿ ನಡೆಸತೊಡಗಿದ್ದೂ ಭಾರತೀಯರನ್ನು ಆಕರ್ಷಿಸಿತು. ಇದೆಲ್ಲದರೊಂದಿಗೆ ಬ್ರಿಟಿಷರು ಅಳವಡಿಸಿದ ಏಕರೂಪದ ಆಡಳಿತ, ಶಿಕ್ಷಣ-ಕಾನೂನು-ನ್ಯಾಯಾಂಗ ವ್ಯವಸ್ಥೆ ಭಾರತೀಯರನ್ನು ಪರೋಕ್ಷವಾಗಿಯಾದರೂ ಒಗ್ಗೂಡಿಸಿತು. ಭಾರತೀಯರು ಹಲವಾರು ವಿಚಾರಗಳಲ್ಲಿ ಸಮಾನ ದುಃಖಿಗಳು. ಅವರ ಬವಣೆಗಳೇ ಒಂದು ರೀತಿಯಲ್ಲಿ ಅವರನ್ನು ಒಂದುಗೂಡಿಸಲು ಸಹಾಯಕವಾದವು. ಹೀಗೆ ಟಿಸಿಲೊಡೆದ ಭಾವನೆಗಳು, ಸಂಘಟನೆಗಳು ಮತ್ತು ಚಳವಳಿಗಳು ಭಾರತೀಯರನ್ನು ಮೊದಲು ಸ್ಥಳೀಯ ಮಟ್ಟದಲ್ಲಿ, ಪ್ರಾಂತೀಯ ಮಟ್ಟದಲ್ಲಿ, ಅನಂತರ ರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತಗೊಳ್ಳಲು ಪ್ರೇರೇಪಿಸಿದವು. ಈ ಪ್ರಯತ್ನಗಳು ಸಾಂಸ್ಕೃತಿಕ-ಸಾಮಾಜಿಕ-ಸಾಹಿತ್ಯಕ ಸಂಸ್ಥೆಗಳನ್ನು ಹುಟ್ಟು ಹಾಕಿದವು. ಹಲವಾರು ಪ್ರಾಂತ್ಯದ ಜನ ಕ್ರಮೇಣ ಪ್ರಾಂತ್ಯ ಮಟ್ಟದ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ೧೮೫೦ ರ ದಶಕದಲ್ಲಿ ಬಂಗಾಳ, ಮುಂಬಯಿ ಮತ್ತು ಮದ್ರಾಸು ಪ್ರಾಂತ್ಯ ಮಟ್ಟದ ಸಾರ್ವಜನಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ಸಂಸ್ಥೆಗಳು ಆಯಾ ಪ್ರಾಂತ್ಯಗಳ ಜನರ ಕುಂದು-ಕೊರತೆಗಳ ಬಗ್ಗೆ ವಿಚಾರ ಮಾಡಿ ಆ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸುವ ಉದ್ದೇಶ ಉಳ್ಳವಾಗಿದ್ದವು. ೧೮೫೭-೫೮ರ ಬೆಳವಣಿಗೆಗಳು ಈ ಸಂಸ್ಥೆಗಳನ್ನು ಸ್ವಲ್ಪಕಾಲ ನಿಷ್ಕ್ರಿಯಗೊಳಿಸಿದವು. ಆದರೆ ೧೮೮೦ರ ದಶಕದಲ್ಲಿ ಪುನರುಜ್ಜೀವನಗೊಂಡವು.

ಈ ಸಂಘಟನೆಗಳ ಬಹುತೇಕ ಎಲ್ಲ ಮುಂದಾಳುಗಳೂ ಸೇರಿ ೧೮೮೫ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸ್ಥಾಪಿಸಿದರು. ಬ್ರಿಟಿಷ್ ಸಂಜಾತ, ನಿವೃತ್ತ ಅಧಿಕಾರಿ ಅಲೆನ್ ಆಕ್ಟೇವಿಯಸ್ ಹ್ಯೂಮ್ ಎಂಬ ಥಿಯೋಸಫಿಕಲ್ ಸಮಾಜದ ಅಧ್ವರ್ಯು, ಕಾಂಗ್ರೆಸ್

ಸ್ಥಾಪನೆಯ ಮುಂಚೂಣಿಯಲ್ಲಿದ್ದರು. ಕಾಂಗ್ರೆಸ್ಸಿನ ಮೊದಲ ಅಧಿವೇಶನ ೧೮೮೫ ರ ಡಿಸೆಂಬರ್ ತಿಂಗಳ ಕೊನೆಯ ವಾರ ಬೊಂಬಾಯಿನಗರದಲ್ಲಿ ಸಮಾವೇಶಗೊಂಡಿತು. ಬಂಗಾಳದ **ಉಮೇಶ್‌ಚಂದ್ರ ಬ್ಯಾನರ್ಜಿ** ಅಧಿವೇಶನದ ಮೊದಲ ಅಧ್ಯಕ್ಷರು. ಜಾತಿ, ಮತ, ಭಾಷೆ, ಪ್ರಾಂತ್ಯ ಹೀಗೆ ಛಿದ್ರ ಛಿದ್ರವಾಗಿದ್ದ ಭಾರತೀಯರಲ್ಲಿ ತಾವೆಲ್ಲಾ ಒಂದು, ಒಂದೇ ದೇಶಕ್ಕೆ-ರಾಷ್ಟ್ರಕ್ಕೆ ಸೇರಿದವರು ಎಂಬ ಭಾವನೆ ಮೂಡಿಸಲು ತೊಡಗಿದರು. ಕಾಂಗ್ರೆಸ್ ಭಾರತೀಯರ ರಾಷ್ಟ್ರೀಯ ವೇದಿಕೆ ಆಗಿ ಕೆಲಸ ಮಾಡಬೇಕೆಂಬ ಗುರಿ ಹೊಂದಿತ್ತು. ಭಾರತೀಯರನ್ನು ಕಾಡುತ್ತಿದ್ದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅವುಗಳತ್ತ ಸರ್ಕಾರದ ಗಮನ ಸೆಳೆದು, ಪರಿಹಾರಕ್ಕಾಗಿ ಮನವಿ ಮಾಡುವ ಉದ್ದೇಶ ಕಾಂಗ್ರೆಸ್‌ನದು.

ಮಂದಗಾಮಿ ಹಾಗೂ ತೀವ್ರಗಾಮಿ ಪಂಥಗಳು

ಬ್ರಿಟಿಷ್ ಸರ್ಕಾರ ಈ ಮನವಿಗಳನ್ನು ಪುರಸ್ಕರಿಸದೆ ಅಸಡ್ಡೆ ಮಾಡಿ, ಕಾಂಗ್ರೆಸ್ ಸಂಸ್ಥೆಯನ್ನು ಜರಿಯತೊಡಗಿತು. ಕಾಂಗ್ರೆಸ್ಸಿನ ಈ ಕಾರ್ಯತಂತ್ರ ಸರಿಯಿಲ್ಲ. ಅದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು, ಕಾಂಗ್ರೆಸ್ಸಿಗೆ ಜನ ಬೆಂಬಲವಿಲ್ಲದ್ದರಿಂದ ಸರ್ಕಾರ ಆ ಸಂಸ್ಥೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಎರಡು, ಮನವಿಗಳ ಮೂಲಕ ಸರ್ಕಾರ ಸಮಸ್ಯೆಗಳನ್ನು ಪರಿಹರಿಸುತ್ತದೆಂದು ತಿಳಿಯುವುದು ಭ್ರಮೆ. ಆದ್ದರಿಂದ ಕಾಂಗ್ರೆಸ್ ಒಂದು ಸಂಘಟನೆಯಾಗಿ ಜನ ಬೆಂಬಲ ಗಳಿಸಿಕೊಳ್ಳಬೇಕು. ಜೊತೆಗೆ ಮನವಿ ಅರ್ಪಿಸಿ, ಸರ್ಕಾರದ ಕೃಪೆಗಾಗಿ ಕಾಯುತ್ತಾ ಕೂರುವುದನ್ನು ಬಿಟ್ಟು ಪರಿಣಾಮಕಾರಿಯಾದಂಥ ತಂತ್ರ ರೂಪಿಸಿ ಕೊಳ್ಳಬೇಕು. ಈ ವಾದ ಮುಂಡಿಸಿದವರು **ತೀವ್ರಗಾಮಿಗಳು**. ಮನವಿಯರ್ಪಿಸಿ, ಸಂವಿಧಾನಾತ್ಮಕ ಮಾರ್ಗದಲ್ಲಿ ಸಮಸ್ಯೆಗಳಿಗೆ ಪರಿಹಾರ ನಿರೀಕ್ಷಿಸುತ್ತಿದ್ದವರನ್ನು **ಮಂದಗಾಮಿ** ಗಳೆಂದು ಕರೆದರು. ಮಂದಗಾಮಿ ಗುಂಪಿನಲ್ಲಿ **ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಸುರೇಂದ್ರನಾಥ ಬ್ಯಾನರ್ಜಿ, ರಾನಡೆ** ಮುಂತಾದವರಿದ್ದರು. ತೀವ್ರಗಾಮಿ ಗುಂಪಿನಲ್ಲಿ **ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಲಾಲಾ ಲಜಪತ್ ರಾಯ್** ಮುಂತಾದವರಿದ್ದರು.

ಇವರ ನಡುವಿನ ಭಿನ್ನಾಭಿಪ್ರಾಯಗಳು ಸ್ಫೋಟಗೊಂಡದ್ದು **ಬಂಗಾಳದ ವಿಭಜನೆಯ** ನಂತರ. ಅಲ್ಲಿಯವರೆಗೆ ಮಂದಗಾಮಿಗಳು ಬ್ರಿಟಿಷರು ಭಾರತವನ್ನು ಕೊಳ್ಳೆ ಹೊಡೆಯುತ್ತಿದ್ದ ಕ್ರಮವನ್ನು ಅಂಕಿ-ಅಂಶಗಳ ಸಮೇತ ಪ್ರಕಟಿಸಿ, ಪ್ರಚಾರ ಮಾಡಿದರು. ಆ ಮೂಲಕ ಬ್ರಿಟಿಷ್ ಸರ್ಕಾರದ ನಿಜಸ್ವರೂಪ ಭಾರತೀಯ ಜನರಿಗೆ ತಿಳಿಯುವಂತಾಯಿತು. ಪ್ರಾಂತೀಯ ಶಾಸನಸಭೆಗಳಲ್ಲಿ ಚುನಾಯಿತ ಭಾರತೀಯ ಪ್ರತಿನಿಧಿಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು. ದೇಶೀ ಕೈಗಾರಿಕೆ-ಉತ್ಪನ್ನಗಳಿಗೆ ರಕ್ಷಣೆ ಕೊಟ್ಟು ಅವುಗಳ ಬೆಳವಣಿಗೆಗೆ ಅನುಕೂಲವಾಗುವ ನೀತಿ ರೂಪಿಸಬೇಕು, ಹಾಗೆಯೇ ಭಾರತೀಯ ಕೃಷಿ ಮತ್ತು ನೀರಾವರಿಗೆ ಒತ್ತು ಕೊಟ್ಟು, ಬಡತನ ನಿರ್ಮೂಲನೆಗೆ ಕಾರ್ಯಕ್ರಮ ಹಾಕಿಕೊಂಡು ಕಾರ್ಯಗತಗೊಳಿಸಬೇಕೆಂದು ತಮ್ಮ

ಸಭೆ ಮತ್ತು ಬರವಣಿಗೆಗಳಲ್ಲಿ ಒತ್ತಾಯ ಹೇರಿದರು. ಭಾರತೀಯರಿಗೆ ಯುರೋಪಿಯನ್ನರಂತೆಯೇ ಸಮಾನ ಅವಕಾಶ-ಅಧಿಕಾರ ದೊರೆಯಬೇಕು ಮುಂತಾದ ಬೇಡಿಕೆಗಳನ್ನು ಮಂಡಿಸಿ ತಮ್ಮದೇ ರೀತಿಯಲ್ಲಿ ಜನಾಭಿಪ್ರಾಯ ರೂಪಿಸುತ್ತಿದ್ದರು.

ಆದರೆ ಈ ಕಾರ್ಯತಂತ್ರ ಕೆಲವರಿಗೆ ಸರಿಕಾಣಲಿಲ್ಲ. ೧೯೦೫ ರಲ್ಲಿ ಗವರ್ನರ್ ಜನರಲ್ ಆಗಿದ್ದ **ಕರ್ಜನ್** ಬಂಗಾಳದ ವಿಭಜನೆ ಪ್ರಕಟಿಸಿದಾಗ ತೆರೆಮರೆಯಲ್ಲಿಯೇ ಇದ್ದ ಭಿನ್ನಾಭಿಪ್ರಾಯಗಳು ಬಹಿರಂಗಗೊಳ್ಳತೊಡಗಿದವು. ಬಂಗಾಳದ ವಿಭಜನೆಗೆ ಎಲ್ಲ ಕಾಂಗ್ರೆಸ್ಸಿಗರ ವಿರೋಧವಿತ್ತು. ಆದರೆ ವಿರೋಧ ವ್ಯಕ್ತಪಡಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯವಿತ್ತು. ತೀವ್ರಗಾಮಿಗಳು, ಪ್ರತಿಭಟನೆ, ಚಳವಳಿಗಳು, ಸಭೆ, ಶಾಸನಸಭೆಗಳಿಂದ ಹೊರಬಂದು ಬೀದಿಯಲ್ಲಿ ನಡೆಯಬೇಕೆಂದು ಆಗ್ರಹಿಸಿದರು. ಇದೇ ಸಂದರ್ಭದಲ್ಲೇ **ತಿಲಕ್, ಸ್ವರಾಜ್ಯ ನನ್ನ ಜನ್ಮಸಿದ್ಧಹಕ್ಕು ಅದನ್ನು ಪಡೆದೇ ತೀರುತ್ತೇನೆ** ಎಂಬ ಪ್ರಸಿದ್ಧ ಘೋಷಣೆ ಮಾಡಿದರು. ತಮ್ಮ ಪತ್ರಿಕೆ **ಕೇಸರಿ, ಮರಾಠಿಗಳ** ಮೂಲಕ ಸರ್ಕಾರವನ್ನು ಟೀಕಿಸಿ, ಜನತೆಯನ್ನು ಹುರಿದುಂಬಿಸತೊಡಗಿದರು. ಒಮ್ಮೊಮ್ಮೆ ಅವರು ಕ್ರಾಂತಿಕಾರಿ ರಾಷ್ಟ್ರೀಯ ನಿಲುವುಗಳನ್ನು ಪ್ರತಿಪಾದಿಸುತ್ತಿದ್ದರು. ಜನಸಮುದಾಯದಲ್ಲಿ ಸುಪ್ತವಾಗಿದ್ದ ರಾಷ್ಟ್ರೀಯ ಭಾವನೆಗಳನ್ನು ಬಡಿದೆಬ್ಬಿಸಲು ಚರಿತ್ರೆ, ಧಾರ್ಮಿಕ ಸಂಕೇತಗಳನ್ನು ಬಳಸಿಕೊಂಡ ತಿಲಕ್, ಶಿವಾಜಿ ಮತ್ತು **ಗಣೇಶ ಉತ್ಸವಗಳನ್ನು** ಬಹಿರಂಗವಾಗಿ ಆಚರಿಸುವ ಸಂಪ್ರದಾಯ ಹಾಕಿದರು. ಬಂಗಾಳ ವಿಭಜನೆ ವಿರೋಧಿಸಿ ನಡೆಯುವ ಚಳವಳಿ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನೂ ಒಳಗೊಳ್ಳಬೇಕೆಂದು ತೀವ್ರಗಾಮಿಗಳು ಪಟ್ಟು ಹಿಡಿದರು. ಈ ಬಹಿಷ್ಕಾರವನ್ನು ಬಂಗಾಳಕ್ಕೆ ಸೀಮಿತಗೊಳಿಸಬೇಕೆಂದು ಮಂದಗಾಮಿಗಳು ಸೂಚಿಸಿದಾಗ ಅದನ್ನು ತಳ್ಳಿಹಾಕಿದರು. ಒಟ್ಟಾರೆ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳವಳಿ ಮಂದಗಾಮಿಗಳ ನಿಯಂತ್ರಣದಿಂದ, ತೀವ್ರಗಾಮಿಗಳಿಗೆ ಹಸ್ತಾಂತರವಾಗಬೇಕೆನ್ನುವ ನಿಲುವು ಅವರಲ್ಲಿದ್ದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ೧೯೦೭ ರಲ್ಲಿ **ಸೂರತ್**ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಎರಡೂ ಗುಂಪುಗಳ ನಡುವೆ ಮಾರಾಮಾರಿಯಾಗಿ, ಕಾಂಗ್ರೆಸ್ಸಿನ ವಿಭಜನೆಯಲ್ಲಿ ಪರ್ಯವಸಾನಗೊಂಡಿತು.

ಕ್ರಾಂತಿಕಾರಿ ಚಳವಳಿಗಳು

ಕಾಂಗ್ರೆಸ್ಸಿಗರ ನಿಧಾನಗತಿಯ ಚಳವಳಿಯಿಂದ ಹಲವಾರು ಯುವಕರು ಬೇಸರಗೊಂಡರು. ಬಿಸಿರಕ್ತದ ಯುವಕರಿಗೆ ಬೇಕಾಗಿದ್ದುದು ಕ್ಷಿಪ್ರಗತಿಯ ಸ್ವಾತಂತ್ರ್ಯ. ಆದರೆ ತೀವ್ರಗಾಮಿ ನಾಯಕರಾದ **ತಿಲಕ್, ಬಿಪಿನ್ ಚಂದ್ರಪಾಲ್** ಮತ್ತು **ಅರವಿಂದ ಘೋಷ**ರಂಥ ನಾಯಕರನ್ನೇ ತನ್ನ ಕಾನೂನಿನ ಕಬಂಧ ಹಸ್ತಗಳಿಂದ ಬಂಧಿಸಿ, ಹಿಂಸಿಸಿದ ಜನವಿರೋಧಿ ಪರಕೀಯ ಸರ್ಕಾರ, ಭಾರತೀಯರ ಬೇಡಿಕೆಗಳನ್ನು ಈಡೇರಿಸದೆಂದು ಈ ಯುವಕರು ಮನಗಂಡರು. ಇವರು ನಂಬಿದ್ದು 'ದಂಡಂ ದಶಗುಣಂ ಭವೇ' ಎಂಬ ಮಂತ್ರದಲ್ಲಿ. ಆದರೆ ಬಲಿಷ್ಠ

ಬ್ರಿಟಿಷ್ ಸರ್ಕಾರವನ್ನು ನೇರವಾಗಿ ಎದುರಿಸಿ ಗೆಲ್ಲುವುದು ಇವರಿಗೆ ಸಾಧ್ಯವಿಲ್ಲವೆಂದು ತಿಳಿದಿತ್ತು. ಆದ್ದರಿಂದಲೇ ಇವರು ಗುಪ್ತ ಸಂಘಟನೆಗಳಲ್ಲಿ ತೊಡಗಿ ಕ್ರಾಂತಿಕಾರಿ ಭಯೋತ್ಪಾದನೆಯಲ್ಲಿ ತೊಡಗಿದರು. ಈ ಚಟುವಟಿಕೆಗಳ ಮುಂಚೂಣಿಯಲ್ಲಿದ್ದ ಎರಡು ಸಂಘಟನೆಗಳೆಂದರೆ ಬಂಗಾಳದ **ಅನುಶೀಲನ ಸಮಿತಿ** ಮತ್ತು ಮಹಾರಾಷ್ಟ್ರದ **ನೌಜವಾನ್ ಭಾರತ ಸಭಾ. ಚೇಪೇಕರ್ ಸೋದರರು, ಖುದಿರಾಮ ಬೋಸ್, ರಾಮ್ ಪ್ರಸಾದ್ ಬಿಸ್ಮಿಲ್, ವಿನಾಯಕ ದಾಮೋದರ ಸಾವರ್ಕರ್** ಇವರಲ್ಲಿ ಪ್ರಮುಖರು. ಎರಡನೆಯ ಹಂತದಲ್ಲಿ 'ಹಿಂದೂಸ್ತಾನ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇನ್'ನ **ಭಗತ್‌ಸಿಂಗ್, ರಾಜಗುರು, ಚಂದ್ರಶೇಖರ್ ಆಜಾದ್, ಸೂರ್ಯಸೇನ್** ತೀವ್ರತರ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದರು.

ಈ ಗುಂಪುಗಳ ಚಟುವಟಿಕೆಗಳು ಯುರೋಪಿಗೂ ಹರಡಿತ್ತು. **ಮಧ್ಯ ಏಷ್ಯಾ, ಜರ್ಮನಿ, ಫ್ರಾನ್ಸ್, ರಷ್ಯಾ, ಅಮೇರಿಕಾ, ಇಂಗ್ಲೆಂಡ್**‌ಗಳಿಗೂ ವ್ಯಾಪಿಸಿದ್ದ ಈ ಜಾಲ ಅಲ್ಲಿಯ ಭಾರತೀಯ ನಿವಾಸಿಗಳು ಮತ್ತು ವಿದ್ಯಾರ್ಥಿಗಳ ನೆರವು, ಬೆಂಬಲಗಳಿಂದ, ಭಾರತದಿಂದ ಬ್ರಿಟಿಷರನ್ನು ಹೊಡೆದೋಡಿಸುವ ಪ್ರಯತ್ನದಲ್ಲಿ ಮಗ್ನರಾಗಿದ್ದರು. **ಕೆನಡಾ ಮತ್ತು ಅಮೆರಿಕಾ**ದಲ್ಲಿ ನೆಲೆಗೊಂಡಿದ್ದ ಅನಿವಾಸಿ ಭಾರತೀಯರು ದೊಡ್ಡ ಪ್ರಮಾಣದಲ್ಲಿ ೧೯೧೪ರ ಸಮಯದಲ್ಲಿ ಈ ಚಟುವಟಿಕೆಗಳಿಗೆ ಸಹಾಯ ಮಾಡಿದರು. ಅದೇ ವರ್ಷ ನಡೆದ **ಕೊಮಗಾಟ ಮಾರು** ಘಟನೆ ಚರಿತ್ರಾರ್ಹವಾದುದು. ಅದು ವಿಫಲವಾದರೂ ಭಾರತೀಯಲ್ಲಿ ಉಜ್ವಲ ರಾಷ್ಟ್ರೀಯ ಭಾವನೆಗಳಿಗೆ ಇಂಬು ಕೊಟ್ಟಿತು. ಇದರ ಎರಡನೆ ಹಂತವೆಂದರೆ ಭಗತ್‌ಸಿಂಗ್ ನೇತೃತ್ವದ **ಸಮಾಜವಾದಿ ಕ್ರಾಂತಿಕಾರಿ ಚಳವಳಿ. ಮಾರ್ಕ್ಸ್‌**ವಾದದಿಂದ ಪ್ರಭಾವಿತವಾದ ಈ ಪಕ್ಷ ರೈತ-ಕಾರ್ಮಿಕ ನೇತೃತ್ವದ ಕ್ರಾಂತಿಯೇ ಭಾರತದಲ್ಲಿ ಬ್ರಿಟಿಷರು ಮತ್ತು ಅವರ ಭಾರತೀಯ ಬಾಲಬಡುಕರನ್ನು ಅಣಗಿಸಿ ಶ್ರಮಜೀವಿಗಳ ನೇತೃತ್ವದ ಸಮಾಜವಾದಿ ಸಮಾಜ-ಪ್ರಭುತ್ವಗಳ ಸ್ಥಾಪನೆ ಅತ್ಯಗತ್ಯವೆಂದು ಸಾರಿತು. ಆದರೆ ಈ ಪ್ರಯತ್ನವೂ ವಿಫಲವಾಯಿತು. ಆದರೆ ಕ್ರಾಂತಿಕಾರಿಗಳ ತ್ಯಾಗ-ಬಲಿದಾನಗಳು ಭಾರತೀಯರ ಹೃದಯದಲ್ಲಿದ್ದ ಸ್ವಾತಂತ್ರ್ಯದ ಕಿಡಿಗಳನ್ನು ಪ್ರಜ್ವಲಿಸಿದವು. ಕ್ರಾಂತಿಕಾರಿ, ಸಮಾಜವಾದಿ ತತ್ವಗಳ ಪ್ರಚಾರಕ್ಕೆ ಅನುಕೂಲವಾಗಿಸಿದವು. ಆ ಹದವಾದ ನೆಲದ ಮೇಲೆಯೇ ಅನಂತರ ವಸಾಹತು ವಿರೋಧಿ ರಾಷ್ಟ್ರೀಯ ಚಳವಳಿಗಳು ಯಶಸ್ವಿಯಾಗಿ ನಡೆಯಲು ಸಾಧ್ಯವಾಯಿತು. ಈ ಕ್ರಾಂತಿಕಾರಿ ಚಟುವಟಿಕೆಗಳ ಅಂತಿಮ ಘಟ್ಟವೆಂದರೆ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ನೇತಾಜಿ **ಸುಭಾಷ್ ಚಂದ್ರಬೋಸ**ರ ನೇತೃತ್ವದಲ್ಲಿ ನಡೆದ ಬ್ರಿಟಿಷ್ ವಿರೋಧಿ ದಾಳಿ. **ಭಾರತ ರಾಷ್ಟ್ರೀಯ ಸೈನ್ಯ** (Indian National Army) ಕಟ್ಟಿದ ಸುಭಾಷರು ಸುಮಾರು ಒಂದು ಲಕ್ಷದಷ್ಟು ಸೈನ್ಯದೊಂದಿಗೆ ಭಾರತದಿಂದ ಬ್ರಿಟಿಷರನ್ನು ಹೊಡೆದು ಓಡಿಸಲು ಸನ್ನದ್ಧರಾಗಿ ಬಂದರು. ಭಾರತದಲ್ಲಿದ್ದ ಸೈನ್ಯ ಈ ಬಗ್ಗೆ ಸಹಾನುಭೂತಿಯಿಂದಿತ್ತು. ಒಟ್ಟಾರೆ ಬ್ರಿಟಿಷ್ ವಸಾಹತು

ಸರ್ಕಾರವನ್ನು ಮಣಿಸುವಲ್ಲಿ ಕ್ರಾಂತಿಕಾರಿಗಳ ಪಾತ್ರ ಗಮನಾರ್ಹವಾದದ್ದು. ಅವರ ತ್ಯಾಗ-ಬಲಿದಾನಗಳು ಇತಿಹಾಸದಲ್ಲಿ ಚಿರಕಾಲ ಉಳಿಯುವಂಥದು.

ಗಾಂಧಿಪೂರ್ವ ರಾಷ್ಟ್ರೀಯ ಚಳವಳಿ

೧೯೦೭ ರಲ್ಲಿ ಕಾಂಗ್ರೆಸ್ ಇಬ್ಭಾಗವಾದ ಮೇಲೆ, ಬ್ರಿಟಿಷ್ ಸರ್ಕಾರ ತೀವ್ರಗಾಮಿಗಳನ್ನು ಬಂಧಿಸಿ, ವಿಚಾರಣೆಗೊಳಪಡಿಸಿ ಜೈಲಿಗೆ ದೂಡಿತು. ಕ್ರಾಂತಿಕಾರಿಗಳನ್ನು ಬೇಟೆಯಾಡಿ ಕೊಂದಿತು. ಮಂದಗಾಮಿಗಳಿಗೆ ಸಂವಿಧಾನಿಕ ಸುಧಾರಣೆಗಳ ಆಸೆ ತೋರಿಸಿ ಒಲಿಸಿಕೊಳ್ಳಲು ಪ್ರಯತ್ನಿಸಿದ್ದೂ ಉಂಟು. ಕೆಲವು ಮುಸ್ಲಿಂ ನಾಯಕರನ್ನು ಪರೋಕ್ಷವಾಗಿ ಹುರಿದುಂಬಿಸಿ, ಅವರಲ್ಲಿದ್ದ ಮತೀಯ ಭಾವನೆಗಳನ್ನು ಭಿತ್ತಿ **ಮುಸ್ಲಿಂ ಲೀಗ್** ಸ್ಥಾಪನೆಗೆ ಪ್ರೇರೇಪಿಸಿತು. ೧೯೦೯ ರಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಮತಗಟ್ಟೆಗಳನ್ನು ಘೋಷಿಸಿ, ಮುಸ್ಲಿಮರು ರಾಜಕೀಯವಾಗಿ ಇತರರಿಂದ ಪ್ರತ್ಯೇಕವಾಗಿರುವಂತೆ ನೋಡಿಕೊಂಡಿತು. ಅನಂತರ ೧೯೧೧ ರಲ್ಲಿ **ಬಂಗಾಳ ವಿಭಜನೆಯನ್ನು** ರದ್ದು ಮಾಡಿ, ಒಂದುಗೂಡಿಸಿತು. ಇದು ರಾಷ್ಟ್ರೀಯವಾದಿಗಳನ್ನು ಸಮಾಧಾನಪಡಿಸುವ ಹುನ್ನಾರವೂ ಹೌದು. ಆದರೆ ಯುರೋಪಿನಲ್ಲಿ ಯುದ್ಧದ ಕಾರ್ಮೋಡಗಳು ಕವಿಯತೊಡಗಿದವು. ತಮ್ಮ ಪ್ರಭಾವ ವಲಯಗಳನ್ನು ವಿಸ್ತರಿಕೊಳ್ಳಲು ಯುರೋಪಿನ ಎರಡು ಸಾಮ್ರಾಜ್ಯಶಾಹಿ ಬಣಗಳು ಯುದ್ಧಕ್ಕೆ ಸಜ್ಜಾಗಿ ನಿಂತವು. ಈ ಯುದ್ಧಕ್ಕೆ **ಟರ್ಕಿ** ಸಾಮ್ರಾಜ್ಯದ ಮೇಲೆ ಬ್ರಿಟಿಷ್ ಮಿತ್ರ ರಾಷ್ಟ್ರಗಳ ಕಾಕದೃಷ್ಟಿಯೂ ಒಂದು ಪ್ರಮುಖ ಕಾರಣ. ಟರ್ಕಿಯ ಭವಿಷ್ಯ ಮತ್ತು ಮುಸ್ಲಿಂ ಪುಣ್ಯಕ್ಷೇತ್ರಗಳ ಮೇಲಿನ ಅಧಿಕಾರ ಭಾರತದ ಮುಸ್ಲಿಮರನ್ನು ಕೆಣಕಿತು. ಮುಸ್ಲಿಂ ಪುಣ್ಯಕ್ಷೇತ್ರಗಳು ಮೊದಲಿನಿಂದಲೂ ಟರ್ಕಿಯ ಅಧೀನದಲ್ಲಿದ್ದು, ಆ ಕಾರಣದಿಂದಲೇ ಟರ್ಕಿಯ ಸಾಮ್ರಾಟನನ್ನು **ಖಲೀಫ್** ಅಂದರೆ ಎಲ್ಲ ಮುಸ್ಲಿಮರ 'ಆಧ್ಯಾತ್ಮಿಕ ಗುರು' ಎಂದು ಮನ್ನಣೆ ನೀಡಲಾಗಿತ್ತು. ಆದರೆ ಬ್ರಿಟಿಷ್ ಮಿತ್ರ ಪಕ್ಷಗಳು ಯುದ್ಧಾನಂತರ ಟರ್ಕಿಯನ್ನು ಹರಿದು ಹಂಚಿಕೊಳ್ಳುವ ಸನ್ನಾಹದಲ್ಲಿದ್ದು ಮುಸ್ಲಿಮರ ಪುಣ್ಯಕ್ಷೇತ್ರಗಳು ಮುಸ್ಲಿಮೇತರರ ಅಧೀನಕ್ಕೆ ಒಳಪಡುತ್ತಿದ್ದವು. ಇದರಿಂದ ಉದ್ವಿಗ್ನಗೊಂಡು ಮುಸ್ಲಿಂ ನಾಯಕತ್ವ ಈ ಬಗ್ಗೆ ಬ್ರಿಟನ್ನಿನಿಂದ ಸ್ಪಷ್ಟನೆ ಬಯಸಿತು. ಆದರೆ ಅವರಿಗೆ ದೊರಕಿದ್ದು ಹಾರಿಕೆಯ ಉತ್ತರ. ಆ ಹೊತ್ತಿಗೆ **ಮೌಲಾನಾ ಅಬ್ದುಲ್ ಕಲಾಂ ಆಜಾದ್, ಮೊಹಮ್ಮದ್** ಅಲಿ, **ಶೌಕತ್** ಅಲಿ ಸಹೋದರರು, **ಹಕಿಂ ಅಜಮಲ್‌ಖಾನ್** ಮತ್ತು ಡಾ. ಅನ್ಸಾರಿಯಂಥ ಯುವಪೀಳಿಗೆ 'ಮುಸ್ಲಿಂ ಲೀಗ್'ನ ಶ್ರೀಮಂತ ಊಳಿಗಮಾನ್ಯ ನಾಯಕತ್ವವನ್ನು ಪ್ರಶ್ನಿಸಲು ಪ್ರಾರಂಭಿಸಿತು. ಅವರು ಪ್ರಖರ ವಸಾಹತುಶಾಹಿ ವಿರೋಧಿಗಳಾಗಿದ್ದರು. ಅಲ್ಲದೆ ಸ್ವಾತಂತ್ರ್ಯಪ್ರಿಯರು. **ಆಜಾದ್** ಮತ್ತು ಅಲಿ ಸಹೋದರರ ಪತ್ರಿಕೆಗಳನ್ನು ಸರ್ಕಾರ ರಾಜದ್ರೋಹದ ಆಪಾದನೆ ಹೊರಿಸಿ ಸದೆಬಡಿಯಿತು. ಅದೇ ವೇಳೆಗೆ ಅನಿಬೆಸೆಂಟರು **ಹೋಂ ರೂಲ್ ಚಳವಳಿ** ಪ್ರಾರಂಭಿಸಿದರೆ, ಜೈಲಿನಿಂದ ಬಿಡುಗಡೆಯಾದ

ತಿಲಕರೂ ಚಳವಳಿಯಲ್ಲಿ ಕ್ರಿಯಾಶೀಲರಾದರು. ಮಂದಗಾಮಿ ಕಾಂಗ್ರೆಸ್ಸು ಭಾರತದಲ್ಲಿ ಭುಗಿಲೇಳುತ್ತಿದ್ದ ಹೊಸ ರಾಷ್ಟ್ರೀಯ ಶಕ್ತಿಯನ್ನು ಮುನ್ನಡೆಸುವ ಚೈತನ್ಯ ಹೊಂದಿರಲಿಲ್ಲ.

ಮಹಾಯುದ್ಧದಲ್ಲಿ ಬ್ರಿಟನ್‌ಗೆ ಭಾರತೀಯರ ನೆರವು-ಬೆಂಬಲ ಅನಿವಾರ್ಯವಾಗಿದ್ದವು. ರಾಷ್ಟ್ರೀಯ ಶಕ್ತಿಗಳು ಸಂಘಟಿತವಾಗಿ ಬ್ರಿಟಿಷರನ್ನು ಇಕ್ಕಟ್ಟಿಗೆ ಸಿಲುಕಿಸಲು ಈ ಸಂದರ್ಭ ಪ್ರಶಸ್ತವಾಗಿತ್ತು. ಇದನ್ನು ಮನಗಂಡ ಎಲ್ಲ ಗುಂಪುಗಳೂ ಒಟ್ಟಾಗಲು ತೀರ್ಮಾನಿಸಿದವು. ಗಾಂಧೀಜಿಯೂ ಅದೇ ಸಂದರ್ಭದಲ್ಲಿ ಭಾರತಕ್ಕೆ ವಾಪಾಸು ಬಂದರು. **ಬೆಸೆಂಟ್, ತಿಲಕ್, ಗಾಂಧಿ** ಮತ್ತಿತರು ಸೇರಿ ಕಾಂಗ್ರೆಸ್ಸಿನ ಎರಡೂ ಬಣಗಳನ್ನು ಒಗ್ಗೂಡಿಸಿದ್ದೇ ಅಲ್ಲದೆ 'ಮುಸ್ಲಿಂಲೀಗ್'ನೊಂದಿಗೂ ಚರ್ಚಿಸಿ, ಎರಡೂ ಪಕ್ಷಗಳು ಹೊಂದಾಣಿಕೆ ಮಾಡಿಕೊಳ್ಳಲು ಶ್ರಮಿಸಿದರು. ಅದರ ಪರಿಣಾಮವೇ ೧೯೧೬ ರಲ್ಲಿ ಕಾಂಗ್ರೆಸ್-ಲೀಗ್ ನಡುವೆ ಆದ **ಲಕ್ನೋ ಒಪ್ಪಂದ.** ಇನ್ನಿತರ ಒಪ್ಪಂದಗಳೊಂದಿಗೆ ಎರಡೂ ಪಕ್ಷಗಳೂ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಿ ಚಳವಳಿ ಹಮ್ಮಿಕೊಳ್ಳುವುದೆಂದು ತೀರ್ಮಾನಿಸಿದವು. ಲಕ್ನೋ ಒಪ್ಪಂದದ ಮಿತಿಗಳೇನೇ ಇರಲಿ, ದಶಕಗಳಿಂದ ಪರಸ್ಪರ ಅನುಮಾನದಿಂದ ನೋಡುತ್ತಿದ್ದ ಹಿಂದೂ-ಮುಸ್ಲಿಂ ನಾಯಕರು ಒಟ್ಟಾದರು. ಪರಕೀಯ ಬ್ರಿಟಿಷ್ ಸರ್ಕಾರಕ್ಕೆ ಸೆಡ್ಡು ಹೊಡೆಯಲು ತಯಾರಾದವು. ಈ ಹೊಂದಾಣಿಕೆ ತಾತ್ಕಾಲಿಕವಾಗಿಯಾದರೂ ಬ್ರಿಟಿಷ್ ಸರ್ಕಾರಕ್ಕೆ ಸವಾಲಾಯಿತು. ಸರ್ಕಾರದ್ದು ಎಂದಿನಂತೆ 'ಕಂಕುಳಲ್ಲಿ ದೊಣ್ಣೆ, ಕೈಯ್ಯಲ್ಲಿ ಶರಣಾರ್ಥಿ' ಎಂಬ ನೀತಿಯೇ ಆಯಿತು. ಅಂದರೆ ಒಂದು ಕಡೆ ರಾಜಕೀಯ ಸುಧಾರಣೆಗಳ ಆಶ್ವಾಸನೆ ನೀಡಿ, ಇನ್ನೊಂದೆಡೆ ದಮನಕಾರಿ ಕಾನೂನುಗಳನ್ನು ಜಾರಿಮಾಡಿ ಚಳವಳಿಗಾರರನ್ನು ಹತ್ತಿಕ್ಕತೊಡಗಿತು.

ಮಹಾಯುದ್ಧವು ಕೊನೆಯ ಘಟ್ಟ ಮುಟ್ಟುತ್ತಿದ್ದಂತೆ ಟರ್ಕಿ ಸಾಮ್ರಾಜ್ಯದ ಛಿದ್ರೀಕರಣ ಮತ್ತು ಪುಣ್ಯ ಕ್ಷೇತ್ರಗಳ ಮೇಲಿನ ಅಧಿಕಾರ ಇತರರ ಕೈಗೆ ಹಸ್ತಾಂತರವಾಗುವುದು ಖಾತರಿಯಾಯಿತು. ಇದನ್ನು ಮುಸ್ಲಿಮರೆಲ್ಲಾ ಇಸ್ಲಾಂ ವಿರೋಧಿ ಎಂದು ಬಣ್ಣಿಸಿ ರೊಚ್ಚಿಗೆದ್ದರು. ಅದನ್ನು ಪ್ರತಿಭಟಿಸಿ **ಖಿಲಾಫತ್ ಚಳವಳಿ** ಪ್ರಾರಂಭಿಸಿದರು. ಈ ಮಧ್ಯೆ ಸರ್ಕಾರ ಒಂದು ಕಂತಿನ ಸುಧಾರಣೆಗಳನ್ನು ಘೋಷಿಸಿತು. ಆದರೆ ಈ ಸುಧಾರಣೆಗಳು ಭಾರತೀಯ ರಾಷ್ಟ್ರೀಯವಾದಿಗಳನ್ನು ನಿರಾಶೆಗೊಳಿಸಿತು. ಜೊತೆಗೆ ಗಾಯದ ಮೇಲೆ ಬರೆ ಎಳೆದಂತೆ ಕ್ರಾಂತಿಕಾರಿ ಭಯೋತ್ಪಾದನೆ ಹೆಚ್ಚುತ್ತಿದೆ ಎಂಬ ನೆಪ ಹೂಡಿ ಎರಡು ಶಾಸನಗಳನ್ನು ಘೋಷಿಸಿ ರಾಷ್ಟ್ರೀಯ ಚಳವಳಿಯನ್ನು ದಮನ ಮಾಡುವ ಹಂಚಿಕೆ ಹೂಡಿತು. ಇವೇ ಕುಖ್ಯಾತಿ ಗಳಿಸಿದ **ರೌಲತ್ ಕಾಯ್ದೆಗಳು.** ವಿವಿಧ ಸಮುದಾಯಗಳು ಯುದ್ಧದ ಪರಿಣಾಮ ದಿಂದಾಗಿ ನಿರುದ್ಯೋಗಕ್ಕೆ ತುತ್ತಾದವು. ಉದ್ಯೋಗಗಳಲ್ಲಿದ್ದವರು ಕೆಲಸ ಕಳೆದುಕೊಂಡರು. ವಿದ್ಯಾವಂತ ನಿರುದ್ಯೋಗಿಗಳು ಹೆಚ್ಚು ಹೆಚ್ಚಾಗಿ ಬ್ರಿಟಿಷ್ ವಿರೋಧಿಗಳಾಗಿ ರಾಷ್ಟ್ರೀಯ ಚಳವಳಿಯಲ್ಲಿ ಭಾಗಿಯಾದರು. ಆದರೆ ಸ್ಪಷ್ಟ ಮಾರ್ಗದರ್ಶನ ಮಾಡಬಹುದಾದ ದಿಟ್ಟ

ನಾಯಕತ್ವದ ಕೊರತೆ ಅಲ್ಲಿ ಎದ್ದು ಕಾಣುತ್ತಿತ್ತು. ಶೂದ್ರಾದಿ ಶೂದ್ರ ವರ್ಗಗಳು ಎಚ್ಚರಗೊಳ್ಳುತ್ತಾ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಾರಂಭಿಸಿದವು. ದಕ್ಷಿಣ ಮತ್ತು ಪಶ್ಚಿಮ ಭಾರತಗಳಲ್ಲಿ ಮೇಲ್ಜಾತಿಗಳ ನಾಯಕತ್ವ ಮತ್ತು ದಮನಗಳನ್ನು ಪ್ರತಿಭಟಿಸಿ ಬ್ರಾಹ್ಮಣೇತರ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ತೀರಾ ದಮನಕ್ಕೆ ಒಳಗಾಗಿದ್ದ ಅಸ್ಪೃಶ್ಯ ವರ್ಗ ಸಂಘಟಿತವಾಗತೊಡಗಿತ್ತು. ಒಟ್ಟಾರೆ ಭಾರತೀಯ ಸಮಾಜ-ರಾಜಕಾರಣಗಳು ಒಂದಲ್ಲ ಒಂದು ರೀತಿಯಲ್ಲಿ ಕ್ರಿಯಾಶೀಲವಾಗುತ್ತಿದ್ದವು. ಆದರೆ ಬ್ರಿಟಿಷರ 'ಒಡೆದು ಆಳುವ ನೀತಿ' ಅವುಗಳನ್ನು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಕೊಂಡೊಯ್ಯುವ ಅಪಾಯವೂ ಇತ್ತು. ಇಂಥ ಸಂದರ್ಭದಲ್ಲಿ ಅಪಾರ ತಾಳ್ಮೆ, ಸಹನೆ, ಮುತ್ಸದ್ದಿತನ ಹೊಂದಿದ ನಾಯಕತ್ವದ ಅತ್ಯಗತ್ಯವಾಗಿತ್ತು. ಹಾಗೆ ನೋಡಿದರೆ ಗಾಂಧೀಜಿಯ ಪ್ರವೇಶ ಆ ಸಂದರ್ಭದಲ್ಲಿ ಹೇಳಿ ಮಾಡಿಸಿದಂತಿತ್ತು.

ಗಾಂಧಿಯುಗ

ದಶಕಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿದ್ದು ಅಲ್ಲಿನ ಭಾರತೀಯ ಸಂಜಾತರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಿ ಅಪಾರ ಅನುಭವ ಪಡೆದು ೧೯೧೫ ರಲ್ಲಿ ಗಾಂಧಿ ಸ್ವದೇಶಕ್ಕೆ ಮರಳಿದರು. ಬಂದವರು ನೇರವಾಗಿ ರಾಜಕೀಯ ರಂಗಕ್ಕೆ ಇಳಿಯದೆ ಭಾರತದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ತೊಡಗಿದರು. ೧೯೧೯ ರ ಹೊತ್ತಿಗೆ ಅವರಿಗೆ ಭಾರತೀಯರ ನಾಡಿಮಿಡಿತ ಅರಿಯಲು ಸಾಧ್ಯವಾಯಿತೆನ್ನಬಹುದು. ಈ ಅರಿವೇ ಅವರನ್ನು ರಾಷ್ಟ್ರೀಯ ಚಳವಳಿಯ ನೇತಾರನನ್ನಾಗಿಸಲು ಸಹಾಯಕವಾಯಿತು. ಇಡೀ ಚಳವಳಿಗೆ ಒಂದು ಹೊಸ ತಿರುವನ್ನು ಕೊಡಲು ಅವರು ಕಾರಣರಾದರು. ಈ ಪ್ರಯತ್ನದಲ್ಲಿ ಅವರು ವಿವಿಧ ಭಾರತೀಯ ಸಮುದಾಯಗಳ ಆಶೋತ್ತರಗಳನ್ನು ಅರಿತು ಅವುಗಳನ್ನು ಕ್ರೋಢೀಕರಿಸಿ, ಅವನ್ನೇ ರಾಷ್ಟ್ರೀಯ ಚಳವಳಿಯ ಪ್ರಣಾಳಿಕೆಯನ್ನಾಗಿಸಿದರು. ರೈತ, ಕಾರ್ಮಿಕ, ಮಹಿಳೆ ಹಾಗೂ ಅಸ್ಪೃಶ್ಯರ ಸಮಸ್ಯೆಗಳನ್ನು ಮನಗಂಡು ತಮ್ಮದೇ ರೀತಿಯಲ್ಲಿ ಅವುಗಳಿಗೆ ಪರಿಹಾರ ದೊರಕಿಸಿಕೊಡುವ ಪ್ರಯತ್ನದಲ್ಲಿ ಮಗ್ನರಾದರು. ಹಿಂದೂ-ಮುಸ್ಲಿಂ ಸಮಸ್ಯೆ, ಭಾರತೀಯರ ಬಡತನ, ಅನಕ್ಷರತೆ, ಜಾತ್ಯಾಧಾರಿತ-ಲಿಂಗಾಧಾರಿತ ಅಸಮತೆ-ಅಸಹನೆಗಳು ಭಾರತದ ಏಕತೆಗೆ, ರಾಷ್ಟ್ರೀಯತೆಗೆ ಕಂಟಕಗಳೆಂದು ಅರಿತು, ಅವುಗಳ ನಿವಾರಣೆಗೆ ಕಾರ್ಯಕ್ರಮ ರೂಪಿಸಿದರು. ಅವರಿಗೆ ರಾಷ್ಟ್ರೀಯ ಚಳವಳಿ- ರಾಜಕಾರಣಗಳೆಂದರೆ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಆಗಿತ್ತು. ಆ ಪ್ರಕ್ರಿಯೆಯಲ್ಲೇ ಭಾರತ ಮತ್ತು ಭಾರತೀಯರ ನಿಜವಾದ ಅರ್ಥದಲ್ಲಿ ಸ್ವತಂತ್ರ ಪಡೆಯಲು ಸಾಧ್ಯವೆಂದು ಕಾರ್ಯೋನ್ಮುಖರಾದರು. ಚಂಪಾರಣ್ಯದ ನೀಲಿ ಬೆಳೆಗಾರರ, ಖೇಡಾ ಜಿಲ್ಲೆಯ ರೈತರ ಮತ್ತು ಅಹಮದಾಬಾದಿನ ಹತ್ತಿಗಿರಣಿ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿದ ಗಾಂಧೀಜಿ ತಮ್ಮ ಮಿತಿಯಲ್ಲಿ ಅವರನ್ನು ಸಂಘಟಿಸಿ ಅವರಿಗೆ ಪರಿಹಾರ ದೊರಕಿಸಿಕೊಟ್ಟರು. ಅಹಮದಾಬಾದಿನಲ್ಲಿ ಸಬರಮತಿ ಆಶ್ರಮ ಸ್ಥಾಪಿಸಿ ವಿಭಿನ್ನ

ಜಾತಿ ಮತಗಳ ಭಾರತೀಯರು ಒಂದೇ ಕುಟುಂಬದಂತೆ ಒಟ್ಟಿಗೇ ಬದುಕಲು ಕಷ್ಟವಾದರೂ ಸಾಧ್ಯವೆನ್ನುವುದನ್ನು ಪ್ರಯೋಗ ಮಾಡಿಯೇ ಅರಿತುಕೊಂಡರು.

ಈ ಮಧ್ಯೆ ಬ್ರಿಟಿಷ್ ವಿರೋಧಿ ರಾಷ್ಟ್ರೀಯ ರಾಜಕಾರಣಕ್ಕೆ, ವಿಕಾಸಗೊಳ್ಳುತ್ತಿದ್ದ ವಸಾಹತು ವಿರೋಧಿ ರಾಷ್ಟ್ರೀಯ ಭಾವನೆಯನ್ನು ವ್ಯಕ್ತಿಗತ, ಜಾತ್ಯಾಧಾರಿತ ಮತ್ತು ತಾತ್ವಿಕ ನಿಲುವುಗಳಲ್ಲಿನ ಭಿನ್ನತೆಗಳನ್ನು ಅರ್ಥಮಾಡಿಕೊಂಡು, ಸಮನ್ವಯಗೊಳಿಸುವ ಸಾಮರ್ಥ್ಯ ವಿಲ್ಲದಂತಿತ್ತು. ಇನ್ನೊಂದು ಕಡೆ ಬ್ರಿಟಿಷ್ ಆಡಳಿತ ಸುಧಾರಣೆಗಳ ವಿಷಯದಲ್ಲಿ ಭಾರತೀಯ ರಾಜಕಾರಣಿಗಳನ್ನು ನಿರಾಸೆಗೊಳಿಸಿ, 'ರೌಲತ್ ಕಾಯ್ದೆ'ಗಳನ್ನು ಬಳಸಿ ಖಿಲಾಫತ್ ಮತ್ತು ತೀವ್ರಗಾಮಿ ಚಳವಳಿಗಳನ್ನು ಹತ್ತಿಕ್ಕಲು ಪ್ರಾರಂಭಿಸಿತು. ಈ ದಮನಕಾರಿ ಕಾಯ್ದೆಗಳನ್ನು ವಿರೋಧಿಸಿ ಗಾಂಧಿ, ಕೆಲವು ಸಹಚರರೊಂದಿಗೆ 'ಹರತಾಳ' ಕಾರ್ಯಕ್ರಮ ಹಾಕಿಕೊಂಡರು. ಈ ಕಾರ್ಯಕ್ರಮದಲ್ಲಿ ಅನಿರೀಕ್ಷಿತವಾಗಿ ಅಪಾರ ಸಂಖ್ಯೆಯ ಜನಸ್ತೋಮ ಪಾಲ್ಗೊಂಡಿತು. ದೆಹಲಿ-ಮುಂಬಯಿಗಳಲ್ಲಿ ಹಿಂಸಾಚಾರಕ್ಕೆ ತಿರುಗಿ ಸರ್ಕಾರ ಜನರ ಮೇಲೆ ಗುಂಡು ಹಾರಿಸಿ ಹಲವರನ್ನು ಕೊಂದು ಹಾಕಿತು. ಅಲ್ಲಿಗೆ ಹೋಗಲು ಬಯಸಿದ ಗಾಂಧಿಯವರನ್ನು ನಿರ್ಬಂಧಿಸಿತು. ಈ ಬಗ್ಗೆ ನಡೆದ ಪ್ರತಿಭಟನೆಯ ಅಂಗವಾಗಿ ಪಂಜಾಬಿನ ಜಲಿಯನ್‌ವಾಲಾ ಬಾಗ್ ದುರಂತವೂ ನಡೆದು ನೂರಾರು ಮಂದಿ ಅಮಾಯಕ ಜನ ಬ್ರಿಟಿಷರ ಗುಂಡಿಗೆ ಬಲಿಯಾದರೂ, ಆ ಬಗ್ಗೆ ಕಣ್ಣೊರೆಸುವ ಶಾಸ್ತ್ರವಾಗಿ ವಿಚಾರಣೆ ಮಾಡಿದ ಸರ್ಕಾರ, ನರಹಂತಕ ರಾದ ಜನರಲ್ ಡೈಯರ್ ಮತ್ತು ರಾಜ್ಯಪಾಲ ಓಡ್‌ವಯರ್‌ಗಳನ್ನು ನಿರ್ದೋಷಿಗಳೆಂದು ತೀರ್ಮಾನಿಸಿತು. ಇದೆಲ್ಲಕ್ಕೂ ಕಿರೀಟವಿಟ್ಟಂತೆ ಪಂಜಾಬಿನ ಸೇನಾಡಳಿತ ಮುಖ್ಯಸ್ಥ ಮತ್ತು ಜಲಿಯನ್ ವಾಲಾದಲ್ಲಿ ನರಹತ್ಯೆಗೆ ಆಜ್ಞೆ ಮಾಡಿದ ಜನರಲ್ ಡಯರ್‌ನನ್ನು ಬ್ರಿಟಿಷ್ ಪ್ರಜೆಗಳು 'ಸಾಮ್ರಾಜ್ಯದ ರಕ್ಷಕ'ನೆಂದು ಹೊಗಳಿ ಅವನಿಗೆ ಸನ್ಮಾನ ಮಾಡಿ ಬಹುಮಾನವಾಗಿ ಇಡುಗಂಟನ್ನು ಕೊಟ್ಟರು. ಬ್ರಿಟಿಷ್ ನಾಗರಿಕರು ಸಭ್ಯರು, ಜನಪರ ಕಾಳಜಿಯುಳ್ಳವರು ಎಂದು ತಿಳಿದಿದ್ದ ಗಾಂಧೀಜಿಗೆ ಇದರಿಂದ ಆಘಾತವಾಯಿತು. ೧೯೧೯ರ ಸುಧಾರಣೆಗಳನ್ನು ಪ್ರತಿಭಟನೆಯೊಂದಿಗೆ ಒಪ್ಪಿಕೊಂಡು ಇನ್ನಷ್ಟು ಸುಧಾರಣೆಗಳನ್ನು ಒತ್ತಾಯಿಸಲು ಕಾಂಗ್ರೆಸ್ಸನ್ನು ಒಪ್ಪಿಸಲು ಹೆಣಗಿದ್ದ ಗಾಂಧೀಜಿ ಭ್ರಮನಿರಸನಗೊಂಡರು. ತಮ್ಮ ಪಾರದರ್ಶಕತೆ, ನಿಸ್ವಾರ್ಥ ಮತ್ತು ಮಾನವೀಯತೆಯಿಂದ ಬಹುತೇಕ ಎಲ್ಲರ ಮನಸೂರೆಗೊಂಡಿದ್ದ ಅವರು 'ಅಖಿಲ ಭಾರತ ಖಿಲಾಫತ್ ಅಧಿವೇಶನ'ದ ಅಧ್ಯಕ್ಷರಾಗಿ ಚುನಾಯಿತರಾದರು. ಈ ಅಧಿವೇಶನದಲ್ಲಿ ಇತಿಹಾಸದಲ್ಲಿಯೇ ಮೊದಲಿಗರಾದ ದೆಹಲಿಯ ಜಮ್ಮಾ ಮಸೀದಿಯಲ್ಲಿ ಮುಸ್ಲಿಂ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ ಭಾರತದ ಎಲ್ಲರ ಹಿತದೃಷ್ಟಿಯಿಂದ ಭಾರತೀಯ ಜನಸಮುದಾಯವೆಲ್ಲಾ ರಾಷ್ಟ್ರೀಯ ಚಳವಳಿಯಲ್ಲಿ ಪಾಲ್ಗೊಳ್ಳುವುದು ಅವಶ್ಯಕವೆಂದು ಮನಗಾಣಿಸಿದರು. ಅಷ್ಟೇ ಅಲ್ಲ, ಪರಕೀಯ ಸರ್ಕಾರದ ದುರಾಡಳಿತದ ವಿರುದ್ಧ 'ಅಸಹಕಾರ ಚಳವಳಿ'ಯನ್ನು ಪ್ರಾರಂಭಿಸಬೇಕೆಂಬ ತಮ್ಮ ಕಾರ್ಯಕ್ರಮಕ್ಕೆ ಖಿಲಾಫತ್ ಸಮಾವೇಶದ ಬೆಂಬಲ ಗಳಿಸಿಕೊಂಡರು. ೧೯೨೦ ರಲ್ಲಿ ನಾಗಪುರದಲ್ಲಿ ಸಮಾವೇಶಗೊಂಡ ಕಾಂಗ್ರೆಸ್

ಗಾಂಧೀಜಿಯವರ ಅಸಹಕಾರ ಚಳವಳಿಗೆ ಒಪ್ಪಿಗೆ ನೀಡಿತು. ಇದೇ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳ ರಚನೆ, ಭಾಷಾವಾರು ಪ್ರಾಂತ್ಯಗಳ ರಚನೆ ಹೀಗೆ ಗಾಂಧೀಜಿಯವರ ಎಲ್ಲ ಠರಾವುಗಳೂ ಅಂಗೀಕೃತವಾದವು. ಗಾಂಧೀಜೀ ಸತ್ಯ-ಅಹಿಂಸೆಗಳನ್ನೇ ಜಗತ್ತಿನ ಜೀವಾಳವೆಂದು ನಂಬಿ ನಡೆದವರು. ಅದನ್ನೇ ಅವರು **ಸತ್ಯಾಗ್ರಹ**ವೆಂದು ಕರೆದರು. ಈ ಸತ್ಯಾಗ್ರಹದ ಯಶಸ್ಸಿಗೆ, ಸ್ವದೇಶಿ ವಸ್ತುಗಳ ಬಳಕೆ, ಹಿಂದೂ-ಮುಸ್ಲಿಂ ಏಕತೆ, ಅಸ್ಪೃಶ್ಯತೆಯ ನಿವಾರಣೆ ಮತ್ತು ರಾಷ್ಟ್ರೀಯ ಶಿಕ್ಷಣ ಅಗತ್ಯವೆಂದು ಸಾರಿದರು. ಈ ಕಾರ್ಯಕ್ರಮಗಳೇ ಅವರು ಹಮ್ಮಿಕೊಂಡ 'ಅಸಹಕಾರ ಚಳವಳಿ'ಯ ತಿರುಳು. ಅಸಹಕಾರವೆಂದರೆ ಆಳುವ ಬ್ರಿಟಿಷ್ ಪ್ರಭುತ್ವಕ್ಕೆ ಭಾರತೀಯರು ಕೊಡುತ್ತಿದ್ದ ಎಲ್ಲ ರೀತಿಯ ಸಹಕಾರದ ನಿಲುಗಡೆ. ಅಂದರೆ ಅನಿವಾರ್ಯವಾದರೆ ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದ ತೆರಿಗೆ ಪಾವತಿಯ ನಿರಾಕರಣೆ ಮತ್ತು ಅದಕ್ಕಾಗಿ ಸರ್ಕಾರ ಯಾವುದೇ ಶಿಕ್ಷೆ ವಿಧಿಸಿದರೂ ಅದನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸಿ ಶಿಕ್ಷೆ ಅನುಭವಿಸುವ ಧೀರೋದಾತ್ತ ನಿಲುವು. ಹಲವಾರು ಭಾರತೀಯರು ಸರ್ಕಾರದ ಕೆಲಸಗಳಿಗೆ ರಾಜೀನಾಮೆ ನೀಡಿದರು. ವಕೀಲರು ನ್ಯಾಯಲಯಗಳನ್ನು ಬಹಿಷ್ಕರಿಸಿದರೆ, ಹಲವಾರು ಮಂದಿ ಸರ್ಕಾರಿ ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸಿ, ದೇಶೀಯರು ಪ್ರಾರಂಭಿಸಿದ **ರಾಷ್ಟ್ರೀಯ ಶಾಲೆ**ಗಳನ್ನು ಸೇರಿದರು. ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವ ಚಳವಳಿ ಜನಪ್ರಿಯವಾಯಿತು. ವಿದೇಶೀ ವಸ್ತುಗಳ ಜಾಗದಲ್ಲಿ ಸ್ವದೇಶೀ ವಸ್ತುಗಳನ್ನು ಬಳಸುವ ಪರಿಪಾಠ ಹೆಚ್ಚಾಯಿತು. ಹಿಂದೂ-ಮುಸ್ಲಿಮರಲ್ಲಿ ಸಹೋದರ ಭಾವ ಬೆಳೆಯಿತು. ಒಂದು ಹಂತದಲ್ಲಿ ಅಸಹಕಾರ ಚಳವಳಿ ಬ್ರಿಟಿಷ್ ಆಡಳಿತಕ್ಕೆ ಬಿಸಿ ಮುಟ್ಟಿಸಿತು. ೧೯೧೯ ರ ಸುಧಾರಣೆಗಳ ಅನ್ವಯ ಚುನಾವಣೆಗಳು ನಡೆದಾಗ ಕಾಂಗ್ರೆಸ್ ಅದನ್ನು ಬಹಿಷ್ಕರಿಸಿತು. ಚುನಾವಣೆಯಲ್ಲಿ ಪಾಲ್ಗೊಂಡವರು ಕೆಲವೇ ಜನ.

ಅಸಹಕಾರ ಚಳವಳಿಯು ಆರಂಭಿಕ ಹಂತದಲ್ಲಿ ತೀವ್ರವಾಗಿ ನಡೆದರೂ ಕ್ರಮೇಣ ಅದರ ಬಿಸಿ ಆರತೊಡಗಿತು. ಯಾವುದೇ ಸಮೂಹ ಚಳವಳಿ ದೀರ್ಘ ಕಾಲ ನಡೆಯಲು ಸಾಧ್ಯವಿಲ್ಲ. ಜೊತೆಗೆ ಗಾಂಧೀಜಿಯವರ **ಅಹಿಂಸಾ ತತ್ವ**ವನ್ನು ಕಡೆಗಣಿಸಿ ಹಲವಾರು ಕಡೆ ಹಿಂಸಾತ್ಮಕ ಘಟನೆಗಳು ನಡೆದವು. ಆದರೆ, ಉತ್ತರ ಪ್ರದೇಶದ **ಚೌರಿಚೌರಾ**ದಲ್ಲಿ ಸತ್ಯಾಗ್ರಹಿಗಳು ಪೊಲೀಸರ ದಬ್ಬಾಳಿಕೆಯಿಂದ ಕೆರಳಿ ಪೊಲೀಸರನ್ನು ಜೀವಂತ ಸುಟ್ಟು ಹಾಕಿದ್ದು, ಹಾಗೂ ಕೇರಳದ ಮಲಬಾರಿನಲ್ಲಿ ಕೃಷಿ ಕೂಲಿಗಳು ವ್ಯಾಪಕ ಹಿಂಸೆಯಲ್ಲಿ ತೊಡಗಿದ್ದು, ಗಾಂಧೀಜಿಯವರನ್ನು ಖಿನ್ನರಾಗಿಸಿತು. ಕೂಡಲೇ ಅಸಹಕಾರ ಚಳವಳಿಯನ್ನು ಸ್ಥಗಿತಗೊಳಿಸುವ ನಿರ್ಧಾರ ಪ್ರಕಟಿಸಿದರು. ಬಹುತೇಕ ರಾಷ್ಟ್ರೀಯವಾದಿಗಳು ಗಾಂಧೀಜಿಯವರ ಈ ನಿರ್ಧಾರದಿಂದ ಬೇಸರಗೊಂಡರು. ಯುವಕರಂತೂ ರೊಚ್ಚಿಗೆದ್ದರು. ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಚಳವಳಿಯಲ್ಲಿ ಭಿನ್ನಮತ ಕಾಣಿಸಿಕೊಂಡಿತು. ಈ ಭಿನ್ನಮತವನ್ನು ಶಮನಗೊಳಿಸುವ ಔಷಧಿ ಗಾಂಧಿಯವರ ಬತ್ತಳಿಕೆಯಲ್ಲಿತ್ತು. ಕಾಂಗ್ರೆಸ್ಸಿನಲ್ಲಿ ಬದಲಾವಣೆಗಳ

ಪರ-ವಿರೋಧಿ ಬಣಗಳು ತಲೆಎತ್ತಿದವು. ರಾಷ್ಟ್ರೀಯ ಐಕ್ಯತೆಯೇ ಮುಖ್ಯವೆಂದು ಭಾವಿಸಿದ ಗಾಂಧಿ ಈ ಎರಡೂ ಬಣಗಳ ಕಾರ್ಯಕ್ರಮಗಳನ್ನು ಒಪ್ಪಿದರು. ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಮುಂದುವರಿಸಲು ಇಚ್ಛೆಪಟ್ಟವರು, ಶಾಸನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಸರ್ಕಾರವನ್ನು ಪೇಚಿಗೆ ಸಿಲುಕಿಸುವವರು, ಎರಡೂ ಸಾಧ್ಯವೆಂದು ಕಾಂಗ್ರೆಸ್ ಒಪ್ಪಿತು. ಕಾಂಗ್ರೆಸ್ ಇಬ್ಭಾಗವಾಗುವುದು ತಪ್ಪಿತು. ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಅಷ್ಟಾಗಿ ನಂಬಿಕೆಯಿರದವರು **ಸ್ವರಾಜ್ಯಪಕ್ಷ**ವನ್ನು ಸ್ಥಾಪಿಸಿಕೊಂಡರು. ಈ ಮಧ್ಯೆ ಅಸಹಕಾರ ಚಳವಳಿಯನ್ನು ನಿಲುಗಡೆ ಮಾಡಿದ ನಂತರ ಗಾಂಧೀಜಿಯನ್ನು ಬಂಧಿಸಿ ಜೈಲುಶಿಕ್ಷೆ ವಿಧಿಸಲಾಯಿತು. **ಸ್ವರಾಜ್ಯ ಪಕ್ಷ**ವು ಚುನಾವಣೆಗಳಲ್ಲಿ ಜಯಗಳಿಸಿ ಶಾಸನಸಭೆ ಪ್ರವೇಶಿಸಿ, ಸರ್ಕಾರದ ಹಲವಾರು ಯೋಜನೆಗಳನ್ನು ತಿರಸ್ಕರಿಸುವಲ್ಲಿ ಯಶಸ್ವಿಯಾಯಿತು. ಆದರೆ ಒಟ್ಟಾರೆ ಪರಿಣಾಮ ಚಳವಳಿಯನ್ನು ಹುರಿದುಂಬಿಸುವಲ್ಲಿ ಯಶಸ್ವಿಯಾಯಿತೆಂದು ಹೇಳಲಾಗುವುದಿಲ್ಲ. ಸಮೂಹ ಚಳವಳಿಯ ಗೈರು ಹಾಜರಿಯಲ್ಲಿ ಹಲವರು ಹಿತಾಸಕ್ತಿಗಳು ಕಾಣಿಸಿಕೊಂಡವು. ಗಾಂಧೀಜಿಯವರ ಖಾದಿ, ಅಸ್ಪೃಶ್ಯತಾ ನಿವಾರಣೆ ಮುಂತಾದ ಕಾರ್ಯಕ್ರಮಗಳು ಕಾರ್ಯಗತವಾಗಿ ಜನಮನ ಸೆಳೆದರೂ ಮತೀಯ ಶಕ್ತಿಗಳು ತಲೆಎತ್ತಿದವು. ೧೯೨೪ ರಿಂದ ೧೯೨೯ ರವರೆಗೆ ಹಲವಾರು ಪ್ರಾಂತ್ಯಗಳಲ್ಲಿ ಕೋಮುಗಲಭೆಗಳು ಕಾಣಿಸಿಕೊಂಡವು. ಮನನೊಂದ ಗಾಂಧಿ ಇದನ್ನು ಶಮನಗೊಳಿಸಲು **ಆಮರಣಾಂತ ಉಪವಾಸ ಸತ್ಯಾಗ್ರಹ** ಕೈಗೊಂಡರು. ಕೋಮು ಗಲಭೆಗಳು ತಾತ್ಕಾಲಿಕವಾಗಿ ಯಾದರೂ ನಿಂತವು. ಏತನ್ಮಧ್ಯೆ ರೈತ-ಕಾರ್ಮಿಕರ ಸಂಘಟನೆಗಳು ಪ್ರಾರಂಭವಾದವು. **ಮಾರ್ಕ್ಸ್‌ವಾದ**ದಿಂದ ಪ್ರಭಾವಿತರಾದ ಹಲವಾರು ಮಂದಿ ಈ ಚಳವಳಿಗಳನ್ನು ಸಂಘಟಿಸಿ ದರು. ರಾಷ್ಟ್ರೀಯ ಚಳವಳಿಯಲ್ಲೇ **ಸಮಾಜವಾದಿ ಬಣ** ಅಥವಾ **ಎಡ ಪಂಥೀಯರು** ಮತ್ತು **ರಾಷ್ಟ್ರೀಯವಾದಿಗಳು** ಅಥವಾ **ಬಲಪಂಥೀಯರೆಂಬ** ಎರಡು ಗುಂಪುಗಳು ಹುಟ್ಟಿ ಕೊಂಡು ತಾತ್ವಿಕ ಸಂಘರ್ಷ ಪ್ರಾರಂಭವಾಯಿತು. ಗಾಂಧೀಜಿ ಈ ಎರಡೂ ಬಣಗಳನ್ನು ಒಟ್ಟಿಗೇ ಕರೆದೊಯ್ಯುವ ನಿಲುವಿಗೆ ಬದ್ಧರಾಗಿದ್ದರು. ಅಂದಿನ ಸಂದರ್ಭದಲ್ಲಿ ಇದು ಅನಿವಾರ್ಯವೆಂದೂ ಅವರ ನಂಬಿಕೆಯಾಗಿತ್ತು. **ಜವಹರ್‌ಲಾಲ್ ನೆಹರು** ಮತ್ತು **ಸುಭಾಷ್‌ಬೋಸ್** ಎಡಪಂಥೀಯ ನಾಯಕರೆಂದು ಮನ್ನಣೆ ಪಡೆದು ಯುವ ಪೀಳಿಗೆಯ ನೇತಾರರಾದರು.

ಇದಕ್ಕೆ ಮುನ್ನ ೧೯೨೮ರಲ್ಲಿ ಭಾರತೀಯ ಮಂದಗಾಮಿ ರಾಷ್ಟ್ರೀಯವಾದಿಗಳನ್ನು ಸಂತೈಸಲು ಬ್ರಿಟಿಷ್ ಸರ್ಕಾರ ನೇಮಿಸಿದ್ದ **ಸೈಮನ್ ಆಯೋಗ** ಭಾರತಕ್ಕೆ ಬಂತು. ಎಲ್ಲ ಬಿಳಿಯರೇ ಇದ್ದ ಈ ಆಯೋಗ ಭಾರತದ ಸ್ವಾಭಿಮಾನಕ್ಕೆ ಮಾಡಿದ ಅಪಮಾನವೆಂದು ಪ್ರತಿಭಟಿಸಿ, ಈ ಆಯೋಗವನ್ನು ಕಾಂಗ್ರೆಸ್ ಮತ್ತು ಲೀಗ್‌ಗಳು ತಿರಸ್ಕರಿಸಿದವು. ಇನ್ನೊಂದು ಕಂತಿನ ಸಂವಿಧಾನ ಸುಧಾರಣೆ ಬಗ್ಗೆ ಭಾರತೀಯ ಹಿತಾಸಕ್ತಿಗಳೊಡನೆ ಚರ್ಚಿಸಿ ವರದಿ ಸಲ್ಲಿಸುವುದು ಈ ಆಯೋಗದ ಕೆಲಸವಾಗಿತ್ತು. ಆಯೋಗ ಭಾರತದ ಹಲವು ನಗರಗಳಿಗೆ

ಭೇಟಿಯಿತ್ತಾಗ ರಾಷ್ಟ್ರೀಯವಾದಿಗಳು **ಸೈಮನ್ ಹಿಂದಿರುಗಿ** ಎಂದು ಪ್ರತಿಭಟಿಸಿ, ಹರತಾಳ-ಬಂದ್ ಆಚರಿಸಿದರು. ಇಂಥದ್ದೊಂದು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡು ಪೊಲೀಸರ ಲಾಠಿಚಾರ್ಜಿನಲ್ಲಿ ತೀವ್ರ ಗಾಯಗೊಂಡ 'ಪಂಜಾಬ್ ಕೇಸರಿ' ಎಂದೇ ಪ್ರಸಿದ್ಧರಾಗಿದ್ದ **ಲಾಲಾ ಲಜಪತ್‌ರಾಯರು** ಹುತಾತ್ಮರಾದರು. ಸೈಮನ್ ಆಯೋಗವನ್ನು ಬಹಿಷ್ಕರಿಸಿದ ಕಾಂಗ್ರೆಸ್, **ಮೋತಿಲಾಲ್ ನೆಹರೂ** ಅವರ ನೇತೃತ್ವದಲ್ಲಿ ಸರ್ವಪಕ್ಷ ಸಮಾವೇಶ ಒಂದನ್ನು ಸಂಘಟಿಸಿತು. ಈ ಸಮಾವೇಶ ಭಾರತದ ವಿವಿಧ ಪಕ್ಷಗಳ ಹಿತಾಸಕ್ತಿಗಳಲ್ಲಿ ಸುಧಾರಣೆಗಳ ಬಗ್ಗೆ ಒಮ್ಮತ ಮೂಡಿಸಲು ಪ್ರಯತ್ನಿಸಿತು. ಬ್ರಿಟಿಷ್ ಸರ್ಕಾರ ಆಯೋಗವನ್ನು ಒಪ್ಪದ ಭಾರತೀಯರಿಗೆ, ಸರ್ವಸಮ್ಮತವಾದ ಪರ್ಯಾಯವೊಂದನ್ನು ಸೂಚಿಸಲು ಸವಾಲು ಹಾಕಿತ್ತು. ಈ ಸವಾಲನ್ನು ಒಪ್ಪಿದ ಕಾಂಗ್ರೆಸ್ ಸರ್ವಪಕ್ಷ ಸಮಾವೇಶ ಅಣಿಗೊಳಿಸಿತು. ಮೋತಿಲಾಲರ ಸಮಿತಿ ತನ್ನ ವರದಿಯಲ್ಲಿ 'ಸಂಪೂರ್ಣ ಸ್ವಾತಂತ್ರ'ಕ್ಕಾಗಿ ಒತ್ತಾಯಿಸಿತು. ಈ ಶಿಫಾರಸ್ಸನೇ **ಲಾಹೋರ್**‌ನಲ್ಲಿ ೧೯೨೯ ರಲ್ಲಿ ಜವಹರಲಾಲ್ ನೆಹರೂ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಒಪ್ಪಿತು. ಈ ಗುರಿಯ ಸಾಧನೆಗೆ ಸಮೂಹ ಚಳವಳಿಯನ್ನು ಹಮ್ಮಿಕೊಳ್ಳುವುದಾಗಿ ತೀರ್ಮಾನಿಸಿ **೨೬ ಜನವರಿ ೧೯೩೦** ರಂದು **ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆ** ಆಚರಿಸುವುದಾಗಿ ಘೋಷಿಸಿತು. ಹಾಗೆಯೇ 'ನಾಗರಿಕ ಅಸಹಕಾರ ಚಳವಳಿ'ಯನ್ನು ಸಂಘಟಿಸಲು ಗಾಂಧಿಯವರನ್ನು ಕೇಳಿಕೊಳ್ಳಲಾಯಿತು. ಆ ಚಳವಳಿಯ ಅಂಗವಾಗಿಯೇ ನಡೆದ ಅಭೂತಪೂರ್ವ ಕಾರ್ಯಕ್ರಮ **ಉಪ್ಪಿನ ಸತ್ಯಾಗ್ರಹ. ೧೨ ಮಾರ್ಚ್** ೧೯೩೦ ಭಾರತದ ಸ್ವಾತಂತ್ರ ಸಂಗ್ರಾಮದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಗಾಂಧೀಜಿ ಆಯ್ದ ೭೮ ಜನ ಸತ್ಯಾಗ್ರಹಿಗಳೊಡನೆ **ಸಬರಮತಿ ಆಶ್ರಮದಿಂದ** ಹೊರಟು ೩೮೫ ಕಿಲೊಮೀಟರ್ ದೂರದ ಸಮುದ್ರತೀರದ **ದಂಡಿಗೆ** ಕಾಲ್ನಡಿಗೆಯಲ್ಲಿ ಹೊರಟರು. ಸರ್ಕಾರಿ ನಿಯಂತ್ರಣದ ಉಪ್ಪನ್ನು ಸಾಂಕೇತಿಕವಾಗಿ ತಯಾರಿಸುವ ಮೂಲಕ ಪ್ರಭುತ್ವವನ್ನು ಧಿಕ್ಕರಿಸಿದರು. ದೇಶಾದ್ಯಂತ ಪ್ರತಿಧ್ವನಿಸಿದ ಈ ಘಟನೆ ಸಾವಿರಾರು ಸತ್ಯಾಗ್ರಹಿಗಳ ಬಂಧನಕ್ಕೆ ಕಾರಣವಾಯಿತು.

ಬ್ರಿಟಿಷ್ ಸರ್ಕಾರ ಲಂಡನ್ನಿನಲ್ಲಿ ೧೯೩೦ ರಲ್ಲಿ ತಾನೇ ಆಯ್ದ ಭಾರತೀಯ ಪ್ರತಿನಿಧಿಗಳನ್ನೂ ಸೇರಿಸಿ **ಚಕ್ರಗೋಷ್ಠಿ** (ದುಂಡುಮೇಜಿನ ಸಮ್ಮೇಳನ) ಪ್ರಾರಂಭಿಸಿತು. ಈ ಚಕ್ರಗೋಷ್ಠಿಗಳು ಸಂವಿಧಾನ ಸುಧಾರಣೆಗಳ ಬಗ್ಗೆ ಭಾರತೀಯರ ಅಭಿಪ್ರಾಯ ತಿಳಿಯಲೆಂದು ಹೇಳಲಾಯಿತು. ಕಾಂಗ್ರೆಸ್ ಬ್ರಿಟಿಷ್ ಸರ್ಕಾರವು ಕನಿಷ್ಟ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒಪ್ಪಿಗೆ ಮತ್ತು ಸಂಪೂರ್ಣ ಸ್ವಾತಂತ್ರ ಕುರಿತು ಚರ್ಚಿಸಲು ಚಕ್ರಗೋಷ್ಠಿಯಲ್ಲಿ ಅವಕಾಶ, ಈ ಎರಡು ಷರತ್ತುಗಳನ್ನು ಒಪ್ಪುವುದಾದರೆ, ಅಲ್ಲಿ ಭಾಗವಹಿಸುವ ತನ್ನ ಇಂಗಿತ ವ್ಯಕ್ತಪಡಿಸಿತು. ಆದರೆ ಸರ್ಕಾರ ಒಪ್ಪದ ಕಾರಣ ಬಹಿಷ್ಕಾರ ಮತ್ತು ಚಳವಳಿಗಳನ್ನು ಮುಂದುವರಿಸಿತು. ಈ ಮಧ್ಯೆ **ಗಾಂಧಿ-ಇರ್ವಿನ್ ಒಪ್ಪಂದ**ವೇರ್ಪಟ್ಟಿತು. ಬಂಧನದಲ್ಲಿದ್ದ ಬಹುತೇಕ ಎಲ್ಲ ಸತ್ಯಾಗ್ರಹಿಗಳನ್ನು ಬಿಡುಗಡೆಗೊಳಿಸಲಾಯಿತು. ಹಾಗೆಯೇ ಇನ್ನೂ ಕೆಲವು

ಬೇಡಿಕೆಗಳನ್ನು ಈಡೇರಿಸಲಾಯಿತು. ಅನಂತರ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಗಾಂಧೀಜಿ ಎರಡನೇ ಚಕ್ರಗೋಷ್ಠಿಗೆ ಹೋದರು. ಆದರೆ ಅವರಿಗೆ ಸಮಾಧಾನವಾಗಲಿಲ್ಲ. ಬ್ರಿಟಿಷರ ಒಡೆದು ಆಳುವ ನೀತಿ ಮುಂದುವರೆದಿತ್ತು. ಇದೇ ಸಂದರ್ಭದಲ್ಲಿ ಅಂಬೇಡ್ಕರರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಗಟ್ಟೆಗಳು ಬೇಕೆಂದು ಚಕ್ರಗೋಷ್ಠಿಯಲ್ಲಿ ಒತ್ತಾಯಿಸಿದ್ದರು. ಈ ಬಗ್ಗೆ ಒಮ್ಮತ ಮೂಡದ ಕಾರಣ, ಚಕ್ರಗೋಷ್ಠಿಯ ಅಧ್ಯಕ್ಷರಾಗಿದ್ದ ಬ್ರಿಟಿಷ್ ಪ್ರಧಾನಿ ರಾಮ್‌ಸೆ ಮ್ಯಾಕ್ ಡೊನಾಲ್ಡರನ್ನು ಈ ಬಗ್ಗೆ ತೀರ್ಪು ಕೊಡಲು ಕೇಳಿಕೊಳ್ಳಲಾಯಿತು.

ಭಾರತಕ್ಕೆ ಮರಳಿದ ಗಾಂಧಿ ಚಳವಳಿಯನ್ನು ಮುಂದುವರಿಸಿದರು. ಸರ್ಕಾರ ಅವರನ್ನು ಬಂಧಿಸಿ ಜೈಲಿಗೆ ಹಾಕಿತು. ಈ ಮಧ್ಯೆ ಅಸ್ಪೃಶ್ಯರಿಗೆ ಪ್ರತ್ಯೇಕ ಮತಗಟ್ಟೆಗಳನ್ನು ಘೋಷಿಸಲಾಯಿತು. ಈ ಬಗ್ಗೆ ಚಕ್ರಗೋಷ್ಠಿಯಲ್ಲೇ ತಮ್ಮ ವಿರೋಧ ವ್ಯಕ್ತಪಡಿಸಿದ್ದ ಗಾಂಧಿ, ಅಲ್ಲಿ ಹೇಳಿದಂತೆ ಪ್ರತಿಭಟಿಸಿ ಜೈಲಿನಲ್ಲೇ ಆಮರಣಾಂತ ಉಪವಾಸವನ್ನು ಕೈಗೊಂಡರು. ಈ ಬಗ್ಗೆ ಅಂಬೇಡ್ಕರ್‌ರೊಂದಿಗೆ ಮಾತುಕತೆ ನಡೆದು ಪೂನಾ ಒಪ್ಪಂದವಾಯಿತು. ಅಸ್ಪೃಶ್ಯರ ಸಮಸ್ಯೆಯ ಬಗ್ಗೆ, ಅಂಬೇಡ್ಕರ್‌ರ ನೋವು ಮತ್ತು ಅದರ ಹಿಂದಿನ ಕಾರಣಗಳನ್ನು ಗಂಭೀರವಾಗಿ ಪರಿಗಣಿಸಿದ ಗಾಂಧಿ ಅಸ್ಪೃಶ್ಯತಾ ನಿವಾರಣೆಗಾಗಿ ಭಾರತದಾತ್ಯಂತ ಹರಿಜನ ಪ್ರವಾಸ ಕೈಗೊಂಡು ಮೇಲ್ಜಾತಿಯವರಲ್ಲಿ ಅಸ್ಪೃಶ್ಯತೆ ಬಗ್ಗೆ ಹೃದಯ ಪರಿವರ್ತನೆಗಾಗಿ ದುಡಿದರು. ಎರಡು ವರ್ಷಗಳ ಈ ಕಾರ್ಯಕ್ರಮ ಮುಂದುವರೆಯಿತು. ಅಸ್ಪೃಶ್ಯರಿಗೆ ದೇವಸ್ಥಾನಗಳ ಪ್ರವೇಶ, ಸಹ ಪಂಕ್ತಿ ಭೋಜನ ಮುಂತಾದವು ಈ ಕಾರ್ಯಕ್ರಮದ ಭಾಗವಾಗಿದ್ದವು.

ಚಕ್ರಗೋಷ್ಠಿಯ ಚರ್ಚೆ, ಸೈಮನ್ ಆಯೋಗದ ವರದಿಯನ್ನು ಆಧರಿಸಿ ೧೯೩೫ ರ 'ಸರ್ಕಾರಿ ಕಾಯ್ದೆ' ಘೋಷಿಸಲಾಯಿತು. ಈ ಕಾಯ್ದೆಯು ಅಲ್ಪಸ್ವಲ್ಪ ಅಧಿಕಾರವನ್ನು ಭಾರತೀಯರಿಗೆ ಕೊಟ್ಟಿತು. ಪ್ರಾಂತ್ಯಗಳಲ್ಲಿ ಸರ್ಕಾರ ಸ್ವಾಯತ್ತವಾಗಿರುವಂತಿದ್ದರೂ, ಪ್ರಾಂತ್ಯದ ಗವರ್ನರ್‌ಗೆ ಶಾಸಕಾಂಗದ ನಿರ್ಣಯಗಳನ್ನು ತಳ್ಳಿಹಾಕುವ ಅಧಿಕಾರ ಕೊಡಲಾಗಿತ್ತು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಗಾಂಧಿ ನೇತೃತ್ವದ ರಾಷ್ಟ್ರೀಯ ಚಳವಳಿಗೆ ಈ ಸುಧಾರಣೆಗಳ ಬಗ್ಗೆ ಅಂಥ ಉತ್ಸಾಹವೇನೂ ಇರಲಿಲ್ಲ. ಆದರೂ ೧೯೩೭ ರಲ್ಲಿ ನಡೆದ ಪ್ರಾಂತ ಮತ್ತು ಕೇಂದ್ರ ಶಾಸನಸಭಾ ಚುನಾವಣೆಗಳಲ್ಲಿ ಪಾಲ್ಗೊಂಡು ಬಹುತೇಕ ಯಶಸ್ಸು ಗಳಿಸಿತು. ಏಳು ಪ್ರಾಂತ್ಯಗಳಲ್ಲಿ ಸರ್ಕಾರವನ್ನು ರಚಿಸಿತು. ಒಂದಷ್ಟು ಒಳ್ಳೆಯ ಕೆಲಸ ಮಾಡಿತು. ಆದರೆ ೧೯೩೯ ರಲ್ಲಿ ಎರಡನೆ ಮಹಾಯುದ್ಧ ಪ್ರಾರಂಭವಾಯಿತು. ಭಾರತೀಯರನ್ನು ಹೇಳದೆ ಕೇಳದೆ ಭಾರತವೂ ಯುದ್ಧದಲ್ಲಿ ಭಾಗಿಯಾಗುತ್ತದೆ ಎನ್ನುವ ತೀರ್ಮಾನವನ್ನು ಬ್ರಿಟಿಷ್ ಸರ್ಕಾರ ತೆಗೆದುಕೊಂಡಿತು. ಇದನ್ನು ಪ್ರತಿಭಟಿಸಿ ಪ್ರಾಂತೀಯ ಸರ್ಕಾರಗಳು ರಾಜೀನಾಮೆಯಿತ್ತವು. ಕಾಂಗ್ರೆಸಿನಲ್ಲಿ ಸಮಾಜವಾದಿ ಎಡಪಂಥೀಯರಿಗೂ-ಬಲಪಂಥೀಯರೆನಿಸಿಕೊಂಡ ಇತರರಿಗೂ ತಾತ್ವಿಕ ಸಂಘರ್ಷ ಮುಂದುವರೆಯಿತು. ಈ

ನಡುವೆ ಎಡಪಂಥ ಬೆಂಬಲಿತ ಅಭ್ಯರ್ಥಿ **ಸುಭಾಷ್ ಚಂದ್ರಬೋಸ**ರು, ಗಾಂಧೀಜಿ ಬೆಂಬಲಿತ ಅಭ್ಯರ್ಥಿಯನ್ನು ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಗಳಲ್ಲಿ ಪರಾಭವಗೊಳಿಸಿದರು. ಆದರೆ ಕಾಂಗ್ರೆಸ್ ಇಬ್ಭಾಗವಾಗುವುದನ್ನು ಇಚ್ಛಿಸದೆ ರಾಜೀನಾಮೆಯಿತ್ತರು.

ಮಹಾಯುದ್ಧವನ್ನು ವಸಾಹತು ಪಟ್ಟಭದ್ರ ಹಿತಾಸಕ್ತಿಗಳ ನಡುವಿನ ಯುದ್ಧವೆಂದು ಬಣ್ಣಿಸಿ ಭಾರತೀಯರು ಯುದ್ಧ ವಿರೋಧಿ ನಿಲುವು ತಳೆದರು. ಭಾರತೀಯರು ಯುದ್ಧದಲ್ಲಿ ಭಾಗಿಯಾಗಬೇಕಾದರೆ ಸ್ವಾತಂತ್ರ್ಯ ಪಡೆದ ನಂತರವೇ ಎಂದು ಪಟ್ಟು ಹಿಡಿದರು. ಬ್ರಿಟಿಷ್ ಸರ್ಕಾರ ಪೇಚಿಗೆ ಸಿಲುಕಿ ಸರ್ **ಸ್ಟ್ಯಾಫೋರ್ಡ್‌ಕ್ರಿಪ್ಸ್**‌ರನ್ನು ಸಂಧಾನಕ್ಕಾಗಿ ಕಳಿಸಿತು. ಆದರೆ ಸ್ವಾತಂತ್ರ ಘೋಷಿಸಲು ಒಪ್ಪದ ಕಾರಣ ಕಾಂಗ್ರೆಸ್ ೧೯೪೨ ರಲ್ಲಿ ಬ್ರಟಿಷ್ ಸರ್ಕಾರಕ್ಕೆ **ಭಾರತ ಬಿಟ್ಟು ತೊಲಗಿ** ಎಂದು ನಿರ್ಣಯ ಮಾಡಿತು. ಹಾಗೆಯೇ ಭಾರತೀಯರಿಗೆ **ಮಾಡಿರಿ ಇಲ್ಲವೆ ಮಡಿಯಿರಿ** ಎಂಬ ಕರೆಕೊಟ್ಟಿತು. ಕೂಡಲೇ ಸರ್ಕಾರ ಕಾಂಗ್ರೆಸ್ಸನು ನಿಷೇಧಿಸಿ ಎಲ್ಲ ಮುಂಚೂಣಿ ನಾಯಕರನ್ನು ಬಂಧಿಸಿ ಜೈಲಿಗೆ ಹಾಕಿತು. 'ಭಾರತ ಬಿಟ್ಟು ತೊಲಗಿ ಚಳವಳಿ' ಗಾಂಧೀಜಿಯವರ ಕರೆಯ ಮೇರೆಗೆ ಅಭೂತಪೂರ್ವ ಜನ ಬೆಂಬಲ ಗಳಿಸಿಕೊಂಡಿತು. ಜನರು ಸರ್ಕಾರಿ ಕಾನೂನನ್ನು ಉಲ್ಲಂಘಿಸಿ ಚಳವಳಿ ಹೂಡಿದರು. ರೈಲು ನಿಲ್ದಾಣ, ಅಂಚೆ ಕಛೇರಿ, ಸರ್ಕಾರಿ ಕಛೇರಿಗಳು ಜನರ ಆಕ್ರೋಶಕ್ಕೆ ತುತ್ತಾದವು. ಈ ಸಂದರ್ಭದಲ್ಲಿ ನಡೆದ ಭೂಗತ ಚಳವಳಿ ಸರ್ಕಾರದ ಧೈರ್ಯವನ್ನು ಉಡುಗಿಸಿತು. ಇಡೀ ಭಾರತವೆ ಒಂದು ಬಹಿರಂಗ ಕಾರಾಗೃಹವಾಯಿತು. ಭಾರತದಿಂದ ಮಾರುವೇಷದಲ್ಲಿ ಹೊರಗೆ ನುಸುಳಿದ **ಸುಭಾಷ ಚಂದ್ರಬೋಸ್**, ಜರ್ಮನಿ, ಜಪಾನ್‌ಗಳ ನೆರವಿನೊಂದಿಗೆ **ರಾಷ್ಟ್ರೀಯ ಸೈನ್ಯ** ಕಟ್ಟಿ ಬ್ರಿಟಿಷರ ಮೇಲೆ ದಾಳಿಮಾಡಿದರು. ಈ ಸೈನ್ಯದ ಮಹಿಳಾ ಘಟಕಕ್ಕೆ **ಕ್ಯಾಪ್ಟನ್ ಲಕ್ಷ್ಮಿ** ಮುಖ್ಯಸ್ಥರಾಗಿದ್ದರು. ಆರಂಭದಲ್ಲಿ ಯಶಸ್ಸು ಕಂಡ ಸುಭಾಷರ ಸೈನ್ಯ, ಜಪಾನ್ ೧೯೪೫ ರಲ್ಲಿ ಮಿತ್ರಪಕ್ಷಗಳಿಗೆ ಶರಣಾದೊಡನೆ ಹಿಮ್ಮೆಟ್ಟಬೇಕಾಯಿತು. ಹೀಗೆ ರಾಷ್ಟ್ರೀಯ ಸೈನ್ಯ ತನ್ನ ಧೀರೋದಾತ್ತ ಕೊಡುಗೆ ನೀಡಿ ಬ್ರಿಟಿಷ್ ಸರ್ಕಾರವನ್ನು ನಡುಗಿಸಿ ಆ ಮೂಲಕ ಅವರ ಸ್ಥೈರ್ಯ ಕುಗ್ಗಿಸಿತು.

ರಾಷ್ಟ್ರೀಯ ಚಳವಳಿ ಎಷ್ಟು ಜನ ಬೆಂಬಲ ಗಳಿಸಿಕೊಂಡಿತೆಂದರೆ, ಬ್ರಿಟಿಷ್ ಸರ್ಕಾರದ ಆಜ್ಞೆಗಳನ್ನು ಪಾಲಿಸಲು ಸೈನ್ಯ, ಪೊಲೀಸ್ ಪಡೆಗಳೆ ನಿರಾಕರಿಸತೊಡಗಿದವು. ಸರ್ಕಾರದ ಹಿಡಿತ ಪೂರ್ಣ ಸಡಿಸಲಾಯಿತು. ಇಂಥ ಸಂದರ್ಭದಲ್ಲಿ ಭಾರತದಲ್ಲಿ ಸರ್ಕಾರ ನಡೆಸುವುದು ಬ್ರಿಟನ್ನಿಗೆ ಅಸಾಧ್ಯವೆಂಬ ತೀರ್ಮಾನಕ್ಕೆ ಬಂದಿತು.

ಈ ನಡುವೆ ೧೯೪೦ ರ **ಲಾಹೋರ್ ಅಧಿವೇಶನ**ದಲ್ಲಿ ಮುಸ್ಲಿಂ ಲೀಗ್ ದ್ವಿರಾಷ್ಟ್ರ ಸಿದ್ಧಾಂತವನ್ನು ಮಂಡಿಸಿತು. ಮುಸ್ಲಿಮರು ಭಾರತದಲ್ಲಿ ಹಿಂದೂ ಬಹುಸಂಖ್ಯಾತರೊಂದಿಗೆ ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಭಾರತ ಇಬ್ಭಾಗವಾಗಿ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರವಾಗಬೇಕೆಂದು ಪಟ್ಟು ಹಿಡಿಯಲಾಯಿತು. **ಮಹಮ್ಮದಲಿ ಜಿನ್ನಾ** ಲೀಗ್‌ನ ನೇತಾರರು.

ಭಾರತ, ತಾನಿದ್ದ ರೀತಿಯಲ್ಲೇ ಸ್ವಾತಂತ್ರ ಪಡೆಯಲು ಸಾಧ್ಯವಾಗದಂಥ ಸ್ಥಿತಿಯನ್ನು ಕೋಮುವಾದಿಗಳು ಸೃಷ್ಟಿಸಿದರು. ಹಿಂದೂ-ಮುಸ್ಲಿಂ ಗಲಭೆಗಳು ತಾರಕಕ್ಕೇರಿದವು. ಕಾಂಗ್ರೆಸ್ ಬ್ರಿಟಿಷರನ್ನು 'ಭಾರತ ಬಿಟ್ಟು ತೊಲಗಿ' ಎಂದು ಒತ್ತಾಯಿಸಿದರೆ, ಮುಸ್ಲಿಂ ಲೀಗ್ ವಿಭಜಿಸಿ ತೊಲಗಿ ಎಂದು ಒತ್ತಾಯಿಸಲಾರಂಭಿಸಿತು. ಕೋಮುದಳ್ಳುರಿ ಬಹುತೇಕ ಉತ್ತರ ಭಾರತವನ್ನು ವ್ಯಾಪಿಸಿತು. ಸಾವಿರಾರು ಜನ ಈ ಉರಿಗೆ ಸಿಕ್ಕಿ ಬೆಂದರು. ಮೊದಲಿನಿಂದಲೂ 'ಒಡೆದು ಆಳುವ ನೀತಿ'ಯನ್ನೇ ಅನುಸರಿಸುತ್ತಾ ಬಂದ ಬ್ರಿಟಿಷ್ ಸರ್ಕಾರ, ಮತೀಯ ಭಾವನೆಗಳನ್ನು ಕೆರಳಿಸಿತ್ತು. ಸ್ವಾರ್ಥಿ ಮುಸ್ಲಿಮರು ಮತ್ತು ಸ್ವಾರ್ಥಿ ಹಿಂದೂಗಳು ಈ ನೀತಿಗೆ ದಾಳಗಳಾದರು, ಈ ಸಂದರ್ಭದಲ್ಲಿ ಅಮಾಯಕ ಹಿಂದೂ-ಮುಸ್ಲಿಮರು ಪಟ್ಟ ಯಾತನೆಯನ್ನು ವರ್ಣಿಸಲು ಅಸಾಧ್ಯ. ದೇಶದ ಬಹುತೇಕ ಪ್ರಾಂತ್ಯಗಳ ಕೋಮು ವೈಷಮ್ಯಕ್ಕೆ-ಸನ್ನಿಗೆ ಒಳಗಾದವು. ಗಾಂಧಿ ಮತ್ತೆ ಉಪವಾಸ ಸತ್ಯಾಗ್ರಹ ಕೈಗೊಂಡರು. ಕೋಮುಗಲಭೆಗಳು ಸ್ವಲ್ಪ ಹತೋಟಿಗೆ ಬಂದವಾದರೂ, ಭಾರತದ ವಿಭಜನೆ ತಪ್ಪಲಿಲ್ಲ. ಹೀಗಾಗಿ ಭಾರತ ಎರಡಾಗಿ ಭಾರತ-ಪಾಕಿಸ್ತಾನವಾಗಿ ೧೯೪೭ ಆಗಸ್ಟ್ ೧೫ ರಂದು ಅಸ್ತಿತ್ವಕ್ಕೆ ಬಂದವು.

೪.೭ ವ್ಯಕ್ತಿ ಚಿತ್ರಣ ಹಾಗೂ ಅವರ ಕೊಡುಗೆಗಳು

ಬಿ.ಆರ್. ಅಂಬೇಡ್ಕರ್ (೧೮೯೧-೧೯೫೬)

ಬಿ.ಆರ್. ಅಂಬೇಡ್ಕರ್ ಆಧುನಿಕ ಭಾರತ ಕಂಡ ಮಹಾನ್ ಚೇತನ. ೧೪ ಏಪ್ರಿಲ್ ೧೮೯೧ ರಲ್ಲಿ ಮಹಾರಾಷ್ಟ್ರದ 'ಮಹರ್' ಎಂಬ 'ಅಸ್ಪೃಶ್ಯ' ಜಾತಿಯಲ್ಲಿ ರಾಮ್‌ಜಿ ಸಕ್ಪಾಲರ ಹದಿನಾಲ್ಕನೇ ಮಗುವಾಗಿ ಜನಿಸಿದ **ಭೀಮರಾವ್ ರಾಮ್‌ಜಿ ಅಂಬೇಡ್ಕರ್** ಕಷ್ಟ-ಕೋಟಲೆಗಳ ನಡುವೆ ತಮ್ಮ ಬಾಲ್ಯ ಕಳೆದರು. ತಾಂಡವವಾಡುತ್ತಿದ್ದ ಅಸ್ಪೃಶ್ಯತೆ, ಸಮಾಜ-ಸಹಪಾಠಿಗಳ ಮೂದಲಿಕೆ, ಅವಹೇಳನಗಳ ನಡುವೆ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಅಂಬೇಡ್ಕರ್‌ಗೆ ನೆರವಾದವರು **ಕೊಲ್ಹಾಪುರ-ಬರೋಡ** ಸಂಸ್ಥಾನಗಳ ಮಹಾರಾಜರು. ದೇಶ-ವಿದೇಶಗಳಲ್ಲಿ ಓದಬಹುದಾದದದ್ದು ಜರ್ಮನಿ, **ಅಮೆರಿಕಾ-ಇಂಗ್ಲೆಂಡ್**‌ಗಳ ಶ್ರೇಷ್ಠ ವಿಶ್ವ ವಿದ್ಯಾನಿಲಯಗಳಲ್ಲಿ ಓದಿ ಪದವಿಗಳನ್ನು ಪಡೆದ ಅಂಬೇಡ್ಕರ್ ತನ್ನ ಜನತೆಯ ನಡುವೆ ಇರಲು ಮರಳಿದರು. ಅಸ್ಪೃಶ್ಯತೆಯನ್ನೇ ಸೂರಾಗಿ, ಬಡತನ-ಅವಮಾನಗಳನ್ನೇ ಆಹಾರವಾಗಿಸಿ ಕೊಂಡಿದ್ದ ಶೋಷಿತ ಸಮುದಾಯದ ಏಳ್ಗೆಯನ್ನೇ ತನ್ನ ಜೀವನದ ಗುರಿಯಾಗಿ ಅವರು ಆರಿಸಿಕೊಂಡರು.

೧೯ನೆಯ ಶತಮಾನದಲ್ಲಿ ಉದಾರವಾದಿ ಸಮಾಜ ಸುಧಾರಣೆಗಳು ಪ್ರಾರಂಭವಾಗಿದ್ದರೂ, ಅವು ಕೆಳವರ್ಗಗಳನ್ನು ಒಳಗೊಳ್ಳದಾದವು. **ಜೋತಿರಾವ್ ಫುಲೆ**ಯಂಥ ಒಬ್ಬಿಬ್ಬರು ಅಸ್ಪೃಶ್ಯರಿಗಾಗಿ ಒಂದಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದರು. ನಿಜ. ಆದರೆ ಫುಲೆಯ ನಂತರ ಆ ಚಳವಳಿ ಮೇಲ್ಜಾತಿ ಶೂದ್ರರ ರಾಜಕೀಯಕ್ಕೆ ಬಳಕೆಯಾಯಿತು. ೧೯೦೬ ರಲ್ಲಿ **ಅಖಿಲ ಭಾರತ ಡಿಪ್ರೆಸ್ಡ್ ಕ್ಲಾಸಸ್ ಮಿಷನ್ ಸೊಸೈಟಿ** ಎಂಬ ಸಂಸ್ಥೆಯೂ ಸ್ಥಾಪನೆಯಾಗಿತ್ತು. ಆದರೂ ಅಸ್ಪೃಶ್ಯತಾ ಸಮಸ್ಯೆ ಅಲುಗಾಡಿರಲಿಲ್ಲ. ಕಾಂಗ್ರೆಸ್ಸು, ರಾಷ್ಟ್ರೀಯ ಚಳವಳಿಗಳೂ ಅಸ್ಪೃಶ್ಯತಾ ಸಮಸ್ಯೆ ಬಗ್ಗೆ ಗಂಭೀರ ಚಿಂತನೆ ನಡೆಸಿರಲಿಲ್ಲ. ಇಂಥ ಸನ್ನಿವೇಶದಲ್ಲಿ ಅಂಬೇಡ್ಕರ್ ವಿದೇಶದಿಂದ ಹಿಂದಿರುಗಿದರು. ಅಸ್ಪೃಶ್ಯರ ಸಮಸ್ಯೆಗೆ ಸ್ಪಂದಿಸದ ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಚಳವಳಿಯಿಂದ ಅಂಬೇಡ್ಕರ್ ದೂರ ಉಳಿದರು. ಭಾರತ ಕ್ರಮೇಣ ರಾಜಕೀಯವಾಗಿ ಮುಂದುವರಿಯುತ್ತಿದ್ದುದನ್ನು, ಅಸ್ಪೃಶ್ಯರ ಸ್ಥಿತಿ ಮಲೆತ ನೀರಿನಂತೆ ಒಂದೇ ರೀತಿಯಿದ್ದುದನ್ನು ಅಂಬೇಡ್ಕರ್ ಗಮನಿಸಿದ್ದರು. ತಮ್ಮದೇ ಆದ ಕಹಿ ಅನುಭವಗಳೂ, ತನ್ನ ಜನರ ಶೋಚನೀಯ ಸ್ಥಿತಿಯೂ ಸೇರಿ ಅವರ ಸಹನೆ ಕಟ್ಟೆಯೊಡೆದಾಗ ಅವರು ಬಂಡೆದ್ದರು. ರಾಜಕೀಯ ಮಹತ್ವಾಕಾಂಕ್ಷಿಗಳ ತವರೂರಾಗಿದ್ದ ಕಾಂಗ್ರೆಸ್ಸನ್ನು ತರಾಟೆಗೆ ತೆಗೆದುಕೊಂಡರು, 'ಅಸ್ಪೃಶ್ಯರ ಏಳ್ಗೆಯಾಗದೆ ನಿಮ್ಮ ಸ್ವರಾಜ್ಯ ಕೇವಲ ಕನಸಿನ ಗಂಟು' ಎಂದು ಅವರನ್ನು ಮೂದಲಿಸಿದರು.

'ಸ್ವರಾಜ್ಯ ಒಬ್ಬ ಬ್ರಾಹ್ಮಣನ ಜನ್ಮಸಿದ್ಧ ಹಕ್ಕು ಹೇಗೋ ಅದು ಮಹರನ ಹಕ್ಕೂ ಹೌದು ಸ್ವರಾಜ್ಯವೆಂದರೆ ಅದು ಕೇವಲ ರಾಜಕೀಯವಾದುದಲ್ಲ. ಅದು ಆರ್ಥಿಕ- ಸಾಮಾಜಿಕ-

ಧಾರ್ಮಿಕ ಸ್ವರಾಜ್ಯವೂ ಆಗಬೇಕು. ಆಗ ಮಾತ್ರ ನಿಜವಾದ ಅರ್ಥದಲ್ಲಿ ಸ್ವಾತಂತ್ರ ಎಲ್ಲರದಾಗುತ್ತದೆ. ಬರಿ ರಾಜಕೀಯ ಸ್ವಾತಂತ್ರ್ಯ ಕೇವಲ ಮೇಲ್ವರ್ಗದ ಪಟ್ಟಭದ್ರ ಶೋಷಕರದಾಗುತ್ತದೆ'. ಸ್ವರಾಜ್ಯ-ಸ್ವಾತಂತ್ರ್ಯಗಳನ್ನು ಸಮಗ್ರವಾಗಿ ಅರ್ಥೈಸುವ ಅಗತ್ಯವನ್ನು ಅಂಬೇಡ್ಕರ್ ಒತ್ತಿ ಹೇಳಿದರು. ೧೯೨೪ ರಲ್ಲಿ ದಲಿತ (ಅಸ್ಪೃಶ್ಯ ಎನ್ನುವ ಅರ್ಥದಲ್ಲಿ) ಸಂಘಟನೆಯೊಂದನ್ನು ಸ್ಥಾಪಿಸಿದರು. ಅದೇ **ಬಹಿಷ್ಕೃತ ಹಿತಕಾರಿಣಿ ಸಭಾ**. ಅದರ ಮುಖವಾಣಿಯಾಗಿ **ಬಹಿಷ್ಕೃತ ಭಾರತ**ವೆಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಸಾಂಪ್ರದಾಯಿಕ ಹಿಂದೂ ಧರ್ಮ ಮತ್ತು ಶಾಸ್ತ್ರಗಳನ್ನು ಕಟುಟೀಕೆಗೆ ಗುರಿಮಾಡಿದರು. ಅಸ್ಪೃಶ್ಯರೂ ಹಿಂದೂಗಳೇ ಎಂದಾದಲ್ಲಿ ಸವರ್ಣೀಯರಿಗಿರುವ ಎಲ್ಲ ನಾಗರಿಕ ಹಕ್ಕುಗಳೂ ದೊರೆಯ ಬೇಕೆಂದು ಆ ಹಕ್ಕುಗಳನ್ನು ಗಳಿಸಿಕೊಳ್ಳಲು ಚಳವಳಿಯನ್ನು ಪ್ರಾರಂಭಿಸಿದರು. ೧೯೨೪ ರಲ್ಲಿ ಸರ್ಕಾರ ಅವರನ್ನು ಬಾಂಬೆ ಶಾಸನಸಭೆಯ ಸದಸ್ಯರನ್ನಾಗಿಸಿತು. ಅದನ್ನು ದಲಿತೋದ್ಧಾರಕ್ಕಾಗಿ ಬಳಸಿಕೊಂಡರು.

ಸವರ್ಣೀಯರ ಖಾಸಗಿ ಆಸ್ತಿಯಂತೆ ಬಳಕೆಯಾಗುತ್ತಿದ್ದ ಸಾರ್ವಜನಿಕ ಉಪಯೋಗ ಕ್ಕೆಂದೇ ನಿರ್ಮಿಸಲಾಗಿದ್ದ ಕೆರೆ, ಕಟ್ಟೆ, ಬಾವಿ ಮತ್ತು ದೇವಸ್ಥಾನಗಳಲ್ಲಿ ದಲಿತರಿಗೆ ತಡೆಯಿರ ಬಾರದೆಂದು ಪ್ರತಿಪಾದಿಸಿದರು. ಆ ಹಕ್ಕುಗಳನ್ನು ಚಲಾಯಿಸಲು ಎರಡು ಸತ್ಯಾಗ್ರಹಗಳನ್ನು ಸಂಘಟಿಸಿದರು. ೧೯೨೭ ರಲ್ಲಿ ದಲಿತರ ಕುಡಿಯುವ ನೀರಿನ ಹಕ್ಕಿನ ಪ್ರತಿಪಾದನೆಗಾಗಿ **ಮಹದ್** ಪಟ್ಟಣದಲ್ಲಿ ಸಾವಿರಾರು ದಲಿತರನ್ನು ಸಂಘಟಿಸಿ ಅಲ್ಲಿಯ ಕೆರೆಯ ನೀರನ್ನು ಸಾಂಕೇತಿಕವಾಗಿ ಮುಟ್ಟಿ, ಕುಡಿದು ಸತ್ಯಾಗ್ರಹ ನಡೆಸಿದರು. ಆದರೆ ಸವರ್ಣೀಯರು ದಲಿತರ ಮೇಲೆ ಹಲ್ಲೆ ನಡೆಸಿದರು. ಈ ವಿಚಾರ ಕೋರ್ಟಿನಲ್ಲಿ ದಲಿತರ ಪರ ಇತ್ಯರ್ಥವಾಯಿತು. ಹಾಗೆಯೇ ೧೯೨೯ ರಲ್ಲಿ ನಾಸಿಕ್‌ದ **ಕಲಾರಾಮ ದೇವಾಲಯ ಸತ್ಯಾಗ್ರಹ**ವನ್ನು ಹಮ್ಮಿಕೊಂಡರು.

೧೯೩೦ ರಲ್ಲಿ ಲಂಡನ್ನಿನಲ್ಲಿ ನಡೆದ ಚಕ್ರಗೋಷ್ಠಿಗೆ ದಲಿತ ಪ್ರತಿನಿಧಿಯಾಗಿ ಹೋದ ಅಂಬೇಡ್ಕರ್, **ಪ್ರತ್ಯೇಕ ಮತಗಟ್ಟೆ**ಗಳನ್ನು ಕೇಳಿದರು. ಈ ಸಂಬಂಧ ಗಾಂಧೀಜಿ ಜೊತೆಗೆ ಒಂದು ತಾತ್ವಿಕ ಸಂಘರ್ಷವೂ ನಡೆಯಿತು. ಈ ಸಂಘರ್ಷ ಗಾಂಧೀಜಿಯನ್ನು ಅಸ್ಪೃಶ್ಯತಾ ನಿವಾರಣೆಗೆ ಹೆಚ್ಚು ಗಂಭೀರ ಪ್ರಯತ್ನ ಮಾಡುವಂತೆ ಪ್ರೇರೇಪಿಸಿತು. ಬ್ರಿಟಿಷ್ ಸರ್ಕಾರ ಪ್ರತ್ಯೇಕ ಮತಗಟ್ಟೆಗಳನ್ನು ಕೊಟ್ಟಾಗ, ಅದು ಹಿಂದೂ ಸಮಾಜದ ಮೇಲೆ ಮತ್ತು ವಿಶೇಷವಾಗಿ ದಲಿತರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆಂದು ನಂಬಿದ್ದ ಗಾಂಧಿ ಅದನ್ನು ವಿರೋಧಿಸಿ ಉಪವಾಸ ಆರಂಭಿಸಿದರು. ಮಾತುಕತೆಗಳು ನಡೆದು ಒಡಂಬಡಿಕೆ ಏರ್ಪಟ್ಟಿತು. ಅದನ್ನೇ **ಪೂನಾ ಒಪ್ಪಂದ**ವೆಂದು ಕರೆಯಲಾಗಿದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ನಡೆದುಕೊಂಡ ರೀತಿ ಅನನ್ಯವಾದುದು. ಪೂನಾ ಒಪ್ಪಂದ ದಲಿತರಿಗೆ ರಾಜಕೀಯ ಮೀಸಲಾತಿಯನ್ನು ಗಳಿಸಿಕೊಟ್ಟಿತು. ಹಾಗೆಯೇ ಇನ್ನಿತರ ಕೆಲವು ಶೈಕ್ಷಣಿಕ ಸವಲತ್ತುಗಳೂ ನಂತರ ದೊರೆತವು.

ಅನಂತರ ಅಂಬೇಡ್ಕರ್ ಎಲ್ಲ ಶೋಷಿತರ ಸಂಘಟನೆಯತ್ತ ವಾಲಿದರು. ೧೯೩೬ ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪಿಸಿ ರೈತ-ಕಾರ್ಮಿಕರನ್ನು ಸಂಘಟಿಸತೊಡಗಿದರು. ಮಹರ್ ವತನ್, ಖೋಟಿ ವ್ಯವಸ್ಥೆ (ಅಂದರೆ ಬಿಟ್ಟಿ ದುಡಿಮೆ) ಮತ್ತು ಕೈಗಾರಿಕಾ ವಿವಾದಗಳ ಮಸೂದೆಗಳ ವಿರುದ್ಧ ಹೋರಾಡಿದರು. ೧೯೪೨ ರಲ್ಲಿ, ಸ್ವಾತಂತ್ರ್ಯ ಸಮೀಪಿಸುತ್ತಿದ್ದ ಹಾಗೆ ದಲಿತರದೇ ಆದ ಪಕ್ಷವೊಂದರ ಅವಶ್ಯಕತೆಯನ್ನು ಮನಗಂಡು ಅಖಿಲ ಭಾರತ ಷೆಡ್ಯೂಲ್ ಕಾಸ್ಟ್ ಫೆಡ್‌ರೇಶನ್ ಸ್ಥಾಪಿಸಿದರು. ಭಾರತದ ಸಂವಿಧಾನ ಸಭೆಗೆ ಆಯ್ಕೆಯಾದ ಅಂಬೇಡ್ಕರ್ ಹಾಗೆಯೇ ಕಾರ್ಮಿಕರ ಮಂತ್ರಿಯಾಗಿ ಕಾರ್ಮಿಕ ಹಿತ ಕಾಯಲು ಶ್ರಮಿಸಿದರು. ದಲಿತರ ಅಗತ್ಯಗಳನ್ನು ಒಳಗೊಂಡ ಮನವಿಯೊಂದನ್ನು ಸಲ್ಲಿಸಿದರು. 'ಸಂವಿಧಾನ ಕರಡು ರಚನಾ ಸಮಿತಿ'ಗೆ ಅಧ್ಯಕ್ಷರಾದ ಅಂಬೇಡ್ಕರ್ ಜಗತ್ತಿನಲ್ಲೇ ಮಹತ್ವದ್ದೆನಿಸಿದ ಭಾರತೀಯ ಸಂವಿಧಾನ ತಯಾರಿಸಿದರು.

೧೯೪೭ ರಲ್ಲಿ ಸ್ವಾತಂತ್ರ್ಯ ಬಂದ ನಂತರ ನೆಹರೂ ಅವರ ಸಂಪುಟದಲ್ಲಿ ಕಾನೂನು ಮಂತ್ರಿಯಾದ ಅಂಬೇಡ್ಕರ್ ಸ್ವತಂತ್ರ ಭಾರತದ ಆಡಳಿತ ಮತ್ತು ಕರಡು ಸಂವಿಧಾನದ ಚರ್ಚೆಯಲ್ಲಿ ಸಕ್ರಿಯವಾಗಿ ದುಡಿದರು. ದಲಿತರಿಗೆ ಸಂವಿಧಾನದಲ್ಲಿ ದತ್ತವಾಗಿರುವ ಬಹುತೇಕ ರಕ್ಷಣೆಗಳು ಅಂಬೇಡ್ಕರ್‌ರವರ ವಿಶೇಷ ಶ್ರಮದಿಂದಲೇ ಎಂದರೆ ಅತಿಶಯೋಕ್ತಿ ಇಲ್ಲ. ಸ್ವಾತಂತ್ರ್ಯ ನಂತರವೂ ತಾವು ಎಣಿಸಿದ ರೀತಿಯಲ್ಲಿ ಸಾಮಾಜಿಕ ಆರ್ಥಿಕ ಬದಲಾವಣೆಗಳು ಆಗದಿದ್ದುದನ್ನು ಮನಗಂಡ ಅಂಬೇಡ್ಕರ್ ಮಂತ್ರಿ ಪದವಿ ತ್ಯಜಿಸಿದರು.

ಬಾಲ್ಯದಿಂದಲೂ ಅಂಬೇಡ್ಕರ್ ಅವರಿಗೆ ಬೌದ್ಧಧರ್ಮದ ಸೆಳೆತವಿತ್ತು. ೧೯೨೭ ರಲ್ಲಿ ಸೂಚ್ಯವಾಗಿ ೧೯೩೫ ರಲ್ಲಿ ಬಹಿರಂಗವಾಗಿ ತಾವು 'ಹಿಂದೂ ಆಗಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯುವುದಿಲ್ಲ'ವೆಂದು ಘೋಷಿಸಿದ್ದರು. ಅವರು ಈ ಮಾತುಗಳನ್ನಾಡಿ ೨೦ ವರ್ಷ ಕಳೆದರೂ, ಸವರ್ಣೀಯ ಹಿಂದೂಗಳು ಅಸ್ಪೃಶ್ಯರ ಬಗೆಗಿನ ತಮ್ಮ ನಡುವಳಿಕೆಯನ್ನು ಬದಲಾಯಿಸಲಿಲ್ಲ. ಸ್ವಾಭಿಮಾನ, ಸಮಾನತೆ ವ್ಯಕ್ತಿಯ ಘನತೆಗೆ ಹಿಂದೂ ಧರ್ಮದಲ್ಲಿ ಅವಕಾಶವಿಲ್ಲ. ಆ ಮೂರರ ಜೊತೆಗೆ ಕರುಣೆ ಮತ್ತು ವಿವೇಕ (ಜ್ಞಾನ) ಎರಡನ್ನೂ ಸಾಧ್ಯವಾಗಿಸುವ ಭಾರತೀಯವೇ ಆದ ಬೌದ್ಧಧರ್ಮ ಒಳಿತು ಎಂದು ಅವರ ನಂಬಿಕೆ ಯಾಗಿತ್ತು. ಅದಕ್ಕೆ ಅನುಗುಣವಾಗಿ ಅಂಬೇಡ್ಕರ್ ತನ್ನ ಅಪಾರ ಅನುಯಾಯಿಗಳೊಂದಿಗೆ ೧೯೫೬ ರ ಸೆಪ್ಟಂಬರ್‌ನಲ್ಲಿ ಬೌದ್ಧಧರ್ಮ ಸ್ವೀಕರಿಸಿದರು.

ಭಾರತ ಸ್ವಾತಂತ್ರ ಚಳವಳಿಯಲ್ಲಿ ನಿರತವಾಗಿದ್ದಾಗ, ಅದಕ್ಕೆ ಒಂದು ಸಮಗ್ರತೆಯನ್ನು ತಂದು ಕೊಡುವಲ್ಲಿ ಅಂಬೇಡ್ಕರ್ ವಹಿಸಿದ ಪಾತ್ರ ಅನನ್ಯ, ಹಾಗೆಯೇ ಅವರ ಕೆಚ್ಚೆದೆಯ ಹೋರಾಟ ಅನುಕರಣೀಯ. ಅವರು ೬ ರ ಡಿಸೆಂಬರ್ ೧೯೫೬ ರಂದು ಪರಿನಿರ್ವಾಣ ಹೊಂದಿದರು.

ಇಂದಿರಾ ಗಾಂಧಿ (೧೯೭೧-೧೯೮೪)

ಸ್ವತಂತ್ರ ಭಾರತದ ಮೊದಲ ಮಹಿಳಾ ಪ್ರಧಾನಿ ಎಂದೇ ಚರಿತ್ರಾರ್ಹರಾದವರು ಶ್ರೀಮತಿ ಇಂದಿರಾಗಾಂಧಿ. ಭಾರತದ ಅಗ್ರಮಾನ್ಯ ನಾಯಕ ಪಂಡಿತ ಜವಹರಲಾಲ್ ನೆಹರೂ ಮತ್ತು ಕಮಲಾದೇವಿ ದಂಪತಿಗಳ ಏಕೈಕ ಪುತ್ರಿಯಾದ ಇಂದಿರಾ ಪ್ರಿಯದರ್ಶಿನಿ ಹುಟ್ಟಿದ್ದು ೧೯೧೭ ರ ನವೆಂಬರ್ ೧೭ ರಂದು. ತಾತ ಮೋತಿಲಾಲ್ ನೆಹರೂ ಅವರಿಂದ ಮನೆಮಂದಿಯೆಲ್ಲಾ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡವರು. ಅವರು ಹುಟ್ಟಿದ ಮನೆ 'ಆನಂದ ಭವನ'. ಆನಂದಭವನ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್' ಮತ್ತು ಸ್ವಾತಂತ್ರ್ಯ ಚಳವಳಿಯ ಕೇಂದ್ರ. ಬಾಲಕಿ ಇಂದಿರಾ ಬೆಳೆದದ್ದು ಈ ರೀತಿಯ ವಾತಾವರಣದಲ್ಲಿ. ಹುಟ್ಟೂರು ಅಲಹಾಬಾದ್ ಮತ್ತು ಲಂಡನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳನ್ನು ಶಿಕ್ಷಣ ಪಡೆದ ಇಂದಿರಾ ೧೯೩೦-೧೯೩೨ರ ಸವಿನಯ ಕಾನೂನುಭಂಗ ಚಳವಳಿಯಲ್ಲಿ ಪುಟ್ಟ ಮಕ್ಕಳಿಂದ ಕೂಡಿದ 'ವಾನರ ಸೇನೆ'ಯೊಂದನ್ನು ಕಟ್ಟಿ ತಮ್ಮದೇ ರೀತಿಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡರು. ೧೯೪೨ ರಲ್ಲಿ ಸಹ ಕಾಂಗ್ರೆಸ್ ಯುವಕ ಫಿರೋಜ್ ಗಾಂಧಿಯವರನ್ನು ಮದುವೆಯಾದ ಇಂದಿರಾ ಪ್ರಿಯದರ್ಶಿನಿ ನೆಹರೂ, ಇಂದಿರಾ ಗಾಂಧಿ ಪ್ರಿಯದರ್ಶಿನಿ ನೆಹರೂ ಆದರು. ಸ್ವಾತಂತ್ರ್ಯೋತ್ತರ ಭಾರತದ ಪ್ರಥಮ ಪ್ರಧಾನಿಯಾಗಿ ತಂದೆ ಜವಹರಲಾಲರು ಅಧಿಕಾರ ಸ್ವೀಕರಿಸಿದ ನಂತರ, ಅಪ್ಪನ ಬಿಡುವಿಲ್ಲದ ಕೆಲಸಗಳಲ್ಲಿ ಸಹಾಯಕಿಯಾಗಿ ಕೆಲಸ ನಿರ್ವಹಿಸಿದರು. ೧೯೫೯ ರಲ್ಲಿ ಕಾಂಗ್ರೆಸ್ ಅಧ್ಯಕ್ಷೆಯಾಗಿ ಚುನಾಯಿತರಾದ ಅವರು ಭಾರತದ ಮೊದಲ ಚುನಾಯಿತ ಕಮ್ಯುನಿಸ್ಟ್ ರಾಜ್ಯ ಸರ್ಕಾರ ಕೇರಳದ ಇ.ಎಂ.ಎಸ್ ನಂಬೂದಿರಿ ಪಾಡರ ಸರ್ಕಾರವನ್ನು ಅಸ್ಥಿರಗೊಳಿಸಿ ವಜಾಗೊಳಿಸಲು ಕಾರಣರಾದರೆಂಬ ಅಪಖ್ಯಾತಿಗೆ ಕಾರಣರಾದರು. ೧೯೪೭ ರಿಂದ ೧೯೬೪ ರಲ್ಲಿ ನೆಹರೂ ನಿಧನರಾಗುವವರೆಗೂ ಅವರ ನೆರಳಿನಂತಿದ್ದು, ರಾಜಕೀಯ, ಆಡಳಿತ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಇಂದಿರಾ ಅಪಾರ ಅನುಭವಗಳಿಸಿಕೊಂಡರು. ತಂದೆಯ ಮರಣಾನಂತರ ಲಾಲ್‌ಬಹದೂರ್ ಶಾಸ್ತ್ರಿಯವರ ಸಚಿವ ಸಂಪುಟದಲ್ಲಿ ವಾರ್ತಾ ಸಚಿವರಾಗಿದ್ದರು.

೧೯೬೬ ರಲ್ಲಿ ಶಾಸ್ತ್ರಿಯವರು ಅಕಾಲಮರಣಕ್ಕೆ ತುತ್ತಾದಾಗ ಹಲವು ನಾಟಕೀಯ ರಾಜಕೀಯ ತಿರುವುಗಳಾಗಿ ಇಂದಿರಾ ಭಾರತದ ಪ್ರಧಾನಮಂತ್ರಿ ಪಟ್ಟಕ್ಕೆ ಏರಿದರು. ರಾಜಕೀಯದಲ್ಲಿ ಪಳಗಿದವರಲ್ಲ, ಕಾಂಗ್ರೆಸ್ಸಿನ ಹಿರಿಯ ನಾಯಕರ ನೆರಳಿನಲ್ಲಿ ಅಧಿಕಾರ ನಡೆಸುತ್ತಾರೆಂದು ಹಲವಾರು ಮಂದಿ ತಿಳಿದದ್ದು ಹುಸಿಯಾಯಿತು. ೧೯೬೭ ರ ಹೊತ್ತಿಗಾಗಲೇ ಕಾಂಗ್ರೆಸ್ ತನ್ನ ಹಿಂದಿನ ವರ್ಚಸ್ಸನ್ನು ಕಳೆದುಕೊಳ್ಳುತ್ತಿದ್ದು ಸುಸ್ಪಷ್ಟವಾಗಿತ್ತು. ಭಾರತದ ಜನತೆಗೆ ಬೇಕಾಗಿದ್ದುದು ನಿಜವಾಗಿಯೂ ಅವರ ದೈನಂದಿನ ಸಮಸ್ಯೆಗಳಾದ ಆಹಾರ, ಆರೋಗ್ಯ, ಶಿಕ್ಷಣದ ಅಗತ್ಯತೆಗಳನ್ನು ಪೂರೈಸುವ ಸರ್ಕಾರ. ಆದರೆ ಆ ನಿಟ್ಟಿನಲ್ಲಿ ಸ್ವತಂತ್ರ ಭಾರತದ ಸರ್ಕಾರ ಯಶಸ್ಸನ್ನು ಕಂಡಿರಲಿಲ್ಲ. ಮಿಗಿಲಾಗಿ ಕಾಂಗ್ರೆಸ್‌ನ ಹಿರಿಯ ನಾಯಕರು ಜನರ ನಾಡಿಮಿಡಿತವನ್ನು ಸರಿಯಾಗಿ ಅರಿಯಲಾರದವರೆಂದು ಯುವಪೀಳಿಗೆ ಭಾವಿಸಿದ್ದು

ಸಹಜ. ಈ ಮಧ್ಯೆ ೧೯೬೭ ರಲ್ಲಿ ಸಾರ್ವತ್ರಿಕ ಚುನಾವಣೆಗಳಾಗಿ, ಕಾಂಗ್ರೆಸ್ಸಿಗೆ ಮತ್ತೊಂದು ಆಘಾತವಾಯಿತು. ಅದು ೧೯೬೨ ಕ್ಕೆ ಹೋಲಿಸಿದರೆ ಶೇಕಡಾ ೪ ರಷ್ಟು ಮತಗಳನ್ನು ಕಳೆದುಕೊಂಡು ಶೇಕಡಾ ೧೯ ರಷ್ಟು ಲೋಕಸಭಾ ಸ್ಥಾನಗಳನ್ನು ಕಳೆದುಕೊಂಡಿತ್ತು. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಸೋಲಾಗಿ ಸ್ಥಳೀಯ ಪಕ್ಷಗಳ ಸಮೂಹ ಅಧಿಕಾರಕ್ಕೆ ಬಂದವು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ **ಕೆ. ಕಾಮರಾಜ್** ಚುನಾವಣೆ ಸೋತಿದ್ದರು. ಆದರೂ ಹಿರಿಯ ನಾಯಕರು ಇಂದಿರಾಗಾಂಧಿಯವರನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದರು.

ಶ್ರೀಮತಿ ಗಾಂಧಿಯವರು ರಾಜಕೀಯವಾಗಿ ಹೆಚ್ಚು ಚುರುಕಾದರು. ಹಿರಿಯ ತಲೆಮಾರಿನ, 'ಜಿಗುಟಿನ ಮನುಷ್ಯ'ರೆಂದೇ ಹೆಸರುವಾಸಿಯಾಗಿದ್ದ ಉಪಪ್ರಧಾನಿ ಮತ್ತು ಹಣಕಾಸು ಸಚಿವರಾಗಿದ್ದ **ಮೊರಾರ್ಜಿ ದೇಸಾಯರ**ನ್ನು ಸಂಪುಟದಿಂದ ವಜಾ ಮಾಡಿದರು. ರಾಷ್ಟ್ರಪತಿ ಸ್ಥಾನಕ್ಕೆ ನಡೆದ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಅಧಿಕೃತ ಅಭ್ಯರ್ಥಿ ವಿರುದ್ಧ ತಮ್ಮ ಅಭ್ಯರ್ಥಿಯನ್ನು ನಿಲ್ಲಿಸಿ 'ಆತ್ಮಸಾಕ್ಷಿ' ಮತ ಹಾಕಲು ಕರೆಕೊಟ್ಟ ಇಂದಿರಾ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡರು. ಇದು ಕಾಂಗ್ರೆಸ್ ಇಬ್ಭಾಗವಾಗಲು ಕಾರಣವಾಯಿತು.

ಆಗಿನಿಂದ ಶ್ರೀಮತಿ ಗಾಂಧಿಯವರ ನಡೆಗೆ ತಡೆಯೇ ಇಲ್ಲದಂತಾಯಿತು. ೧೯೭೧ರ ವೇಳೆಗೆ ಹಲವಾರು ಜನಪ್ರಿಯ ಆಡಳಿತ ತೀರ್ಮಾನಗಳನ್ನು ತೆಗೆದುಕೊಂಡ ಅವರು ಬ್ಯಾಂಕ್ ರಾಷ್ಟ್ರೀಕರಣ, ರಾಜ-ಮಹಾರಾಜರುಗಳಿಗೆ ಕೊಡುತ್ತಿದ್ದ ರಾಜಧಾನಿ ರದ್ಧತಿ ಮಾಡಿ ತಾವು ಸಮಾಜವಾದದ ಪರವೆಂಬಂತೆ ಕಾಣಿಸಿಕೊಂಡರು. ಇದೆಲ್ಲಕ್ಕೂ ಕಳಶವಿಟ್ಟಂತೆ ಪೂರ್ವಪಾಕಿಸ್ತಾನ ಪಾಕಿಸ್ತಾನಿ ಸರ್ಕಾರದ ವಿರುದ್ಧ ದಂಗೆ ಎದ್ದಾಗ, ಇಂದಿರಾ ಅವರ ಸರ್ಕಾರ ಕೂಡಲೇ ಪೂರ್ವ ಪಾಕಿಸ್ತಾನಕ್ಕೆ **ಬಾಂಗ್ಲಾದೇಶ**ವೆಂದು ರಾಜತಾಂತ್ರಿಕ ಮನ್ನಣೆ ಘೋಷಿಸಿ, ಪಾಕಿಸ್ತಾನವನ್ನು ಯುದ್ಧದಲ್ಲಿ ಮಣಿಸಿತು.

ಈ ಬೆಳವಣಿಗೆಗಳು ಶ್ರೀಮತಿ ಗಾಂಧಿಯವರನ್ನು ಭಾರತದಲ್ಲೇ ಏಕೆ ಇಡೀ ಜಗತ್ತಿನಲ್ಲಿ ದಿಟ್ಟ, ಜನಪ್ರಿಯ ನಾಯಕಿಯೆಂದು ಮನ್ನಣೆ ಗಳಿಸಿಕೊಟ್ಟಿತು. ಇದನ್ನೇ ಬಳಸಿಕೊಂಡ ಅವರು ೧೯೭೧ ರಲ್ಲಿ ಸಂಸತ್ತಿಗೆ ಮಧ್ಯಂತರ ಚುನಾವಣೆ ಘೋಷಿಸಿ ಅಭೂತಪೂರ್ವ ಜಯಗಳಿಸಿದರು. ರಾಜ್ಯಗಳಲ್ಲೂ ಒಂದನ್ನುಳಿದು (ತಮಿಳುನಾಡು) ಎಲ್ಲ ಕಡೆಗಳಲ್ಲೂ ಕಾಂಗ್ರೆಸ್ ಸರ್ಕಾರ ರಚಿಸಿತು. ಆದರೆ ಹಲವಾರು ದೇಶೀಯ ಹಾಗೂ ಅಂತರ ರಾಷ್ಟ್ರೀಯ ಆರ್ಥಿಕ ಏರುಪೇರುಗಳು ಕೇವಲ ಮೂರು ವರ್ಷಗಳಲ್ಲಿ ಪರಿಸ್ಥಿತಿಯನ್ನು ಬಿಗಡಾಯಿಸಿದವು. ಏರುತ್ತಿದ್ದ ಬೆಲೆ, ಏರದ ವರಮಾನದಿಂದಾಗಿ ಮಧ್ಯಮವರ್ಗಗಳಲ್ಲಿ ಅಪಾರ ಅಸಮಾಧಾನ ಕಾಣಿಸಿಕೊಂಡಿತು. ಇಂದಿರಾ ನೇತೃತ್ವದ ಸರ್ಕಾರ ಕೆಳವರ್ಗದ ಪರ, ಇತರರ ವಿರೋಧಿ ಎಂಬ ಭಾವನೆ ಬೆಳೆಯತೊಡಗಿತು. ನಗರ-ಪಟ್ಟಣಗಳೆನ್ನದೆ ಸಂಘಟಿತ ರೈತ-ಕಾರ್ಮಿಕರು ಚಳವಳಿಗಳಲ್ಲಿ ತೊಡಗಿದರು. ಇಂದಿರಾಗಾಂಧಿ ಎಲ್ಲ ಅಧಿಕಾರವನ್ನು ತಮ್ಮಲ್ಲೇ ಕೇಂದ್ರೀಕರಿಸಿಕೊಂಡು ರಾಜ್ಯಗಳ ಮೇಲೆ ಅಧಿಕಾರಗಳನ್ನು ಮೊಟಕುಗೊಳಿಸಿದ್ದಾರೆ ಅಥವಾ ತಮ್ಮ ಅಜ್ಞಾನುವರ್ತಿಗಳನ್ನು ರಾಜ್ಯಗಳ ಆಯಕಟ್ಟಿನ ಜಾಗದಲ್ಲಿ ಪ್ರತಿಷ್ಠಾಪಿಸಿದ್ದಾರೆ ಎನ್ನುವ

ಮಾತು ಕೇಳಿ ಬಂದಿತು. ಎಲ್ಲೆಡೆ ಭ್ರಷ್ಟಾಚಾರ ಹೆಚ್ಚಾಗುತ್ತಿದ್ದು, ಪ್ರತಿಭಟಿಸುವವರನ್ನು ನಿರ್ದಾಕ್ಷಿಣ್ಯವಾಗಿ ದಮನ ಮಾಡಲಾಗುತ್ತಿದೆ ಎಂಬ ಆರೋಪಗಳೂ ಕೇಳಿಬಂದವು. ಜನರ ಪ್ರತಿಭಟನೆಗಳನ್ನು ದಮನ ಮಾಡುವುದು ಜನತಂತ್ರ ವಿರೋಧಿ, ಪ್ರತಿಭಟನೆ ಜನತೆಯ ಮೂಲಭೂತ ಹಕ್ಕು. ಆಗ ಸರ್ಕಾರಗಳು ಜನರ ಮೂಲಭೂತ ಹಕ್ಕುಗಳನ್ನೇ ದಮನ ಮಾಡುತ್ತಿವೆ ಎಂಬ ಆರೋಪ ಹೊರಿಸಿ, ವಿರೋಧ ಪಕ್ಷಗಳು ಸಂಘಟಿತವಾಗತೊಡಗಿದವು. ಅದಕ್ಕೆ ನೇತೃತ್ವ ವಹಿಸಿದವರು ಗಾಂಧಿವಾದಿ **ಜಯಪ್ರಕಾಶ್ ನಾರಾಯಣ** (ಜೆ.ಪಿ.) ಬಹುತೇಕ ಎಲ್ಲ ವಿರೋಧ ಪಕ್ಷಗಳೂ ಜೆ.ಪಿ. ಯವರ **ನವನಿರ್ಮಾಣ ಚಳವಳಿಗೆ** ಬೆಂಬಲ ಸೂಚಿಸಿದವು.

ಈ ನಡುವೆ ಚುನಾವಣೆಗಳಲ್ಲಿ ಅಕ್ರಮವೆಸಗಿದ್ದರೆನ್ನುವ ಆಪಾದನೆ ಬಗ್ಗೆ ವಿಚಾರಣೆ ನಡೆಸುತ್ತಿದ್ದ ಅಲಹಾಬಾದ್ ಹೈಕೋರ್ಟು ಅದನ್ನು ಎತ್ತಿಹಿಡಿದು ಶ್ರೀಮತಿ ಗಾಂಧಿಯವರ ಚುನಾವಣೆಯನ್ನು ರದ್ದುಗೊಳಿಸಿತು. ಶ್ರೀಮತಿ ಗಾಂಧಿ ಈ ವಿಚಾರವನ್ನು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಂಡರು. ದೇಶದಲ್ಲಿ ಆಂತರಿಕ ಭದ್ರತೆಗೆ ಧಕ್ಕೆಯಾಗುತ್ತಿದೆ. ಸಂವಿಧಾನಕ್ಕೆ ಅನುಗುಣವಾಗಿ ಚುನಾಯಿತವಾದ ಸರ್ಕಾರವನ್ನು ಬುಡಮೇಲು ಮಾಡುವ ಕೃತ್ಯಗಳು ವ್ಯಾಪಕವಾಗಿ ಹರಡುತ್ತಿವೆ ಎಂದು ಹೇಳಿ ೧೯೭೫ ಜೂನ್‌ನಲ್ಲಿ ಆಂತರಿಕ **ತುರ್ತುಪರಿಸ್ಥಿತಿ** ಘೋಷಿಸಿ, ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿದರು. ಕಾಂಗ್ರೆಸ್ಸಿನ ವಿರೋಧಿಗಳನ್ನೇ ಅಲ್ಲದೆ, ಕಾಂಗ್ರೆಸ್ಸಿನಲ್ಲಿದ್ದ ಟೀಕಾಕರರನ್ನು ಬಂಧಿಸಿ ಜೈಲಿಗೆ ದೂಡಲಾಯಿತು. ಉತ್ತರ ಭಾರತದ ಎಲ್ಲೆಡೆ ತುರ್ತುಪರಿಸ್ಥಿತಿಯ ಅತಿರೇಕಗಳನ್ನು ಜನ ಎದುರಿಸಬೇಕಾಯಿತು.

೧೯೭೭ ರ ಮಾರ್ಚಿನಲ್ಲಿ ಸಾರ್ವತ್ರಿಕ ಚುನಾವಣೆಗಳಾದವು. ಇಂದಿರಾ ಗಾಂಧಿಯವರನ್ನು ಒಳಗೊಂಡು ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋತಿತು. ಕಮ್ಯುನಿಸ್ಟೇತರ ವಿರೋಧ ಪಕ್ಷಗಳು ಸೇರಿ ರಚಿಸಿಕೊಂಡಿದ್ದ **ಜನತಾಪಕ್ಷ**, **ಮೊರಾರ್ಜಿ**ಯವರ ನಾಯಕತ್ವದಲ್ಲಿ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡಿತು. ಆದರೆ ಆಂತರಿಕ ಕಚ್ಚಾಟ ಮತ್ತು ತಾತ್ವಿಕ ವೈರುಧ್ಯಗಳಿಂದಾಗಿ ಅದು ಹೆಚ್ಚು ಕಾಲ ಬಾಳಲಿಲ್ಲ. ೧೯೮೦ರ ಚುನಾವಣೆಯಲ್ಲಿ ಮತ್ತೆ ಇಂದಿರಾ ಗಾಂಧಿಯವರ ಪಕ್ಷ ಜಯಭೇರಿ ಹೊಡೆದು ಅಧಿಕಾರಕ್ಕೆ ಬಂದಿತು. ಅವರೇ ಪ್ರಧಾನಮಂತ್ರಿಯಾದರು. ಆದರೆ ಭಾರತದ **ಪಂಜಾಬ್**, **ಕಾಶ್ಮೀರ** ಮತ್ತು **ಈಶಾನ್ಯ** ರಾಜ್ಯಗಳಲ್ಲಿ ಭಯೋತ್ಪಾದಕತೆ ಸ್ಫೋಟಗೊಂಡಿತು. ಅವನ್ನು ಹತ್ತಿಕ್ಕಲು ಕ್ರಮ ಕೈಗೊಳ್ಳಲಾಯಿತು. ಪಂಜಾಬಿನಲ್ಲಂತೂ ಭಯೋತ್ಪಾದನೆ ಮುಗಿಲು ಮುಟ್ಟಿತು. ಅಲ್ಲಿಯ ಪೂಜಾಸ್ಥಳಗಳೇ ಭಯೋತ್ಪಾದಕರ ಅಡುಗುತಾಣಗಳಾದವು. ಸಹನೆ ಕಟ್ಟೆಯೊಡೆದಾಗ ಶ್ರೀಮತಿ ಗಾಂಧಿಯವರ ಸರ್ಕಾರ ಸಿಖ್ಖರ ಪವಿತ್ರ ಮಂದಿರವಾದ **ಸ್ವರ್ಣಮಂದಿರ**ಕ್ಕೆ ಸೈನ್ಯ ನುಗ್ಗಿಸಿ, ಭಯೋತ್ಪಾದಕರ ಮುಖ್ಯಸ್ಥನಾದ **ಭಿಂದ್ರನ್‌ವಾಲೆ** ಸಹಿತ, ಅಲ್ಲಿ ಅಡಗಿದ್ದವರನ್ನು ಮುಗಿಸಲಾಯಿತು. ಈ ಘಟನೆಯೇ ನೆಪವಾಗಿ ಇಂದಿರಾಗಾಂಧಿಯವರ ರಕ್ಷಣೆಗೆಂದೇ ನೇಮಕವಾಗಿದ್ದ ಕೆಲವು ಸಿಖ್ ಸಿಪಾಯಿಗಳು ಅವರನ್ನು ೧೯೮೪ ರಲ್ಲಿ ಗುಂಡಿಕ್ಕಿ ಹತ್ಯೆ ಮಾಡಿದರು.

ಸುಮಾರು ೧೫ ವರ್ಷಗಳ ದೀರ್ಘಕಾಲ ಭಾರತದ ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಹಲವಾರು ಏರುಪೇರುಗಳನ್ನು ಕಂಡರು. ಕಷ್ಟ-ಸುಖ ಎರಡನ್ನು ಅನುಭವಿಸಿದರು. ಆದರೆ ಭಾರತಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಘನತೆಯನ್ನು ದೊರಕಿಸಿಕೊಟ್ಟರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜವಹರಲಾಲರನ್ನು ಹೊರತುಪಡಿಸಿದರೆ, ಜನಪ್ರಿಯತೆಯಲ್ಲಿ ಇಂದಿರಾಗಾಂಧಿಯವರನ್ನು ಸರಿಗಟ್ಟುವವರು ಯಾರೂ ಇಲ್ಲವೆಂದರೆ ಅತಿಶಯೋಕ್ತಿ ಅಲ್ಲ. ಹಾಗೆಯೇ ಅವರು ಅಧಿಕಾರ ರಾಜಕಾರಣದ ಮಿತಿಯಲ್ಲಿ ಬಡ-ಬಗ್ಗರ, ದೀನ-ದಲಿತರ ಪರವಾದ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರು. ಪ್ರಭುತ್ವಕ್ಕೆ ಬೇಕಾದ ಸ್ಥಿರತೆ ಅವರ ಕಾಲದಲ್ಲಿ ದೊರಕಿತ್ತು.

ಮದರ್ ತೆರೆಸಾ (೧೯೧೦-೧೯೯೭)

ದೀನ-ದಲಿತರ ಸೇವಾಕ್ಷೇತ್ರದಲ್ಲಿ ದುಡಿದ ಜಗತ್ತಿನ ಕೆಲವೇ ದಯಾಮಯರ ಹೆಸರುಗಳಲ್ಲಿ ಮದರ್‌ತೆರೆಸಾ ಅವರ ಹೆಸರು ಪ್ರಮುಖವಾದುದು. ತೆರೆಸಾ ಅವರ ಹೆಸರಿಗೆ **ಮದರ್** (ತಾಯಿ) ಪದ ಬೆಸೆದುಹೋದದ್ದು ಅಲಂಕಾರಿಕವಲ್ಲ. ಅದು ಸಹಜವಾಗಿ ಅವರಿಗೆ ಒಪ್ಪಿದಷ್ಟು ಬಹುಶಃ ಇನ್ನಾರಿಗೂ ಒಪ್ಪಲಾರದು. ತಮ್ಮ ಜೀವಮಾನವನ್ನೇ ದೀನರ ಸೇವೆಗೆ ಮುಡಿಪಿಟ್ಟ ತಾಯಿ ಅವರು. ಅಂದಿನ **ಆಟೊಮನ್** ಸಾಮ್ರಾಜ್ಯದ ಭಾಗವಾಗಿದ್ದ ಅಲ್ಬೇನಿಯಾದಲ್ಲಿ **ಆಗ್ನೆಸ್ ಗಾಂಕ್‌ಸಾ ಬೊಜಾಯು** (ತೆರೆಸಾ ಅವರ ಮೂಲ ಹೆಸರು) ಹುಟ್ಟಿದ್ದು ೧೯೧೦ ರ ಆಗಸ್ಟ್ ೨೭ ರಂದು. ತಂದೆ ಒಬ್ಬ ದಿನಸಿ ವ್ಯಾಪಾರಿ. ರೋಮನ್ ಕ್ಯಾಥೋಲಿಕ್ ಕ್ರೈಸ್ತ ಪಂಗಡಕ್ಕೆ ಸೇರಿದ ತೆರೆಸಾ ಒಬ್ಬ **ನನ್** (Nun-ಕ್ರೈಸ್ತ ಸಂನ್ಯಾಸಿನಿ) ಆಗಿ ಭಾರತಕ್ಕೆ ಬಂದರು (೧೯೩೧). ನರ್ಸಿಂಗ್‌ನಲ್ಲಿ ತರಬೇತಿ ಪಡೆದ ಅವರು ಏಷಿಯಾದ **ಕೊಳೆಗೇರಿಗಳ ನಗರವೆಂದೇ** ಖ್ಯಾತವಾಗಿದ್ದ **ಕಲಕತ್ತಾ**ದ ಕೊಳೆಗೇರಿಯ ನಿವಾಸಿಯಾದರು (೧೯೩೧-೪೮). ಆಗ ತಾನೆ ಸ್ವಾತಂತ್ರ್ಯ ಬಂದಿತ್ತು. ಭಾರತದ ವಿಭಜನೆಯಿಂದ ತೀವ್ರತರ ಸಂಕಷ್ಟಕ್ಕೆ ಸಿಲುಕಿದ ನಗರಗಳಲ್ಲಿ ಕಲಕತ್ತೆಯೂ ಒಂದು. ಪೂರ್ವ ಪಾಕಿಸ್ತಾನದಿಂದ ಲಕ್ಷೋಪಲಕ್ಷ ನಿರಾಶ್ರಿತರು ಕಲಕತ್ತೆಗೆ ಬಂದರು. ಬಂದವರಿಗೆ, ಜೀವನಾವಶ್ಯಕ ವಸ್ತುಗಳು ಲಭ್ಯವಿರಲಿಲ್ಲ. ಆದರೂ ಎಲ್ಲೋ ನೆಲೆಯೂರಬೇಕು. ಕೊಳೆಗೇರಿಗಳ ಸಂಖ್ಯೆ ಅಲ್ಲಿ ವಾಸಿಸುವ ಜನ ಸಂಖ್ಯೆ, ಹೆಚ್ಚಾಗಲು ಇದೂ ಕಾರಣವಾಯಿತು. ತೆರೆಸಾ **ಆರ್ಡರ್ ಆಫ್ ದಿ ಮೇಷನರೀಸ್ ಆಫ್ ಚಾರಿಟಿ** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಉದ್ದೇಶ ದೀನ-ದಲಿತರ, ವಿಶೇಷವಾಗಿ ದಿಕ್ಕಿಲ್ಲದವರ ಪಾಲನೆ-ಪೋಷಣೆ ಮಾಡಿ, ದೈಹಿಕವಾಗಿ ಆರೋಗ್ಯವಂತರಾದವರಿಗೆ ಬದುಕುವ ದಾರಿ ಕಾಣಲು ಸಹಾಯ ಮಾಡುವುದು. ಅಂಧರು, ವೃದ್ಧರು, ಅಂಗವಿಕಲರು, ಸಾಯುವ ಸ್ಥಿತಿ ತಲುಪಿದವರು ಹೀಗೆ ಇಂಥವರ ಆರೈಕೆ, ಈ ಸಂಸ್ಥೆಯ ಗುರಿ.

ತೆರೆಸಾ ಮತ್ತು ಅವರ ಸಂಸ್ಥೆಯ ನಿಸ್ವಾರ್ಥ ಸೇವೆ ಕಂಡು ಹಲವಾರು ದೇಶ-ವಿದೇಶೀ ಸಂಸ್ಥೆಗಳು-ದಾನಿಗಳು ಅವರ ನೆರವಿಗೆ ಬರುವಂತಾಯಿತು. ಅವರ ಸೇವಾ ಕೇಂದ್ರ **ಕಲಕತ್ತಾ**

ಆದರೂ, ತೆರೆಸಾ ಅವರಿಗೆ ಇಡೀ ಜಗತ್ತೇ ಕಾರ್ಯಕ್ಷೇತ್ರ. ಕ್ರಮೇಣ ೯೦ಕ್ಕೂ ಹೆಚ್ಚು ದೇಶಗಳಲ್ಲಿ ಅವರ 'ಮಿಶನರೀಸ್ ಆಫ್ ಚಾರಿಟಿ'ಯ ಶಾಖೆಗಳು ಪ್ರಾರಂಭವಾಗಿ ತನ್ನ ಸೇವಾಕಾರ್ಯ ಹಮ್ಮಿಕೊಂಡವು. ೪೦೦೦ಕ್ಕೂ ಹೆಚ್ಚು ನುರಿತ ನನ್‌ಗಳು ಸಾವಿರಾರು ಮಂದಿ ಸಾಮಾನ್ಯ ಸೇವಕರು ಪೂರ್ಣಾವಧಿ ಈ ಸೇವಾಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮದರ್ ತೆರೆಸಾ ಅವರು ನಿಜವಾದ ಅರ್ಥದಲ್ಲಿ 'ಜನಸೇವೆಯೇ ಜನಾರ್ಧನ ಸೇವೆ' ಎಂದು ನಂಬಿ ಜನಸೇವೆ ಮಾಡಿದರು. ಜಾತಿ-ಮತ, ಮೇಲು-ಕೀಳು, ಕಪ್ಪು-ಬಿಳುಪು, ಪೂರ್ವ-ಪಶ್ಚಿಮ, ಯಾವ ತಾರತಮ್ಯ ಭಾವವನ್ನೂ ಹತ್ತಿರ ಸುಳಿಯಗೊಡದೆ ದೀನರಿಗೆ ಓಗೊಟ್ಟ ಸಹಾಯ ವಾಣಿ ಅವರದು. ಅವರು ಶಾಂತಿದೂತರು. ಪ್ರಕೃತಿ ವಿಕೋಪಕ್ಕೆ ಸಿಕ್ಕಿದವರು, ಗಲಭೆ-ಹಿಂಸೆಗಳಲ್ಲಿ ನೊಂದ ದಿಕ್ಕಿಲ್ಲದವರು ಅವರ ಸೇವೆ ಪಡೆದುಕೊಳ್ಳುತ್ತಿದ್ದರು.

ತೆರೆಸಾ ಅವರು ಒಂದು ರೀತಿಯ ನಿಸರ್ಗವಾದಿ. ವಿವಾಹ, ಕೃತ್ರಿಮ ಸಂತಾನ ನಿಯಂತ್ರಣ ಮತ್ತು ಗರ್ಭಪಾತಗಳ ಬಗ್ಗೆ ಸ್ಪಷ್ಟವಾಗಿ-ದಿಟ್ಟವಾಗಿ ಮಾತನಾಡಿದರು. ವಿವಾಹ ವಿಚ್ಛೇದನ ಕೂಡದೆಂಬ ಧೃಡ ನಿಲುವು ತಳೆದ ತೆರೆಸಾ ಕೃತ್ರಿಮ ಸಂತಾನ ನಿಯಂತ್ರಣ ಮತ್ತು ಗರ್ಭಪಾತ ಮಹಾಪಾತಕಗಳೆಂದು ಸಾರಿದರು. ಅದಕ್ಕೆ ಬದಲಾಗಿ ಸಂಯಮ-ನಿಗ್ರಹಗಳನ್ನು ಪ್ರತಿಪಾದಿಸಿದರು.

ಮದರ್‌ತೆರೆಸಾ ಅವರ ಅಬ್ಬರದ ಪ್ರಚಾರ ಬಯಸದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ೧೯೬೩ ರಲ್ಲಿ **ಪದ್ಮಶ್ರೀ** ಪ್ರಶಸ್ತಿ ನೀಡಿ ಗೌರವಿಸಿತು. ೧೯೭೧ ರಲ್ಲಿ ವ್ಯಾಟಿಕನ್ನಿನ ರೋಮನ್ ಕ್ಯಾಥೋಲಿಕ್ ಚರ್ಚ್‌ನ **ಆರನೇ ಪೋಪ್‌ಪೌಲ್, ೨೩ನೇ ಪೋಪ್ ಜಾನ್‌ಪೌಲ್** ನೆನಪಿಗಾಗಿ ಕೊಡುವ **ಶಾಂತಿ ಪ್ರಶಸ್ತಿ** ನೀಡಿ ಗೌರವಿಸಿದರು. ೧೯೭೯ ರಲ್ಲಿ ವಿಶ್ವದ ಅತ್ಯಂತ ಶ್ರೇಷ್ಠ ಬಹುಮಾನವೆನ್ನಲಾದ **ನೊಬೆಲ್ ಶಾಂತಿ** ಪದಕಕ್ಕೆ ಅವರು ಭಾಜನರಾದರು. ೧೯೮೦ ರಲ್ಲಿ ಅವರಿಗೆ **ಭಾರತ ರತ್ನ** ಪ್ರಶಸ್ತಿಯೂ ಲಭಿಸಿತು. ಇವೆಲ್ಲದರಿಂದ ಅವರ ವಿನಯ, ಸರಳತೆ, ಸಜ್ಜನಿಕೆ ಹೆಚ್ಚಿತು. ಸ್ವತಃ ಹೃದಯದ ಬೇನೆಗೆ ತುತ್ತಾದರೂ, ತಮ್ಮ ಸೇವಾಕಾರ್ಯವನ್ನು ಮುಂದುವರಿಸಿದರು. ಜಗತ್ತಿನೆಲ್ಲೆಡೆ ಸ್ಥಾಪಿಸಿದ 'ಮಿಷನರೀಸ್ ಆಫ್ ಚಾರಿಟಿ' ಶಾಖೆಗಳಿಗೆ ಮಾರ್ಗದರ್ಶನ ಮಾಡುತ್ತ, ಅವುಗಳ ಚಟುವಟಿಕೆಗಳನ್ನು ವಿಸ್ತರಿಸಿದರು. ಬಿಡುವಿಲ್ಲದ ಕೆಲಸ, ಕೆಡುತ್ತಿದ್ದ ಆರೋಗ್ಯ ಮದರ್ ತೆರೆಸಾರನ್ನು ದೈಹಿಕವಾಗಿ ಕುಗ್ಗಿಸಿತು. ಹಲವಾರು ಬಾರಿ ಚಿಕಿತ್ಸೆಗೂ ಒಳಗಾದರು. ೫ ಸೆಪ್ಟೆಂಬರ್ ೧೯೯೭ ರಂದು ಅವರು ಕೊನೆಯುಸಿರೆಳೆದರು. ಅವರೇ ಸಾಕಿ ಬೆಳೆಸಿದ ಭಾರತೀಯರೇ ಆದ ಸಿಸ್ಟರ್ ನಿರ್ಮಲಾ ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡರು.

ಮದರ್ ತೆರೆಸಾರ ನಿಷ್ಕಲಂಕ ಮಾನವ ಪ್ರೇಮ ರೋಮಿನ ಚರ್ಚ್‌ನಲ್ಲಿ ಅವರಿಗೆ ವಿಶೇಷ ಸ್ಥಾನ ಗಳಿಸಿಕೊಟ್ಟಿದೆ. ಎರಡನೆ ಜಾನ್‌ಪೌಲ್‌ರ ವಿಶೇಷ ನಿರ್ದೇಶನದ ಅನುಸಾರ, ಮದರ್ ತೆರೆಸಾ ಅವರಿಗೆ **ಶಾಶ್ವತ ಸಂತ** ಪದವಿಗೇರಿಸಿ ಗೌರವಿಸುವ ನಿರ್ಧಾರದ ಪ್ರಕ್ರಿಯೆ

೧೯೯೯ ರಲ್ಲೇ ಪ್ರಾರಂಭವಾಯಿತು. ೧೯, ಅಕ್ಟೋಬರ್ ೨೦೦೩ ರಂದು ಅಧಿಕೃತವಾಗಿ ಅವರಿಗೆ ಶಾಶ್ವತ ಸಂತ ಪದವಿಯ ಗೌರವ ಪ್ರಾಪ್ತವಾಯಿತು. ಚರ್ಚ್‌ನ ಇತಿಹಾಸದಲ್ಲಿ (beatification) ಇಷ್ಟು ಶೀಘ್ರವಾಗಿ ಸಂತಪದವಿ ಪಡೆದುಕೊಂಡವರು ಯಾರೂ ಇಲ್ಲ. ಆ ಗೌರವಕ್ಕೆ ಮದರ್ ತೆರೆಸಾ ಪಾತ್ರರಾದರು. ನಿಸ್ವಾರ್ಥ ಸೇವೆ, ದಯೆ-ಮಾನವೀಯತೆ-ಶಾಂತಿ ಪ್ರಿಯತೆ, ಅಂತಃಕರಣಗಳಿಗೆ ಪರ್ಯಾಯ ಹೆಸರೇ ಮದರ್ ತೆರೆಸಾ. ಆದ್ದರಿಂದಲೇ ಅವರು ಜಗತ್ತಿಗೇ ಅಮ್ಮ, ಮದರ್.

ಹೆಚ್ಚಿನ ಓದಿಗಾಗಿ

Iswari Prasad	-	**History of India**
Majumdar R.C. And Roy chaudhari Datta	-	**An advanced History of India**
Bipan Chandra	-	**India's Struggle for Independence**
Bipan Chandra	-	**Nationalism and Colonialism in Modern India**
Bipan Chandra	-	**The rise and growth of Economic Nationalism in Modern India**
Luniya B.N.	-	**Evolution of Indian culture**
ಶಂಕರನಾರಾಯಣರಾವ್ ಎನ್.ಪಿ	-	**ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು**
ಶ್ರೀನಿವಾಸಮೂರ್ತಿ ಎ.ಪಿ.	-	**ಭಾರತ ಸ್ವಾತಂತ್ರ್ಯ ಚಳವಳಿ ೧೮೫೭-೧೯೪೭**

ಮಾದರಿ ಪ್ರಶ್ನೆಗಳು

I. ಒಂದು ವಾಕ್ಯದಲ್ಲಿ ಉತ್ತರಿಸಿ. (೧ ಅಂಕ)

೧. ಭಾರತದಲ್ಲಿ ಪೋರ್ಚುಗೀಸರ ರಾಜಧಾನಿ ಯಾವುದಾಗಿತ್ತು?

೨. ಭಾರತದಲ್ಲಿ ಡಚ್ಚರ ರಾಜಧಾನಿ ಯಾವುದು?

೩. ಪಾಂಡಿಚೇರಿಯನ್ನು ಯಾರು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು?

೪. ಬ್ರಿಟಿಷರ ರಾಜಧಾನಿ ಯಾವುದು?

೫. ಪ್ಲಾಸಿ ಕದನ ನಡೆದದ್ದು ಯಾವಾಗ?

೬. ಬಕ್ಸಾರ್ ಕದನದಲ್ಲಿ ಸೋತದ್ದು ಯಾರು?

೭. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು ಯಾರು?

೮. ಝಾನ್ಸಿಯಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟಿಸಿದ ರಾಣಿಯ ಹೆಸರೇನು?

೯. ವಿ.ಡಿ. ಸಾವರ್ಕರ್ ಅವರ ಕೃತಿಯ ಹೆಸರೇನು?

೧೦. ದಾದಾಬಾಯಿ ನವರೋಜಿ ಅವರ ಕೃತಿ ಯಾವುದು?

೧೧. ಮೆಕಾಲೆ ಯಾರು?

೧೨. 'ಬ್ರಹ್ಮ ಸಮಾಜ' ಯಾರಿಂದ ಸ್ಥಾಪಿತವಾಯಿತು?

೧೩. 'ಆದಿಧರ್ಮ' ಸಂಸ್ಥೆಯು ಯಾವ ರಾಜ್ಯದಲ್ಲಿ ಸ್ಥಾಪನೆ ಆಯಿತು?

೧೪. 'ಶ್ರೀ ನಾರಾಯಣ ಧರ್ಮ ಪಾಲನ ಸಭೆ'ಯ ಸ್ಥಾಪಕ ಯಾರು?

೧೫. 'ವೇದ ಸಮಾಜ'ವನ್ನು ಹುಟ್ಟು ಹಾಕಿದವರು ಯಾರು?

೧೬. ದಯಾನಂದ ಸರಸ್ವತಿ ಅವರು ಸ್ಥಾಪಿಸಿದ ಸಂಸ್ಥೆಯ ಹೆಸರು ಯಾವುದು?

೧೭. ವಿವೇಕಾನಂದ ಅವರ ಗುರು ಯಾರು?

೧೮. ರಾಮಕೃಷ್ಣ ಆಶ್ರಮ ಯಾವಾಗ ಸ್ಥಾಪನೆ ಆಯಿತು?

೧೯. ಬ್ರಿಟಿಷ್ ವಿರೋಧಿ ಮುಸ್ಲಿಂ ಚಳವಳಿ ಯಾವುದು?

೨೦. ಸೈಯದ್ ಅಹ್ಮದ್‌ಖಾನರು ಹುಟ್ಟುಹಾಕಿದ ಚಳವಳಿಯ ಹೆಸರೇನು?

೨೧. ಅನಿಬೆಸೆಂಟ್ ಅವರು ಹುಟ್ಟುಹಾಕಿದ ಸಂಸ್ಥೆಯ ಹೆಸರೇನು?

೨೨. ಕಾಶಿಯಲ್ಲಿ 'ಹಿಂದೂ ಕಾಲೇಜ್' ಯಾರಿಂದ ಸ್ಥಾಪನೆ ಆಯಿತು?

೨೩. 'ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿ'ನ ಸ್ಥಾಪಕ ಯಾರು?

೨೪. ಮಂದಗಾಮಿ ಚಳವಳಿಯ ನೇತಾರರಲ್ಲಿ ಒಬ್ಬರ ಹೆಸರನ್ನು ಸೂಚಿಸಿ.

೨೫. 'ಕೇಸರಿ' ಪತ್ರಿಕೆಯನ್ನು ಯಾರು ಹುಟ್ಟುಹಾಕಿದರು?

೨೬. ಭಗತ್‌ಸಿಂಗ್ ಹುಟ್ಟುಹಾಕಿದ ಚಳವಳಿ ಯಾವುದು?

೨೭. 'ಭಾರತ ರಾಷ್ಟ್ರೀಯ ಸೈನ್ಯ'ವನ್ನು ಕಟ್ಟಿದವರು ಯಾರು?

೨೮. ಸಬರಮತಿ ಆಶ್ರಮ ಎಲ್ಲಿದೆ?

೨೯. ಜನರಲ್ ಡೈಯರ್ ಯಾರು?

೩೦. 'ಪಂಜಾಬ್ ಕೇಸರಿ' ಎಂದು ಯಾರನ್ನು ಕರೆಯುತ್ತಾರೆ?

೩೧. 'ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆ'ಯನ್ನು ಯಾವಾಗ ಆಚರಿಸಲಾಯಿತು?

೩೨. ದಂಡಿಯಾತ್ರೆ ಯಾರ ನೇತೃತ್ವದಲ್ಲಿ ನಡೆಯಿತು?

೩೩. ಕ್ಯಾಪ್ಟನ್ ಲಕ್ಷ್ಮಿ ಯಾರು?

೩೪. 'ವಿಭಜಿಸಿ ತೊಲಗಿ' ಎಂದು ಕರೆಕೊಟ್ಟವರು ಯಾರು?

೩೫. 'ಬಹಿಷ್ಕೃತ ಭಾರತ' ಪತ್ರಿಕೆಯನ್ನು ಹುಟ್ಟುಹಾಕಿದವರು ಯಾರು?

೩೬. ಅಂಬೇಡ್ಕರ್ ಹುಟ್ಟುಹಾಕಿದ ಕಾರ್ಮಿಕ ಪಕ್ಷ ಯಾವುದು?

೩೭. ಇಂದಿರಾ ಪ್ರಿಯದರ್ಶಿನಿ ಹುಟ್ಟಿದ್ದು ಯಾವಾಗ?

೩೮. 'ನವನಿರ್ಮಾಣ ಚಳವಳಿ'ಯ ನೇತಾರ ಯಾರು?

೩೯. ಮದರ್ ತೆರೆಸಾ ಹುಟ್ಟುಹಾಕಿದ ಸಂಸ್ಥೆಯ ಹೆಸರೇನು?

೪೦. 'ಶಾಶ್ವತ ಸಂತ ಪದವಿ'ಯನ್ನು ಯಾರಿಗೆ ನೀಡಲಾಯಿತು?

II. ಎರಡು ವಾಕ್ಯಗಳಲ್ಲಿ ಉತ್ತರಿಸಿ (೨ ಅಂಕಗಳು)

೧. ಭಾರತದಲ್ಲಿ ಡಚ್ಚರ ವಸಾಹತು ನೆಲೆಗಳು ಯಾವುವು?
೨. ಫ್ರೆಂಚರು ಭಾರತದಲ್ಲಿ ಸ್ಥಾಪಿಸಿದ ವ್ಯಾಪಾರ ಕೇಂದ್ರಗಳು ಯಾವುವು?
೩. ಭಾರತದ ಬ್ರಿಟಿಷ್ ವಸಾಹತು ನೆಲೆಗಳನ್ನು ಹೆಸರಿಸಿ.
೪. ಪೋರ್ಚುಗೀಸ್‌ರ ವ್ಯಾಪಾರ ಕೋಠಿಗಳು ಯಾವುವು?
೫. ಫ್ರೆಂಚರಿಗೂ ಮತ್ತು ಆಂಗ್ಲರಿಗೂ ನಡೆದ ಯುದ್ಧಗಳನ್ನು ಏನೆಂದು ಕರೆಯುತ್ತಾರೆ? ಅವು ಎಷ್ಟು?
೬. ಅಲ್ಫೋನ್ಸೊ ಆಲ್ಬುಕರ್ಕ್ ಯಾರು? ಅವನು ವಶಪಡಿಸಿಕೊಂಡ ಪ್ರದೇಶಗಳಾವುವು?
೭. ಡಚ್ಚರ ಅವನತಿಗೆ ಎರಡು ಕಾರಣಗಳನ್ನು ತಿಳಿಸಿ.
೮. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಕುರಿತು ತಿಳಿಸಿ.
೯. ಬ್ರಿಟಿಷರು ಭಾರತದಲ್ಲಿ ನೆಲೆಗೊಳ್ಳಲು ಕಾರಣವಾದ ಯಾವುದಾದರು ಎರಡು ಅಂಶಗಳು.
೧೦. 'ಕಪ್ಪುಕೋಣೆ ದುರಂತ' ಎಂದರೇನು?
೧೧. 'ಬಕ್ಸಾರ್ ಕದನ'ದ ಬಗೆಗೆ ಎರಡು ವಾಕ್ಯಗಳಲ್ಲಿ ತಿಳಿಸಿ.
೧೨. ಬ್ಯಾರಕ್‌ಪುರದಲ್ಲಿ ನಡೆದ ದಂಗೆಯ ಬಗೆಗೆ ತಿಳಿಸಿ.
೧೩. 'ಸಂಪತ್ತಿನ ಸೋರಿಕೆ' ಎಂದರೇನು?
೧೪. ಥಾಮಸ್ ಮನ್ರೋ ಯಾರು? ಅವನು ಜಾರಿಗೊಳಿಸಿದ ಪದ್ಧತಿ ಯಾವುದು?
೧೫. 'ವುಡ್ಸ್ ವರದಿ' ಎಂದರೇನು?
೧೬. 'ಭಾರತೀಯ ಪುನರುಜ್ಜೀವನ'ವನ್ನು ಎರಡು ವಾಕ್ಯಗಳಲ್ಲಿ ತಿಳಿಸಿ.
೧೭. ರಾಜಾರಾಮಮೋಹನ ರಾಯರು ಹುಟ್ಟಿದ್ದು ಎಲ್ಲಿ?·ಯಾವಾಗ?
೧೮. ಅಹಮದೀಯ ಮತ್ತು ಅಲಿಘರ್ ಚಳವಳಿಗಳ ಬಗೆಗೆ ತಿಳಿಸಿ.
೧೯. 'ಹೋಂರೂಲ್ ಚಳವಳಿ'ಯನ್ನು ಕುರಿತು ಬರೆಯಿರಿ.
೨೦. ಮಂದಗಾಮಿಗಳು ಎಂದರೆ ಯಾರು?
೨೧. ಉಗ್ರಗಾಮಿಗಳ ಸಿದ್ಧಾಂತವೇನು?
೨೨. 'ಭಾರತ ರಾಷ್ಟ್ರೀಯ ಸೈನ್ಯ'ದ ಬಗೆಗೆ ತಿಳಿಸಿ.
೨೩. ಅಸಹಕಾರ ಚಳವಳಿ ಯಾವ ಸ್ವರೂಪದ್ದು?
೨೪. 'ಪೂನಾ ಒಪ್ಪಂದ' ಯಾವ ರೀತಿಯದು?
೨೫. 'ಸೈಮನ್ ಆಯೋಗ'ದ ಬಗೆಗೆ ತಿಳಿಸಿ.
೨೬. ಅಂಬೇಡ್ಕರ್ ಹುಟ್ಟಿದ್ದು ಯಾವಾಗ ಮತ್ತು ಎಲ್ಲಿ?
೨೭. 'ಸ್ವರ್ಣ ಮಂದಿರದ ಘಟನೆ' ಕುರಿತು ತಿಳಿಸಿ.
೨೮. ಮದರ್ ತೆರೆಸಾ ಮೂಲತಃ ಎಲ್ಲಿಯವರು?
೨೯. ಮದರ್ ತೆರೆಸಾ ಅವರ ಮೂಲ ಹೆಸರೇನು? ಹಾಗೂ ಅವರು ಹುಟ್ಟಿದ್ದು ಯಾವಾಗ?

೩೦. ತೆರೆಸಾ ಅವರಿಗೆ ದೊರೆತ ಅತ್ಯುನ್ನತ ಪ್ರಶಸ್ತಿಗಳು ಯಾವುವು?

III. ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ (೫ ಅಂಕಗಳು)

೧. ಭಾರತಕ್ಕೆ ಆಗಮಿಸಿದ ಐರೋಪ್ಯ ವಸಾಹತುಶಾಹಿಗಳು ಯಾರು?

೨. ಐರೋಪ್ಯರ ವಸಾಹತು ನೆಲೆಗಳನ್ನು ಕುರಿತು ಬರೆಯಿರಿ.

೩. ಅಂತಿಮವಾಗಿ ಬ್ರಿಟಿಷರು ಭಾರತದಲ್ಲಿ ನೆಲೆಗೊಳ್ಳಲು ಕಾರಣಗಳೇನು?

೪. ಪ್ಲಾಸಿ ಕದನವನ್ನು ಕುರಿತು ವಿವರಿಸಿ.

೫. ಸಹಾಯಕ ಸೈನ್ಯ ಪದ್ಧತಿ ಎಂದರೇನು? ಇದಕ್ಕೆ ಬಲಿಯಾದವರು ಯಾರು?

೬. 'ಮೊದಲ ಸ್ವಾತಂತ್ರ್ಯ ಸಂಗ್ರಾಮ'ದ ವಿಫಲತೆಗೆ ಕಾರಣಗಳೇನು?

೭. ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಗಳು ಯಾವುವು?

೮. ಮೆಕಾಲೆ ವರದಿಯನ್ನು ಕುರಿತು ಬರೆಯಿರಿ.

೯. ಭಾರತೀಯ ಪುನರುಜ್ಜೀವನಕ್ಕೆ ಕಾರಣವಾದ ಅಂಶಗಳು ಯಾವುವು?

೧೦. ಸೈಯ್ಯದ್ ಅಹ್ಮದ್‌ಖಾನ್‌ರನ್ನು ಕುರಿತು ತಿಳಿಸಿ.

೧೧. ಭಾರತೀಯ ಪುನರುಜ್ಜೀವನಕ್ಕೆ ಅನಿಬೆಸೆಂಟ್‌ರ ಕೊಡುಗೆ ಏನು?

೧೨. ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾದ ಅಂಶಗಳು ಯಾವುವು?

೧೩. 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ ಸ್ಥಾಪನೆ ಬಗೆಗೆ ಬರೆಯಿರಿ.

೧೪. ಭಾರತದಲ್ಲಿನ ಕ್ರಾಂತಿಕಾರಿ ಚಳವಳಿಗಳನ್ನು ಕುರಿತು ವಿವರಿಸಿ.

೧೫. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಪೂರ್ವ ಯುಗದ ಕಾರ್ಯಚಟುವಟಿಕೆಗಳನ್ನು ಕುರಿತು ತಿಳಿಸಿ.

೧೬. ಗಾಂಧಿ ಅವರ ಹೋರಾಟದ ಸ್ವರೂಪವನ್ನು ಕುರಿತು ತಿಳಿಸಿ.

೧೭. ಕ್ವಿಟ್ ಇಂಡಿಯಾ ಚಳವಳಿಯನ್ನು ಕುರಿತು ಬರೆಯಿರಿ.

೧೮. ಅಂಬೇಡ್ಕರ್ ಅವರ ಜೀವನ ಹಾಗೂ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

೧೯. ಪ್ರಧಾನಿಯಾಗಿ ಇಂದಿರಾ ಗಾಂಧಿ ಅವರ ಸಾಧನೆಗಳೇನು?

೨೦. ಸಮಾಜ ಉದ್ಧಾರಕ್ಕಾಗಿ ಮದರ್ ತೆರೆಸಾ ಅವರ ಕಾರ್ಯ ಚಟುವಟಿಕೆಗಳೇನು?

IV. ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ (೧೦ ಅಂಕಗಳು)

೧. 'ಕರ್ನಾಟಿಕ್ ಯುದ್ಧ'ಗಳನ್ನು ಕುರಿತು ವಿಶ್ಲೇಷಿಸಿ.

೨. ಬಕ್ಸಾರ್ ಕದನದ ಕಾರಣ ಮತ್ತು ಪರಿಣಾಮಗಳನ್ನು ಕುರಿತು ವಿವರಿಸಿ.

೩. ೧೮೫೭ ರ ದಂಗೆಯ ಸ್ವರೂಪ, ಕಾರಣ ಹಾಗೂ ಪರಿಣಾಮಗಳನ್ನು ಕುರಿತು ಬರೆಯಿರಿ.

೪. ಭಾರತದ ಆರ್ಥಿಕತೆಯ ಮೇಲೆ ಬ್ರಿಟಿಷ್ ಆಡಳಿತದ ಪ್ರಭಾವವನ್ನು ಕುರಿತು ಬರೆಯಿರಿ.

೫. ಶಿಕ್ಷಣ ಕ್ಷೇತ್ರದಲ್ಲಿ ಬ್ರಿಟಿಷರ ಪ್ರಯೋಗಗಳನ್ನು ಕುರಿತು ಬರೆಯಿರಿ.

೬. 'ಭಾರತೀಯ ಪುನರುಜ್ಜೀವನ'ಕ್ಕೆ ರಾಜಾ ರಾಮಮೋಹನ ರಾಯರ ಕೊಡುಗೆ ಏನು?

೭. ದಯಾನಂದ ಸರಸ್ವತಿ ಅವರು ಭಾರತೀಯ ಪುನರುಜ್ಜೀವನಕ್ಕೆ ನೀಡಿದ ಕೊಡುಗೆಗಳನ್ನು ಕುರಿತು ಬರೆಯಿರಿ.

೮. ವಿವೇಕಾನಂದರ ಬದುಕು ಹಾಗೂ ಸಾಧನೆಗಳನ್ನು ಕುರಿತು ವಿವರಿಸಿ.

೯. ಮಂದಗಾಮಿಗಳಿಗೂ ಹಾಗೂ ತೀವ್ರಗಾಮಿಗಳಿಗೂ ನಡುವೆ ಇದ್ದಂಥ ಸೈದ್ಧಾಂತಿಕ ತಾರತಮ್ಯಗಳನ್ನು ಕುರಿತು ವಿಶ್ಲೇಷಿಸಿ.

೧೦. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅವರ ಪಾತ್ರವನ್ನು ಕುರಿತು ವಿಶ್ಲೇಷಿಸಿ.

೧೧. ಶೋಷಿತರನ್ನು ಕುರಿತು ಅಂಬೇಡ್ಕರ್ ಅವರ ಸಾಧನೆಗಳೇನು? ವಿವರಿಸಿ.

೧೨. ಮದರ್ ತೆರೆಸಾ ಅವರ ಜೀವನ ಹಾಗೂ ಸಮಾಜಮುಖಿ ಸಾಧನೆಗಳನ್ನು ಕುರಿತು ಬರೆಯಿರಿ.

V. ಹೆಚ್ಚಿನ ಜ್ಞಾನಕ್ಕಾಗಿ ಕಾರ್ಯ-ಯೋಜನೆಗಳು (Assignments/Projects)

೧. ನಕಾಶೆಯಲ್ಲಿ ಐರೋಪ್ಯರ ವಸಾಹತು ನೆಲೆಗಳನ್ನು ಗುರುತಿಸಿ.

೨. ಭಾರತದಲ್ಲಿ ಬ್ರಿಟಿಷರು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಲು ಕಾರಣವಾದ ಸ್ಥಿತಿಗತಿಗಳನ್ನು ಕುರಿತು ಪ್ರಬಂಧ ರಚಿಸಿ.

೩. ೧೮೫೭ ರ ದಂಗೆಯ ಮಹತ್ವವನ್ನು ಸಾರುವ ಸ್ಥಳಗಳನ್ನು ನಕಾಶೆಯಲ್ಲಿ ಗುರುತಿಸಿ.

೪. ಮೆಕಾಲೆ ವರದಿ ಹಾಗೂ ಭಾರತದ ಸಂಪತ್ತಿನ ಸೋರಿಕೆಯ ಅಂಕಿ-ಅಂಶಗಳ ವಿವರಗಳನ್ನು ಓ.ಎಚ್.ಪಿ (Overhead Projector) ಮಾಧ್ಯಮಗಳ ಮೂಲಕ ವಿವರಿಸಿ.

೫. ಆಧುನಿಕ ಹಾಗೂ ಪಾಶ್ಚಾತ್ಯ ಶಿಕ್ಷಣದ ಮಾರ್ಗದರ್ಶನದಲ್ಲಿ ಭಾರತದ ಸಮಾಜದಲ್ಲಿನ ಹುಳುಕುಗಳನ್ನು ನಿವಾರಿಸುವಲ್ಲಿ ಪುನರುಜ್ಜೀವನಗೊಳಿಸಲು ಯತ್ನಿಸಿದ ರಾಜಾ ರಾಮಮೋಹನರಾಯರ ಪಾತ್ರವನ್ನು ಕುರಿತು ಪ್ರಬಂಧ ರಚಿಸಿ.

೬. ಯುವ ಜನಾಂಗಕ್ಕೆ ಸ್ವಾಮಿ ವಿವೇಕಾನಂದರು ನೀಡಿದ ಸಂದೇಶವನ್ನು ಕುರಿತು ಪ್ರಬಂಧ ರಚಿಸಿ.

೭. ಮುಸ್ಲಿಂ ಸಮಾಜವು ಆಧುನಿಕತೆಗೆ ಒಗ್ಗಿಕೊಳ್ಳಲು ಸರ್ ಸಯ್ಯದ್ ಅಹ್ಮದ್‌ಖಾನರು ಮಾಡಿದ ಪ್ರಯತ್ನಗಳನ್ನು ಕುರಿತು ಪ್ರಬಂಧ ರಚಿಸಿ.

೮. ಭಗತ್‌ಸಿಂಗ್, ಸುಭಾಷ್ ಚಂದ್ರಬೋಸ್, ಬಾಲಗಂಗಾಧರ ತಿಲಕ್ ಅವರನ್ನು ಕುರಿತ ಪ್ರಬಂಧವನ್ನು ರಚಿಸಿ.

೯. ಅಂಬೇಡ್ಕರ್, ಇಂದಿರಾ ಗಾಂಧಿ ಹಾಗೂ ಮದರ್ ತೆರೆಸಾ ಅವರ ಭಾವಚಿತ್ರಗಳನ್ನು ಸಂಗ್ರಹಿಸಿ.

೧೦. ಮೇಲ್ಕಂಡ ಅನೇಕ ವಿಚಾರಗಳನ್ನು ಕುರಿತು ಚರ್ಚೆಯನ್ನು ಸಹ ನಡೆಸಬಹುದು.

ಭಾಗ - ಸಿ

V ಆಧುನಿಕ ಕರ್ನಾಟಕ

VI ನಕಾಶೆ ರಚನೆ

V ಆಧುನಿಕ ಕರ್ನಾಟಕ

ಅಧ್ಯಾಯ ೫

೫.೧ ಆಧುನಿಕ ಮೈಸೂರಿನ ಉದಯ

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದ ಮೈಸೂರು

ಆಧುನಿಕ ಮೈಸೂರಿನ ಇತಿಹಾಸದಲ್ಲಿ ಕ್ರಿ.ಶ. ೧೭೬೧-೧೭೯೯ ರ ಅವಧಿ ಒಂದು ಪ್ರಮುಖ ಅಧ್ಯಾಯವಾಗಿದೆ. ಈ ಅವಧಿಯಲ್ಲಿ ಮೈಸೂರಿನ ರಾಜಕೀಯ ಪರಿಸ್ಥಿತಿ ಹೈದರಾಲಿ ಹಾಗೂ ಟಿಪ್ಪುಸುಲ್ತಾನರ ಏಳ್ಗೆಗೆ ಕಾರಣವಾಯಿತು. ಅವರು ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಲು ಪ್ರಯತ್ನಿಸಿದರು.

ಹೈದರಾಲಿ

ಹೈದರಾಲಿ ೧೭೨೧ ರಲ್ಲಿ **ಬೂದಿಕೋಟೆಯಲ್ಲಿ** ಜನಿಸಿದನು. ಅವನ ತಂದೆ **ಫತೇ ಮಹಮದ್**. ಅವನ ವಂಶಸ್ಥರು ಅರೇಬಿಯಾದಿಂದ ಭಾರತಕ್ಕೆ ವಲಸೆ ಬಂದು ದೆಹಲಿಯಲ್ಲಿ ನೆಲೆಸಿದರು. ಅಲ್ಲಿಂದ ಗುಲ್ಬರ್ಗಾಕ್ಕೆ ಬಂದರು. ಮುಂದೆ ಅವರು **ಕೋಲಾರಕ್ಕೆ** ಬಂದರು. ಹೈದರನ ತಾಯಿ **ಮಜೀದಾ ಬೇಗಂ**. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಹೈದರ್ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಆದ್ದರಿಂದ ಅವನು ಶಿಕ್ಷಣವನ್ನು ಪಡೆಯಲಾಗಲಿಲ್ಲ.

ಸೈನಿಕನಾಗಿ ಮೈಸೂರಿನ ಸೇವೆಯನ್ನು ಸೇರಿದ ಹೈದರನಿಗೆ ಮೊದಲ ಯುದ್ಧದ ಅನುಭವವಾಗಿದ್ದು ೧೭೪೯ ರಲ್ಲಿ. ಆ ವರ್ಷ ಮೈಸೂರಿನ ಸೈನ್ಯ **ದೇವನಹಳ್ಳಿಗೆ** ಮುತ್ತಿಗೆ ಹಾಕಿದಾಗ ಅವನು ತೋರಿಸಿದ ಶೌರ್ಯದಿಂದ **ದಳವಾಯಿ ನಂಜರಾಜನ** ಗಮನವನ್ನು ಸೆಳೆದನು. ಸಂತೋಷಗೊಂಡ ನಂಜರಾಜ ಅವನನ್ನು 'ನಾಯಕ್' ದರ್ಜೆಗೆ ಏರಿಸಿದನು.

ಹೈದರಾಬಾದಿನಲ್ಲಿ **ನಾಸಿರ್‌ಜಂಗನಿಗೂ ಮುಜಾಫರ್‌ಜಂಗನಿಗೂ** ಕಲಹ ನಡೆಯುತ್ತಿದ್ದಾಗ ಮೈಸೂರಿನ ಸೈನ್ಯ ನಾಸಿರ್‌ಜಂಗನಿಗೆ ಸಹಾಯ ಮಾಡಲು ಹೋಯಿತು. ಮುಂದೆ ನಾಸಿರ್‌ಜಂಗನ ಕೊಲೆಯಾದಾಗ ನಡೆದ ಗಲಭೆಗಳಲ್ಲಿ ಹೈದರ್ ಅಲ್ಲಿಯ ಖಜಾನೆಯ ಒಂದು ಭಾಗವನ್ನು ದೋಚಿಕೊಂಡು ಓಡಿಬಂದನು. ಅದರ ಸಹಾಯದಿಂದ ತನ್ನ ಸೈನಿಕರಿಗೆ ಫ್ರೆಂಚ್ ಸೈನ್ಯಾಧಿಕಾರಿಗಳಿಂದ ತರಬೇತಿ ಕೊಡಿಸಲು ಆರಂಭಿಸಿದನು.

ಮೊದಲನೆಯ **ಕರ್ನಾಟಿಕ್** ಯುದ್ಧದಲ್ಲಿ ಮಹಮದ್ ಆಲಿ ಮೈಸೂರಿನ ಸಹಾಯವನ್ನು ಅಪೇಕ್ಷಿಸಿದನು. ಪ್ರತಿಯಾಗಿ **ತಿರುಚನಾಪಳ್ಳಿಯನ್ನು** ಕೊಡುವುದಾಗಿ ಹೇಳಿದನು. ಅವನ ವಿರೋಧಿ **ಚಂದಾಸಾಹೇಬ್** ಹಾಗೂ ಅವನ ಸಹಾಯಕರಾದ **ಫ್ರೆಂಚರು** ೧೭೫೨ ರಲ್ಲಿ ಸೋತರಾದರೂ **ಮಹಮದ್** ಆಲಿ ತಿರುಚನಾಪಳ್ಳಿಯನ್ನು ಮೈಸೂರಿಗೆ ಕೊಡಲಿಲ್ಲ. ಈ ಯುದ್ಧದಿಂದ ಮೈಸೂರಿಗೆ ಯಾವುದೇ ಲಾಭವಾಗದಿದ್ದರೂ, ಹೈದರ್ ಲಾಭ ಗಳಿಸಿದನು. ಅವನು ಯುರೋಪಿಯನ್ನರ ಯುದ್ಧ ನೀತಿಯನ್ನೂ, ಶಿಸ್ತನ್ನೂ ತಿಳಿದುಕೊಂಡನು. ಅಲ್ಲದೇ ಶಸ್ತ್ರಾಸ್ತ್ರಗಳು ಹಾಗೂ ಬಂದೂಕುಗಳನ್ನು ಅವನು ಪಡೆದುಕೊಂಡನು. ಅಲ್ಲಿಂದ ಹಿಂತಿರುಗಿದ ಮೇಲೆ ಅವನನ್ನು **ದಿಂಡಿಗಲ್‌ನ** ಫೌಜುದಾರನನ್ನಾಗಿ ನೇಮಿಸಲಾಯಿತು. ಇಲ್ಲಿ ಅವನು ತನ್ನ ಸೈನ್ಯವನ್ನು ಹೆಚ್ಚಿಸಿಕೊಂಡನಲ್ಲದೇ, ತನ್ನ ಶಸ್ತ್ರಾಸ್ತ್ರ ಸಂಗ್ರಹಗಳನ್ನೂ ಹೆಚ್ಚಿಸಿಕೊಂಡನು.

ಹೈದರನು ದಿಂಡಿಗಲ್‌ನಲ್ಲಿದ್ದಾಗ ಮೈಸೂರಿನ ರಾಜಕೀಯ ಪರಿಸ್ಥಿತಿ ಹದಗೆಟ್ಟಿತು. ದಳವಾಯಿಗಳು ಅಧಿಕಾರವನ್ನು ಪಡೆದುಕೊಳ್ಳಲು ಪ್ರಯತ್ನಿಸಿದರು. ಇದೇ ಸಮಯದಲ್ಲಿ (೧೭೫೮) **ಪೇಶ್ವೆ ಬಾಲಾಜಿರಾವ್‌ನ** ನೇತೃತ್ವದಲ್ಲಿ ಮರಾಠರು ಮೈಸೂರಿನ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಿದರು. ಅವರಿಗೆ ಹಣಕೊಟ್ಟು ಹಿಂದಕ್ಕೆ ಕಳುಹಿಸಲು ದಳವಾಯಿ ಒಪ್ಪಿಕೊಂಡಿದ್ದನು. ಇದನ್ನು ತಿಳಿದ ಹೈದರನು **ಶ್ರೀರಂಗಪಟ್ಟಣಕ್ಕೆ** ಹಿಂತಿರುಗಿ ಮರಾಠರನ್ನು ಹೊಡೆದಟ್ಟಬೇಕೆಂದೂ ಹಣ ಕೊಡಬಾರದೆಂದೂ ಸಲಹೆ ಮಾಡಿದನು. ಅದರಂತೆ ಅವನೇ ಮರಾಠರೊಂದಿಗೆ ಯುದ್ಧಮಾಡಿ ಅವರನ್ನು ಓಡಿಸಿದನು. ಇದಾದ ನಂತರ ಮೈಸೂರಿನ ಸೈನಿಕರ ದಂಗೆಯನ್ನು ಅಡಗಿಸಿದನು. ಈ ಕಾರಣಗಳಿಂದ ಅವನು ಪ್ರಖ್ಯಾತನಾದನು. ದೊರೆ **ಇಮ್ಮಡಿ ಕೃಷ್ಣರಾಜ ಒಡೆಯರ್** ಅವನಿಗೆ **ಫತೇ ಹೈದರ್ ಬಹದ್ದೂರ್** ಎಂಬ ಬಿರುದನ್ನಿತ್ತು ಸನ್ಮಾನಿಸಿದನು. ಕ್ರಮೇಣ ದಳವಾಯಿಗಳು ಅಧಿಕಾರವನ್ನು ಕಳೆದುಕೊಂಡರು. ಹೈದರ್ ಸರ್ವಾಧಿಕಾರಿಯಾದನು.

ಹೈದರನ ಈ ಬೆಳವಣಿಗೆಯನ್ನು ಗಮನಿಸುತ್ತಿದ್ದ ಬ್ರಿಟಿಷರು ಅವನನ್ನು ಸದೆಬಡಿಯಲು ರಾಜನೊಂದಿಗೆ ಮಾತುಕತೆಯಾಡಲು ಪ್ರಯತ್ನಿಸಿದರು. ಆದರೆ ಇಂಗ್ಲಿಷರ ನೀತಿ ಸರಿಯಾಗಿರಲಿಲ್ಲ. ಬೊಂಬಾಯಿ ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಈ ವಿಷಯದಲ್ಲಿ ಒಮ್ಮತವಿರಲಿಲ್ಲ. ಮದ್ರಾಸ್ ಸರ್ಕಾರ ಮೈಸೂರಿನ ರಾಜನೊಂದಿಗೆ ಸೇರುವ ಪ್ರಯತ್ನ ಪಡುತ್ತಿದ್ದರೆ, ಬೊಂಬಾಯಿಯ ಸರ್ಕಾರ ಅವನ ಸ್ನೇಹವನ್ನು ಪಡೆಯಲು ಪ್ರಯತ್ನಿಸುತ್ತಿತ್ತು.

ಭದ್ರವಾಗಿ ನೆಲೆಯೂರಿದ ನಂತರ ಹೈದರನು ಕೆಲವು ದಿಗ್ವಿಜಯಗಳನ್ನು ಕೈಗೊಂಡನು. ತನ್ನ ಸೈನ್ಯವನ್ನು ವ್ಯವಸ್ಥೆಗೊಳಿಸಿ **ಸಿರಾ, ಚಿತ್ರದುರ್ಗ, ಬಿದನೂರು, ಸೋಂದ** ಮತ್ತು **ಸವಣೂರುಗಳನ್ನು** ವಶಪಡಿಸಿಕೊಂಡನು.

ಆಂಗ್ಲೋ-ಮೈಸೂರು ಯುದ್ಧಗಳು

ಮೊದಲನೆಯ ಆಂಗ್ಲೋ-ಮೈಸೂರು ಯುದ್ಧ (೧೭೬೭-೧೭೬೯)

ಹೈದರನು ದಿಢೀರನೆ ಪ್ರಬಲನಾದದ್ದು ಮರಾಠರಿಗಾಗಲೀ, ನಿಜಾಮನಿಗಾಗಲೀ, ಬ್ರಿಟಿಷರಿಗಾಗಲೀ ಸಹಿಸಲಾಗಲಿಲ್ಲ. ಆದ್ದರಿಂದ ೧೭೬೬ ರಲ್ಲಿ ಮರಾಠರು, ನಿಜಾಮನು ಮತ್ತು ಬ್ರಿಟಿಷ್ ಸರ್ಕಾರ ಇವನನ್ನು ಹತ್ತಿಕ್ಕುವ ಉದ್ದೇಶದಿಂದ ಒಂದು ಮೈತ್ರಿಕೂಟವನ್ನು ರಚಿಸಿಕೊಂಡರು.

೧೭೬೭ ರಲ್ಲಿ ಬ್ರಿಟಿಷರು ಮೈಸೂರಿನ ಮೇಲೆ ಆಕ್ರಮಣ ಮಾಡಿದರು. ಮೊದಲು ಬ್ರಿಟಿಷರೊಂದಿಗಿದ್ದ ನಿಜಾಮ ನಂತರ ಹೈದರನ ಪಕ್ಷವನ್ನು ಸೇರಿದನು. ಆದರೆ ಕೆಲವು ಸಮಯದ ನಂತರ ಬ್ರಿಟಿಷರೊಂದಿಗೆ ಸೇರಿದನು. ಆದರೂ ಹೆದರದ ಹೈದರ್ ಬ್ರಿಟಿಷರನ್ನು ಸೋಲಿಸಿ ಮಂಗಳೂರನ್ನು ವಶಪಡಿಸಿಕೊಂಡನು. ಕ್ರಿ.ಶ. ೧೭೬೯ ರ ಮಾರ್ಚ್ ವೇಳೆಗೆ ಮದ್ರಾಸ್‌ಗೆ ೫ ಮೈಲಿ ಸಮೀಪದಲ್ಲಿದ್ದನು. ಹೆದರಿದ ಬ್ರಿಟಿಷರು ಶಾಂತಿಸಂಧಾನಕ್ಕೆ ಮುಂದಾದರು. ಇದರ ಪರಿಣಾಮವೇ **ಮದ್ರಾಸ್ ಒಪ್ಪಂದ.**

ಮದ್ರಾಸ್ ಒಪ್ಪಂದಕ್ಕೆ ಏಪ್ರಿಲ್ ೧೭೬೯ ರಲ್ಲಿ ಸಹಿ ಹಾಕಲಾಯಿತು. ಈ ಒಪ್ಪಂದದ ಪ್ರಕಾರ ಎರಡೂ ಪಕ್ಷಗಳೂ ತಾವು ಗೆದ್ದ ಪ್ರದೇಶಗಳನ್ನು ಪರಸ್ಪರ ಹಿಂತಿರುಗಿಸುವುದು, ಯುದ್ಧ ಖೈದಿಗಳನ್ನು ಬಿಡುಗಡೆ ಮಾಡುವುದಕ್ಕೆ ಒಪ್ಪಿಕೊಂಡರು. ಬಹಳ ಮುಖ್ಯವಾಗಿ ಈ ಒಪ್ಪಂದದ ಪ್ರಮುಖ ಅಂಶವೆಂದರೆ ಮುಂದಿನ ಯುದ್ಧಗಳಲ್ಲಿ ಪರಸ್ಪರ ಸಹಾಯ ಮಾಡುವುದಾಗಿಯೂ ಒಪ್ಪಿಕೊಂಡರು.

ಮದ್ರಾಸ್ ಒಪ್ಪಂದದ ನಂತರ ಹೈದರ್ ತೃಪ್ತನಾಗಿ ಹಿಂತಿರುಗಿದನು. ಆದರೆ ಕೆಲವೇ ತಿಂಗಳುಗಳಲ್ಲಿ ಮರಾಠರು ಮತ್ತೆ ಮೈಸೂರಿನ ಮೇಲೆ ಆಕ್ರಮಣ ಮಾಡಿದರು. ಮಾಧವರಾವ್‌ನ ನೇತೃತ್ವದಲ್ಲಿ ಮರಾಠರು ೧೭೭೦ ರಲ್ಲಿ ಯುದ್ಧಕ್ಕೆ ಬಂದರು. ಈ ಯುದ್ಧವು ಎರಡೂವರೆ ವರ್ಷಗಳ ಕಾಲ ನಡೆಯಿತು. ಯುದ್ಧವು ಆರಂಭವಾದ ಕೂಡಲೇ ಹೈದರನು ಮದ್ರಾಸ್ ಒಪ್ಪಂದದ ಪ್ರಕಾರ ತನಗೆ ಸಹಾಯ ಮಾಡಬೇಕಿದ್ದ ಬ್ರಿಟಿಷರನ್ನು ಸಹಾಯಕ್ಕಾಗಿ ಕೇಳಿದನು. ಆದರೆ ಬ್ರಿಟಿಷರು ಅವನಿಗೆ ಸಹಾಯ ಮಾಡಲಿಲ್ಲ. ಇದರಿಂದ ಬ್ರಿಟಿಷರೇ ತನ್ನ ನಿಜವಾದ ಶತ್ರುಗಳೆಂದು ಹೈದರನಿಗೆ ಖಚಿತವಾಯಿತು. ಮರಾಠರೊಂದಿಗಿನ ಯುದ್ಧವು ೧೭೭೨ ರ ಜುಲೈನಲ್ಲಿ ಶಾಂತಿಸಂಧಾನದೊಂದಿಗೆ ಮುಕ್ತಾಯವಾಯಿತು. ಇದಾದ ನಂತರ ಹೈದರನು **ಹರಪನಹಳ್ಳಿ, ಚಿತ್ರದುರ್ಗ, ಕೊಡಗು** ಮತ್ತು ಮಲಬಾರ್‌ಗಳನ್ನು ವಶಪಡಿಸಿಕೊಂಡನು.

ಎರಡನೆಯ ಆಂಗ್ಲೋ-ಮೈಸೂರು ಯುದ್ಧ (೧೭೮೦-೧೭೮೪)

೧೭೭೮ ರಲ್ಲಿ ಯುರೋಪ್‌ನಲ್ಲಿ ಫ್ರೆಂಚರಿಗೂ ಇಂಗ್ಲಿಷರಿಗೂ ಆರಂಭವಾದ ಯುದ್ಧದ ಪರಿಣಾಮ ಭಾರತದ ಮೇಲಾಯಿತು. ೧೭೭೯ ರಲ್ಲಿ ನಿಜಾಮ ಮತ್ತು ಮರಾಠರು ಬ್ರಿಟಿಷರ

ವಿರುದ್ಧ ಒಂದು ಒಕ್ಕೂಟವನ್ನು ಮಾಡಿಕೊಂಡರು. ಹೈದರನೂ ಈ ಒಕ್ಕೂಟವನ್ನು ಸೇರಿದನು. ಬ್ರಿಟಿಷರು ಭಾರತದಲ್ಲಿ ಫ್ರೆಂಚರ ವಸಾಹತುಗಳನ್ನು ವಶಪಡಿಸಿಕೊಳ್ಳಲು ಆರಂಭಿಸಿದರು. ೧೭೭೯ ರ ಮಾರ್ಚ್‌ನಲ್ಲಿ ಅವರು ಮಾಹೆಯನ್ನು ವಶಪಡಿಸಿಕೊಂಡರು. ಇದು ಹೈದರನಿಗೆ ಸಹಿಸದಾಗಿತ್ತು. ಕಾರಣ, ಅವನಿಗೆ ಮಾಹೆಯ ಮೂಲಕವೇ ಫ್ರೆಂಚರ ಸಹಾಯವು ಸಿಗುತ್ತಿತ್ತು. ಮಾಹೆಯ ಪತನವಾದರೆ ಆ ಸಹಾಯವು ನಿಂತು ಹೋದಂತೆ. ಈ ಕಾರಣಕ್ಕಾಗಿಯೇ ಹೈದರನು ಬ್ರಿಟಿಷರ ವಿರುದ್ಧ ಯುದ್ಧವನ್ನು ಘೋಷಿಸಿದನು.

೧೭೮೦ ರ ಜುಲೈನಲ್ಲಿ ೮೦,೦೦೦ ಸೈನಿಕರೊಂದಿಗೆ ಹೈದರನು ಬ್ರಿಟಿಷರ ಮೇಲೆರಗಿದನು. ಪೊಲ್ಲಿಲೂರು ಬಳಿ ಬ್ರಿಟಿಷರು ಸೋಲನ್ನನುಭವಿಸಿದರು. ಅವರ ಪರಿಸ್ಥಿತಿ ಚಿಂತಾಜನಕವಾಗಿತ್ತು. ಈ ಸಮಯದಲ್ಲಿ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನು ಸರ್ ಐರ್ ಕೂಟ್ ಎಂಬ ಸಮರ್ಥ ಸೈನ್ಯಾಧಿಕಾರಿಯನ್ನು ಕಳುಹಿಸಿದನು. ಅವನು ೧೭೮೧ ರಲ್ಲಿ ಪೋರ್ಟೋನೋವೊ ಎಂಬಲ್ಲಿ ಹೈದರನನ್ನು ಸೋಲಿಸಿದನು. ಯುದ್ಧವು ಮುಂದುವರೆದಿತ್ತು. ಆದರೆ ಹೈದರನು ೧೭೮೨ ರ ಡಿಸೆಂಬರ್ ೭ ರಂದು ನರಸರಾಯನಪೇಟೆಯಲ್ಲಿ ಬೆನ್ನು ಫಣಿ ವ್ಯಾಧಿಯಿಂದ ನಿಧನನಾದನು.

ಯುದ್ಧದಿಂದಲೇ ಖ್ಯಾತಿಗೆ ಬಂದ ಹೈದರನು ಯುದ್ಧಗಳಲ್ಲಿಯೆ ತೊಡಗಿದ್ದು, ಯುದ್ಧದಲ್ಲಿಯೇ ಮರಣಿಸಿದನು. ಈ ಕಾರಣದಿಂದಾಗಿಯೇ ಅವನು ಆಡಳಿತಕ್ಕೆ ಹೆಚ್ಚು ಗಮನವನ್ನು ಕೊಡಲಾಗಲಿಲ್ಲ.

ಭಾರತದ ಇತಿಹಾಸದಲ್ಲಿ ಹೈದರ್ ಒಬ್ಬ ಉತ್ತಮ ವ್ಯಕ್ತಿಯಾಗಿದ್ದನು. ಸ್ವಪ್ರಯತ್ನದಿಂದ ಮುಂದೆ ಬಂದ ಅವನು ಅತ್ಯಂತ ಧೈರ್ಯಶಾಲಿಯೂ, ಉತ್ತಮ ಕುದುರೆ ಸವಾರನೂ, ಯೋಧನೂ ಆಗಿದ್ದನು. ಅವನು ಅನಕ್ಷರಸ್ಥನಾಗಿದ್ದನು. ಆದರೆ ಅವನ ಜ್ಞಾಪಕಶಕ್ತಿ ಅವನ ಅನಕ್ಷರತೆಯನ್ನು ಮುಚ್ಚಿಹಾಕಿತ್ತು. ಮೈಸೂರಿನ ಇತಿಹಾಸದಲ್ಲಿ ಅವನಿಗೆ ಗೌರವಸ್ಥಾನವನ್ನು ನೀಡಲಾಗಿದೆ.

ಟಿಪ್ಪುಸುಲ್ತಾನ್

ಭಾರತದ ಇತಿಹಾಸದಲ್ಲಿ ಟಿಪ್ಪುಸುಲ್ತಾನ್ ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ. ಬ್ರಿಟಿಷರಿಗೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿದ ವ್ಯಕ್ತಿ ಟಿಪ್ಪುಸುಲ್ತಾನ್. ಇವನು ಕೋಲಾರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೭೫೦ ರ ನವೆಂಬರ್ ೧೦ ರುದು ಹೈದರ್ ಮತ್ತು ಅವನ ಎರಡನೆಯ ಹೆಂಡತಿ ಫಕ್ರುನ್ನಿಸಾಳ ಮಗನಾಗಿ ಜನಿಸಿದನು.

ಹೈದರ್ ತಾನು ಶಿಕ್ಷಣವನ್ನು ಪಡೆಯದಿದ್ದರೂ ತನ್ನ ಮಗನಿಗೆ ಉತ್ತಮ ಶಿಕ್ಷಕರನ್ನು ನೇಮಿಸಿ ಅರೇಬಿಕ್, ಕನ್ನಡ, ಸಂಸ್ಕೃತ, ಉರ್ದು, ಫ್ರೆಂಚ್ ಮತ್ತು ಟಿಪ್ಪು ಇಂಗ್ಲಿಷ್ ಮುಂತಾದ ಭಾಷೆಗಳನ್ನು, ಕತ್ತಿವರಸೆ, ಕುದುರೆ ಸವಾರಿ ಹಾಗೂ ಗುಂಡು ಹೊಡೆಯುವುದನ್ನು

ಕಲಿಸಿದನು. ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಂದೆಯೊಂದಿಗೆ ಯುದ್ಧಗಳಲ್ಲಿ ಭಾಗವಹಿಸಲು ಆರಂಭಿಸಿದನು. ಹೈದರ್ **ಮಲಬಾರ್** ಮೇಲೆ ಆಕ್ರಮಣ ಮಾಡಿದಾಗ ಟಿಪ್ಪು ತನ್ನ ಸಾಹಸವನ್ನು ತೋರಿಸಿದನು. **ಮೊದಲನೆಯ ಆಂಗ್ಲೋ-ಮೈಸೂರು ಯುದ್ಧ**ದಲ್ಲಿ (೧೭೬೭-೧೭೬೯) **ತಿರುಪತ್ತೂರು** ಹಾಗೂ **ವಾಣಿಯಂಬಾಡಿ** ಕೋಟೆಗಳನ್ನು ವಶಪಡಿಸಿಕೊಳ್ಳಲು ತನ್ನ ತಂದೆಗೆ ಸಹಾಯ ಮಾಡಿದನು. ತಂದೆಯ ಜೊತೆ ಜೊತೆಗೇ ಹೋರಾಡಿದ ಟಿಪ್ಪು ಮದ್ರಾಸ್ ಒಪ್ಪಂದವಾದಾಗ ತನ್ನ ತಂದೆಯೊಂದಿಗಿದ್ದನು. ೧೭೬೯-೧೭೭೨ ರ ಮಧ್ಯೆ ನಡೆದ ಮರಾಠರೊಂದಿಗಿನ ಯುದ್ಧದಲ್ಲೂ ಪ್ರಮುಖ ಪಾತ್ರವಹಿಸಿದನು. ಎರಡನೆ ಆಂಗ್ಲೋ-ಮೈಸೂರು ಯುದ್ಧದಲ್ಲಿ **ಕರ್ನಲ್ ಬೇಲಿ** ಮತ್ತು **ಕರ್ನಲ್ ಬ್ರೈತ್‌ವೇಟ್**‌ನನ್ನು ಸೋಲಿಸಿ ಇಂಗ್ಲಿಷರಲ್ಲಿ ಭೀತಿಯನ್ನು ತಂದನು. ೧೭೮೨ ರಲ್ಲಿ ಅವನನ್ನು ಮಲಬಾರಿಗೆ ಕಳುಹಿಸಲಾಯಿತು. ಅಲ್ಲಿ ಯುದ್ಧದಲ್ಲಿ ತೊಡಗಿದ್ದಾಗ ಹೈದರನ ಮರಣದ ಸುದ್ದಿ ತಲುಪಿತು. ತಕ್ಷಣವೇ ಅವನು ನರಸರಾಯನಪೇಟೆಗೆ ಹಿಂತಿರುಗಿದನು. **ಡಿಸೆಂಬರ್ ೨೯, ೧೭೮೨** ರಂದು **ನವಾಬ್ ಟಿಪ್ಪು ಸುಲ್ತಾನ್ ಬಹಾದ್ದೂರ್** ಎಂಬ ಬಿರುದಿನೊಂದಿಗೆ ಸಿಂಹಾಸನವನ್ನೇರಿದನು.

ಎರಡನೆಯ ಆಂಗ್ಲೋ-ಮೈಸೂರು ಯುದ್ಧವನ್ನು ಮುಂದುವರೆಸಿದ ಟಿಪ್ಪು **ಬಿದನೂರು** ಮತ್ತು **ಮಂಗಳೂರ**ನ್ನು ವಶಪಡಿಸಿಕೊಂಡನು. ಆದರೆ ಅಷ್ಟರಲ್ಲಿ ಯುರೋಪ್‌ನಲ್ಲಿ ಬ್ರಿಟಿಷರಿಗೂ ಹಾಗೂ ಫ್ರೆಂಚರಿಗೂ ನಡೆಯುತ್ತಿದ್ದ ಯುದ್ಧವು ಮುಕ್ತಾಯವಾಯಿತು. ಇಲ್ಲಿಯೂ ಬ್ರಿಟಿಷರು ಹಾಗೂ ಟಿಪ್ಪುವಿನ ಯುದ್ಧವು **ಮಂಗಳೂರು ಒಪ್ಪಂದ**ದೊಂದಿಗೆ ಮುಕ್ತಾಯವಾಯಿತು. ಈ ಒಪ್ಪಂದಕ್ಕೆ **ಮಾರ್ಚ್ ೪, ೧೭೮೪** ರಂದು ಸಹಿ ಹಾಕಲಾಯಿತು. ಒಪ್ಪಂದದ ಪ್ರಕಾರ ಎರಡೂ ಪಕ್ಷಗಳು ತಾವು ಗೆದ್ದ ಪ್ರದೇಶಗಳನ್ನು ಪರಸ್ಪರ ಹಿಂತಿರುಗಿಸುವುದು, ಯುದ್ಧ ಖೈದಿಗಳನ್ನು ಬಿಡುಗಡೆ ಮಾಡುವುದಕ್ಕೆ ಸಮ್ಮತಿಸಿದರು.

ಮಂಗಳೂರು ಒಪ್ಪಂದದ ನಂತರ ಟಿಪ್ಪು **ಬಾಲಮ್** ಮತ್ತು **ಕೊಡಗು**ಗಳನ್ನು ವಶಪಡಿಸಿಕೊಂಡನು.

ಮೂರನೆಯ ಆಂಗ್ಲೋ-ಮೈಸೂರು ಯುದ್ಧ (೧೭೯೦-೧೭೯೨)

ಲಾರ್ಡ್ ಕಾರ್ನ್‌ವಾಲೀಸ್ ಭಾರತದ ಗವರ್ನರ್ ಜನರಲ್ ಆಗಿ ಬಂದ ನಂತರ ಭಾರತದಲ್ಲಿ ಬ್ರಿಟಿಷರ ನೀತಿ ಬದಲಾಯಿತು. ಕಂಪನಿಗೆ ಯಾವುದೇ ಯುದ್ಧಗಳಲ್ಲಿ ಆಸಕ್ತಿ ಇಲ್ಲದಿದ್ದರೂ, ಕಾರ್ನ್‌ವಾಲೀಸನಿಗೆ ಭಾರತದ ಬ್ರಿಟಿಷ್ ಸಾಮ್ರಾಜ್ಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಇತ್ತು. ಇದಕ್ಕೆ ತನಗಿರುವ ಅತ್ಯಂತ ದೊಡ್ಡ ಶತ್ರು ಟಿಪ್ಪು ಎಂದು ಕಾರ್ನ್‌ವಾಲೀಸ್ ತಿಳಿದಿದ್ದನು. ಇದಕ್ಕಾಗಿ ೧೭೯೦ ರ ವೇಳೆಗೆ **ಮರಾಠರು** ಹಾಗೂ **ನಿಜಾಮ**ನೊಂದಿಗೆ ಟಿಪ್ಪುವಿನ ವಿರುದ್ಧ ಒಪ್ಪಂದವನ್ನು ಮಾಡಿಕೊಂಡನು. ಟಿಪ್ಪು ಇದರಿಂದ ಕೆರಳಿದನು.

ಆದರೆ **ಮೂರನೆಯ ಆಂಗ್ಲೋ-ಮೈಸೂರು ಯುದ್ಧಕ್ಕೆ** ತಕ್ಷಣದ ಕಾರಣ **ತಿರುವಾಂಕೂರಿನ** ಮೇಲೆ ಟಿಪ್ಪುವಿನ ಆಕ್ರಮಣವಾಗಿತ್ತು. ಯುದ್ಧವು ಎರಡು ವರ್ಷಗಳ ಕಾಲ ನಡೆದು ಮೊದಲ ಹಂತದಲ್ಲಿ ಯಾವುದೇ ನಿಶ್ಚಿತ ಪರಿಣಾಮವೂ ಇರಲಿಲ್ಲ. ಆದ್ದರಿಂದ ೧೭೯೧ ರಲ್ಲಿ ಸ್ವತಃ ಕಾರ್ನ್‌ವಾಲೀಸನೇ ಸೈನ್ಯದ ಮುಂದಾಳತ್ವವನ್ನು ವಹಿಸಿಕೊಂಡು ಬಂದನು. ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದ ಹತ್ತಿರವೇ ಬಂದಿತು. ಈ ಸಮಯದಲ್ಲಿ ಅತ್ಯಂತ ಧೈರ್ಯದಿಂದ ಹೋರಾಡಿದ ಟಿಪ್ಪು ಬ್ರಿಟಿಷರು ಹಿಂದೆ ಸರಿಯುವಂತೆ ಮಾಡಿದನು. ಆದರೆ ಮತ್ತೆ ೧೭೯೧ ರ ಬೇಸಿಗೆಯಲ್ಲಿ ಯುದ್ಧವು ಆರಂಭವಾಗಿ ಕಾರ್ನ್‌ವಾಲೀಸ್ ಶ್ರೀರಂಗ ಪಟ್ಟಣದ ಹತ್ತಿರದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ಫೆಬ್ರವರಿ ೧೭೯೨ ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದರು. ಯುದ್ಧವನ್ನು ಮುಂದು ವರೆಸುವುದು ಅರ್ಥಹೀನವೆಂದು ಭಾವಿಸಿದ ಟಿಪ್ಪು ಶಾಂತಿಸಂಧಾನಕ್ಕೆ ಪ್ರಯತ್ನಿಸಿದನು. ಇದರ ಫಲವೇ **ಶ್ರೀರಂಗಪಟ್ಟಣದ ಒಪ್ಪಂದ.** ಮಾರ್ಚ್ ೧೭೯೨ ರಲ್ಲಿ ಆದ ಈ ಒಪ್ಪಂದದ ಪ್ರಕಾರ ಟಿಪ್ಪು ತನ್ನ ರಾಜ್ಯದ ಅರ್ಧಭಾಗವನ್ನು ಬ್ರಿಟಿಷರಿಗೆ ಕೊಟ್ಟನು. ಇದರಲ್ಲಿ ಹಲವು ಭಾಗಗಳನ್ನು ನಿಜಾಮ ಮತ್ತು ಮರಾಠರು ಪಡೆದುಕೊಂಡರು. ಬ್ರಿಟಿಷರು ಮಲಬಾರ್ ಹಾಗೂ ಕೊಡಗನ್ನು ಪಡೆದರು. ಅಲ್ಲದೆ ಯುದ್ಧ ನಷ್ಟವನ್ನು ತುಂಬಲು ಟಿಪ್ಪು ಬ್ರಿಟಿಷರಿಗೆ **೩೦ ಲಕ್ಷ ಪೌಂಡ್**‌ಗಳನ್ನು ನೀಡಬೇಕಾಯಿತು. ಈ ಹಣವನ್ನು ನೀಡುವವರೆಗೂ ತನ್ನ **ಇಬ್ಬರು ಮಕ್ಕಳನ್ನು** ಒತ್ತೆಯಾಳುಗಳಾಗಿ ಕಳುಹಿಸಬೇಕಾಯಿತು.

ಟಿಪ್ಪು ಫ್ರೆಂಚರ ಸಹಾಯವನ್ನು ಪಡೆಯಲು ರಾಯಭಾರಿಯನ್ನು ಕಳುಹಿಸಿ ಸಮಯ ವ್ಯರ್ಥ ಮಾಡಿದ್ದನು. ತನ್ನ ರಾಜ್ಯದ ರಕ್ಷಣೆಗೆ ಹೆಚ್ಚಿನ ಗಮನವನ್ನು ಹರಿಸಿರಲಿಲ್ಲ. ಅಲ್ಲದೇ ಬ್ರಿಟಿಷರು ಪ್ರಬಲರಾಗಿದ್ದು ಅವರ ಯುದ್ಧನೀತಿ ಹೆಚ್ಚು ಮುಂದುವರೆದಿತ್ತು. ಈ ಎಲ್ಲಾ ಕಾರಣಗಳಿಂದ ಟಿಪ್ಪು ಯುದ್ಧದಲ್ಲಿ ಅವಮಾನಕರ ಸೋಲನ್ನನುಭವಿಸ ಬೇಕಾಯಿತು.

ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧ (೧೭೯೯)

ಮೂರನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಸೋತು ಶ್ರೀರಂಗಪಟ್ಟಣದ ಒಪ್ಪಂದದಿಂದ ಅವಮಾನಿತನಾಗಿದ್ದ ಟಿಪ್ಪು ಸೇಡಿನಿಂದ ಕುದಿಯುತ್ತಿದ್ದನು. ಬ್ರಿಟಿಷರಿಗೂ ಟಿಪ್ಪುವಿನೊಂದಿಗೆ ಇನ್ನೊಂದು ಯುದ್ಧ ಅನಿವಾರ್ಯವೆಂದಾಗಿತ್ತು. ಟಿಪ್ಪು ಫ್ರೆಂಚರೊಂದಿಗೆ ಮಾತುಕತೆಗಳನ್ನು ನಡೆಸಿ ಅವರಿಂದ ಸಹಾಯದ ಭರವಸೆಯನ್ನು ಪಡೆದನು. ಅಲ್ಲದೇ **ಕಾನ್‌ಸ್ಟಾಂಟಿನೋಪಲ್, ಮಾರಿಷಿಯಸ್** ಮತ್ತು **ಕಾಬೂಲ್**‌ಗಳಿಗೂ ತನ್ನ ರಾಯಭಾರಿ ಗಳನ್ನು ಕಳುಹಿಸಿದನು.

೧೭೯೮ ರಲ್ಲಿ **ಲಾರ್ಡ್ ವೆಲ್ಲೆಸ್ಲಿ** ಭಾರತದ ಗವರ್ನರ್ ಜನರಲ್ ಆಗಿ ಬಂದನು. ಫ್ರೆಂಚರೊಂದಿಗೆ ಟಿಪ್ಪುವಿನ ವ್ಯವಹಾರಗಳನ್ನು ಗಮನಿಸಿದ ವೆಲ್ಲೆಸ್ಲಿಗೆ ಇದು ಟಿಪ್ಪು ತಮ್ಮ

ವಿರುದ್ಧ ನಡೆಸುತ್ತಿರುವ ಪಿತೂರಿ ಎನಿಸಿತು. ಆದ್ದರಿಂದ ನಿಜಾಮನೊಂದಿಗೆ ಸಹಾಯಕ ಸೈನ್ಯ ಒಪ್ಪಂದವನ್ನು ಮಾಡಿಕೊಂಡನು. ಮರಾಠರ ಸಹಾಯವನ್ನು ಪಡೆದನು. ಹೀಗೆ ಸಿದ್ಧತೆಗಳನ್ನು ಮಾಡಿಕೊಂಡ ವೆಲ್ಲೆಸ್ಲಿ ಜನರಲ್ ಹ್ಯಾರಿಸ್‌ನ ನೇತೃತ್ವದಲ್ಲಿ ೨೧,೦೦೦ ಸೈನಿಕರನ್ನು ಮೈಸೂರಿನ ಮೇಲೆ ಆಕ್ರಮಣ ಮಾಡಲು ಕಳುಹಿಸಿದನು. ಫೆಬ್ರವರಿ ೧೭೯೯ ರಲ್ಲಿ ಆರಂಭವಾದ ಈ ಯುದ್ಧ ಅತೀ ಶೀಘ್ರದಲ್ಲಿಯೇ ಮುಗಿಯಿತು. ಅಲ್ಲದೇ ನಿರ್ಣಾಯಕವಾಗಿತ್ತು. ೧೭೯೯ ರ ಮೇ ೪ ರಂದು ಶ್ರೀರಂಗಪಟ್ಟಣ ಶತ್ರುಗಳ ಕೈವಶವಾಯಿತು. ಟಿಪ್ಪು ಯುದ್ಧಭೂಮಿಯಲ್ಲಿ ವೀರ ಮರಣವನ್ನಪ್ಪಿದನು.

ಯುದ್ಧದ ಪರಿಣಾಮಗಳು

೧೭೯೯ ರ ಜೂನ್ ೨೨ ರಂದು ಆದ ಶ್ರೀರಂಗಪಟ್ಟಣದ ಒಪ್ಪಂದದಂತೆ ಮೈಸೂರನ್ನು ೪ ಭಾಗಗಳಾಗಿ ವಿಭಜಿಸಲಾಯಿತು. ಅದರಂತೆ ನಿಜಾಮನಿಗೆ ಗುತ್ತಿ, ಗುರ್‍ರಂಕೊಂಡ ಹಾಗೂ ಕೋಟೆಯನ್ನು ಬಿಟ್ಟು ಚಿತ್ರದುರ್ಗವನ್ನೂ, ಬ್ರಿಟಿಷರಿಗೆ ದಕ್ಷಿಣ ಕನ್ನಡ, ವೈನಾಡು, ಧರ್ಮಪುರಿ, ಕೊಯಂಬತ್ತೂರು ಹಾಗೂ ಶ್ರೀರಂಗಪಟ್ಟಣಗಳನ್ನೂ, ಮರಾಠರಿಗೆ ಸೋಂದ ಹಾಗೂ ಹರಪನಹಳ್ಳಿಗಳನ್ನು ನೀಡಲಾಯಿತು. ಉಳಿದ ಭಾಗವನ್ನು ಮೈಸೂರಿನ ಒಡೆಯರಿಗೆ ನೀಡಲಾಯಿತು. ಆರು ವರ್ಷದ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರನನ್ನು ಸಿಂಹಾಸನಕ್ಕೆ ತರಲಾಯಿತು. ಅವನೊಂದಿಗೆ ಸಹಾಯಕ ಸೈನ್ಯ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಬ್ರಿಟಿಷರು ಒಬ್ಬ ರೆಸಿಡೆಂಟನನ್ನು ನೇಮಿಸಿದರು. ಹೀಗೆ ನಿಧಾನವಾಗಿ ಮೈಸೂರಿನ ಆಡಳಿತವನ್ನು ಬ್ರಿಟಿಷರು ತಮ್ಮ ಕೈವಶ ಮಾಡಿಕೊಂಡರು.

ಟಿಪ್ಪುವಿನ ಆಡಳಿತ : ದಕ್ಷ ಆಡಳಿತಗಾರನಾಗಿದ್ದ ಟಿಪ್ಪು ತನ್ನ ರಾಜ್ಯವನ್ನು ೩೭ ಪ್ರಾಂತ್ಯಗಳನ್ನಾಗಿ ವಿಭಾಗಿಸಿದ್ದನು. ಇವುಗಳ ಆಡಳಿತವನ್ನು ಅಸಫ್‌ದಾರರು ನೋಡಿಕೊಳ್ಳುತ್ತಿದ್ದರು. ಈ ಪ್ರಾಂತ್ಯಗಳನ್ನು ತಾಲ್ಲೂಕುಗಳನ್ನಾಗಿ ವಿಭಾಗಿಸಲಾಗಿತ್ತು. ಇವುಗಳು ಅಮಲ್ದಾರರ ಅಧೀನದಲ್ಲಿದ್ದವು. ಗ್ರಾಮ ಆಡಳಿತದ ಕೊನೆಯ ಅಂಗವಾಗಿತ್ತು. ಪಟೇಲ ಗ್ರಾಮದ ಮುಖ್ಯಸ್ಥನಾಗಿದ್ದನು.

ಕೇಂದ್ರ ಸರ್ಕಾರದಲ್ಲಿ ಷರಿಯತ್ ಮತ್ತು ಹಿಂದೂ ಕಾನೂನುಗಳು ಜಾರಿಯಲ್ಲಿದ್ದವು. ಕೇಂದ್ರದಲ್ಲಿ ೧. ಕಂದಾಯ, ೨. ಸೈನಿಕ, ೩. ವಾಣಿಜ್ಯ, ೪. ಕೋಟೆ, ೫. ಭಂಡಾರ ಮತ್ತು ಟಂಕಸಾಲೆ, ೬. ಹಡಗು ಹಾಗೂ ೭. ಟಪಾಲು ಎಂಬ ಏಳು ಇಲಾಖೆಗಳಿದ್ದವು. ಅಲ್ಲದೇ ಕೆಲ ಸಣ್ಣ ಇಲಾಖೆಗಳೂ ಇದ್ದವು. ಕಂದಾಯ ಆಡಳಿತದಲ್ಲಿ ಶಿಸ್ತನ್ನು ತರಲಾಯಿತು. ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಪ್ರೋತ್ಸಾಹ ನೀಡಲಾಯಿತು.

ಮೈಸೂರು, ಬಿದನೂರು, ಶ್ರೀರಂಗಪಟ್ಟಣ, ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ, ಸತ್ಯಮಂಗಳಂ, ದಿಂಡಿಗಲ್, ಗುರ್‍ರಂಕೊಂಡ, ಧಾರವಾಡ ಮತ್ತು ಫರೂಕಾಬಾದ್

ಗಳಲ್ಲಿ ೧೨ ಟಂಕಸಾಲೆಗಳನ್ನು ತೆರೆದನು. ಇಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನು ಹೊರಡಿಸಲಾಯಿತು. **ಮೊಹರ್** ಅಥವಾ **ಅಹಮದಿ** ಚಿನ್ನದ ನಾಣ್ಯವಾಗಿದ್ದರೆ, **ಹೈದರಿ** ಬೆಳ್ಳಿಯ ನಾಣ್ಯವಾಗಿತ್ತು. **ಒಸ್ಮಾನಿ**, **ಜೊಹ್ರಾ** ಮತ್ತು **ಬಹ್ರಂ** ತಾಮ್ರದ ನಾಣ್ಯಗಳಾಗಿದ್ದವು. ಟಿಪ್ಪುವಿನ ಸೈನ್ಯದಲ್ಲಿ ಸೈನಿಕರು, ಕುದುರೆಗಳು ಹಾಗೂ ಫಿರಂಗಿಗಳಿದ್ದವು.

ವ್ಯವಸಾಯಕ್ಕೆ ಪ್ರೋತ್ಸಾಹವನ್ನು ನೀಡಿದ ಟಿಪ್ಪು ನೀರಾವರಿ ಯೋಜನೆಗಳನ್ನು ರೂಪಿಸಿದನು. ರೇಷ್ಮೆ ಮತ್ತು ಸಕ್ಕರೆ ಕೈಗಾರಿಕೆಗಳನ್ನು ಸ್ಥಾಪಿಸಿದನು.

ಕಲೆಯ ಕ್ಷೇತ್ರದಲ್ಲೂ ಟಿಪ್ಪು ಕೆಲವು ಸಾಧನೆಗಳನ್ನು ಮಾಡಿದ್ದಾನೆ. ಶ್ರೀರಂಗಪಟ್ಟಣದ **ದರಿಯಾ ದೌಲತ್‌ಬಾಗ್** ಅರಮನೆ, **ಮಸ್ಜಿದ್-ಇ-ಆಲ**, **ಗುಂಬಜ್-ಇ-ಆಲ** ಅಲ್ಲದೇ ಬೆಂಗಳೂರಿನ **ಬೇಸಿಗೆ ಅರಮನೆಯನ್ನು** ನಿರ್ಮಿಸಿದನು.

ಹೀಗೆ ಟಿಪ್ಪು ಒಬ್ಬ ದಕ್ಷ ಆಡಳಿತಗಾರನಾಗಿ, ಅಪ್ರತಿಮ ವೀರನಾಗಿ ಪ್ರಸಿದ್ಧನಾಗಿದ್ದಾನೆ. ಸ್ವತಂತ್ರ್ಯಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟನು.

೫.೨ ಮೈಸೂರು ಒಡೆಯರ ಪುನರ್‌ಸ್ಥಾಪನೆ

ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಸತತ ಪ್ರಯತ್ನದಿಂದ ಮೈಸೂರಿನಲ್ಲಿ ಒಡೆಯರ್ ಮನೆತನದ ಅಧಿಕಾರ ಮತ್ತೆ ಸ್ಥಾಪಿತವಾಯಿತು. ಬ್ರಿಟಿಷರ 'ಸಹಾಯಕ ಸೈನ್ಯ ಪದ್ಧತಿ'ಯನ್ನು ಒಪ್ಪಿಕೊಂಡ ಮೈಸೂರು ಬ್ರಿಟಿಷರ ಆಶ್ರಿತ ಸಂಸ್ಥಾನಗಳಲ್ಲೊಂದಾಯಿತು. ೧೭೯೯ ರಲ್ಲಿ ಬ್ರಿಟಿಷರು ಮೈಸೂರು ಸಂಸ್ಥಾನವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವಹಿಸಿಕೊಟ್ಟರು. ಆಗ ಮಹಾರಾಜರು ಬಾಲಕರಾಗಿದ್ದುದರಿಂದ ಆಡಳಿತವನ್ನು ನೋಡಿಕೊಳ್ಳಲು ರಾಜಮಾತೆ ಲಕ್ಷ್ಮಣ್ಣಿಯವರು, ರೆಸಿಡೆಂಟ್ ಬ್ಯಾರಿಕ್ಲೋಸ್ ಮತ್ತು ದಿವಾನ್ ಪೂರ್ಣಯ್ಯ ನವರನ್ನೊಳಗೊಂಡ ಒಂದು 'ರಾಜಪ್ರತಿನಿಧಿ ಸಭೆ'ಯನ್ನು ರಚಿಸಿದರು. ೧೭೯೯ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ವಶಕ್ಕೆ ಬಂದ ಮೈಸೂರು ರಾಜ್ಯವು ಇಂದಿನ ಬೆಂಗಳೂರು, ಮೈಸೂರು, ತುಮಕೂರು, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ, ಶಿವಮೊಗ್ಗ, ಕೋಲಾರ, ಮಂಡ್ಯ ಜಿಲ್ಲೆಗಳ ಪ್ರದೇಶಗಳನ್ನೊಳಗೊಂಡಿತ್ತು. ಟಿಪ್ಪು ಸುಲ್ತಾನನ ಮರಣದ ಅನಂತರ ಮಾಡಿಕೊಳ್ಳಲಾದ (೧೭೯೯) 'ಶ್ರೀರಂಗಪಟ್ಟಣದ ಒಪ್ಪಂದ'ದಲ್ಲಿ ಮೈಸೂರನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿತ್ತು. ಅದರಲ್ಲಿನ ನಾಲ್ಕನೆಯ ಭಾಗವೆ ಮುಮ್ಮಡಿ ಕೃಷ್ಮರಾಜ ಒಡೆಯರಿಗೆ ನೀಡಿದ್ದ ಭಾಗ. ಇದನ್ನು ಬ್ರಿಟಿಷರು ಒಡೆಯರಿಗೆ ನೀಡುವುದರ ಮುಖೇನ ರಾಜಮನೆತನವನ್ನು ಪುನರ್ ಸ್ಥಾಪಿಸಿ (Restoration) ಆಡಳಿತಕ್ಕೆ ಅನುವು ಮಾಡಿಕೊಟ್ಟದ್ದು ಗಮನಾರ್ಹವಾದುದು.

ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯-೧೮೩೧)

ಬಾಲಕ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ೩೦.೬.೧೭೯೯ ರಂದು ಸಿಂಹಾಸನಾರೋಹಣ ಮಾಡಿದರು. ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಅಪ್ರಾಪ್ತ ದೊರೆಯ ವಿದ್ಯಾಭ್ಯಾಸಕ್ಕೆ ಸೂಕ್ತ ಏರ್ಪಾಡು ಮಾಡಿದರು. ಕೃಷ್ಣರಾಜ ಒಡೆಯರು ಸಂಸ್ಕೃತ, ಕನ್ನಡ, ಮರಾಠಿ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದರು. ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ೧೭೯೯ ರಲ್ಲಿ ವರ್ಗಾಯಿಸಲಾಯಿತು. ಬ್ರಿಟಿಷ್ ಅಧಿಕಾರಿಗಳ ಸಹಕಾರದಿಂದ ರಾಜ್ಯದಲ್ಲಿ ಉಂಟಾದ ದಂಗೆಗಳನ್ನಡಗಿಸಲಾಯಿತು. ಕ್ರಿ.ಶ. ೧೮೦೦ ರ ಧೊಂಡಿಯವಾಘನ ಮತ್ತು ಮಂಜರಾಬಾದಿನ (ಸಕಲೇಶಪುರ) ಬಲ್ಲಂಗ ಸೀಮೆಯ ಪಾಳೆಯಗಾರ ಕೃಷ್ಣಪ್ಪ ನಾಯಕನ ದಂಗೆಗಳನ್ನು ಅಡಗಿಸಲಾಯಿತು. ಅಂತೆಯೇ ೧೮೦೩ ರಲ್ಲಿ ಮರಾಠರನ್ನು, ೧೮೦೫-೦೬ರಲ್ಲಿ ವೆಲ್ಲೂರಿನ ದಂಗೆಗಳನ್ನು ಸಹ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿತವಾಯಿತು. ೧೮೦೦ ರಲ್ಲಿ ಮೈಸೂರಿನಲ್ಲಿ ಹೊಸ ಅರಮನೆಯನ್ನು ನಿರ್ಮಿಸಲಾಯಿತು. ಲಕ್ಷ್ಮಣತೀರ್ಥ ನದಿಗೆ ಒಂದು ಅಣೆಕಟ್ಟು ನಿರ್ಮಿಸಿ ಅದಕ್ಕೆ ವೆಲ್ಲೆಸ್ಲಿ ಸೇತುವೆ ಎಂದು ಹೆಸರಿಡಲಾಯಿತು. ೧೮೧೧ ರ ವೇಳೆಗೆ ರಾಜರಿಗೆ ೧೬ ವರ್ಷಗಳಾದವು. ಆಗ ಅವರು ಆಡಳಿತವನ್ನು ತಾವೇ ನಿರ್ವಹಿಸಲು ಬಯಸಿದರು.

೧೮೧೧ ರಲ್ಲಿ ರಾಜ್ಯಭಾರವನ್ನು ವಹಿಸಿಕೊಂಡ ಕೃಷ್ಣರಾಜ ಒಡೆಯರು ರಾಜ್ಯದಲ್ಲಿ ಪ್ರವಾಸ ಕೈಗೊಂಡು ಪ್ರಜೆಗಳ ಕುಂದುಕೊರತೆಗಳನ್ನು ನಿವಾರಿಸಲು ಕ್ರಮ ಕೈಗೊಂಡರು. ೧೮೧೬ ಮತ್ತು ೧೮೨೩ ರಲ್ಲಿ ಸಂಭವಿಸಿದ ಕ್ಷಾಮದಿಂದಾಗಿ ರಾಜ್ಯದ ಬೊಕ್ಕಸದ ಅಪಾರ ಹಣ ಜನರ ಪರಿಹಾರ ಕಾರ್ಯಗಳಿಗೆ ವಿನಿಯೋಗವಾಯಿತು. ದಾನ-ದತ್ತಿಗಳಲ್ಲದೆ ಹಲವೆಡೆ ಬ್ರಿಟಿಷರ ಪರವಾಗಿ ಮೈಸೂರು ಸೇನೆ ಹೋರಾಡಿದುದರಿಂದಲೂ ಅಧಿಕ ಹಣ ಖರ್ಚಾಯಿತು. ಇದರಿಂದ ಆರ್ಥಿಕವಾಗಿ ಸ್ವಲ್ಪ ಏರುಪೇರಾಯಿತು. ಇಂಥ ಕಾರಣಗಳನ್ನು ಸರಿಯಾಗಿ ಪರಿಶೀಲಿಸದೆಯೆ ರೆಸಿಡೆಂಟನು 'ರಾಜ್ಯದ ಆಡಳಿತ ಹದಗೆಡುತ್ತಿದೆ' ಎಂದು ಗೌರ್ನರ್ ಜನರಲ್ **ಲಾರ್ಡ್ ವಿಲಿಯಂ ಬೆಂಟಿಂಕ**ನಿಗೆ ವರದಿ ಮಾಡಿದ. ಇದರಿಂದ ಮಹಾರಾಜರನ್ನು 'ಅಸಮರ್ಥ ಆಡಳಿತಗಾರ'ರೆಂದು ಬಿಂಬಿಸುವಂತಾಯಿತು.

ನಗರ ದಂಗೆ

ರಾಜ್ಯದಲ್ಲಿ ೧೮೩೧ ರ ಹೊತ್ತಿಗೆ ಅಲ್ಲಲ್ಲಿ ದಂಗೆಗಳುಂಟಾದವು. ಅವುಗಳಲ್ಲಿ ಮುಖ್ಯವಾದುದು ನಗರ ದಂಗೆ. **ಬಿದನೂರು** ನಗರ ಪ್ರಾಂತ್ಯದ ಜನರು ಕಂದಾಯವನ್ನು ಸರಿಯಾಗಿ ಪಾವತಿ ಮಾಡಿರಲಿಲ್ಲ. ಅಲ್ಲಿಂದ ರಾಜ್ಯದ ಬೊಕ್ಕಸಕ್ಕೆ ೧೩ ಲಕ್ಷ ರೂಪಾಯಿ ಬರಬೇಕಾಗಿತ್ತು. ಅಲ್ಲಿನ ಫೌಜುದಾರನು ಮಹಾರಾಜರ ಅನುಮತಿಯಿಲ್ಲದೆ ೭ ಲಕ್ಷ ರೂಪಾಯಿಗಳಷ್ಟನ್ನು ಮಾಫಿ ಮಾಡಿದ್ದ. ಇದರಿಂದ ಕೋಪಗೊಂಡ ಮಹಾರಾಜರು ಆ ಫೌಜುದಾರರನ್ನು ಕೆಲಸದಿಂದ ವಜಾ ಮಾಡಿ ಅವನ ಜಾಗಕ್ಕೆ **ವೀರರಾಜ** ಎಂಬುವನನ್ನು ನೇಮಿಸಿದರು. ಹೊಸ ಫೌಜುದಾರನು ಹಿಂದಿನ ಫೌಜುದಾರನ ಕಾಲದಲ್ಲಿ ನಡೆದಿದ್ದ ಅಕ್ರಮ ಮತ್ತು ಭ್ರಷ್ಟಾಚಾರವನ್ನು ಪತ್ತೆ ಹಚ್ಚಿದನು. ಇದರಿಂದ ಭಯಗೊಂಡ ಪದಚ್ಯುತ ಫೌಜುದಾರ ಮತ್ತು ಅವನ ಸಂಗಾತಿಗಳು ಒಂದು ತಂತ್ರ ಹೂಡಿದರು. ಇದೇ ಸಮಯದಲ್ಲಿ **ಸದರಮಲ್ಲ**ನೆಂಬುವನು **ಬೂದಿಬಸಪ್ಪ**ನೆಂಬ ಹೆಸರಿನಲ್ಲಿ ಬಿದನೂರಿನ ಸಿಂಹಾಸನಕ್ಕೆ ಹಕ್ಕುದಾರನೆಂದು ಹೇಳಿಕೊಳ್ಳುತ್ತಿದ್ದನು. ಇವನು ಕಳವು ಆಪಾದನೆಗಳಲ್ಲಿ ಹಲವು ಬಾರಿ ಸೆರೆಮನೆ ಸೇರಿದ್ದವನು. ಇವನು ಬಿದನೂರಿನ ರಾಜಪುರೋಹಿತನಿಂದ 'ರಾಜಮುದ್ರೆ'ಯನ್ನು ಕದ್ದನು. ಒಂದು ಸಾರಿ ಅಪರಾಧ ಮಾಡಿ ನ್ಯಾಯಲಯದಿಂದ ಬಿಡುಗಡೆ ಹೊಂದುವಾಗ ನ್ಯಾಯಲಯದ ಮುದ್ರೆಯುಳ್ಳ ಪತ್ರದಲ್ಲಿ **ಬೂದಿಬಸಪ್ಪ ನಗರ ಖಾವಿಂದ** ಎಂದು ಬರೆಸಿದನು. 'ಬಸಪ್ಪ ನಗರ ಖಾವಿಂದ' ಎಂಬ ಇವನ ಸುಳ್ಳು ಪತ್ರವನ್ನು ಜನರು ನಂಬಿದರು. ೧೮೩೦ ರಲ್ಲಿ ಕಂದಾಯ ಬಾಕಿ ವಸೂಲಿ ಸಮಯದಲ್ಲಿ ಉಂಟಾದ ದಂಗೆಯಲ್ಲಿ ತಾನೇ 'ನಗರದ ಅರಸ'ನೆಂದೂ ಘೋಷಿಸಿಕೊಂಡ ಬೂದಿಬಸಪ್ಪನು ರೈತರ ಕಂದಾಯವನ್ನು ಮಾಫಿ ಮಾಡಿರುವುದಾಗಿ ಭರವಸೆ ನೀಡಿದನು. ಪದಚ್ಯುತ ಫೌಜುದಾರನೂ ಇವನ ಜೊತೆ ಸೇರಿಕೊಂಡು ಕ್ಷೋಭೆಯುಂಟು ಮಾಡಿದನು. ಹೀಗಾಗಿ ರಾಜ್ಯದ ಹಲವೆಡೆ ರೈತರು ದಂಗೆಯೆದ್ದರು.

ಮಹಾರಾಜರು ಈ ದಂಗೆಗಳನ್ನಡಗಿಸಲು ಪ್ರಯಾಸಪಡಬೇಕಾಯಿತು. **ತರೀಕೆರೆಯ ಸರ್ಜ ಹನುಮಂತಪ್ಪನಾಯಕನೂ** ದಂಗೆಗೆ ಸೇರಿದನು. ಮಹಾರಾಜರೇ ಸ್ವತಃ ಚನ್ನರಾಯ

ಪಟ್ಟಣಕ್ಕೆ ತೆರಳಿ ರೈತರ ಕಷ್ಟ-ಕಾರ್ಪಣ್ಯಗಳನ್ನು ಪರಿಹರಿಸಲು ಯತ್ನಿಸಿದರು. ವಿಚಾರಣೆ ನಡೆಸಿ ಮುಖ್ಯ ಅಪರಾಧಿಗಳನ್ನು ಗಲ್ಲಿಗೇರಿಸಲಾಯಿತು. ಇನ್ನಿತರರನ್ನು ಸೆರೆಮನೆಗೆ ಹಾಕಲಾಯಿತು. ನಗರ, ಹೊನ್ನಾಳಿ ಮುಂತಾದ ಕಡೆಯ ದಂಗೆಗಳನ್ನು ಬ್ರಿಟಿಷರ ಸಹಾಯದಿಂದ ಅಡಗಿಸಲಾಯಿತು. ಹನುಮಪ್ಪ ನಾಯಕನನ್ನು ಸೆರೆ ಹಿಡಿದು ಮರಣ ದಂಡನೆಗೆ ಗುರಿ ಮಾಡಲಾಯಿತು. ಸದರಮಲ್ಲನು ತಲೆತಪ್ಪಿಸಿಕೊಂಡನು. ಅವನ ಹೆಸರು ಮತ್ತೆ ಕೇಳಿ ಬರಲಿಲ್ಲ. ದಂಗೆಯೇನೊ ಅಡಗಿತು. ಆದರೆ ಈ ಘಟನೆಗಳಿಂದ ಬ್ರಿಟಿಷರ ದೃಷ್ಟಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಅಸಮರ್ಥರೆಂದು ಪರಿಗಣಿತರಾದರು. ತತ್ಪರಿಣಾಮವಾಗಿ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕನು ೧೮೩೧ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಅಧಿಕಾರದಿಂದಿಳಿಸಿ ಮೈಸೂರಿನ ಆಡಳಿತವನ್ನು ತಾನೇ ವಹಿಸಿಕೊಂಡು ಅದರ ಆಡಳಿತ ನಿರ್ವಹಣೆಗಾಗಿ (೧೮೮೧ ರವರೆಗೆ) ಕಮಿಷನರುಗಳನ್ನು ನೇಮಿಸಿದನು. ಹೀಗೆ ೧೮೩೧ ರಲ್ಲಿ ರಾಜ್ಯಾಡಳಿತವು ಮಹಾರಾಜರ ಕೈತಪ್ಪಿ ೫೧ ವರ್ಷಗಳ ಕಾಲ ಬ್ರಿಟಿಷ್ ಕಮಿಷನರುಗಳ ಆಡಳಿತಕ್ಕೊಳಪಟ್ಟಿತು.

ಮಹಾರಾಜರ ಮೇಲೆ ಹೊರಿಸಿದ ಆಪಾದನೆಗಳು ನಿರಾಧಾರವಾದುವುಗಳೆಂದು ಬೆಂಟಿಂಕನಿಗೆ ಸ್ವಲ್ಪಕಾಲದಲ್ಲಿಯೇ ತಿಳಿಯಿತಾದರೂ ಅವನು ಕೈಗೊಂಡ ದುಡುಕಿನ ನಿರ್ಧಾರದಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ಕಳೆದುಕೊಂಡು ರಾಜ್ಯವು ಬ್ರಿಟಿಷ್ ಕಮಿಷನರುಗಳ ಆಡಳಿತಕ್ಕೊಳಪಟ್ಟಿತ್ತು. ಅನಂತರವೂ ಮಹಾರಾಜರು ಅಧಿಕಾರ ವನ್ನು ಮತ್ತೆ ಪಡೆಯಲು ಸತತ ಪ್ರಯತ್ನ ಮಾಡಿದರು. ಪರಿಸ್ಥಿತಿಯನ್ನು ಪರಿಶೀಲಿಸಿ ಮಹಾರಾಜರ ಮೇಲಿನ ಆಪಾದನೆಗಳು ನಿರಾಧಾರವಾದುವುಗಳೆಂದು ಬ್ರಿಟಿಷ್ ಸರ್ಕಾರ ತೀರ್ಮಾನಿಸಿತು. ಮೈಸೂರು ರಾಜ್ಯವನ್ನು ಅದರ ಅರಸು ಮನೆತನಕ್ಕೆ ಹಿಂತಿರುಗಿ ಕೊಡಬೇಕೆಂದೂ, ಮಕ್ಕಳಿಲ್ಲದ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ದತ್ತು ಸ್ವೀಕಾರವಾಗಿದ್ದ ಚಾಮರಾಜ ಒಡೆಯರು ಪ್ರಾಪ್ತ ವಯಸ್ಕರಾದ ಕೂಡಲೇ ದೊರೆಯಾಗಬೇಕೆಂದೂ ಇಂಗ್ಲೆಂಡಿನಲ್ಲಿ ೧೮೬೭ ರಲ್ಲಿ ತೀರ್ಮಾನವಾಯಿತು. ೧೮೬೮ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮರಣ ಹೊಂದಿದರು. ಸಂಕುಚಿತ ದೃಷ್ಟಿಯ, ಅಪ್ರಬುದ್ಧ ಬ್ರಿಟಿಷ್ ಅಧಿಕಾರಿಗಳು ಒಡೆಯರ ಮೇಲೆ ಹೊರಿಸಿದ್ದ ಆರೋಪಗಳೆಲ್ಲ ನಿರಾಧಾರವಾದವುಗಳೆಂದು ಸಿದ್ಧವಾಗಿ ಅವರಿಗೆ ನ್ಯಾಯ ದೊರೆಯುವುದಕ್ಕೆ ೫೦ ವರ್ಷಗಳೇ ಹಿಡಿಯಿತು.

ಹೆಚ್ಚಿನ ವಿಷಯ

[ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಸಾಹಿತ್ಯ

ಮುಮ್ಮಡಿ ಕೃಷ್ಣರಾಜ ಒಡೆಯರು ಟಿಪ್ಪು ನಂತರ ಬ್ರಿಟಿಷರಿಂದ ಮತ್ತೆ ಮೈಸೂರು ಸಂಸ್ಥಾನಕ್ಕೆ ರಾಜರಾಗಿ ಕ್ರಿ.ಶ. ೧೭೯೯ ರಿಂದ ೧೮೩೦ ರ ಅವಧಿಯಲ್ಲಿ ಕೈಗೊಂಡ ಆಡಳಿತ ವಿವರಣೆಗಳನ್ನು ಶ್ರೀತತ್ವನಿಧಿ ಎಂಬ ಗ್ರಂಥದಿಂದ ತಿಳಿಯಬಹುದು. ಕೃಷ್ಣರಾಜ ಒಡೆಯರ್‌ರವರ ರಾಣಿಯವರಾದಂಥ ಚಲುವಾಂಬೆಯು 'ವರನಂದೀ ಕಲ್ಯಾಣ', 'ವೆಂಕಟಾಚಲ ಮಹಾತ್ಮ್ಯ

ಲಾಲಿಯ ಪದ', 'ಅಲುವೇಲು ಮಂಗಮ್ಮನ ಪದ', 'ತಲಕಾವೇರಿ ಮಹಾತ್ಮ್ಯ' ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಈ ಕೃತಿಗಳು ಪ್ರಮುಖವಾಗಿ ಅಂದಿನ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಚರಿತ್ರೆಗಳನ್ನು ತಿಳಿಯಲು ಸಹಕರಿಸುತ್ತವೆ.

ಕರ್ನಾಟಕ ಭೋಜ ಎಂಬ ಹೆಸರಿನಿಂದ ಪ್ರಖ್ಯಾತರಾದಂತಹ ಮುಮ್ಮಡಿ ಕೃಷ್ಣರಾಜ ಒಡೆಯರು ಮಹಾಕವಿಗಳೂ ಹಾಗೂ ಕವಿಗಳ ಪೋಷಕರೂ ಆಗಿದ್ದರೆನ್ನಬಹುದು. ಇದಕ್ಕೆ ನಿದರ್ಶನವೆಂಬಂತೆ ಸ್ವತಃ ತಾವೇ 'ಅಧ್ಯಾತ್ಮ ರಾಮಾಯಣ', 'ಉಷಾ ಪರಿಣಯ', 'ಶಾಕುಂತಲೆ ಟೀಕೆ', 'ಸಿರಿನಂಜುಂಡ ಶತಕ', 'ಶಂಕರ ಸಂಹಿತೆ', 'ಹರಿವಂಶ ಲಾಲಾಸ್ಯ ಮಹಾತ್ಮೆ' ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಇದರ ಫಲವಾಗಿ ಅವರು ಸಂಸ್ಥಾನದಲ್ಲಿ **ಉಭಯ ಕವಿತಾ ವಿಚಕ್ಷಣ** ಎಂಬ ಬಿರುದನ್ನು ಸಹ ಪಡೆದಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಅಳಿಯರಾಗಿದ್ದಂತಹ ಕವಿ **ಲಿಂಗರಾಜರು** ಹಲವು ಭಾಷಾಪಂಡಿತರಾಗಿದ್ದರೆಂಬುದು ಕಂಡು ಬರುತ್ತದೆ. ಇವರು 'ಇಂದ್ರಕೀಲ', 'ನರಪತಿ ಚರಿತೆ', 'ಲಂಕಾದಹನ', 'ವೀರಭದ್ರ ಶತಕ', 'ಶಿವಭಕ್ತ ರತ್ನಾಕರ', 'ಗಿರಿಜ ಕಲ್ಯಾಣ', 'ಗಯ ಚರಿತ್ರೆ' ಮುಂತಾದ ಸುಮಾರು ೪೭ ಅಮೂಲ್ಯ ಗ್ರಂಥಗಳನ್ನು ರಚಿಸಿದ್ದಾರೆ. ಇವರು ಕಲೆ, ಸಂಗೀತ, ವೇದಾಂತ ಮುಂತಾದ ಕ್ಷೇತ್ರಗಳಲ್ಲಿಯೂ ಪಂಡಿತರಾಗಿದ್ದುದರ ಪರವಾಗಿ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚಿಸಿ ಅಂದಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿ **ದೇವಲಾಪುರದ ನಂಜುಂಡ** ಎಂಬ ಮತ್ತೊಬ್ಬ ಕವಿ ಇದ್ದರು.ಇವರು 'ಅಪರಾಧಿ ಸ್ತೋತ್ರ', 'ಪಟ್ಟಾಭಿಷೇಕ ವರ್ಣನೆ', 'ಭಕ್ತಸಾರ', 'ಭೋಗಾವಳಿ', 'ವೃತ್ತರತ್ನಾವಳಿ', 'ಟೀಕೆ', 'ಶಂಕರಾಷ್ಟಕ', 'ಸೌಗಂಧಿಕ ಪರಿಣಯ'ದಂತಹ ಪ್ರಮುಖವಾದ ಗ್ರಂಥಗಳನ್ನು ಬರೆದಿದ್ದಾರೆ. ಅಂದಿನ ಹಾಸ್ಯರಸ ಪ್ರವೀಣರಾಗಿದ್ದಂತಹ ಪುರೋಹಿತ **ಮಾದಪ್ಪಶಾಸ್ತ್ರಿಯು** ಮುಮ್ಮಡಿ ಕೃಷ್ಣರ ಆಸ್ಥಾನದಲ್ಲಿದ್ದರೆಂಬುದು ಗಮನಸೆಳೆಯುವ ವಿಷಯ. ಇವರ ಮಗನೇ ಮೇಲೆ ತಿಳಿಸಿದ **ಅಭಿನವ ಕಾಳಿದಾಸರೆಂದು** ಬಿರುದು ಪಡೆದಿದ್ದಂತಹ **ಬಸಪ್ಪ ಶಾಸ್ತ್ರಿಗಳು**. ಇವರು 'ಶಾಕುಂತಲ', 'ರತ್ನಾವಳಿ', 'ಶೂರಸೇನ ಚರಿತ್ರೆ', 'ವಿಕ್ರಮೋರ್ವಶಿ', 'ಉತ್ತರರಾಮ ಚರಿತ' ಮೊದಲಾದವು ಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅಲ್ಲದೆ **ದೇವಚಂದ್ರನ** 'ರಾಜಾವಳಿ ಕಥಾಸಾರ', **ಕೆಂಪು ನಾರಾಯಣನ** 'ಮುದ್ರಾಮಂಜೂಷ', **ನಂಜುಂಡ ಕವಿಯ** 'ಕೃಷ್ಣರಾಜ ಭಕ್ತಿಸಾರ', **ಶ್ರೀನಿವಾಸ ಕವಿಯ** 'ಕೃಷ್ಣ ಸುಭೋದಯ' ಮೊದಲಾದ ಕೃತಿಗಳನ್ನು ಹೆಸರಿಸಬಹುದು. ಈ ಕಾಲದಲ್ಲಿ ದಾಸ ಸಾಹಿತ್ಯಕ್ಕೂ ಪ್ರೋತ್ಸಾಹ ದೊರೆತಿತ್ತು. ಈ ಕಾಲದ ಕೃತಿಗಳಿಂದ ಅಂದಿನ ಸಾಂಸ್ಕೃತಿಕ ಬದುಕು ಹಾಗೂ ರಾಜಕೀಯ ಚರಿತ್ರೆಯನ್ನು ರಚಿಸಲು ಸಹಕಾರಿಯಾಗಿದೆ.]

ದಿವಾನ್ ಪೂರ್ಣಯ್ಯ

ಕ್ರಿ.ಶ. ೧೭೯೯ ನೆಯ ಇಸವಿಯು ಮೈಸೂರು ದೇಶದ ಇತಿಹಾಸದಲ್ಲಿ ಗಮನಾರ್ಹ ವಾದುದು. ಸುಮಾರು ನಾಲ್ಕು ಶತಮಾನಗಳಿಗಿಂತ ಹೆಚ್ಚು ಕಾಲ ಯದುವಂಶದ ರಾಜರುಗಳ ಕೈಯಲ್ಲಿದ್ದ ಮೈಸೂರು ರಾಜ್ಯದ ಆಡಳಿತ ಸೂತ್ರವು (೧೭೬೧ ರಿಂದ ಸುಮಾರು ನಲವತ್ತು ವರ್ಷಗಳ ಕಾಲ) ಅವರ ಕೈತಪ್ಪಿ ಹೋದದ್ದು ೧೭೯೯ ನೆಯ ಇಸವಿಯಲ್ಲಿ ಪುನಃ ಅದೇ ಯದುವಂಶದ ರಾಜ ಸಂತತಿಯವರಿಗೆ ಬಂದಿತು. ಆಗ ಈ ಸಂತತಿಯ ರಾಜರಾದ ಮುಮ್ಮಡಿ

ಕೃಷ್ಣರಾಜ ಒಡೆಯರಿಗೆ ಇನ್ನೂ ಕೇವಲ ಐದೇ ವರ್ಷ ವಯಸ್ಸು. ಸಿಂಹಾಸನವನ್ನು ಕಳೆದುಕೊಂಡ ಟಿಪ್ಪು ಸುಲ್ತಾನರ ಸಂತತಿಯವರ ಅಸಮಾಧಾನ, ದೇಶದಲ್ಲಿ ಅಶಾಂತತೆಯಂಥ ವಿಷಮ ಸಮಯದಲ್ಲಿ ರಾಜಭಕ್ತಿ, ದೇಶಭಕ್ತಿಗಳಿಂದ ಕೂಡಿದವರಾಗಿ, ಹೊಸದಾಗಿ ಪುನಃ ತಮ್ಮ ರಾಜ್ಯಾಡಳಿತವನ್ನು ಪಡೆದಿದ್ದ ಯದುವಂಶದ ರಾಜ ಮನೆತನದವರಿಗೆ ಬೆಂಬಲವಾಗಿ ನಿಂತು, ಸರಿಯಾದ ಆಡಳಿತ ವ್ಯವಸ್ಥೆಯನ್ನು ಮಾಡಿ ಅಂದಿನ ಮೈಸೂರು ದೇಶಕ್ಕೆ ಭದ್ರವಾದ ತಳಹದಿಯನ್ನು ಹಾಕಿದ ದಕ್ಷ ಆಡಳಿತಗಾರ ಪೂರ್ಣಯ್ಯನವರು.

ಪೂರ್ಣಯ್ಯನವರ ಬಾಲ್ಯ

ಪೂರ್ಣಯ್ಯನವರು **ತಿರುಚನಾಪಲ್ಲಿ**ಯ ಜಿಲ್ಲೆಯಲ್ಲಿ **ತಿರುಕಂಬೂರೆಂಬ** ಗ್ರಾಮದಲ್ಲಿ ಕ್ರಿ.ಶ. ೧೭೪೬ ರಲ್ಲಿ ಜನಿಸಿದರು. ಇವರ ತಂದೆಯು ಮಾಧ್ವ ಬ್ರಾಹ್ಮಣರ ಪಂಗಡಕ್ಕೆ ಸೇರಿದ **ಕೃಷ್ಣಾಚಾರ್ಯ**, ತಾಯಿ **ಲಕ್ಷ್ಮಮ್ಮ**. ಪೂರ್ಣಯ್ಯನವರಿಗೆ ಹನ್ನೊಂದು ವರ್ಷ ವಯಸ್ಸಾದಾಗ ಅವರ ತಂದೆಯವರು ಮರಣ ಹೊಂದಿದರು. ಇವರ ಸಂಸಾರದ ಜೀವನೋಪಾಯಕ್ಕೆ ಯಾವ ಆಸ್ತಿಯೂ ಇಲ್ಲದಿದ್ದುದರಿಂದ ಲಕ್ಷ್ಮಮ್ಮನವರು ನೆಂಟರಿಷ್ಟರ ಮನೆಗಳಲ್ಲಿ ಕೆಲಸ ಮಾಡಿಕೊಂಡು ತಮ್ಮ ಇಬ್ಬರು ಮಕ್ಕಳಾದ **ಪೂರ್ಣಯ್ಯ** ಮತ್ತು **ವೆಂಕಟರಾವ್** ಇವರುಗಳ ಮತ್ತು ತಮ್ಮ ಜೀವನವನ್ನು ನಡೆಸಬೇಕಾಗಿ ಬಂದಿತು. ಅಣ್ಣ ತಮ್ಮಂದಿರಿಗೆ ಆಗಿನ ಕಾಲದಲ್ಲಿದ್ದಂತೆ ಸಾಮಾನ್ಯ ವಿದ್ಯಾಭ್ಯಾಸವು ನಡೆಯಿತು. ೧೭೬೦ ನೆಯ ಇಸವಿಯ ವೇಳೆಗೆ ಸಂಸಾರವು **ಸತ್ಯಮಂಗಲ**ಕ್ಕೆ ತೆರಳಿತು. ಅಲ್ಲಿ ಪೂರ್ಣಯ್ಯನವರು **ರಂಗಸೆಟ್ಟಿ**ಯೆಂಬ ಒಬ್ಬ ವರ್ತಕನ ಬಳಿ ಗುಮಾಸ್ತನ ಕೆಲಸಕ್ಕೆ ಸೇರಿಕೊಂಡರು. ಈ ರಂಗ ಸೆಟ್ಟಿಗೂ ಶ್ರೀರಂಗಪಟ್ಟಣದಲ್ಲಿದ್ದ **ಅನ್ನದಾನಸೆಟ್ಟಿ**ಯೆಂಬ ಒಬ್ಬ ಭಾರೀ ವರ್ತಕನಿಗೂ ಆಹಾರ ಪದಾರ್ಥಗಳನ್ನು ಕೊಂಡು-ಕೊಳ್ಳುವ ವ್ಯವಹಾರವೂ ನಡೆಯುತ್ತಿತ್ತು. ಈ ಅನ್ನದಾನ ಸೆಟ್ಟಿಯು **ಹೈದರಾಲಿ**ಯ ಅರಮನೆಗೆ ದಿನಸಿಗಳನ್ನು ಒದಗಿಸುತ್ತಿದ್ದನು. ಆ ಮೂಲಕ ಹೈದರಾಲಿಯ ದರ್ಬಾರನ್ನು ಸೇರಿದರು.

ಹೆಚ್ಚಿನ ವಿಷಯ

[ಹೈದರಾಲಿ ಆಸ್ಥಾನಕ್ಕೆ ಪ್ರವೇಶ

ಹೈದರಾಲಿಯ ಅರಮನೆಯ ಖಜಾನೆಯಲ್ಲಿ **ಕೃಷ್ಣರಾಯ**ರೆಂಬುವರು ಶಿರಸ್ತೇದಾರರಾಗಿದ್ದರು. ಆ ಕಛೇರಿಯಲ್ಲಿ **ವೆಂಕಟರಮಣಯ್ಯ**ನೆಂಬ ಗುಮಾಸ್ತನೊಬ್ಬನಿದ್ದನು. ಹೈದರಾಲಿಯೊಡನೆ ಅನ್ನದಾನಸೆಟ್ಟಿಯು ನಡೆಸುತ್ತಿದ್ದ ವ್ಯವಹಾರಗಳಿಗೆ ಸಂಬಂಧಪಟ್ಟದ್ದನ್ನೆಲ್ಲಾ ಈ ಗುಮಾಸ್ತ ನೋಡಿಕೊಳ್ಳುತ್ತಿದ್ದನು. ಆಗಾಗ್ಗೆ ಲೆಕ್ಕಾಚಾರ ಮಾಡುತ್ತಿದ್ದ ಕಾಲಗಳಲ್ಲಿ ಪೂರ್ಣಯ್ಯನವರಿಗೆ ಈ ಗುಮಾಸ್ತೆಯ ಪರಿಚಯವಾಗುತ್ತಾ ಬಂದಿತು. ತನಗೂ ಹೈದರಾಲಿಯವರಿಗೂ ಲೆಕ್ಕಾಚಾರದ ವ್ಯವಸ್ಥೆಯಾಗ ಬೇಕಾಗಿದ್ದಾಗಲೆಲ್ಲಾ ಅನ್ನದಾನಸೆಟ್ಟಿಯು ಪೂರ್ಣಯ್ಯನವರನ್ನೇ ಕಳುಹಿಸುತ್ತಿದ್ದನು. ಇಂತಹ ಒಂದು ಸಂದರ್ಭದಲ್ಲಿ ಲೆಕ್ಕಾಚಾರದಲ್ಲಿ ಸ್ವಲ್ಪ ವ್ಯತ್ಯಾಸವು ಕಂಡುಬಂದು ಉಭಯ ಪಕ್ಷದವರೂ ತಮ್ಮದೇ ಸರಿಯೆಂದು ಹಟ ಹಿಡಿವರು. ಕಡೆಗೆ

ಪೂರ್ಣಯ್ಯನವರು ತಮ್ಮ ಜ್ಞಾಪಕಶಕ್ತಿಯಿಂದ ಹೇಳಿದುದು ಸರಿಯಾಗಿತ್ತು. ಇದರಿಂದ ಪೂರ್ಣಯ್ಯನವರ ಮೇಲೆ ಹೈದರಾಲಿಯ ದೃಷ್ಟಿ ಬಿತ್ತು. ಹೈದರಾಲಿಯು ಅವರಿಗೆ ಕೃಷ್ಣರಾಯರ ನೌಕರಿಗೆ ಸರಿಸಮಾನವಾದ ನೌಕರಿಯನ್ನು ಕೊಟ್ಟರು. ಕೃಷ್ಣರಾಯರು ಲೆಕ್ಕ ಪತ್ರಗಳನ್ನು ಮರಾಠೀ ಭಾಷೆಯಲ್ಲಿಡುತ್ತಿದ್ದರು. ಪೂರ್ಣಯ್ಯನವರು ಅಧಿಕಾರಕ್ಕೆ ಬಂದ ನಂತರ ಕನ್ನಡ ಭಾಷೆಯಲ್ಲಿಡುವಂತೆ ಏರ್ಪಾಡು ಮಾಡಿದರು. ಇಲ್ಲಿಂದೀಚೆಗೆ ಇವರಿಗೆ ಮಂತ್ರಿಗೆ ಸಲ್ಲಬೇಕಾದ ಸನ್ಮಾನಗಳೆಲ್ಲಾ ಸಲ್ಲುತ್ತಿದ್ದುವಲ್ಲದೆ ಹೈದರಾಲಿಯ ದರ್ಬಾರಿನಲ್ಲಿ ಇವರು ಪ್ರಮುಖರಲ್ಲೊಬ್ಬರಾದರು. ಇವರ ಜೀವನೋಪಾಯಕ್ಕಾಗಿ ಅಂದು **ಹೆಗ್ಗಡ ದೇವನಕೋಟೆಯ** ತಾಲ್ಲೂಕಿನ **ಮಾರಹಳ್ಳಿ** ಎಂಬ ಗ್ರಾಮವು ಇವರಿಗೆ ಜಹಗೀರಾಗಿ ಕೊಡಲ್ಪಟ್ಟಿತು.

೧೭೮೦ ನೆಯ ಇಸವಿಯಲ್ಲಿ ಹೈದರಾಲಿಯವರು ಯುದ್ಧಕ್ಕೆ ಹೊರಟಾಗ ಪೂರ್ಣಯ್ಯ ಸೈನ್ಯಕ್ಕೆ ಸರಬರಾಜು ಮಾಡುವ ವಿಷಯದಲ್ಲಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾ ಯುದ್ಧವು ಮುಗಿಯುವವರೆಗೂ ಸೈನ್ಯದ ಜೊತೆಯಲ್ಲಿಯೇ ಇದ್ದರು. **ಲಾರ್ಡ್ ಕಾರ್ನ್‌ವಾಲೀಸನು** ಬ್ರಿಟಿಷ್ ಸೈನ್ಯದೊಡನೆ ಫ್ರೆಂಚ್‌ರಾಕ್ ಕಡೆಯಿಂದ ಶ್ರೀರಂಗಪಟ್ಟಣಕ್ಕೆ ರಾತ್ರಿಯ ಕಾಲದಲ್ಲಿ ಮುತ್ತಿಗೆ ಹಾಕಿದಾಗ ಪೂರ್ಣಯ್ಯನವರಿಗೆ ಗುಂಡೇಟು ತಗುಲಿ ಗಾಯವಾಯಿತು. ಆದರೂ ಇವರು ಆಂಗ್ಲ ಸೈನಿಕರ ದೃಷ್ಟಿಗೆ ಗೋಚರವಾಗದಂತೆ ಕಾವೇರಿ ನದಿಯ ಉತ್ತರ ದಡದಿಂದ ಸೈನಿಕರಿಗೆ ಬಟವಾಡೆ ಮಾಡುವುದಕ್ಕಾಗಿ ಹಣವನ್ನು ಹೊತ್ತುಕೊಂಡು ಹೋಗುತ್ತಿದ್ದ ಅನೇಕ ಒಂಟೆಗಳನ್ನು ಹಿಂದಕ್ಕೆ ಸುರಕ್ಷಿತವಾಗಿ ಸಾಗಿಸಿಕೊಂಡು ಬಂದರು. ಒಂದು ರೂಪಾಯಿಯೂ ಕಳೆಯದಂತೆ ಹಣವೆಲ್ಲಾ ಹಿಂದಕ್ಕೆ ಬಂದು ಸೇರಿತು. ಇದು ಪೂರ್ಣಯ್ಯನವರ ರಾಜನಿಷ್ಠೆಯಾಗಿತ್ತು.

ತಾವು ಯಾವ ಯಜಮಾನನ ಬಳಿ ನೌಕರಿ ಮಾಡುತ್ತಿದ್ದರೂ ಆತನಲ್ಲಿ ಪೂರ್ಣವಾದ ಭಕ್ತಿಯಿಂದಲೂ ನಂಬಿಕೆಯಿಂದಲೂ ವರ್ತಿಸುತ್ತಿದ್ದುದು ಪೂರ್ಣಯ್ಯನವರಲ್ಲಿದ್ದ ಬಹಳ ಶ್ಲಾಘನೀಯವಾದ ಗುಣ. ಇದನ್ನು ನೋಡಿಯೇ ಯದುವಂಶದ ರಾಜರಿಗೆ ಮೈಸೂರು ರಾಜ್ಯವು ಪುನಃ ದೊರೆತಾಗ ಪೂರ್ಣಯ್ಯನವರೇ ಮುಖ್ಯಮಂತ್ರಿಗಳಾಗಿರಲು ರಾಜಮಾತೆ ಲಕ್ಷ್ಮಮ್ಮಣ್ಣಿಯವರು ತಮ್ಮ ಒಪ್ಪಿಗೆಯನ್ನಿತ್ತರು. ಹೈದರಾಲಿ ದಕ್ಷಿಣ ಅರ್ಕಾಟಿಗೆ ಯುದ್ಧಕ್ಕೆ ಹೋಗಿ ಹಿಂತಿರುಗುತ್ತಿದ್ದ ಕಾಲದಲ್ಲಿ ತಮ್ಮ ಶಿಬಿರದಲ್ಲಿ ಬೆನ್ನುಪಣೆಯಿಂದ ಮರಣ ಹೊಂದಿದ. ಆಗ ಇವರ ಮಗ **ಟಿಪ್ಪು** ಇವರ ಬಳಿಯಲ್ಲಿರದೆ ನೂರಾರು ಮೈಲು ದೂರದಲ್ಲಿದ್ದ. ಒಡೆಯನ ಈ ಮರಣ ವಾರ್ತೆಯನ್ನು ಹೊರಗೆಡವಿದ ಪಕ್ಷದಲ್ಲಿ ಸೈನ್ಯದಲ್ಲಿ ಅವ್ಯವಸ್ಥೆ ಉಂಟಾಗಿ ದೇಶದಲ್ಲಿ ಗಲಭೆಯೆದ್ದು ಬಿಡುವ ಸಂಭವವಿತ್ತು. ಆ ಸಮಯದಲ್ಲಿ ಪೂರ್ಣಯ್ಯನವರು ಈ ಮರಣದ ವಿಚಾರವನ್ನು ಹೊರಗೆಡಹದೆ ಗುಟ್ಟಾಗಿಟ್ಟು ಅವರ ಶವವನ್ನು ಗೋಪ್ಯವಾಗಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ದೂರದಲ್ಲಿದ್ದ ಟಿಪ್ಪುಸುಲ್ತಾನರಿಗೆ ಸಾವಿನ ಸುದ್ದಿಯನ್ನು ಹೇಳಿ ಕಳುಹಿಸಿದರು. ಅಷ್ಟೇ ಅಲ್ಲದೆ ಹೈದರಾಲಿಯವರು ಜೀವಂತರಾಗಿದ್ದಂತೆಯೇ ತೋರುವಂತೆ ನಟನೆಯನ್ನು ಹೂಡಿ ದಂಗೆಯಾಗುವ ಸಂಭವವನ್ನು ತಪ್ಪಿಸಿದರು.

೧೭೯೯ ನೆಯ ಇಸವಿಯ ಮೇ ಐದರಂದು ಟಿಪ್ಪು ಸುಲ್ತಾನ ರಣರಂಗದಲ್ಲಿ ಮೃತನಾದ ಮೇಲೆ ಮೈಸೂರು ದೇಶದ ಆಡಳಿತ ವ್ಯವಸ್ಥೆಯನ್ನು ಮಾಡಬೇಕಾಯಿತು. ಆಗ ಯದುವಂಶದ

ರಾಜರ ಮನೆತನಕ್ಕೆ ಮೈಸೂರು ದೇಶದ ಆಡಳಿತವು ಪುನಃ ಲಭ್ಯವಾಯಿತು. ಐದು ವರ್ಷದ ಬಾಲಕರಾದ ಮುಮ್ಮಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕವು ಮೈಸೂರಿನ ಹಳೆಯ ಕೋಟೆಯಲ್ಲಿ ಲಕ್ಷ್ಮೀರಮಣಸ್ವಾಮಿಯ ದೇವಾಲಯದ ಬಳಿ ಕಟ್ಟಿದ್ದ ಅಲಂಕೃತವಾದ ಮಂದಿರದಲ್ಲಿ ಏರ್ಪಟಾಯಿತು. ಆ ಸಮಯದಲ್ಲಿ ಜನರಲ್ ಹ್ಯಾರಿಸ್ ರಾಜರಿಗೆ ವಜ್ರದ ಉಂಗುರವನ್ನು ಕೊಟ್ಟು ಪೂರ್ಣಯ್ಯನವರನ್ನು ದಿವಾನರನ್ನಾಗಿ ಗವರ್ನರ್ ಜನರಲ್‌ರವರು ನೇಮಕ ಮಾಡಿರುವುದಾಗಿ ತಿಳಿಸಿದ.ಮುಮ್ಮಡಿ ಕೃಷ್ಣರಾಜ ಒಡೆಯರವರು ಪ್ರಬುದ್ಧರಾಗುವ ವರೆಗೂ ರಾಜಭಕ್ತಿಯಿಂದ ಮಹಾರಾಜರ ಮತ್ತು ದೇಶದ ಹಿತವನ್ನು ಸಾಧಿಸಿಕೊಂಡು ಬರಬೇಕೆಂದೂ ಅನಂತರ ರಾಜರ ಇಷ್ಟದಂತೆ ನಡೆಯಬೇಕೆಂದೂ ಪೂರ್ಣಯ್ಯವರಿಗೆ ತಿಳಿಸಲಾಯಿತು. ಮಹಾರಾಣಿ ಲಕ್ಷ್ಮಮ್ಮಣ್ಣಿಯವರು, "ನೀವು ನಮ್ಮ ಮಕ್ಕಳಾದ ಕೃಷ್ಣರಾಜ ಒಡೆಯರಿಗೆ ಮೈಸೂರಿನ ಆಡಳಿತವನ್ನು ವಹಿಸಿಕೊಟ್ಟುದಕ್ಕಾಗಿಯೂ, ಪೂರ್ಣಯ್ಯನವರನ್ನು ದಿವಾನರನ್ನಾಗಿ ನೇಮಕ ಮಾಡಿದುದಕ್ಕಾಗಿಯೂ ನಮಗೆ ಬಹಳ ಸಂತೋಷವಾಗಿದೆ" ಎಂದು ಬ್ರಿಟಿಷ್ ಅಧಿಕಾರಿಗಳಿಗೆ ಪತ್ರ ಬರೆದು ಧನ್ಯವಾದಗಳನ್ನು ಅರ್ಪಿಸಿದರು. ಆಮೇಲೆ ಬ್ರಿಟಿಷರಿಗೂ ಮೈಸೂರು ರಾಜಮನೆದವರಿಗೂ ಬರೆಸಲ್ಪಟ್ಟ ಕರಾರು ಪತ್ರಕ್ಕೆ ಮಹಾರಾಜರ ಪರವಾಗಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಹಾಗೂ ಪೂರ್ಣಯ್ಯನವರು ಇಬ್ಬರೂ ರುಜು ಹಾಕಿದರು.]

ಪೂರ್ಣಯ್ಯನವರ ಆಳ್ವಿಕೆ

ಪೂರ್ಣಯ್ಯನವರಿಗೆ ವಹಿಸಿಕೊಟ್ಟ ದಿವಾನ್ ಪದವಿ ಹೂವಿನ ಸುಪ್ಪತ್ತಿಗೆ ಆಗಿರಲಿಲ್ಲ. ಹಲವು ಕಂಟಕಗಳಿಂದ ತುಂಬಿತ್ತು. ಸುಲ್ತಾನರ ಮನೆತನದವರಿಗೆ ಅಧಿಕಾರವು ಕೈತಪ್ಪಿ ಹೋಯಿತು. ಯದುವಂಶದ ರಾಜರ ಮನೆತನಕ್ಕೆ ಕೈತಪ್ಪಿ ಹೋಗಿದ್ದ ರಾಜ್ಯಾಡಳಿತದ ಸೂತ್ರಗಳು ಪುನಃ ದೊರಕಿದವು. ಬ್ರಿಟಿಷರು ಇಂಡಿಯಾದಲ್ಲಿ ತಮ್ಮ ಸಮ್ರಾಜ್ಯವನ್ನು ಕಟ್ಟುವ ಪ್ರಯತ್ನವನ್ನು ಮುಂದುವರೆಸುತ್ತಿದ್ದರು. ಇದಕ್ಕೆ ವಿರೋಧವಾಗಿ ಕೆಲವರು ನಿಂತು ಬ್ರಿಟಿಷರೊಡನೆಯೂ ಮತ್ತು ಅವರಲ್ಲಿ ಮಿತ್ರಭಾವದಿಂದ ವರ್ತಿಸುತ್ತಿದ್ದವರೊಡನೆಯೂ ಹೋರಾಡಲು ಸಿದ್ಧರಾಗಿದ್ದರು. ಇದರ ಜೊತೆಗೆ ಎಲ್ಲೆಲ್ಲಿಯೂ ಅಶಾಂತಿಯು ತಾಂಡವಾಡು ತ್ತಿತ್ತು. ಯುದ್ಧಗಳ ವೆಚ್ಚವನ್ನು ಹೊತ್ತು ಕಷ್ಟ-ನಷ್ಟಗಳನ್ನು ಅನುಭವಿಸಿ ಮೈಸೂರು ಸಂಸ್ಥಾನದ ಪ್ರಜೆಗಳು ಬೇಸತ್ತು ಬೆಂಡಾಗಿದ್ದರು. ಇವೆಲ್ಲದರ ಜೊತೆಗೆ ಪೂರ್ಣಯ್ಯನವರಿಗೆ ದೊರಕಿದ್ದ ಅಧಿಕಾರವನ್ನು ನೋಡಿ ಅಗಾಧ ಅಸೂಯೆಪಟ್ಟು ಹೇಗಾದರೂ ಮಾಡಿ ಅವರ ಹೆಸರಿಗೆ ಕಳಂಕವನ್ನು ತರಬೇಕೆಂದು ಕೆಲವರು ದೃಢಸಂಕಲ್ಪ ಮಾಡಿಕೊಂಡಿದ್ದರು. ಇಂಥ ವಿಷಮ ಸನ್ನಿವೇಶದಲ್ಲಿ ಪೂರ್ಣಯ್ಯನವರು ದಿವಾನ್ ಪದವಿಗೆ ನೇಮಿಸಲ್ಪಟ್ಟರು. ಇವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡೊಡನೆಯೆ ಹಲವು ಸಮಸ್ಯೆಗಳು ಎದುರಾದವು. ಇವರಿಗೆ ತಲೆದೋರಿದ್ದ ಅಸಮಾಧಾನಗಳನ್ನು ಅಡಗಿಸಿ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡ ಬೇಕಾದುದು ಮೊಟ್ಟ ಮೊದಲನೆಯ ಕೆಲಸವಾಗಿತ್ತು. ಸುಮಾರು ಒಂದು ಶತಮಾನದಿಂದಲೂ ನಡೆದ ಯುದ್ಧಗಳಿಂದುಂಟಾಗಿದ್ದ ನಷ್ಟಗಳನ್ನು ಪರಿಹರಿಸಿ ಅಭಿವೃದ್ಧಿ ಕಾರ್ಯಗಳನ್ನು

ಕೈಗೊಳ್ಳಬೇಕಾಗಿತ್ತು. ಇವೆಲ್ಲಕ್ಕಿಂತ ಮೇಲಾಗಿ ಬ್ರಿಟಿಷರೊಡನೆ ಮಾಡಿಕೊಂಡ ಕರಾರಿನ ಷರತ್ತುಗಳನ್ನು ಚಾಚು ತಪ್ಪದಂತೆ ನಡೆಸಿಕೊಂಡು ಬರಬೇಕಾದ ದೊಡ್ಡ ಜವಾಬ್ದಾರಿಯೊಂದು ಪೂರ್ಣಯ್ಯನವರ ಮೇಲಿತ್ತು. ಅದರಲ್ಲಿಯೂ ಕರಾರಿನ ಷರತ್ತುಗಳ ಪ್ರಕಾರ ಮೈಸೂರು ಸಂಸ್ಥಾನದ ರಕ್ಷಣೆಗಾಗಿ ಬೇಕಾಗಿದ್ದ ಹಣ ವರ್ಷವೊಂದಕ್ಕೆ ಇಪ್ಪತ್ತು ನಾಲ್ಕೂವರೆ ಲಕ್ಷ ರೂಪಾಯಿಗಳು. ಈ ವೆಚ್ಚವನ್ನು ಪ್ರತಿವರ್ಷ ಮೈಸೂರು ಸರ್ಕಾರವೇ ಸಲ್ಲಿಸಬೇಕಾಗಿತ್ತು. ಇಂಥ ಸನ್ನಿವೇಶದಲ್ಲಿ ಪೂರ್ಣಯ್ಯನವರು ದಿವಾನ್ ಮತ್ತು ರೀಜೆಂಟ್ ಅಧಿಕಾರವನ್ನು ೧೭೯೯ ರಲ್ಲಿ ವಹಿಸಿಕೊಂಡು ೧೮೧೧ ರವರೆಗೂ ಹನ್ನೆರಡು ವರ್ಷಗಳ ಕಾಲ ಆಡಳಿತವನ್ನು ಸುಸೂತ್ರವಾಗಿ ನಡೆಸಿ ದೇಶದ ಸರ್ವತೋಮುಖ ಅಭಿವೃದ್ಧಿಯಾಗುವಂತೆ ಕ್ರಮಕೈಗೊಂಡರು. ನಿವೃತ್ತಿಯ ನಂತರ ರಾಜ್ಯಕ್ಕೆ ಸಲ್ಲಿಸಿದ ಅವರ ಸೇವೆಯನ್ನು ಪರಿಗಣಿಸಿ ಯಳಂದೂರು ತಾಲ್ಲೂಕನ್ನು ಜಹಗೀರಾಗಿ ಕೊಡಲಾಯಿತು. ಪೂರ್ಣಯ್ಯನವರು ೧೮೧೨ ರಲ್ಲಿ ನಿಧನರಾದರು.

೫.೩ ಕಮಿಷನರುಗಳ ಆಳ್ವಿಕೆ

ಹೆಚ್ಚಿನ ವಿಷಯ

[ಕಮಿಷನರುಗಳ ಆಳ್ವಿಕೆಯ ಸ್ಥಾಪನೆಗೆ ಕಾರಣಗಳು

೧೭೯೯ ರಲ್ಲಿ ೪ನೆಯ ಆಂಗ್ಲೋ-ಮೈಸೂರು ಯುದ್ಧ ಟಿಪ್ಪುವಿನ ಸೋಲಿನೊಂದಿಗೆ ಕೊನೆಗೊಂಡಿತು ಮತ್ತು ಈ ಯುದ್ಧದ ಪರಿಣಾಮವಾಗಿ ಬ್ರಿಟಿಷರು ಮೈಸೂರನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರು. ಬ್ರಿಟಿಷರು ಮೈಸೂರನ್ನು ನಿಜಾಮನೊಂದಿಗೆ ಮತ್ತು ಮರಾಠರಿಗೆ ಹಂಚಿದರು. ಹಾಗೂ ಮಿಕ್ಕಿರುವ ಪ್ರದೇಶದಲ್ಲಿ ಬ್ರಿಟಿಷರು ಮೈಸೂರಿನ ಸಿಂಹಾಸನವನ್ನು ಪುನಃ ಮೈಸೂರನ್ನು ಆಳುವ ಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರ್‌ಗೆ ನೀಡಿದರು. ಹೀಗಾಗಿ ಮೈಸೂರಿನಲ್ಲಿ ದೇಶೀಯ ರಾಜ್ಯ ಪುನರ್‌ಸ್ಥಾಪನೆಯಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರರ ಆಳ್ವಿಕೆ ೧೮೩೧ ರವರೆಗೂ ನಡೆಯಿತು. ಆನಂತರ ಮೈಸೂರಿನಲ್ಲಿ ಕಮಿಷನರ್‌ಗಳ ಆಳ್ವಿಕೆ ಪ್ರಾರಂಭವಾಯಿತು. ಅದಕ್ಕೆ ಅಂದಿನ ಸನ್ನಿವೇಶ ಮತ್ತು ರಾಜಕೀಯ ಬೆಳವಣಿಗೆಗಳೇ ಕಾರಣವಾದವು.

ಮುಮ್ಮಡಿ ಕೃಷ್ಣರಾಜ ಒಡೆಯರ್ರವರ ಆಳ್ವಿಕೆಯಲ್ಲಿ **ದಿವಾನ ಪೂರ್ಣಯ್ಯ**ನವರು ಕಂದಾಯ ವಸೂಲಿಯನ್ನು ಉತ್ತಮಪಡಿಸಲು ಅನೇಕ ಕ್ರಮಗಳನ್ನು ಕೈಗೊಂಡರು. ಈ ಪದ್ಧತಿ ಯಲ್ಲಿ ಪ್ರತಿಯೊಂದು ತಾಲ್ಲೂಕಿನಿಂದಲೂ ನಿಗದಿತಪಡಿಸಿದ ಕಂದಾಯವನ್ನು ವಸೂಲು ಮಾಡುವ ಜವಾಬ್ದಾರಿಯನ್ನು ಅಮಲ್ದಾರರಿಗೆ ವಹಿಸಲಾಯಿತು. ರೈತರಿಗೆ ತೊಂದರೆ ಉಂಟಾಗ ದಂತೆ ಕೆಲವು ಕ್ರಮಗಳನ್ನು ಕೈಗೊಂಡಿದ್ದರೂ, ರೈತರಿಗೆ ಸಾಕಷ್ಟು ಸಹಾಯ ಒದಗಿಸಿದಂತಾಗಲಿಲ್ಲ. ಕಾಲಕ್ರಮೇಣ ರೈತರಲ್ಲಿ ಅಸಮಾಧಾನ ಮತ್ತು ಅಶಾಂತಿ ಬೆಳೆಯಲು ಪ್ರಾರಂಭವಾಯಿತು. ೧೮೩೦-೩೧ ರಲ್ಲಿ **ನಗರ** ಎಂಬಲ್ಲಿ ದಂಗೆಯೆಂದು ಪ್ರಾರಂಭವಾಯಿತು. ಮತ್ತು ಇತರ ಸ್ಥಳಗಳಿಗೂ ಹರಡಲು ಪ್ರಾರಂಭವಾಯಿತು.

ಶಿವಮೊಗ್ಗದ ರೈತನ ಮಗನಾದ **ಬುದಿ ಬಸವಪ್ಪ**ನೆಂದು ಕರೆಯಲ್ಪಟ್ಟಿದ್ದ **ಸರದಾರ್ (ಸಾದರ)** ಮಲ್ಲನ ನಾಯಕತ್ವದಲ್ಲಿ ನಗರದ ದಂಗೆ ಪ್ರಾರಂಭವಾಯಿತು. **ಬಿದನೂರಿನ** ಸಿಂಹಾಸನವನ್ನೇರುವ ಹಕ್ಕು ತನಗಿದೆ ಎಂದು ಸರದಾರನು ವಾದಿಸಿದನು. ಈ ಅಪರಾಧಿ ಯುವಕನು ೨೦ ವರ್ಷ ವಯಸ್ಸಾಗುವ ಮುನ್ನವೇ ಅನೇಕ ಬಾರಿ ಕಳ್ಳತನದ ಆರೋಪದ ಮೇಲೆ ಬಂಧಿಸಲ್ಪಟ್ಟಿದ್ದನು.

ಆನಂತರ ಆತನು ಕೊನೆಯ ಪಾಳೆಗಾರನ ಧಾರ್ಮಿಕ ಗುರುವಾದ ಲಿಂಗಾಯಿತ ಪುರೋಹಿತ ನಲ್ಲಿ ಸೇವೆ ಸಲ್ಲಿಸುತ್ತಿದ್ದನು. ಆತ ಕೊನೆಯ ಪಾಳೆಗಾರನ ಮುದ್ರಿಕೆ ಉಂಗುರವನ್ನು ಹೊಂದಿದ್ದನು. ಆ ಪುರೋಹಿತನು ನಿಧನವಾದ ನಂತರ **ಬುದಿ ಬಸವಪ್ಪ** ಆ ಮುದ್ರಿಕೆ ಉಂಗುರವನ್ನು ಹೊಂದಿದ್ದನು. ಅವನ್ನು ಆ ಮುದ್ರಿಕೆಯನ್ನು ಪಡೆದುಕೊಂಡು ಬುದಿ ಬಸವಪ್ಪ ನಗರದ ಪಾಳೆಗಾರನ ವಂಶಸ್ಥ ತಾನೇ ಎಂಬ ಸುಳ್ಳು ಸುದ್ದಿ ಹಬ್ಬಿಸಿದನು. ತಾನೇ ನಗರದ **ದೊಡ್ಡ ಬಸವಪ್ಪನ ಮಗ** ಎಂದು ಹೇಳಿಕೊಂಡನು ಮತ್ತು ನಗರದ ಪಾಳೆಗಾರನಾಗಿ ಗುರುತಿಸಲ್ಪಟ್ಟನು.

೧೮೩೦ ರ ನಂತರ ಆತನನ್ನು ನಗರದ ರಾಜನೆಂದು ಘೋಷಿಸಲಾಯಿತು. ನಗರದ ಫೌಜುದಾರನಾದ ವೀರರಾಜ್ ಅರಸ್ ನಗರ ಪ್ರಾಂತದಿಂದ ಕಂದಾಯ ಸಂಗ್ರಹಿಸಲು ಪ್ರಯತ್ನಿಸಿದಾಗ ಬುದಿ ಬಸವಪ್ಪ ತನಗೆ ಬೆಂಬಲ ನೀಡಿದರೆ ರೈತರ ಸಾಲಗಳನ್ನೆಲ್ಲಾ ಮನ್ನಾ ಮಾಡುವುದಾಗಿ ಹಾಗೂ ಸರ್ಕಾರದ ತೆರಿಗೆಗಳನ್ನು ಕಡಿಮೆ ಮಾಡಿಸುವುದಾಗಿ ಆಶ್ವಾಸನೆಯನ್ನಿತ್ತನು. ಸೈನ್ಯವೊಂದನ್ನು ಕಟ್ಟಿ ಕೆಲವು ಕೋಟೆಗಳನ್ನು ಆಕ್ರಮಿಸಿಕೊಂಡನು. ಆತನ ರೈತಬಾಂಧವರ ಸಂಖ್ಯೆ ಹೆಚ್ಚಾಯಿತು ಮತ್ತು ಅವರು ಸರ್ಕಾರಿ ಅಧಿಕಾರಿಗಳಿಗೆ ತೆರಿಗೆ ನೀಡಲು ನಿರಾಕರಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಆ ದಂಗೆಯನ್ನು ನಿಗ್ರಹಿಸಿದರು. ಆದರೆ ಬ್ರಿಟಿಷರು ಮೈಸೂರು ರಾಜ್ಯದ ಅರಾಜಕತೆ ಮತ್ತು ಗೊಂದಲಮಯ ಪರಿಸ್ಥಿತಿಯನ್ನು ಗಮನಿಸಿದರು. ಈ ದುರ್ಘಟನೆಯು ಮಹಾರಾಜರ ದುರಾಡಳಿತದಿಂದ ಉಂಟಾಗಿದೆ ಎಂದು ಕಂಪನಿಯ ಅಧಿಕಾರಿಗಳು ಭಾವಿಸಿದರು. ಕಂಪನಿಯು ೪ ಸದಸ್ಯರನ್ನು ಒಳಗೊಂಡ ಆಯೋಗವೊಂದನ್ನು ಈ ದುರ್ಘಟನೆಯ ಮೂಲವನ್ನು ಕುರಿತು ವಿಚಾರಣೆ ನಡೆಸಲು ಹಾಗೂ ಮೈಸೂರಿನ ಗಲಭೆಗಳನ್ನು ನಿಗ್ರಹಿಸಲು ಸ್ಥಾಪಿಸಿತು. ಈ ಆಯೋಗವು ಅದರ ವರದಿಯನ್ನು ೧೮೩೩ ರಲ್ಲಿ ಮಂಡಿಸಿತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ದುರಾಡಳಿತವನ್ನು ಬಹಿರಂಗಪಡಿಸಿತು. ಅವರು ರಾಜ್ಯದ ಕ್ಷೇಮಾಭಿವೃದ್ಧಿಯಲ್ಲಿ ಯಾವ ಆಸಕ್ತಿಯನ್ನು ಹೊಂದಿರದ ಸ್ವಾರ್ಥಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಮಹಾರಾಜರ ದುಬಾರಿ ಖರ್ಚಿನಿಂದ ಬೊಕ್ಕಸ ಬರಿದಾಗಿದೆ ಎಂದು ಪರಿಗಣಿಸಲಾಯಿತು. ಬ್ರಾಹ್ಮಣರಿಗೆ ತೆರಿಗೆರಹಿತ ಭೂಮಿಯ ದಾನವೇ ರಾಜ್ಯದ ಆರ್ಥಿಕ ದುಃಸ್ಥಿತಿಗೆ ಕಾರಣವಾಗಿತ್ತು. ಅಲ್ಲದೆ ಅದರಿಂದ ರಾಜ್ಯದ ಸಾಲವೂ ಹೆಚ್ಚಾಗಿತ್ತು.

ಬ್ರಿಟಿಷರೊಂದಿಗೆ ಮಾಡಿಕೊಂಡ ಕರಾರುಗಳ ಪ್ರಕಾರ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಬ್ರಿಟಿಷ್ ಸರ್ಕಾರಕ್ಕೆ ವಾರ್ಷಿಕ ಸಹಾಯ ಧನ ನೀಡಲು ಸಾಧ್ಯವಾಗಲಿಲ್ಲ. ಭೂಕಂದಾಯದಿಂದ ರಾಜ್ಯದ ಆದಾಯ ಕಡಿಮೆಯಾಯಿತು. ರಾಜರು ತಮ್ಮ ಆಪ್ತರಿಗೆ ಅಪಾರವಾಗಿ ತೆರಿಗೆರಹಿತ ಭೂಮಿಯನ್ನು ದಾನವಾಗಿ ನೀಡಿದರು. ರಾಜ್ಯದ ಸೈನಿಕರಿಗೆ ಸಾಕಷ್ಟು ಸಂಭಾವನೆ ನೀಡಲು ಸಾಧ್ಯವಿರಲಿಲ್ಲ. ರಾಜ್ಯದ ಸಾಲವು ಹೆಚ್ಚಾಯಿತು. ಅದು ಮೈಸೂರಿನ ದುಃಸ್ಥಿತಿಗೆ ಕಾರಣವಾಯಿತು. ಬಹುತೇಕ ಅಧಿಕಾರಿಗಳು ಭ್ರಷ್ಟರಾಗಿದ್ದರು ಮತ್ತು ಅಸಮರ್ಥರಾಗಿದ್ದರು. ೧೮೧೪ ರಲ್ಲಿ ರಾಜ್ಯದಲ್ಲಿ ಸುಮಾರು ೧೭೮ ಅಮಲ್ದಾರರಿದ್ದರು. ಆದರೆ ೬೮ ಅಧಿಕಾರಿಗಳಿಗೆ ಮಾತ್ರ ಕಂದಾಯ ದಾಖಲೆಗಳನ್ನು ಕುರಿತು ಪೂರ್ವಾನುಭವವಿತ್ತು. ತಮ್ಮ ಸ್ಥಳೀಯ ತಾಲ್ಲೂಕುಗಳಲ್ಲಿ ಶಾಶ್ವತವಾದ ಹಿತಾಸಕ್ತಿಯನ್ನು ಹೊಂದುವುದನ್ನು ತಡೆಯಲು ಆ ಅಧಿಕಾರಿಗಳನ್ನು ಆಗಿಂದಾಗ್ಗೆ ವರ್ಗಾಯಿಸಲಾಗುತ್ತಿತ್ತು. ಕೆಲವು ಅಧಿಕಾರಿಗಳು ತೆರಿಗೆ ಕಟ್ಟುತ್ತಿದ್ದವರ ಹೆಸರುಗಳನ್ನು ರಹಸ್ಯವಾಗಿಟ್ಟು, ದತ್ತಿಗಳನ್ನು ದುರುಪಯೋಗಪಡಿಸಿ ಕೊಳ್ಳುತ್ತಿದ್ದರು ಮತ್ತು ಸರ್ಕಾರದ ಆಸ್ತಿಯನ್ನು ಅಕ್ರಮವಾಗಿ ವಶಪಡಿಸಿಕೊಳ್ಳುತ್ತಿದ್ದರು. ಈ ಅಧಿಕಾರಿಗಳು ಲಂಚಗಳನ್ನು ಪಡೆದುಕೊಂಡು ಭೂಮಿಯ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡುತ್ತಿದ್ದರು. ಫಲವತ್ತಾದ ಭೂಮಿಯನ್ನು 'ಬಂಜರು ಭೂಮಿ' ಎಂದು ದಾಖಲೆಗಳಲ್ಲಿ ಬರೆಸಿದರು. ಕಂದಾಯ ಅಧಿಕಾರಿ

ಗಳು ರೈತರು ನೀಡಿದ ದೂರುಗಳನ್ನು ರಾಜನಿಗೆ ಮುಟ್ಟದಂತೆ ನೋಡಿಕೊಂಡರು. ಈ ಎಲ್ಲ ಅಂಶಗಳನ್ನು ರಾಜನ ವಿರುದ್ಧ ಜನರಲ್ಲಿ ಬೆಳೆಯುತ್ತಿದ್ದರಿಂದ ಅಸಮಾಧಾನಕ್ಕೆ ಕಾರಣವಾದವು.

ರಾಜನ ಆಳ್ವಿಕೆಯ ಅಂತ್ಯದಲ್ಲಿ ಮಳೆಯ ಕೊರತೆಯಿಂದಾಗಿ ಮೈಸೂರಿನಲ್ಲಿ 'ಕಾಲರಾ' ರೋಗ ಪ್ರಾರಂಭವಾಯಿತು. ಈ ಸಾಂಕ್ರಾಮಿಕ ರೋಗದಿಂದ ಅನೇಕ ಜನರು ಮತ್ತು ದನಕರುಗಳು ನಾಶವಾದವು. ನಗರದ ಮುಖ್ಯ ಉತ್ಪಾದನೆಗಳಾದ ಅಡಿಕೆ, ಏಲಕ್ಕಿ ಮತ್ತು ಮೆಣಸಿನ ಬೆಲೆಗಳು ತೀವ್ರವಾಗಿ ಕುಸಿದವು. ಈ ಬೆಲೆಗಳ ಕುಸಿತದಿಂದ ಸರ್ಕಾರದ ಪಾಲಿನ ಬೆಳೆಗಳ ಮೌಲ್ಯವೂ ಇಳಿಯಿತು. ಕಂದಾಯ ಅಧಿಕಾರಿಗಳು ರೈತರನ್ನು ಹಿಂಸಿಸಿದಾಗಲೂ ರೈತರಿಗೆ ತೆರಿಗೆಗಳನ್ನು ನೀಡಲು ಸಾಧ್ಯವಿರಲಿಲ್ಲ. ಅದಲ್ಲದೆ ಭೂಮಿ ಮತ್ತು ಹಣವನ್ನು ಧಾರ್ಮಿಕ ಸಂಸ್ಥೆಗಳಿಗೆ ನೀಡುವುದು ಸಾಮಾನ್ಯ ಪದ್ಧತಿಯಾಗಿತ್ತು. **ಪೂರ್ಣಯ್ಯ** ಅಪಾರವಾದ ಅಧಿಕ ಹಣವನ್ನು ಭಂಡಾರದಲ್ಲಿ ಸಂಗ್ರಹಿಸಿಟ್ಟು ನಿವೃತ್ತರಾಗಿದ್ದರು. ಆದರೆ ರಾಜನ ಆಳ್ವಿಕೆಯ ಹಂತದೊಳಗೆ ಅದನ್ನು ಸಂಪೂರ್ಣವಾಗಿ ವ್ಯಯ ಮಾಡಲಾಗಿತ್ತು. ಕಂಪನಿಗೆ ನೀಡಬೇಕಾದ ರಾಜನ ಸಾಲ ತೀವ್ರವಾಗಿ ಹೆಚ್ಚಾಗಿತ್ತು. **ಇಂಗ್ಲಿಷ್ ಕಂಪನಿಯು** ೧೮೩೧ ರಲ್ಲಿ ಮೈಸೂರಿನ ಆಡಳಿತವನ್ನು ವಹಿಸಿಕೊಂಡಾಗ, ಇಂಗ್ಲಿಷ್ ಕಂಪನಿಗೆ ಮೈಸೂರು ರಾಜ್ಯ ಸುಮಾರು **೨೪ ಲಕ್ಷ** ಪಗೋಡ ಗಳನ್ನಷ್ಟು ಸಾಲ ಮತ್ತು ಬಾಕಿ ಹಣ ಸಂದಿಸಬೇಕಾಗಿತ್ತು. ಮಹಾರಾಜರ ಖರ್ಚನ್ನು ಕಡಿಮೆ ಮಾಡಲು ಮತ್ತು ಕಂದಾಯ ಸಂಗ್ರಹಿಸುವುದನ್ನು ಕ್ರಮಬದ್ಧಗೊಳಿಸಲು **ಥಾಮಸ್ ಮನ್ರೊ** ಕೆಲವು ಸಲಹೆಗಳನ್ನು ನೀಡಿದ್ದರು. ಆಪತ್ ನಿಧಿಯನ್ನು ಹೊಂದಿರಬೇಕು ಮತ್ತು ಆದಾಯ ಹಾಗೂ ಖರ್ಚಿನ ವಿವರಗಳನ್ನು ಹೊಂದಿರಬೇಕು ಎಂಬ ಸಲಹೆ ನೀಡಿದ್ದರು. ಆದರೆ ಮಹಾ ರಾಜರು ಅವರ ಮಾತಿಗೆ ಗಮನ ಕೊಡಲಿಲ್ಲ ಮತ್ತು ಆಡಳಿತವನ್ನು ನಿರ್ಲಕ್ಷ್ಯದಿಂದ ಮುಂದುವರೆಸಿದರು.

ಮೈಸೂರಿನ ಆದಾಯ ಕಡಿಮೆಯಾಗಲು ಬ್ರಿಟಿಷ್ ಸರ್ಕಾರವೂ ಕಾರಣವಾಗಿತ್ತು. ಮೈಸೂರಿನ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಲು ಬ್ರಿಟಿಷ್ ಅಧಿಕಾರಿಗಳು ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ಮಹಾರಾಜರನ್ನು ನಿಂದಿಸುತ್ತಾ ಪತ್ರಗಳನ್ನು ಮಾತ್ರ ಬರೆದರು. ಅವರು ಮೈಸೂರಿನ ಆಂತರಿಕ ರಾಜಕೀಯ ವ್ಯವಸ್ಥೆ ಸಂಪೂರ್ಣವಾಗಿ ಮಲೀನವಾಗುವವರೆಗೆ, ಇಲ್ಲಿನ ವಿಷಯಗಳಿಂದ ದೂರವಿದ್ದರು. ಕೃಷ್ಣರಾಜ ಒಡೆಯರ್‌ರ ನಿರ್ಲಕ್ಷ್ಯವನ್ನು ರಾಜ್ಯದ ಅಧಿಕಾರಿಗಳು ದುರುಪಯೋಗಪಡಿಸಿಕೊಂಡರು. ಇದರಿಂದ ವೃತ್ತಿಯಲ್ಲಿ ನೈತಿಕ ಮೌಲ್ಯಗಳ ಕುಸಿತ ಪ್ರಾರಂಭ ವಾಯಿತು. ಅಂತ್ಯದಲ್ಲಿ ಬ್ರಿಟಿಷ್ ಸರ್ಕಾರ ಮೈಸೂರಿನಲ್ಲಿ ಕಮಿಷನರುಗಳ ಆಳ್ವಿಕೆಯನ್ನು ಪ್ರಾರಂಭಿಸಿತು.]

ಮೈಸೂರಿನಲ್ಲಿ ಕಮಿಷನರ್‌ಗಳ ಆಳ್ವಿಕೆ (೧೮೩೧-೧೮೮೧)

೧೮೩೧ ರಲ್ಲಿ ಮೈಸೂರಿನಲ್ಲಿ ಕಮಿಷನರ್‌ಗಳ ಆಳ್ವಿಕೆ ಪ್ರಾರಂಭವಾಯಿತು. ಹೀಗಾಗಿ ರಾಜ್ಯದ ಆಡಳಿತದಲ್ಲಿ ಸುಧಾರಣೆಯ ಒಂದು ಹೊಸ ಯುಗವೇ ಪ್ರಾರಂಭವಾಯಿತು. ನೂತನ ಸರ್ಕಾರವು ಮದರಾಸಿನ ಸರ್ಕಾರದ ಅಧೀನದಲ್ಲಿತ್ತು. ಮೊದಲಿಗೆ ಮೈಸೂರಿನಲ್ಲಿ

ಆಡಳಿತ ನಡೆಸಲು ಹಿರಿಯ ಮತ್ತು ಕಿರಿಯ ಕಮಿಷನರ್‌ಗಳನ್ನು ನೇಮಕ ಮಾಡಲಾಯಿತು. ಮೈಸೂರಿನಲ್ಲಿ ಆಳ್ವಿಕೆ ನಡೆಸಿದ ಕಮಿಷನರ್‌ಗಳನ್ನು ಈ ರೀತಿ ಪಟ್ಟೀಕರಿಸಬಹುದು.

ಹಿರಿಯ ಕಮಿಷನರ್‌ಗಳು	- ಕಿರಿಯ ಕಮಿಷನರ್‌ಗಳು
ಅಕ್ಟೋಬರ್ ೧೮೩೧	- **ಕರ್ನಲ್ ಜೆ. ಬ್ರಿಗ್ಸ್**
ಅಕ್ಟೋಬರ್ ೧೮೩೧	- **ಸಿ.ಎಂ. ಲುಷಿಂಗ್‌ಟನ್**
ಫೆಬ್ರವರಿ ೧೮೩೩	- **ಕರ್ನಲ್ ಡಬ್ಲ್ಯು ಮಾರಿಸನ್**
ಫೆಬ್ರವರಿ ೧೮೩೨	- **ಜೆ.ಡಿ. ಡ್ಯೂರಿ**
ಜೂನ್ ೧೮೩೨	- **ಜೆ.ಎಂ.ಮ್ಯಾಕ್ಲಿಆಡ್**
ಫೆಬ್ರವರಿ ೧೮೩೨	- **ಕರ್ನಲ್ ಮಾರ್ಕ್‌ಕಬ್ಬನ್**

ಮುಖ್ಯ ಕಮಿಷನರುಗಳು

೧೮೩೪-೧೮೬೧	- **ಮಾರ್ಕ್‌ಕಬ್ಬನ್**
೧೮೬೨-೧೮೭೦	- **ಲೆವಿಂಗ್ ಬೆನ್ತಮ್ ಬೌರಿಂಗ್**

ಇತರ ಕಮಿಷನರುಗಳು

	- ರಿಚರ್ಡ್ ಮೀಡ್
೧೮೭೫-೧೮೭೫	- ಆರ್.ವಿ. ಡ್ಯಾಲ್ಸೆಲ್
೧೮೭೫-೧೮೭೮	- ಸಿ.ಬಿ. ಸ್ಯಾಂಡರ್ಸ್
೧೮೭೮-೧೮೮೧	- ಜೇಮ್ಸ್ ಗಾರ್ಡನ್

ಮಾರ್ಕ್ ಕಬ್ಬನ್ (೧೮೩೪-೬೧)

ಮಾರ್ಕ್ ಕಬ್ಬನ್ ಮೈಸೂರಿನ ಕಮಿಷನರ್ ಆಗುವ ಮುನ್ನ ಮೈಸೂರಿನ ಆಡಳಿತ ಸಮಿತಿಯ ಸದಸ್ಯರಾಗಿದ್ದರು. ಆದ್ದರಿಂದ ಅವರು ಬಹಳ ಕಾಲದಿಂದ ಮೈಸೂರಿನ ಆಡಳಿತ ಸೇವೆಯೊಂದಿಗೆ ಪರಿಚಯ ಹೊಂದಿದ್ದರು. ಇದರಿಂದ ಅವರಿಗೆ ರಾಜ್ಯದ ಸರ್ವೋಚ್ಚ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವಾಗ ಸಹಾಯವಾಯಿತು. ಸರ್ ಮಾರ್ಕ್ ಕಬ್ಬನ್ ಆಡಳಿತದಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸಿದರು. ರಾಜ್ಯದ ಖರ್ಚನ್ನು ಕಡಿಮೆ ಮಾಡಲು ಪ್ರಯತ್ನಿಸಿದರು. ಭ್ರಷ್ಟಾಚಾರದಲ್ಲಿ ಮುಳುಗಿದ್ದ ಅನೇಕ ಇಲಾಖೆಗಳನ್ನು ಕ್ರಮಬದ್ಧಗೊಳಿಸಲು ಬಯಸಿದರು. ಅವರು ರಾಜ್ಯದ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುತ್ತಾ ಶಾಂತಿಯನ್ನು ಸ್ಥಾಪಿಸುವ ಕಾರ್ಯದಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಹಾಗೂ ಸ್ಥಳೀಯ ನ್ಯಾಯಾಡಳಿತ ಪದ್ಧತಿಯನ್ನು ಶುದ್ಧೀಕರಿಸಲು ಪ್ರಯತ್ನಿಸಿದರು.

ಸರ್ ಮಾರ್ಕ್ ಕಬ್ಬನ್ ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು ನಗರ ಎಂಬ ನಾಲ್ಕು ವಿಂಗಡನೆಗಳಿಂದ ಆಡಳಿತ ವ್ಯವಸ್ಥೆಯನ್ನು ಪುನರ್ ರಚಿಸಿದರು. ಅದಕ್ಕೆ ಮೊದಲು ಬೆಂಗಳೂರು, ನಗರ, ಮೈಸೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು ಮಂಜರಾಬಾದ್

ಎಂಬುದಾಗಿ ಮೈಸೂರಿನ ರಾಜ್ಯವನ್ನು ವಿಂಗಡಿಸಲಾಗಿತ್ತು. ಪ್ರತಿಯೊಂದರಲ್ಲೂ ೧೨೦ ತಾಲ್ಲೂಕುಗಳಿದ್ದವು. ಪ್ರತಿಯೊಂದು ತಾಲ್ಲೂಕಿನಲ್ಲೂ ಅಮಲ್ದಾರನು ಮುಖ್ಯಸ್ಥನಾಗಿದ್ದನು. ಶೇಕ್‌ದಾರ್ ಅಥವಾ ಹೋಬಳಿದಾರರು ಹೋಬಳಿಗಳ ಮುಖ್ಯಸ್ಥರಾಗಿದ್ದರು.

ಕಮಿಷನರ್‌ನ ಮುಖ್ಯ ಕಾರ್ಯಾಲಯವು ಪ್ರಥಮ ಸಹಾಯಕರನ್ನು ಹೊಂದಿತ್ತು. ಆತನು ಕಮಿಷನರ್‌ನ ವೈಯಕ್ತಿಕ ಸಹಾಯಕನಾಗಿ ವರ್ತಿಸಿದನು. ಆತನು ಎಲ್ಲಾ ಇಲಾಖೆಗಳಲ್ಲೂ ಕಾರ್ಯದರ್ಶಿಯ ಕರ್ತವ್ಯಗಳನ್ನು ನಿರ್ವಹಿಸಿದನು. ಸಹಾಯಕ ಸೈನ್ಯಾಧಿಕಾರಿಯು ತಮ್ಮ ಕರ್ತವ್ಯವನ್ನು ನಿರ್ವಹಿಸುವುದಲ್ಲದೆ ಸ್ಥಳೀಯ ಸೈನ್ಯವನ್ನು ನೋಡಿಕೊಳ್ಳುತ್ತಿದ್ದರು. ಕೇಂದ್ರ ಕಚೇರಿಯು ೯ ಶಾಖೆಗಳನ್ನು ಒಳಗೊಂಡಿತ್ತು. ೧. ಕಂದಾಯ ೨. ಅಂಚೆ ೩. ಪೊಲೀಸ್ ೪. ಸವರ್ ಇಲಾಖೆ (ಅಶ್ವಸೇನ್ ಇಲಾಖೆ) ೫. ಬರ್ ಇಲಾಖೆ (ಪದಾತಿಸೇನ್ ಇಲಾಖೆ) ೬. ಮರ್‌ಮತ್ (ಲೋಕೋಪಯೋಗಿ ಇಲಾಖೆ) ೭. ಔಷಧ ಇಲಾಖೆ ೮. ಅಮೃತ್ ಮಹಲ್ (ದನಕರುಗಳ ಇಲಾಖೆ) ೯. ನ್ಯಾಯಾಡಳಿತ ಮತ್ತು ಶಿಕ್ಷಣ.

ಕಂದಾಯ ಇಲಾಖೆಯ ಮುಖ್ಯಸ್ಥರನ್ನು ಮುಖ್ಯ ಶಿರಸ್ತೆದಾರ್ ಎಂದು ಕರೆಯಲಾಗಿತ್ತು. ಕರ್ನಲ್ ಮಾರ್ಕ್ ಕಬ್ಬನ್ ರೈತರ ಕ್ಷೇಮಾಭಿವೃದ್ಧಿಯ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದರು. ಅವರು ರೈತರ ಸರ್ಕಾರಕ್ಕೆ ಸಲ್ಲಿಸಬೇಕಾದ ಹಣವು ಅತಿ ಹೆಚ್ಚಾಗಿದ್ದು, ರೈತರಿಗೆ ಹೊರೆಯಾಗಿದ್ದ ಸ್ಥಳಗಳಲ್ಲಿ ತೆರಿಗೆಗಳನ್ನು ಕಡಿಮೆ ಮಾಡಿದರು. ಸಾಮಗ್ರಿಗಳ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದ್ದ ತೆರಿಗೆಯನ್ನು ಹಣದ ರೂಪದಲ್ಲಿ ನೀಡುವಂತೆ ಮಾಡಲು ಶ್ರಮಿಸಿದರು. ಕರ್ನಲ್ ಮಾರ್ಕ್ ಕಬ್ಬನ್‌ರವರ ಕಾಲದಲ್ಲಿದ್ದ ರಾಜ್ಯದ ಆರ್ಥಿಕ ಪರಿಸ್ಥಿತಿಯು ಗಮನಾರ್ಹವಾಗಿದೆ. ಭೂ ಕಂದಾಯ ಸುಂಕಗಳು, ಶ್ರೀಗಂಧ, ಸ್ಟಾಂಪ್, ಅಂಚೆ ಮತ್ತು ದಂಡದಿಂದ ಒದಗಿದ ಆದಾಯವು ರಾಜ್ಯದ ಆದಾಯದ ಮುಖ್ಯ ಮೂಲಗಳಾಗಿದ್ದವು. ಮೊದಲಿನ ವರ್ಷದ ೬೪ ಲಕ್ಷ ರೂ. ಆದಾಯವು ೧೮೫೫-೫೬ ರಲ್ಲಿ ರೂ. ೮೪ ಲಕ್ಷ ರೂಪಾಯಿಗಳಿಗೆ ಹೆಚ್ಚಿತು. ಆದಾಯವು ಹೆಚ್ಚಾಗಲು ಕಬ್ಬನ್‌ರ ದಕ್ಷ ಆಡಳಿತವೇ ಕಾರಣ.

ಸರ್ ಮಾರ್ಕ್ ಕಬ್ಬನ್ ಮೈಸೂರಿನ ಕಮಿಷನರ್‌ರಾಗಿ ಆಳ್ವಿಕೆಯನ್ನು ನಡೆಸಿದ ಕಾಲದಲ್ಲಿ ಅನೇಕ ಬದಲಾವಣೆಗಳುಂಟಾದವು. ಸರ್ ಕಬ್ಬನ್‌ರವರು ಸಾರಿಗೆ ಮತ್ತು ಸಂಪರ್ಕದ ಬೆಳವಣಿಗೆಗೆ ಗಮನವಿತ್ತರು. ಅವರು ಮದ್ದೂರು, ಶಿವಮೊಗ್ಗ, ಹೊಸಕೋಟೆ, ಭದ್ರಾವತಿ ಮತ್ತು ಹಿರಿಯೂರಿನಲ್ಲಿ ೫ ಮುಖ್ಯ ಸೇತುವೆಗಳನ್ನು ಕಟ್ಟಿಸಿದರು. ೩೩೬ ಮೈಲಿಗಳ ತಂತಿಯನ್ನು ನಿರ್ಮಿಸಲಾಯಿತು. ಜೋಲಾರಪೇಟ್ ಮತ್ತು ಬೆಂಗಳೂರಿನ ನಡುವಿನ ರೈಲ್ವೆ ಮಾರ್ಗವನ್ನು (೧೮೫೯) ೧೮೬೪ ರಲ್ಲಿ ನಿರ್ಮಿಸಲಾಯಿತು.

ಸರ್ ಮಾರ್ಕ್ ಕಬ್ಬನ್ ಅರಣ್ಯ ರಕ್ಷಣಾಧಿಕಾರಿಯನ್ನು ಹೊಂದಿದ್ದ ಪ್ರತ್ಯೇಕವಾದ ಇಲಾಖೆಯನ್ನು ಅಪಾರವಾಗಿದ್ದ ನೈಸರ್ಗಿಕ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಸ್ಥಾಪಿಸಿದರು. ಅನೇಕ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಲಾಯಿತು. ಅವರು ರಾಜ್ಯದಲ್ಲಿ ಹತ್ತಿ, ಎಣ್ಣೆ

ಮತ್ತು ರೇಷ್ಮೆಯ ಗುಣಮಟ್ಟವನ್ನು ಉತ್ತಮಪಡಿಸಲು ಕ್ರಮಗಳನ್ನು ಜಾರಿಗೆ ತಂದರು. ಕಾಫಿಯನ್ನು ೧,೫೫,೧೬೫ ಎಕರೆಗಳಷ್ಟು ಬೃಹತ್ ಪ್ರಮಾಣದಲ್ಲಿ ಸರ್ಕಾರದ ಪ್ರೋತ್ಸಾಹ ಖಾಸಗಿ ಉದ್ಯಮದ ಮೂಲಕ ಉತ್ಪಾದಿಸಲಾಯಿತು.

ಪೊಲೀಸ್ ಇಲಾಖೆಯಲ್ಲೂ ಸರ್ ಮಾರ್ಕ್ ಕಬ್ಬನ್ ಅನೇಕ ಬದಲಾವಣೆಗಳನ್ನು ಜಾರಿಗೆ ತಂದರು. ಈ ಇಲಾಖೆಯು **ಕಿಲ್ಲೇದಾರ್, ಹೋಬಳಿದಾರ್, ಶೇಖ್‌ದಾರ್, ದಫೇದಾರ್** ಮತ್ತು **ಕಂದಾಚಾರ್** ಸೇವಕರಿಂದ ನೆರವನ್ನು ಪಡೆದುಕೊಂಡಿದ್ದ ಅಮಲ್ದಾರರನ್ನು ಹೊಂದಿತ್ತು. ರಾಜ್ಯದಾದ್ಯಂತ ಎಲ್ಲ ಗ್ರಾಮಗಳಲ್ಲೂ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲಾಯಿತು.

ಸರ್ ಮಾರ್ಕ್ ಕಬ್ಬನ್‌ರವರನ್ನು ರಾಜ್ಯದ ನ್ಯಾಯಾಡಳಿತ ವ್ಯವಸ್ಥೆಯಲ್ಲಿ ಜಾರಿಗೆ ತಂದಂತಹ ಅನೇಕ ಬದಲಾವಣೆಗಳಿಗೆ ವಿಶೇಷವಾಗಿ ಸ್ಮರಿಸಲಾಗಿದೆ. ಅವರ ಕಾಲದಲ್ಲಿ ರೂಪಿಸಲಾದ ನ್ಯಾಯಾಡಳಿತ ಪದ್ಧತಿಯು ೮೫ ತಾಲ್ಲೂಕು ನ್ಯಾಯಾಲಯಗಳನ್ನು, ೮ ಮುಖ್ಯ ಸದರ್ ಮುನ್ಸಿಫ್ ನ್ಯಾಯಾಧೀಶರನ್ನು ಹೊಂದಿರುವ ೧ ಹುಜೂರ್ ಅದಾಲತ್ ನ್ಯಾಯಾಲಯ ಮತ್ತು ೧ ಕಮಿಷನರ್ ನ್ಯಾಯಾಲಯಗಳನ್ನು ಒಳಗೊಂಡಿತ್ತು.

ಅಧಿಕಾರ ಪತ್ರ ವ್ಯವಹಾರಗಳನ್ನು ನಡೆಸಲು ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಅಳವಡಿಸಿಕೊಳ್ಳಲಾಯಿತು. ನೀತಿ ನಿಯಮಗಳನ್ನು ಪ್ರಮುಖ ಸ್ಥಳಗಳಲ್ಲಿ ಕನ್ನಡದಲ್ಲಿ ಪ್ರಕಟಿಸಲಾಯಿತು. ಎಲ್ಲಾ ಲೆಕ್ಕ ಪತ್ರಗಳಲ್ಲೂ ಮತ್ತು ಕಮಿಷನ್‌ರ ಕಚೇರಿಗೆ ಸಲ್ಲಿಸಲಾದ ವರದಿಗಳಲ್ಲೂ **ಮರಾಠಿ**ಯನ್ನು ಬಳಸಲಾಯಿತು. ಸರ್ ಮಾರ್ಕ್ ಕಬ್ಬನ್‌ರವರು ಕ್ರೈಸ್ತ ಧರ್ಮ ಪ್ರಚಾರಕರಿಗೆ ಇಂಗ್ಲೀಷ್ ಶಾಲೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿದರು.

ಮೈಸೂರು ರಾಜ್ಯ ಸರ್ ಮಾರ್ಕ್ ಕಬ್ಬನ್‌ರ ಕಾಲದಲ್ಲಿ ಅಪಾರವಾಗಿ ಪ್ರಗತಿಯನ್ನು ಸಾಧಿಸಿತು. ಅವರು ೧೮೬೧ ರಲ್ಲಿ ನಿವೃತ್ತರಾದರು. ಮತ್ತು ಅನಾರೋಗ್ಯದಿಂದ ಭಾರತವನ್ನು ಬಿಟ್ಟು ಹಿಂದಿರುಗಲು ಪ್ರಯತ್ನಿಸಿದರು. ಆದರೆ ದುರದೃಷ್ಟದಿಂದ ಅವರು ಇಂಗ್ಲೆಂಡ್‌ನ್ನು ತಲುಪಲಿಲ್ಲ. ಅವರು ಹಿಂದಿರುಗುವ ಮಾರ್ಗದಲ್ಲಿ ಸೂಯೆಜ್ ಕಾಲುವೆ ಸಯದ್ ಬಂದರಿನಲ್ಲಿ ಮೃತರಾದರು.

ಲೆವಿಂಗ್ ಬೆನ್ತಮ್ ಬೌರಿಂಗ್ (೧೮೬೧-೭೦)

ಲೆವಿಂಗ್ ಬೆನ್ತಮ್ ಬೌರಿಂಗ್ ಭಾರತಕ್ಕೆ ಐ.ಸಿ.ಎಸ್. ಅಧಿಕಾರಿಯಾಗಿ ಬಂದರು. ಪಂಜಾಬಿನಲ್ಲಿ ವಿಭಾಗೀಯ ಕಮಿಷನರ್ ಆಗಿದ್ದರು. ಅವರು **ಲಾರ್ಡ್ ಕನ್ನಿಂಗ್**‌ಗೆ ಖಾಸಗಿ ಕಾರ್ಯದರ್ಶಿಯಾಗಿದ್ದರು. ೧೮೬೩ ರಿಂದ ಮೈಸೂರು 'ಕ್ರಮಬದ್ಧ ಪ್ರಾಂತ್ಯ'ವಾಯಿತು. ಬೌರಿಂಗ್‌ರವರ ಆಡಳಿತದ ಮುಖ್ಯ ಅಂಶವು ಸಾಮರ್ಥ್ಯತೆಯಾಗಿತ್ತು. ಬೌರಿಂಗ್ ಮೈಸೂರು ಪ್ರಾಂತ್ಯದ ಆಡಳಿತವನ್ನು ಪುನರ್ ರಚಿಸಿದರು. ಮೈಸೂರನ್ನು **ನಂದಿದುರ್ಗ, ಅಷ್ಟಗ್ರಾಮ** ಮತ್ತು **ನಗರ** ಎಂಬುದಾಗಿ ವಿಂಗಡಿಸಲಾಗಿತ್ತು. ಈ ಮೂರು ವಿಭಾಗಗಳನ್ನು ೮ ಜಿಲ್ಲೆಗಳಾಗಿ ವಿಂಗಡಿಸಲಾಯಿತು. ಪ್ರತಿಯೊಂದು ವಿಭಾಗವು ಯೂರೋಪಿಯನ್ ಮೇಲ್ವಿ

ಚಾರಣಾಧಿಕಾರಿಯ ನಿಯಂತ್ರಣದಲ್ಲಿತ್ತು. ೧೮೬೯ ರಲ್ಲಿ ಆತನ ಸ್ಥಳದಲ್ಲಿ ಕಮಿಷನರ್ ಒಬ್ಬರನ್ನು ನೇಮಕ ಮಾಡಲಾಯಿತು. ಜಿಲ್ಲೆಗಳ ಆಡಳಿತ ನಡೆಸಲು ಉಪಕಮಿಷನರ್‌ಗಳನ್ನು ನೇಮಕ ಮಾಡಲಾಯಿತು. ಮೈಸೂರಿನಲ್ಲಿ ಬ್ರಿಟಿಷರ ಪ್ರತಿನಿಧಿಯನ್ನು **ಮುಖ್ಯ ಕಮಿಷನರ್** ಎಂದು ಕರೆಯಲಾಯಿತು.

ಬೌರಿಂಗ್‌ರವರು ಕಂದಾಯ ಸಮೀಕ್ಷೆ ಹಾಗೂ ತಿರುವಳಿ ಇಲಾಖೆಗಳನ್ನು ಪುನರ್ ರಚಿಸಿದರು. ಅವರು ೧೮೬೩ ರಲ್ಲಿ **ಇನಾಮ್ ಆಯೋಗವನ್ನು** ಸ್ಥಾಪಿಸಿದರು. ಭೂ ಸಮೀಕ್ಷೆ ಕಮಿಷನರ್‌ರವರ ಅಡಿಯಲ್ಲಿ ಅವಶ್ಯಕವಾದ ಸುಧಾರಣೆಗಳನ್ನು ತರಲು ನೂತನ ಇಲಾಖೆ ಯನ್ನು ಸೃಷ್ಟಿಸಲಾಯಿತು. ಭೂಮಿಯ ಅಳತೆಯನ್ನು ಮತ್ತು ಭೂಕಂದಾಯವನ್ನು ಸಂಗ್ರಹ ಮಾಡುವುದರಲ್ಲಿ ಕ್ರಮಬದ್ಧತೆಯನ್ನು ಜಾರಿಗೆ ತರಲಾಯಿತು.

೧೮೬೪ರ ೧೪ನೇ ನೋಂದಣಿ ಕಾಯಿದೆಯ ಪ್ರಕಾರ ಮುಖ್ಯ ಕಾಗದ ಪತ್ರಗಳನ್ನು ನೋಂದಾಯಿಸಬೇಕೆಂಬ ಕಾನೂನನ್ನು ಜಾರಿಗೆ ತರಲಾಯಿತು. ಈ ಕಾಯಿದೆಯ ಪ್ರಕಾರ ಎಲ್ಲಾ ಆಸ್ತಿ ವ್ಯವಹಾರಗಳನ್ನು ನೋಂದಾಯಿಸಬೇಕಾಗಿತ್ತು. ಪರಿಷ್ಕೃತ ನ್ಯಾಯಾಡಳಿತ ಪದ್ಧತಿಯಂತೆ ನ್ಯಾಯಾಲಯಗಳ ಒಟ್ಟು ಸಂಖ್ಯೆಯನ್ನು ೧೦೩ ರಿಂದ ೧೨೫ ಕ್ಕೆ ಹೆಚ್ಚಿಸಲಾಯಿತು. ಮದರಾಸಿನ ಪೊಲೀಸ್ ವ್ಯವಸ್ಥೆಯ ಆಧಾರದ ಮೇಲೆ ನೂತನ ಪೊಲೀಸ್ ವ್ಯವಸ್ಥೆಯ ಆಧಾರದ ಮೇಲೆ ನೂತನ ಪೊಲೀಸ್ ಇಲಾಖೆಯನ್ನು ರಚಿಸಲಾಯಿತು. ಹಳೆಯ ಕಂದಾಚಾರ ಸೈನ್ಯವನ್ನು ರದ್ದುಪಡಿಸಲಾಯಿತು. ಮತ್ತು ೧೮೭೨ ರಲ್ಲಿ ಹೊಸ ಪೊಲೀಸ್ ನೀತಿ ನಿಯಮಗಳನ್ನು ಜಾರಿಗೆ ತರಲಾಯಿತು. ಯೂರೋಪಿಯನ್ ಮೇಲ್ವಿಚಾರಣಾಧಿಕಾರಿ ಗಳು ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿದ್ದರು. ಈ ಇಲಾಖೆಯು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಮತ್ತು ಜಿಲ್ಲಾ ಮೇಲ್ವಿಚಾರಣಾಧಿಕಾರಿಗಳನ್ನು ಒಳಗೊಂಡಿತ್ತು. ಪೊಲೀಸ್ ಇಲಾಖೆಯನ್ನು ಜಿಲ್ಲಾ ನ್ಯಾಯಾಧೀಶರಿಂದ ಸ್ವತಂತ್ರ ಗೊಳಿಸಲಾಗಿತ್ತು.

ಹುಜೂರ್ ಅದಾಲತ್ ಮತ್ತು **ಸದರ್ ಮುನ್ಸಿಫ್ ನ್ಯಾಯಾಲಯಗಳನ್ನು** ರದ್ದುಪಡಿಸ ಲಾಯಿತು. **ಇಂಡಿಯನ್ ಪೀನಲ್ ಕೋಡ್** ಮತ್ತು **ಅಪರಾಧಗಳ ಕಾರ್ಯವಿಧಾನದ ನ್ಯಾಯ ಸೂತ್ರವನ್ನು** ಮೈಸೂರಿನಲ್ಲಿ ಜಾರಿಗೆ ತರಲು ಬೌರಿಂಗ್‌ರವರು ಕಾರಣರಾದರು. ಬೌರಿಂಗ್ ರವರ ಕಾಲದಲ್ಲಿ ಕಾಮಗಾರಿ ಇಲಾಖೆ ಹಾಗೂ ಕೃಷಿ ತೋಟಗಾರಿಕೆಯನ್ನು ವಿಸ್ತರಿಸಲು ವಿಶೇಷ ಗಮನವನ್ನು ಹರಿಸಲಾಯಿತು. ವಸ್ತು ಸಂಗ್ರಹಾಲಯ ಮತ್ತು ಸರ್ಕಾರಿ ಮುದ್ರಣಾ ಲಯವನ್ನು ನಿಯಂತ್ರಿಸಲು ಸಂಸ್ಥೆಯೊಂದನ್ನು ಸೃಷ್ಟಿಸಲಾಯಿತು. ೧೮೬೪ ರಲ್ಲಿ ಬೆಂಗಳೂರಿ ನಲ್ಲಿ **ಸೆಂಟ್ರಲ್ ಕಾಲೇಜನ್ನು** ಪ್ರಾರಂಭಿಸಲಾಯಿತು. ೧೮೬೮ ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಯನ್ನು ನಿಧಾನಗತಿಯಲ್ಲಿ ಸಾಗಿತು. ಆನಂತರ ಸರ್ಕಾರವು ಬಿ.ಎಲ್. ರೈಸ್‌ರವರ ನೇತೃತ್ವದಲ್ಲಿ **ಹೋಬಳಿ ಶಾಲೆ** ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಲ್ಲಿ ಪ್ರತಿಯೊಂದು ಹೋಬಳಿಯಲ್ಲೂ ಶಾಲೆಗಳನ್ನು ಪ್ರಾರಂಭಿಸಲಾಯಿತು. ಮತ್ತು ಪ್ರತಿಯೊಂದು

ತಾಲ್ಲೂಕು ಪ್ರಾದೇಶಿಕ ಶಾಲೆಗಳನ್ನು ಹೊಂದಿತು. ೧೮೬೬ ರಲ್ಲಿ ಬೌರಿಂಗ್ ಅಠಾರ ಕಚೇರಿಯನ್ನು ಸ್ಥಾಪಿಸಿದರು. ಬೌರಿಂಗ್ ಸುಶಿಕ್ಷಿತರಾಗಿದ್ದರು. ಅವರು "ರೂಲರ್ಸ್ ಆಫ್ ಇಂಡಿಯಾ ಸೀರಿಸ್" (ಭಾರತದ ರಾಜರು ಧಾರವಾಹಿಗೆ) ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಇತಿಹಾಸವನ್ನು ಬರೆದರು. ಇದು ಅತ್ಯಮೂಲ್ಯ ಐತಿಹಾಸಿಕ ದಾಖಲೆಯಾಗಿದೆ. ಲೇಡಿ ಬೌರಿಂಗ್‌ರವರು ಪೌರಾತ್ಯ ಅನುಭವ (ಈಸ್ಟರ್ನ್ ಎಕ್ಸ್‌ಪೀರಿಯನ್ಸ್) ಎಂಬ ತಮ್ಮ ಜೀವನ ಚರಿತ್ರೆಯನ್ನು ಬರೆದರು. ಲೆವಿಂಗ್ ಬೆನ್ತಮ್ ಬೌರಿಂಗ್‌ರವರು ೧೮೭೦ ರಲ್ಲಿ ನಿವೃತ್ತರಾದರು.

ಬೌರಿಂಗ್‌ರ ನಂತರ ೧೮೭೦ ರಲ್ಲಿ ೧೮೮೧ ರ ಅವಧಿಯಲ್ಲಿ ಅನೇಕ ಕಮಿಷನರ್‌ಗಳು ಮೈಸೂರಿನಲ್ಲಿ ಆಳ್ವಿಕೆ ನಡೆಸಿದರು. ಅವರುಗಳು ೧. ಸರ್ ರಿಚರ್ಡ್ ಮೀಡ್ (೧೮೭೦-೭೫) ೨. ಸಿ.ಬಿ. ಸೌಂಡರ್ಸ್ (೧೮೭೫-೭೭) ಮತ್ತು ೩. ಜೆ.ಡಿ. ಗಾರ್ಡನ್ (೧೮೭೭-೮೧). ಈ ಕಮಿಷನರ್‌ಗಳು ಮೈಸೂರು ರಾಜ್ಯಕ್ಕೆ ಅಪಾರ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಮತ್ತು ಮೈಸೂರಿನಲ್ಲಿ ಸುವ್ಯವಸ್ಥಿತ ಆಡಳಿತ ಪದ್ಧತಿಯ ಬೆಳವಣಿಗೆಗೆ ಕೊಡುಗೆಯನ್ನು ನೀಡಿದರು. ಮೈಸೂರಿನಲ್ಲಿ ಆಳಿದ ಕಮಿಷನರ್‌ಗಳಲ್ಲಿ ಮಾರ್ಕ್ ಕಬ್ಬನ್ ಮತ್ತು ಬೌರಿಂಗ್ ಸುಪ್ರಸಿದ್ಧ ಆಡಳಿತಗಾರರಾಗಿದ್ದರು. ಆಡಳಿತ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಜಾರಿಗೆ ತರಲಾಗಿತ್ತು. ಅವರ ಕಾಲದಲ್ಲಿ ಮೈಸೂರಿನ ಆಡಳಿತವನ್ನು ಆಧುನೀಕರಿಸಲಾಯಿತು. ಮೈಸೂರಿನಲ್ಲಿ ಶಾಂತಿಯನ್ನು ಸ್ಥಾಪಿಸಲಾಯಿತು.

೫.೪ ಪುನರ್ದಾನ

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರನ್ನು ೧೮೩೧ ರಿಂದ ಸಿಂಹಾಸನದಿಂದ ಕೆಳಗಿಳಿಸಲಾಯಿತು. ಅವರು ದೀರ್ಘಕಾಲ ತಮ್ಮ ಸ್ಥಾನವನ್ನು ಮರಳಿ ಪಡೆಯಲು ಪ್ರಯತ್ನಿಸಿದರು. ಅವರು ಮೈಸೂರಿನಲ್ಲಿ ಪುನಃ ಒಡೆಯರಗಳ ಆಳ್ವಿಕೆ ಸ್ಥಾಪನೆಯಾಗಬೇಕೆಂದು ಲಂಡನ್ನಿನಲ್ಲಿ ಬ್ರಿಟಿಷ್ ಸರ್ಕಾರವನ್ನು ಬೇಡಿದರು. ೧೮೬೫ ರಲ್ಲಿ ಅವರು ರಾಣಿ ಲಕ್ಷ್ಮೀ ಅಮ್ಮಣ್ಣಿಯ ವಂಶಕ್ಕೆ ಸೇರಿದ **ಜಯರಾಜನನ್ನು** ದತ್ತು ತೆಗೆದುಕೊಂಡರು. ೧೮೬೭ ರಲ್ಲಿ ಲಂಡನ್ನಿನಲ್ಲಿ ಬ್ರಿಟಿಷ್ ಸರ್ಕಾರವು "ಮೈಸೂರಿನಲ್ಲಿ ಅಧಿಕಾರ ವರ್ಗಾವಣೆ' ಯ ನಿರ್ಧಾರ ವನ್ನು ಕೈಗೊಂಡಿತು. ಸಿಂಹಾಸನವನ್ನೇರಲು ಪ್ರಾಪ್ತ ವಯಸ್ಸನ್ನು ಗಳಿಸಿದ ನಂತರ ಮಾತ್ರ **ಚಾಮರಾಜ ಒಡೆಯರ್‌**ರವರಿಗೆ ಪಟ್ಟವನ್ನು ಕಟ್ಟಲಾಗುವುದೆಂದು ನಿರ್ಧರಿಸಲಾಯಿತು. 'ಮೈಸೂರಿನಲ್ಲಿ ಒಡೆಯರ್‌ಗಳ ಆಳ್ವಿಕೆಯು ಮುಂದುವರೆಯುವುದು' ಎಂಬ ಆಶ್ವಾಸನೆಯನ್ನು ಬ್ರಿಟಿಷರು ನೀಡಿರುವರು ಎಂಬ ಸಮಾಧಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ೧೮೮೧ ರಲ್ಲಿ ನಿಧನರಾದರು.

ಹತ್ತನೆಯ ಚಾಮರಾಜ ಒಡೆಯರ್ ೧೮೮೧ ರಲ್ಲಿ ಸಿಂಹಾಸನವನ್ನೇರಿದಾಗ ೧೮೮೧ ರಲ್ಲಿ **ಹಸ್ತಾಂತರ ಕಾಯಿದೆಯ** ಮೂಲಕ ಮೈಸೂರಿನಲ್ಲಿ **ಅಧಿಕಾರ ವರ್ಗಾವಣೆ** (ಪುನರ್ದಾನ-Rendition) ಉಂಟಾಯಿತು. ೧೮೮೧ ರಲ್ಲಿ ಕಮಿಷನರ್‌ಗಳ ಆಳ್ವಿಕೆಯು ಕೊನೆಗೊಂಡಿತು. ಮೈಸೂರಿನ ಆಡಳಿತ ವಿಷಯಗಳಲ್ಲಿ ಬ್ರಿಟಿಷ್ ಪ್ರತಿನಿಧಿಯ ಅಧಿಕಾರವು ಹೆಚ್ಚಾಯಿತು. ದಿವಾನರ ಪದವಿಯನ್ನು ಸೃಷ್ಟಿಸಲಾಯಿತು. ರಾಜ್ಯದ ಆಡಳಿತವನ್ನು ನಡೆಸಲು ಇಬ್ಬರು ಕಾರ್ಯಕರ್ತಾಧಿಕಾರಿಗಳು ದಿವಾನರಿಗೆ ನೆರವಾಗುತ್ತಿದ್ದರು. ಅಧಿಕಾರ ವರ್ಗಾವಣೆಯಿಂದಾಗಿ ಬ್ರಿಟಿಷರ ಆಳ್ವಿಕೆಯು ಕೊನೆಗೊಂಡಿತು ಮತ್ತು **ದೇಶಿಯ ರಾಜ್ಯ** ಸ್ಥಾಪನೆಯಾಯಿತು. ಅಂದಿನಿಂದ ಮೈಸೂರಿನ ಒಡೆಯರ್‌ರನ್ನು ಮೈಸೂರಿನ ಅನುವಂಶೀಯ ರಾಜರನ್ನಾಗಿ ಪರಿಗಣಿಸಲಾಯಿತು.

ರಾಜರು ಸಂತಾನವಿಲ್ಲದೆ ನಿಧನರಾದಾಗ ಮಾತ್ರ, ಬ್ರಿಟಿಷ್ ಸರ್ಕಾರಕ್ಕೆ ಉತ್ತರಾಧಿಕಾರಿ ಯನ್ನು ಆಯ್ಕೆ ಮಾಡುವ ಅಧಿಕಾರವಿತ್ತು. ಒಡೆಯರ್ ವಂಶವು ಬ್ರಿಟನ್ನಿನ ರಾಣಿಗೆ ನಿಷ್ಠೆಯಿಂದಿರಬೇಕಾಗಿತ್ತು ಮತ್ತು ಆಕೆಯ ಅಧೀನದಲ್ಲಿರಬೇಕಾಗಿತ್ತು. ವರ್ಗಾವಣೆಯ ಒಪ್ಪಂದದ ಪ್ರಕಾರ **ಸಹಾಯಕ ಸೇನೆಯ** ಒಪ್ಪಂದದ ಎಲ್ಲಾ ಕರಾರುಗಳನ್ನು ಒಡೆಯರುಗಳು ಒಪ್ಪಿಕೊಂಡರು.

ಅಧಿಕಾರ ವರ್ಗಾವಣೆ (Rendition) ಒಪ್ಪಂದವು ಈ ಕೆಳಕಂಡ ಕರಾರುಗಳನ್ನು ಒಳಗೊಂಡಿತ್ತು.

೧. ಮಹಾರಾಜ ಮತ್ತು ಆತನ ಉತ್ತರಾಧಿಕಾರಿಗಳು ಸರ್ವ ಕಾಲದಲ್ಲೂ ಬ್ರಿಟಿಷ್ ಸರ್ಕಾರಕ್ಕೆ ನಿಷ್ಠೆಯಿಂದಿರಬೇಕಾಗಿತ್ತು. ಮತ್ತು ಅವರ ಅಧೀನದಲ್ಲಿರಬೇಕಾಗಿತ್ತು.

೨. ಮೈಸೂರಿನ ಪ್ರಾಂತ್ಯಗಳ ಸಂರಕ್ಷಣೆಗೆ ಬ್ರಿಟಿಷರು ಸಹಾಯ ನೀಡುತ್ತಿದ್ದರು. ಅದಕ್ಕೆ ಬದಲಾಗಿ ಮಹಾರಾಜರು ಅರ್ಧವಾರ್ಷಿಕ ಕಂತುಗಳಲ್ಲಿ ವರ್ಷಕ್ಕೆ ರೂ. ೨೪.೫೦ ಲಕ್ಷಗಳನ್ನು ನೀಡಬೇಕಾಗಿತ್ತು. ಮಹಾರಾಜರು ಇತರ ರಾಜ್ಯಗಳ ಆಂತರಿಕ ವಿಷಯಗಳಿಂದ ದೂರವಿರ ಬೇಕಿತ್ತು. ಗವರ್ನರ್ ಜನರಲ್ ಅನುಮತಿ ಇಲ್ಲದೆ ಮಹಾರಾಜರಿಗೆ ಇತರ ರಾಜ್ಯಗಳೊಂದಿಗೆ ಸಂಪರ್ಕಿಸುವ ಹಕ್ಕಿರಲಿಲ್ಲ. ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೆ ಮಹಾರಾಜರಿಗೆ ಯಾವ ವಿದೇಶಿಯರನ್ನು ರಾಜ್ಯದ ಸೇವೆಯಲ್ಲಿ ನೇಮಕ ಮಾಡಿಕೊಳ್ಳುವ ಹಕ್ಕಿರಲಿಲ್ಲ.

೩. ಬ್ರಿಟಿಷ್ ಸರ್ಕಾರಕ್ಕೆ ರೈಲ್ವೆ ಮತ್ತು ತಂತಿಯ ನಿರ್ಮಾಣಕ್ಕಾಗಿ ತೆರಿಗೆ ರಹಿತ ಭೂಮಿಯನ್ನು ನೀಡಬೇಕಾಗಿತ್ತು. ಕೌನ್ಸಿಲ್‌ನಲ್ಲಿದ್ದ ಗವರ್ನರ್ ಜನರಲ್‌ಗೆ ಅನುಮತಿ ಇಲ್ಲದೆ ಹಳೆಯ ಕೋಟೆಗಳನ್ನು ರಿಪೇರಿ ಮಾಡಿಸುವ ಹಾಗೂ ಭದ್ರವಾದ ಕೋಟೆಗಳನ್ನು ನಿರ್ಮಿಸುವ ಹಕ್ಕನ್ನು ಮಹಾರಾಜರಿಂದ ಕಸಿದುಕೊಳ್ಳಲಾಯಿತು.

೪. ಕೌನ್ಸಿಲ್‌ನ ಗವರ್ನರ್ ಜನರಲ್ ಅನುಮತಿ ಇಲ್ಲದೆ ಮಹಾರಾಜರು ತಮ್ಮ ರಾಜ್ಯದಲ್ಲಿ ಯಾವುದೇ ಕಾನೂನಿನ ತಿದ್ದುಪಡಿ ಮಾಡುವ ಅಥವಾ ರದ್ದುಪಡಿಸುವ ಹಕ್ಕಿರಲಿಲ್ಲ. ಆಡಳಿತದ ಎಲ್ಲಾ ವಿಷಯಗಳಲ್ಲೂ ಮಹಾರಾಜರು ಬ್ರಿಟಿಷ್ ಸರ್ಕಾರದ ಸಲಹೆಯನ್ನು ಕೋರಬೇಕಾಗಿತ್ತು. ಮತ್ತು ಅದರ ನಿರ್ಧಾರಗಳನ್ನು ಅನುಸರಿಸಬೇಕಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ್ (೧೯೦೨-೧೯೪೦)

೧೦ನೆ ಚಾಮರಾಜ ಒಡೆಯರ್ ೧೮೯೪ ರಲ್ಲಿ ನಿಧನರಾದರು. ಬ್ರಿಟಿಷ್ ಸರ್ಕಾರವು ತನ್ನ ಹತ್ತು ವರ್ಷ ವಯಸ್ಸಿನ ಮಗನನ್ನು **ಮೈಸೂರಿನ ರಾಜನೆಂದು** ಘೋಷಿಸಿತು. ಅವರು ಸಿಂಹಾಸನವನ್ನೇರಿದಾಗ, ತೀರಾ ಕಿರಿಯವರಾಗಿದ್ದಾಗ, ರಾಜಮಾತೆ, **ಕೆಂಪ ನಂಜಮ್ಮಣ್ಣಿ** ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡರು. ೧೦ನೆ ಚಾಮರಾಜ ಒಡೆಯರ್‌ನ ನಿಧನದ ನಂತರ, **ನಾಲ್ವಡಿ ಕೃಷ್ಣರಾಜ ಒಡೆಯರ್**‌ನ ಕಾಲದಲ್ಲೂ ದಿವಾನ ಶೇಷಾದ್ರಿ ಐಯರ್ ೧೮೮೩-೧೯೦೧ ಮೈಸೂರು ರಾಜ್ಯಕ್ಕೆ ಸೇವಾ ಸಲ್ಲಿಸಿದ್ದರು. ಅನೇಕ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಕೈಗೊಳ್ಳಲಾಯಿತು. ಮೈಸೂರಿನ ದಿವಾನರ ಕೊಡುಗೆಗಳ ಅಧ್ಯಯನವು ನಮಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರಿನ ಪ್ರಗತಿಯನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುತ್ತದೆ. **ಟಿ.ಆರ್.ಪಿ. ತಂಬುಚೆಟ್ಟಿ** ೧೯೦೦-೧೯೦೧ ಅವಧಿಯಲ್ಲಿ ಒಂದೇ ವರ್ಷ ದಿವಾನರಾಗಿದ್ದರು. ೧೯೦೦ ರಲ್ಲಿ ಕೃಷ್ಣರಾಜ ಒಡೆಯರ್‌ರವರ ವಿವಾಹವು ಪ್ರತಾಪ **ಕುಮಾರದೇವಿಯವರೊಂದಿಗೆ** ವಿಜೃಂಭಣೆಯಿಂದ **ಜಗನ್‌ಮೋಹನ್** ಅರಮನೆಯಲ್ಲಿ ನಡೆಯಿತು. ೧೯೦೧ ರಲ್ಲಿ ಕೆಂಪ ನಂಜಮ್ಮಣ್ಣಿ ನಿಧನರಾದರು. ೧೯೦೨ ರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ನೇರ ಆಳ್ವಿಕೆ ಪ್ರಾರಂಭವಾಯಿತು. ಅವರ ಆಳ್ವಿಕೆಯು ೧೯೪೦ ರವರೆಗೆ ಮುಂದುವರೆಯಿತು. ಅವರ ದೀರ್ಘಕಾಲದ ರಾಜ್ಯಾಡಳಿತದಲ್ಲಿ ಅನೇಕ ದಿವಾನರು ಮೈಸೂರು ರಾಜ್ಯಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಇಂತಿದ್ದರು. ದಿವಾನ್ **ಪಿ.ಎನ್. ಕೃಷ್ಣಮೂರ್ತಿ** (೧೯೦೧-೦೬), **ವಿ.ಪಿ. ಮಾಧವರಾವ್** (೧೯೦೬-೦೯), ದಿವಾನ್

ಟಿ. ಆನಂದರಾವ್ (೧೯೦೯-೧೨), ಸರ್ ಎಂ. ವಿಶ್ವೇಶ್ವರಯ್ಯ (೧೯೧೨-೧೮), ದಿವಾನ್ ಕಾಂತರಾಜ ಅರಸ್ (೧೯೧೮-೧೯೨೨), ಸರ್. ಆಲ್ಬಿಯನ್ ಬ್ಯಾನರ್ಜಿ (೧೯೨೨-೧೯೨೬) ಮತ್ತು ಸರ್ ಮಿರ್ಜಾ ಇಸ್ಮೈಲ್ (೧೯೨೬-೧೯೪೧).

ಕೃಷ್ಣರಾಜ ಒಡೆಯರ್ ಕನ್ನಡ, ಇಂಗ್ಲಿಷ್ ಮತ್ತು ಉರ್ದು ಭಾಷೆಗಳಲ್ಲಿ ಪರಿಣತರಾಗಿದ್ದರು. ಅವರು ಅಪಾರ ಜ್ಞಾನವನ್ನು ಹೊಂದಿದ್ದ ವಿದ್ವಾಂಸರಾಗಿದ್ದರು. ಗಾಂಧೀಜಿಯವರು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರನ್ನು ರಾಜರುಷಿ ಎಂದು ಕರೆದರು. ಅವರ ಕಾಲದಲ್ಲಿ ಮೈಸೂರನ್ನು ಮಾದರಿ ರಾಜ್ಯವಾಗಿ ಪರಿವರ್ತಿಸಲಾಯಿತು. ಅವರು ತಮ್ಮ ಕಲಾಭಿರುಚಿಗೆ ಪ್ರಸಿದ್ಧರಾಗಿದ್ದರು. ಮೈಸೂರಿನ ಅರಮನೆಯನ್ನು ರಾಜ ರವಿವರ್ಮರ ಚಿತ್ರಗಳಿಂದ ಅಲಂಕರಿಸಲಾಯಿತು. ಕೆ. ವೆಂಕಟಪ್ಪ, ಟಿ. ಚೌಡಯ್ಯ, ಡಾ. ಶಾಮಶಾಸ್ತ್ರಿ ಮತ್ತು ಇತರ ಅನೇಕ ಕಲಾವಿದರನ್ನು ಅವರು ಪೋಷಿಸಿದರು. ನಾಲ್ವಾಡಿ ಕೃಷ್ಣರಾಜ ಒಡೆಯರ್ ದಸರಾ ವಸ್ತು ಪ್ರದರ್ಶನವನ್ನು ಆರಂಭಿಸಿದರು ಮತ್ತು ಅದನ್ನು ಅಪಾರ ವೈಭವ ಮತ್ತು ವಿಜೃಂಭಣೆಯಿಂದ ಆಚರಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಮೈಸೂರಿನ ದಿವಾನರ ಕೊಡುಗೆಗಳು ಮೈಸೂರಿನ ಆಧುನೀಕರಣ ಹಾಗೂ ಪ್ರಗತಿಯನ್ನು ತೋರುತ್ತವೆ. ಸರ್. ಎಂ. ವಿಶ್ವೇಶ್ವರಯ್ಯ ದಿವಾನರಾಗಿದ್ದಾಗ, ಮೈಸೂರಿನಲ್ಲಿ ಅಪಾರವಾದ ಕೈಗಾರಿಕಾ ಪ್ರಗತಿ ಉಂಟಾಯಿತು. ಸರ್ ಮಿರ್ಜಾ ಇಸ್ಮೈಲ್ ದಿವಾನಗಿರಿಯಲ್ಲಿ ರಾಜ್ಯದ ಪ್ರಗತಿಯು ಯಾವ ರೀತಿಯಲ್ಲೂ ಕಡಿಮೆಯಾಗಿರಲಿಲ್ಲ. ಕೃಷ್ಣರಾಜ ಒಡೆಯರ್ ಮಹಿಳೆಯರ ಶಿಕ್ಷಣವನ್ನು ಪ್ರೋತ್ಸಾಹಿಸಿದರು. ಮಹಾರಾಣಿ ಪ್ರೌಢಶಾಲೆಯನ್ನು ಅವರ ತಾಯಿಯ ಸ್ಮರಣಾರ್ಥಕವಾಗಿ ಪ್ರಾರಂಭಿಸಲಾಯಿತು. ಅದನ್ನು ಕಾಲೇಜ್ ಆಗಿ ಪರಿವರ್ತಿಸಲಾಯಿತು. ೧೯೦೫ ರಲ್ಲಿ ಅವರ ಸೋದರಿ ಕೃಷ್ಣರಾಜಮ್ಮಣ್ಣಿ ಕ್ಷಯ ರೋಗದಿಂದ ಮೃತರಾದರು. ಕ್ಷಯ ರೋಗದಿಂದ ಬಳಲುತ್ತಿದ್ದ ರೋಗಿಗಳಿಗೆ ಅನುಕೂಲವಾಗುವಂತೆ ಪಿ.ಕೆ. ಸ್ಯಾನಿಟೋರಿಯಂನನ್ನು ಸ್ಥಾಪಿಸಿದರು. ಅವರು ಕ್ಷೇಮಾಭಿವೃದ್ಧಿ ಕೇಂದ್ರ ಮತ್ತು ಪಶು ವೈದ್ಯಾಲಯವನ್ನು ಸ್ಥಾಪಿಸಿದರು. ಅವರು ಸಂತಾನವಿಲ್ಲದೆ ನಿಧನರಾಗಿದ್ದರಿಂದ ಜಯ ಚಾಮರಾಜ ಒಡೆಯರ್ ಸಿಂಹಾಸನವನ್ನೇರಿದರು.

ಮೈಸೂರಿನ ಪ್ರಸಿದ್ಧ ದಿವಾನರು

ಹೆಚ್ಚಿನ ವಿಷಯ

[ದಿವಾನ್ ಸಿ. ರಂಗಾಚಾರ್ಲು (೧೮೮೧-೮೩)

ಮಹಾರಾಜರು ಅಧಿಕಾರಕ್ಕೆ ಬಂದ ಕೂಡಲೆ ಅವರು ದಿವಾನ್ ಸಿ. ರಂಗಾಚಾರ್ಲು (೧೮೩೧-೧೮೮೩) ರವರನ್ನು ಮೈಸೂರಿನ ಮೊದಲ ದಿವಾನರಾಗಿ ನೇಮಕ ಮಾಡಿದರು. ಚೆಟ್ಟಿಪಾಣಿಯಂ ವೀರವಲ್ಲಿ ರಂಗಾಚಾರ್ಲುರವರು ೧೮೬೮ ರಲ್ಲಿ ರಾಜ್ಯದ ಸೇವೆಯನ್ನು ಪ್ರವೇಶಿಸಿದರು. ದಿವಾನರಾಗುವ ಮುನ್ನ ಅವರು ಮದರಾಸ್ ಪ್ರೆಸಿಡೆನ್ಸಿಯ (ರಾಜಧಾನಿ ಪ್ರಾಂತ್ಯದ) ದಕ್ಷ ಆಡಳಿತಗಾರರಾಗಿದ್ದರು. ಮತ್ತು ಉದಾರವಾದ ಹೊರನೋಟ ಹೊಂದಿದ್ದರು. ಮೈಸೂರಿನ

ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಅನೇಕ ಪ್ರಮುಖ ಬದಲಾವಣೆಗಳನ್ನು ಜಾರಿಗೆ ತರಲಾಯಿತು. ರಂಗಾಚಾರ್ಲುರವರ ದಿವಾನಗಿರಿಯಲ್ಲಿ ಮೈಸೂರಿನ **ಪ್ರಜಾಪ್ರತಿನಿಧಿ ಸಭೆ**ಯನ್ನು ಸ್ಥಾಪಿಸಲಾಯಿತು. ಆಡಳಿತವನ್ನು ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಲು ಈ ಸಭೆಯನ್ನು ಪ್ರತಿ ವರ್ಷ ಕರೆಯಲಾಯಿತು. ಮೊದಲನೆಯ ಸಭೆಯನ್ನು ಅಕ್ಟೋಬರ್ ೭, ೧೮೮೧ ರಲ್ಲಿ ನಡೆಸಲಾಯಿತು. ಜಿಲ್ಲಾಧಿಕಾರಿಗಳಿಂದ ನೇಮಕ ಮಾಡಲಾದ ೧೪೪ ಸದಸ್ಯರು ಸಭೆಯಲ್ಲಿ ಭಾಗವಹಿಸಿದರು. ಈ ಸಭೆಯು ಜಮೀನ್ದಾರರನ್ನು, ವರ್ತಕರನ್ನು, ಪ್ಲಾಂಟರ್‌ಗಳನ್ನು ಹಾಗೂ ಕೃಷಿಕರನ್ನು ಒಳಗೊಂಡಿತ್ತು. ಸರ್ಕಾರ ನೀತಿಗಳನ್ನು ಮತ್ತು ಸರ್ಕಾರವು ಕೈಗೊಂಡ ನಿರ್ಧಾರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಸಭೆಯು ಕಾನೂನಿನಿಂದ ಸ್ಥಾಪಿಸಿದ ಸಂಸ್ಥೆಯಾಗಿಲ್ಲದಿದ್ದರೂ ರಾಜ್ಯದ ಆಡಳಿತವನ್ನು ನಡೆಸುವುದರಲ್ಲಿ ಜನ ಆಸೆ ಆಕಾಂಕ್ಷೆಗಳನ್ನು ಪರಿಗಣಿಸಲು ಪ್ರಯತ್ನಿಸಿದ ಮೊದಲು ಪ್ರತಿನಿಧಿತ್ವ ಸಂಸ್ಥೆಯಾಗಿತ್ತು.

ರಂಗಾಚಾರ್ಲು ರಾಜ್ಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಕೆಲವು ಕ್ರಮಗಳನ್ನು ಜಾರಿಗೆ ತಂದರು. ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಶೋಚನೀಯವಾಗಿತ್ತು. ಕಂದಾಯ ವಸೂಲಿಯು ಕಡಿಮೆಯಾಯಿತು. ದಿವಾನರು ಅನೇಕ ಇಲಾಖೆಗಳ ಖರ್ಚನ್ನು ಕಡಿಮೆ ಮಾಡಿದರು. ೧೮೭೫-೭೬ ರ ಅವಧಿಯಲ್ಲಿ ಆಘಾತವನ್ನು ಉಂಟುಮಾಡಿದ ಕ್ರಮದಿಂದ ರಾಜ್ಯದ ಆದಾಯದಲ್ಲಿ ನಷ್ಟ ಉಂಟಾಯಿತು. ದಿವಾನರು ತೆರಿಗೆಗಳನ್ನು ಕಡಿಮೆ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟರು. ೧೮೮೨ ರಲ್ಲಿ **ಬೆಂಗಳೂರು-ಮೈಸೂರು** ರೈಲ್ವೆ ಮಾರ್ಗವನ್ನು ಪ್ರಾರಂಭಿಸಲಾಯಿತು. ಮತ್ತು ಅದು ರಾಜ್ಯಕ್ಕೆ ವರವಾಗಿ ಪರಿಣಮಿಸಿತು. ಅದೇ ವರ್ಷ ಶೇಕಡ ೫ ರಷ್ಟು ಬಡ್ಡಿಯಂತೆ ರೂ. ೨೦ ಲಕ್ಷಗಳ ಸಾಲವನ್ನು ಪಡೆದುಕೊಂಡು **ಬೆಂಗಳೂರಿನಿಂದ ಗುಬ್ಬಿ**ವರೆಗೆ ರೈಲ್ವೆಯನ್ನು ವಿಸ್ತರಿಸಲಾಯಿತು. ಇದರಿಂದ ರಾಜ್ಯದ ಆರ್ಥಿಕ ಪ್ರಗತಿಗೆ ಅಪಾರ ಕೊಡುಗೆ ನೀಡಿದಂತಾಯಿತು.

ರಂಗಾಚಾರ್ಲುರವರು ಶಿಕ್ಷಣ ಕ್ಷೇತ್ರಕ್ಕೂ ಅಪಾರವಾದ ಕೊಡುಗೆಯನ್ನು ನೀಡಿದರು. ಅವರು ಉನ್ನತ ಶಿಕ್ಷಣ ಮುಂದುವರೆಸಲು ಆಶಿಸಿದ ಯುವಕರಿಗೆ ವಿದ್ಯಾರ್ಥಿ ವೇತನ ನೀಡುವ ಸೌಲಭ್ಯತೆಯನ್ನು ಮಾಡಿದರು. ಈ ಸವಲತ್ತನ್ನು ಪಡೆದುಕೊಂಡು ಅನೇಕ ವಿದ್ಯಾರ್ಥಿಗಳಲ್ಲಿ **ಸರ್.ಎಂ. ವಿಶ್ವೇಶ್ವರಯ್ಯ**ವರು ಒಬ್ಬರಾಗಿದ್ದರು. ರಂಗಾಚಾರ್ಲುರವರು ಕನ್ನಡ ಭಾಷಾ ಪ್ರೇಮಿಯಾಗಿದ್ದರು. ಅವರು ಕನ್ನಡ ಸಾಹಿತ್ಯದ ಅಧ್ಯಯನವನ್ನು ಪ್ರೋತ್ಸಾಹಿಸಿದರು. ಅವರು ಕನ್ನಡ ವಿದ್ವಾಂಸರನ್ನು ಪೋಷಿಸಿದರು. ರಂಗಾಚಾರ್ಲುರವರು ಆಂಗ್ಲೋ-ಇಂಡಿಯನ್ನರಿಗೆ ಭೂಮಿಯನ್ನು ನೀಡಿದರು. ಆಂಗ್ಲೋ-ಇಂಡಿಯನ್ನರಾಗಿ ವೈಟ್‌ಫೀಲ್ಡ್ ಬಳಿ ಪ್ರತ್ಯೇಕವಾದ ಬಡಾವಣೆಯನ್ನು ಸ್ಥಾಪಿಸಿದರು. ೧೮೮೧ ರಲ್ಲಿ ರಂಗಾಚಾರ್ಲು **ಕೋಲಾರ**ದಲ್ಲಿ ಚಿನ್ನದ ಗಣಿ ಕೆಲಸವನ್ನು ಪ್ರಾರಂಭಿಸಲು **ಜಾನ್ ಟೇಲರ್ ಅಂಡ್ ಕಂಪನಿ**ಯೊಂದಿಗೆ ಒಪ್ಪಂದವೊಂದನ್ನು ಮಾಡಿಕೊಂಡರು. ಸರ್ಕಾರವು ಗಣಿ ಕೆಲಸದಿಂದ ಬಂದ ಲಾಭದಲ್ಲಿ ಶೇಕಡಾ ಐದರಷ್ಟನ್ನು ಪಡೆದುಕೊಳ್ಳುವ ಹಕ್ಕನ್ನು ಹೊಂದಿತ್ತು.

ದಿವಾನ್ ರಂಗಾಚಾರ್ಲುರವರು ಮೈಸೂರು ರಾಜ್ಯವು ಅನುಭವಿಸುತ್ತಿದ್ದ ಆರ್ಥಿಕ ಮುಗ್ಗಟ್ಟನ್ನು ಕಂಡರು ಮತ್ತು ಆಡಳಿತದಲ್ಲಿ ಭ್ರಷ್ಟಾಚಾರವು ಅಧಿಕವಾಗಿತ್ತು. ಮೈಸೂರು

ರಾಜ್ಯವು ಬ್ರಿಟಿಷ್ ಸರ್ಕಾರಕ್ಕೆ ರೂ. ೮೦ ಲಕ್ಷ ಸಾಲವನ್ನು ನೀಡಬೇಕಾಯಿತು. ದಿವಾನರು ರಾಜ್ಯದ ಹಣಕಾಸನ್ನು ಒಂದುಗೂಡಿಸಲು ಅನೇಕ ಕ್ರಮಗಳನ್ನು ಕೈಗೊಂಡರು. ಅವರು ಅನೇಕ ಇಲಾಖೆಗಳಲ್ಲಿ ಖರ್ಚನ್ನು ಕಡಿಮೆ ಮಾಡಿದರು. ರಂಗಾಚಾರ್ಲು ಸಾಲದ ಮೇಲಿನ ಬಡ್ಡಿಯನ್ನು ಶೇಕಡಾ ೫ ರಿಂದ ಶೇಕಡಾ ೪ ಕ್ಕೆ ಇಳಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಿದರು. ಅನೇಕ ಅಧಿಕಾರಿಗಳ ಸೇವೆಗಳನ್ನು ರದ್ದುಪಡಿಸಲಾಯಿತು. ಅವರು ಕೆಲವು ಸಹಾಯಕ ಕಮಿಷನರ್‌ಗಳ ಸಂಭಾವನೆಯನ್ನು ಕಡಿಮೆ ಮಾಡಿದರು. ಅಧಿಕ ಸಂಭಾವನೆ ಪಡೆದುಕೊಳ್ಳುತ್ತಿದ್ದ ಯೂರೋಪಿಯನ್ ಅಧಿಕಾರಿಗಳ ಬದಲಾಗಿ ಭಾರತೀಯರನ್ನು ನೇಮಕ ಮಾಡಲಾಯಿತು. ನಾಲ್ಕು ಮುನ್ಸಿಫ್ ನ್ಯಾಯಾಲಯಗಳನ್ನು ಹಾಗೂ ಮೂರು ಉಪನ್ಯಾಯಾಲಯಗಳನ್ನು ರದ್ದುಪಡಿಸಲಾಯಿತು. ಮಿತವ್ಯಯ ಪದ್ಧತಿಯನ್ನು ಅನುಸರಿಸಿ, ರಂಗಾಚಾರ್ಲು ಪ್ರತಿ ವರ್ಷ ರೂ. ೨ ೧/೨ ಲಕ್ಷ ಒಟ್ಟು ಉಳಿತಾಯವನ್ನು ಸಾಧಿಸಿದರು.

ರಂಗಾಚಾರ್ಲು ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದರು. ಕೆಲವು ತಾಲ್ಲೂಕು ಹಾಗೂ ನಾಲ್ಕು ಮುನ್ಸಿಫ್ ನ್ಯಾಯಾಲಯಗಳೊಂದಿಗೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ರದ್ದುಪಡಿಸಲಾಯಿತು. ರಂಗಾಚಾರ್ಲುರವರು ಆಡಳಿತದಲ್ಲಿರುವ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಅಪಾರವಾಗಿ ಗಮನವನ್ನು ಹರಿಸಿದರು. ಭ್ರಷ್ಟ ಅಧಿಕಾರಿಗಳಿಗೆ ತೀವ್ರವಾದ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಅವರು ನಿಷ್ಠಾವಂತ ಅಧಿಕಾರಿಗಳನ್ನು ಮೆಚ್ಚಿದರು ಮತ್ತು ಅವರನ್ನು ಪ್ರೋತ್ಸಾಹಿಸಿದರು. ಅವರು ಅನೇಕ ಕಿರಿಯ ಅಧಿಕಾರಿಗಳಿಗೆ ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರರಿಗೆ ತರಬೇತಿ ನೀಡಿದರು. ದಿವಾನ್ ರಂಗಾಚಾರ್ಲು ರವರು ಶಿಕ್ಷಣವನ್ನು ಮುಂದುವರೆಸಲು ಆಶಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳ ಸೌಲಭ್ಯತೆಯನ್ನು ಒದಗಿಸಿದರು. ಅನೇಕ ಶಾಲೆಗಳನ್ನು ಪ್ರಾರಂಭಿಸಿದರು. ಮಹಾರಾಣಿ ಬಾಲಕಿಯರ ಶಾಲೆಯನ್ನು ೧೮೮೧ ರಲ್ಲಿ ಸ್ಥಾಪಿಸಿದರು. ಅವರ ಪತ್ನಿ ಆಲಮೇಲಮ್ಮನವರು ಮಹಿಳೆಯರಲ್ಲಿ ಶಿಕ್ಷಣವನ್ನು ಹರಡಲು ಆಸಕ್ತಿ ಹೊಂದಿದ್ದರು. ರಂಗಾಚಾರ್ಲು ಅನೇಕ ವಿದ್ವಾಂಸರನ್ನು ಸಾರ್ವಜನಿಕರ ಅಭಿಪ್ರಾಯವನ್ನು ಪ್ರತಿನಿಧಿಸಲು ಪತ್ರಿಕೋದ್ಯಮವನ್ನು ಪ್ರೋತ್ಸಾಹಿಸಿದರು.

ರಂಗಾಚಾರ್ಲುರವರ ಚಟುವಟಿಕೆಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿದರೆ, ಅವರ ಆಡಳಿತದ ಮುಖ್ಯ ಲಕ್ಷಣವು ನೈತಿಕ ಮೌಲ್ಯಾಧಾರಿತ ವ್ಯವಸ್ಥೆಯಾಗಿತ್ತು. ಅವರು ದಕ್ಷ ಹಾಗೂ ಪ್ರಗತಿಪರ ರಾಜ್ಯಾಡಳಿತ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಅಪಾರ ಪ್ರಮಾಣದಲ್ಲಿ ಕೊಡುಗೆ ನೀಡಿದರು. ರಂಗಾಚಾರ್ಲು ದಕ್ಷ ಆಡಳಿತಗಾರರಾಗಿದ್ದರು. ಅವರ ಕಾಲದಲ್ಲಿ ರಾಜ್ಯದ ಆರ್ಥಿಕ ಪ್ರಗತಿ ಉಂಟಾಯಿತು. ರಂಗಾಚಾರ್ಲು ೧೮೮೩ ರಲ್ಲಿ ನಿಧನರಾದರು. ಅವರ ನಂತರ ಕೆ. ಶೇಷಾದ್ರಿ ಐಯರ್ ಮೈಸೂರಿನ ದಿವಾನರಾದರು.]

ಸರ್ ಕೆ. ಶೇಷಾದ್ರಿ ಐಯರ್ (೧೮೮೩-೧೯೦೧)

೧೮೬೮ ರಲ್ಲಿ ಶೇಷಾದ್ರಿ ಐಯರ್ ಮೈಸೂರಿನ ಸೇವೆಯನ್ನು ವಹಿಸಿಕೊಂಡರು. ಐಯ್ಯರ್ ಹುಟ್ಟಿದ್ದು ೧೮೪೫ ರಲ್ಲಿ. ಹುಟ್ಟೂರು ಕ್ಯಾಲಿಕಟ್. ಅವರು ಮದರಾಸಿನ ವಿಶ್ವವಿದ್ಯಾಲಯದ

ಪದವಿಧರರಾಗಿದ್ದರು ಮತ್ತು ಮೈಸೂರಿನ ಸೇವೆಯಲ್ಲಿ ೧೮೬೮ ರಲ್ಲಿ ನ್ಯಾಯಾಂಗದ ಶಿರಸ್ತೆದಾರರಾಗಿದ್ದರು. ಆನಂತರ ಅವರು ಉಪಕಮಿಷನರ್ ಮತ್ತು ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ೧೮೮೩ ರಲ್ಲಿ ಅವರು ಮೈಸೂರಿನ ದಿವಾನರಾದರು.

ಶೇಷಾದ್ರಿ ಐಯರ್ ರಾಜ್ಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಿಸಿದರು. ೧೮೮೪ ರಲ್ಲಿ ಬ್ರಿಟಿಷ್ ಸರ್ಕಾರವು ಬೆಂಗಳೂರಿನ ಕಂಟೋನ್ಮೆಂಟ್ ನಾಗರಿಕ ಮತ್ತು ಸೈನ್ಯ ಠಾಣೆಯ ನಿಯಂತ್ರಣವನ್ನು ವಹಿಸಿಕೊಂಡಿತು. ಇದರಿಂದ ರಾಜ್ಯದ ಆದಾಯವು ಹೆಚ್ಚಾಯಿತು. ರಾಜ್ಯದ ಆರ್ಥಿಕ ಪರಿಸ್ಥಿತಿಯು ಹದಗೆಟ್ಟಿತ್ತು. ಶೇಷಾದ್ರಿ ಐಯರ್ ಬ್ರಿಟಿಷ್ ಸರ್ಕಾರಕ್ಕೆ ಮೈಸೂರಿಗೆ ನೀಡಲಾದರೂ ೧೦ ೧/೨ ಲಕ್ಷ ಸಹಾಯಧನವನ್ನು ಮನ್ನಾ ಮಾಡುವಂತೆ ಬೇಡಿಕೊಂಡರು. ಅವರ ಶ್ರಮದಿಂದಾಗಿ ಅದನ್ನು ೧೮೮೬ ರಲ್ಲಿ ಮನ್ನಾ ಮಾಡಲಾಯಿತು. ಆದರೆ ಶೇಷಾದ್ರಿ ಐಯರ್ ಸಹಾಯ ಧನವನ್ನು ೧೮೯೬ ರವರೆಗೆ ಮನ್ನಾ ಮಾಡುವಂತೆ ಬಲವಾಗಿ ಮನವಿ ಮಾಡಿಕೊಂಡರು ಮತ್ತು ಬ್ರಿಟಿಷ್ ಸರ್ಕಾರವು ಅದಕ್ಕೆ ಒಪ್ಪಿಕೊಂಡಿತು.

ಶೇಷಾದ್ರಿ ಐಯರ್ ರೈಲ್ವೆಗಳ ಬೆಳವಣಿಗೆಗೆ ಅಪಾರ ಆಸಕ್ತಿಯನ್ನು ತೋರಿದರು. ೧೮೯೯ ರ ವೇಳೆಗೆ ಸುಮಾರು ೩೧೫ ಮೈಲಿ ರೈಲ್ವೆಯನ್ನು ರಚಿಸಲಾಗಿತ್ತು. ಬೆಂಗಳೂರನ್ನು ಮೈಸೂರು, ಹಿಂದೂಪುರ ಮತ್ತು ಗುಬ್ಬಿಗಳೊಂದಿಗೆ ದಕ್ಷಿಣ ಮರಾಠ ರೈಲ್ವೆ ಹರಿಹರದೊಂದಿಗೆ ಸೇರಿಸಲಾಯಿತು. ರೈಲ್ವೆ ನಿರ್ಮಾಣ ಕಾರ್ಯಕ್ಕೆ ದಕ್ಷಿಣ ಮರಾಠ ರೈಲ್ವೆ ಕಂಪನಿಯು ಧನ ಸಹಾಯ ನೀಡಿತು. ೧೮೯೧ ರಲ್ಲಿ ಮೈಸೂರು-ನಂಜನಗೂಡಿನ ನಡುವಿನ ರೈಲ್ವೆ ಮಾರ್ಗವು ಪೂರ್ಣಗೊಂಡಿತು ಮತ್ತು ೧೮೯೯ ರಲ್ಲಿ ಕೋಲಾರ ರೈಲ್ವೆ ಮಾರ್ಗವನ್ನು ಪ್ರಾರಂಭಿಸಲಾಯಿತು. ೧೮೯೯ ರಲ್ಲಿ ಬೀರೂರ್-ಶಿವಮೊಗ್ಗ ರೈಲ್ವೆ ಮಾರ್ಗವನ್ನು ಪ್ರಾರಂಭಿಸಲಾಯಿತು.

ಮೈಸೂರಿನ ಕಂದಾಯ ಪದ್ಧತಿಯು ದೋಷಗಳನ್ನು ಹೊಂದಿತ್ತು. ಆದ್ದರಿಂದ ಬಾಂಬೆ ಕಂದಾಯ ಕಾಯಿದೆಯ ಆಧಾರದ ಮೇಲೆ ಮೈಸೂರಿನ ಕಂದಾಯ ಕಾನೂನು ಸೂತ್ರವನ್ನು ರೂಪಿಸಲಾಯಿತು. ರಾಜ್ಯವು ಸಾರಾಯಿಯಿಂದ ಬರಬೇಕಾದ ಕಂದಾಯವನ್ನು ಕಳೆದುಕೊಳ್ಳುತ್ತಿತ್ತು. ಸಾರಾಯಿಯನ್ನು ಭಟ್ಟಿ ಇಳಿಸಿ, ಕಾನೂನಿಗೆ ವಿರುದ್ಧವಾಗಿ ಮಾರಲಾಗುತ್ತಿತ್ತು. ಖಾಸಗಿ ವ್ಯಾಪಾರಿಗಳು ಈಚಲು ಮರದ ಏಕಸ್ವಾಮ್ಯವನ್ನು ಪೂರ್ಣವಾಗಿ ನಾಶಪಡಿಸಲಾಯಿತು. ಆದ್ದರಿಂದ ಸಾರಾಯಿಯಿಂದ ಆದಾಯವೂ ಹೆಚ್ಚಾಯಿತು.

೧೮೮೮ ರಲ್ಲಿ ದಸರಾದಲ್ಲಿ ಮೊದಲ ಬಾರಿಗೆ ಕೃಷಿ ಕೈಗಾರಿಕೆ ಮತ್ತು ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ನಡೆಸಲಾಯಿತು. ೧೮೮೬ ರಲ್ಲೇ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಕೃಷಿ ಹಾಗೂ ಅಂಕಿ ಸಂಖ್ಯೆ ನಿರ್ದೇಶಕರನ್ನು ನೇಮಕ ಮಾಡಲಾಗಿತ್ತು.

೧೮೯೦ ರಲ್ಲಿ ಬಿ.ಎಲ್. ರೈಸ್‌ರವರ ಮಾರ್ಗದರ್ಶನದಲ್ಲಿ ಪುರಾತತ್ವ ಸಮೀಕ್ಷೆ ಇಲಾಖೆಯನ್ನು ಸ್ಥಾಪಿಸಲಾಗಿತ್ತು. ೧೮೯೪ ರಲ್ಲಿ ಬ್ರೂಸ್‌ಫುಟ್‌ರವರ ಮಾರ್ಗದರ್ಶನದಲ್ಲಿ

ಭೂವಿಜ್ಞಾನ ಇಲಾಖೆಯೊಂದನ್ನು ಸ್ಥಾಪಿಸಿದನು. ೧೮೮೯ ರಲ್ಲಿ ಹಳೆಯ ಪ್ರಾಚೀನ ಪದ್ಧತಿಯನ್ನು ಬ್ರಿಟಿಷರ ಅಂಚೆ ಪದ್ಧತಿಯೊಂದಿಗೆ ವಿಲೀನಗೊಳಿಸಲಾಯಿತು. ಸರ್ಕಾರಿ ನೌಕರರಿಗೆ ಶೇಷಾದ್ರಿ ಐಯರ್ ಜೀವ ವಿಮಾ ಯೋಜನೆಯನ್ನು ಜಾರಿಗೆ ತಂದರು. ೧೮೮೭ ರಲ್ಲಿ ವಿಕ್ಟೋರಿಯಾ ರಾಣಿಯ ಸುವರ್ಣ ಮಹೋತ್ಸವವನ್ನು ಆಚರಿಸಲು ತುಮಕೂರಿನಲ್ಲಿ ಬಾಲಕಿಯರ ಶಾಲೆಯನ್ನು ಸ್ಥಾಪಿಸಲಾಯಿತು. ೧೮೯೪ ರಲ್ಲಿ ಮೈಸೂರು ಬಾಲ್ಯ ವಿವಾಹಗಳ ಕಾಯಿದೆಯನ್ನು ಜಾರಿಗೆ ತರಲಾಯಿತು. ಅದರ ಪ್ರಕಾರ ೮ ವರ್ಷ ಮೀರಿದ ಬಾಲಕಿಯರಿಗೆ ವಿವಾಹ ಮಾಡುವುದು ಕಾನೂನಿಗೆ ವಿರುದ್ಧವೆಂದು ಪರಿಗಣಿಸಲಾಯಿತು.

ಬೆಂಗಳೂರಿನಲ್ಲಿ ಆರ್ಯ ಬಾಲಿಕ ಪಾಠಶಾಲಾ ಮತ್ತು ತುಮಕೂರಿನಲ್ಲಿ ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಮಹಾರಾಣಿ ಪ್ರೌಢಶಾಲೆಯನ್ನು ೧೯೦೧ ರಲ್ಲಿ ಮಹಾರಾಣಿ ಕಾಲೇಜು ಎಂದು ಘೋಷಿಸಲಾಯಿತು. ಮಾರಿ ಕಣಿವೆ ಅಣೆಕಟ್ಟು ಹಾಗೂ ಕಾವೇರಿ ಜಲವಿದ್ಯುತ್ ಯೋಜನೆಯ ನಿರ್ಮಾಣವು ಶೇಷಾದ್ರಿ ಐಯರ್‌ರವರ ಎರಡು ಮುಖ್ಯ ಸಾಧನೆಗಳಾಗಿದ್ದವು. ಶಿವನಸಮುದ್ರದ ಕಾವೇರಿ ಜಲಾಶಯವನ್ನು ಜಲವಿದ್ಯುತ್ ಉತ್ಪಾದನೆ ಬಳಸಿಕೊಳ್ಳಲಾಯಿತು. ಬೆಂಗಳೂರು ಭಾರತದಲ್ಲೇ ವಿದ್ಯುತ್ ಹೊಂದಿದ ಮೊದಲ ನಗರವಾಯಿತು.

ಮೈಸೂರಿನ ಆಡಳಿತ ಪದ್ಧತಿಯನ್ನು ಉತ್ತಮಪಡಿಸಲು ಶೇಷಾದ್ರಿ ಐಯರ್ ಕೆಲವು ಬದಲಾವಣೆಗಳನ್ನು ಜಾರಿಗೆ ತಂದರು. ಅರ್ಹ ವಿದ್ಯಾರ್ಥಿಗಳು ರಾಜ್ಯಕ್ಕೆ ಸೇವೆ ಸಲ್ಲಿಸಲೆಂದು ಅವಕಾಶ ದೊರಕಲೆಂದು ಅವರು ೧೮೯೧ ರಲ್ಲಿ ಮೈಸೂರು ಲೋಕಸೇವಾ ಪರೀಕ್ಷೆಗಳನ್ನು ಜಾರಿಗೆ ತಂದರು. ಸ್ಥಳೀಯ ಜನರ ಹಿತಾಸಕ್ತಿಯನ್ನು ಕಾಪಾಡಲು ಪ್ರತಿನಿಧಿತ್ವ ಸಭೆಯ ಹಿರಿಯ ಸದಸ್ಯರಾದ ಎಂ. ವೆಂಕಟಕೃಷ್ಣಯ್ಯ ಮತ್ತು ಇತರರು ಅದನ್ನು ವಿರೋಧಿಸಿದರು.

ದಿವಾನ್ ಶೇಷಾದ್ರಿ ಐಯರ್ ಮೈಸೂರು ಮುಖ್ಯ ನ್ಯಾಯಾಲಯ ಕಾಯಿದೆ, ಮೈಸೂರು ಕೈಗಾರಿಕೆಗಳ ಕಾಯಿದೆ, ಮೈಸೂರು ರೈಲ್ವೆಗಳ ಕಾಯಿದೆ ಮತ್ತು ಮೈಸೂರು ಬಾಲ್ಯ ವಿವಾಹ ರದ್ದುಪಡಿಸುವ ಕಾಯಿದೆ ಮುಂತಾದ ಹಲವಾರು ಮುಖ್ಯ ಕಾಯಿದೆಗಳನ್ನು ಜಾರಿಗೆ ತಂದರು. ಶೇಷಾದ್ರಿ ಐಯರ್ ಜಾರಿಗೆ ತಂದ ನ್ಯಾಯಾಡಳಿತ ಸುಧಾರಣೆಗಳ ಕಾಯಿದೆಯೊಂದರ ಪ್ರಕಾರ, ಅನೇಕ ಬದಲಾವಣೆಗಳನ್ನು ಜಾರಿಗೆ ತರಲಾಯಿತು. ಯೂರೋಪಿಯನ್ ಮುಖ್ಯ ನ್ಯಾಯಾಧೀಶರು ಹಾಗೂ ಮೂರು ಮಂದಿ ನ್ಯಾಯಾಧೀಶರನ್ನು ಒಳಗೊಂಡಿದ್ದ ಮುಖ್ಯ ನ್ಯಾಯಾಲಯವನ್ನು ರೂಪಿಸಲಾಯಿತು. ಹಿಂದೂಗಳಿಗೆ ಹಾಗೂ ಮುಸ್ಲಿಮರಿಗೆ ನ್ಯಾಯ ಒದಗಿಸುವುದರಲ್ಲಿ ಹಿಂದೂ ಹಾಗೂ ಮುಸ್ಲಿಂ ಕಾನೂನುಗಳನ್ನು ಅನುಸರಿಸಲಾಯಿತು.

ದಿವಾನ್ ಶೇಷಾದ್ರಿ ಐಯರ್‌ರವರ ಕಾಲದಲ್ಲಿ ೧೮೯೪ ರಲ್ಲಿ ಕೃಷಿ ಬ್ಯಾಂಕ್‌ಗಳ ಯೋಜನೆಯೊಂದನ್ನು ಪ್ರಾರಂಭಿಸಲಾಯಿತು. ತೋಟಗಾರಿಕೆಯನ್ನು ಅರಣ್ಯದಲ್ಲಿ ಅಪಾರ ಪ್ರಮಾಣದಲ್ಲಿ ಕೈಗೊಂಡ ಅರಣ್ಯ ಸಂಪತ್ತನ್ನು ಹೆಚ್ಚಿಸಲಾಯಿತು. ಕಾಫಿ ತೋಟಗಾರಿಕೆಯನ್ನು

ಪ್ರೋತ್ಸಾಹಿಸಲಾಯಿತು. ಕೋಲಾರದ ಚಿನ್ನದ ಗಣಿಗಳು ಸರ್ಕಾರಕ್ಕೆ ರೂ. ೭ ಲಕ್ಷಗಳನ್ನು ಗಳಿಸಿಕೊಟ್ಟವು. ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ರಚನಾತ್ಮಕ ಯೋಜನೆಗಳನ್ನು ರೂಪಿಸಲು ಬಳಸಲಾಯಿತು. ಬೆಂಗಳೂರು ವಸ್ತ್ರ ವ್ಯಾಪಾರದ ಮುಖ್ಯ ಕೇಂದ್ರವಾಗಿ ಬೆಳೆಯಿತು. ಬೆಂಗಳೂರಿನಲ್ಲಿ ಮೈಸೂರು ನೇಯ್ಗೆ ಹಾಗೂ ತಯಾರಿಕೆಯ ಶಾಖೆಯನ್ನು ಪ್ರಾರಂಭಿಸಲಾಯಿತು. ಮತ್ತು ೧೮೮೭ ರಲ್ಲಿ ಬೆಂಗಳೂರು ಉಣ್ಣೆ, ಹತ್ತಿ ಹಾಗೂ ರೇಷ್ಮೆ ಗಿರಣಿಗಳನ್ನು ಪ್ರಾರಂಭಿಸಲಾಯಿತು.

ಶಿಕ್ಷಣದ ಅಭಿವೃದ್ಧಿಗಾಗಿ ವಿಶೇಷ ಗಮನವನ್ನು ನೀಡಲಾಯಿತು. ಶೇಷಾದ್ರಿ ಐಯರ್‌ರವರ ದಿವಾನಗಿರಿಯಲ್ಲಿ ೧೮೯೪ ರಲ್ಲಿ ರಾಜ್ಯದಲ್ಲಿದ್ದ ಶಾಲೆಗಳ ಸಂಖ್ಯೆಯು ೧೮೯೭ ಕ್ಕೆ ಏರಿತು. ೧೦ನೆಯ ಚಾಮರಾಜ ಒಡೆಯರ್‌ರವರ ಕಾಲದಲ್ಲಿ ೮ ಪ್ರಾಥಮಿಕ ದೇಶೀಯ ಶಾಲೆಗಳನ್ನು ೫೦ ಇಂಗ್ಲಿಷ್ ಮಾಧ್ಯಮಿಕ ಶಾಲೆಗಳನ್ನು, ಒಂದು ಪ್ರಥಮ ದರ್ಜೆ ಕಾಲೇಜನ್ನು ಹಾಗೂ ಪೌರಾತ್ಯ ಕಾಲೇಜುಗಳನ್ನು ಸ್ಥಾಪಿಸಲಾಯಿತು. ದಿವಾನರು ಸಭೆಯಲ್ಲಿ ೧೮೮೬ ರಲ್ಲಿ ಸರ್ಕಾರದ ಶಿಕ್ಷಣ ನೀತಿಯನ್ನು ಘೋಷಿಸಿದರು. ಸರ್ವ ವರ್ಗಗಳ ಜನರಿಗೂ ಮಾಧ್ಯಮಿಕ ಶಿಕ್ಷಣವನ್ನು ತಲುಪುವಂತೆ ಮಾಡುವುದು ಸರ್ಕಾರದ ನೀತಿ ಎಂದು ಹೇಳಿದರು. ದೇಶ ಭಾಷೆಗಳ ಹಾಗೂ ಸಂಸ್ಕೃತ ಭಾಷೆಯ ಅಧ್ಯಯನವನ್ನು ಪ್ರೋತ್ಸಾಹಿಸುವುದು ಸರ್ಕಾರದ ಮುಖ್ಯ ಗುರಿಯಾಗಿತ್ತು. ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಲು ಸಾಕಷ್ಟು ಮಾನ್ಯತೆಯನ್ನು ನೀಡಲಾಯಿತು.

ಸರ್ಕಾರವು ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಕ್ರಮಗಳನ್ನು ಕೈಗೊಂಡಿತು. ೧೮೯೨ ರಲ್ಲಿ ಮೈಸೂರಿನಲ್ಲಿ ಕೈಗಾರಿಕಾ ಶಾಲೆಯನ್ನು ಪ್ರಾರಂಭಿಸಲಾಯಿತು. ಕುಂಬಾರಿಕೆ, ಗಾರೆ ಕೆಲಸ, ಚಿತ್ರಕಲೆ ಮತ್ತು ಮರಗೆಲಸದಲ್ಲಿ ಶಿಕ್ಷಣವನ್ನು ನೀಡಲಾಯಿತು. ಮದರಾಸ್ ವಿಶ್ವವಿದ್ಯಾಲಯಕ್ಕೆ ಸೇರಿದ ಮಹಾರಾಜ ಕಾಲೇಜನ್ನು 'ಪ್ರಥಮ ದರ್ಜೆ ಕಾಲೇಜ್' ಎಂದು ಘೋಷಿಸಲಾಯಿತು.

ಉನ್ನತ ತಾಂತ್ರಿಕ ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗಲು ಮೈಸೂರಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪ್ರಾರಂಭಿಸಲಾಯಿತು. ೧೮೮೭ ರಲ್ಲಿ ಮಹಾರಾಜರು ಕನ್ನಡ ಮತ್ತು ಸಂಸ್ಕೃತ ಅಧ್ಯಯನಗಳನ್ನು ಪೋಷಿಸುತ್ತಿದ್ದರಿಂದ ಮೈಸೂರಿನ ಓರಿಯಂಟಲ್ ಗ್ರಂಥಾಲಯವನ್ನು ಆರಂಭಿಸಿದರು. ಪೌರಾತ್ಯ ಶಿಕ್ಷಣ ಮತ್ತು ಸಂಶೋಧನೆಯ ಬೆಳವಣಿಗೆಯಲ್ಲೂ ಅಪಾರ ಆಸಕ್ತಿಯನ್ನು ವಹಿಸಿದರು. ಓರಿಯಂಟಲ್ ಸಂಶೋಧನಾ ಸಂಸ್ಥೆಯನ್ನು ಅಮೂಲ್ಯ ಹಸ್ತಪ್ರತಿಗಳನ್ನು ಕಾಪಾಡಲು ಪುನರ್ ರಚಿಸಲಾಯಿತು.

ಶೇಷಾದ್ರಿ ಐಯರ್ ಆಡಳಿತ ವ್ಯವಸ್ಥೆಯಲ್ಲೂ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಮೈಸೂರಿನ ರಾಜ್ಯದ ಪ್ರಗತಿಗೆ ಕೊಡುಗೆಯನ್ನು ನೀಡಿದರು. ಅವರ ನಂತರ ೧೯೦೧ ರಲ್ಲಿ ಪಿ.ಎನ್. ಕೃಷ್ಣಮೂರ್ತಿ ಉತ್ತರಾಧಿಕಾರಿಯಾದರು.

ಹೆಚ್ಚಿನ ವಿಷಯ

[ದಿವಾನ್ ಪಿ.ಎನ್. ಕೃಷ್ಣಮೂರ್ತಿ (೧೯೦೧-೦೫)

ಪಿ.ಎನ್. ಕೃಷ್ಣಮೂರ್ತಿ ದಿವಾನ್ **ಪೂರ್ಣಯ್ಯ**ನವರ ಮರಿ ಮಗನಾಗಿದ್ದರು. ಅವರು ಬೆಂಗಳೂರು **ಸೆಂಟ್ರಲ್ ಕಾಲೇಜಿ**ನ ಪ್ರಪ್ರಥಮ ಪದವೀಧರರಲ್ಲಿ ಒಬ್ಬರಾಗಿದ್ದರು. ಅವರು ೧೯೦೧ ರಲ್ಲಿ ಮೈಸೂರಿನ ದಿವಾನರಾದರು. ಪಿ.ಎನ್. ಕೃಷ್ಣಮೂರ್ತಿ ದಾಖಲೆಗಳನ್ನು ಹೊಂದಿರುವ ಬ್ರಿಟಿಷರ ಆಡಳಿತ ವಿಧಾನದ ಆಧಾರದ ಮೇಲೆ ರಾಜ್ಯಾಡಳಿತವನ್ನು ರೂಪಿಸಲು ಪ್ರಯತ್ನಿಸಿದರು. ೧೯೦೨ ರಲ್ಲಿ ಮೈಸೂರಿನ ಸ್ಥಳೀಯ ಮಂಡಳಿಗಳ ಕಾಯಿದೆಯನ್ನು ಜಾರಿಗೆ ತರಲಾಯಿತು. ೩೮ ಸಂಘಗಳು, ೭೨ ತಾಲ್ಲೂಕು ಮಂಡಳಿಗಳು ಮತ್ತು ೮ ಜಿಲ್ಲಾ ಮಂಡಳಿಗಳನ್ನು ರೂಪಿಸಲಾಯಿತು. ಬಹುಮತದ ಅಭಿಪ್ರಾಯವನ್ನು ಪರಿಗಣಿಸಿ ಸ್ಥಳೀಯ ಮಂಡಳಿಗಳು ನಿರ್ಧಾರಗಳನ್ನು ಕೈಗೊಂಡವು. ಮೈಸೂರು ಸರ್ಕಾರವು ವರ್ಷಕ್ಕೆ ರೂ. ೫೦,೦೦೦ ವನ್ನು ಬೆಂಗಳೂರಿನಲ್ಲಿ ೧೯೦೫ ರಲ್ಲಿ **ಟಾಟಾ ವಿಜ್ಞಾನ ಸಂಶೋಧನಾ ಸಂಸ್ಥೆ**ಯ ಸ್ಥಾಪನೆಗಾಗಿ ನೀಡಿತು.

ನೇಯ್ಗೆ ಹಾಗೂ ಮರಗೆಲಸದಲ್ಲಿ ನಿರತರಾದ ಕಸುಬುದಾರರಿಗಾಗಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ದಿವಾನರು ನೀಡಿದ ಪ್ರೋತ್ಸಾಹದಿಂದಾಗಿ ಅನೇಕ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದವು. ೧೯೦೪ ರಲ್ಲಿ ಬ್ರಿಟಿಷ್ ಭಾರತದಲ್ಲಿ ಪ್ರಾರಂಭಿಸಲಾದ ಸಹಕಾರಿ ಚಳವಳಿಯಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಯಿತು. ಆದ್ದರಿಂದ ಜನರ ಅನುಕೂಲಕ್ಕಾಗಿ ಕ್ಷೇಮಾಭಿವೃದ್ಧಿ ಕ್ರಮಗಳನ್ನು ಜಾರಿಗೆ ತರಲಾಯಿತು. ಪಿ.ಎನ್. ಕೃಷ್ಣಮೂರ್ತಿ ೧೯೦೬ ರಲ್ಲಿ ನಿವೃತ್ತರಾದರು ಮತ್ತು **ವಿ.ಪಿ. ಮಾಧವರಾವ್** ಉತ್ತರಾಧಿಕಾರಿಯಾದರು.

ದಿವಾನ್ ವಿ.ಪಿ. ಮಾಧವರಾವ್ (೧೯೦೬-೧೯೦೯) .

೧೯೦೬ ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ವಿ.ಪಿ. ಮಾಧವರಾವ್‌ರವರನ್ನು ಮೈಸೂರಿನ ದಿವಾನರಾಗಿ ನೇಮಕ ಮಾಡಿದರು. ಅವರು ಮದರಾಸಿನಲ್ಲಿ ಪದವೀಧರಾದರು. ದಿವಾನರಾಗುವ ಮುನ್ನ ಅವರು **ಟ್ರಾವೆಂಕೂರಿ**ನ ದಿವಾನರಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಆನಂತರ ಕೌನ್ಸಿಲರ್ ಆಗಿ ಸೇವೆ ಸಲ್ಲಿಸಿದರು. ಮತ್ತು ಇದರಿಂದ ಅವರಿಗೆ ಅಪಾರವಾದ ಆಡಳಿತ ಅನುಭವವಿತ್ತು. ೧೯೦೭ ರಲ್ಲಿ ಮೈಸೂರಿನ ಶಾಸಕರಾಗಿ **ನ್ಯಾಯ ವಿಧಾಯಕ ಸಭೆ ಮಂಡಲಿ**ಯನ್ನು ಸ್ಥಾಪಿಸಲಾಯಿತು. ಅದು ಮೂರು ರೀತಿಯ ಸದಸ್ಯರನ್ನು ಒಳಗೊಂಡಿತ್ತು. ೧೦ ಸದಸ್ಯರಿಗಿಂತ ಕಡಿಮೆ ಹಾಗೂ ೧೫ ಸದಸ್ಯರಿಗಿಂತ ಹೆಚ್ಚಿನ ಹೆಚ್ಚುವರಿ ಸದಸ್ಯರಿರಲಿಲ್ಲ. ಸರ್ಕಾರವು ನಾಮಕರಣ ಮಾಡಿದ ೨೩ ಭಾಗದ ಹೆಚ್ಚುವರಿ ಸದಸ್ಯರು ಅಧಿಕಾರೇತರರಾಗಿದ್ದರು. ಇಬ್ಬರು ಸದಸ್ಯರನ್ನು ಪ್ರತಿನಿಧಿತ್ವ (ಶಾಸಕಾಂಗ) ಸಭೆಯು ಆಯ್ಕೆ ಮಾಡಬೇಕಾಗಿತ್ತು.

ದಿವಾನರು ರೈಲ್ವೆಗಳ ಬೆಳವಣಿಗೆಯತ್ತ ಗಮನ ಹರಿಸಿದರು. **ಬೆಂಗಳೂರು-ಚಿಕ್ಕಬಳ್ಳಾಪುರ** ರೈಲ್ವೆ ಮಾರ್ಗವನ್ನು ನಿರ್ಮಿಸಲಾಯಿತು. **ಅರಣ್ಯ ಸಂರಕ್ಷಣೆ ಇಲಾಖೆ** ಮತ್ತು **ಪಶುವೈದ್ಯ ಇಲಾಖೆ**ಯ ಸ್ಥಾಪನೆಯಂತಹ ಅನೇಕ ಪ್ರಗತಿಪರ ಕ್ರಮಗಳನ್ನು ದಿವಾನ ವಿ.ಪಿ. ಮಾಧವರಾವ್ ಜಾರಿಗೆ ತಂದರು. ವಿ.ಪಿ. ಮಾಧವರಾವ್ **ಭಾರತೀಯ ವಿಜ್ಞಾನ ಸಂಸ್ಥೆ**ಯ ನಿರ್ಮಾಣಕ್ಕೆ ರೂ.

೫ ಲಕ್ಷ ನೀಡಿದರು. ದಿವಾನರು ೧೯೦೮ ರಲ್ಲಿ ಪತ್ರಕರ್ತರ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುವ ಪತ್ರಿಕಾ ಸುಧಾರಣೆ ಕಾಯಿದೆಯನ್ನು ೧೯೦೮ ರಲ್ಲಿ ಜಾರಿಗೆ ತಂದರು. ಇದನ್ನು ತೀವ್ರವಾಗಿ ಖಂಡಿಸಲಾಯಿತು ಮತ್ತು ಈ ಪತ್ರಿಕಾ ಕಾಯಿದೆಯು ಜನಪ್ರಿಯತೆಯನ್ನು ಕಳೆದುಕೊಂಡಿತು. ದಿವಾನ್ ವಿ.ಪಿ. ಮಾಧವರಾವ್ ೧೯೦೯ ರಲ್ಲಿ ನಿವೃತ್ತರಾದರು ಮತ್ತು **ಟಿ. ಆನಂದರಾವ್** ಉತ್ತರಾಧಿಕಾರಿಯಾದರು.

ದಿವಾನ್ ಟಿ. ಆನಂದರಾವ್ (೧೯೦೯-೧೯೧೨)

ದಿವಾನ್ ಟಿ. ಆನಂದರಾವ್‌ರವರು ರಾಜಾ **ಸರ್ ಟಿ. ಮಾಧವ್‌ರಾವ್**‌ರವರ ಮಗನಾಗಿದ್ದನು. ಅವರು ತಮ್ಮ ನಾಗರಿಕ ವರ್ತನೆ ಮತ್ತು ಶೈಕ್ಷಣಿಕ ಆಸಕ್ತಿಗೆ ಪ್ರಸಿದ್ಧರಾಗಿದ್ದರು. ಟಿ. ಆನಂದರಾವ್ ದಿವಾನರಾಗಿದ್ದಾಗ ೧೯೧೦ ರಲ್ಲಿ ರೂ. ೪೦ ಲಕ್ಷಗಳನ್ನು ವೆಚ್ಚ ಮಾಡಿ ನೂತನವಾದ **ಮೈಸೂರಿನ ಅರಮನೆ**ಯನ್ನು ನಿರ್ಮಿಸಲಾಯಿತು. ಅದನ್ನು ರಾಜಾ ರವಿವರ್ಮ ರವರ ವರ್ಣಚಿತ್ರಗಳಿಂದ ಅಲಂಕರಿಸಲಾಯಿತು. ಮೈಸೂರಿನ ಆರ್ಥಿಕ ಸಮ್ಮೇಳನವನ್ನು ಉದ್ಘಾಟಿಸಲಾಯಿತು. ಶಿಕ್ಷಣ, ಕೈಗಾರಿಕೋದ್ಯಮ ಮತ್ತು ಕೃಷಿಗೆ ಸಂಬಂಧಿಸಿದ ವಿಭಾಗಗಳನ್ನು ಒಳಗೊಂಡಿತ್ತು.

ಟಿ. ಆನಂದರಾಯರ ಕಾಲದಲ್ಲಿ ಮೈಸೂರಿನ ಮುಖ್ಯ ಇಂಜಿನೀಯರ್‌ರಾದ **ಸರ್ ಎಂ. ವಿಶ್ವೇಶ್ವರಯ್ಯ**ನವರ ಸಲಹೆಯ ಮೇರೆಗೆ ೧೯೧೧ ರಲ್ಲಿ **ಕನ್ನಂಬಾಡಿ ಯೋಜನೆ**ಯನ್ನು ರೂಪಿಸಲಾಯಿತು. ಹಿಂದುಳಿದ ವರ್ಗದವರಲ್ಲಿ ಶಿಕ್ಷಣವನ್ನು ಹರಡುವುದು ಮತ್ತು ಸ್ಥಳೀಯ ವಿಶ್ವವಿದ್ಯಾಲಯದ ಸ್ಥಾಪನೆಯನ್ನು ಕುರಿತು ಚರ್ಚೆ ನಡೆಸಲಾಯಿತು. ಟಿ. ಆನಂದರಾವ್ ನಂತರ ಸರ್ ಎಂ. ವಿಶ್ವೇಶ್ವರಯ್ಯ ಮೈಸೂರಿನ ದಿವಾನರಾದರು.]

ಸರ್ ಎಂ. ವಿಶ್ವೇಶ್ವರಯ್ಯ (೧೯೧೨-೧೯೧೮)

ಆಂಧ್ರಪ್ರದೇಶದ **ಕರ್ನೂಲ್** ಜಿಲ್ಲೆಯ **ಮೋಕ್ಷಗುಂಡಂ**ನಿಂದ **ಕೋಲಾರ ಜಿಲ್ಲೆ**ಗೆ ವಲಸೆ ಬಂದ ಕುಟುಂಬದಲ್ಲಿ ೧೮೬೧ ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಜನಿಸಿದರು. **ಶ್ರೀನಿವಾಸ ಶಾಸ್ತ್ರಿ** ಮತ್ತು **ವೆಂಕಟಲಕ್ಷ್ಮಮ್ಮ** ಅವರ ತಂದೆತಾಯಿ. ಅವರು **ಸೆಂಟ್ರಲ್ ಕಾಲೇಜಿ**ನಿಂದ ಪದವೀಧರರಾದರು. ಅವರು **ಪೂನಾ**ದ ವಿಜ್ಞಾನ ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದನ್ನು ಮುಂದುವರೆಸಿದರು. ಅವರು ಸಹಾಯಕ ಇಂಜಿನಿಯರ್ ಆಗಿ ಬಾಂಬೆ ಸರ್ಕಾರದ ಸೇವೆಯನ್ನು ಪ್ರವೇಶಿಸಿದರು. ಅವರು ೧೯೦೮ ರಲ್ಲಿ ಬಾಂಬೆ ಸರ್ಕಾರದ ಸೇವೆಯಿಂದ ನಿವೃತ್ತರಾದರು. ಅವರು **ಯುರೋಪ್** ಮತ್ತು **ಅಮೆರಿಕಾ**ವನ್ನು ಸಂಚರಿಸಿದರು. ೧೯೦೯ ರಲ್ಲಿ ಮೈಸೂರು ಸರ್ಕಾರದ ಸೇವೆಯಲ್ಲಿ ಮುಖ್ಯ ಇಂಜಿನಿಯರ್ ಆದರು. ೧೯೧೨ ರಲ್ಲಿ ಅವರು ಮೈಸೂರಿನ ದಿವಾನರಾದರು. ಅವರು ನಿಸ್ಸಂಶಯವಾಗಿ **ಆಧುನಿಕ ಕರ್ನಾಟಕದ** ಶಿಲ್ಪಿ ಎನ್ನಬಹುದು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಅವರು ಆಡಳಿತ ಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ಜಾರಿಗೆ ತಂದರು. ರಾಜ್ಯದಾದ್ಯಂತ ಏಕಸ್ವರೂಪದ ಕಂದಾಯ ನೀತಿಯನ್ನು ಜಾರಿಗೆ ತರಲಾಯಿತು. ಮತದಾರರ ಅರ್ಹತೆಯಲ್ಲಿದ್ದ ತಾರತಮ್ಯವನ್ನು ರದ್ದುಪಡಿಸಲಾಯಿತು. ಆದ್ದರಿಂದ ಬಹುತೇಕ ಜನರಿಗೆ ಮತ ಚಲಾಯಿಸುವ ಹಕ್ಕು ಒದಗಿತು. ಶಾಸಕಾಂಗ ಮಂಡಳಿಯ

ಸಂಖ್ಯೆಯನ್ನು ೧೮ ರಿಂದ ೨೪ ಕ್ಕೆ ಹೆಚ್ಚಿಸಲಾಯಿತು. ಶಾಸಕಾಂಗ ಮಂಡಳಿಯು ಅನುಭವಿಸುತ್ತಿದ್ದ ಅಧಿಕಾರವನ್ನು ಹೆಚ್ಚಿಸಲಾಯಿತು. ಶಾಸಕಾಂಗ ಮಂಡಳಿಯು ಮುಂಗಡ ಪತ್ರವನ್ನು ಚರ್ಚಿಸುವ ಸವಲತ್ತನ್ನು ಗಳಿಸಿತು.

ವಿಶ್ವೇಶ್ವರಯ್ಯನವರಿಗೆ ಶಿಕ್ಷಣವನ್ನು ಕುರಿತು ವಿಶೇಷ ಆಸಕ್ತಿ ಇತ್ತು. ಪ್ರತಿಯೊಂದು ದೇಶದ ಅಭಿವೃದ್ಧಿಯು ಅದರ ಜನರ ಶಿಕ್ಷಣವನ್ನವಲಂಬಿಸುತ್ತದೆ ಎಂದು ಭಾವಿಸಿದ್ದರು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಲು ಶಾಸನವೊಂದನ್ನು ಜಾರಿಗೆ ತಂದರು. ಅವರು ಮಹಿಳೆಯರು ಶಿಕ್ಷಣವನ್ನು ಪ್ರೋತ್ಸಾಹಿಸಿದರು. ಅನೇಕ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸ ಲಾಯಿತು. ಮೈಸೂರಿನ ಮಹಾರಾಣಿ ಕಾಲೇಜನ್ನು ಉನ್ನತಪಡಿಸಿದರು. ೧೯೧೪ ರಲ್ಲಿ ಮೈಸೂರಿನಲ್ಲಿ ಬಾಲಕಿಯರ ಮೊದಲ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಯಿತು. ಇದರಿಂದಾಗಿ ಉನ್ನತ ಶಿಕ್ಷಣಕ್ಕೆ ಅಪಾರ ಪ್ರೋತ್ಸಾಹ ದೊರಕಿತು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿಶ್ವೇಶ್ವರಯ್ಯ ವಿದ್ಯಾರ್ಥಿ ವೇತನಗಳನ್ನು ಪ್ರಾರಂಭಿಸಿದರು. ಮೈಸೂರಿನ ಮಹಾರಾಜರು ಉಪಕುಲಪತಿಗಳಿಂದ ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ರೂ. ೨ ಲಕ್ಷವನ್ನು ದಾನ ಮಾಡಿದರು. ಅವರು ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೂ ಕಾರಣರಾದರು. ಅವರು ತಾಂತ್ರಿಕ, ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿಶಾಲೆಗಳನ್ನು ಪ್ರಾರಂಭಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನನ್ನು ೧೯೧೫ ರಲ್ಲಿ ಸ್ಥಾಪಿಸಲಾಯಿತು. ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ (ಯು.ವಿ.ಸಿ.ಇ) ಎಂದು ಇಂದು ಕರೆಯಲ್ಪಟ್ಟಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು ಮತ್ತು ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಕನ್ನಂಬಾಡಿಯಲ್ಲಿ ಕೃಷ್ಣರಾಜಸಾಗರ ಅಣೆಕಟ್ಟಿನ ನಿರ್ಮಾಣವು ವಿಶ್ವೇಶ್ವರಯ್ಯನವರು ಅತ್ಯುತ್ತಮವಾದ ಕೊಡುಗೆಯಾಗಿದೆ. ಇದರಿಂದ ಮಂಡ್ಯ ಜಿಲ್ಲೆಯ ಸುಮಾರು ೧,೫೦,೦೦೦ ಎಕರೆಗಳ ಬಂಜರು ಭೂಮಿಯನ್ನು ಸಾಗುವಳಿಗೆ ಯೋಗ್ಯವಾಗುವಂತೆ ಮಾಡಲಾಯಿತು. ಅವರು ಕೈಗಾರಿಕಾ ಹಾಗೂ ವಾಣಿಜ್ಯದ ಅಭಿವೃದ್ಧಿಗೂ ಗಮನವಿತ್ತರು. ೧೯೧೩ ರಲ್ಲಿ ಕೈಗಾರಿಕಾ ಮತ್ತು ವಾಣಿಜ್ಯದ ಇಲಾಖೆಯನ್ನು ರಚಿಸಿದರು. ಈ ಇಲಾಖೆಯು ಕಬ್ಬು ಹಾಗೂ ರೇಷ್ಮೆ ಬೆಳೆಗಳಲ್ಲಿ ಪ್ರಯೋಗಗಳನ್ನು ಕೈಗೊಂಡಿತು. ಅದು ಶ್ರೀಗಂಧದ ತೈಲ, ಬೆಲ್ಲ ಮತ್ತು ಸೋಪ್‌ಗಳ ತಯಾರಿಕೆಯನ್ನು ವಹಿಸಿಕೊಂಡಿತು. ಸರ್ ಎಂ. ವಿಶ್ವೇಶ್ವರಯ್ಯ ೧೯೧೩ ರಲ್ಲಿ ಮೈಸೂರ್ ಬ್ಯಾಂಕನ್ನು ಉದ್ಘಾಟಿಸಿದರು. ಅವರು ಮೈಸೂರಿನ ವಾಣಿಜ್ಯ ಸಂಸ್ಥೆಯನ್ನು ಪ್ರಾರಂಭಿಸಿದರು. ಮೈಸೂರಿನಲ್ಲಿ ಕಾಸ್ಮೋಪಾಲಿಟನ್ ಕ್ಲಬ್ ಮತ್ತು ಬೆಂಗಳೂರಿನಲ್ಲಿ ಸೆಂಚುರಿ ಕ್ಲಬ್‌ನ್ನು ಪ್ರಾರಂಭಿಸಲಾಯಿತು. ವಿಶ್ವೇಶ್ವರಯ್ಯನವರ ಕನ್ನಂಬಾಡಿ ಅಣೆಕಟ್ಟು ಅಪಾರವಾದ ಮಟ್ಟಿಗೆ ನೀರಾವರಿ ಸೌಲಭ್ಯತೆಯನ್ನು ಒದಗಿಸಿತು. ಅಣೆಕಟ್ಟಿನ ನಿರ್ಮಾಣದ ಮೊದಲ ಹಂತದಲ್ಲಿ ಕಾವೇರಿ ನದಿಯು ೧,೫೦,೦೦೦ ಎಕರೆ ಭೂಮಿಗೆ

ನೀರೊದಗಿಸಿತು. ೧೯೧೬ ರಲ್ಲಿ ಭಾರತ ಸರ್ಕಾರವು ಎರಡನೆಯ ಹಂತದ ನಿರ್ಮಾಣಕ್ಕೆ ಅನುಮತಿ ನೀಡಿತು. ಅದು ಪೂರ್ಣಗೊಂಡಾಗ ೧,೨೫,೦೦೦ ಎಕರೆ ಹೆಚ್ಚುವರಿ ಭೂಮಿಗೆ ನೀರಾವರಿಗಾಗಿ ನೀರೊದಗಿಸಿತು. ಕೃಷಿ ಇಲಾಖೆಯನ್ನು ಪುನರ್ ರಚಿಸಲಾಯಿತು. ೧೯೧೩ ರಲ್ಲಿ ಹೆಬ್ಬಾಳದಲ್ಲಿ ಕೃಷಿ ಶಾಲೆಯನ್ನು ಪ್ರಾರಂಭಿಸಲಾಯಿತು. ಮೈಸೂರಿನ ಬಳಿ ನಾಗೇನಹಳ್ಳಿ ಯಲ್ಲಿ, ಆ ಜಿಲ್ಲೆಯ ಕೃಷಿ ಪರಿಸ್ಥಿತಿಯನ್ನು ಕುರಿತು ಅಧ್ಯಯನ ಮಾಡಲು ಸರ್ಕಾರಿ ಕೃಷಿ ಫಾರಂ ಒಂದನ್ನು ಸ್ಥಾಪಿಸಲಾಯಿತು. ಸರ್ ಎಂ. ವಿಶ್ವೇಶ್ವರಯ್ಯ ಕೃಷಿ ಪ್ರದರ್ಶನಗಳಿಗೂ ಜಿಲ್ಲೆಗಳಲ್ಲಿ ಏರ್ಪಾಡುಗಳನ್ನು ಮಾಡಿದರು ಮತ್ತು ಉತ್ತಮ ಬೀಜಗಳನ್ನು, ಗೊಬ್ಬರವನ್ನು ಮತ್ತು ಆಧುನಿಕ ಸಲಕರಣೆಗಳನ್ನು ನೀಡಲು ಏರ್ಪಾಡು ಮಾಡಿದರು. ಗ್ರಾಮೀಣಾಭಿವೃದ್ಧಿ ಗಾಗಿ ಗ್ರಾಮ ಸುಧಾರಣೆ ಸಮಿತಿಗಳನ್ನು ರೂಪಿಸಲಾಯಿತು.

ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ಅನೇಕ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಿದರು. ಮೈಸೂರು ಸೋಪ್ ಕಾರ್ಖಾನೆ, ಶ್ರೀಗಂಧ, ತೈಲ ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮತ್ತು ಬೆಂಗಳೂರಿನಲ್ಲಿ ಕೇಂದ್ರ ಕಾರ್ಖಾನೆ, ಕೈಗಾರಿಕಾ ಕಾರ್ಯಾಗಾರ ಮುತಾದವುಗಳು ಕೆಲವು ಮುಖ್ಯ ಕಾರ್ಖಾನೆಗಳಾಗಿವೆ. ರೈಲ್ವೆ ನಿರ್ಮಾಣವು ರಾಜ್ಯ ಪೋಷಣೆಯನ್ನು ಗಳಿಸಿತು. ೧೯೧೮ ರಲ್ಲಿ ಮೈಸೂರು ಮತ್ತು ಅರಸೀಕೆರೆ ನಡುವೆ ರೈಲ್ವೆ ಮಾರ್ಗವನ್ನು ಪ್ರಾರಂಭಿಸಲಾಯಿತು. ೧೯೧೭ ರಲ್ಲಿ ಚನ್ನಪಟ್ಟಣದಲ್ಲಿ ರೇಷ್ಮೆ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಯಿತು.

ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಶಾಸಕಾಂಗ ಮಂಡಳಿಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಗಿತ್ತು. ಯಾವ ವಿಷಯವನ್ನಾದರೂ ಕುರಿತು ಹೆಚ್ಚಿನ ವಿವರಗಳನ್ನು ತಿಳಿಯಲು ಪ್ರಶ್ನಿಸುವ ಹೆಚ್ಚುವರಿ ಸವಲತ್ತನ್ನು ಶಾಸಕಾಂಗ ಮಂಡಳಿಯ ಸದಸ್ಯರಿಗೆ ನೀಡಲಾಯಿತು. ಪ್ರತಿನಿಧಿತ್ವ ಸಭೆಗೆ ಮುಂಗಡ ಪತ್ರವನ್ನು ಪರಿಶೀಲಿಸುವ ಹಾಗೂ ಸಲಹೆಗಳನ್ನು ನೀಡುವ ಸವಲತ್ತನ್ನು ನೀಡಲಾಯಿತು. ಸರ್ ಎಂ. ವಿಶ್ವೇಶ್ವರಯ್ಯ ನವರು ಮುಖ್ಯ ಕಾರ್ಯಾಲಯವನ್ನು ರಚಿಸಿದರು. ಆಡಳಿತ ವ್ಯವಹಾರವನ್ನು ಸಂಘಟಿಸಲು ಮುಖ್ಯ ಕಾರ್ಯದರ್ಶಿಯನ್ನು ನೇಮಕ ಮಾಡಲಾಯಿತು. ಆಗಿಂದಾಗ್ಗೆ ಕಛೇರಿಗಳನ್ನು ಪರೀಕ್ಷಿಸ ಲಾಗುತ್ತಿತ್ತು. ಮೊದಲನೆ ಜಾಗತಿಕ ಯುದ್ಧ ೧೯೧೪ ರಲ್ಲಿ ಪ್ರಾರಂಭವಾಯಿತು. ಭಾರತವು ಕಾಲರಾ ಮತ್ತು ಇನ್ನಿತರ ಸಾಂಕ್ರಾಮಿಕ ರೋಗಗಳ ಆರಂಭದಿಂದಾಗಿ ಮತ್ತು ಅಪಾರವಾದ ಆಹಾರ ಕೊರತೆಯಿಂದಾಗಿ ತೀವ್ರವಾದ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಮೈಸೂರಿನಲ್ಲಿ ಆಹಾರ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು. ದವಸ-ಧಾನ್ಯಗಳ ಬೆಲೆಗಳನ್ನು ನಿಗದಿ ಪಡಿಸಲಾಯಿತು. ಬಡಜನರಿಗೆ ಕಡಿಮೆ ದರದಲ್ಲಿ ಅಕ್ಕಿ ಮತ್ತು ರಾಗಿಯನ್ನು ಮಾರಾಟ ಮಾಡಲಾಯಿತು. ಧಾನ್ಯಗಳನ್ನು ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡಲಾಯಿತು. ೧೯೧೮ ರಲ್ಲಿ ಪ್ರತ್ಯೇಕವಾದ ಆಹಾರ ನಿಯಂತ್ರಣಾಧಿಕಾರಿಯೊಬ್ಬರನ್ನು ನೇಮಕ ಮಾಡಲಾಯಿತು. ಮಹಾರಾಜರು ಯುದ್ಧ ಸಂತ್ರಸ್ತರ ಪರಿಹಾರ ನಿಧಿಗೆ ಉದಾರವಾಗಿ

ಕೊಡುಗೆ ನೀಡಿದರು. ಮತ್ತು ಮೈಸೂರಿನ ಸೈನಿಕರೂ **ಈಜಿಪ್ಟ್, ಮೆಸಪೊಟೋಮಿಯಾ** ಮತ್ತು **ಪ್ಯಾಲೆಸ್ಟೈನ್**‌ನಲ್ಲಿ ವಿಶೇಷವಾಗಿ ಸೇವೆ ಸಲ್ಲಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರು ಸ್ಥಳೀಯ ಸ್ವಯಂ ಸರ್ಕಾರ ಸಂಸ್ಥೆಗಳ ಕಾರ್ಯಗಳನ್ನು ವಿಸ್ತರಿಸಲು ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಮೈಸೂರು ಸ್ಥಳೀಯ ಮಂಡಳಿಗಳ ಹಾಗೂ ಗ್ರಾಮ ಪಂಚಾಯ್ತಿಗಳ ಕಾಯಿದೆ IVನ್ನು ೧೯೧೮ ರಲ್ಲಿ ಜಾರಿಗೆ ತರಲಾಯಿತು. ದಿವಾನ್ ವಿಶ್ವೇಶ್ವರಯ್ಯನವರು **ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ** (The Planned Economy for India) ಮತ್ತು **ದಿ ವಿಷನ್ ಆಫ್ ಪ್ರಾಸ್ಪರಸ್ ಮೈಸೂರ್** (The Vision of Prosperous Mysore) ಮೊದಲಾದ ಕೃತಿಗಳನ್ನು ರಚಿಸಿದರು. ಅವರ ಕಾಲದಲ್ಲಿ ರಾಜ್ಯದ ಸೇವೆಯಲ್ಲಿ ಹಿಂದುಳಿದ ವರ್ಗಗಳ ಪ್ರತಿನಿಧಿತ್ವವನ್ನು ಹೆಚ್ಚಿಸಲು ಕ್ರಮಗಳನ್ನು ಸೂಚಿಸಲು **ಲೆಸ್ಲಿ ಮಿಲ್ಲರ್ ಸಮಿತಿ**ಯನ್ನು ನೇಮಕ ಮಾಡಲಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರು ಅದನ್ನು ವಿರೋಧಿಸಿದರು. ಏಕೆಂದರೆ ಸರ್ಕಾರಿ ಸೇವೆಗೆ ಅಭ್ಯರ್ಥಿಗಳ ಆಯ್ಕೆಯು ಅವರ **ಸಾಮರ್ಥ್ಯ ಮತ್ತು ಯೋಗ್ಯತೆಗಳ ಆಧಾರದ** ಮೇಲೆ ಮಾತ್ರ ಮಾಡಬೇಕೆಂದು ಅವರು ಭಾವಿಸಿದರು. ಅವರು ಅರ್ಹತೆಗನುಗುಣವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದನ್ನು ಮುಂದುವರೆಸಿದರು. ಮಹಾರಾಜರು ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆಯನ್ನು ತಿರಸ್ಕರಿಸಿದರು. ಆದ್ದರಿಂದ ಸರ್ ಎಂ. ವಿಶ್ವೇಶ್ವರಯ್ಯನವರು ೧೯೧೯ ರಲ್ಲಿ ತಮ್ಮ **ರಾಜೀನಾಮೆ**ಯನ್ನು ಸಲ್ಲಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ಅತ್ಯುತ್ತಮ ದಿವಾನರಲ್ಲಿ ಒಬ್ಬರು. ಅವರು ಮೈಸೂರನ್ನು ಸಮೃದ್ಧವಾದ ರಾಜ್ಯವಾಗಿ ರೂಪಿಸಲು ಶ್ರಮಿಸಿದ ರೀತಿ ಮತ್ತು ಅವರ ಅಭಿವೃದ್ಧಿ ನೀತಿಗಳು ಹಾಗೂ ಕಾರ್ಯಕ್ರಮಗಳು, ಅವರ ತತ್ವಗಳು ತಮ್ಮ ಯುಗವನ್ನು ಮೀರಿದಂಥ ತತ್ವಗಳಾಗಿದ್ದವು. ಒಂದನೆ ಜಾಗತಿಕ ಯುದ್ಧದ ಕಾಲದಲ್ಲಿ ಮಹಾರಾಜರು ಯುದ್ಧಕ್ಕಾಗಿ ರೂ. ೫೦ ಲಕ್ಷಗಳನ್ನು ನೀಡಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಏರುತ್ತಿದ್ದ ಬೆಲೆಗಳ ಹಾಗೂ ಆಹಾರ ಕೊರತೆಯ ವಿರುದ್ಧ ಹೋರಾಡಲು ಅನೇಕ ಕ್ರಮಗಳನ್ನು ಕೈಗೊಂಡರು. ಸರ್ ಎಂ. ವಿಶ್ವೇಶ್ವರಯ್ಯನವರ ಅಪಾರ ಶ್ರಮದಿಂದಾಗಿ ಮೈಸೂರು ಕೈಗಾರಿಕಾ ರಾಜ್ಯವಾಗಿ ಬೆಳೆಯಿತು. ಭಾರತ ಸರ್ಕಾರವು ಅವರ ಸೇವೆಯನ್ನು ಗುರುತಿಸಿತು. ದೇಶದ ಅತ್ಯಂತ ಉನ್ನತವಾದ **ಭಾರತ ರತ್ನ** ಎಂಬ ಗೌರವವನ್ನು ಅವರಿಗೆ ನೀಡಿತು.

ಹೆಚ್ಚಿನ ವಿಷಯ

[**ದಿವಾನ್ ಕಾಂತರಾಜ ಅರಸ್** (೧೯೧೮-೧೯೨೨)

ಸರ್ ಎಂ. ವಿಶ್ವೇಶ್ವರಯ್ಯನವರ ನಂತರ ೧೯೧೮ ರಲ್ಲಿ ಕಾಂತರಾಜ್ ಅರಸ್ ದಿವಾನರಾದರು. ಅವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ಪದವೀಧರರಾಗಿದ್ದರು. ಅವರು ಮೈಸೂರಿನ ದಿವಾನರಾಗುವ ಮುನ್ನ ಕಮಿಷನರ್ ಹಾಗೂ ಡೆಪ್ಯೂಟಿ ಕಮಿಷನರ್ ಆಗಿ ಸೇವೆ ಸಲ್ಲಿಸಿದ್ದರು. ಅವರ ಕಾಲದಲ್ಲಿ ಉಂಟಾದ ಕೆಲವು ಆಡಳಿತ ಬದಲಾವಣೆಗಳು ಇಂತಿದ್ದವು.

ಲೆಸ್ಲಿ ಮಿಲ್ಲರ್ ಸಲಹೆಗಳ ಪ್ರಕಾರ, ಹಿಂದುಳಿದ ವರ್ಗಗಳಿಗೆ ೭ ೧/೨ ವರ್ಷಗಳಲ್ಲಿ ಸರ್ಕಾರದಲ್ಲಿ ಶೇಕಡಾ ೨/೩ ಭಾಗದ ಕೆಳದರ್ಜೆಯ ಹುದ್ದೆಗಳನ್ನು ಮೀಸಲಾಗಿರಿಸಲಾಯಿತು. ಹಿಂದುಳಿದ ವರ್ಗಗಳಿಗೆ ಮೈಸೂರಿನ ಲೋಕಸೇವಾ ಪರೀಕ್ಷೆಯನ್ನು ರದ್ದುಪಡಿಸಬೇಕೆಂದು ಸಲಹೆ ನೀಡಲಾಯಿತು. ಆದರೆ ಅದನ್ನು ಸರ್ಕಾರವು ತಿರಸ್ಕರಿಸಿತು. ಈ ಸಮಿತಿಯ ಸಲಹೆಗಳ ಪ್ರಕಾರ ಶೈಕ್ಷಣಿಕ ಸೌಲಭ್ಯತೆಗಳನ್ನು ನೀಡಬೇಕಿತ್ತು.

ದಿವಾನ್ ಕಾಂತರಾಜ್ ಅರಸ್‌ರ ಕಾಲದಲ್ಲಿ **ಚಿಕ್ಕ ಜಾಜೂರು** ಮತ್ತು **ಚಿತ್ರದುರ್ಗದ** ರೈಲ್ವೆ ಮಾರ್ಗವನ್ನು ನಿರ್ಮಿಸಲಾಯಿತು. ೧೯೧೯ ರಲ್ಲಿ ಮೊದಲ ಬಾರಿಗೆ ಕಂದಾಯ ತೆರಿಗೆಯನ್ನು ಜಾರಿಗೆ ತರಲಾಯಿತು. ದಿವಾನ್ ಕಾಂತರಾಜ್ ಅರಸ್ ೧೯೨೨ ರಲ್ಲಿ ರಾಜೀನಾಮೆ ನೀಡಿದರು. ಅವರ ನಂತರ ವಿ.ಆರ್. ಬ್ಯಾನರ್ಜಿ ಮೈಸೂರಿನ ದಿವಾನರಾದರು.

ಸರ್ ವಿ.ಆರ್. ಬ್ಯಾನರ್ಜಿ (೧೯೨೨-೨೬)

ಸರ್ ಆಲ್ಬಿಯನ್ ರಾಜಕುಮಾರ್ ಬ್ಯಾನರ್ಜಿ ೧೯೨೨ ರಲ್ಲಿ ಮೈಸೂರಿನ ದಿವಾನರಾದರು. ೧೯೨೩ ರಲ್ಲಿ ಸ್ಥಳೀಯ ಸ್ವಯಂ ಸರ್ಕಾರದ ಸಮ್ಮೇಳನವನ್ನು ನಡೆಸಲಾಯಿತು. ಅದರ ಸಲಹೆಗಳ ಪ್ರಕಾರ, ತಾಲ್ಲೂಕು ಮಂಡಳಿಗಳನ್ನು ರದ್ದುಪಡಿಸಲಾಯಿತು. ಗ್ರಾಮ ಪಂಚಾಯ್ತಿಗಳನ್ನು ಕಾನೂನುಬದ್ಧವಾಗಿ ರೂಪಿಸಲಾಯಿತು. ಪೌರಸಭೆಗಳ ಮುಖ್ಯಸ್ಥರನ್ನು ಚುನಾಯಿಸಲಾಯಿತು. ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು. **ಸೀಲ್ ಆಯೋಗದ** ಸಲಹೆಯಂತೆ, ಕಾನೂನು ರೀತಿಯಲ್ಲಿ ಶಾಸಕಾಂಗ ಸಭೆಯನ್ನು ಸ್ಥಾಪಿಸಲಾಯಿತು. ಸಭೆಯ ಸಂಖ್ಯೆಯನ್ನು ೨೫೦ ರಿಂದ ೨೭೫ ರವರೆಗೆ ಹೆಚ್ಚಿಸಲಾಯಿತು. ಅಲ್ಪಸಂಖ್ಯಾತರು ಮತ್ತು ದಲಿತ ವರ್ಗದವರು ಸಭೆಯಲ್ಲಿ ಸುಮಾರು ೩೫ ಸ್ಥಾನಗಳನ್ನು ಪಡೆದುಕೊಂಡರು. ಸರ್ ವಿ.ಆರ್. ಬ್ಯಾನರ್ಜಿ ೧೯೨೬ ರಲ್ಲಿ ನಿವೃತ್ತರಾದರು.]

ಸರ್ ಮಿರ್ಜಾ ಇಸ್ಮೈಲ್ (೧೯೨೬-೪೧)

ಸರ್ ಮಿರ್ಜಾ ಇಸ್ಮೈಲ್‌ರವರು **ನಾಲ್ವಡಿ ಕೃಷ್ಣರಾಜ ಒಡೆಯರ್‌ರವರೊಂದಿಗೆ ರಾಯಲ್ ಸ್ಕೂಲ್‌ನಲ್ಲಿ** ಶಿಕ್ಷಣ ಪಡೆದುಕೊಂಡರು. ಅವರನ್ನು ಮಹಾರಾಜರ ಆಪ್ತ ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು. ೧೯೨೬ ರಲ್ಲಿ ಸರ್ ಮಿರ್ಜಾ ಇಸ್ಮೈಲ್ ಮೈಸೂರಿನ ದಿವಾನರಾದರು. ಮಿರ್ಜಾ ಇಸ್ಮೈಲ್‌ರವರ ಕಾಲದಲ್ಲಿ ಮೈಸೂರು ರಾಜ್ಯದ ಕೈಗಾರಿಕಾಭಿವೃದ್ಧಿಯು ಪರಾಕಾಷ್ಠೆಯನ್ನು ಮುಟ್ಟಿತು. **ಬೆಂಗಳೂರು, ಭದ್ರಾವತಿ** ಮತ್ತು **ಶಿವಮೊಗ್ಗದಲ್ಲಿ** ಅನೇಕ ಕೈಗಾರಿಕೆಗಳನ್ನು ಪ್ರಾರಂಭಿಸಲಾಯಿತು. ನೀರಾವರಿಗೆ ಪ್ರೋತ್ಸಾಹ ನೀಡಲಾಯಿತು. **ಇರ್ವಿನ್ ಕಾಲುವೆಯ** ನಿರ್ಮಾಣದಿಂದ **ಮಂಡ್ಯ, ಮಳವಳ್ಳಿ** ಮತ್ತು **ಟಿ. ನರಸೀಪುರ** ತಾಲ್ಲೂಕುಗಳಲ್ಲಿ ೧,೨೦,೦೦೦ ಎಕರೆ ಭೂಮಿಯನ್ನು ಸಾಗುವಳಿಗೆ ಒಳಪಡಿಸಲಾಯಿತು.

ಸರ್ ಮಿರ್ಜಾ ಇಸ್ಮೈಲ್ ೧೮೮೩ ರಲ್ಲಿ **ಬೆಂಗಳೂರಿನಲ್ಲಿ** ಜನಿಸಿದರು. **ಆಗಜಾನ್** ಅವರ ತಂದೆಯಾಗಿದ್ದರು. ಆಗ ಜಾನ್‌ರನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾರಾಜರ ಅಂಗರಕ್ಷಕರಾಗಿ ನೇಮಕ ಮಾಡಲಾಗಿತ್ತು. ಮಿರ್ಜಾರವರು ಬೆಂಗಳೂರಿನ ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ಅಧ್ಯಯನ ಅನಂತರ ಅವರು ಸ್ಟೂವರ್ಟ್, ಫ್ರೇಜರ್‌ರವರ ಕೈಕೆಳಗಿದ್ದು

ಅರಮನೆಯ ರಾಯಲ್ ಸ್ಕೂಲ್ ಸೇರಿದರು. ಅವರು ೧೯೦೪ ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಪದವೀಧರರಾದರು ಮತ್ತು ಉಮೇದುವಾರರಾಗಿ ನೇಮಿಸಲ್ಪಟ್ಟರು. ಸರ್ ಮಿರ್ಜಾ ಇಸ್ಮೈಲ್ ೧೯೦೫ ರಲ್ಲಿ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಆಗಿ ಮೈಸೂರಿನ ಸೇವೆಯನ್ನು ಪ್ರಾರಂಭಿಸಿದರು. ಅವರು ೧೯೦೮ ರಲ್ಲಿ ಸಹಾಯಕ ಕಮಿಷನರ್ ಸ್ಥಾನಕ್ಕೇರಿದರು. ೧೯೧೦ ರಲ್ಲಿ ಅವರನ್ನು ಮೈಸೂರಿನ ಮಹಾರಾಜರ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ೧೯೧೪ ರಲ್ಲಿ ಹುಜೂರ್ ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ೧೯೧೪ ರಲ್ಲಿ ಹುಜೂರ್ ಕಾರ್ಯದರ್ಶಿಯಾಗಿ ನೇಮಕಗೊಂಡರು. ಸರ್ ಮಿರ್ಜಾ ಇಸ್ಮೈಲ್ ೧೯೨೨ ರಲ್ಲಿ ಮಹಾರಾಜರಿಗೆ ಮೊದಲ ಆಪ್ತ ಕಾರ್ಯದರ್ಶಿಯಾದರು. ೧೯೨೬ ರಲ್ಲಿ ಅವರು ಮೈಸೂರಿನ ದಿವಾನರಾದರು.

ಸರ್ ಮಿರ್ಜಾ ಇಸ್ಮೈಲ್ ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದರು. ೧೯೨೭ ರಲ್ಲಿ ಮೈಸೂರಿನ ಜಿಲ್ಲಾ ಮಂಡಳಿಗಳ ಕಾಯಿದೆಯನ್ನು (೧೯೨೬ III) ಮೈಸೂರಿನಲ್ಲಿ ಜಾರಿಗೆ ತರಲಾಯಿತು. ತಾಲ್ಲೂಕು ಮಂಡಳಿಗಳನ್ನು ರದ್ದುಪಡಿಸಲಿಲ್ಲ. ಜಿಲ್ಲೆಗಳ ಅಭಿವೃದ್ಧಿಯ ಮೇಲೆ ಹೆಚ್ಚು ಕೇಂದ್ರೀಕರಿಸಲು ಜಿಲ್ಲಾ ಮಂಡಳಿಗಳನ್ನು ಸ್ಥಾಪಿಸಲಾಯಿತು. ಹಣಕಾಸಿನ ನಿಯಂತ್ರಣದಲ್ಲಿ ಹೆಚ್ಚಿನ ಅಧಿಕಾರವನ್ನು ಜಿಲ್ಲಾ ಮಂಡಳಿಗಳಿಗೆ ವಹಿಸಲಾಯಿತು.

ಅದಲ್ಲದೆ ಹೊಸ ಗ್ರಾಮ ಪಂಚಾಯತ್ ಕಾಯಿದೆಯನ್ನು ಜಾರಿಗೆ ತರಲಾಯಿತು. ಜಿಲ್ಲಾ ಮಂಡಳಿಗಳಿಂದ ಪಂಚಾಯಿತಿಗಳನ್ನು ನಿಯಂತ್ರಿಸುವ ಅಧಿಕಾರವನ್ನು ಕಸಿದು ಕೊಳ್ಳಲಾಯಿತು. ಮತ್ತು ಪಂಚಾಯಿತಿಗಳನ್ನು ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣಕ್ಕೆ ಗುರಿಪಡಿಸಲಾಯಿತು. ಸ್ಥಳೀಯ ಆಡಳಿತವನ್ನು ಉತ್ತಮಪಡಿಸಲಾಯಿತು. ಪುರಸಭೆಯ ಮಂಡಳಿಗಳ ಚುನಾಯಿತ ಸದಸ್ಯರ ಸಭೆಯನ್ನು ಹೆಚ್ಚಿಸಲಾಯಿತು. ಕಾರ್ಮಿಕರ ಪರಿಹಾರ ಕಾಯಿದೆ ಮತ್ತು ಮಹಿಳೆಯರ ಹಕ್ಕುಗಳನ್ನು ಕುರಿತಂಥ ಹಿಂದು ಕಾನೂನಿನ ತಿದ್ದುಪಡಿ ಕಾಯಿದೆ ಜಾರಿಗೆ ತರಲಾಯಿತು.

ಮೈಸೂರು ರಾಜ್ಯದ ಆರ್ಥಿಕ ಅಭಿವೃದ್ಧಿಗಾಗಿ ಸರ್ ಮಿರ್ಜಾ ಇಸ್ಮೈಲ್ ಅಪಾರವಾದ ಉತ್ಸಾಹದಿಂದ ಶ್ರಮಿಸಿದರು. ಗೊಬ್ಬರಗಳ ಬಳಕೆಯನ್ನು ಪ್ರಚಲಿತಗೊಳಿಸಲು ಅನೇಕ ಇಲಾಖೆಗಳನ್ನು ಸೃಷ್ಟಿಸಲಾಯಿತು. ಕೃಷಿ ಶಿಕ್ಷಣವು ವಿಶೇಷ ಗಮನವನ್ನು ಗಳಿಸಿತು. ಮೈಸೂರಿನ ಭೂ ಕಂದಾಯ ಪದ್ಧತಿಯಲ್ಲಿದ್ದ ನ್ಯೂನತೆಗಳನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳ ಲಾಯಿತು. ೧೯೨೭ ರಲ್ಲಿ ಭೂಕಂದಾಯ ಹಕ್ಕುಗಳ ದಾಖಲೆ ಕಾಯಿದೆಯನ್ನು ಜಾರಿಗೆ ತರಲಾಯಿತು. ನೀರಾವರಿ ಸೌಲಭ್ಯವನ್ನು ವಿಸ್ತರಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ಜಾರಿಗೆ ತರಲಾಯಿತು. ರಾಜ್ಯ ಸರ್ಕಾರವು ರಾಜ್ಯದ ಪ್ರಾಥಮಿಕ ಶಿಕ್ಷಣಕ್ಕೆ ಧನಸಹಾಯ ಒದಗಿಸುವ ಜವಾಬ್ದಾರಿಯನ್ನು ಸ್ಥಳೀಯ ಸಂಘಗಳಿಗೆ ವಹಿಸಿತು. ಮೊದಲ ಬಾರಿಗೆ ಪ್ರಾಯೋಗಿಕ ಕ್ರಮವಾಗಿ ಪ್ರೌಢಶಾಲೆ ಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಲು ಶ್ರಮಿಸಲಾಯಿತು. ಮೈಸೂರು

ವಿಶ್ವವಿದ್ಯಾಲಯದ ಸೆನೆಟ್ ಕೂಡಾ ಜನಾದರಣೀಯ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಪ್ರಾರಂಭಿಸಿದರು. ಮಿರ್ಜಾ ಇಸ್ಮೈಲ್‌ರು ದಿವಾನರಾಗಿದ್ದಾಗ ವೈಸರಾಯ್ ಲಾರ್ಡ್ ಇರ್ವಿನ್ನರು ೧೯೨೯ ರಲ್ಲಿ ಕರ್ನಾಟಕವನ್ನು ಸಂದರ್ಶಿಸಿದರು. ಅವರು ಶ್ರೀರಂಗಪಟ್ಟಣ, ಕೋಲಾರದ ಚಿನ್ನದ ಗಣಿಗಳು ಹಾಗೂ ಕೃಷ್ಣರಾಜ ಸಾಗರದ ಅಣೆಕಟ್ಟನ್ನು ಸಂರಚಿಸಿದರು. ಅಧಿಕಾರ ವರ್ಗಾವಣೇಯಾದ ಕಾಲದಿಂದ ಬ್ರಿಟಿಷ್ ಸರ್ಕಾರಕ್ಕೆ ರಾಜ್ಯವು ನೀಡಬೇಕಾಗಿದ್ದ ಸಹಾಯಧನದಲ್ಲಿ ರೂ. ೧೦ ಲಕ್ಷವನ್ನು ಕಡಿಮೆ ಮಾಡಲಾಗಿದೆ ಎಂದು ಘೋಷಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಆಳ್ವಿಕೆಯ ಬೆಳ್ಳಿ ಮಹೋತ್ಸವದ ಆಚರಣೆಯು ಸರ್ ಮಿರ್ಜಾ ಇಸ್ಮೈಲ್‌ರ ದಿವಾನಗಿರಿಯ ಅತಿ ಪ್ರಸಿದ್ಧ ಘಟನೆಯಾಗಿತ್ತು. ಸರ್ ಮಿರ್ಜಾ ಇಸ್ಮೈಲ್‌ರು ಸಕ್ರಿಯವಾಗಿ ಭಾಗವಹಿಸಿದ್ದರಿಂದ ಮತ್ತು ಅವರ ಶ್ರಮದಿಂದ ಈ ಸಮಾರಂಭವು ಯಶಸ್ವಿಯಾಯಿತು.

ಗಾಂಧೀಜಿಯವರು ಮೈಸೂರು ರಾಜ್ಯವನ್ನು ಸಂದರ್ಶಿಸಿದಾಗ ದಿವಾನ್ ಮಿರ್ಜಾ ಇಸ್ಮೈಲ್ ಅವರು ಕೆಲವು ದಿನಗಳ ಮಟ್ಟಿಗೆ ನಂದಿಬೆಟ್ಟದಲ್ಲಿ ವಿಶ್ರಮಿಸಬೇಕೆಂದು ೧೯೨೭ ರಲ್ಲಿ ಆಹ್ವಾನಿಸಿದರು. ಮಿರ್ಜಾ ಇಸ್ಮೈಲ್‌ರ ಕಾಲದಲ್ಲಿ ಭಾರತದಲ್ಲಿ ರಾಷ್ಟ್ರೀಯ ಚಳವಳಿಯ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. ಮತ್ತು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರತಿಕ್ರಿಯೆಗಳು ಹಾಗೂ ಸ್ಪಂದನೆಗಳು ನಡೆದವು. ೧೯೩೦-೩೨ ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ದಕ್ಷಿಣ ಭಾರತದ ರಾಜ್ಯಗಳನ್ನು ಪ್ರತಿನಿಧಿಸಲು ಮಿರ್ಜಾ ಇಸ್ಮೈಲ್‌ರನ್ನು ನೇಮಕ ಮಾಡಲಾಯಿತು. ಅವರು ಭಾರತೀಯ ರಾಜ್ಯಗಳ ಸಂಯುಕ್ತ ಒಕ್ಕೂಟವನ್ನು ರಚಿಸುವ ತತ್ವಕ್ಕೆ ಬೆಂಬಲ ನೀಡಿದರು. ಸರ್ ಮಿರ್ಜಾ ಇಸ್ಮೈಲರ ಸೇವೆಯು ಚಿರಸ್ಮರಣೀಯ ಹಾಗೂ ಶ್ಲಾಘನೀಯವಾದುದಾಗಿದೆ. ಅವರಿಗೆ ತಮ್ಮ ಕರ್ತವ್ಯದ ಬಗ್ಗೆ ಇದ್ದ ಭಕ್ತಿಯನ್ನು 'ನಿಷ್ಕಾಮಕರ್ಮ' ಎನ್ನಬಹುದು.

ಸರ್ ಮಿರ್ಜಾ ಇಸ್ಮೈಲ್‌ರ ಕಾಲದಲ್ಲಿ ಕೈಗಾರಿಕೆಗಳಲ್ಲಿ ಹಾಗೂ ನಗರ ಯೋಜನೆಯಲ್ಲಿ ಅಪಾರ ಬೆಳವಣಿಗೆಯುಂಟಾಯಿತು. ಬಾಡನ್ಸ್ವಾಳದಲ್ಲಿ ಖಾದಿ ಕೇಂದ್ರವನ್ನು ಸ್ಥಾಪಿಸಲಾಯಿತು. ವ್ಯಾಪಾರ ಮತ್ತು ವಾಣಿಜ್ಯ ಅಪಾರ ಪ್ರೋತ್ಸಾಹವನ್ನು ಗಳಿಸಿತು. ಮೈಸೂರಿನ ಪದಾರ್ಥಗಳ ಮಾರಾಟವನ್ನು ಹೆಚ್ಚಿಸಲು ಬಾಂಬೆಯಲ್ಲಿ ಮೈಸೂರ್ ಎಂಪೋರಿಯಂನನ್ನು ಸ್ಥಾಪಿಸಲಾಯಿತು. ಉಕ್ಕಿನ ಕಾರ್ಖಾನೆ, ಹಿಂದೂಸ್ಥಾನ್ ಏರನಾಟಿಕ್ಸ್ ಲಿಮಿಟೆಡ್‌ಗಳನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಬೆಳಗೊಳದಲ್ಲಿ ರಾಸಾಯನಿಕ ಹಾಗೂ ಗೊಬ್ಬರ ಕಾರ್ಖಾನೆ ಮತ್ತು ಶಿವಮೊಗ್ಗದಲ್ಲಿ ಬೆಂಕಿಕಡ್ಡಿ ಕಾರ್ಖಾನೆಗಳು ಸರ್ ಮಿರ್ಜಾ ಇಸ್ಮೈಲ್‌ರ ಕಾಲದಲ್ಲಿ ಪ್ರಾರಂಭಿಸಲಾದ ಕಾರ್ಖಾನೆಗಳಾಗಿದ್ದವು. ಮೈಸೂರಿನ ಗಂಧದೆಣ್ಣೆ, ರೇಷ್ಮೆ, ಸೋಪು ಮತ್ತು ಅಗರಬತ್ತಿಗಳಿಗೆ ಹೊಸ ಮಾರುಕಟ್ಟೆಗಳನ್ನು ಹುಡುಕಲು ಲಂಡನ್ನಿನಲ್ಲಿ ವ್ಯಾಪಾರ ಕಮಿಷನರ್ ಒಬ್ಬರನ್ನು ನೇಮಕ ಮಾಡಲಾಯಿತು.

ಸರ್ ಮಿರ್ಜಾ ಇಸ್ಮೈಲ್ ಕೃಷ್ಣರಾಜ ಸಾಗರ ಅಣೆಕಟ್ಟಿನ ಬಳಿ ಸುಂದರವಾದ ಬೃಂದಾವನ ಉದ್ಯಾನವನವನ್ನು ನಿರ್ಮಿಸಿದರು. ಇದು ಪ್ರಸಿದ್ಧವಾದ ಪ್ರವಾಸಿ ಕೇಂದ್ರವಾಗಿದೆ. ಮೈಸೂರನ್ನು ಉದ್ಯಾನವನಗಳಿಂದ ಮತ್ತು ಸುಂದರವಾದ ಚೌಕಗಳಿಂದ ಅಲಂಕರಿಸಲಾಯಿತು. ಬೆಂಗಳೂರಿನಲ್ಲಿ ಕೃಷ್ಣರಾಜೇಂದ್ರ ಕೈಗಾರಿಕಾ ಶಾಲೆ ಮತ್ತು ಮೆದುಳಿನ ಆಸ್ಪತ್ರೆಯನ್ನು ನಿರ್ಮಿಸಲಾಯಿತು. ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ಜಾರಿಗೆ ತರಲಾಯಿತು. ಪ್ರಾಯೋಗಿಕ ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಲಾಯಿತು. ೧೯೨೮ ರಲ್ಲಿ ಬೆಂಗಳೂರಿನಲ್ಲಿ ಸುಲ್ತಾನ್‌ಪೇಟ್ ಗಣಪತಿ ಗಲಭೆಗಳು ನಡೆದವು. ಸರ್ ಮಿರ್ಜಾ ಇಸ್ಮೈಲ್‌ರವರು ಈ ವಿಷಯವನ್ನು ಕುರಿತು ತನಿಖೆ ನಡೆಸಿ, ವರದಿ ಒಪ್ಪಿಸಲು ವಿಶ್ವೇಶ್ವರಯ್ಯ ಸಮಿತಿಯನ್ನು ನೇಮಕ ಮಾಡಿದರು. ಈ ಗಲಭೆಗಳನ್ನು ತಡೆಹಿಡಿಯಲು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮತ್ತು ಜಿಲ್ಲಾಧಿಕಾರಿಗಳು ಸರಿಯಾದ ಕ್ರಮವನ್ನು ಕೈಗೊಂಡಿಲ್ಲ ಎಂದು ಸಮಿತಿಯು ಖಂಡಿಸಿತು. ೧೯೩೮ ರಲ್ಲಿ ಮೈಸೂರು ಕಾಂಗ್ರೆಸ್ಸನ್ನು ರೂಪಿಸಲಾಯಿತು. ಅದು ಶಿವಪುರದಲ್ಲಿ ಮೊದಲ ಅಧಿವೇಶನವನ್ನು ನಡೆಸಿತು ಮತ್ತು ರಾಜ್ಯಾದ್ಯಾಂತ ಬಾವುಟದ ಮೆರವಣಿಗೆಗಳನ್ನು ಕೈಗೊಳ್ಳಬೇಕಾಗಿತ್ತು. ೧೯೩೮ ರಲ್ಲಿ ವಿದುರಾಶ್ವತ್ಥದಲ್ಲಿ ಸರ್ಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕಾಂಗ್ರೆಸ್ ಧ್ವಜ ಸತ್ಯಾಗ್ರಹ ನಡೆಸಲು ಪ್ರಯತ್ನಿಸಿತು. ಇದರಿಂದ ಲಾಠಿ ಪ್ರಹಾರ ಹಾಗೂ ಗುಂಡು ಹಾರಿಸಿದ ಪ್ರಕರಣಗಳು ನಡೆದವು. ರಾಷ್ಟ್ರೀಯ ಚಳವಳಿಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಈ ಎಲ್ಲಾ ರಾಜಕೀಯ ಬೆಳವಣಿಗೆಗಳ ನಡುವೆ ಸರ್ ಮಿರ್ಜಾ ಇಸ್ಮೈಲ್‌ರು ಆರ್ಥಿಕ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿದರು. ಅವರು ಕೊಡುಗೆಯು ವಿಶೇಷವಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರರವರು ನಿಧನರಾದ ನಂತರ ಸರ್ ಮಿರ್ಜಾ ಇಸ್ಮೈಲ್‌ರು ೧೯೪೧ ರಲ್ಲಿ ರಾಜೀನಾಮೆಯನ್ನಿತ್ತರು. ಅವರ ನಂತರ ಎನ್. ಮಾಧವರಾವ್ ದಿವಾನರಾದರು.

ಹೆಚ್ಚಿನ ವಿಷಯ

[ಜಯಚಾಮರಾಜ ಒಡೆಯರ್ (೧೯೪೦-೪೭)

೧೯೪೦ ರಲ್ಲಿ ಜಯಚಾಮರಾಜ ಒಡೆಯರ್ ಮೈಸೂರಿನ ಸಿಂಹಾಸನವನ್ನೇರಿದರು. ೧೯೧೯ ರಲ್ಲಿ ಹುಟ್ಟಿದ ಇವರು ಮೈಸೂರಿನ ಒಡೆಯರ ವಂಶಸ್ಥರಲ್ಲಿ ಕೊನೆಯ ಅರಸರು. ತಮ್ಮ ವಂಶಸ್ಥರಂತೆ ಉತ್ತಮ ಶಿಕ್ಷಣವನ್ನು ಪಡೆದುಕೊಂಡಿದ್ದರು. ಅವರು ಮೈಸೂರು ಮಹಾರಾಜ ಕಾಲೇಜಿನ ಉತ್ತಮ ವಿದ್ಯಾರ್ಥಿಯಾಗಿ ಉತ್ತೀರ್ಣರಾದರು. ಅವರು ಸಿಂಹಾಸನವನ್ನೇರಿದಾಗ, ಅವರು ೨೩ ವರ್ಷ ವಯಸ್ಸಿನವರಾಗಿದ್ದರು. ಸರ್ ಮಿರ್ಜಾ ಇಸ್ಮೈಲ್‌ರ ನಂತರ ಎನ್. ಮಾಧವರಾವ್ ಮೈಸೂರಿನ ದಿವಾನರಾದರು. ಮತ್ತು ರಾಜ್ಯಕ್ಕೆ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದರು. ಪ್ರತಿನಿಧಿ ಸಭೆಯಲ್ಲಿನ ಸದಸ್ಯರ ಸಂಖ್ಯೆಯನ್ನು ೩೧೫ ಕ್ಕೆ ಹೆಚ್ಚಿಸಲಾಯಿತು. ಮುಸಲ್ಮಾನರಿಗೆ ೨೬ ಸ್ಥಾನಗಳು, ಹಿಂದುಳಿದ ವರ್ಗದವರಿಗೆ ೨೬ ಸ್ಥಾನಗಳು, ಭಾರತೀಯ ಕ್ರಿಶ್ಚಿಯನ್ನರಿಗೆ ೫ ಸ್ಥಾನಗಳನ್ನು, ಯೂರೋಪಿಯನ್ನರಿಗೆ ೧ ಸ್ಥಾನವನ್ನು ವಿಶೇಷ ಹಿತಾಸಕ್ತಿ

ಗಳನ್ನು ಪ್ರತಿನಿಧಿಸಲು ೨೮ ಸ್ಥಾನಗಳನ್ನು ಮತ್ತು ಮಹಿಳೆಯರಿಗೆ ೧೧ ಸ್ಥಾನಗಳನ್ನು ಮೀಸಲಾಗಿರಿಸಲಾಯಿತು. ಈ ಎಲ್ಲಾ ವರ್ಗಗಳ ಸದಸ್ಯರನ್ನು ಮತದಾನದ ಮೂಲಕ ಮಾತ್ರ ಚುನಾಯಿಸಬೇಕಾಗಿತ್ತು. ದಿವಾನರು ಪ್ರತಿನಿಧಿತ್ವ ಸಭೆಯ ಅಧಿವೇಶನಗಳ ಅಧ್ಯಕ್ಷತೆ ವಹಿಸಿದರು. ಕಾನೂನುಬದ್ಧ ಶಾಸಕಾಂಗ ಸಭೆಯು ೬೮ ಸದಸ್ಯರನ್ನು ಒಳಗೊಂಡಿತ್ತು. ಮುಸಲ್ಮಾನರಿಗೆ ೪ ಸ್ಥಾನ, ಹಿಂದುಳಿದ ವರ್ಗಗಳಿಗೆ ೪ ಸ್ಥಾನಗಳು, ಭಾರತೀಯ ಕ್ರಿಶ್ಚಿಯನ್ನರಿಗೆ ೧ ಸ್ಥಾನ, ಯುರೋಪಿಯನ್ನರಿಗೆ ೧ ಸ್ಥಾನ ಮತ್ತು ವಿಶೇಷ ಹಿತಾಸಕ್ತಿಗಳ ಪ್ರತಿನಿಧಿತ್ವಕ್ಕೆ ೧೦ ಸ್ಥಾನಗಳನ್ನು ಮೀಸಲಾಗಿರಿಸಲಾಗಿತ್ತು. ೧೬ ಅಧಿಕಾರಿಗಳನ್ನು ಪ್ರತಿನಿಧಿಸಲಾಯಿತು. ಮತ್ತು ೨೪ ಸದಸ್ಯರು ಸರ್ಕಾರದಿಂದ ಹೆಸರಿಸಲ್ಪಟ್ಟಿದರು. ಮೊದಲ ಅಧಿಕಾರಾವಧಿಯಲ್ಲಿ ಮಹಾರಾಜರಿಂದ ಅಧ್ಯಕ್ಷರನ್ನು ನೇಮಕ ಮಾಡಬೇಕಾಗಿತ್ತು. ಆನಂತರ ಅಧ್ಯಕ್ಷರನ್ನು ಸಭೆಯ ಖಾಸಗಿ ಸದಸ್ಯರು ಚುನಾಯಿಸಬೇಕಾಗಿತ್ತು. ಸರ್ಕಾರಕ್ಕೆ ಮೂರು ಸಲಹೆಗಾರರನ್ನು ಮತ್ತು ಇಬ್ಬರು ಇತರ ಖಾಸಗಿ ಸದಸ್ಯರನ್ನು ನೇಮಕ ಮಾಡುವ ಅವಕಾಶ ಕಲ್ಪಿಸಲಾಯಿತು.

ದೇಶಕ್ಕೆ ಸ್ವಾತಂತ್ರ್ಯ ಗಳಿಸುವುದು ಭಾರತದ ರಾಷ್ಟ್ರೀಯ ಚಳವಳಿಯ ಮುಖ್ಯಗುರಿಯಾಗಿತ್ತು. ೧೯೪೨ ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಪ್ರಾರಂಭಿಸಲಾಯಿತು. ಭಾರತದ ಒಕ್ಕೂಟವನ್ನು ಮೈಸೂರು ಸೇರುವುದು ಮಹತ್ವಪೂರ್ಣವಾದ ವಿಷಯವಾಯಿತು. ೧೯೪೬ ರಲ್ಲಿ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ ಮೈಸೂರಿನ ದಿವಾನರಾದರು. ಮೈಸೂರಿನ ರಾಜಕೀಯ ನಾಯಕರು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ತಮ್ಮ ಬೇಡಿಕೆಯನ್ನು ತೀವ್ರಗೊಳಿಸಿದರು. ೧೯೪೭ ರಲ್ಲಿ ಬ್ರಿಟಿಷ್ ಆಳ್ವಿಕೆ ಮೈಸೂರಿನಲ್ಲಿ ಕೊನೆಗೊಂಡಿತು. ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿಯನ್ನು ತೀವ್ರಗೊಳಿಸಲಾಯಿತು. ಸೆಪ್ಟೆಂಬರ್ ೭ ರಂದು ಮಹಾರಾಜರು ಜವಾಬ್ದಾರಿ ಸರ್ಕಾರದ ಸ್ಥಾಪನೆಯನ್ನು ಘೋಷಿಸಿದರು. ೧೯೪೯ ರಲ್ಲಿ ದಿವಾನರ ಪದವಿಯನ್ನು ರದ್ದುಪಡಿಸಲಾಯಿತು. ರಾಜ್ಯಗಳ ಪುನರ್ನಿರ್ಮಾಣ ಸಮಿತಿಯು ಮೈಸೂರು ರಾಜ್ಯವನ್ನು ರೂಪಿಸಿತು. ತಾತ್ಕಾಲಿಕ ಸರ್ಕಾರವು ಕೊನೆಗೊಂಡಿತು. ಕೆ.ಸಿ. ರೆಡ್ಡಿ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದರು ಮತ್ತು ಜಯಚಾಮರಾಜ ಒಡೆಯರ ಮೈಸೂರು ರಾಜ್ಯದ ರಾಜಪ್ರಮುಖ (ರಾಜ್ಯಪಾಲ)ರಾದರು.

ದಿವಾನ್ ಎನ್. ಮಾಧವರಾವ್ (೧೯೪೧-೪೬)

ಎನ್. ಮಾಧವರಾವ್ ಆಂಧ್ರ ಪ್ರದೇಶದ ಮಚಲಿಪಟ್ಟಣಂನಲ್ಲಿ ಜನಿಸಿದರು. ಅವರು ಮದರಾಸಿನ ಪಾಚಿಯಪ್ಪ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ನ್ನು ಪಡೆದುಕೊಂಡರು. ಅವರು ಕಾನೂನು ಶಾಸ್ತ್ರದಲ್ಲಿ ಪದವಿಯನ್ನು ಮದರಾಸಿನ ವಿಶ್ವವಿದ್ಯಾಲಯದಿಂದ ಪ್ರಥಮ ರ್‍ಯಾಂಕ್‌ನಲ್ಲಿ ಗಳಿಸಿದರು. ಎನ್. ಮಾಧವರಾವ್ ಕಿರಿಯ ಕಮಿಷನರ್ ಆಗಿದ್ದರು. ಅವರು ಗುಬ್ಬಿಯಲ್ಲಿ ಮುಖ್ಯ ಕಮಿಷನರ್ ಆದರು. ಅವರು ಮೈಸೂರಿನಲ್ಲಿಯೂ ಮುಖ್ಯ ಕಮಿಷನರ್ ಆಗಿ ಸೇವೆ ಸಲ್ಲಿಸಿದರು. ೧೯೪೧ ರಲ್ಲಿ ಮಾಧವರಾವ್ ಮೈಸೂರಿನ ದಿವಾನರಾದರು.

೧೯೪೨ ರಲ್ಲಿ ಗಾಂಧೀಜಿಯವರು ಭಾರತ ಬಿಟ್ಟು ತೊಲಗಿ ಚಳವಳಿಯನ್ನು ಪ್ರಾರಂಭಿಸಿದರು. ಮೈಸೂರಿನ ಕಾಂಗ್ರೆಸ್ ನಾಯಕತ್ವವನ್ನು ವಹಿಸಿಕೊಂಡಿತು. ಸರ್ಕಾರವು ರಾಜ್ಯದ ಅಖಿಲ ಮೈಸೂರ್ ಕಾಂಗ್ರೆಸ್ ಸಮಿತಿ ಮತ್ತು ಇತರ ಜಿಲ್ಲಾ ಹಾಗೂ ನಗರ ಸಮಿತಿಗಳನ್ನು ಕಾನೂನಿಗೆ

ವಿರುದ್ಧವಾದುದೆಂದು ಘೋಷಿಸಿದರು. ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ಬ್ರಿಟಿಷ್ ಸರ್ಕಾರದ ಆಜ್ಞಾನಗಳನ್ನು ಉಲ್ಲಂಘಿಸಿ ಬೆಂಗಳೂರಿನ ಮೈಸೂರು ರಾಜ್ಯ ಆರ್ಥಿಕ ಆಯೋಗ ವನ್ನು ಸ್ಥಾಪಿಸಿದರು.

ಎನ್. ಮಾಧವರಾವ್ ದಿವಾನರಾಗಿದ್ದಾಗ ಈಸೂರು ಪ್ರಕರಣವೆಂಬ ಮತ್ತೊಂದು ಮುಖ್ಯ ಘಟನೆ ನಡೆಯಿತು. ಈಸೂರಿನಲ್ಲಿ ಪಟೇಲರು ತಮ್ಮ ಕರ್ತವ್ಯಗಳನ್ನು ನಿರ್ವಹಿಸದಂತೆ ವಿದ್ಯಾರ್ಥಿ ಗಳು ಮತ್ತು ಗ್ರಾಮಸ್ಥರು ತಡೆಹಿಡಿಯಲು ಪ್ರಯತ್ನಿಸಿದರು. ಪಟೇಲರನ್ನು ಥಳಿಸಲಾಯಿತು ಮತ್ತು ಪೊಲೀಸರನ್ನು ಗಾಂಧಿಟೋಪಿಗಳನ್ನು ಧರಿಸುವಂತೆ ಒತ್ತಾಯಿಸಿ ಮೆರವಣಿಗೆ ಮಾಡಲಾಯಿತು. ಸರ್ಕಾರವು ಅನೇಕ ಜನರನ್ನು ಬಂಧಿಸಿತು. ಬಂಧಿಸಲಾದ ಜನರನ್ನು ಸರ್ಕಾರವು ೧೯೪೩ ರಲ್ಲಿ ಬಿಡುಗಡೆ ಮಾಡಿತು. ಎರಡನೆ ಜಾಗತಿಕ ಯುದ್ಧದಿಂದ ಉಂಟಾದ ತೀವ್ರ ಆಹಾರ ಕೊರತೆಯನ್ನು ರಾಜ್ಯವು ಎದುರಿಸಬೇಕಾಯಿತು. ಈ ಸಮಯದಲ್ಲಿ ಭದ್ರಾ ಅಣೆಕಟ್ಟು ಯೋಜನೆ ಮತ್ತು ಶರಾವತಿ ಜಲವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸಲಾಯಿತು. ದಿವಾನ್ ಎನ್. ಮಾಧವರಾವ್ ೧೯೪೬ ರಲ್ಲಿ ನಿವೃತ್ತರಾದರು.

ದಿವಾನ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ (೧೯೪೬-೪೯)

ಎನ್. ಮಾಧವರಾವ್ ನಿವೃತ್ತರಾದ ನಂತರ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ ಮೈಸೂರಿನ ದಿವಾನರಾದರು. ಅವರು ಮದರಾಸಿನ ಕ್ರಿಶ್ಚಿಯನ್ ಕಾಲೇಜು ಮತ್ತು ಕಾನೂನು ಕಾಲೇಜಿನಲ್ಲಿ ಅಧ್ಯಯನ ಮಾಡಿದರು. ಅವರು ಮೈಸೂರಿನ ದಿವಾನರಾಗುವ ಹೊತ್ತಿಗೆ, ಭಾರತವು ಸ್ವಾತಂತ್ರ್ಯವನ್ನು ಗಳಿಸುವುದು ನಿಶ್ಚಿತವೆಂದು ಸ್ಪಷ್ಟವಾಗಿ ಕಂಡುಬರುತ್ತಿತ್ತು. ಆರ್ಕಾಟ್ ರಾಮಸ್ವಾಮಿ ಮುದಲಿಯಾರ್ ಮೈಸೂರಿನ ದಿವಾನರಾಗಿದ್ದಾಗ ರಾಷ್ಟ್ರೀಯ ಚಳವಳಿಯು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮೈಸೂರಿನ ರಾಜಕೀಯ ನಾಯಕರು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲೆಂದು ಕೆ.ಸಿ. ರೆಡ್ಡಿ ಮೈಸೂರು ಚಲೋ.ಚಳವಳಿಯನ್ನು ಪ್ರಾರಂಭಿಸಿದರು. ಆ ಚಳವಳಿಗಾರರು "ಆರ್ಕಾಟ್ ಬಾಯ್ಕಾಟ್" ಮತ್ತು "ತಂಬೂಚೆಟ್ಟಿ, ಚಟ್ಟಾಕಟ್ಟಿ" ಎಂಬ ಕೂಗುಗಳೊಂದಿಗೆ ಮೆರವಣಿಗೆಯನ್ನು ಕೈಗೊಂಡರು. ೧೯೪೭ ರಲ್ಲಿ ಭಾರತವು ಸ್ವಾತಂತ್ರ್ಯವನ್ನು ಗಳಿಸಿತು. ಒಡೆಯರ್ ಅವರು ಮೈಸೂರನ್ನು ಭಾರತದ ಒಕ್ಕೂಟಕ್ಕೆ ವಿಲೀನಗೊಳಿಸಿದರು. ೧೯೪೯ ರಲ್ಲಿ ದಿವಾನರ ಪದವಿಯನ್ನು ರದ್ದುಪಡಿಸಿದರು.

೫.೫ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ

ಸಾಮಾನ್ಯವಾಗಿ ಬ್ರಿಟಿಷರ ವಿರುದ್ಧ ಭಾರತದಲ್ಲಿ ನಡೆದ ಚಳವಳಿಗಳನ್ನು ಭಾರತದ 'ಸ್ವಾತಂತ್ರ್ಯ ಹೋರಾಟ'ವೆಂದು ಗುರುತಿಸಿಕೊಂಡು ಬರಲಾಗಿದೆ. ಅದು ಕೇವಲ ವ್ಯಕ್ತಿಯ ಹೋರಾಟವಾಗದೆ ಸಮುದಾಯದ ಹೋರಾಟವಾಗಿದೆ. ಹಾಗೆ ನೋಡಿದರೆ ಪಾರತಂತ್ರ್ಯದ ವಿರುದ್ಧ ಮುಖ್ಯವಾಗಿ ಜನಸಾಮಾನ್ಯರು ಅಥವಾ ನಾಯಕನೊಡಗೂಡಿದ ಜನಸಾಮಾನ್ಯರು ಹೋರಾಡಿ ಬಿಡುಗಡೆ ಪಡೆಯುವುದೇ ಸ್ವಾತಂತ್ರ್ಯ. ಅದು ಇಡೀ ದೇಶದ ಅಂತಃಶಕ್ತಿಯ ಅಂತರ್ ಹೃದಯದ ಉತ್ಸೇಧದ ಮೂರ್ತರೂಪವಾಗಿದೆ. ಈ ಹಿನ್ನೆಲೆಯಲ್ಲಿ ನಾವು ನೋಡಿದಾಗ ೧೬ನೆಯ ಶತಮಾನದವರೆಗೆ ಭಾರತವನ್ನು ಸೂರೆಗೈದ ವಿದೇಶಿಯರು ನಮ್ಮ ರಾಷ್ಟ್ರವಾಹಿನಿಯಲ್ಲಿ ಸೇರಿಕೊಳ್ಳುತ್ತಾ ನಮ್ಮವರೆನಿಸಿಕೊಂಡು ಈ ದೇಶವನ್ನು ಆಳಿದರು. ಆದರೆ ವ್ಯಾಪಾರದ ಸೋಗಿನಲ್ಲಿ ನುಸುಳಿದ ಯುರೋಪಿಯನ್ನರಾದ **ಪೋರ್ಚುಗೀಸರು, ಡಚ್ಚರು, ಫ್ರೆಂಚರು** ಮತ್ತು ಇಂಗ್ಲೀಷರು ಇಲ್ಲಿನ ದೇಶಿಯ ಸಂಸ್ಥಾನಗಳ ಅತಂತ್ರ ಸ್ಥಿತಿಯನ್ನು ತಮ್ಮ ಲಾಭಕ್ಕೆ ಬಳಸಿಕೊಂಡು ವ್ಯಾಪಾರ ವಾಣಿಜ್ಯದ ಖಡ್ಗದ ಅಲುಗಿಗೆ ಈ ದೇಶವನ್ನು ತುತ್ತು ಮಾಡಿಕೊಂಡು ವಸಾಹತುಗಳನ್ನು ಸ್ಥಾಪಿಸಿದರು. ಬ್ರಿಟಿಷರು ನಿಧಾನವಾಗಿ ದೇಶದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸ ಹೊರಟಾಗ ಅವರ ಅಧಿಪತ್ಯವನ್ನು ಮೊದಲಿಗೆ ಧಿಕ್ಕರಿಸಿದವರು **ಕರ್ನಾಟಕದವರೇ**. ಕರ್ನಾಟಕದಲ್ಲಿ **ಟಿಪ್ಪು**ವಿನ ಸೋಲು ಬ್ರಿಟಿಷರ ಆಡಳಿತಕ್ಕೆ ದಾರಿ ಮಾಡಿಕೊಟ್ಟಿತು. ಆದರೆ ಅವರು ಜನರ ಅತೃಪ್ತಿ ಅಸಮಾಧಾನವನ್ನು ವ್ಯಾಪಕವಾಗಿ ಎದುರಿಸಬೇಕಾಯಿತು. ಜನರ ಆಕ್ರೋಶ ಹೆಚ್ಚಾದಂತೆ ಜನನಾಯಕರು ಉದಯಿಸಿದರು. ಇವರಿಗೆ ಜನತೆ ರಹಸ್ಯವಾಗಿ ಮತ್ತು ಮುಕ್ತವಾಗಿ ಬೆಂಬಲ ನೀಡಲಾರಂಭಿಸಿದರು. ಇದರಿಂದ ಅವರು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಬ್ರಿಟಿಷರ ವಿರುದ್ಧ ಸೆಣಸಾಟಕ್ಕೆ ನಿಂತರು. ಇದನ್ನೇ **ಸಶಸ್ತ್ರ ಬಂಡಾಯ** ಎಂದು ಕರೆಯುತ್ತೇವೆ. ಈ ಬಂಡಾಯವನ್ನು ಬ್ರಿಟಿಷರು ತಮ್ಮ ಸೇನಾ ಬಲದಿಂದ ಹತ್ತಿಕ್ಕಿದರೂ ಬ್ರಿಟಿಷರ ಆಡಳಿತ ವಿರುದ್ಧ ಜನರ ವಿರೋಧವನ್ನು ಪ್ರದರ್ಶಿಸಿದವು.

ಕರ್ನಾಟಕದಲ್ಲಿ ಸಶಸ್ತ್ರ ಬಂಡಾಯಗಳು

ಕ್ರಿ.ಶ. ೧೮೦೦ ರಿಂದ ೧೮೫೭ ರವರೆಗಿನ ಅವಧಿಯಲ್ಲೇ ಕರ್ನಾಟಕದಲ್ಲಿ ಅನೇಕ ಬಂಡಾಯಗಳಾದವು. ಅವುಗಳಲ್ಲಿ ಹಲವು ನೇರವಾಗಿ ಬ್ರಿಟಿಷರ ವಿರುದ್ಧವೇ ಆಗಿದ್ದರೆ, ಮತ್ತೆ ಕೆಲವು ಜನ ವಿರೋಧಿಯಾಗಿದ್ದ ಅರಸನ ವಿರುದ್ಧವೇ ಆಗಿದ್ದವು. ಅವುಗಳನ್ನು ಈಗ ಒಂದೊಂದಾಗಿ ಪರಿಶೀಲಿಸೋಣ.

೧. ದೋಂಡಿಯಾ ವಾಘ್

ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧ ಹಿಂಸಾತ್ಮಕ ರೂಪದಲ್ಲಿ ಪ್ರತಿಭಟನೆ ಮಾಡಿದ ವ್ಯಕ್ತಿ ಎಂದರೆ ದೋಂಡಿಯಾ ವಾಘ್. ಇವನು ಚನ್ನಗಿರಿಯಲ್ಲಿ 'ಪವಾರ್' ಎಂಬ ಮರಾಠ ಕುಟುಂಬದಲ್ಲಿ ಜನಿಸಿದನು. ಪ್ರಾಪ್ತ ವಯಸ್ಕನಾದ ಮೇಲೆ ಮೊದಲು

ಇವನು ಪಟವರ್ಧನರ ಬಳಿ, ಕೊಲ್ಹಾಪುರದ ರಾಜನ ಬಳಿ ಮತ್ತು ಧಾರವಾಡದ ದೇಸಾಯಿ ಬಳಿ ಸೇವೆ ಸಲ್ಲಿಸಿದನು. ಕ್ರಿ.ಶ. ೧೭೮೦ ರಲ್ಲಿ ಹೈದರಾಲಿಯ ಸೈನ್ಯದಲ್ಲಿ ಅಶ್ವಾರೋಹಿ ಸೈನಿಕನಾಗಿ ಸೇರಿಕೊಂಡನು. ನಂತರ ಸೇನಾನಾಯಕನಾದನು. ಚಡಪಡಿಕೆಯ ಸ್ವಭಾವದ ವ್ಯಕ್ತಿಯಾಗಿದ್ದ ಅವನು ಧಾರವಾಡಕ್ಕೆ ಪಲಾಯನ ಮಾಡಿ ತನ್ನದೇ ಆದ ರಾಜ್ಯ ಸ್ಥಾಪಿಸಲು ಪ್ರಯತ್ನಿಸಿ ವಿಫಲನಾದನು. ಆನಂತರ ಟಿಪ್ಪು ಸುಲ್ತಾನ ನೀಡಿದ ಉನ್ನತಾಧಿಕಾರದ ಭರವಸೆಯಿಂದ ಪುನಃ ಶ್ರೀರಂಗಪಟ್ಟಣಕ್ಕೆ ಬಂದನು. ಕ್ರಮೇಣ ಟಿಪ್ಪುವಿನೊಂದಿಗೆ ಭಿನ್ನಾಭಿಪ್ರಾಯಗಳನ್ನು ಬೆಳೆಸಿಕೊಂಡಾಗ ಕೋಪಗೊಂಡ ಟಿಪ್ಪು ಅವನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟನು. ಕ್ರಿ.ಶ. ೧೭೯೯ ರಲ್ಲಿ ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ಗೆದ್ದುಕೊಂಡಾಗ ಕಾರಾಗೃಹದ ಗೋಡೆಗೆ ಸರಪಣಿಗಳಿಂದ ಬಂಧಿಸಲ್ಪಟ್ಟಿದ್ದ ದೋಂಡಿಯಾನನ್ನು ನೋಡಿದ ಕಂಪನಿ ಸೈನಿಕರು ಅವನನ್ನು ಅಲ್ಲಿಂದ ಬಿಡುಗಡೆ ಮಾಡಿದರು. ಅಲ್ಲಿಂದ ಪಲಾಯನ ಮಾಡಿದ ದೋಂಡಿಯಾ ಸೇನೆಯಿಂದ ವಿಸರ್ಜಿತರಾದ ಸೈನಿಕರು ಮತ್ತು ರಾಜ್ಯ ಕಳೆದುಕೊಂಡಿದ್ದ ಚಿಕ್ಕಪುಟ್ಟ ಪಾಳೆಗಾರರ ನೆರವಿನಿಂದ ಒಂದು ಸೇನಾಪಡೆಯನ್ನು ರಚಿಸಿಕೊಂಡನು. ಇವರ ಸಹಾಯದಿಂದ ಜೂನ್ ೧೭೯೯ ರಲ್ಲಿ ಶಿವಮೊಗ್ಗವನ್ನು ಆಕ್ರಮಿಸಿ ಅದನ್ನು ತನ್ನ 'ಬ್ರಿಟಿಷ್ ವಿರೋಧಿ ಚಟುವಟಿಕೆಗಳ ಕೇಂದ್ರ' ವನ್ನಾಗಿ ಮಾಡಿಕೊಂಡನು. ಆಗ ಬ್ರಿಟಿಷ್ ಸೇನಾಧಿಕಾರಿಯಾಗಿದ್ದ ಕರ್ನಲ್ ಸ್ಟೀವನ್‌ಸನ್ ದೋಂಡಿಯಾನನ್ನು ಸೋಲಿಸಿ ಶಿವಮೊಗ್ಗವನ್ನು ಗೆದ್ದುಕೊಂಡನು. ಬಂಡಾಯಗಾರರಲ್ಲಿ ಭಯವನ್ನುಂಟು ಮಾಡಲು ಚನ್ನಗಿರಿಯ ಕಿಲ್ಲೆದಾರನೊಬ್ಬನನ್ನು ಗಲ್ಲಿಗೇರಿಸಲಾಯಿತು. ಶಿವಮೊಗ್ಗದಿಂದ ತಪ್ಪಿಸಿಕೊಂಡ ದೋಂಡಿಯಾ ಬಿದನೂರು ಮತ್ತು ಶಿಕಾರಿಪುರಗಳಲ್ಲಿ ತನ್ನದೇ ಆದ ಗುಂಪನ್ನು ಕಟ್ಟಿಕೊಂಡು ಬಲಂನ ಕೃಷ್ಣಪ್ಪನಾಯಕ, ರಾಯದುರ್ಗದ ಹೀರಾ ನಾಯಕ, ಆನೆಗುಂದಿಯ ಅರಸ, ಮಲಬಾರಿನ ಕೇರಳವರ್ಮ ಇನ್ನೂ ಮುಂತಾದವರೊಡನೆ ಸಂಪರ್ಕ ಬೆಳೆಸಿದನು. ಮಾಹೆಯಲ್ಲಿದ್ದ ಫ್ರೆಂಚರೂ ಆತನಿಗೆ ಪ್ರೋತ್ಸಾಹ ನೀಡಿದರು. ಕ್ರಿ.ಶ. ೧೮೦೦ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಮಾಲಾಬಾದ್ ಕೋಟೆಯನ್ನು ಗೆದ್ದು ಕೊಂಡು ಸೋಂದ, ಸವಣೂರು, ರಾಣಿಬೆನ್ನೂರು, ಹಾನಗಲ್, ಡಂಬಳ, ಹರಪನಹಳ್ಳಿ ಪ್ರದೇಶಗಳನ್ನು ಲೂಟಿಗೈದನು. ಅವನು ತಾನು ಘಟ್ಟದ ಕೆಳಗೂ ಹಾಗೂ ಮೇಲೆಯೂ ಹೀಗೆ ಎರಡೂ ಬದಿಯ ಪ್ರದೇಶಗಳ ಅಧಿಪತಿಯೆಂಬುದನ್ನು ಸಾರುವಂತ 'ಉಭಯ ಲೋಕಾಧೀಶ್ವರ' ಎಂಬ ಬಿರುದನ್ನು ಧರಿಸಿದನು. ಈ ರೀತಿ ಬ್ರಿಟಿಷ್ ಆಡಳಿತಕ್ಕೆ ಕಂಟಕ ಪ್ರಾಯವಾಗಿದ್ದ ದೋಂಡಿಯಾನ ಬಗ್ಗೆ ಬ್ರಿಟಿಷರ ಲಾರ್ಡ್‌ವೆಲ್ಲೆಸ್ಲಿ "ದೋಂಡಿಯಾ ಜೀವಸಹಿತ ಇರುವವರೆಗೂ ಕಂಪನಿಯ ಪ್ರದೇಶಗಳಲ್ಲಿ ಶಾಂತಿ ಉಳಿದಿರುವುದಿಲ್ಲ" ಎಂದು ತನ್ನ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾನೆ. ಆದ್ದರಿಂದ ಅವನನ್ನು ಅವನ ಸಹಚರರನ್ನು ನಿರ್ನಾಮ

ಮಾಡಲು ಬಯಸಿದನು. ಈ ಕೆಲಸವನ್ನು **ಕರ್ನಲ್ ಪೀಟರ್**‌ನಿಗೆ ವಹಿಸಲಾಯಿತು. ಈ ಕಾರ್ಯದಲ್ಲಿ ನಿಜಾಮನು ಬ್ರಿಟಿಷರಿಗೆ ನೆರವು ನೀಡಿದನು. ಇದನ್ನರಿತ ದೋಂಡಿಯಾ ತನ್ನ ಕಾರ್ಯಕ್ಷೇತ್ರವನ್ನು **ತುಂಗಭದ್ರಾ** ಮತ್ತು **ಮಲಪ್ರಭಾ** ನದಿಗಳ ನಡುವಿನ ಪ್ರದೇಶಕ್ಕೆ ಬದಲಾಯಿಸಿದನು. ಮರಾಠರ ಸೇನಾನಾಯಕ **ದೋಂಡಿಯಾ ಪಂತ್ ಗೋಕ್ಲ** ಕಿತ್ತೂರಿನ ಬಳಿ ದೋಂಡಿಯಾ ವಾಘನನ್ನು ಎದುರಿಸಿದನು. ಅಲ್ಲಿ ೧೦,೦೦೦ ಕುದುರೆ, ೫ ಸಾವಿರ ಪದಾತಿ ಹಾಗೂ ೮ ತೋಪುಗಳ ಸೇನೆಯೊಂದಿಗೆ ದೋಂಡಿಯಾನು ಗೋಕ್ಲನನ್ನು ಕೊಂದನು. ಹೀಗೆ ಅವನ ಚಟುವಟಿಕೆಗಳ ವ್ಯಾಪ್ತಿ ಇಡೀ **ಬೆಳಗಾವಿ** ಜಿಲ್ಲೆಯನ್ನು ಆವರಿಸಿ **ಕೊಲ್ಹಾಪುರ**ದ ಗಡಿಯವರೆಗೆ ಹಬ್ಬಿತಲ್ಲದೆ ನಿಜಾಮನ ಅಧಿಪತ್ಯವನ್ನು ಆಳವಾಗಿ ಭೇದಿಸಿದ್ದಿತು. ಆರ್ಥರ್ ವೆಲ್ಲೆಸ್ಲಿಯು ದೋಂಡಿಯಾನನ್ನು ಮುಗಿಸಲು ಅಂತಿಮವಾಗಿ ನಿರ್ಧರಿಸಿ ರಾಯಚೂರಿನ **ಕೋಣಗಲ್**‌ನಲ್ಲಿ ಅವನನ್ನು ಸಂಧಿಸಿದನು. ನಿಜಾಮ ಮತ್ತು ಮರಾಠ ಪಡೆಗಳ ನಡುವೆ ಸಿಲುಕಿಕೊಂಡಿದ್ದ ದೋಂಡಿಯಾನ ಮೇಲೆ ದೇಶೀಯ ಸೈನ್ಯದೊಂದಿಗೆ ವೆಲ್ಲೆಸ್ಲಿಯು ಅಶ್ವಾರೋಹಿ ಪಡೆಯ ನಾಲ್ಕು ತುಕಡಿಗಳು ಮುತ್ತಿಗೆ ಹಾಕಿದವು. **೧೮೦೦ ರ ಸೆಪ್ಟೆಂಬರ್ ೧೦** ರಂದು ಕೋಣಗಲ್‌ನಲ್ಲಿ ನಡೆದ ಭೀಕರ ಕಾಳಗದಲ್ಲಿ ದೋಂಡಿಯಾನು ಮಡಿದನು. ಇಂಗ್ಲಿಷರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಹೀಗೆ ಅಪ್ರತಿಮ ಪರಾಕ್ರಮದಿಂದ ಹೋರಾಡಿದ ದೋಂಡಿಯಾ ವಾಘ್ ನಿಜಾಮ, ಮರಾಠರು, ಬ್ರಿಟಿಷರು ಮತ್ತು ಮೈಸೂರು ಈ ಒಟ್ಟು ಸೇನೆಗೆ ಸಿಕ್ಕಿ ತನ್ನ ಪ್ರಾಣವನ್ನು ಬಲಿಗೊಟ್ಟನು. ಇದು ಟಿಪ್ಪುವಿನ ಅಸಮಾನ ಪರಾಕ್ರಮದ ಪ್ರತಿಭಟನೆಯ ನಂತರ ಬ್ರಿಟಿಷರಿಗೆ ದೊರೆತ ಮತ್ತೊಂದು ಅದ್ಭುತ ವಿಜಯವಾಗಿತ್ತು.

೨. ಐಗೂರಿನ ವೆಂಕಟಾದ್ರಿ ನಾಯಕ

ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರನ್ನು ಎದುರಿಸಿದ ಮತ್ತೊಬ್ಬ ಕ್ರಾಂತಿಕಾರಿ ನಾಯಕನೆಂದರೆ ಐಗೂರು ವೆಂಕಟಾದ್ರಿ ನಾಯಕ. ಇವನು **ಮಂಜರಾಬಾದಿನ** ಪಾಳೆಯಗಾರ **ಕೃಷ್ಣಪ್ಪ ನಾಯಕನ** ಮಗ. ಕ್ರಿ.ಶ. ೧೭೯೯ ರಲ್ಲಿ ಟಿಪ್ಪುಸುಲ್ತಾನ್ ಪತನ ಹೊಂದಿದ ನಂತರ ಐಗೂರಿನ ಪಾಳೆಯಗಾರನಾಗಿದ್ದ ವೆಂಕಟಾದ್ರಿ ನಾಯಕ ತನ್ನ ಪ್ರಾಂತ್ಯಗಳನ್ನು ವಿಸ್ತಾರ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಬ್ರಿಟಿಷರ ಕೋಪಕ್ಕೆ ತುತ್ತಾಗಬೇಕಾಯಿತು. ಮಂಜರಾಬಾದ್ ಸಮೀಪದಲ್ಲಿದ್ದ **ಅರಕೆರೆ** ಎಂಬಲ್ಲಿ ಕೋಟೆಯನ್ನು ಕಟ್ಟಿ ಬಿಸಲೆ ಪ್ರದೇಶವನ್ನು ವಶಪಡಿಸಿಕೊಂಡನು. ತಮ್ಮ ಪ್ರಭುತ್ವವನ್ನು ಪ್ರಶ್ನಿಸಿದ ಯಾರನ್ನೂ ಸಹಿಸದ ಬ್ರಿಟಿಷರು ವೆಂಕಟಾದ್ರಿಯನ್ನು ಹತ್ತಿಕ್ಕಲು ನಿರ್ಧರಿಸಿದರು. ವೆಲ್ಲೆಸ್ಲಿಯು ಕ್ರಿ.ಶ. ೧೮೦೦ ರಲ್ಲಿ ಕೋಟೆಯ ಮೇಲೆ ದಾಳಿ ಮಾಡಲು **ಮಾಂಟ್ರೆಸರ**ನನ್ನು ಕಳುಹಿಸಿದನು. ಅವನು ಅಲ್ಲಿನ ಕೋಟೆಯನ್ನು ನಾಶಪಡಿಸಿ ಕೇವಲ ಐಗೂರು ಪ್ರದೇಶವನ್ನು ವೆಂಕಟಾದ್ರಿಗೆ ಬಿಟ್ಟುಕೊಟ್ಟನು. ಇದರಿಂದ

ತೃಪ್ತಿ ಹೊಂದದ ನಾಯಕನು ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿ ಅನೇಕ ಸೈನಿಕರನ್ನು ಕೊಂದು ಹಾಕಿದನು. ಇದರಿಂದ ರೊಚ್ಚಿಗೆದ್ದ ಬ್ರಿಟಿಷರು ಭಾರೀ ಸೈನ್ಯದೊಂದಿಗೆ ಈತನನ್ನು ಎದುರಿಸಲು ಸನ್ನದ್ಧರಾದರು. 'ಗೂಳಿರಾಜ' ಅಥವಾ 'ಬುಲ್ಲಂರಾಜ' ಎಂದೇ ಖ್ಯಾತಿಯಾಗಿದ್ದ ವೆಂಕಟಾದ್ರಿಯನ್ನು ಹಿಡಿಯಲು ಬ್ರಿಟಿಷರು ವ್ಯೂಹ ರಚನೆ ಮಾಡಿದರು. ಅದಕ್ಕಾಗಿ ಬಿಸಲೆಘಾಟ್‌ನಿಂದ ಕರೆಸಿಕೊಂಡ ಐದು ತುಕಡಿ ಸೈನಿಕರನ್ನು ನೆಲೆಗೊಳಿಸಿದನು. ಮುಂಬಯಿ, ಬಿದನೂರು ಮತ್ತು ಸೋಂದಾಗಳಿಂದ ಒಂದೊಂದು ತುಕಡಿ ಸೇನೆಯನ್ನು ಕರೆಸಿ ಅವರು ಘಟ್ಟವನ್ನೇರಿ ಹೋಗಿ 'ಗೂಳಿರಾಜ'ನನ್ನು ಹಿಡಿಯಲು ಆಜ್ಞೆ ಮಾಡಿದರು. ಹೀಗೆ ದೇಶದ ಅತಿ ಸಣ್ಣ ಮೂಲೆಯೊಂದರ ದಂಗೆಯನ್ನೆದುರಿಸಲು ಬ್ರಿಟಿಷರು ಬೃಹತ್ ವ್ಯವಸ್ಥೆಯನ್ನೇ ಮಾಡಿದರು. ೧೮೦೨ ರ ಜನವರಿಯಲ್ಲಿ ಅಂತಿಮ ಆಕ್ರಮಣ ನಡೆಯಿತು. ಲೆಫ್ಟಿನೆಂಟ್ ಸ್ಪೈ ನೇತೃತ್ವ ವಹಿಸಿದ್ದ. ಬ್ರಿಟಿಷರು ಬಂಡಾಯಗಾರರ ಎಲ್ಲಾ ನೆಲೆಗಳನ್ನು ಧ್ವಂಸಗೊಳಿಸಿದರು. ಕೊನೆಗೆ ಕಾಡಿನ ನಡುವೆ ಗೂಳಿರಾಜನು ತನ್ನ ಅನುಚರರನ್ನು ಆಹಾರ ಪದಾರ್ಥಕೊಳ್ಳಲು ಸಮೀಪದ ಹಳ್ಳಿಗೆ ಕಳುಹಿಸಿದ್ದಾಗ ಅವನನ್ನು ಹಿಡಿಯಲಾಯಿತು. ಫೆಬ್ರವರಿ ೧೦, ೧೮೦೨ ರಂದು ವೆಂಕಟಾದ್ರಿಯನ್ನು ಆತನ ಆರು ಜನ ಸಹಚರರೊಂದಿಗೆ ಗಲ್ಲಿಗೇರಿಸಲಾಯಿತು. ಹೀಗೆ ಬ್ರಿಟಿಷರು ತಮ್ಮ ಬುದ್ಧಿಮತ್ತೆಯಿಂದ ಮೈಸೂರಿನ ರಾಜ, ಹೈದರಾಬಾದಿನ ನಿಜಾಮ ಮತ್ತು ಮರಾಠರ ಸಹಾಯದಿಂದ ಮೈಸೂರಿನ ಇಬ್ಬರು ವೀರರನ್ನು ನಾಶಪಡಿಸಿದರು. ಬ್ರಿಟಿಷ್ ವಿರೋಧಿ ಅಂಶಗಳನ್ನು ತಮ್ಮ ಹತೋಟಿಗೆ ತಂದುಕೊಂಡ ಈ ಇಬ್ಬರು ಬಂಡಾಯಗಾರರು ದಕ್ಷಿಣದ ಇತರ ರಾಜ್ಯಗಳು ಬ್ರಿಟಿಷ್‌ರಿಗೆದುರಾಗಿ ಬಂಡೇಳುವಂತೆ ಪ್ರಚೋದಿಸಿದರು. ಸ್ಫೂರ್ತಿ ನೀಡಿದರು. ಬ್ರಿಟಿಷ್ ಆಳ್ವಿಕೆಯ ವಿರುದ್ಧವಾಗಿ ನಡೆದ ಈ ಆಂದೋಲನಗಳು ಕೇವಲ ಮೈಸೂರು ಸಂಸ್ಥಾನಕ್ಕಷ್ಟೇ ಸೀಮಿತವಾಗದೆ ಪ್ರಸ್ತುತ ಕರ್ನಾಟಕದ ಇತರ ಭಾಗಗಳಲ್ಲೂ ಕಂಡುಬಂದವು. ಮದರಾಸು, ಮುಂಬಯಿ ಕರ್ನಾಟಕದ ಭಾಗಗಳಲ್ಲೂ ಹೋರಾಟ ಆರಂಭವಾಯಿತು. ಅವುಗಳನ್ನು ಈ ರೀತಿ ಪರಿಶೀಲಿಸಬಹುದು.

೩. ಕೊಪ್ಪಳದ ಬಂಡಾಯ

ಟಿಪ್ಪು ಸುಲ್ತಾನನ ಮರಣದ ನಂತರ ಕೊಪ್ಪಳದ ಸುತ್ತಮುತ್ತಲಿನ ಪ್ರದೇಶಗಳು ಹೈದರಾಬಾದಿನ ನಿಜಾಮನ ವಶಕ್ಕೆ ಬಂದವು. ಅವನಿಗೆ ಬ್ರಿಟಿಷರ ರಕ್ಷಣೆಯಿತ್ತು. ಇದರಿಂದ ಅವನು ಮನಸ್ಸಿಗೆ ಬಂದಂತೆ ಆಳ್ವಿಕೆ ನಡೆಸತೊಡಗಿದನು. ಇವನ ದುರ್ವರ್ತನೆಯಿಂದ ಬೇಸತ್ತ ಕೊಪ್ಪಳದ ಜಮೀನ್ದಾರ ವೀರಪ್ಪ ಎಂಬಾತನು ಕ್ರಿ.ಶ. ೧೮೧೮ ರಲ್ಲಿ ಬಂಡೆದ್ದು ಕೊಪ್ಪಳ ಮತ್ತು ಬಹದ್ದೂರ್ ಬಂಡಕೋಟೆಗಳನ್ನು ಆಕ್ರಮಿಸಿಕೊಂಡನು. ತಮ್ಮ ಮತ್ತು ತಾವು ರಕ್ಷಿಸುವ ರಾಜ್ಯದ ವಿರೋಧ ಎಳ್ಳಷ್ಟನ್ನು ಸಹಿಸದ ವಸಾಹತುಗಾರರು ತಕ್ಷಣ ನಿಜಾಮನ ರಕ್ಷಣೆಗೆ ಧಾವಿಸಿದರು. ಮೇಜರ್ ಡಾಟನ್ ಮತ್ತು ಪ್ರೆಸ್ಲರ್ ಎಂಬ ಸೇನಾ ನಾಯಕರು ಇದಕ್ಕಾಗಿ ನಿಯೋಜಿತರಾದರು. ನಿಜಾಮನ ಸೇನಾಧಿಪತಿ ಇದ್ರೂಸ್ ಖಾನನೂ

ಇವರನ್ನು ಸೇರಿಕೊಂಡನು. ವೀರಪ್ಪ ಕೇವಲ ತನ್ನ ೫೦೦ ಜನ ಸೈನಿಕರೊಂದಿಗೆ ಹೋರಾಡಿದನು. ಕೊಪ್ಪಳ ಮೇ ೧೭, ೧೮೧೯ ರಂದು ಬ್ರಿಟಿಷರ ವಶವಾಯಿತು. ವೀರಪ್ಪನು ಹೋರಾಡುತ್ತಾ ಮರಣ ಹೊಂದಿದನು.

೪. ಬೀದರ್ ಬಂಡಾಯ

ನಿಜಾಮನ ಪ್ರಾಂತ್ಯವಾಗಿದ್ದ ಬೀದರ್‌ನಲ್ಲಿ ಅಧಿಕ ಪ್ರಮಾಣದ ತೆರಿಗೆಯಿಂದ ಜನರ ಶೋಷಣೆಯಾಗುತ್ತಿತ್ತು. ಅಲ್ಲಿನ ಅಭಿವೃದ್ಧಿಯನ್ನು ನಿರ್ಲಕ್ಷಿಸಲಾಯಿತು. ಇದರ ಪರಿಣಾಮವಾಗಿ ಕ್ರಿ.ಶ. ೧೮೨೦ ರಲ್ಲಿ ಬೀದರ್ ಜಿಲ್ಲೆಯ **ಉದಯಗಿರಿಯಲ್ಲಿ** ಗಲಭೆಗಳು ಆರಂಭವಾದವು. **ಸುಳಿಯಾಳವನ್ನು** ಕೇಂದ್ರ ಮಾಡಿಕೊಂಡ ಈ ಜಿಲ್ಲೆಯ ದೇಶಮುಖರಾದ **ಶಿವಲಿಂಗಯ್ಯ ದೇಶಮುಖ,** ಕೃಷ್ಣಾಪುರದ ದೇಶಮುಖನಾದ **ತಿರುಮಲರಾವ್** ಮತ್ತು **ಮೇಘಶಾಂ** ಎಂಬುವರು ಈ ದಂಗೆಗಳನ್ನು ಪ್ರಾರಂಭಿಸಿದರು. ಇದನ್ನು 'ದೇಶಮುಖರ ದಂಗೆ' ಎಂದೂ ಕೂಡಾ ಕರೆಯುವರು. ನಿಜಾಮನು ಈ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರ ಸಹಾಯ ಕೋರಿದನು. ಬ್ರಿಟಿಷರ **ಲೆಫ್ಟಿನೆಂಟ್ ಜೆ. ಸದರ್ಲ್ಯಾಂಡನು** ಇದಕ್ಕಾಗಿ ನಿಯೋಜಿತನಾದನು. ಇವನು ಡಿಸೆಂಬರ್ ೧೮೨೦, ಜನವರಿ ೧೮೨೧ ರಲ್ಲಿ ದೇಶಮುಖರನ್ನು ಸೋಲಿಸಿದನು. ದೇಶಮುಖರನ್ನು ಬಂಧಿಸಿ ಸೆರೆಮನೆಗೆ ದೂಡಲಾಯಿತು.

೫. ಸಿಂದಗಿ ದಂಗೆ

ಸಿಂದಗಿಯು ಬ್ರಿಟಿಷರ ರೆಸಿಡೆನ್ಸಿಗೆ ಸೇರಿದ್ದ ಸ್ಥಳವಾಗಿತ್ತು. ಅಲ್ಲಿನ ಜನ ಅಲ್ಲಿದ್ದ ರೆಸಿಡೆಂಟಿನ ದಬ್ಬಾಳಿಕೆಯಿಂದ ಬೇಸತ್ತು ದಂಗೆ ಎದ್ದರು. **ದಿವಾಕರ ದೀಕ್ಷಿತ, ರೇವಜಿರಾಸ್ತೆ, ಬಾಲಾಜಿ ದೇಶಪಾಂಡೆ** ಮತ್ತು **ಶೆಟ್ಟೆಯಪ್ಪ ಚುಕ್ಕಾಲಿ** ಎಂಬುವರು ಈ ದಂಗೆಯ ಮುಖಂಡರಾಗಿದ್ದರು. ಇವರು ಸಿಂದಗಿಯನ್ನು ತಮ್ಮದೇ ಆಡಳಿತ ರೂಪಿಸಿಕೊಂಡು ಅಲ್ಲಿ ತೆರಿಗೆಯನ್ನು ಸಂಗ್ರಹಿಸತೊಡಗಿದರು. ಇವರನ್ನು ಹತ್ತಿಕ್ಕಲು ಬ್ರಿಟಿಷರು **ಲೆಫ್ಟಿನೆಂಟ್ ಸ್ಟೀವನ್‌ಸನ್‌ನ** ನೇತೃತ್ವದಲ್ಲಿ ೧೮೨೪ ರಲ್ಲಿ ಸೇನೆಯನ್ನು ಕಳುಹಿಸಿದರು. ಅವರನ್ನು ಸೆರೆಹಿಡಿದು ಉಗ್ರ ದಂಡನೆಗೆ ಒಳಪಡಿಸಲಾಯಿತು.

೬. ಕಿತ್ತೂರಿನ ಬಂಡಾಯ

ಬೆಳಗಾವಿ ಜಿಲ್ಲೆಯ ಕಿತ್ತೂರು ಹಲವಾರು ದಂಗೆಗಳ ತಾಣವಾಗಿದೆ. ಬೆಳಗಾವಿ, ಧಾರವಾಡ ಜಿಲ್ಲೆಯಲ್ಲಿನ ಕೆಲಭಾಗಗಳನ್ನು ಆಳುತ್ತಿದ್ದ ಕಿತ್ತೂರ ದೇಸಾಯಿ **ಶಿವಲಿಂಗ ರುದ್ರಸರ್ಜನು** ೧೮೧೮ ರಲ್ಲಿ ಮರಾಠ ಪ್ರಭುತ್ವವನ್ನು ಇಳಿಸಲು ಬ್ರಿಟಿಷರಿಗೆ ಬೆಂಬಲ ನೀಡಿದ್ದನು. ಇದರ ಫಲವಾಗಿ ೭೦೦ ರಿಂದ ೩೫೦ ಹಳ್ಳಿಗಳಿದ್ದ ತನ್ನ ಸಣ್ಣ ರಾಜ್ಯವನ್ನು ಉಳಿಸಿಕೊಳ್ಳಲು ಆತನಿಗೆ ಅವಕಾಶವಿದ್ದಿತು. ಆದರೆ ಅವನು ೧೮೨೪ ರಲ್ಲಿ ಸಂತಾನವಿಲ್ಲದೆ ಮರಣ ಹೊಂದಿದನು. ಅವನು ಮರಣ ಹೊಂದುವುದಕ್ಕೆ ಮೊದಲು ತನ್ನ ಉತ್ತರಾಧಿಕಾರಿಯನ್ನಾಗಿ ಒಬ್ಬ ದತ್ತು ಪುತ್ರನನ್ನು ಮಾಡಿಕೊಂಡನು. ಶಿವಲಿಂಗ ರುದ್ರಸರ್ಜನ ವಿಧವೆಯಾದ ಚನ್ನಮ್ಮ

ರಾಜಪ್ರತಿನಿಧಿಯಾಗಿ ಆಳ್ವಿಕೆ ನಡೆಸತೊಡಗಿದಳು. **ಧಾರವಾಡದ ಕಲೆಕ್ಟರ್ ಥ್ಯಾಕರೆ** ಈ ದತ್ತಕವನ್ನು ಆಕ್ಷೇಪಿಸಿ ಬಾಂಬೆ ಸರ್ಕಾರವು ಕಿತ್ತೂರನ್ನು ವಹಿಸಿಕೊಳ್ಳುವಂತೆ ಆದೇಶಿಸಿ ಪತ್ರ ಬರೆದನು. ಇದರಿಂದ ರಾಣಿ ಚನ್ನಮ್ಮ ಕುಪಿತಳಾದಳು. ಆಕೆ ತನ್ನ ಹಕ್ಕಿಗಾಗಿ ಯುದ್ಧ ಮಾಡಲು ನಿರ್ಧರಿಸಿದಳು. ಅವಳು **ಕೊಲ್ಹಾಪುರದ** ಛತ್ರಪತಿಯ ನೆರವನ್ನು ಕೋರಿದಳು. ಅಕ್ಟೋಬರ್ ೧೮೨೪ ರಲ್ಲಿ ಥ್ಯಾಕರೆಯು ಕಿತ್ತೂರಿನ ಮೇಲೆ ದಾಳಿ ಮಾಡಿದನು. ಯುದ್ಧದಲ್ಲಿ ಥ್ಯಾಕರೆ ಹತನಾದನು. ಆದರೆ ಕೆಲವು ತಿಂಗಳು ಉರುಳಿದ ನಂತರ ೧೮೨೪ ರ ಡಿಸೆಂಬರ್‌ನಲ್ಲಿ ಬ್ರಿಟಿಷರು ಭಾರೀ ಸೇನೆಯನ್ನು ತೆಗೆದುಕೊಂಡು ಬಂದು ಕಿತ್ತೂರಿನ ಕೋಟೆಗೆ ಮುತ್ತಿಗೆ ಹಾಕಿದರು. ಚಾಪ್ಲಿನ್ ಇದರ ನೇತೃತ್ವ ವಹಿಸಿದ್ದನು. ಬ್ರಿಟಿಷರ ಅಗಾಧ ಸೈನ್ಯದ ವಿರುದ್ಧ ಅವಳು ಕೋಟೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ರಾಣಿ ಸೆರೆಸಿಕ್ಕಿದಳು ಅವಳನ್ನು ಬಂಧಿಸಿ **ಬೈಲಹೊಂಗಲ** ಸೆರೆಮನೆಯಲ್ಲಿಡಲಾಯಿತು. ಅವಳು ಅಲ್ಲಿ ೧೮೨೯ ರಲ್ಲಿ ನಿಧನ ಹೊಂದಿದಳು. ಹೀಗೆ ಕಿತ್ತೂರಿನ ಜನರ ಮನಸ್ಸಿನಲ್ಲಿ ದೇಶಭಕ್ತಿಯನ್ನು ವಿದೇಶಿಯ ಆಳ್ವಿಕೆ ವಿರುದ್ಧ ನಾಡಪ್ರೇಮವನ್ನು ಬಿತ್ತಿದ ಮೊದಲ ಮಹಿಳೆ ರಾಣಿ ಚನ್ನಮ್ಮ ಎಂದೇ ಹೇಳಬಹುದು. ಏಕೆಂದರೆ ರಾಣಿಯ ಮರಣಾನಂತರ ಅಲ್ಲಿನ ರಾಯಣ್ಣನೆಂಬುವನು ಬ್ರಿಟಿಷರ ವಿರುದ್ಧ ದಂಗೆ ಎದ್ದುದೇ ಸಾಕ್ಷಿಯಾಗಿದೆ.

ಸಂಗೊಳ್ಳಿ ಎಂಬ ಹಳ್ಳಿಯ **ತಳವಾರ ರಾಯಣ್ಣ**ನು ಕ್ರಿ.ಶ. ೧೮೨೯ ರಲ್ಲಿ ಎರಡನೆಯ ದಂಗೆಯನ್ನು ಸಂಘಟಿಸಿದನು. ಅವನು ಕಿತ್ತೂರಿನ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದನು. ಕಿತ್ತೂರಿನ ಸಿಂಹಾಸನಕ್ಕೆ ಒಬ್ಬ ದತ್ತಕ ಬಾಲಕನನ್ನು ತರುವ ವಿಚಾರವನ್ನು ಪುನಃ ಅವನು ಎತ್ತಿ ಹಿಡಿದನು. ಆರಂಭದಲ್ಲಿ ಬ್ರಿಟಿಷರು ಇದನ್ನು ಕಡೆಗಣಿಸಿದರು. **ಸುರಪುರದ** ನಾಯಕನ ಬೆಂಬಲ ಪಡೆದುಕೊಂಡ ಅವನು 'ಗೆರಿಲ್ಲಾ ಯುದ್ಧ ತಂತ್ರ'ವನ್ನು ಅನುಸರಿಸಿ ಸರ್ಕಾರಿ ಕಚೇರಿಗಳ ಮೇಲೆ ದಾಳಿ ಮಾಡಿದನು. ೧೮೩೦ ರ ವೇಳೆಗೆ ಎರಡು ಸಾವಿರಕ್ಕೇರಿದ ಆತನ ಸೈನ್ಯ ಬ್ರಿಟಿಷರಿಗೆ ತಲೆನೋವಾಗಿ ಪರಿಣಮಿಸಿತು. ಕೊನೆಗೆ ಬ್ರಿಟಿಷರು ರಾಯಣ್ಣನನ್ನು ಸೆರೆಹಿಡಿಯಲು ಪ್ರಯತ್ನಿಸಿ ತಂತ್ರ ರೂಪಿಸಿದರು. ಸಂಗೊಳ್ಳಿಯ **ಲಿಂಗನಗೌಡ ಲಕ್ಕಪ್ಪ**ನಂತಹ ಕೆಲವು ಜಮೀನ್ದಾರರು ಬ್ರಿಟಿಷರಿಂದ ಲಂಚ ಪಡೆದು ದುರುದ್ದೇಶದಿಂದ ರಾಯಣ್ಣನ ಶಿಬಿರವನ್ನು ಸೇರಿಕೊಂಡರು. ಒಂದು ದಿನ ಅವನನ್ನು ಹಿಡಿದು ಬ್ರಿಟಿಷರಿಗೆ ಒಪ್ಪಿಸಿದರು. ಕೊನೆಗೆ ಸಂಗೊಳ್ಳಿ ರಾಯಣ್ಣನನ್ನು ಆತನ ಸಹಚರರೊಂದಿಗೆ **ನಂದಗಡದಲ್ಲಿ** ಗಲ್ಲಿಗೇರಿಸಲಾಯಿತು. ಮುಂದೆ ಕಿತ್ತೂರಿನ ನಿಷ್ಠ ಸೇವಕ **ಗುರುಸಿದ್ದಪ್ಪ**, ೧೮೩೩ ರಲ್ಲಿ ಕಿತ್ತೂರಿನ **ಶಂಕ್ರಣ್ಣ**, ೧೮೩೬ ರಲ್ಲಿ **ನಾರಪ್ಪ ಗಜಪತಿ, ಸವಾಯಿಶೆಟ್ಟಿ,ರುದ್ರಪ್ಪ ಕೊಟಗಿ** ದಂಗೆ ಎದ್ದರಾದರೂ ಅವುಗಳನ್ನೆಲ್ಲಾ ಬ್ರಿಟಿಷರು ಹತ್ತಿಕ್ಕಿದರು. ಹೀಗೆ ಕಿತ್ತೂರು ಭಾಗದಲ್ಲಿ ನಡೆದ ಈ ಬಂಡಾಯದ ಶ್ರೇಣಿಯು ರಾಜ ಮನೆತನದ ಜನಪ್ರಿಯತೆಯನ್ನು ವ್ಯಕ್ತಪಡಿಸುತ್ತದೆ.

೨. ಕೊಡಗಿನ ಬಂಡಾಯ

ಕೊಡಗಿನಲ್ಲಿ ದಂಗೆಯು ಪ್ರಾರಂಭವಾಗಿದ್ದು ರಾಜ ಮನೆತನದ ಸದಸ್ಯರಿಂದ ಹಾಗೂ ಒಬ್ಬ ಜಂಗಮನಿಂದ. ಬ್ರಿಟಿಷರು ಕೊಡಗಿನ ರಾಜನ **ಚಿಕ್ಕವೀರರಾಜೇಂದ್ರ**ನನ್ನು ಪದಚ್ಯುತಿಗೊಳಿಸಿ ಕೊಡಗನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇದು ಕೆಲವು ವರ್ಗಗಳಲ್ಲಿ ಅಸಂತೋಷವನ್ನುಂಟುಮಾಡಿತು. **ಸ್ವಾಮಿ ಅಪರಾಂಪರ** ಎಂಬ ವೀರಶೈವ ಜಂಗಮನೊಬ್ಬನು ಕ್ರಿ.ಶ. ೧೮೩೩ ರಲ್ಲಿ ದಂಗೆ ಎದ್ದನು. ಅವನು ತಾನು ಪದಚ್ಯುತ ರಾಜವಂಶದವನೆಂದು ಹೇಳಿಕೊಳ್ಳುತ್ತಾ ಕೊಡಗಿನ ಸಿಂಹಾಸನಕ್ಕೆ ತಮ್ಮ ಹಕ್ಕು ಪ್ರತಿಪಾದಿಸಲು ಪ್ರಯತ್ನಿಸಿದನು. ಅವನನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು. ಅದೇ ಸಮಯದಲ್ಲಿ **ಕಲ್ಯಾಣಸ್ವಾಮಿ** ಎಂಬುವನು ತಾನು ರಾಜಮನೆತನದವನೆಂದು ಹೇಳಿಕೊಳ್ಳುತ್ತಾ ಬಂಡನ್ನು ಆರಂಭಿಸಿದನು. ಅವನನ್ನು ಕೂಡಾ ೧೮೩೭ ರಲ್ಲಿ ಬಂಧಿಸಲಾಯಿತು. ಹೀಗೆ ಎರಡನೇ ವ್ಯಕ್ತಿಯೂ ಸಹ ಬಂಡಾಯ ನಡೆಸುವಲ್ಲಿ ವಿಫಲನಾದನು. ಇದೇ ಸಮಯದಲ್ಲಿ **ಸುಳ್ಯದ ಅಮಲ್ದಾರ ರಾಮಪ್ಪಯ್ಯನು** ಈ ಬಂಡಾಯದ ವಿಚಾರಗಳನ್ನು **ಮಂಗಳೂರಿನ** ಜಿಲ್ಲಾಧಿಕಾರಿಗೆ ತಿಳಿಸಿದ್ದಾನೆಂದೂ ಮತ್ತು ಅನೇಕರ ಜಮೀನನ್ನು ಬಲತ್ಕಾರದಿಂದ ವಶಪಡಿಸಿಕೊಂಡಿದ್ದಾನೆಂಬ ಸುದ್ದಿ ಹರಡಿದಾಗ ರೊಚ್ಚಿಗೆದ್ದ ಜನತೆ ಅಮಲ್ದಾರನನ್ನು ಕೊಂದುಹಾಕಿದರು. ಮತ್ತೊಬ್ಬ **ಕಲ್ಯಾಣಸ್ವಾಮಿ, ಪುಟ್ಟಬಸಪ್ಪ, ಹುಲಿಕುಂದ ನಂಜಯ್ಯ, ಕುಡಿಯಾರರ ಚಟ್ಟಿ** ಮುಂತಾದವರು ಸುಳ್ಯದಲ್ಲಿ ಸೇರಿದರು. **ಬೆಳ್ಳಾರೆಯ** ಖಜಾನೆಯನ್ನು ವಶಪಡಿಸಿಕೊಂಡರು. ಮಲೆಯ ಕುಡಿಯರೂ ಅವರನ್ನು ಸೇರಿಕೊಂಡರು. ಜೈಲಿನಲ್ಲಿದ್ದ ಖೈದಿಗಳು ತಪ್ಪಿಸಿಕೊಂಡು ಸರ್ಕಾರಿ ಖಜಾನೆ ಲೂಟಿ ಮಾಡಿ ಅಧಿಕಾರಿಗಳ ಮನೆಗೆ ಬೆಂಕಿ ಹಚ್ಚಿದರು. ಆದರೆ ಬ್ರಿಟಿಷ್ ಅಧಿಕಾರಿ **ಲೀಹಾರ್ಡಿ** ಕೊಡವ ರೈತರಿಗೆ ದಿನಭತ್ಯೆ ಬಹುಮಾನ ನೀಡುವುದಾಗಿ ಘೋಷಿಸಿ ಬಂಡಾಯಗಾರರ ಜೊತೆಗೆ ಹೋರಾಡಿ ಅನೇಕರ ಶರಣಾಗತ ಪಡೆಯುವುದರಲ್ಲಿ ಯಶಸ್ವಿಯಾದನು. ಈ ಮಧ್ಯೆ ಕಲ್ಯಾಣಸ್ವಾಮಿಯ ವೇಷದಲ್ಲಿದ್ದ ಪುಟ್ಟಬಸಪ್ಪ ರಾಜನ ವೇಷವನ್ನು ತ್ಯಜಿಸಿ ಜಂಗಮನ ವೇಷ ಧರಿಸಿ ತಲೆಮರೆಸಿಕೊಂಡನು. ಆದರೆ ೧೮೩೭ ರ ಮೇ ತಿಂಗಳಿನಲ್ಲಿ ಕೊಡಗಿನ ಅಧಿಕಾರಿ **ಮಾರಯ್ಯನು** ಅವನನ್ನು ಬಂಧಿಸಿ ಮಡಿಕೇರಿಗೆ ತಂದನು. ಅವನನ್ನು ಮಂಗಳೂರಿನಲ್ಲಿ ಗಲ್ಲಿಗೇರಿಸಲಾಯಿತು. ಬಂಡುಕೋರರೊಂದಿಗೆ ಕೈ ಜೋಡಿಸಿದ ಕೊಡಗಿನ **ಗುಡ್ಡೆಮನೆ ಅಪ್ಪಯ್ಯನನ್ನು** ಮಡಿಕೇರಿಯಲ್ಲಿ ಗಲ್ಲಿಗೇರಿಸಲಾಯಿತು. ಬಂಡಾಯ ಹತ್ತಿಕ್ಕಲು ನೆರವಾದ ಕೊಡವ ಮುಖಂಡರಿಗೆ ಪದಕ ನೀಡಿ ಗೌರವಿಸಲಾಯಿತು. ಈ ದಂಗೆಗಳು ಕೊಡಗಿನ ಆಡಳಿತವನ್ನು ಬ್ರಿಟಿಷ್ ಸರ್ಕಾರವು ನೇರವಾಗಿ ನಿರ್ವಹಿಸಲು ಕಾರಣವಾಯಿತು.

ಕರ್ನಾಟಕದ ಇತರ ಭಾಗಗಳಲ್ಲಿ ಅಷ್ಟೊಂದು ಪ್ರಸಿದ್ಧವಾಗದೆ ಹೋದ ಇನ್ನೂ ಅನೇಕ ದಂಗೆಗಳು ಬ್ರಿಟಿಷರ ಆಳ್ವಿಕೆಯ ವಿರುದ್ಧ ನಡೆದವು. ಆದರೆ ಅವುಗಳನ್ನೆಲ್ಲ ಬ್ರಿಟಿಷರು ಹತ್ತಿಕ್ಕಿದರು. ಆದರೆ ೧೮೫೭ ರಲ್ಲಿ ಭಾರತದಲ್ಲಿ ಸಂಭವಿಸಿದ ರಾಷ್ಟ್ರವ್ಯಾಪಿ ಬಂಡಾಯವು ಕರ್ನಾಟಕದಲ್ಲೂ ಕೂಡಾ ಪ್ರತಿಧ್ವನಿಸಿತು ಅವುಗಳನ್ನೀಗ ಪರಿಶೀಲಿಸೋಣ.

ಕ್ರಿ.ಶ. ೧೮೫೭-೫೮ ರ ಕರ್ನಾಟಕದ ಬಂಡಾಯಗಳು

ಬ್ರಿಟಿಷರು ದೇಶೀಯ ಅರಸರನ್ನು ಸೋಲಿಸಿ ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುವ ಹಂತದಲ್ಲಿದ್ದಾಗ ಅಸಮಾಧಾನಗೊಂಡಿದ್ದ ಹಲವಾರು ಸೈನಿಕರು ಬ್ರಿಟಿಷ್ ಸಾಮ್ರಾಜ್ಯಶಕ್ತಿಯನ್ನು ಕೆಲಕಾಲ ಕಳವಳಕ್ಕೀಡು ಮಾಡಿದರು. ೧೮೫೭ ರಲ್ಲಿ ಸಂಭವಿಸಿದ ಈ ಕ್ರಾಂತಿಯ ಪರಿಣಾಮ ಕರ್ನಾಟಕದಲ್ಲೂ ವ್ಯಕ್ತವಾಯಿತು. ಇಲ್ಲಿ ರೈತರಾಗಲೀ, ಯೋಧರಾಗಲೀ, ಅದರ ನಾಯಕತ್ವ ವಹಿಸಿರಲಿಲ್ಲ. ಸಮಾಜದ ಮೇಲ್‌ಸ್ತರದಲ್ಲಿದ್ದ ಜಮೀನುದಾರರು, ರಾಜರು ಮುಂಚೂಣಿಯಲ್ಲಿದ್ದರು. ಕ್ರಿ.ಶ. ೧೮೫೭-೫೮ ರಲ್ಲಿ **ಸುರಪುರ, ನರಗುಂದದ ರಾಜರು, ಹಲಗಲಿಯ ಬೇಡರು, ಧಾರವಾಡದ ದೇಸಾಯಿಗಳು, ಮುಂಡರಗಿಯ ಭೀಮರಾಯ** ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಇಂತಹ ದಂಗೆಯ ಮೊದಲ ದನಿಗಳು ಮುಧೋಳ ಸಮೀಪದ **ಹಲಗಲಿಯಲ್ಲಿ** ಕಾಣಿಸಿಕೊಂಡವು.

ಹಲಗಲಿಯ ಬೇಡರು

ಕ್ರಿ.ಶ. ೧೮೫೭ ರಲ್ಲಿ ಬಂಡಾಯದ ಮಾರ್ದನಿ ಮೊಳಗುತ್ತಿರುವ ಹಂತದಲ್ಲೇ ಬ್ರಿಟಿಷ್ ಸರ್ಕಾರ ೧೮೫೭ **ರ ಸೆಪ್ಟಂಬರ್** ೧೧ ರಂದು **ನಿಶ್ಯಸ್ತ್ರೀಕರಣ ಕಾಯ್ದೆ** ಜಾರಿಗೆ ತಂದಿತು. ಅದರ ಪ್ರಕಾರ "ಈ ಮೊದಲೇ ಆಯುಧ ಹೊಂದಿದವರು ಸರ್ಕಾರಕ್ಕೆ ಒಪ್ಪಿಸಬೇಕು ಮತ್ತು ಆಯುಧಗಳನ್ನು ಬಯಸುವವರು ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕಾಗಿತ್ತು". ಆದರೆ ಬ್ರಿಟಿಷ್ ಪ್ರಜೆಗೆ ಸುಲಭವಾಗಿ ಲೈಸೆನ್ಸ್ ಸಿಗುತ್ತಿತ್ತು. ಭಾರತೀಯರು ಅದನ್ನು ಪಡೆಯುವುದು ಕಷ್ಟವಾಗಿತ್ತು. ಬೇಡರು ತಮ್ಮ ಕುಲ ಸಂಪ್ರದಾಯಿಕ ನಿಯಮಗಳ ಪ್ರಕಾರ ಶಸ್ತ್ರಾಸ್ತ್ರಗಳನ್ನು ಹೊಂದುವುದು ಅನಿವಾರ್ಯವಾಗಿತ್ತು. ಇದರಿಂದ ಹೊಸ ಕಾಯ್ದೆ ಪಾಲಿಸಲು ಅವರು ನಿರಾಕರಿಸಿದರು. ಈ ಕಾಯ್ದೆ ಜಾರಿಗೆ ತರುವ ಜವಾಬ್ದಾರಿಯನ್ನು **ಮುಧೋಳ ಸಂಸ್ಥಾನದ** ಕಾರಭಾರಿಯಾದ **ಕೃಷ್ಣರಾಯರಿಗೆ** ಸರ್ಕಾರ ನೀಡಿತು. ಇವನು ಸಂಧಾನ ನಡೆಸಿದರೂ ಅದು ವಿಫಲವಾಯಿತು. ಇದನ್ನು ಕೃಷ್ಣರಾಯನು ಬ್ರಿಟಿಷರ ಅಧಿಕಾರಿ **ಮಾಲ್ಕಾಮನಿಗೆ** ತಿಳಿಸಿದನು. ಅವನು ಬೇಡರನ್ನು ಶಿಕ್ಷಿಸಲು **ಸೆಟನ್‌ಕರ್‌ನ** ನೇತೃತ್ವದಲ್ಲಿ ಅಶ್ವದಳವನ್ನು ಕಳುಹಿಸಿದನು. ಈ ದಾಳಿಯನ್ನು ಎದುರಿಸಲು ಬೇಡರು ಹಲಗಲಿಯಲ್ಲಿ ಜಮಾಯಿಸಿದರು. ಬ್ರಿಟಿಷರು ಬೇಡರ ಮನೆಗಳಿಗೆ ಬೆಂಕಿ ಹಚ್ಚಿ ಅನೇಕರನ್ನು ಕೊಂದರು. ಅವರಲ್ಲಿ ಭಯ ಹುಟ್ಟಿಸಲು ೧೮೫೭ **ರ ಡಿಸೆಂಬರ್** ೧೧ ಮತ್ತು ೧೪ ರಂದು ೧೯ ಬೇಡರನ್ನು ಮುಧೋಳದಲ್ಲಿ ಗಲ್ಲಿಗೇರಿಸಲಾಯಿತು. ಬೇಡರ ನಾಯಕನಾದ **ನಿಂಬಾಳಕರನು** ಯುದ್ಧದಲ್ಲಿ ಮರಣ ಹೊಂದಿದನು. ಸ್ವತಂತ್ರಪ್ರಿಯರೂ ಆಯುಧಗಳ ಒಡನಾಡಿಗಳೂ ಆದ ಬೇಡರನ್ನು ಬ್ರಿಟಿಷರು ಅಮಾನವೀಯವಾಗಿ ಹತ್ತಿಕ್ಕಿದರು.

ಸುರಪುರದ ಬಂಡಾಯ

ಗುಲ್ಬರ್ಗಾ ಜಿಲ್ಲೆಯ ಸುರಪುರವೂ ಕೂಡ ಬೇಡರ ಸಂಸ್ಥಾನವಾಗಿತ್ತು. ವಿಜಯನಗರ ನಗರೋತ್ತರ ಕಾಲದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡಿತ್ತು. ಕ್ರಿ.ಶ. ೧೮೪೧ ರಲ್ಲಿ ಸುರಪುರದಲ್ಲಿ **ವೆಂಕಟಪ್ಪನಾಯಕ**ನೆಂಬುವನು ಅಧಿಕಾರಕ್ಕೆ ಬಂದನು. ಅವನು ಇನ್ನು ಬಾಲಕನಾಗಿದ್ದುದರಿಂದ ಬ್ರಿಟಿಷರು **ಮೆಡೋಸ್ ಟೇಲರ್**‌ನಿಗೆ ಅವನಿಗೆ ಶಿಕ್ಷಣ ನೀಡುವ ಜವಾಬ್ದಾರಿ ವಹಿಸಿದರು. ವಯಸ್ಸಿಗೆ ಬಂದ ವೆಂಕಟಪ್ಪ ಕ್ರಿ.ಶ. ೧೮೫೩ ರಲ್ಲಿ ಆಡಳಿತ ಸೂತ್ರವನ್ನು ವಹಿಸಿಕೊಂಡನು. ಆಗ **ಲಾರ್ಡ್ ಡಾಲ್‌ಹೌಸಿಯು** ವೆಂಕಟಪ್ಪನಾಯಕನಿಗೆ ವಾರ್ಷಿಕ ೨೦,೦೦೦ ರೂ.ಗಳನ್ನು ಬ್ರಿಟಿಷ್ ಸರ್ಕಾರಕ್ಕೂ ನೀಡಬೇಕೆಂದು ಸೂಚನೆ ನೀಡಿದನು. ಅದುವರೆಗೂ ನಿಜಾಮನ ನಿಯಂತ್ರಣದಲ್ಲಿದ್ದ ಸುರಪುರದಲ್ಲಿ ಅವರ ದಬ್ಬಾಳಿಕೆಯ ಆಡಳಿತದಿಂದಾಗಿ ಮತ್ತು ಬ್ರಿಟಿಷರ ನೀತಿಯಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಇಂತಹ ಸಮಯದಲ್ಲಿ ರಾಜ ವೆಂಕಟಪ್ಪನಾಯಕನು ಡಾಲ್‌ಹೌಸಿಯ ಸಲಹೆಯನ್ನು ಒಪ್ಪಲಿಲ್ಲ. ಆರ್ಥಿಕ ದುಃಸ್ಥಿತಿಯಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡವು. ತನ್ನ ರಾಜ್ಯದ ಶೋಚನೀಯ ಸ್ಥಿತಿಗೆ ನಿಜಾಮ ಮತ್ತು ಬ್ರಿಟಿಷರು ಕಾರಣವೆಂದು ಸಂಶಯಿಸಿದ ವೆಂಕಟಪ್ಪನಾಯಕನು **ಅರಬ್** ಮತ್ತು **ರೋಹಿಲ್ಲ**ರನ್ನು ಸೈನ್ಯದಲ್ಲಿ ನೇಮಕ ಮಾಡಿಕೊಂಡು ಬ್ರಿಟಿಷರ ವಿರುದ್ಧ ಬಂಡೇಳಲು ನಿರ್ಧರಿಸಿದನು. ಈ ಪರಿಸ್ಥಿತಿಯ ಲಾಭ ಪಡೆದುಕೊಳ್ಳಲು ಬೆಳಗಾವಿಯ ಬ್ರಿಟಿಷ್ ಸೈನ್ಯದಲ್ಲಿದ್ದ **ಮಹಿಪಾಲ ಸಿಂಗ**ನು ದಂಗೆ ಎದ್ದು ಸೆರೆಸಿಕ್ಕಿ ತಾನು ಸುರಪುರ ನಾಯಕನಿಂದ ನಿಯುಕ್ತನಾದವನೆಂದು ತಿಳಿಸಿದನು. ಇದೇ ವೇಳೆಗೆ ಸುರಪುರದಲ್ಲಿ ಸರಣಿ ದರೋಡೆಗಳು ಆರಂಭವಾದವು. ಇದಕ್ಕೆ ವೆಂಕಟಪ್ಪನೇ ಕಾರಣ ಎಂದು ಬ್ರಿಟಿಷರು ಸಂಶಯಿಸಿದರು. ಸಹನೆ ಕಳೆದುಕೊಂಡಿದ್ದ ವೆಂಕಟಪ್ಪನಾಯಕನು **ನರಗುಂದದ ಬಾಬಾಸಾಹೇಬ, ಮುಂಡರಗಿಯ ಭೀಮರಾಯ**ರನ್ನು ಸೇರಿಸಿಕೊಂಡು ಬ್ರಿಟಿಷರ ವಿರುದ್ಧ ದಂಗೆ ಎದ್ದನು. ಬ್ರಿಟಿಷರ ಸೇನೆ ಆಗಮಿಸಿ ಸುರಪುರದ ಕೋಟೆಯನ್ನು ವಶಪಡಿಸಿಕೊಂಡಿದ್ದು ವೆಂಕಟಪ್ಪನನ್ನು ಬಂಧಿಸಲಾಯಿತು. ಅವನನ್ನು ವಿಚಾರಣೆಗಾಗಿ **ಸಿಕಂದರಾಬಾದಿ**ಗೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಅವನು ಆತ್ಮಹತ್ಯೆ ಮಾಡಿಕೊಂಡನು. ಇದರಿಂದ ೧೮೬೧ ರ **ಮಾರ್ಚ್** ೪ ರಂದು ಸುರಪುರ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು.

ನರಗುಂದದ ಬಂಡಾಯ

ಗದಗ ಜಿಲ್ಲೆಯಲ್ಲಿರುವ ನರಗುಂದ ೧೯ನೆಯ ಶತಮಾನದಲ್ಲಿ ಮರಾಠ ಪೇಶ್ವೆಗಳ ಅಧೀನದಲ್ಲಿತ್ತು. **ಭಾಸ್ಕರರಾವುಭಾವೆ** (ನರಗುಂದ ಬಾಬಾಸಾಹೇಬ) ಇದರ ಆಡಳಿತಗಾರನಾಗಿದ್ದನು. ಕ್ರಿ.ಶ. ೧೮೪೨ ರಲ್ಲಿ ಅಧಿಕಾರಕ್ಕೆ ಬಂದ ಇವನಿಗೆ ಸಂತಾನವಿಲ್ಲದೆ ಇದ್ದುದರಿಂದ ದತ್ತು ತೆಗೆದುಕೊಳ್ಳಲು ಬ್ರಿಟಿಷರ ಅನುಮತಿ ಕೋರಿದರೂ ಅವನಿಗೆ ಅನುಮತಿ

ದೊರೆಯಲಿಲ್ಲ. ಜೊತೆಗೆ ನಿಶಸ್ತ್ರೀಕರಣದ ಶಾಸನದ ಪ್ರಕಾರ ಬಾಬಾಸಾಹೇಬನು ಬ್ರಿಟಿಷರಿಗೆ ತನ್ನ ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕೆಂದು ಆಜ್ಞೆಯಾಯಿತು. ಇದಲ್ಲದೆ 'ಇನಾಂ' ಭೂಮಿಯನ್ನು ಹೊಂದಿದವರು ಸಹ ಹೊಸ ನೀತಿಯಿಂದ ಭೂಮಿ ಕಳೆದುಕೊಂಡರು. ಇದರಿಂದ ಅವನು ಬ್ರಿಟಿಷರ ವಿರುದ್ಧ ಬಂಡಾಯವೇಳಲು **ಮುಂಡರಗಿ ಭೀಮರಾಯ, ಹೆಮ್ಮಗಿ** ...**ಚನಗೌಡ, ಕೋವನಕೊಪ್ಪ** ಹಾಗೂ **ಸೊರಟೂರು** ದೇಸಾಯಿಗಳ ಸಹಾಯ ಕೇಳಿದನು. ಅವರ ಸಹಕಾರದ ಭರವಸೆ ದೊರೆತ ಮೇಲೆ ದಂಗೆ ಎದ್ದನು. ಇವನನ್ನು ಅಡಗಿಸಲು ಬ್ರಿಟಿಷರ ಸೇನಾನಾಯಕ **ಮ್ಯಾನ್ಸನ್‌ನನ್ನು ೧೮೫೮** ರ ಮೇ **೨೯** ರಂದು **ರಾಮದುರ್ಗ**ದ ಬಳಿಯ ಸೊರೆಬಾನಕ್ಕೆ ಬಂದು ವಿಶ್ರಾಂತಿ ಪಡೆಯುತ್ತಿದ್ದನು. ಇದನ್ನು ತಿಳಿದ ಬಾಬಾಸಾಹೇಬನು ಅವನ ಮೇಲೆ ಆಕ್ರಮಣ ಮಾಡಿ ಕೊಂದು ಹಾಕಿದನು. ಇದರಿಂದ ಕುಪಿತರಾದ ಬ್ರಿಟಿಷರು ನರಗುಂದದ ಮೇಲೆ ಆಕ್ರಮಣ ಮಾಡಿದರು. ಬಾಬಾಸಾಹೇಬನು ಸೋತು ತೋರಗಲ್ಲು ಕೋಟೆಗೆ ಹೋಗಿ ಅಡಗಿಕೊಂಡನು. ನಂತರ ಅವನನ್ನು ಅಲ್ಲಿ ಸೆರೆಹಿಡಿದು ೧೮೫೮ ರ ಜೂನ್‌ನಲ್ಲಿ ಬೆಳಗಾವಿಯಲ್ಲಿ ಗಲ್ಲಿಗೇರಿಸಲಾಯಿತು.

ಮುಂಡರಗಿ ಭೀಮರಾಯನ ಬಂಡಾಯ

ಕ್ರಿ.ಶ. ೧೮೫೭ ರ ಹೋರಾಟದಲ್ಲಿ ಭಾಗವಹಿಸಿದ್ದ ವೀರ ಯೋಧ ಮುಂಡರಗಿ ಭೀಮರಾಯ. ಈತನ ತಾತ **ಡಂಬಳ**ದ ದೇಸಾಯಿಯ ಮಂತ್ರಿಯಾಗಿದ್ದನು. ತಂದೆ ಪೇಶ್ವೆಯ ಕೈಕೆಳಗೆ ಆಡಳಿತಗಾರನಾಗಿದ್ದನು. ಭೀಮರಾಯನು ಆರಂಭದಲ್ಲಿ **ಹರಪನಹಳ್ಳಿ** ಮತ್ತು ಬಳ್ಳಾರಿಯಲ್ಲಿ ಮಾಮಲೆದಾರನಾಗಿದ್ದನು. ಆಗ ಬ್ರಿಟಿಷರಿಂದಾಗುತ್ತಿದ್ದ ಶೋಷಣೆಯನ್ನು ಖಂಡಿಸಿದಾಗ ಅವನನ್ನು ಕೆಲಸದಿಂದ ತೆಗೆದುಹಾಕಲಾಯಿತು. ಅನೇಕ ನೆರೆಹೊರೆಯ ದೇಸಾಯಿಗಳ ಸಹಕಾರದಿಂದ ಅವನು ಬ್ರಿಟಿಷರ ವಿರುದ್ಧ ಬಂಡಾಯ ಎದ್ದನಲ್ಲದೆ ಹೆಮ್ಮಗಿ ದೇಸಾಯಿಯ ಸಹಾಯ ಪಡೆದು ಗದಗನ ಖಜಾನೆಯನ್ನು ಲೂಟಿ ಮಾಡಿದನು. ಕೊಪ್ಪಳದ ಕೋಟೆ ಇವನ ವಶದಲ್ಲಿತ್ತು. ಆದರೆ ಮೇ ೧೮೫೮ ರಲ್ಲಿ ಈ ಕೋಟೆಯನ್ನು ಬ್ರಿಟಿಷರು ಗೆದ್ದುಕೊಂಡರು. ಭೀಮರಾಯನನ್ನು ಹಿಡಿದು ಕೊಟ್ಟವರಿಗೆ ಬ್ರಿಟಿಷರು ೧೦ ಸಾವಿರ ರೂ.ಗಳ ಬಹುಮಾನವನ್ನು ಘೋಷಿಸಿದರು. **ಕೆಂಚನಗೌಡ**ರ ಜೊತೆಗಿದ್ದ ಭೀಮರಾಯನನ್ನು ಬ್ರಿಟಿಷ್ ಸೇನೆ **ಕೊಪ್ಪಳ**ದಲ್ಲಿ ಸುತ್ತುವರಿಯಿತು. ಅಲ್ಲಿ ನಡೆದ ಘರ್ಷಣೆಯಲ್ಲಿ ೧೮೫೮ ರ ಜೂನ್ ೧ ರಂದು ಭೀಮರಾಯ ಮತ್ತು ಕೆಂಚನಗೌಡರು ಹತರಾದರು. ಇವರ ಸಾವಿನಿಂದ ಕೊಪ್ಪಳ ಮತ್ತು ನರಗುಂದದ ಬಂಡಾಯವು ಹಠಾತ್ತನೆ ತಣ್ಣಗಾಯಿತು.

ಹೀಗೆ ಕ್ರಿ.ಶ. ೧೭೯೯ ರಿಂದ ೧೮೫೭ ರವರೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಲವಾರು ನಾಯಕರು ಬ್ರಿಟಿಷರಿಗೆದುರಾಗಿ ಹೋರಾಟ ನಡೆಸಿದರು. ಈ ಹೋರಾಟಗಳು ಸ್ಥಳೀಯ ಸ್ವರೂಪದ್ದಾಗಿದ್ದವು. ಇವು ಬ್ರಿಟಿಷರಿಗೆ ತುಂಬಾ ಸಹಕಾರಿಯಾಗಿ ಪರಿಣಮಿಸಿದವು.

ಇದರಿಂದ ಅವರಿಗೆ ಅನೇಕ ಆಡಳಿತ ವಿಷಯಕ್ಕೂ ಹಾಗೂ ಯುದ್ಧತಂತ್ರಗಳನ್ನು ಕುರಿತ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಯಿತು. ಈ ರೀತಿ ಅನೇಕ ವೀರರು ತಮ್ಮ ಕಲಿತನದಿಂದ ಬ್ರಿಟಿಷರ ವಿರುದ್ಧ ಹೋರಾಡಿದುದು ೨೦ನೆಯ ಶತಮಾನದ ಸ್ವಾತಂತ್ರ್ಯ ಯೋಧರಿಗೆ ಸ್ಫೂರ್ತಿಯ ನೆಲೆಯಾಗಿ ಪರಿಣಮಿಸಿತು.

ರಾಷ್ಟ್ರೀಯ ಕಾಂಗ್ರೆಸಿನ ಹೋರಾಟದಲ್ಲಿ ಕರ್ನಾಟಕದ ಪಾತ್ರ

ಗಾಂಧಿಪೂರ್ವ ಯುಗ

ಕ್ರಿ.ಶ. ೧೭೯೯ ರಿಂದ ೧೮೫೭ ರವರೆಗೆ ಕರ್ನಾಟಕದ ವಿವಿಧ ಕಡೆಗಳಲ್ಲಿ ಶಸ್ತ್ರಸಜ್ಜಿತ ಯೋಧರು ಬ್ರಿಟಿಷರ ದುರಾಡಳಿತದ ವಿರುದ್ಧ ಸೆಣಸಿ ವಿಫಲರಾದರೂ ಕೂಡ ಭವಿಷ್ಯದಲ್ಲಿ ನಡೆದ ಹೋರಾಟಕ್ಕೆ ಸ್ಫೂತಿರ್ಯ ಸೆಲೆಯಾದರು. ಕ್ರಿ.ಶ. ೧೮೫೭ ರ ನಂತರದ ಸುಮಾರು ಮೂರು ದಶಕಗಳ ಕರ್ನಾಟಕದಲ್ಲಿ ಎಲ್ಲೂ ಹೋರಾಟದ ಚಿನ್ಹೆಗಳು ಕಂಡುಬರಲಿಲ್ಲ. ಆದರೆ ಈ ಕಾಲವು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತಾದ ಅಧ್ಯಯನ, ಸುಪ್ತವಾಗಿದ್ದ ರಾಷ್ಟ್ರೀಯತೆಯ ಜಾಗೃತಿಗೆ ಪೋಷಕವಾಯಿತು. ಇದೇ ಸಂದರ್ಭದಲ್ಲಿ ಭಾರತದ ರಾಜಕೀಯ ಕ್ಷೇತ್ರದಲ್ಲೂ ಹಲವಾರು ಬದಲಾವಣೆಗಳುಂಟಾಗಿ ಭಾರತೀಯರಲ್ಲಿ ಬ್ರಿಟಿಷರ ಬಗ್ಗೆ ಸದಾಭಿಪ್ರಾಯವನ್ನು ಮೂಡಿಸುವ ಸಲುವಾಗಿ ಒಂದು ಹೊಸ ಸಂಘಟನೆ ಯೊಂದನ್ನು ಹುಟ್ಟುಹಾಕಲು ಅಂದಿನ ವೈಸರಾಯಿ ಆಗಿದ್ದ **ಲಾರ್ಡ್ ಡಫರಿನ್** ಸರ್ ಎ.ಓ. **ಹ್ಯೂಮ್‌**ನಿಗೆ ಆದೇಶಿಸಿದನು. ಬ್ರಿಟಿಷರ ಬಗ್ಗೆ ಭಾರತೀಯರಿಗಿದ್ದ ಅಸಮಾಧಾನವನ್ನು ಗಮನಿಸಿದ ಹ್ಯೂಮ್ ಅದು ಸಂಚಯನಗೊಳ್ಳದಂತೆ ತಡೆಯುವ ಸಲುವಾಗಿ ಕ್ರಿ.ಶ. ೧೮೮೫ ರಲ್ಲಿ ವಿವಿಧ ನಾಯಕರ ಬೆಂಬಲದೊಂದಿಗೆ **ಭಾರತ ರಾಷ್ಟ್ರೀಯ ಕಾಂಗ್ರೆಸ್‌**ನ್ನು ಸ್ಥಾಪಿಸಿದನು. ಅದರ ಮೊದಲ ಅಧಿವೇಶನ **ಬಾಂಬೆ**ಯಲ್ಲಿ ಜರುಗಿದಾಗ **ಬೆಳಗಾವಿಯ ಭಾಟೆ** ಹಾಗೂ **ಬಳ್ಳಾರಿಯ ವೆಂಕಟರಾವ್** ಕರ್ನಾಟಕದ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಅವರು ಎ.ಓ. ಹ್ಯೂಮ್‌ನನ್ನು ಕರ್ನಾಟಕಕ್ಕೆ ಭೇಟಿ ನೀಡುವಂತೆ ಆಹ್ವಾನಿಸಿದಾಗ ಅವನು ಕ್ರಿ.ಶ. ೧೮೯೩ ರಲ್ಲಿ ಬೆಳಗಾವಿ ಮತ್ತು ಧಾರವಾಡಗಳಿಗೆ ಭೇಟಿ ನೀಡಿ ಕಾಂಗ್ರೆಸ್ಸಿನ ಧ್ಯೇಯೋದ್ದೇಶ ಗಳನ್ನು ವಿವರಿಸಿದನು. ಕ್ರಿ.ಶ. ೧೮೯೫ ರಲ್ಲಿ ಮುಂಬಯಿ ಪ್ರಾಂತ್ಯದ ಮೊದಲ ರಾಜಕೀಯ ಸಮ್ಮೇಳನ **ಬೆಳಗಾವಿ**ಯಲ್ಲಿ ಜರುಗಿತು. ಉತ್ತರ ಕರ್ನಾಟಕದ ಬಹುಭಾಗ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದುದರಿಂದ ಮುಂಬೈ ಮುಖಂಡರ ಪ್ರಭಾವ ಈ ಪ್ರದೇಶದ ಮೇಲೆ ಅಧಿಕವಾಗಿತ್ತು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಹುರುಪನ್ನು ಮೂಡಿಸಿದ, 'ಆಧುನಿಕ ರಾಷ್ಟ್ರೀಯತೆಯ ನಿಜವಾದ ಹರಿಕಾರ'ರೆಂದೇ ಹೆಸರಾದ **ಲೋಕಮಾನ್ಯ ತಿಲಕರು** ಉತ್ತರ ಕರ್ನಾಟಕಾದ್ಯಂತ ಸುತ್ತಾಡಿ ಸ್ವದೇಶಿ ಮತ್ತು ಸ್ವರಾಜ್ಯದ ಕಲ್ಪನೆಯನ್ನು ಪ್ರಚಾರ ಮಾಡಿದರು. ೧೯೦೩ ರಲ್ಲಿ ಮುಂಬೈ ಪ್ರಾಂತ್ಯದ ಎರಡನೆಯ ರಾಜಕೀಯ ಸಮ್ಮೇಳನವು **ಧಾರವಾಡ**ದಲ್ಲಿ ಸೇರಿದಾಗ ತಿಲಕ್ ಮತ್ತು **ಫಿರೋಜ್‌ಶಾ ಮೆಹ್ತಾ** ಆಗಮಿಸಿದ್ದರು. ತಿಲಕರು

ಮತ್ತೊಮ್ಮೆ ಉತ್ತರ ಕರ್ನಾಟಕದ ಪ್ರವಾಸ ಮಾಡಿ ಜನತೆಯ ಮನಸ್ಸನ್ನು ಹೋರಾಟದತ್ತ ತಿರುಗಿಸಿದರು. ಬಂಗಾಳದ ವಿಭಜನೆಯ (೧೯೦೫) ಅಶಾಂತಿಯು ಕರ್ನಾಟಕದಲ್ಲಿಯೂ ಪರಿಣಾಮ ಬೀರಿತು. **ಧಾರವಾಡ, ಬೆಳಗಾವಿ, ಗದಗ, ಬಾಗಲಕೋಟೆ, ಕಿತ್ತೂರು** ಮುಂತಾದ ಕಡೆ ಸಾರ್ವಜನಿಕ ಸಭೆಗಳು ನಡೆದವು. ೧೯೦೭ ರಲ್ಲಿ ಬೆಳಗಾವಿಯಲ್ಲಿ ಮದ್ಯದಂಗಡಿಗಳ ವಿರುದ್ಧ ಮತ ಪ್ರದರ್ಶಿಸಿ **ಗೋವಿಂದರಾವ್ ಯಾಳಗಿ** ಹಾಗೂ ೨೦ ಕ್ಕಿಂತ ಹೆಚ್ಚು ಜನ ಸೆರೆಯಾಳಾದರು. ಬೆಳಗಾವಿಯಲ್ಲಿ **ರಾಷ್ಟ್ರೀಯ ಶಾಲೆಯನ್ನು ಗಂಗಾಧರರಾವ್ ದೇಶಪಾಂಡೆ** ಆರಂಭಿಸಿದರು. ಧಾರವಾಡ, ವಿಜಾಪುರಗಳಲ್ಲಿಯೂ ಆರಂಭವಾದ ಈ ಶಾಲೆಗಳು ೧೯೧೦ ರವರೆಗೂ ಅಸ್ತಿತ್ವದಲ್ಲಿದ್ದವು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ೧೯೦೭ ರಲ್ಲಿ **ಸೂರತ್**ನಲ್ಲಿ ಜರುಗಿತು. ಆಗ ಆ ಅಧಿವೇಶನಕ್ಕೆ ಕರ್ನಾಟಕದ **ಆಲೂರ ವೆಂಕಟರಾವ್**, **ಅಣ್ಣಾಚಾರ್ಯ ಹೊಸಕೇರಿ**, **ಶ್ರೀನಿವಾಸರಾವ್ ಕೌಜಲಗಿ**, **ಯಾಳಗಿ** ಹಾಗೂ **ಗಂಗಾಧರರಾವ್ ದೇಶಪಾಂಡೆ** ಮುಂತಾದ ಧುರೀಣರು ಹೋಗಿದ್ದರು. ಆ ಸಮ್ಮೇಳನದಲ್ಲಿ ಕಾಂಗ್ರೆಸ್ ಪಕ್ಷದ ಭಿನ್ನಮತ ಬುಗಿಲೆದ್ದು ಕಾಂಗ್ರೆಸ್ ಇಬ್ಭಾಗಗೊಂಡಿತು. ಕರ್ನಾಟಕದ ನಾಯಕರು ತಿಲಕ್ ಮತ್ತು ಇನ್ನಿತರ ಉಗ್ರಗಾಮಿಗಳ ಪಕ್ಷವನ್ನು ಬೆಂಬಲಿಸಿದರು. ೧೯೦೭ ರಲ್ಲಿ **ಮ್ಯಾಝಿನಿ ಕ್ಲಬ್** ಎಂಬ ಕ್ರಾಂತಿಕಾರಕ ರಹಸ್ಯ ಸಂಸ್ಥೆಯೊಂದನ್ನು **ಗೋವಿಂದರಾವ್ ಯಾಳಗಿ** ಮತ್ತು **ಹನುಮಂತರಾವ್ ದೇಶಪಾಂಡೆ** ೧೯೦೭ ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿಸಿದರು. ಎನ್.ಎಸ್. **ಹರ್ಡೀಕರ್**ರವರು ೧೯೦೬ ರಲ್ಲಿ **ಆರ್ಯಬಾಲಸಭಾ** ಎಂಬ ಸಂಸ್ಥೆಯನ್ನು **ಹುಬ್ಬಳ್ಳಿ**ಯಲ್ಲಿ ಸ್ಥಾಪಿಸಿದರು.

ಮೈಸೂರಿನಿಂದ **ಕರ್ನಾಟಕ ಪ್ರಕಾಶಿಕಾ** (೧೮೬೫) ಮತ್ತು **ವೃತ್ತಾಂತ ಚಿಂತಾಮಣಿ**, ಧಾರವಾಡದಿಂದ **ರಾಜಹಂಸ** (೧೮೮೧) ಹಾಗೂ **ಕರ್ನಾಟಕ ವೃತ್ತ** (೧೮೯೦), ಮಂಗಳೂರಿನಿಂದ **ಸುವಾಸಿನಿ** (೧೯೦೧), ಹಾಗೂ **ಸ್ವದೇಶಾಭಿಮಾನಿ** (೧೯೦೭) ಯಂಥ ಕನ್ನಡ ವೃತ್ತಪತ್ರಿಕೆಗಳು ತಿಲಕರ **ಕೇಸರಿ** ಮತ್ತು **ಮರಾಠ** ಪತ್ರಿಕೆಗಳು ರಾಷ್ಟ್ರೀಯತೆಯ ಭಾವನೆಗಳನ್ನು ಕರ್ನಾಟಕದಲ್ಲಿ ಮೂಡಿಸಿದವು.

ಮುಂಬೈ ರಾಜ್ಯದ ರಾಜಕೀಯ ಸಮ್ಮೇಳನ ೧೯೧೬ ರಲ್ಲಿ **ಬೆಳಗಾಂ**ನಲ್ಲೂ, ೧೯೧೮ ರಲ್ಲಿ **ಬಿಜಾಪುರ**ದಲ್ಲೂ ನಡೆದಾಗ **ಗಾಂಧೀಜಿ**ಯವರು ಭಾಗವಹಿಸಿದ್ದರು. ಅವರು ೧೯೨೦ ರಲ್ಲಿ **ಮಂಗಳೂರು** ಮತ್ತು **ಬೆಂಗಳೂರಿ**ಗೆ ಭೇಟಿ ನೀಡಿದರು. ಇವರ ಆಗಮನದಿಂದ ಜನತೆಯ ಹೋರಾಟ ಅಧಿಕವಾಯಿತು. ೧೯೨೦ ರಲ್ಲಿ ಧಾರವಾಡದಲ್ಲಿ **ವಿ.ಪಿ. ಮಾಧವ ರಾಯ**ರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ರಾಜ್ಯ ರಾಜಕೀಯ ಸಮ್ಮೇಳನ'ವು ಜರುಗಿತು. ಈ ಸಭೆ **ನಾಗಪುರ** ಕಾಂಗ್ರೆಸ್ ಮಹಾಧಿವೇಶನಕ್ಕೆ ಅಧಿಕ ಸಂಖ್ಯೆಯಲ್ಲಿ ಕರ್ನಾಟಕದ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿತು. ಇದರ ಫಲವಾಗಿ ನಾಗಪುರಕ್ಕೆ ೮೦೦ ಪ್ರತಿನಿಧಿಗಳು ಹೋದರು. ಈ ಸಮ್ಮೇಳನವು ಕರ್ನಾಟಕಕ್ಕೆ **ಪ್ರತ್ಯೇಕ ಪ್ರದೇಶ ಕಾಂಗ್ರೆಸ್** ಸಮಿತಿಯನ್ನು ನೀಡಲು ಒಪ್ಪಿತು. 'ಕರ್ನಾಟಕದ ಸಿಂಹ' ಎಂದೇ ಖ್ಯಾತಿಯಾಗಿದ್ದ **ಗಂಗಾಧರರಾವ್**

ದೇಶಪಾಂಡೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆ.ಪಿ.ಸಿ.ಸಿ) ಮೊದಲ ಅಧ್ಯಕ್ಷರಾದರು. **ಗದಗ** ಅದರ ಕೇಂದ್ರ ಸ್ಥಳವಾಯಿತು. ನಿವೃತ್ತ ನ್ಯಾಯಾಧೀಶ **ಸೆಟ್ಲೂರರ** ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಸ್ಥಾಪನೆಯಾದವು. ಇವು **ಮೈಸೂರು, ಬೆಂಗಳೂರು, ತುಮಕೂರು** ಹಾಗೂ **ಕಡೂರು**ಗಳಲ್ಲಿ ಅಸ್ತಿತ್ವಕ್ಕೆ ಬಂದವು.

ಗಾಂಧಿಯುಗ

ಅಸಹಕಾರ ಚಳವಳಿ

ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರಮಟ್ಟದಲ್ಲಿ ಆರಂಭಗೊಂಡ ಈ ಚಳವಳಿ **ಮುಂಬೈ ಕರ್ನಾಟಕ** ಪ್ರಾಂತ್ಯದಲ್ಲಿ ಪರಿಣಾಮಕಾರಿ ಸಂಘಟನೆಯಿಂದ ಜನರ ಮೇಲೆ ವಿಶೇಷ ಪ್ರಭಾವ ಬೀರಿತು. ಗಾಂಧೀಜಿ ೧೯೨೦ ಮತ್ತು ೧೯೨೧ ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡಿದರು. ಅವರ ಜೊತೆಯಲ್ಲಿ **ಆಲಿ ಬಂಧು**ಗಳಿದ್ದರು ಕರ್ನಾಟಕದಲ್ಲಿ ಈ ಚಳವಳಿ ಸ್ವಾತಂತ್ರ್ಯದ ಬೇಡಿಕೆಯನ್ನು ಹರಡಿತ್ತು. ನ್ಯಾಯಾಲಯ, ಶಾಲಾ ಕಾಲೇಜು, ಕಚೇರಿಗಳನ್ನು ತ್ಯಜಿಸಲು ಗಾಂಧೀಜಿ ಕರೆ ನೀಡಿದರು. ಇದರ ಪರಿಣಾಮವಾಗಿ ಬೆಳಗಾವಿಯಲ್ಲಿ **ದತ್ತೋಪಂತ ಮಜಲಿ, ಕೃಷ್ಣರಾಜ ಕರಗು ಪೈ, ನಾರಾಯಣರಾವ್ ಜೋಷಿ** ಮೊದಲಾದವರು ವಕೀಲಿ ವೃತ್ತಿ ತ್ಯಜಿಸಿದರು. ೧೯೨೧-೨೨ ರಲ್ಲಿ ಅಸಂಖ್ಯ ಪ್ರತಿಭಟನೆಗಳು ನಡೆದವು. ೭೦ ಜನರನ್ನು ಬಂಧಿಸಲಾಯಿತು. ಧಾರವಾಡದಲ್ಲಿ ಮದ್ಯದಂಗಡಿಯ ಮುಂದೆ ಪಿಕೇಟಿಂಗ್ ನಡೆಸುತ್ತಿದ್ದ ಜನರ ಗುಂಪಿನ ಮೇಲೆ ಪೋಲಿಸರು ಗೋಲಿಬಾರ್ ಮಾಡಿದ್ದರಿಂದ **ಜುಲೈ ೧, ೧೯೨೧** ರಂದು ಮೂವರು ಮರಣ ಹೊಂದಿದರು. **ಆರ್.ಆರ್. ದಿವಾಕರ, ಮುದವೀಡು ಕೃಷ್ಣರಾವ್** ಒಳಗೊಂಡಂತೆ ೨೯ ಜನರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. **ನವಲಗುಂದ**ದಲ್ಲಿ ಭಾಷಣ ಮಾಡಿದ್ದಕ್ಕಾಗಿ ೧೯೨೧ ರಲ್ಲಿ **ಗಂಗಾಧರರಾವ್ ದೇಶಪಾಂಡೆ**ಯನ್ನು ಬಂಧಿಸಲಾಯಿತು. **ಕಾರ್ನಾಡ್ ಸದಾಶಿವರಾಯರು** ೧೯೨೧ ರಲ್ಲಿ 'ದೇಸಿಯ ಶಾಲೆ'ಯನ್ನು **ಮಂಗಳೂರಿ**ನಲ್ಲಿ ಸ್ಥಾಪಿಸಿದರು. ಕರ್ನಾಟಕದಲ್ಲಿ ಒಟ್ಟು ೫೦ ಶಾಲೆಗಳು ಆ ಸಂದರ್ಭದಲ್ಲಿ ಕಾರ್ಯನಿರತವಾಗಿದ್ದವು. ಧಾರವಾಡದಲ್ಲಿ ಆಲೂರ ವೆಂಕಟರಾಯರು ನಡೆಸುತ್ತಿದ್ದ 'ರಾಷ್ಟ್ರೀಯ ಶಾಲೆ'ಯಲ್ಲಿ **ದ.ರಾ.ಬೇಂದ್ರೆ, ಡಾ. ಶಂಬಾ ಜೋಷಿ, ದಿವಾಕರ** ಮೊದಲಾದವರು ಶಿಕ್ಷಕರಾಗಿದ್ದರು. ೧೯೨೧ ರಲ್ಲಿ ನವೆಂಬರ್ ೧೭ ರಂದು 'ಪ್ರಿನ್ಸ್ ಆಫ್ ವೇಲ್ಸ್' ಭಾರತಕ್ಕೆ ಭೇಟಿಕೊಟ್ಟಾಗ **ಬೆಂಗಳೂರ**ನ್ನು ಒಳಗೊಂಡಂತೆ ಅನೇಕ ಕಡೆ ಹರತಾಳಗಳು ಆಚರಿಸಲ್ಪಟ್ಟವು. ಬೆಂಗಳೂರಿನ ಕಂಟೋನ್‌ಮೆಂಟ್‌ನಲ್ಲಿ ಗುಂಡು ಹಾರಿಸಿದಾಗ ಇಬ್ಬರು ಖಿಲಾಫತ್ ಕೆಲಸಗಾರರು ಸತ್ತರು. ಕಾರ್ನಾಡ್ ಸದಾಶಿವರಾಯರು ಮಂಗಳೂರಿನಲ್ಲಿ ಎರಡನೆಯ ಕರ್ನಾಟಕ ರಾಜಕೀಯ ಅಧಿವೇಶನವನ್ನು **ಸರೋಜಿನಿ ನಾಯ್ಡು**ರವರ ಅಧ್ಯಕ್ಷತೆಯಲ್ಲಿ ವ್ಯವಸ್ಥೆಗೊಳಿಸಿದ್ದರು. ೧೯೨೩ ರಲ್ಲಿ ನಾಗಪುರದಲ್ಲಿ 'ಧ್ವಜ ಸತ್ಯಾಗ್ರಹ' ಏರ್ಪಟ್ಟಾಗ ಕರ್ನಾಟಕದ ಅನೇಕ ಮಂದಿ ಭಾಗವಹಿಸಿದ್ದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಹಾಗೂ ಹಿಂದೂಸ್ಥಾನಿ ಸೇವಾದಳ

ವೈದ್ಯಶಾಸ್ತ್ರದ ವಿಶೇಷ ಅಭ್ಯಾಸವನ್ನು ಪೂರ್ಣಗೊಳಿಸಿ ಅಮೇರಿಕಾದ ಮಿಚಿಗನ್ ವಿಶ್ವ ವಿದ್ಯಾಲಯದಿಂದ ಹಿಂತಿರುಗಿದ್ದ **ಎನ್.ಎಸ್. ಹರ್ಡೀಕರ್** ಎಂಬ ಯುವ ಡಾಕ್ಟರ್ ರಾಷ್ಟ್ರೀಯ ಭಾವನೆಗಳಿಂದ ತೀವ್ರ ಪ್ರಭಾವಿತನಾಗಿ **ಹಿಂದೂಸ್ಥಾನಿ ಸೇವಾದಳ**ವನ್ನು ೧೯೨೩ ರಲ್ಲಿ ಪ್ರಾರಂಭಿಸಿದನು. ಅದರ ಪ್ರಧಾನ ಕಚೇರಿ **ಹುಬ್ಬಳ್ಳಿ**ಯಾಯಿತು. ಭಾರತದ ಎಲ್ಲೆಡೆಗಳಿಂದ ಸ್ವಯಂ ಸೇವಕರು, ತರಬೇತಿ ಪಡೆಯಲು ಹುಬ್ಬಳ್ಳಿಗೆ ಆಗಮಿಸಿದರು. ೧೬ನೆಯ ವಯಸ್ಸಿನಲ್ಲೇ ಹರ್ಡೀಕರ್‌ರವರು ರಾಜಕೀಯ ಪ್ರವೇಶಿಸಿ **ತಿಲಕರ** ಪರಮ ಶಿಷ್ಯರಾಗಿದ್ದರು. ೧೯೨೪ ರಲ್ಲಿ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಸೇರುವ ಸಮಯಕ್ಕೆ ೧೭೦೦ ಸ್ವಯಂಸೇವಕರು ಈ ಸಂಸ್ಥೆಯಿಂದ ತರಬೇತಿ ಪಡೆದಿದ್ದರು. ಕ್ರಿ.ಶ. ೧೯೨೪ ರಲ್ಲಿ ಅಖಿಲ **ಭಾರತ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ** ಜರುಗಿತು. ಇದರ ಅಧ್ಯಕ್ಷತೆಯನ್ನು **ಗಾಂಧೀಜಿ**ಯವರು ವಹಿಸಿದ್ದರು. ಕನ್ನಡಿಗರು ಜನತೆ ಅತ್ಯುತ್ಸಾಹದಿಂದ ಇದಕ್ಕೆ ಸಿದ್ಧತೆ ಮಾಡಿಕೊಂಡಿದ್ದರು. **ಕಾರ್ನಾಡ್ ಸದಾಶಿವರಾವ್, ಹರ್ಡೇಕರ್ ಮಂಜಪ್ಪ, ಎನ್.ಸಿ. ಕೇಳ್ಕರ್** ಮುಂತಾದ ಜನನಾಯಕರು ಸಕ್ರಿಯವಾಗಿ ದುಡಿದರು. 'ರಾಷ್ಟ್ರಪಿತ' ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಮೊಟ್ಟಮೊದಲ ಹಾಗೂ ಕಟ್ಟಕಡೆಯ ಸಮ್ಮೇಳನ ಇದಾಗಿರುವುದರಿಂದ ಇದಕ್ಕೆ ಅತ್ಯಂತ ಮಹತ್ವವಿದೆ. ಈ ಸಮ್ಮೇಳನದಲ್ಲಿ ಅವರು **ವಿದೇಶ ವಸ್ತುಗಳ ಬಹಿಷ್ಕಾರ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಗ್ರಾಮೋದ್ಯೋಗ, ಅಹಿಂಸೆ, ಸತ್ಯಾಗ್ರಹ** ಮುಂತಾದ ಅಂಶಗಳನ್ನು ಕುರಿತು ಭಾಷಣ ಮಾಡಿದರು. ಇದರಿಂದ ಕನ್ನಡಿಗರಲ್ಲಿ ನವ ಸ್ಫೂರ್ತಿ ಮೂಡಿತು. ದೇಶದ ಎಲ್ಲೆಡೆಯಿಂದ ಆಗಮಿಸಿದ್ದ ನಾಯಕರು 'ಹಿಂದೂಸ್ಥಾನಿ ಸೇವಾದಳ'ದ ಸ್ವಯಂ ಸೇವಕರ ಅರ್ಪಣಾ ಭಾವವನ್ನು, ಶಿಸ್ತನ್ನೂ ದೇಶಾಭಿಮಾನದ ಉತ್ಸಾಹವನ್ನು ಮುಕ್ತಕಂಠದಿಂದ ಪ್ರಶಂಸಿದರು. ಇದರಿಂದ ಹರ್ಡೀಕರ್‌ರವರಿಗೆ ಅಖಿಲ ಭಾರತ ಪ್ರಸಿದ್ಧಿ ದೊರೆಯಿತು.

ಅಂಕೋಲಾ ಉಪ್ಪಿನ ಸತ್ಯಾಗ್ರಹ ಹಾಗೂ ಕಾನೂನು ಭಂಗ ಚಳವಳಿ

ಬ್ರಿಟಿಷ್ ಸರ್ಕಾರವು ಉಪ್ಪನ್ನು ತಯಾರಿಸುವ ಮತ್ತು ಮಾರಾಟದ ಮೇಲೆ ಕೆಲವು ನಿರ್ಬಂಧಗಳನ್ನು ಜಾರಿಗೊಳಿಸಿದ್ದರಿಂದ ರಾಷ್ಟ್ರೀಯ ನಾಯಕರು ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಗಾಂಧೀಜಿ ಉಪ್ಪಿನ ಕರವ ವಿರುದ್ಧ ಸತ್ಯಾಗ್ರಹ ಆರಂಭಿಸಲು ತೀರ್ಮಾನಿಸಿ **ದಂಡಿಯಾತ್ರೆ** ಕೈಗೊಂಡರು. ಈ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಕರಾವಳಿ ತೀರದಲ್ಲಿರುವ **ಅಂಕೋಲಾ**ದಲ್ಲಿ ಉಪ್ಪನ್ನು ತಯಾರಿಸಿ ಕಾನೂನನ್ನು ಭಂಗಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಹರ್ಡೀಕರ್‌ರವರು ತಮ್ಮ ಸೇವಾದಳದ ಸದಸ್ಯರೊಂದಿಗೆ ಅಂಕೋಲಾಕ್ಕೆ ತೆರಳಿದರು. ಹುಬ್ಬಳ್ಳಿ, ಬೆಳಗಾವಿಗಳಿಂದ ಸತ್ಯಾಗ್ರಹಿಗಳ ಪ್ರತ್ಯೇಕ ತಂಡಗಳು **ಏಪ್ರಿಲ್ ೧೩, ೧೯೩೦** ರಂದು

ಅಂಕೋಲಾ ತಲುಪಿದವು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೋರಾಟ ಅತ್ಯಂತ ಬಿರುಸಿನಿಂದ ನಡೆಯಿತು. ಅಂದು ಅಂಕೋಲೆಯಲ್ಲಿ ಹತ್ತುಸಾವಿರ ಜನರು ಜಮಾಯಿಸಿದರು. ಎಂ.ಪಿ. ನಾಡಕರ್ಣಿ ಮತ್ತು ಇತರರು ನೇತೃತ್ವ ವಹಿಸಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಸತ್ಯಾಗ್ರಹವು ಯಶಸ್ವಿಯಾಗಬೇಕೆಂದು ತನ್ನ ಸರ್ವ ಸಾಮರ್ಥ್ಯವನ್ನು ಕೇಂದ್ರೀಕರಿಸಿತು. ಸತ್ಯಾಗ್ರಹವು ಮಂಗಳೂರು, ಕುಂದಾಪುರ, ಪಡುಬಿದ್ರೆ, ಉಡುಪಿ, ಕಾರ್ಕಳ, ಪುತ್ತೂರು, ಬಿಸನಾಳ, ಕಿರೇಸೂರು ಸೇರಿದಂತೆ ೩೦ ಕಡೆಗಳಲ್ಲಿ ನಡೆಯಿತು. ಅಬಕಾರಿ ನಿಯಮಗಳನ್ನು ಉಲ್ಲಂಘಿಸಿ ಕೆಲವು ಸತ್ಯಾಗ್ರಹಿಗಳ ಗುಂಪು ಗೋವಾದಿಂದ ಉಪ್ಪನ್ನು ತಂದು ಕಾರವಾರದಲ್ಲಿ ಮಾರಾಟ ಮಾಡಿತು. ಸಾಣೆಕಟ್ಟಾದಲ್ಲಿಯ ಉಪ್ಪಿನ ಕಟ್ಟೆಗಳ ಮೇಲೆ ಜೂನ್ ೧, ೧೯೩೦ ರಲ್ಲಿ ಸತ್ಯಾಗ್ರಹಿಗಳು ದಾಳಿ ಮಾಡಿದರು. ಅಂಕೋಲೆಯಲ್ಲಿ ಉಪ್ಪಿನ ಸಂತೆಗಳನ್ನು ಏಪ್ರಿಲ್ ತಿಂಗಳ ೨೦, ೨೫, ೨೭ ಮತ್ತು ಮೇ ೩ ರಂದು ಏರ್ಪಡಿಸಲಾಯಿತು ಮತ್ತು ಸುಂಕ ರಹಿತವಾದ ಉಪ್ಪನ್ನು ಸಹಸ್ರಾರು ಚೀಲಗಳಲ್ಲಿ ಮಾರಾಟ ಮಾಡಲಾಯಿತು. ಈ ಸತ್ಯಾಗ್ರಹ ಇಡೀ ರಾಷ್ಟ್ರದ ಗಮನ ಸೆಳೆಯಿತು.

ಹೆಚ್ಚಿನ ವಿಷಯ

[ಅರಣ್ಯ ಸತ್ಯಾಗ್ರಹ

ಉಪ್ಪಿನ ಸತ್ಯಾಗ್ರಹದ ನಂತರ ಅರಣ್ಯ ಸತ್ಯಾಗ್ರಹ, ಸೇಂದಿಯ ಉತ್ಪಾದನೆ ಮತ್ತು ಮಾರಾಟಗಳ ವಿರುದ್ಧ ಚಳವಳಿ ಆರಂಭವಾದವು. ಉಪ್ಪಿನ ಸತ್ಯಾಗ್ರಹ ಕೇವಲ ಆರಂಭವಾದರೆ 'ಬಾಯ್‌ಕಾಟ್ ಚಳವಳಿ'ಯನ್ನು ಜನರು ಹೆಚ್ಚು ತೀವ್ರವಾಗಿ ಮುಂದುವರಿಸಿದರು. ಈ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಮಹಿಳೆಯರೇ ಇದ್ದರು. ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಗದಗ, ಹಾನಗಲ್, ಹಾವೇರಿ, ವಿಜಾಪುರ, ಬಾಗಲಕೋಟೆ, ಬೆಳಗಾವಿ, ಅಂಕೋಲಾ, ಸಿರ್ಸಿ, ಸಿದ್ದಾಪುರ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ಮೊದಲಾದ ಕಡೆ ಶಿಬಿರಗಳನ್ನು ಸಂಘಟಿಸಿದರು. ಕಾಯ್ದಿಟ್ಟ ಅರಣ್ಯಗಳ ಕಾನೂನನ್ನು ಜನರು ಮುರಿದು ಉರುವಲು ಕಟ್ಟಿಗೆ ಹಾಗೂ ಹುಲ್ಲನ್ನು ತಂದು ಬಂಧಿತರಾಗುವುದು ಈ ಚಳವಳಿಯ ಪ್ರಮುಖ ಕಾರ್ಯವಾಗಿತ್ತು. ಆಯಾ ಊರಿನ ಸತ್ಯಾಗ್ರಹಿಗಳು ತಮ್ಮ ಪ್ರದೇಶಗಳಲ್ಲಿನ ಅರಣ್ಯದಲ್ಲಿನ ಈಚಲ ಮರಗಳನ್ನು ಕಡಿದು ಹಾಕಿದರು. ಸಾರಾಯಿ ಅಂಗಡಿಗಳ ಮುಂದೆ ಪಿಕೇಟಿಂಗ್ ಮಾಡಿದರು. ಮಲೆನಾಡು ಪ್ರದೇಶವಾದ ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳು ಅರಣ್ಯ ಸತ್ಯಾಗ್ರಹದ ಕೇಂದ್ರಗಳಾದವು. ಮರಗಳನ್ನು ಉರುಳಿಸಿ ಗಾಡಿಗೆ ತುಂಬಿದರು. ಅನೇಕರು ಬಹಿರಂಗವಾಗಿ ಮರದ ಕೊಂಬೆಗಳನ್ನು ತೆಗೆದುಕೊಂಡು ಹೋಗಿ ಸಿರ್ಸಿಯಲ್ಲಿ ಹರಾಜು ಮಾಡಿದರು. ಸತ್ಯಾಗ್ರಹಿಗಳನ್ನು ಬಂಧಿಸಿ ಸೆರೆಮನೆಗೆ ದೂಡಲಾಯಿತು. ಈ ಸತ್ಯಾಗ್ರಹ ಅತ್ಯಂತ ಯಶಸ್ವಿಯಾಯಿತು.

ಕರ ನಿರಾಕರಣ ಚಳವಳಿ

ಗುಜರಾತಿನ ಬಾರ್ಡೋಲಿಯಲ್ಲಿ ಆರಂಭವಾದ ಕರ ನಿರಾಕರಣ ಚಳವಳಿಯ ಮಾದರಿಯಲ್ಲಿ ಕರ್ನಾಟಕದಲ್ಲೂ ಈ ಚಳವಳಿ ಆರಂಭವಾಯಿತು. ಇದಕ್ಕಾಗಿ ಹಾವೇರಿ ಜಿಲ್ಲೆಯ ಹಿರೇಕೆರೂರು, ಕಾರವಾರ ಜಿಲ್ಲೆಯ ಸಿರ್ಸಿ, ಅಂಕೋಲಾ ಮತ್ತು ಸಿದ್ದಾಪುರಗಳನ್ನು ಆಯ್ಕೆ

ಮಾಡಿಕೊಳ್ಳಲಾಯಿತು. ಸಿರ್ಸಿ ತಾಲ್ಲೂಕಿನ ೪೩ ಪಟೇಲರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದರು. ಅಂಕೋಲಾದ ರೈತರು ಕಂದಾಯ ನೀಡಲು ನಿರಾಕರಿಸಿದರು. ವೀರನಗೌಡ ಪಾಟೀಲ್, ಟಿ.ಆರ್. ನೇಸ್ವಿ, ಕೆ.ಎಫ್. ಪಾಟೀಲ, ಶಂಕರ ಗುಲ್ವಾಡಿ, ನೆಲಗೇರಿ ಜೋಗಿನಾಯ್ಕ, ಹಳ್ಳಿಕೇರಿ ಇವರ ನಾಯಕತ್ವದಲ್ಲಿ ಹಿರೇಕೆರೂರಿನಲ್ಲಿ ಚಳವಳಿಯು ಸಂಪೂರ್ಣವಾಗಿ ಯಶಸ್ವಿಯಾಯಿತು. ಈ ಕರ ನಿರಾಕರಣ ಆಂದೋಲನಾ ಅತ್ಯಂತ ಗಮನಾರ್ಹ ಘಟನೆಯಾಗಿದೆ. ರೈತಾಪಿ ವರ್ಗದ ಮೇಲೆ ಘೋರ ಪರಿಣಾಮ ಬೀರಿರುವ ಈ ಹೋರಾಟದಿಂದ ರೈತರು ಆಸ್ತಿಪಾಸ್ತಿ, ಮನೆ, ದನ-ಕರುಗಳು ಹಾಗೂ ಪಾತ್ರೆ-ಪಗಡೆಗಳನ್ನು ಕಳೆದುಕೊಂಡು ನಷ್ಟ ಅನುಭವಿಸಿದರು. ಆದರೆ ರಾಜಕೀಯ ಪ್ರಜ್ಞೆ ಅಷ್ಟಾಗಿ ಮೂಡದ ಅವರನ್ನು ಹುರಿದುಂಬಿಸುವ ಕಾರ್ಯವನ್ನು ಮುಂದುವರಿಸಬೇಕಾದ ಅಗತ್ಯವಿತ್ತು.

ಸಂಸ್ಥಾನಿಕ ಆಡಳಿತದಲ್ಲಿರುವ ಭಾಗಗಳಲ್ಲಿ ಕಾಂಗ್ರೆಸ್ ರಚನಾತ್ಮಕ ಚಟುವಟಿಕೆಗಳನ್ನು ಮಾಡುವುದರಲ್ಲಿ (ಯಾತ್ರೆ) ತೊಡಗಿದ್ದಿತು. ಮೈಸೂರಿನಲ್ಲಿ ಕಾಂಗ್ರೆಸ್ ಸಮಿತಿಗಳು ಸ್ಥಾಪನೆಯಾಗಿದ್ದರೂ ಮೈಸೂರಿನ ಕಾಂಗ್ರೆಸ್ಸಿಗರು ಬ್ರಿಟಿಷ್ ಜಿಲ್ಲೆಗಳಿಗೆ ಹೋಗಿ ಸತ್ಯಾಗ್ರಹ ಮಾಡುತ್ತಿದ್ದರು. ಕ್ರಿ.ಶ. ೧೯೩೮ ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಸುಭಾಷ್ ಚಂದ್ರಬೋಸರ ಅಧ್ಯಕ್ಷತೆಯಲ್ಲಿ ಹರಿಪುರದಲ್ಲಿ ಜರುಗಿತು. ಅಲ್ಲಿ ಮೈಸೂರು ಕಾಂಗ್ರೆಸನ್ನು ರಾಷ್ಟ್ರೀಯ ನಾಯಕರು ತೀವ್ರವಾಗಿ ಟೀಕಿಸಿದರು. ಸುಭಾಷ್ ಚಂದ್ರಬೋಸರು ಸಂಸ್ಥಾನದ ಪ್ರಜೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಚಳವಳಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು. ಇದರಿಂದಾಗಿ ೧೯೩೮ ರ ಫೆಬ್ರವರಿಯಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಅಧಿಕೃತವಾಗಿ ಮೈಸೂರು ಕಾಂಗ್ರೆಸ್ ಸ್ಥಾಪನೆಯಾಯಿತು. ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ಈ ಹೋರಾಟದ ಮುಖ್ಯ ಉದ್ದೇಶವಾಗಿತ್ತು.]

ಶಿವಪುರ ಧ್ವಜ ಸತ್ಯಾಗ್ರಹ

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ೧೯೩೮ ರ ಏಪ್ರಿಲ್‌ನಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಟಿ. ಸಿದ್ಧಲಿಂಗಯ್ಯನವರು ವಹಿಸಿದ್ದರು. ಹೆಚ್.ಕೆ. ವೀರಣ್ಣಗೌಡ, ಹೆಚ್. ಹೊನ್ನಯ್ಯ, ಪಿ. ತಿರುಮಲೇಗೌಡರ ನೇತೃತ್ವದಲ್ಲಿ ಸುಮಾರು ೪೦ ಸಾವಿರ ಕಾರ್ಯಕರ್ತರನ್ನು ಸಂಘಟಿಸಲಾಗಿತ್ತು. ಕಾರ್ಯಕ್ರಮ ೧೧-೪-೧೯೩೮ ರಂದು ಬೆಳಿಗ್ಗೆ ಧ್ವಜಾರೋಹಣದಿಂದ ಆರಂಭವಾಗಬೇಕಿತ್ತು. ಆದರೆ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟ್ ಜಿ.ಎಂ. ಮೇಕ್ರಿ ಮದ್ದೂರಿನ ಸುತ್ತಲೂ ಯಾವುದೇ ಸಭೆ ಮೆರವಣಿಗೆ ಮಾಡಕೂಡದು ಮತ್ತು ರಾಷ್ಟ್ರಧ್ವಜಾರೋಹಣ ನಡೆಸಕೂಡದೆಂಬ ನಿಷೇಧಾಜ್ಞೆಯನ್ನು ಜಾರಿಗೆ ತಂದನು. ರಾಜ್ಯದ ವಿವಿಧ ಕಡೆಗಳಿಂದ ತಂಡೋಪತಂಡವಾಗಿ ಸಾವಿರಾರು ಜನರು ಶಿವಪುರಕ್ಕೆ ಬಂದರು. ಶಾಂತಿಯಿಂದ ಧ್ವಜಾರೋಹಣ ನಡೆಸಲು ಸಿದ್ಧತೆಗಳನ್ನು ಪರಿಸ್ಥಿತಿಯ ಉಗ್ರತೆಯ ನಡುವೆಯೂ ಯೋಜಿಸಲಾಗಿತ್ತು. ಧ್ವಜದ ಕಾವಲಿಗೆ ಸ್ವಯಂ ಸೇವಕರ ತಂಡವೇ ಸಜ್ಜಾಗಿತ್ತು. ಸಮಾರಂಭದ ಸ್ಥಳಕ್ಕೆ ಅಧ್ಯಕ್ಷರನ್ನು ಎಂಟು ಎತ್ತುಗಳ ಚಕ್ಕಡಿಯ ಮೆರವಣಿಗೆಯಲ್ಲಿ

ಕರೆತರಲಾಯಿತು. ೬೦೦ ಜನ ಮೀಸಲು ಪಡೆಯ ಪೊಲೀಸರು ಸಮಾವೇಶವನ್ನು ಬಂದೂಕು ಸಮೇತ ಸುತ್ತುವರಿದಿದ್ದರು ಮತ್ತು ಸಿದ್ಧಲಿಂಗಯ್ಯನವರು ಧ್ವಜಾರೋಹಣದ ವೇದಿಕೆಗೆ ಆಗಮಿಸಿದಾಗ **ಟಿ. ಸುನಂದಮ್ಮ**ನವರು ಸುಶ್ರಾವ್ಯವಾಗಿ 'ವಂದೇ ಮಾತರಂ' ಗೀತೆ ಹಾಡಿದರು. ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ತಕ್ಷಣ ಪೊಲೀಸರು ಅವರನ್ನು ಬಂಧಿಸಿದರು. ಈ ಸಮಾರಂಭದ ವರದಿಯನ್ನು ಪತ್ರಿಕೆಗಳೆಲ್ಲ "ಶಿವಪುರದ ಕೋಲಾಹಲ" ಎಂದೇ ಬರೆದಿದ್ದವು. ಈ ಸಮಾರಂಭದಲ್ಲಿ ಮೂಲಭೂತ ಹಕ್ಕುಗಳು, ಜವಾಬ್ದಾರಿ ಸರ್ಕಾರ, ಆರ್ಥಿಕ ಕಾರ್ಯಕ್ರಮ ಮೊದಲಾದ ೧೮ ನಿರ್ಣಯಗಳನ್ನು ಕಲಾಪದಲ್ಲಿ ಅಂಗೀಕರಿಸಲಾಯಿತು. ನಂತರ ಸಂಸ್ಥಾನದ ವಿವಿಧ ಕಡೆ ಧ್ವಜಾರೋಹಣ ಸಭೆಗಳು ನಡೆದವು. ಈ 'ಶಿವಪುರ ಧ್ವಜ ಸತ್ಯಾಗ್ರಹ'ದ ಸಾಧನೆ ಎಂದರೆ ಜನಜಾಗೃತಿ, ಮಹಿಳೆ ಮತ್ತು ಪುರುಷರ ಸಮ ಸೇವೆ, ಖಾದಿಗೆ ವಿಶೇಷ ಮಹತ್ವ, ನೂರಾರು ಸತ್ಯಾಗ್ರಹಗಳ ಉದಯ, ಶಿಕ್ಷಿತ ನಾಯಕರ ನಾಯಕತ್ವ, ನಿರ್ಭೇದವಾಗಿ ಎಲ್ಲಾ ವರ್ಗ, ಎಲ್ಲ ಜಾತಿ ಜನ ನಡೆದುಕೊಂಡಿದ್ದು, ಜೊತೆಗೆ ಅಖಿಲ ಭಾರತದ ನಾಯಕರ ಗಮನ ಮೈಸೂರಿನ ಕಡೆ ಹರಿದಿದ್ದು ಆಗಿದೆ.

ವಿದುರಾಶ್ವತ್ಥ ದುರಂತ

ಕೋಲಾರ ಜಿಲ್ಲೆ **ಗೌರಿಬಿದನೂರು** ತಾಲ್ಲೂಕಿನಲ್ಲಿನ **ವಿದುರಾಶ್ವತ್ಥ**ದಲ್ಲಿ ಶಿವಪುರದಂತೆ ೨೫ ಏಪ್ರಿಲ್ ೧೯೩೮ ರಂದು ಧ್ವಜಾರೋಹಣ ನಡೆಸಲು ತೀರ್ಮಾನಿಸಲಾಯಿತು. ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆ ವಿಧಿಸಿದರು. ಅಂದು ಸ್ಥಳೀಯ ವಿದುರ ನಾರಾಯಣ ಸ್ವಾಮಿಯ ಜಾತ್ರೆ ದಿನವಾಗಿದ್ದರಿಂದ ಸಾವಿರಾರು ಜನ ಸೇರಿದ್ದರು. ಕೋಲಾರ ಜಿಲ್ಲೆಯ ಕಾಂಗ್ರೆಸ್ಸಿಗರಾದ **ಟಿ. ರಾಮಾಚಾರ್ಯ**ರ ನೇತೃತ್ವದಲ್ಲಿ **ಸೂರಣ್ಣ**, **ಎಂ. ನಾರಾಯಣಸ್ವಾಮಿ**, **ಶ್ರೀನಿವಾಸರಾಯ** ಮೊದಲಾದವರು ನಾರಾಯಣ ಸ್ವಾಮಿಯ ದೇವಾಲಯದ ಎದುರು **ಏಪ್ರಿಲ್ ೨೫** ರಂದು ವಿಧಿವತ್ತಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಈ ಸಭೆ ಕಾನೂನಿಗೆ ವಿರೋಧವೆಂದು ಅಧಿಕಾರಿಗಳು ಘೋಷಿಸಿ ಜನರೆಲ್ಲ ಚದುರುವಂತೆ ಆಜ್ಞಾಪಿಸಿದರು. ಆದರೆ ಸಾವಿರಾರು ಜನರಿದ್ದ ಸಭೆಯಲ್ಲಿ ಯಾರೋ ಪೊಲೀಸರ ಮೇಲೆ ಕಲ್ಲು ತೂರಿದರು. ಸಭೆಯನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ೯೨ ಸುತ್ತು ಗುಂಡನ್ನು ಹಾರಿಸಿದರು. ಗೋಲಿಬಾರಿಗೆ ೩೨ ನಿರಪರಾಧಿ ಜನರು ಮರಣ ಹೊಂದಿದ್ದರು. ಕ್ರೂರ ಪೊಲೀಸರಿಂದ ಮಾನವ ಬೇಟೆಯ ಅತ್ಯಾಚಾರ ಸ್ವೇಚ್ಛೆಯಾಗಿ ನಡೆಯಿತು. ಶಿವಪುರದಲ್ಲಿ ಮಾಡಲಾಗದಿದ್ದುದನ್ನು ಪೊಲೀಸರು ಇಲ್ಲಿ ಅವಿವೇಕದಿಂದ ಮಾಡಿದರು. ಈ ಸುದ್ದಿಯನ್ನು ಬಿ.ಬಿ.ಸಿ ಕೂಡ ಪ್ರಸಾರ ಮಾಡಿ ಸರ್ಕಾರವನ್ನು ಖಂಡಿಸಿತು. ರಾಜ್ಯಾದ್ಯಂತ ಸಾರ್ವಜನಿಕರ ಉಗ್ರ ಪ್ರತಿಭಟನೆ ವಿದುರಾಶ್ವತ್ಥದ ಹತ್ಯಾಕಾಂಡದ ವಿರುದ್ಧ ನಡೆಯಿತು. ಸರ್ಕಾರದ ಜಂಘಾಬಲ ಉಡುಗಿತು. ಇದನ್ನು **ಕರ್ನಾಟಕದ ಜಲಿಯನ್ ವಾಲಾಬಾಗ್ ದುರಂತ** ಎನ್ನುವರು. ಸರ್ಕಾರ ನಾಯಕರೊಂದಿಗೆ ಚರ್ಚಿಸಿ ಒಪ್ಪಂದಕ್ಕೆ ಬಂದು ಮೈಸೂರು ಕಾಂಗ್ರೆಸ್ ಶಾಸನಬದ್ಧ ರಾಜಕೀಯ ಪಕ್ಷ ಎಂದು ಪರಿಗಣಿಸಿ ಮೈಸೂರು

ಧ್ವಜದೊಡನೆ ರಾಷ್ಟ್ರಧ್ವಜದ ಹಾರಾಟ, ಖೈದಿಗಳ ಬಿಡುಗಡೆ, ಮೊಕದ್ದಮೆಗಳ ವಾಪಸಾತಿ, ಜವಾಬ್ದಾರಿ ಸರ್ಕಾರ ಸ್ಥಾಪನೆ ಇವುಗಳನ್ನು ಒಪ್ಪಿ ೧೯೩೮ ಮೇ ೧೭ ರಂದು ಪತ್ರಿಕೆಯಲ್ಲಿ ಸರ್ಕಾರ ಪ್ರಕಟಿಸಿತು.

ಹೀಗೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ಉಗ್ರ ಸ್ವರೂಪವನ್ನು ಪಡೆಯತೊಡಗಿತು. ಗಾಂಧೀಜಿ ೧೯೪೨ ರಲ್ಲಿ **ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳವಳಿ** ಪ್ರಾರಂಭಿಸಿ ಬಂಧಿತರಾದರು. ಮೈಸೂರು ಸಂಸ್ಥಾನದ ಜನತೆಯೂ ಸಹ ಈ ಚಳವಳಿಯನ್ನು ತೀವ್ರಗೊಳಿಸಿತು. ಇದೇ ಸಮಯದಲ್ಲಿ ಈಸೂರು ದುರಂತ ಸಂಭವಿಸಿತು.

ಈಸೂರು ದುರಂತ

ಈಸೂರು ಶಿವಮೊಗ್ಗ ಜಿಲ್ಲೆ **ಶಿಕಾರಿಪುರ** ತಾಲ್ಲೂಕಿನ ಕುಮುದ್ವತಿ ನದಿಯ ದಂಡೆಯ ಮೇಲಿರುವ ಗ್ರಾಮ. ಕಾಂಗ್ರೆಸ್ ನಾಯಕರು ಗ್ರಾಮ ಗ್ರಾಮಗಳಲ್ಲಿ ಮಾಡಿದ **ಚಲೇಜಾವ್ ಚಳವಳಿಯ** ಪ್ರಚಾರ ಬಹಳ ಜಾಗೃತಿ ಮೂಡಿಸಿತು. ಈಸೂರನ್ನು ಈ ಚಳವಳಿಯ ಕೇಂದ್ರವಾಗಿ ಮಾಡಿಕೊಂಡು ಗ್ರಾಮದ ಯುವಕರೆಲ್ಲಾ ಗಾಂಧಿಟೋಪಿ ಹಾಕಿಕೊಂಡು ರಾಷ್ಟ್ರಧ್ವಜ ಕೈಯಲ್ಲಿ ಹಿಡಿದು ದಿನವೂ ಪ್ರಭಾತಫೇರಿಯ ನಂತರ ಚಳವಳಿಯ ಕಾರ್ಯಕ್ರಮ ನಡೆಸುತ್ತಿದ್ದರು. ೧೯೪೨ ರ **ಸೆಪ್ಟಂಬರ್ ೨೫** ರಂದು ಈಸೂರನ್ನು **ಸ್ವತಂತ್ರಗ್ರಾಮ** ಎಂದು ಘೋಷಿಸಿಕೊಂಡರು. ಅಲ್ಲಿ ೧೦ ವರ್ಷದ ಹುಡುಗ **ಜಯಪ್ಪನನ್ನು** ಅಮಲ್ದಾರನನ್ನಾಗಿ ಮಾಡಿಕೊಂಡರು. ೧೨ ವರ್ಷದ ಬಾಲಕ **ಮಲ್ಲಪ್ಪ** ಸರ್ವಾಧಿಕಾರಿಯಾದ ಊರಿನ ವೀರಭದ್ರ ದೇಗುಲದ ಗಂಟೆ ಬಾರಿಸಿದಾಗ ಎಲ್ಲರೂ ಸಮಾವೇಶಗೊಳ್ಳಬೇಕೆಂದು ತೀರ್ಮಾನಿಸ ಲಾಯಿತು. ಸೆಪ್ಟಂಬರ್ ೨೬ ರಂದು ಊರಿನ ಪಟೇಲ, ಶ್ಯಾನುಭೋಗರ ರಾಜೀನಾಮೆ ಕೇಳಿ ಗಾಂಧಿಟೋಪಿ ಧರಿಸುವಂತೆ ಅಗ್ರಹಿಸಲಾಯಿತು. ಕಚೇರಿಯಲ್ಲಿದ್ದ ದಫ್ತರನ್ನು ವಶಪಡಿಸಿ ಕೊಳ್ಳಲಾಯಿತು. ಈ ಸುದ್ದಿ ಬ್ರಿಟಿಷ್ ಮತ್ತು ಅಮಲ್ದಾರ್ **ಚನ್ನಕೃಷ್ಣಯ್ಯನವರಿಗೆ** ತಲುಪಿದಾಗ ಅವರು ಪೊಲೀಸಿನವರೊಡನೆ ಆಗಮಿಸಿದರು. ಜನರು ಪ್ರತಿಭಟಿಸಿದರು. ಇದನ್ನು ಸಹಿಸದ ಅಧಿಕಾರಿಗಳು ಲಾಠಿ ಚಾರ್ಜ್ ಮಾಡಿದರು. ಅನೇಕರಿಗೆ ಪೆಟ್ಟಾಯಿತು. ಘರ್ಷಣೆ ಭೀಕರವಾಗಿ ನಡೆದು ಅಮಲ್ದಾರ್ ಚನ್ನಕೃಷ್ಣಯ್ಯ ಮತ್ತು ಸಬ್‌ಇನ್ಸ್‌ಪೆಕ್ಟರ್ **ಕೆಂಚೇಗೌಡರನ್ನು** ಕೊಂದರು. ಅನಂತರ ಹೆಚ್ಚಿನ ಪೊಲೀಸ್ ಪಡೆ ಈಸೂರಿಗೆ ಧಾವಿಸಿತು. ಜನ ಅರಣ್ಯದ ಕಡೆ ಓಡಿದರು. ಕೈಗೆ ಸಿಕ್ಕಿದ ಜನರನ್ನು ಬಡಿಯಲಾಯಿತು. ಹೆಂಗಸರ ಮೇಲೆ ಅತ್ಯಾಚಾರ ಮಾಡಲಾಯಿತು. ಮನೆ ದೋಚಲಾಯಿತು. ಅನೇಕರನ್ನು ದಸ್ತಗಿರಿ ಮಾಡಲಾಯಿತು. ೪೧ ಜನರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಹೈಕೋರ್ಟ್ ೧೯೪೩ ಜನವರಿ ೯ ರಂದು ತೀರ್ಪು ನೀಡಿ **ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಬಿ. ಹಾಲಪ್ಪ** ಮತ್ತು **ಜಿ. ಶಂಕರಪ್ಪ** ಎಂಬ ಐವರಿಗೆ ಮರಣದಂಡನೆ ವಿಧಿಸಿತು. **ಹಾಲಮ್ಮ** ಮತ್ತು **ಪಾರ್ವತಮ್ಮನವರಿಗೆ** ಜೀವಾವಧಿ ಶಿಕ್ಷೆ ವಿಧಿಸಲಾಯಿತು.

ಕರ್ನಾಟಕದಲ್ಲಿ ಚಲೇಜಾವ್ ಚಳವಳಿ ಬಹಳ ದಿನದವರೆಗೆ ರಭಸವಾಗಿದ್ದಿತು. ಈ ಅವಧಿಯಲ್ಲಿ ೨೫ ರೈಲ್ವೆ ನಿಲ್ದಾಣಗಳಿಗೆ ಬೆಂಕಿ ಹಚ್ಚಲಾಯಿತು. ಕೊಡಗಿನಲ್ಲಿ ೫೦ ಕ್ಕಿಂತ ಹೆಚ್ಚು ಹೈದರಾಬಾದ್ ಕರ್ನಾಟಕದಲ್ಲಿ ೧೦೦ ಕ್ಕಿಂತ ಹೆಚ್ಚು ಜನರನ್ನು ಬಂಧಿಸಲಾಯಿತು. ಮಹದೇವ ದೇಸಾಯಿ ಜೈಲಿನಲ್ಲಿ ಸತ್ತ ಸುದ್ದಿಯು ಬಂದ ಕೂಡಲೇ ಬೆಂಗಳೂರಿನಲ್ಲಿ ನಡೆದ ಉಗ್ರ ಚಳವಳಿಯಿಂದ ೧೫೦ ಜನರು ಗುಂಡಿಗೆ ಆಹುತಿಯಾದರು. ಈ ಭೀಕರ ಕಗ್ಗೊಲೆ ನಡೆದದ್ದು ಮೈಸೂರು ಬ್ಯಾಂಕ್ ವರ್ತುಲದಲ್ಲಿ ಕಟ್ಟಾ ಗಾಂಧೀವಾದಿ ಮೈಲಾರ ಮಹದೇವಪ್ಪ (ಮಾರ್ತಾಂಡ) ಹಾಗೂ ಇನ್ನಿತರ ಇಬ್ಬರು ೧.೪.೧೯೪೩ ರಂದು ಧಾರವಾಡ ಜಿಲ್ಲೆಯ ಹೊಸರಿತ್ತಿಯಲ್ಲಿ ಸರ್ಕಾರಿ ಖಜಾನೆ ಲೂಟಿ ಮಾಡಲು ಪ್ರಯತ್ನಿಸಿದಾಗ ಗುಂಡಿಕ್ಕಿ ಕೊಲ್ಲಲಾಯಿತು. ಪೊಲೀಸರ ಗೋಲಿಬಾರಿನಿಂದ ದಾವಣಗೆರೆಯಲ್ಲಿ ಐದು ಜನರು, ಬೈಲಹೊಂಗಲದಲ್ಲಿ ೭ ಜನರು ಮೃತರಾದರು. ೧೯೪೨-೪೩ ರಲ್ಲಿ ಕನಿಷ್ಟ ೭,೦೦೦ ಜನರು ಸೆರೆಮನೆ ಕಂಡರು. ದೇಶಾಭಿಮಾನದಲ್ಲಿ ನಿಶ್ಚಿತ ಗುರಿಯಲ್ಲಿ ಹಾಗೂ ತ್ಯಾಗದಲ್ಲಿ ದೇಶದ ಉಳಿದ ಭಾಗಗಳ ಜನರಿಗಿಂತಲೂ ತಾವು ಹಿಂದೆ ಬಿದ್ದಿಲ್ಲವೆಂಬುದನ್ನು ಕರ್ನಾಟಕದ ಜನತೆ ತೋರಿಸಿಕೊಟ್ಟಿತು. ಬೆಳಗಾವಿ ಜಿಲ್ಲೆಯಲ್ಲಿ ಚಳವಳಿಯನ್ನು ಹತ್ತಿಕ್ಕಲು ಯುರೋಪಿಯನ್ ಮಿಲಿಟರಿ ಸೈನ್ಯವನ್ನು ಕರೆಸಬೇಕಾಯಿತು. ಆರ್.ಆರ್. ದಿವಾಕರ್ ಹಾಗೂ ಇನ್ನುಳಿದ ಭೂಗತ ಕಾರ್ಯಕರ್ತರು ೧೯೪೪ ರಲ್ಲಿ ಪೊಲೀಸರಿಗೆ ಶರಣು ಬಂದ ಮೇಲೆ ಈ ಚಳವಳಿಯು ನಿಂತಿತು.

ಅರಮನೆ ಸತ್ಯಾಗ್ರಹ - ಕೆ.ಸಿ. ರೆಡ್ಡಿ ಹಾಗೂ ಮೈಸೂರು ಚಲೋ

ಭಾರತ ಸ್ವತಂತ್ರವಾದ ನಂತರ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಸೇರುವಂತೆ ಮಹಾರಾಜರ ಮೇಲೆ ಒತ್ತಾಯ ತರುವುದಕ್ಕೆ ಮೈಸೂರು ಕಾಂಗ್ರೆಸ್ "ಮೈಸೂರು ಚಲೋ" ಚಳವಳಿ ಹೂಡಬೇಕಾಯಿತು. ಕೆ. ಹನುಮಂತಯ್ಯನವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆ ಕರೆದು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ 'ಮೈಸೂರು ಚಲೋ ಚಳವಳಿ' ನಡೆಸಬೇಕೆಂದೂ ಅರಮನೆಯ ಮುಂದೆ ಸತ್ಯಾಗ್ರಹವನ್ನು ಮಾಡ ಬೇಕೆಂದೂ ನಿರ್ಣಯಿಸಿದರು. ಆಗ ಜಯಚಾಮರಾಜ ಒಡೆಯರ್ ಮಹಾರಾಜರಾಗಿದ್ದರು. ತಂಬೂಚೆಟ್ಟಿ ಆಪ್ತ ಕಾರ್ಯದರ್ಶಿಯಾಗಿದ್ದರು. ರಾಮಸ್ವಾಮಿ ಮೊದಲಿಯಾರ್ ದಿವಾನ್‌ರಾಗಿದ್ದರು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಸಿ. ರೆಡ್ಡಿಯವರು ದಿವಾನರ ಜೊತೆ ನಡೆಸಿದ ಸಂಧಾನ ವಿಫಲವಾದಾಗ ಚಳವಳಿಯಲ್ಲಿ ಅಂತಿಮ ಅಸ್ತ್ರವಾಗಿ ಕೆ.ಸಿ. ರೆಡ್ಡಿಯವರು ಮುಂದಾಳತ್ವ ವಹಿಸಿ ರಾಜ್ಯಾದ್ಯಂತ ಪ್ರವಾಸ ಮಾಡಿ ಜನರನ್ನು ಹುರಿದುಂಬಿಸಿದರು. ಬೆಂಗಳೂರಿನ ಇಂದಿನ ಬಸ್ ನಿಲ್ದಾಣ (ಸುಭಾಷ್‌ನಗರ ಕೆರೆ)ದಲ್ಲಿ ಕೆ.ಸಿ. ರೆಡ್ಡಿಯವರು ಧ್ವಜಾರೋಹಣ ಮಾಡಿ ಸೆಪ್ಟೆಂಬರ್ ೧೧, ೧೯೪೭ ರಂದು ಸತ್ಯಾಗ್ರಹ ಆರಂಭವಾಗುತ್ತದೆ

ಎಂದು ಘೋಷಿಸಿದರು. ಸೆಪ್ಟಂಬರ್ ೪ ರಂದೇ ಸರ್ಕಾರ ಎಲ್ಲಾ ನಾಯಕರನ್ನು ಬಂಧಿಸಿತು. ಆದರೂ ಚಳವಳಿ ನಿಲ್ಲಲಿಲ್ಲ. ಎಲ್ಲೆಡೆಯಿಂದಲೂ ಜನತೆ ಕಾಲ್ನಡಿಗೆಯಲ್ಲಿ ಮೈಸೂರಿನತ್ತ ಹೊರಟರು. "ಆರ್ಕಾಟ್ ಬಾಯ್ಕಾಟ್", "ತಂಬೂಚೆಟ್ಟಿ, ಚಟ್ಟಕಟ್ಟಿ", "ಕೆ.ಸಿ. ರೆಡ್ಡಿ ಪಟ್ಟಕಟ್ಟಿ" ಘೋಷಣೆಗಳು ಮೊಳಗಿದವು. ಒಟ್ಟು ೨೦ ಜನ ಆಂದೋಲನದಲ್ಲಿ ಪ್ರಾಣ ಕಳೆದುಕೊಂಡರು. ಕೊನೆಗೆ ಸರ್ಕಾರ ಅಕ್ಟೋಬರ್ ಆರರಂದು ಬಂಧಿತ ನಾಯಕರನ್ನು ಬಿಡುಗಡೆ ಮಾಡಿ ೧೧ ರಂದು ಕಾಂಗ್ರೆಸ್ ಜೊತೆ ಒಪ್ಪಂದ ಮಾಡಿಕೊಂಡು ೧೩ ರಂದು ಪ್ರಜಾಪ್ರತಿನಿಧಿಗಳ ಮಂತ್ರಿಮಂಡಲ ಸ್ಥಾಪಿಸಿತು. ೨೪.೧೦.೧೯೪೭ ರಂದು ಕೆ.ಸಿ. ರೆಡ್ಡಿಯವರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾದರು. ಅಠಾರ ಕಚೇರಿ (ಇಂದಿನ ಹೈಕೋರ್ಟ್ ಕಟ್ಟಡ) ರಾಜ್ಯದ ಸಚಿವಾಲಯವಾಯಿತು. ಮುಂದೆ ಜುಲೈ ೧೯೫೧ ರಲ್ಲಿ ಸಚಿವಾಲಯವನ್ನು ವಿಧಾನಸೌಧಕ್ಕೆ ಸ್ಥಳಾಂತರಿಸಲಾಯಿತು.

೫.೬ ಕರ್ನಾಟಕ ಏಕೀಕರಣ

ಹಿನ್ನೆಲೆ

ಕನ್ನಡದ ಮೊದಲ ಕೃತಿಯಾದ ಕವಿರಾಜ ಮಾರ್ಗದಲ್ಲಿ ನಾಡು ಕಾವೇರಿಯಿಂದ ಗೋದಾವರಿ ನದಿಯವರೆವಿಗೂ ತನ್ನ ಮೇರೆಗಳನ್ನು ಹೊಂದಿತ್ತು ಎಂದು ನಮೂದಾಗಿದೆ. ಅಲ್ಲದೆ ಎರಡು ಸಾವಿರ ವರುಷಗಳಿಗೂ ಹೆಚ್ಚಿನ ಚರಿತ್ರೆಯನ್ನು ಹೊಂದಿರುವ ಕರ್ನಾಟಕವು ಸಾಂಸ್ಕೃತಿಕವಾಗಿ ಅಖಂಡವಾದುದು. ಕನ್ನಡದ ರಾಜಮನೆತನಗಳ ಆಳ್ವಿಕೆ ಕನ್ನಡಿಗರನ್ನು ಭೌಗೋಳಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಒಂದುಗೂಡಿಸಿತ್ತು. ಆದರೆ ಆಂಗ್ಲರು ಭಾರತವನ್ನು ಆಕ್ರಮಿಸಿದಂತೆಲ್ಲಾ ತಮ್ಮ 'ಒಡೆದು-ಆಳುವ ಧೋರಣೆ'ಯನ್ನು ಪ್ರಯೋಗಿಸುತ್ತಾ ಹೋದರು. ಇದರಿಂದಾಗಿ ಭಾರತದಲ್ಲಿನ ವಿವಿಧ ಪ್ರದೇಶಗಳ ಭಾಷಿಕರು ಹರಿದು ಹಂಚಿ ಹೋಗುವಂತೆ ಆಯಿತು. ಈ ಮಾತು ಕನ್ನಡ ಮಾತನಾಡುವ ಭೂ ಪ್ರದೇಶ ಹಾಗೂ ಜನರಿಗೂ ಅನ್ವಯ ಆಗುವಂಥದ್ದು.

೧೭೯೯ ರಲ್ಲಿ ಟಿಪ್ಪುಸುಲ್ತಾನನ ಸೋಲಿನೊಂದಿಗೆ ಕನ್ನಡದ ಭೂ ಪ್ರದೇಶಗಳನ್ನು ಬ್ರಿಟಿಷರು ವಿಭಿನ್ನ ಆಡಳಿತ ಘಟಕಗಳಲ್ಲಿ ವಿಭಜಿಸಿದರು. ಈ ವಿಭಜನೆಗೆ ಯಾವುದೇ ತಾತ್ವಿಕ ತಳಹದಿ ಇರಲಿಲ್ಲ. ಬದಲಾಗಿ ಆಂಗ್ಲರ ಆಡಳಿತದ ಅನುಕೂಲವೇ ಪ್ರಧಾನವಾಗಿತ್ತು. ಟಿಪ್ಪುವಿನ ಪತನಕ್ಕಾಗಿ ಸಹಕರಿಸಿದ ಮರಾಠರಿಗೂ ಹಾಗೂ ಹೈದರಾಬಾದಿನ ನಿಜಾಮನಿಗೂ ಕೆಲವು ಪ್ರದೇಶಗಳನ್ನು ಹಂಚಿದರು. ಉಳಿದ ಭಾಗವನ್ನು ಮೈಸೂರು ಸಂಸ್ಥಾನದ ಒಡೆಯರಿಗೆ ನೀಡಲಾಯಿತು. ಅಲ್ಲದೆ ಒಂದಷ್ಟು ಭಾಗವನ್ನು ತಮ್ಮ ನೇರವಾದ ಹಿಡಿತಕ್ಕೂ ತೆಗೆದುಕೊಳ್ಳಲಾಯಿತು. ಜಹಗೀರುಗಳ ರೂಪದಲ್ಲೂ ಕೆಲವು ಪ್ರದೇಶಗಳು ಹಂಚಲ್ಪಟ್ಟವು. ಒಟ್ಟಾರೆ ಕನ್ನಡಿಗರು ಭಾಗ-ಉಪವಿಭಾಗಗಳಾಗಿ ಹತ್ತು-ಹಲವು ಕಡೆಗೆ ಹಂಚಿಹೋದರು. ಈ ಬಗೆಯ ತುಂಡಾದ ವಿಭಾಗಗಳನ್ನು ೨೨ ಎಂದು ಗುರುತಿಸಲಾಗಿದೆ. ಅವು ಈ ರೀತಿಯಾಗಿ ವಿಭಜಿತವಾಗಿದ್ದವು.

೧. ಮುಂಬಯಿ ಕರ್ನಾಟಕ
೨. ಮದರಾಸು (ಬ್ರಿಟಿಷ್) ಕರ್ನಾಟಕ
೩. ಮೈಸೂರು ಸಂಸ್ಥಾನ
೪. ಕೊಡಗು
೫. ಹೈದರಾಬಾದ್ (ನಿಜಾಂ) ಕರ್ನಾಟಕ
೬. ಹೈದರಾಬಾದ್ ಕರ್ನಾಟಕದ ಜಹಗೀರು (ಕೊಪ್ಪಳ, ಗದ್ವಾಲ)
೭. ಕಂಟೋನ್ಮೆಂಟ್ (ದಂಡು) ಕರ್ನಾಟಕ
೮. ಕೊಲ್ಹಾಪುರ ಸಂಸ್ಥಾನ
೯. ಕೊಲ್ಹಾಪುರ ಸಂಸ್ಥಾನದ ಜಹಗೀರುಗಳು

೧೦. ಸಾಂಗ್ಲಿ
೧೧. ಔಂಧ್
೧೨. ಮೀರಜ್ (ಹಿರಿ)
೧೩. ಮೀರಜ್ (ಕಿರಿ)
೧೪. ಕುರಂದವಾಡ (ಹಿರಿ)
೧೫. ಕುರಂದವಾಡ (ಕಿರಿ)
೧೬. ಜಮಖಂಡಿ
೧೭. ಮುಧೋಳ
೧೮. ರಾಮದುರ್ಗ
೧೯. ಅಕ್ಕಲಕೋಟೆ
೨೦. ಜತ್ತ
೨೧. ಸವಣೂರು
೨೨. ಸೊಂಡೂರು

ಈ ಮೇಲಿನ ೨೨ ಭಾಗಗಳಲ್ಲಿನ ಕನ್ನಡಿಗರು ತಮ್ಮದೇ ಆದ ರೀತಿಯಲ್ಲಿ ಗುರುತಿಸಿಕೊಳ್ಳುವುದು ಸಾಧ್ಯವಾಗದ ಮಾತಾಗಿತ್ತು. ಸಾಂಸ್ಕೃತಿಕವಾಗಿ ಕನ್ನಡಿಗರು **ಕರ್ನಾಟಕ** ಎಂಬ ಹೆಸರನ್ನು ಹೊಂದಿದವರಾಗಿದ್ದರೂ ಈ ಘಟ್ಟದಲ್ಲಿ ಅಖಂಡವಾಗಿ ಉಳಿದಿರಲಿಲ್ಲ. ಇತರೆ ಭಾಷೆಗಳನ್ನು ಆಡುತ್ತಿದ್ದವರೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕಾದ ತೊಡಕು ಕಾಣಿಸಿಕೊಂಡಿತು. ಮರಾಠಿ (**ಮುಂಬಯಿ ಕರ್ನಾಟಕ**), ತಮಿಳು (**ಮದ್ರಾಸ್ ಅಥವಾ ಬ್ರಿಟಿಷ್ ಕರ್ನಾಟಕ**) ಹಾಗೂ ತೆಲುಗು ಮತ್ತು ಉರ್ದು ಮಾತನಾಡುವವರ (**ಹೈದರಾಬಾದ್ ಸಂಸ್ಥಾನ**) ನಡುವೆ ಅಲ್ಪಸಂಖ್ಯಾತರಾಗಿದ್ದ ಕನ್ನಡಿಗರು ಭಾಷಿಕ ದಬ್ಬಾಳಿಕೆಗೆ ಒಳಗಾಗಿದ್ದೂ ಉಂಟು. ಇದರ ಜೊತೆಗೆ ಸಾಂಸ್ಕೃತಿಕವಾದ ಕೀಳರಿಮೆಗಳು ಸಹ ಮೂಡ ಲಾರಂಭಿಸಿದ್ದವು. ಈ ದಿಸೆಯಲ್ಲಿ ಮತ್ತೆ **ಕನ್ನಡಿಗರೆಲ್ಲ ಆಡಳಿತಾತ್ಮಕವಾಗಿ ಒಂದುಗೂಡಲು ಪ್ರಯತ್ನಿಸಿದ್ದೇ ಏಕೀಕರಣ ಚಳವಳಿ.** ಭಾಷೆಯ ಆಧಾರದ ಮೇಲೆ 'ತಾವೆಲ್ಲರೂ ಒಂದೇ' ಎಂಬ ಭಾವನೆಯನ್ನು ಮೂಡಿಸಬೇಕಿದ್ದುದು ಅನಿವಾರ್ಯ ಆಗಿತ್ತು. ಈ ಕೆಲಸವನ್ನು ಆಗುಮಾಡಿಸಿದವರು ಕನ್ನಡದ ಸಾಹಿತಿಗಳು ಮತ್ತು ಕಲಾವಿದರು. ತಮ್ಮ ಕತೆ, ಕವನ, ನಾಟಕ, ಕಾದಂಬರಿ, ವೈಚಾರಿಕ ಬರೆಹಗಳ ಮೂಲಕ **ಕರ್ನಾಟಕತ್ವವನ್ನು** ಮೂಡಿಸುವ ಪ್ರಯತ್ನಗಳು ನಡೆದವು. ಈ ಪ್ರಯತ್ನಗಳಿಗೆ ಹಿನ್ನೆಲೆಯಾಗಿದ್ದುದು ಪಾಶ್ಚಾತ್ಯ ಸಂಶೋಧಕರ ಹಾಗೂ ವಿದ್ವಾಂಸರ ಕನ್ನಡ -**ಕರ್ನಾಟಕತ್ವವನ್ನು** ಕುರಿತ ಸಾಧನೆಗಳು. ಅಂದರೆ **ಬಿ.ಎಲ್. ರೈಸ್, ಈ.ಪಿ. ರೈಸ್, ಫ್ಲೀಟ್, ರೀವ್, ಕಿಟ್ಟೆಲ್, ಜೆಗ್ಲರ್, ಸಿವೆಲ್** ಮೊದಲಾದ ವಿದ್ವಾಂಸರು ನಾಡಿನ ಸಾಹಿತ್ಯ, ಚರಿತ್ರೆ, ಸಂಸ್ಕೃತಿ ವಿಚಾರಗಳನ್ನು ಕುರಿತು ಉಂಟುಮಾಡಿದ

ಅರಿವು. ಈ ಅರಿವು ಮುಂದೆ ಆಧುನಿಕ ಕನ್ನಡ ಸಾಹಿತ್ಯ-ಸಂಸ್ಕೃತಿ ಚಿಂತನೆಗಳ ಬರೆಹಗಾರರಿಗೆ ಮಾರ್ಗದರ್ಶನ ಆಯಿತು.

೧೮೫೭ ರ 'ಸಿಪಾಯಿದಂಗೆ' ಘಟನೆಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯನ್ನು ಕೊನೆಗೊಳಿಸಿತು. ೧೮೫೮ ರ ಸನ್ನದಿನ ಪ್ರಕಾರ ಭಾರತವು ಬ್ರಿಟನ್ನಿನ ರಾಣಿ ವಿಕ್ಟೋರಿಯಾಳ ನೇರ ಹಿಡಿತಕ್ಕೆ ಒಳಗಾಯಿತು. ಇದರಿಂದಾಗಿ ಬ್ರಿಟಿಷರು ರಾಜಕೀಯ ನೆಲೆಗಳಲ್ಲಿ ಭಾರತವನ್ನು ಅನೇಕ ಸ್ಥಿತ್ಯಂತರಗಳಿಗೆ ಒಳಗು ಮಾಡಿದರು. ತುಂಡಾದ ಭಾರತ ದಲ್ಲಿನ ಭಿನ್ನ ಭಾಷಿಕರು ಅನೇಕ ರೀತಿಯಲ್ಲಿ ಸಾಂಸ್ಕೃತಿಕ ಆಘಾತಗಳಿಗೆ ಒಳಗಾಗಬೇಕಾಯಿತು. ಇಂಥ ಛಿದ್ರತೆಯನ್ನು ಬ್ರಿಟಿಷ್ ಆಳರಸರಲ್ಲಿ ಒಬ್ಬನಾದ ಜ್ಞಾನ್ ಬ್ರೈಟ್ ಮೊದಲಬಾರಿಗೆ ವಿರೋಧಿಸಿದ. ಅಲ್ಲದೆ ಇವನು 'ಭಾಷೆ'ಯನ್ನೇ ಮೂಲಾಧಾರವನ್ನಾಗಿ ಇಟ್ಟುಕೊಂಡು ಭಾರತವನ್ನು ವಿವಿಧ ಘಟಕಗಳನ್ನಾಗಿ ವಿಭಜಿಸಲು ಸೂಚಿಸಿದ. ಇದನ್ನು ಬಿಟ್ಟರೆ ಮತ್ತೆ ಭಾಷಿಕ ನೆಲೆಯ ಏಕೀಕರಣದ ಕೂಗು ಕಾಣಿಸಿಕೊಂಡದ್ದು ೧೮೭೪ ರಲ್ಲಿ. ಅಂದರೆ ಅಸ್ಸಾಮಿ ಭಾಷಿಕರೊಡನೆ ಬಂಗಾಳ ಪ್ರಾಂತ್ಯದ ಸಿಲ್ಹೆಟ್ ಜಿಲ್ಲೆಯವರನ್ನು ಸೇರಿಸಿದಾಗ. ಅಸ್ಸಾಮಿಗಳ ಅಸಮಾಧಾನದೊಂದಿಗೆ ಮೊಟ್ಟಮೊದಲ ಬಾರಿಗೆ ಭಾಷಾ ಚಳವಳಿ ಭಾರತದಲ್ಲಿ ಆರಂಭ ಆಯಿತು. ಬಂಗಾಳ, ಬಿಹಾರ, ಒರಿಸ್ಸಾ (ಉತ್ಕಲ)ಗಳನ್ನು ಒಂದೇ ಆಡಳಿತದ ಅಡಿಯಲ್ಲಿ ತಂದುದು ಈ ಬಗೆಯ ಚಳವಳಿಗಳಿಗೆ ಚಾಲನೆಕೊಟ್ಟಿತು.

ಆರಂಭಿಕ ಪ್ರಯತ್ನಗಳು

ಕನ್ನಡ ಮಾತನಾಡುವ ಜನರು ಪ್ರಧಾನವಾಗಿ ಐದು ಆಡಳಿತ ಘಟಕಗಳಲ್ಲಿ ಹರಿದು ಹಂಚಿಹೋಗಿದ್ದರು. ಈ ಐದು ಘಟಕಗಳು ಭಾರತಕ್ಕೆ ಸ್ವಾತಂತ್ರ್ಯ ಬಂದಾಗಲೂ (೧೯೪೭) ಸಹ ಹಾಗೆಯೇ ಮುಂದುವರೆದಿದ್ದವು. ಮುಂಬಯಿ (ಬೆಳಗಾಂ, ಧಾರವಾಡ, ಬಿಜಾಪುರ, ಉತ್ತರ ಕನ್ನಡ), ಹೈದರಾಬಾದ್ (ಗುಲ್ಬರ್ಗಾ, ರಾಯಚೂರು, ಬೀದರ್), ಮದ್ರಾಸ್ (ದಕ್ಷಿಣ ಕನ್ನಡ, ಬಳ್ಳಾರಿ) ಕರ್ನಾಟಕದ ಕನ್ನಡಿಗರು ಮರಾಠಿ, ತೆಲುಗು, ಉರ್ದು, ತಮಿಳು, ಮಲಯಾಳ ಭಾಷಿಕರಿಂದ ಸುತ್ತುವರೆಯಲ್ಪಟ್ಟರು. ಹಳೆಯ ಮೈಸೂರು ಸಂಸ್ಥಾನದ ಒಂಭತ್ತು ಜಿಲ್ಲೆಗಳು (ಬೆಂಗಳೂರು, ಮಂಡ್ಯ, ಕೋಲಾರ, ಮೈಸೂರು, ಹಾಸನ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ) ಹಾಗೂ ಕೊಡಗು ಇನ್ನುಳಿದ ಎರಡು ಘಟಕ ಗಳಾಗಿದ್ದವು. ಮುಂಬಯಿ ಕರ್ನಾಟಕದ ಭಾಗದವರಿಗೆ ಬೇರೆ ಭಾಷಿಕರ ಒತ್ತಡ, ದಬ್ಬಾಳಿಕೆ ಹೆಚ್ಚಾಗಿತ್ತು. ಅಂದರೆ ಮರಾಠಿ ಭಾಷೆಯ ಪ್ರಭಾವ ಈ ಭಾಗದವರನ್ನು ನಾಡಿನ ಏಕೀಕರಣಕ್ಕಾಗಿ ತೀವ್ರವಾಗಿ ಹಾಗೂ ಮೊಟ್ಟಮೊದಲು ಪ್ರತಿಕ್ರಿಯಿಸುವಂತೆ ಮಾಡಿತು. ಈ ಭಾಗದ ಶೈಕ್ಷಣಿಕ ವಲಯ ಮರಾಠಿಮಯವಾಗಿದ್ದುದರಿಂದ ಕನ್ನಡ ಶಾಲೆಗಳು ತೀವ್ರ ಸ್ಪರ್ಧೆಯನ್ನು ಎದುರಿಸಿದವು. ಶಾಂತಕವಿಗಳಂಥ ಕನ್ನಡ ಮಾಸ್ತರರು ಈ ಭಾಗದಲ್ಲಿ ಮರಾಠಿ ಪ್ರಭಾವವನ್ನು ಮಟ್ಟಿ ಹಾಕಲು ತಮ್ಮ ನಿರಂತರ ಕಾರ್ಯಕ್ರಮಗಳ ಮುಖೇನ ಪ್ರಯತ್ನಿಸಿದ್ದೂ ಉಂಟು. ಅಲ್ಲದೆ ೧೮೫೭ ರ ವೇಳೆಗೆ ಡೆಪ್ಯೂಟಿ ಚೆನ್ನಬಸಪ್ಪ ಅವರು ಶಿಕ್ಷಣ ಅಧಿಕಾರಿಗಳಾಗಿ ಬಂದು

ಮುಂಬಯಿ ಕರ್ನಾಟಕದಲ್ಲಿ ಕನ್ನಡದ ಕೆಲಸಗಳಿಗೆ ಚಾಲನೆ ನೀಡಿದರು. ಇವರು ಕನ್ನಡ ಪರವಾದ ಚಳವಳಿಯನ್ನೇ ಹುಟ್ಟುಹಾಕಿದರು. ಅಲ್ಲದೆ ಎಲ್ಲ ಬಗೆಯ ಲೆಖ್ಖ-ಪತ್ರಗಳನ್ನು, ದಾಖಲೆಗಳನ್ನು ಸಹ ಕನ್ನಡದಲ್ಲಿಯೆ ಇರಿಸಲು ಶ್ರಮಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷಾ ಮಾಧ್ಯಮವನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಿದರು. ಸಾಮಾನ್ಯವಾಗಿ ಇಲ್ಲಿಂದಲೇ ಕರ್ನಾಟಕದ ಏಕೀಕರಣ ಪರವಾದ ಧ್ವನಿಯನ್ನು ಗುರುತಿಸ ಲಾಗುತ್ತಿದೆ. ಮರಾಠಿ, ಗುಜರಾತಿ, ಬಂಗಾಳಿ ಭಾಷೆಗಳ ಪರಿಣಾಮವೂ ಸಹ ಮುಂಬಯಿ ಕರ್ನಾಟಕದ ಕನ್ನಡಿಗರನ್ನು ಈ ದಿಸೆಯಲ್ಲಿ ತೀವ್ರವಾಗಿ ಆಲೋಚಿಸುವಂತೆ ಮಾಡಿತ್ತು.

ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಪಾತ್ರ

ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ ೧೮೯೦ ರಲ್ಲಿ **ಕರ್ನಾಟಕ ವಿದ್ಯಾವರ್ಧಕ ಸಂಘ** ಹುಟ್ಟಿಕೊಂಡಿತು. ಭಾಷಾಭಿಮಾನದ ಮೂಲ ಬೀಜಾಂಕುರ ಆದದ್ದು ಈ ಸಂಘದಿಂದಲೇ. **ರಾ.ಹ. ದೇಶಪಾಂಡೆ** ಅವರಂಥ ಕನ್ನಡಾಭಿಮಾನಿಗಳು **ಧಾರವಾಡದ** ನೆಲದಿಂದ ಈ ಪ್ರಕ್ರಿಯೆಗಳಿಗೆ ಚಾಲನೆ ಕೊಟ್ಟರು. ಅದೇ ರೀತಿಯಲ್ಲಿ ನಾಡು-ನುಡಿ ಚಿಂತನೆಗಳನ್ನು ಹುಟ್ಟು ಹಾಕಲು **ಕರ್ನಾಟಕ ಭಾಷೋಜ್ಜೀವಿನ ಸಭಾವು** ಸಹ ೧೮೯೭ ರಲ್ಲಿ ಹುಟ್ಟಿಕೊಂಡಿತು. ಧಾರವಾಡದಲ್ಲಿ ಮೊಟ್ಟಮೊದಲ ಬಾರಿಗೆ ೧೯೦೩ ರಲ್ಲಿ **ಬೆನಗಲ್ ರಾಮರಾಯರು** ಏಕೀಕರಣದ ಕಲ್ಪನೆಯನ್ನು ಮೂಡಿಸುವ ಭಾಷಣ ಮಾಡಿದರು. ಉತ್ತರ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕಗಳ ಒಂದುಗೂಡುವಿಕೆಯ ಅನಿವಾರ್ಯತೆಯ ಬಗೆಗೆ ಕನ್ನಡಿಗರ ಗಮನ ಸೆಳೆದರು. 'ವಿದ್ಯಾವರ್ಧಕ ಸಂಘ'ದಿಂದ ಪ್ರಕಟ ಆಗುತ್ತಿದ್ದ **ವಾಗ್ಭೂಷಣ** ಎಂಬ ಮಾಸಿಕವು ನಾಡು-ನುಡಿಗಳ ಬಗೆಗೆ ಕನ್ನಡಿಗರನ್ನು ಆಲೋಚಿಸುವಂತೆ ಪ್ರೇರಣೆ ನೀಡುತ್ತಿತ್ತು. ಈ ಪತ್ರಿಕೆಯಲ್ಲಿ **ಆಲೂರ ವೆಂಕಟರಾಯರು** ('ಕನ್ನಡ ಕುಲಪುರೋಹಿತ'ರೆಂದೇ ಖ್ಯಾತಿ ಪಡೆದವರು) ೧೯೦೭ ರಲ್ಲಿ (ಫೆಬ್ರವರಿ ಸಂಚಿಕೆ) ಮೊಟ್ಟಮೊದಲ ಬಾರಿಗೆ 'ಕನ್ನಡಿಗರ ಏಕೀಕರಣ'ವನ್ನು ಕುರಿತು ಬರೆದರು. ಇಂಥ ಹತ್ತು ಹಲವು ಕಾರ್ಯ ಚಟುವಟಿಕೆಗಳು ಮುಂಬಯಿ ಕನ್ನಡಿಗರನ್ನು ಏಕೀಕರಣಕ್ಕೆ ಸಜ್ಜುಗೊಳ್ಳುವಂತೆ ಮಾಡಿದವು. ಅಲ್ಲದೆ ಇತರೆ ಪ್ರಾಂತ್ಯದವರನ್ನು ಸೆಳೆದುಕೊಳ್ಳುವಂತೆ ಮಾಡಿದ್ದೂ ಉಂಟು.

೧೯೦೫ ರ 'ಬಂಗಾಳ ವಿಭಜನೆ'ಯ ಘಟನೆಯು ಕೇವಲ ಬಂಗಾಳಿಗರನ್ನಷ್ಟೇ ಅಲ್ಲದೆ ಇತರೆ ಭಾಷಾಪ್ರೇಮಿಗಳನ್ನು ಸಹ ಜಾಗೃತಗೊಳ್ಳುವಂತೆ ಮಾಡಿತು. ೧೯೧೧ ರಲ್ಲಿ ಈ ವಿಭಜನೆ ರದ್ದಾಗಿ ಬಂಗಾಳ ಒಂದುಗೂಡುವವರೆಗೂ ವಿಭಿನ್ನ ರೀತಿಯ ಚಳವಳಿಗಳನ್ನು ಬಂಗಾಳಿಗರು ಹುಟ್ಟುಹಾಕಿದರು. ಇವುಗಳನ್ನು ಕನ್ನಡಿಗರು ಬಹಳ ಆಪ್ತವಾಗಿ ಗಮನಿಸಿದ್ದೂ ಉಂಟು. ೧೯೦೭ ರಲ್ಲಿ ಅಖಿಲ **ಕರ್ನಾಟಕ ಗ್ರಂಥಕರ್ತರ ಸಮ್ಮೇಳನವೊಂದು** ಧಾರವಾಡದಲ್ಲಿ ನಡೆಯಿತು. ಇದರಲ್ಲಿ ವಿವಿಧ ಕನ್ನಡ ಪ್ರದೇಶಗಳಲ್ಲಿನ ಸಾಹಿತಿಗಳು, ಪ್ರಕಾಶಕರು ಒಂದೆಡೆ ಸೇರಿ ಪ್ರತಿ ವರ್ಷವೂ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿ ವಿಚಾರಗಳಿಗೆ ಸಂಬಂಧಿಸಿದ ಪ್ರಕಟನೆಗಳನ್ನು ಹೊರತರುವುದರ ಬಗೆಗೆ ಚಿಂತನೆ ನಡೆಸಿದರು. ಇದರ ಎರಡನೆಯ ಸಭೆ,

ಮೈಸೂರ ಸಂಸ್ಥಾನಿಕರ ಅಸಮಾಧಾನದ ನಡುವೆಯೆ ಧಾರವಾಡದಲ್ಲಿ ೧೯೦೮ ರಲ್ಲಿ ನಡೆಯಿತು. ಇದರ ನೇತೃತ್ವ ಮತ್ತೆ ಆಲೂರರದೇ ಆಗಿತ್ತು. ಮೂರನೆಯ ಸಭೆಯನ್ನು ಹಠ ತೊಟ್ಟು ಮೈಸೂರು ಸಂಸ್ಥಾನದಲ್ಲಿಯೆ ನಡೆಸಲು ತೀರ್ಮಾನಿಸಲಾಯಿತು. ಹೀಗಾಗಿ **ಬೆಂಗಳೂರಿನ** ಕೋಟೆ ಹೈಸ್ಕೂಲಿನಲ್ಲಿ ಈ ಸಭೆ ನಾಲ್ಕು ದಿನಗಳ ಕಾಲ ನಡೆಯಿತು. ಇದರ ಪರಿಣಾಮವೇ ೫.೫.೧೯೧೫ ರಂದು ಹುಟ್ಟಿದ **ಕರ್ಣಾಟಕ ಸಾಹಿತ್ಯ ಪರಿಷತ್ತು** (ಮುಂದೆ 'ಕನ್ನಡ ಸಾಹಿತ್ಯ ಪರಿಷತ್ತು' ಆಯಿತು). ಈ ಸಂಸ್ಥೆ ಮುಂದೆ ಪ್ರತಿವರ್ಷವೂ ಛಿದ್ರವಾಗಿದ್ದ ಕನ್ನಡದ ಭೂಪ್ರದೇಶಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸತೊಡಗಿತು. ಈ ಸಮ್ಮೇಳನ ಗಳಲ್ಲಿ 'ಕನ್ನಡ-ಕರ್ನಾಟಕ' ಪರವಾದ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಇದರಿಂದ ನಾಡಿನ ಏಕೀಕರಣದ ಪ್ರಕ್ರಿಯೆಗೆ ಎಲ್ಲ ಪ್ರದೇಶಗಳ ಕನ್ನಡಿಗರಿಂದಲೂ ಬೆಂಬಲ ದೊರೆಯುವಂತೆ ಆಯಿತು.

೧೯೧೭ ರ ವೇಳೆಗೆ ಆಲೂರ ವೆಂಕಟರಾಯರ **ಕರ್ನಾಟಕ ಗತವೈಭವ**ದಂಥ ಕೃತಿಗಳು ಪ್ರಕಟಗೊಂಡವು. ಇದರಿಂದ ಕನ್ನಡಿಗರು ತಮ್ಮದೇ ಆದ ಚರಿತ್ರೆ-ಸಂಸ್ಕೃತಿಗಳಿಗಾಗಿ 'ಕರ್ನಾಟಕತ್ವ'ದ ಪರಿಕಲ್ಪನೆಯನ್ನು ಮೂಡಿಸಿಕೊಂಡು ಕ್ರಿಯಾಶೀಲರಾದರು. **ಮುದವೀಡು ಕೃಷ್ಣರಾವ್, ಮುದವೀಡು ವೆಂಕಟರಾವ್, ಕಡಪಾ ರಾಘವೇಂದ್ರರಾವ್, ಆಲೂರ ವೆಂಕಟರಾವ್, ಹೊನ್ನಾಪುರಮಠ ಗದಿಗೆಯ್ಯ, ಅಬ್ಬಿಗೇರಿ ಪಾಟೀಲ ಸಂಗನಗೌಡ, ಶೇಷಗಿರಿ ರಾಮಚಂದ್ರರಾವ್, ಜೋಷಿ ವೆಂಕಟರಾವ್, ನರಗುಂದಕರ, ರಾಜಪುರೋಹಿತ** ಮೊದಲಾದವರು ಈ ಭಾಗದ 'ಕರ್ನಾಟಕತ್ವ'ದ ಚಳವಳಿಯ ಜೊತೆಗೆ ರಾಷ್ಟ್ರೀಯ ಹೋರಾಟದ ಪ್ರಕ್ರಿಯೆಗೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಏಕೆಂದರೆ ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣದ ಚಳವಳಿಗಳು ಒಟ್ಟೊಟ್ಟಿಗೆ ಸಾಗಬೇಕಾದ ಅನಿವಾರ್ಯತೆ ಆ ಹೊತ್ತಿನದು. ಮುಂಬಯಿ ಕರ್ನಾಟಕದಲ್ಲಿ **ಬಾಲಗಂಗಾಧರ** ತಿಲಕರ ಪ್ರಭಾವ ಅದರಲ್ಲೂ ಧಾರವಾಡ ಪರಿಸರದ ಕನ್ನಡಿಗರ ಮೇಲೆ ತೀವ್ರ ಪರಿಣಾಮ ಬೀರಿತ್ತು. **ಗಂಗಾಧರ ರಾವ್ ದೇಶಪಾಂಡೆ, ಶ್ರೀನಿವಾಸರಾವ್ ಕೌಜಲಗಿ** ಮೊದಲಾದವರು ಈ ಭಾಗದ ಕನ್ನಡಿಗರನ್ನು ರಾಷ್ಟ್ರೀಯ ಹೋರಾಟದಲ್ಲಿ ಲೀನವಾಗುವಂತೆ ಮಾಡಿದ್ದರು. ಇದರ ಜೊತೆಗೆ ಸಂಸ್ಥಾನಿ ಕನ್ನಡಿಗರು ತಮ್ಮದೇ ಆದ ತೊಡಕುಗಳ ನಡುವೆಯೂ **ಕನ್ನಡ-ಕರ್ನಾಟಕತ್ವ**ಕ್ಕಾಗಿ ಹಾತೊರೆದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಏಕೀಕರಣ ಚಳವಳಿ

ಏಕೀಕರಣದಂಥ ರಾಜಕೀಯ ಚಳವಳಿಗೆ ಒಂದು ರಾಜಕೀಯವಾದ ಸಂಸ್ಥೆ ಬೇಕಾಗಿತ್ತು. ಇದನ್ನು ಹೊನ್ನಾಪುರಮಠ ಅವರನ್ನೂ ಒಳಗೊಂಡಂತೆ ಧಾರವಾಡದ ಮುಂದಾಳುಗಳು **ಕರ್ನಾಟಕ ಸಭಾ** (೧೯೧೭)ವನ್ನು ಹುಟ್ಟುಹಾಕಿದರು. **ಕನ್ನಡಿಗರ ಕರ್ತವ್ಯ** ಎಂಬ ಕೃತಿಯನ್ನು ಪ್ರಕಟಿಸಿದ ಈ ಸಂಸ್ಥೆ ಏಕೀಕರಣಕ್ಕಾಗಿ ಸಭೆ-ಸಮಾರಂಭಗಳನ್ನು ನಡೆಸಿ ಅಭಿಪ್ರಾಯ ಮೂಡಿಸಿದ್ದು ಗಮನಾರ್ಹ. ಇದರಿಂದ **ಭಾರತ ರಾಷ್ಟ್ರೀಯ ಕಾಂಗ್ರೆಸ್**‌ನ ಅಧಿವೇಶನಗಳಲ್ಲೂ

ಕರ್ನಾಟಕ ಪ್ರಾಂತ್ಯ ರಚನೆ ಬಗೆಗೆ ಪ್ರಸ್ತಾವಗಳು ಮಂಡಿತವಾಗತೊಡಗಿದವು. ಇದರ ಪರಿಣಾಮವಾಗಿ ೧೯೨೦ರ **ನಾಗಪುರ ಕಾಂಗ್ರೆಸ್** ಅಧಿವೇಶನದಲ್ಲಿ **ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ** (ಕೆ.ಪಿ.ಸಿ.ಸಿ.) ಶಾಖೆ ಅಸ್ತಿತ್ವಕ್ಕೆ ಬಂದಿತು. ೨೧ ಭಾಷೆಗಳ ಆಧಾರದ ಮೇಲೆ ಈ ಪ್ರದೇಶ ಕಾಂಗ್ರೆಸ್ ಸಮಿತಿಗಳು ಅಸ್ತಿತ್ವಕ್ಕೆ ಬಂದಿದ್ದವು. ಇದಕ್ಕೆ ಮೂಲ ಕಾರಣಕರ್ತರು **ಗಾಂಧೀಜಿ** ಅವರು. ಈ ನಡುವೆ ಮಾಜಿ ದಿವಾನರಾಗಿದ್ದ **ವಿ.ಪಿ. ಮಾಧವರಾಯರ** ಅಧ್ಯಕ್ಷತೆಯಲ್ಲಿ ರಾಜಕೀಯ-ಆಡಳಿತಾತ್ಮಕ ವಿಚಾರಗಳ ಮಂಡನೆಗಾಗಿ **ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತು** (೧೯೨೦) ಅಸ್ತಿತ್ವಕ್ಕೆ ಬಂದಿತು.

೧೯೨೪ ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ೩೯ನೆಯ ಅಧಿವೇಶನವು ಬೆಳಗಾಂನಲ್ಲಿ ನಡೆಸಲು ತೀರ್ಮಾನಿಸಲಾಯಿತು. ಈ ಅವಕಾಶವನ್ನು ಬಳಸಿಕೊಂಡ ಏಕೀಕರಣ ವಾದಿಗಳು **ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು**ನ್ನು ನಡೆಸಿದರು. ಅಲ್ಲದೆ ಇಲ್ಲಿ **ಕರ್ನಾಟಕ ಏಕೀಕರಣ ಸಂಘವೂ** ಸಹ ಅಸ್ತಿತ್ವಕ್ಕೆ ಬಂದಿತು. **ಶಂಕರರಾವ್ ಜೋಷಿ, ಮಂಗಳವೇಡೆ ಶ್ರೀನಿವಾಸರಾವ್** ಮೊದಲಾದವರ ಸಹಕಾರಗಳೊಂದಿಗೆ **ಕಡಪಾ ರಾಘವೇಂದ್ರರಾಯರು** ಬೆಳಗಾಂ ಅಧಿವೇಶನದ ಯಶಸ್ಸಿಗೆ ಕಾರಣರಾದರು. ಇಲ್ಲಿ ನಡೆದ ಏಕೀಕರಣ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು **ಸರ್ ಸಿದ್ದಪ್ಪ ಕಂಬಳಿ**. ಮುಂದೆ ಎರಡು ವರುಷಗಳಿಗೊಮ್ಮೆ ಏಕೀಕರಣದ ಸಮ್ಮೇಳನವನ್ನು ನಡೆಸಲು ನಿರ್ಣಯಿಸಿದ ಈ ಸಮ್ಮೇಳನದಲ್ಲಿ **ಕನ್ನಡಿಗನ ಸರ್ವಸ್ವ** (ಸಂಯುಕ್ತ ಕರ್ನಾಟಕ ಪ್ರಾಂತ) ಎಂಬ ಕೃತಿಯನ್ನು ಸಹ ಬಿಡುಗಡೆ ಮಾಡಲಾಯಿತು. **ಹುಯಿಲಗೋಳ ನಾರಾಯಣರಾಯರು** ಈ ಸಮ್ಮೇಳನದಲ್ಲಿ ಹಾಡಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು..." ಎಂಬ ನಾಡಗೀತೆ ಏಕೀಕರಣಕ್ಕಾಗಿ ಪ್ರೇರಣೆ ನೀಡಿತು. **ಗಾಂಧೀಜಿ** ಅವರು ಈ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಬೆಂಬಲಿಸಿದ್ದು ಗಮನಾರ್ಹವಾದುದು.

ಕಾಂಗ್ರೆಸ್ ಹಾಗೂ **ಏಕೀಕರಣ ಸಂಘಗಳು** **ಹೊಸಕೊಪ್ಪ ಕೃಷ್ಣರಾವ್, ಕೌಜಲಗಿ ಶ್ರೀನಿವಾಸರಾವ್, ಚಿಕ್ಕೋಡಿ ಪಂಡಿತರಾಯಪ್ಪ** ಹಾಗೂ **ಆರ್.ಆರ್. ದಿವಾಕರ್** ಅವರುಗಳ ನೇತೃತ್ವದಲ್ಲಿ **ನೆಹರು ಸಮಿತಿ** (೧೯೨೮)ಗೆ ಏಕೀಕರಣದ ಅಹವಾಲುಗಳನ್ನು ಮಂಡಿಸಿದವು. **ಮೋತಿಲಾಲ್ ನೆಹರು** ಅವರ ಅಧ್ಯಕ್ಷತೆಯ ಈ ಸಮಿತಿ **ಆಂಧ್ರದ** ಬಗೆಗೆ ಸ್ಪಷ್ಟವಾಗಿತ್ತೇ ವಿನಃ ಕರ್ನಾಟಕದ ಬಗೆಗೆ ಒಲವು ತೋರಿಸಿರಲಿಲ್ಲ. ಮುಂದೆ ೧೯೨೮-೨೯ ರಲ್ಲಿ **ಸೈಮನ್ ಕಮಿಷನ್**ಗೂ ಸಹ ಏಕೀಕರಣದ ಪ್ರಸ್ತಾವವನ್ನು ಸಲ್ಲಿಸಲಾಯಿತು. ಇದು ಸಹ ಪ್ರಯೋಜನಕ್ಕೆ ಬರಲಿಲ್ಲ. ಕೊನೆಗೆ ೧೯೩೧ ರಲ್ಲಿ ನಡೆದ **ದುಂಡುಮೇಜಿನ ಸಮ್ಮೇಳನ** (ಲಂಡನ್)ದಲ್ಲಿ ನಾಡಿನ ಏಕೀಕರಣದ ಬಗೆಗೆ ಒತ್ತಾಯಿಸಲಾಯಿತು. ಕರ್ನಾಟಕದಿಂದ ಈ ಸಮ್ಮೇಳನಕ್ಕೆ **ಬೆನಗಲ್ ರಾಮರಾವ್, ಬೆನಗಲ್ ಶಿವರಾವ್** ಹಾಗೂ **ಮಿರ್ಜಾ ಇಸ್ಮಾಯಿಲ್**ರು ಭಾಗವಹಿಸಿದ್ದರು.

ಕರ್ನಾಟಕ, ಆಂಧ್ರ ಹಾಗೂ ಕೇರಳ ರಾಜ್ಯಗಳ ಅಸ್ತಿತ್ವಕ್ಕಾಗಿ ಜನರ ಚಳವಳಿ ತೀವ್ರವಾಯಿತು. ಸಿಂಧ್ ಹಾಗೂ ಒರಿಸ್ಸಾಗಳು ಈ ವೇಳೆಗಾಗಲೇ ಅಸ್ತಿತ್ವಕ್ಕೆ ಬಂದಿದ್ದುದು ಇನ್ನಷ್ಟು ಹುರುಪು ಹೊಂದುವಂತೆ ಮಾಡಿತ್ತು. ೧೦.೧೦.೧೯೩೭ರ ದಿನವನ್ನು ಏಕೀಕರಣ ದಿನವನ್ನಾಗಿ ಆಚರಿಸಿದ ಕನ್ನಡಿಗರು ಕೇಂದ್ರ ಹಾಗೂ ಪ್ರಾಂತೀಯ ಹಂತಗಳಲ್ಲಿ ಏಕೀಕರಣದ ಸಾಕಾರತೆಗಾಗಿ ಒತ್ತಾಯಿಸಿದ್ದೂ ಉಂಟು. ೧೯೩೮ ರ ವೇಳೆಗೆ ಬೆಂಗಳೂರಿನಲ್ಲೂ ಏಕೀಕರಣ ಸಂಘ ಅಸ್ತಿತ್ವಕ್ಕೆ ಬಂದು ಚಳವಳಿಗೆ ಇನ್ನಷ್ಟು ಬೆಂಬಲ ದೊರೆತಂತೆ ಆಯಿತು. ಇದರ ಜೊತೆಗೆ ಕಡಪಾ ರಾಘವೇಂದ್ರರಾವ್, ಶಂ.ಬಾ. ಜೋಷಿ, ಆಲೂರ ವೆಂಕಟರಾವ್, ಬಿ.ಎಂ. ಶ್ರೀಕಂಠಯ್ಯ, ಅ.ನ. ಕೃಷ್ಣರಾವ್, ತಿ.ತಾ. ಶರ್ಮ, ಗೋವಿಂದ ಪೈ, ವಿ.ಕೃ. ಗೋಕಾಕ್, ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮಕಾರಂತ, ಬಿ. ಶಿವಮೂರ್ತಿ ಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರು ಆ ಹೊತ್ತಿನ ರಾಷ್ಟ್ರೀಯತೆ ಹಾಗೂ ಕರ್ನಾಟಕತ್ವದ ವಿಚಾರಗಳನ್ನು ಕುರಿತು ಬರೆಯಲಾರಂಭಿಸಿದರು. ಇವರು ತಮ್ಮ ಸೃಷ್ಟಿಶೀಲ ಬರೆಹ ಹಾಗೂ ವೈಚಾರಿಕತೆಯ ಮೂಲಕ ಕನ್ನಡಿಗರನ್ನು ಏಕೀಕರಣದ ಪ್ರಕ್ರಿಯೆಗೆ ಸಜ್ಜುಗೊಳಿಸುವ ದಿಸೆಯಲ್ಲಿ ಮುಂದುವರೆದಿದ್ದರು.

೧೯೪೭ ರಲ್ಲಿ ಭಾರತವು ಆಂಗ್ಲರಿಂದ ಮುಕ್ತವಾದ ಮೇಲೆ ಕಾಂಗ್ರೆಸ್, ಕಮುನಿಸ್ಟ್ ಪಕ್ಷಗಳಾದಿಯಾಗಿ ಈ ನಾಡು ಏಕೀಕರಣ ಆಗುವುದರ ಕಡೆಗೆ ಗಮನಹರಿಸಿದರು. ಆದರೆ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ತನ್ನ ಹಿಂದಿನ ತುರ್ತನ್ನು ವ್ಯಕ್ತಪಡಿಸಲು ಹಿಂದೇಟು ಹಾಕಿತು. ಇದರ ಪರಿಣಾಮವೇ ಏಕೀಕರಣವನ್ನು ಕುರಿತ ಹತ್ತು ಹಲವು ಆಯೋಗಗ ಅವುಗಳಲ್ಲಿ ಎಸ್.ಕೆ. ಧರ್ ಸಮಿತಿ (೧೯೪೮), ಜೆ.ವಿ.ಪಿ. (ಜವಹಾರ್‌ಲಾಲ್‌ನೆಹರು, ವಲ್ಲಭಬಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ) ಸಮಿತಿ (೧೯೪೮), ಕೇಳ್ಕರ್ ಸಮಿತಿ ಹಾಗೂ ವಾಂಚೂ ಸಮಿತಿಗಳು (೧೯೫೩) ಪ್ರಮುಖವಾದುವು. ಇವುಗಳಲ್ಲಿ ಯಾವುದೂ ಸಹ ನಾಡಿನ ಏಕೀಕರಣದ ಸಾಕಾರತೆಯ ಬಗೆಗೆ ಸ್ಪಷ್ಟ ನಿಲುವು ತಾಳಲಿಲ್ಲ. ಕಾಂಗ್ರೆಸ್ ಸಮಿತಿಯವರು ಅದರಲ್ಲೂ ಎಸ್. ನಿಜಲಿಂಗಪ್ಪ ಮೊದಲಾದವರು ನೆಹರು ಅವರನ್ನು ಏಕೀಕರಣಕ್ಕಾಗಿ (ಕರ್ನಾಟಕ ಏಕೀಕರಣ ಮಹಾಸಮಿತಿಯ ಮೂಲಕವೂ ಸಹ) ಒತ್ತಾಯಿಸುತ್ತಲೇ ಇದ್ದರು. ಆದರೆ ನೆಹರು ಅವರು ೧೯೫೨ ರ ಅಕ್ಟೋಬರ್‌ನಲ್ಲಿ ಆಂಧ್ರದ ಪೊಟ್ಟಿ ಶ್ರೀರಾಮುಲು ಅವರ ಅಮರಣಾಂತ ಉಪವಾಸದ ಸಾವಿಗೆ ಮಾತ್ರ ಸ್ಪಂದಿಸಿದರು. ಹೀಗಾಗಿ ಎಸ್.ಕೆ. ಧರ್ ಹಾಗೂ ಕೆ.ಎಸ್. ವಾಂಚೂ ಸಮಿತಿಗಳು ಆಂಧ್ರದ ತೆಲುಗರ ಏಕೀಕರಣವನ್ನು (೧೯೫೩) ಮಾತ್ರ ಶಿಫಾರಸ್ಸು ಮಾಡಿ, ಆಗು ಮಾಡಿಸಿದ್ದವು. ಈ ಸಂದರ್ಭದಲ್ಲಿ ಅಂದರೆ ೧೯೫೩ ರಲ್ಲಿ ಬಳ್ಳಾರಿ ಹಳೆಯ ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡಿತು. ಈ ಸಂತಸದ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ರಂಜಾನ್‌ಸಾಬ್ ಎಂಬುವವರು ದುಷ್ಕರ್ಮಿಗಳ ಆಸಿಡ್ ಬಾಂಬಿಗೆ ಪ್ರಾಣ ತೆತ್ತದ್ದೂ ಉಂಟು. ಇದರಿಂದ ಮೈಸೂರಿನವರು ಸಹ ಏಕೀಕರಣದ ಪ್ರಕ್ರಿಯೆಗೆ (ಉತ್ತರದವರ ಕೂಗಿಗೆ) ಸ್ಪಂದಿಸುವಂತಾಯಿತು. ಚುನಾವಣೆಗಳಲ್ಲಿ ಆಶ್ವಾಸನೆ

ನೀಡಲಾಗಿದ್ದ ಏಕೀಕರಣದ ಆಶ್ವಾಸನೆಯನ್ನು ಕುರಿತು ಜವಾಹರ್‌ಲಾಲ್ ನೆಹರು ಗಮನಕ್ಕೆ ತಂದರೂ ಪ್ರಯೋಜನ ಆಗಲಿಲ್ಲ. ಆಂಧ್ರದ ರೀತಿಯಲ್ಲಿಯೆ ಜಕ್ಕಲಿಯಲ್ಲಿ ದೊಡ್ಡಮೇಟಿ ಅಂದಾನಪ್ಪ ಹಾಗೂ ಅದರಗುಂಚಿಯಲ್ಲಿ ಶಂಕರ ಕಲ್ಲನಗೌಡ ಪಾಟೀಲರು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು. ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು (ಅಕರಾನಿ), ಕಮುನಿಸ್ಟ್ ಪಕ್ಷ, ಪ್ರಜಾ ಸಮಾಜವಾದಿ ಪಕ್ಷ ಮೊದಲಾದ ಕಾಂಗ್ರೆಸೇತರ ಪಕ್ಷಗಳು ಸಹ ಈ ಸಂದರ್ಭದಲ್ಲಿ ಒತ್ತಡ ತಂದವು. ಕೊನೆಗೂ ಮಣಿದ ಪ್ರಧಾನಿ ನೆಹರು ಅವರು ೨೯.೧೨.೧೯೫೩ ರಂದು ಭಾಷಾವಾರು ಪ್ರಾಂತ್ಯಗಳ ಬಗೆಗೆ ವರದಿ ನೀಡಲು ಆಯೋಗ ವೊಂದನ್ನು ರಚಿಸಿದರು. 'ರಾಜ್ಯ ಪುನರ್ವಿಂಗಡಣಾ ಆಯೋಗ'ವೆಂದು ಕರೆಸಿಕೊಂಡ ಈ ಆಯೋಗವನ್ನು ಫಜಲ್ ಅಲಿ ಆಯೋಗವೆಂತಲೂ ಕರೆಯುತ್ತಾರೆ. ಏಕೆಂದರೆ ಇದರ ಅಧ್ಯಕ್ಷರು ಎಸ್. ಫಜಲ್ ಅಲಿ. ಎಚ್.ಎನ್. ಕುಂಜ್ರು ಮತ್ತು ಕೆ.ಎಂ. ಪಣ್ಣಿಕ್ಕರ್ ಇಬ್ಬರೂ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿ ದೇಶದಾದ್ಯಂತ ಪ್ರವಾಸ ಕೈಗೊಂಡು ಕನ್ನಡದ ಪ್ರದೇಶಗಳನ್ನು, ಏಕೀಕರಣವಾದಿಗಳನ್ನೂ, ಸಂಘ-ಸಂಸ್ಥೆಗಳನ್ನು ಸಂದರ್ಶಿಸಿ ಮಾಹಿತಿ-ಪುರಾವೆಗಳನ್ನು ಸಂಗ್ರಹಿಸಿತು. ಹಳೆಯ ಮೈಸೂರು ಹಾಗೂ ಉತ್ತರ ಭಾಗದ ಕನ್ನಡಿಗರ ನಡುವೆಯಿದ್ದ ಪೂರ್ವಾಗ್ರಹಪೀಡಿತ ಗುಮಾನಿಗಳನ್ನು (ಎರಡು ಕರ್ನಾಟಕಗಳ ಅಸ್ತಿತ್ವದ ಬಗೆಗೆ) ಸಹ ಪರಿಶೀಲಿಸಿತು. ಅಂತಿಮವಾಗಿ ಅದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ (೩೦.೯.೧೯೫೫) ನಾಡಿನ ಏಕೀಕರಣದ ವಿಚಾರಗಳಿಗೆ ಮಾನ್ಯತೆ ನೀಡಿತ್ತು. ಈ ವರದಿಯು ರಾಜ್ಯಸಭೆ ಮತ್ತು ಲೋಕಸಭೆಗಳೆರಡರಲ್ಲೂ ಒಪ್ಪಿಗೆ ಪಡೆದು ಕೊನೆಗೆ ಅಂದಿನ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರ ಸಹಿಯೊಂದಿಗೆ ಮಸೂದೆ 'ಕಾಯಿದೆ' ಆಯಿತು. ಈ ಕಾಯಿದೆಯ ಅನ್ವಯ ೧.೧೧.೧೯೫೬ ರಂದು ಕನ್ನಡ ಭೂಪ್ರದೇಶಗಳು ಹಾಗೂ ಕನ್ನಡಿಗರು ಒಂದೇ ಆಡಳಿತದಡಿಗೆ ಬಂದರು. ಈ ಏಕೀಕರಣದ ಸಾಕಾರತೆಯ ಕುರುಹಾಗಿ ನಾಡು ವಿಶಾಲ ಮೈಸೂರು ರಾಜ್ಯವಾಗಿ ಕರೆಸಿಕೊಂಡಿತು.

ಉತ್ತರ ಕರ್ನಾಟಕದವರಿಗೆ ನಾಡು ಕರ್ನಾಟಕ ಎಂದು ಕರೆಸಿಕೊಳ್ಳದಿದ್ದುದರ ಬಗೆಗೆ ಅಸಮಾಧಾನ ಉಂಟಾಯಿತು. ಅಲ್ಲದೆ ಬಹುಪಾಲು ಕನ್ನಡಿಗರು ಚಂದಗಢ, ರಾಯದುರ್ಗ, ಆದವಾನಿ, ಆಲೂರು, ಮಡಕಶಿರ, ಕಾಸರಗೋಡು, ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಹೊಸೂರು, ನೀಲಗಿರಿ, ತಾಳವಾಡಿ ಮೊದಲಾದ ಪ್ರದೇಶಗಳಲ್ಲಿಯೆ ಉಳಿದುಬಿಟ್ಟರು. ಇವು ಆಂಧ್ರ, ಕೇರಳ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಿಗೆ ಸೇರಿದ ಭಾಗಗಳಾದವು. ಇಂಥ ಅಸಮಾಧಾನವು ಸಹ ಹಾಗೆಯೇ ಉಳಿಯಿತು. ಆದರೆ ನಾಡು ಏಕೀಕರಣವಾದ ೧೧ ವರುಷಗಳ ಅನಂತರ ಡಿ. ದೇವರಾಜ ಅರಸು ಅವರ ಅವಧಿಯಲ್ಲಿ ಮತ್ತೆ ಕರ್ನಾಟಕ ಎಂದು (೧.೧೧.೧೯೭೩) ನಾಮಕರಣ ಪಡೆದದ್ದು ಸಮಾಧಾನಕರ ಸಂಗತಿ.

ಈ ಏಕೀಕರಣ ಚಳವಳಿಯು ವಿಭಿನ್ನ ರೀತಿಯ ಹಂತಗಳನ್ನು ದಾಟಿ ಸಾಕಾರಗೊಳ್ಳಲು ನಾಡಿನಾದ್ಯಂತ ಅನೇಕ ವಿದ್ವಾಂಸರು, ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು,

ಚಿಂತಕರು, ಸಂಶೋಧಕರು, ವಕೀಲರು, ಜನಸಾಮಾನ್ಯರು ಮೊದಲಾದವರು ತಮ್ಮನ್ನು ತಾವು ತೊಡಗಿಸಿಕೊಂಡು ಸಹಕರಿಸಿದ್ದರು. ಅವರುಗಳಲ್ಲಿ ಎಂ.ಎಚ್. ಕೃಷ್ಣ, ಎಸ್.ಎಸ್. ಬಸವನಾಳ್, ಫ.ಗು. ಹಳಕಟ್ಟಿ, ಜಿ.ವಿ. ಹಳ್ಳಿಕೇರಿ, ಎಚ್.ಸಿ. ದಾಸಪ್ಪ, ಬಿ.ಎನ್. ದಾತರ್, ಆರ್.ಆರ್. ದಿವಾಕರ್, ಎ. ದೊಡ್ಡಮೇಟಿ, ಶಾಂತವೇರಿ ಗೋಪಾಲಗೌಡ, ಮಾಸ್ತಿ, ಬಿ.ಎಂ.ಶ್ರೀ, ದೇವುಡು, ಬೇಂದ್ರೆ, ಕುವೆಂಪು, ರಾಮಕೃಷ್ಣ ಕಾರಂತ, ಯು. ರಾಮರಾವ್, ಜಿನರಾಜ ಹೆಗ್ಗಡೆ, ಎನ್.ಕೆ. ಉಪಾಧ್ಯಾಯ, ಟಿ.ಆರ್. ಚಿಕ್ಕೋಡಿ, ಜೆ.ವಿ. ಸಾಲ್ಡಾನಾ, ಡಿ.ವಿ. ಬೆಳವಿ, ಎಂ.ಪಿ. ಪಾಟೀಲ, ಟಿ. ಸುಬ್ರಹ್ಮಣ್ಯಂ, ಎ.ಜೆ. ಮುಧೋಳ, ಸಿದ್ದಪ್ಪ ಕಮ್ಮಾರ, ಕರಮರಕರ್, ಬಿ.ವಿ. ಕಕ್ಕಿಲ್ಲಾಯ, ವೆಂಕಟರಂಗೋ ಕಟ್ಟಿ, ಚುರಮುರಿ ಶೇಷಗಿರಿರಾವ್, ಜೀರಗೆ ಕಟ್ಟೆ ಬಸಪ್ಪ, ಜಂಗಿನ ಮುರಗೆಯ್ಯ, ಜಯದೇವಿ ತಾಯಿ ಲಿಗಾಡೆ, ಸಿ.ಬಿ. ಮೋನಯ್ಯ, ಸದಾನಂದ ಹೆಗಡೆ, ಪಿಂಟೋ, ಕೆ.ಎಂ. ರುದ್ರಪ್ಪ, ವಿ.ಎನ್. ಪಾಟೀಲ, ಕೆಂಗಲ್ ಹನುಮಂತಯ್ಯ, ಕೆ.ಎಫ್. ಪಾಟೀಲ, ಎಂ.ಬಿ. ಲಠ್ಠೆ, ಎಂ. ರಂಗನಾಥ ಮೊದಲಿಯಾರ್, ಬಾಲಗಂಗಾಧರ್ ಖೇರ್, ನಾ.ಸು. ಹರ್ಡೀಕರ್, ಹರ್ಡೇಕರ್ ಮಂಜಪ್ಪ, ಎಂ. ವಿಶ್ವೇಶ್ವರಯ್ಯ ಮೊದಲಾದವರು ಪ್ರಮುಖರು. ಅಲ್ಲದೆ ಕನ್ನಡಿಗ, ವಿಶ್ವಕರ್ನಾಟಕ, ಜಯ ಕರ್ನಾಟಕ, ಕರ್ಮವೀರ, ಕರ್ನಾಟಕ ವೃತ್ತ, ಧನಂಜಯ್ಯ, ವಿಜಯಿ, ಸತ್ಯಾಗ್ರಹಿ, ಕಾನಾಡ ವೃತ್ತ, ಕನ್ನಡ ಸಹಜೀವನ, ಕೊಡಗು, ಶುಭೋದಯ, ಸ್ವದೇಶಾಭಿಮಾನಿ, ಧನಂಜಯ, ಕರ್ನಾಟಕ್ ಮೊದಲಾದ ಪತ್ರಿಕೆಗಳು, ನಿಯತಕಾಲಿಕೆಗಳು ಸಹ ಕರ್ನಾಟಕತ್ವ ವನ್ನು ಮೂಡಿಸಿ ನಾಡಿನ ಏಕೀಕರಣವನ್ನು ಆಗು ಮಾಡಿಸಿದವು.

೫.೭ ಸಮಕಾಲೀನ ಕರ್ನಾಟಕ

ಸಂಕ್ಷಿಪ್ತ ಜೀವನ ಚರಿತ್ರೆ ಹಾಗೂ ಅವರ ಐತಿಹಾಸಿಕ ಕೊಡುಗೆಗಳು

ಕೆಂಗಲ್ ಹನುಮಂತಯ್ಯ (೧೯೦೮-೧೯೮೦)

ಕೆಂಗಲ್ ಹನುಮಂತಯ್ಯನವರು ಮೈಸೂರು ರಾಜ್ಯದ ಮೊದಲ ಮುಖ್ಯ ಮಂತ್ರಿಯಾಗಿದ್ದವರು. ಬೆಂಗಳೂರಿನಲ್ಲಿ ವಿಧಾನಸೌಧವನ್ನು ನೋಡಿದಾಗಲೇ ಅದರ ನಿರ್ಮಾತೃ ಕೆಂಗಲ್‌ರ ನೆನಪಾಗುವುದು ಸಹಜ. ಇವರು ಸ್ವಾತಂತ್ರ್ಯ ಹೋರಾಟ, ಕಾಂಗ್ರೆಸ್ ಪಕ್ಷ, ಸಮಾಜಸೇವೆ, ರಾಜಕಾರಣದ ನೆಲೆಗಳಲ್ಲಿ ದುಡಿದವರು.

ಬಾಲ್ಯ, ಶಿಕ್ಷಣ

ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿ (ಮೊಟ್ಟೆದೊಡ್ಡಿ)ಯಲ್ಲಿ ೧೦.೨.೧೯೦೮ ರಂದು ಜನಿಸಿದರು. ತಂದೆ ವೆಂಕಟೇಗೌಡ, ತಾಯಿ ನಂಜಮ್ಮ. ತಮ್ಮ ಮನೆದೇವರಾದ ಕೆಂಗಲ್ ಹನುಮಂತರಾಯಸ್ವಾಮಿ ಹೆಸರನ್ನೇ ಮಗುವಿಗೆ ಇಡಲಾಯಿತು. ಪ್ರಾಥಮಿಕ ಶಿಕ್ಷಣವನ್ನು ತಾಯಿಯ ತವರು ಕೆಂಗೇರಿಯಲ್ಲಿಯೇ ಪೂರೈಸಿದರು. ಮನೆಯಲ್ಲಿ ಬಡತನ ಇದ್ದುದರಿಂದ ಇವರ ಸಹೋದರರಾದ ವಿ. ಗಿರಿಯಪ್ಪ, ವಿ. ಪುಟ್ಟಸ್ವಾಮಿ ಮತ್ತು ವಿ. ನಂಜಪ್ಪ ಅವರು ಹಳ್ಳಿಯ ಬಡತನದ ಬೇಗೆಯಲ್ಲಿಯೇ ಬೆಳೆದು ಬಂದವರಾಗಿದ್ದರು.

ಉನ್ನತ ಶಿಕ್ಷಣ, ಸ್ವಾತಂತ್ರ್ಯ ಹೋರಾಟ ಮತ್ತು ನಾಯಕತ್ವದ ಬೆಳವಣಿಗೆ

ಕೆ. ಹನುಮಂತಯ್ಯನವರು ಪ್ರೌಢಶಿಕ್ಷಣವನ್ನು ೧೯೨೦ ರಲ್ಲಿ ಎಲ್. ಎಸ್. (ಕನ್ನಡ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದರೊಂದಿಗೆ ಪೂರೈಸಿದರು. ಬಡತನದ ಕಾರಣ ಒಂದು ವರ್ಷ ಶಾಲೆ ಬಿಟ್ಟರು. ಓದಬೇಕೆಂಬ ಛಲದಿಂದ ಕಷ್ಟಪಟ್ಟು ಬೆಂಗಳೂರಿಗೆ ಬಂದು ಪುನಃ ಇಂಗ್ಲೀಷಿನಲ್ಲಿ ಎಲ್.ಎಸ್. ಪರೀಕ್ಷೆ ಬರೆದು ಪಾಸಾದರು. ನಂತರ ಬೆಂಗಳೂರಿನ ವೆಸ್ಲಿ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆ ಹೊಂದಿದರು. ಇವರಿಗೆ 'ಒಕ್ಕಲಿಗರ ಸಂಘ'ದ ವಿದ್ಯಾರ್ಥಿ ನಿಲಯವೆ ಆಶ್ರಯ ತಾಣವಾಗಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಇವರಿಗೆ ನಾಯಕತ್ವ ಮತ್ತು ರಾಜಕಾರಣದ ಒಲವಿತ್ತು.

ಇವರು ಕಾಲೇಜು ಶಿಕ್ಷಣವನ್ನು ಮೈಸೂರು ಮಹಾರಾಜಾ ಕಾಲೇಜಿನಿಂದ ೧೯೩೦ ರಲ್ಲಿ ಬಿ.ಎ. ಪದವಿಯೊಂದಿಗೆ ಪಡೆದುಕೊಂಡರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪೂನಾಕ್ಕೆ ಹೋಗಿ ಅಲ್ಲಿನ ಕಾನೂನು ಕಾಲೇಜಿನಲ್ಲಿ ಅಭ್ಯಾಸ ಮಾಡಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ (೧೯೨೫), ೧೯೨೭ ರಲ್ಲಿ ಮದ್ರಾಸ್‌ನಲ್ಲಿ (ಚೆನ್ನೈ) ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ವಿದ್ಯಾರ್ಥಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇವರು ೧೯೨೧ ರಿಂದ ಕೊನೆಯವರೆಗೂ ಖಾದಿ ಧರಿಸಿದ್ದರು. ಇವರ ಹೋರಾಟ ಸ್ವದೇಶಾಭಿಮಾನದಿಂದ

ಕೂಡಿತ್ತು. ೧೯೨೮ ರಲ್ಲಿ ಸೈಮನ್ ಕಮಿಷನ್ ಬಂದಾಗ ಇವರು ವಿದ್ಯಾರ್ಥಿಗಳ ಗುಂಪನ್ನು ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು. ೧೯೩೩ ರಲ್ಲಿ ಬೆಂಗಳೂರು ಜಿಲ್ಲೆ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿ ಸಾಮಾಜಿಕ ಕ್ಷೇತ್ರಕ್ಕೆ ಗಾಢವಾಗಿ ಅರ್ಪಿಸಿಕೊಂಡರು. ಹಾಗೆಯೇ ವಕೀಲಿ ವೃತ್ತಿ ಆರಂಭಿಸಿ ಜನಪ್ರಿಯ ವಕೀಲರಾದರು. ಕೆಂಗಲ್ಲರು ೧೯೩೪ ರಲ್ಲಿ ಬೆಂಗಳೂರು ಹಿಂದಿ ಪ್ರಚಾರಕ ಸಭೆಯ ಅಧ್ಯಕ್ಷರಾಗಿದ್ದರು. ೧೯೩೬ ರಲ್ಲಿ ವಕೀಲ ವೃತ್ತಿಯನ್ನು ತೊರೆದು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

ರಾಜಕೀಯ ಪ್ರವೇಶ

ಕೆಂಗಲ್‌ರ ರಾಜಕೀಯ ಪ್ರವೇಶವು ೧೯೩೬ ರಲ್ಲಿ ವಕೀಲಿ ವೃತ್ತಿ ಕೈಬಿಟ್ಟು ಕಾಂಗ್ರೆಸ್ ಪಕ್ಷ ಸೇರುವುದರ ಮೂಲಕ ಆಯಿತು. ಇವರು ೧೯೩೬ ರಿಂದ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ೧೯೪೬ ರವರೆಗೂ ಇದ್ದರು. ೧೯೩೭ ರಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆಯಾಗಿ, ೧೯೪೯ ರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನೊಡನೆ ವಿಲೀನವಾಯಿತು. ಇವರು ಈ ಕಾರ್ಯಸಮಿತಿ ಹಾಗೂ ಸಂಸತ್ ಉಪಸಮಿತಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದರು.

ಪ್ರತಿಭಟನೆ, ಹೋರಾಟಗಳ ಮೂಲಕ ಟಿ. ಸಿದ್ಧಲಿಂಗಯ್ಯ, ಕೆ.ಸಿ. ರೆಡ್ಡಿ, ಸಾಹುಕಾರ್ ಚೆನ್ನಯ್ಯ, ಕೆ.ಟಿ. ಭಾಷ್ಯಂ, ಟಿ. ಸುಬ್ರಹ್ಮಣ್ಯಂ, ಹೆಚ್.ಸಿ. ದಾಸಪ್ಪ ಮೊದಲಾದವರೊಡನೆ ಇವರು ರಾಜ್ಯದಲ್ಲೆಲ್ಲ ಪ್ರವಾಸ ಮಾಡಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಿದರು. ೧೯೩೮ ರ ಏಪ್ರಿಲ್‌ನಲ್ಲಿ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಸಿ, ಸರ್ಕಾರದ ನಿಷೇಧಾಜ್ಞೆ ಉಲ್ಲಂಘಿಸಿ ದಸ್ತಗಿರಿಯಾದವರಲ್ಲಿ ಇವರು ಪ್ರಮುಖರು. ಆಗ ಇವರಿಗೆ ಮೂರು ತಿಂಗಳ ಕಠಿಣ ಸಜೆ ಮತ್ತು ೫೦೦ ರೂ. ದಂಡ ವಿಧಿಸಲಾಯಿತು. ಕೆಂಗಲ್ ಈ ನಾಡಿಗಾಗಿ ಜೈಲಿಗೂ ಹೋಗಬೇಕಾಯಿತು. ಸ್ವಾತಂತ್ರ್ಯಗಳಿಸುವ ಬಗ್ಗೆ ಪಣತೊಟ್ಟ ಕೆಂಗಲ್ ಬ್ರಿಟಿಷರ ದಬ್ಬಾಳಿಕೆ ವಿರೋಧಿಸಿ ಹೋರಾಟ ಮುಂದುವರೆಸಿದರು.

೧೯೪೦ ರಿಂದ ೧೯೪೪ ರವರೆಗೆ ಇವರು ಪ್ರಜಾಪ್ರತಿನಿಧಿ ಸದಸ್ಯರಾದರು. ಆ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳಾಗಿದ್ದರು. ೧೯೪೧ ಜೂನ್‌ನಲ್ಲಿ ನಡೆದ ಪ್ರಥಮ ಅಧಿವೇಶನದಲ್ಲಿ ಅವರು ರಾಜ್ಯದ ಮುಖ್ಯ ಹುದ್ದೆಗಳಿಗೆ ವಿದೇಶಿಯರನ್ನು ನೇಮಿಸುವುದಕ್ಕೆ ವಿರೋಧಿಸಿದರು. ೧೯೪೨ ರ ಭಾರತ ಬಿಟ್ಟು ತೊಲಗಿ ಚಳಿವಳಿಯಲ್ಲಿ ಭಾಗವಹಿಸಿ ಮಾಡು ಇಲ್ಲವೆ ಮಡಿ ಘೋಷಣೆಯಿಂದ ಕೆಂಗಲ್ ಶಿಕ್ಷೆಗೊಳಗಾದರು. ಕೆಲಕಾಲ (೧೯೪೨) ಬೆಂಗಳೂರು ಪುರಸಭೆಯ ಅಧ್ಯಕ್ಷರಾಗಿದ್ದರು. ಇವರ ರಾಜಕಾರಣ ಮತ್ತು ಸಮಾಜಸೇವೆ ಆರಂಭವಾದುದು ಬೆಂಗಳೂರಿನ ನಗರಸಭೆಯಿಂದ. ೧೯೪೪ ರಿಂದ ೧೯೪೯ ರವರೆಗೆ ೫ ವರ್ಷಗಳ ಕಾಲ ಪ್ರಜಾಪ್ರತಿನಿಧಿಸಭೆಗೆ ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಕಾರ್ಯ ನಿರ್ವಹಿಸಿದರು. ಜೊತೆಗೆ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ, ಕರ್ನಾಟಕ ಭಾಷಾವಾರು

ಪ್ರಾಂತ್ಯ ರಚನೆಗೆ ಹೋರಾಡಿದ್ದು ಸ್ಮರಣೀಯ. ಮೈಸೂರು ರಾಜ್ಯಾಂಗ ಸಭೆಯ ಸದಸ್ಯರಾಗಿ, ಕಾಂಗ್ರೆಸ್ ಪಕ್ಷದ ಉಪನಾಯಕರಾಗಿಯು ಸಹ ಕಾರ್ಯ ನಿರ್ವಹಿಸಿದರು.

೧೯೪೭ ಆಗಸ್ಟ್ ೧೫ ರಂದು ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರು ಸರ್ಕಾರ ರಾಷ್ಟ್ರಧ್ವಜವನ್ನು ಗೌರವಿಸಲಿಲ್ಲ. ಪ್ರಜೆಗಳಿಗೆ ಅಧಿಕಾರ ಕೊಡಲು ಮಹಾರಾಜರು ಒಪ್ಪಲಿಲ್ಲ. ಆಗ ಪ್ರಜಾಪ್ರಭುತ್ವ ಸರ್ಕಾರಕ್ಕಾಗಿ ಕೆಂಗಲ್‌ರು **ಮೈಸೂರು ಚಲೋ ಚಳವಳಿಯನ್ನು** ಹಮ್ಮಿಕೊಂಡರು. ಮೈಸೂರಿನಲ್ಲಿ ಅರಮನೆ ಮುಂದೆ ಸತ್ಯಾಗ್ರಹ ಮಾಡಿದ ಕಾರಣ ಇದನ್ನು **ಅರಮನೆ ಸತ್ಯಾಗ್ರಹ** ಎಂದೇ ಕರೆಯಲಾಗಿದೆ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಏಳು ಸಲ ಬಂಧನಕ್ಕೊಳಗಾಗಿ ನಾಲ್ಕುವರೆ ವರ್ಷ ಜೈಲು ಶಿಕ್ಷೆ ಅನುಭವಿಸಬೇಕಾಯಿತು.

ಭಾರತ ರಾಜ್ಯಾಂಗ ರಚನಾ ಸಭೆ ೧೯೪೭ ರಲ್ಲಿ ಆರಂಭವಾಗಿ ೧೯೫೨ ರಲ್ಲಿ ವಿಸರ್ಜನೆ ಆಗುವವರೆಗೆ ಕೆಂಗಲ್ ಅದರ ಸದಸ್ಯರಾಗಿದ್ದರು. ಮಾದರಿ ಕರ್ನಾಟಕವನ್ನು ಕಟ್ಟಬೇಕೆಂಬ ಕನಸು ಕಂಡಿದ್ದರು. ಆ ನಿಟ್ಟಿನಲ್ಲಿ ಅನೇಕ ಸಮಿತಿಗಳ ಸದಸ್ಯ ಮತ್ತು ಅಧ್ಯಕ್ಷರಾಗಿದ್ದದೂ ಉಂಟು. ೧೯೪೯ ರಲ್ಲಿ **ಸ್ಟಾಕ್‌ಹೋಂ** ಮತ್ತು ೧೯೫೦ ರಲ್ಲಿ **ಡಬ್ಲಿನ್** ನಗರದಲ್ಲಿ ಅಂತರಾಷ್ಟ್ರೀಯ ಸಂಸತ್ ಐಕ್ಯತಾ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ೧೯೫೦ ರಲ್ಲಿ ಚಿತ್ರದುರ್ಗದಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಸಮ್ಮೇಳನ ದಲ್ಲಿ ಕೆಂಗಲ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅಲ್ಲದೆ **ಕೆ.ಸಿ. ರೆಡ್ಡಿ** ಸರ್ಕಾರದ ಲೋಪದೋಷಗಳನ್ನು ಬಹಿರಂಗವಾಗಿ ಟೀಕಿಸಿ ಜನಪ್ರಿಯರಾದರು. ೧೯೫೨ ರಲ್ಲಿ ಪ್ರಥಮ ಮಹಾಚುನಾವಣೆ ನಡೆದು ಕೆ. ಹನುಮಂತಯ್ಯ ಅವರು ಕಾಂಗ್ರೆಸ್ ಪಕ್ಷದ ರಾಜ್ಯಘಟಕದ ಅಧ್ಯಕ್ಷರಾಗಿ, ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದದ್ದು ಗಮನಾರ್ಹ.

ಮುಖ್ಯಮಂತ್ರಿಯಾಗಿ ಕೆ. ಹನುಮಂತಯ್ಯ

ಇವರು ೧೯೫೨ ಮಾರ್ಚ್‌ನಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ, ೬ ಜನರ ಮಂತ್ರಿ ಮಂಡಲದೊಂದಿಗೆ ೧೯೫೬ ರ ಆಗಸ್ಟ್‌ವರೆಗೆ ಆಡಳಿತ ನಡೆಸಿದರು. ಅಪ್ರತಿಮ ವಿದ್ವತ್ತು, ಪ್ರತಿಭೆ, ವಾಕ್ಚಾತುರತೆ, ವಿವಿಧ ಅನುಭವ, ಉದಾತ್ತತೆಯ ಗುಣಗಳಿಂದ ೪೪ ನೇ ವರ್ಷದಲ್ಲಿ ಮುಖ್ಯಮಂತ್ರಿ ಗಾದಿಗೇರಿದ ಭಾರತದ ಅತ್ಯಂತ ಚಿಕ್ಕವಯಸ್ಸಿನ ಮುಖ್ಯಮಂತ್ರಿ ಎಂದು ಕರೆಸಿಕೊಂಡರು. ಇವರು ಮಂತ್ರಿಯಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು. ಅವುಗಳಲ್ಲಿ ಮುಖ್ಯವಾದವು ೧. ವಿಧಾನಸೌಧದ ನಿರ್ಮಾಣ. ೨. ಕರ್ನಾಟಕದ ಏಕೀಕರಣಕ್ಕಾಗಿ ನಡೆಸಿದ ಪ್ರಯತ್ನ. ೩. ಕನ್ನಡ ಸಾಹಿತ್ಯ ಪ್ರಕಟಣೆ ಮತ್ತು ಸಂಸ್ಕೃತಿ ಪ್ರಸಾರ. ೪. ಶಿಕ್ಷಣದಲ್ಲಿ ಸುಧಾರಣೆ. ೫. ಕೋಲಾರದ ಚಿನ್ನದ ಗಣಿ ಸ್ಥಾಪನೆ ಇತ್ಯಾದಿ.

೧. ವಿಧಾನಸೌಧ

ಬೆಂಗಳೂರಿನಲ್ಲಿ ವಿಧಾನಸೌಧವನ್ನು ಕಟ್ಟಿಸುವ ಅರ್ಪಣಾ ಮನೋಭಾವ ಕೆಂಗಲ್ ಅವರಿಗಿತ್ತು. ಏಕೆಂದರೆ, ಸ್ವಾತಂತ್ರ್ಯ ಬಂದರೂ ಸರ್ಕಾರ ನಡೆಸಲು ಕಟ್ಟಡವಿರಲಿಲ್ಲ. ಹಿಂದೆ

ಕೆ.ಸಿ. ರೆಡ್ಡಿಯವರ ಅವಧಿಯಲ್ಲಿ ಅಠಾರ ಕಚೇರಿ, ಶಾಸಕಾಂಗ ಮತ್ತು ಸಚಿವಾಲಯಗಳಿಗೆ ಹೊಸಕಟ್ಟಡ ನಿರ್ಮಿಸುವ ಯೋಜನೆ ಆರಂಭವಾಯಿತು. ಮೊದಲು ಇದಕ್ಕೆ ತಗಲುವ ವೆಚ್ಚ ೩೦ ಲಕ್ಷ ರೂ. ಎಂದು ಅಂದಾಜಿಸಲಾಗಿ ನೆಹರು ಒಪ್ಪಿಗೆ ಸೂಚಿಸಿದ್ದರು. ಕೆಂಗಲ್ ಮುಖ್ಯಮಂತ್ರಿಯಾದ ಮೇಲೆ ಮೂರು ಅಂತಸ್ತುಗಳ ಕಟ್ಟಡದಲ್ಲಿ ಕಲಾಭವನ, ಶಾಸನಸಭೆ, ಸಚಿವ, ಕಾರ್ಯದರ್ಶಿಗಳ ಕಚೇರಿಗಳ ಮತ್ತು ಗ್ರಂಥಾಲಯ ಒಂದೇ ಕಡೆ ಇರಬೇಕೆಂಬ ಅಪೇಕ್ಷೆ ಕೆಂಗಲ್ ಅವರದು. ಕಟ್ಟಡದ ವಿನ್ಯಾಸದಲ್ಲಿ ಬದಲಾವಣೆಯಾದ್ದರಿಂದ ೩೦ ಲಕ್ಷಗಳಿಂದ ೫೦ ಲಕ್ಷಕ್ಕೇರಿತು. ನಿರ್ಮಾಣದ ಸ್ಥಳವನ್ನು ಆಯ್ಕೆ ಮಾಡಿದವರು ಕೆಂಗಲ್ಲರೇ.

ಇದರ ವಿನ್ಯಾಸ, ಕುಸರಿ ಕೆಲಸ, ಸೌಂದರ್ಯ ಪ್ರಜ್ಞೆ ಎಂಥವರನ್ನು ತಲೆತೂಗುವಂತೆ ಮಾಡಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತು ಒಂದೇ ಕಡೆ ಇರಬೇಕೆಂಬುದು ಕೆಂಗಲ್ಲರ ಮುಂದಾಲೋಚನೆ. ನಾಲ್ಕುವರೆ ವರ್ಷಗಳ ಕಾಲ ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಿದ ಅಪರೂಪದ ಭವ್ಯಕಟ್ಟಡವಿದು. ಇದರ ಪ್ರಧಾನ ಶಿಲ್ಪಿ ನಾಗೇಂದ್ರ ಸ್ಥಪತಿ. ಮುಖ್ಯ ಅಭಿಯಂತರರಾಗಿದ್ದವರು ಬಿ.ಆರ್. ಮಾಣಿಕ್ಯಂ ಉಳಿದಂತೆ ಅನೇಕ ಶಿಲ್ಪಿಗಳು, ಚಿತ್ರಕಾರರು, ತಂತ್ರಜ್ಞರು, ಕಲಾವಿದರು ಶ್ರಮವಹಿಸಿ ತಮ್ಮ ಸಾಮರ್ಥ್ಯವನ್ನು, ಕಲಾ ನೈಪುಣ್ಯತೆಯನ್ನು ಧಾರೆಯೆರೆದು ವಿಧಾನಸೌಧ ನಿರ್ಮಾಣಕ್ಕೆ ಕಾರಣವಾಗಿದ್ದಾರೆ. ೧೯೫೩ ರಿಂದ ೫೬ ರವರೆಗೆ ವಿಧಾನಸೌಧ ನಿರ್ಮಾಣ ಕಾರ್ಯ ನಡೆಯಿತು. ಇದು ೧,೩೨,೪೦೦ ಚದರ ಅಡಿಗಳ ವಿಸ್ತಾರದಲ್ಲಿರುವ ಭವ್ಯ ಕಟ್ಟಡ. ಎಲ್ಲ ಅಂತಸ್ತುಗಳ ವಿಸ್ತೀರ್ಣ ೫,೦೦,೦೦೦ ಚದರ ಅಡಿಗಳು. ದಕ್ಷಿಣ ಭಾರತ ವಾಸ್ತುಶೈಲಿ ಗೋಪುರ, ಭಾರತಾಂಗ್ಲ, ಇಂಡೋ ಇಸ್ಲಾಮಿಕ್ ವಾಸ್ತುಶೈಲಿಯ ಮತ್ತು ಆಧುನಿಕ ವಾಸ್ತು ಲಕ್ಷಣಗಳನ್ನು ಇಲ್ಲಿ ಕಾಣಬಹುದು.

ಇಂಥ ಭವ್ಯಸೌಧ ಕಟ್ಟಿಸಿ ಒಂದು ದಿನವಾದರೂ ಕೆಂಗಲ್ ಮುಖ್ಯಮಂತ್ರಿಯಾಗಿ ಹೆಜ್ಜೆ ಇಡಲಿಲ್ಲ ಎಂಬುವ ನಿರಾಸೆ ಜನರಿಗೆ ಕಾಡಿತ್ತು. ಅಲ್ಲದೆ, ವಿರೋಧ ಪಕ್ಷಗಳಿಂದ ಹಣದ ದುಂದು ವೆಚ್ಚದ ಬಗ್ಗೆ ಆರೋಪ, ನಿಂದನೆಗೆ ಒಳಗಾಗಿದ್ದುಂಟು. ವಿಧಾನಸೌಧ ಕಾರ್ಯ ಮುಗಿದ ಹೊತ್ತಿಗೆ ಅವಿಶ್ವಾಸ ಗೊತ್ತುವಳಿ ಮಂಡಿಸಿ ಅಂಗೀಕಾರವಾದ ಮೇಲೆ ಇವರು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ೧೯೫೬ ಅಕ್ಟೋಬರ್ ತಿಂಗಳ ವಿಜಯ ದಶಮಿಯಂದು ಅಂದಿನ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರಿಂದ ಈ ಸೌಧ ಉದ್ಘಾಟನೆ ಆಯಿತು. ಈ ಕಾರ್ಯಕ್ರಮಕ್ಕೆ ಹಳ್ಳಿಗಳ ಜನರನ್ನು ಕರೆತರುವ ಕನಸು ಕೆಂಗಲ್ ಕಂಡಿದ್ದರು. ಅದು ಈಡೇರಲಿಲ್ಲ.

ಕರ್ನಾಟಕದ ಏಕೀಕರಣ

ಕರ್ನಾಟಕ ಏಕೀಕರಣಕ್ಕೆ ಬೆಂಬಲ ಸೂಚಿಸಿ ಕೆಂಗಲ್ ಅವಿರತ ಹೋರಾಡಿದ್ದು ಗಮನಾರ್ಹ ಸಂಗತಿ. ಭಾಷಾವಾರು ಪ್ರಾಂತ್ಯಗಳ ರಚನೆ ಅಗತ್ಯವೆಂದು ತಿಳಿಸಿದರು. ಈ ಮೊದಲೇ ೧೯೪೧ ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ 'ಕರ್ನಾಟಕ ಏಕೀಕರಣ'ವಾಗಬೇಕೆಂದು ಒತ್ತಾಯಿಸಿದ್ದರು. ಕಾಂಗ್ರೆಸ್ ಸದಸ್ಯರಾಗಿ ಏಕೀಕರಣವನ್ನು ಮುಂದುವರೆಸಿದ್ದುಂಟು. ೧೯೫೩

ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಹೈದರಾಬಾದಿನಲ್ಲಿ ನಡೆಯಿತು. ಅದರಲ್ಲಿ ಆಂಧ್ರದ ಹೊರತಾಗಿ ಇನ್ನಾವ ಭಾಷಾನ್ವಯ ರಾಜ್ಯ ರಚನೆಯನ್ನು ಸದ್ಯಕ್ಕೆ ಕೈಗೊಳ್ಳುವುದಿಲ್ಲ ಎಂದು ನಿರ್ಣಯಿಸಿದಾಗ ಕೆಂಗಲ್ ಉಗ್ರವಾಗಿ ಖಂಡಿಸಿದ್ದರು. ೧೯೫೬ ಏಪ್ರಿಲ್‌ನಲ್ಲಿ ಮೈಸೂರು ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ರಾಜ್ಯ ಪುನರ್ವಿಂಗಡಣೆಯ ಪರವಾದ ನಿರ್ಣಯ ಅಂಗೀಕಾರವಾಯಿತು. ಹಳೆ ಮೈಸೂರು, ಹೊಸ ಮೈಸೂರುಗಳ ಸೇರ್ಪಡೆ ವಿಷಯದಲ್ಲಿ ಕೆಲವು ಸಚಿವ, ಶಾಸಕರು ಇವರ ವಿರೋಧಿಗಳಾಗಿದ್ದರು. 'ಕರ್ನಾಟಕ' ಎಂದು ಹೆಸರಿಡಲು ಸೂಚಿಸಿದರಲ್ಲದೆ, ಹರಿದು ಹಂಚಿ ಹೋಗಿದ್ದ ಕರ್ನಾಟಕದ ಭಾಗಗಳನ್ನು ಒಟ್ಟಾಗಿ ಸೇರಿಸಲು ಪ್ರಯತ್ನಿಸಿದರು. ಬಳ್ಳಾರಿ ಜಿಲ್ಲೆ ಆಂಧ್ರ ಪ್ರದೇಶವನ್ನು ಸೇರಿಹೋಗಿತ್ತು. ಕೆಂಗಲ್ ಇದನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇವರ ಅಪ್ರತಿಮ ಪ್ರಯತ್ನದಿಂದ ಭಾಷಾವಾರು ರಚನೆ ಮತ್ತು ಕರ್ನಾಟಕ ಏಕೀಕರಣವಾಗಲು ಸಾಧ್ಯವಾಯಿತು.

ಸಾಹಿತ್ಯ ಮತ್ತು ಸಂಸ್ಕೃತಿ

ಕೆಂಗಲ್‌ರು ಸಾಹಿತ್ಯ ಹಾಗೂ ಶಿಕ್ಷಣ ಪ್ರೇಮಿ. ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಪ್ರಸಾರ ಮಾಡುವ ಸಲುವಾಗಿ ೧೯೫೪ ರಲ್ಲಿ ಯೋಜನೆಯೊಂದನ್ನು ರೂಪಿಸಿದರು. ಅದರಲ್ಲಿ ಮಾಸ್ತಿ, ಡಿ.ವಿ. ಗುಂಡಪ್ಪ, ಎ.ಎನ್. ಮೂರ್ತಿರಾವ್, ಸಿ.ಕೆ. ವೆಂಕಟರಾಮಯ್ಯ, ಬಿ. ಶಿವಮೂರ್ತಿ ಶಾಸ್ತ್ರಿ, ದೇವುಡು ನರಸಿಂಹಶಾಸ್ತ್ರಿ, ಜೀರಿಗೆಕಟ್ಟೆ ಬಸಪ್ಪ. ಡಿ.ಎಲ್.ಎನ್. ಮೊದಲಾದವರ ಸಾಹಿತ್ಯ ಪ್ರಕಟಣೆಗೆ ಪ್ರೋತ್ಸಾಹ ಕೊಟ್ಟರು.

ಕೆಂಗಲ್‌ರು ಮಾಡಿದ ಇತರೆ ಸಾಧನೆಗಳು

ಮುಖ್ಯಮಂತ್ರಿಯಾಗಿ ಕೆಂಗಲ್ ಹನುಮಂತಯ್ಯನವರು ಹಲವು ಸಾಧನೆಗಳನ್ನು ಮಾಡಿದ್ದು ಗಮನಾರ್ಹ.

ಶಿಕ್ಷಣದಲ್ಲಿ ಸುಧಾರಣೆ ತಂದು ಶ್ರೇಷ್ಠ ಶಿಕ್ಷಣ ತಜ್ಞರ ತಂಡ ರಚಿಸಿ ಅವರ ನೇತೃತ್ವದಲ್ಲಿ ವಿದ್ಯಾಭ್ಯಾಸ ಸುಧಾರಣಾ ಸಮಿತಿ ನೇಮಿಸಲಾಯಿತು. ಇವರ ಮೇಲೆ ಮಹಾತ್ಮಗಾಂಧಿಯವರ ಮೂಲ ಶಿಕ್ಷಣದ ಪ್ರಭಾವ ಇತ್ತು.

ಭಾರತದಲ್ಲಿ ಬ್ರಿಟಿಷರ ದಬ್ಬಾಳಿಕೆಯಿಂದಾದ ಪರಿಣಾಮಗಳು ಹಲವು. ಅಂಥವುಗಳ ಪೈಕಿ ಸ್ಥಳನಾಮಗಳು ಮೂಲ ಹೆಸರನ್ನೇ ಕಳೆದುಕೊಂಡದ್ದು ದುರಂತ. ತಮ್ಮ ಆಡಳಿತಕ್ಕೆ ತಕ್ಕಂತೆ ಕನ್ನಡನಾಡಿನ ಸ್ಥಳಗಳ ಹೆಸರುಗಳನ್ನು ಬಳಸಿದ್ದರು.

ಕೆಂಗಲ್ ಜಾತ್ಯಾತೀತ ವ್ಯಕ್ತಿ. ನುಡಿದಂತೆ ನಡೆಯುತ್ತಿದ್ದರು. ಕೆಲವೊಮ್ಮೆ ಜನರ ಬವಣೆ, ಹಾಹಕಾರ, ನೀರಿಗಾಗಿ ಹೋರಾಟ ಮಾಡುವವರಿಗೆ ಶೀಘ್ರ ನಿರ್ಧಾರ ಕೈಗೊಂಡು ಬಾವಿ ಮತ್ತು ಬೋರ್‌ವೆಲ್‌ಗಳನ್ನು ಕೊರೆಸುತ್ತಿದ್ದರು.

ಆಹಾರ ಧಾನ್ಯ ನಿಯಂತ್ರಣ ರದ್ದು ಮಾಡಿದಾಗ ಕಳ್ಳ ಸಂತೆಯಲ್ಲಿ ಮಾರಾಟ ನಿಂತು ವ್ಯಾಪಾರಿಗಳ ಧಾನ್ಯಗಳು ಪೇಟೆಗೆ ಬಂದವು. ಇವರ ಮತ್ತೊಂದು ಶ್ಲಾಘನೀಯ ಕಾರ್ಯ

ವೆಂದರೆ ಶರಾವತಿ ವಿದ್ಯುತ್ ಕೇಂದ್ರವನ್ನು ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭ ಮಾಡಿದ್ದು. ಹಾಗೆಯೇ ಕೋಲಾರದ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಲಾಯಿತು. ಬೆಂಗಳೂರನ್ನು ಕಾಸ್ಮೊಪಾಲಿಟನ್ ಸಿಟಿ ಮಾಡಲು ಶ್ರಮಿಸಿದರು.

ಕೊನೆ ದಿನಗಳು

ಕೆಂಗಲ್‌ರು ೧೯೫೭ ರಲ್ಲಿ ಶಾಸನ ಸಭೆಗೆ, ೧೯೬೨ ರಲ್ಲಿ ಸಂಸದರಾಗಿ ಆಯ್ಕೆ ಆಗಿ, ೧೯೬೨-೬೩ ರಲ್ಲಿ ಭಾರತ ಸಂಸತ್ ಕಾರ್ಯ ಸಮಿತಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮುಂದುವರೆದರು. ೧೯೬೭ ರಲ್ಲಿ ಕರ್ನಾಟಕದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಮಾರ್ಚ್ ೧೯೬೭ ರಿಂದ ೧೯೭೦ ರವರೆಗೆ ಇದ್ದರು. ಹೀಗೆ ರಾಜ್ಯದಿಂದ ಒಮ್ಮೆಲೆ ಹೋಗದೆ ಹಂತ ಹಂತವಾಗಿ ಕೇಂದ್ರದ ನಂಟು ಬೆಳೆಯಿತು. ೧೯೭೦ ರ ಜೂನ್‌ನಲ್ಲಿ ಭಾರತ ಸರ್ಕಾರದ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರಾಗಿದ್ದರು. ಪುನಃ ೧೯೭೧ ರ ಚುನಾವಣೆಯಲ್ಲಿ ಎಂ.ಪಿ. ಆಗಿ ಗೆದ್ದು ರೈಲ್ವೆ ಮಂತ್ರಿಯಾಗಿ ಕೇಂದ್ರದಲ್ಲಿದ್ದರು.

ಕಾಂಗ್ರೆಸ್ ಪಕ್ಷಕ್ಕೆ ಸುದೀರ್ಘ ಸೇವೆ ಮಾಡಿ, ರಾಜಕೀಯ ಉನ್ನತಿಯನ್ನು ಕಂಡ ಕೆಂಗಲ್ ತಮ್ಮ ಮಾಗಿದ ವಯಸ್ಸಿನಲ್ಲಿ ಸುರಾಜ್ಯ ಪಕ್ಷವನ್ನು ೧೯೭೭ ಸೆಪ್ಟಂಬರ್ ೮ ರಂದು ಹುಟ್ಟು ಹಾಕಿದ್ದು ರಾಜಕೀಯದಲ್ಲಿ ಅನೇಕ ಚರ್ಚೆಗೆ ಕಾರಣವಾಯಿತು. ಕೊನೆಯ ದಿನಗಳಲ್ಲಿ ಇವರು ಮಾಡಿದ ಮತ್ತೊಂದು ಸಾಧನೆಯೆಂದರೆ, ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಸತ್ಯಾಗ್ರಹ ಸೌಧವನ್ನು ನಿರ್ಮಿಸಿದ್ದು. ಇವರು ೧.೧೨.೧೯೮೦ ರಂದು ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ತೀರಿಕೊಂಡರು. ಅವರ ಆಡಳಿತ ಪಾರದರ್ಶಕತೆ, ಆದರ್ಶ ಇಂದಿನವರಿಗೆ ಮಾರ್ಗದರ್ಶನವಾಗಿದೆ.

ಎಸ್. ನಿಜಲಿಂಗಪ್ಪ (೧೯೦೨-೨೦೦೦)

ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾಗಿ ಎಸ್. (ಸಿದ್ಧವನಹಳ್ಳಿ) ನಿಜಲಿಂಗಪ್ಪನವರು (ಎಸ್ಸೆನ್) ಒಟ್ಟು ನಾಲ್ಕು ಬಾರಿ ಆ ಸ್ಥಾನಕ್ಕೇರಿದ್ದಾರೆ. ರಾಜಕೀಯ ನಿಪುಣರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಾಹಿತ್ಯ ಮತ್ತು ಸಂಸ್ಕೃತಿ ಪ್ರೇಮಿಯಾಗಿದ್ದವರು ಎಸ್ಸೆನ್.

ಬಾಲ್ಯ, ಶಿಕ್ಷಣ ಮತ್ತು ಸ್ವಾತಂತ್ರ್ಯ ಹೋರಾಟ

ಎಸ್. ನಿಜಲಿಂಗಪ್ಪ ಅವರು ಆಗಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ (ಈಗಿನ ದಾವಣಗೆರೆ ಜಿಲ್ಲೆ) ತಾಲ್ಲೂಕಿನ ಹಲುವಾಗಿಲು ಗ್ರಾಮದಲ್ಲಿ ೧೦.೧೨.೧೯೦೨ ರಂದು ಜನಿಸಿದರು. ವೀರಶೈವ ಸಮುದಾಯದ ಬಡ ರೈತ ಕುಟುಂಬ ಇವರದಾಗಿತ್ತು. ಅಬ್ಬಲೂರು ಅಡಿವೆಪ್ಪ ಮತ್ತು ಸೀಲಮ್ಮ ಇವರ ತಂದೆ-ತಾಯಿಗಳು. ಚಿಕ್ಕವಯಸ್ಸಿನಲ್ಲೇ ಎಸ್ಸೆನ್ ತಂದೆಯನ್ನು ಕಳೆದುಕೊಂಡರು. ತಾಯಿಯ ಆರೈಕೆಯಿಂದ ಬೆಳೆಸಲು ಚಿಕ್ಕಪ್ಪನ ಊರಾದ

ದೊಡ್ಡಸಿದ್ದವ್ವನಹಳ್ಳಿಗೆ ಬಂದು ರುದ್ರಪ್ಪನ ಮನೆಯಲ್ಲಿದ್ದರು. ಮಾಧ್ಯಮಿಕ ಶಿಕ್ಷಣ ಆಂಗ್ಲೋ-ವರ್ನಾಕ್ಯುಲರ್ ಶಾಲೆ ದಾವಣಗೆರೆಯಲ್ಲಿ ಪೂರೈಸಲು ಚಿಕ್ಕಪ್ಪನ ಆಸರೆಯೇ ಕಾರಣ. ಚಿತ್ರದುರ್ಗದಲ್ಲಿ ಹೈಸ್ಕೂಲು ಶಿಕ್ಷಣ, ೧೯೧೯ ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದು ತೇರ್ಗಡೆಯಾದರು. ಬೆಂಗಳೂರಿನ ತೋಂಟದಪ್ಪ ಛತ್ರ, ಜಯದೇವ ಹಾಸ್ಟಲ್‌ಗಳಲ್ಲಿದ್ದು ಸೆಂಟ್ರಲ್ ಕಾಲೇಜಿನಿಂದ ವಿಜ್ಞಾನದಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಪೂನಾದಲ್ಲಿ ಕಾನೂನು ಪದವಿ ಪಡೆದು ವಕೀಲರಾದರು. ೧೯೨೦ ರಲ್ಲಿ ಅಲಿ ಸಹೋದರರ ಜತೆ ಗಾಂಧಿ ಬೆಂಗಳೂರಿಗೆ ಬಂದಾಗ ಇವರು ಸಹ ಅಲ್ಲಿಗೆ ಹೋಗಿದ್ದರು. ಆಗಲೇ ರಾಷ್ಟ್ರೀಯ ವಿಚಾರದಲ್ಲಿ ಗಾಂಧೀಜಿ ನಾಯಕತ್ವದ ಹೋರಾಟವು ಇವರನ್ನು ಆಕರ್ಷಿಸಿತು. ೧೯೨೧ ರಲ್ಲಿ ಲೋಕಮಾನ್ಯ ತಿಲಕರ ಜಯಂತಿ ಆಚರಣೆ ನೇತೃತ್ವ ವಹಿಸಿದ್ದರು. ೧೯೨೩ ರಿಂದ ಖಾದಿ ಧರಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ೧೯೨೪ ರಲ್ಲಿ ಗಾಂಧೀಜಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿಕೊಂಡಾಗ ಇವರ ಮೇಲೆ ಗಾಂಧಿ ಪ್ರಭಾವವಾಯಿತು.

೧೯೨೬ ರಲ್ಲಿ ವಕೀಲಿ ಪದವಿ ಪಡೆದು ಚಿತ್ರದುರ್ಗದಲ್ಲಿ ವೃತ್ತಿ ಆರಂಭಿಸಿದ್ದ ಎಸ್ಸೆನ್ ಅವರಿಗೆ ದಾವಣಗೆರೆಯ ಬೆಳ್ಳುಳ್ಳಿ ಮುರಿಗೆಮ್ಮನವರೊಡನೆ ೧೯೨೭ ರಲ್ಲಿ ಮದುವೆ ಆಯಿತು.

ರಾಜಕೀಯ ರಂಗದಲ್ಲಿ ಎಸ್ಸೆನ್

ನಿಜಲಿಂಗಪ್ಪನವರು ಎನ್.ಎಸ್. ಹರ್ಡೀಕರರ ಪ್ರಭಾವದಿಂದ ಕಾಂಗ್ರೆಸ್ ಸಭೆ, ಸಮಾರಂಭಗಳಿಗೆ ೧೯೩೬ ರಿಂದ ಹೆಚ್ಚಾಗಿ ಪಾಲ್ಗೊಳ್ಳುವುದರೊಂದಿಗೆ ಸಕ್ರೀಯತೆಯನ್ನು ತೋರಿಸಿದರು. ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಅನೇಕ ಬಗೆಯ ಕೆಲಸ ಕಾರ್ಯಗಳನ್ನು ಮಾಡಿದರು. ೧೯೩೮ ರ ವಿಧುರಾಶ್ವತ್ಥ ದುರಂತದಿಂದ ನಿಜಲಿಂಗಪ್ಪನವರ ಮನಸ್ಸಿನಲ್ಲಿದ್ದ ದ್ವಂದ್ವ ನಿವಾರಣೆಯಾಯಿತು. ಮೈಸೂರು ಕಾಂಗ್ರೆಸ್ ಬೋರ್ಡ್‌ನ ಸಮ್ಮೇಳನದಲ್ಲಿ ನಿಜಲಿಂಗಪ್ಪ ಸ್ವಾಗತಾಧ್ಯಕ್ಷರಾಗಿದ್ದರು.

ಎಸ್ಸೆನ್ ೧೯೩೮ ರ ಶಿವಪುರ ಕಾಂಗ್ರೆಸ್‌ನ ನಂತರ ಕಾನೂನುಭಂಗ ಹಾದಿ ಹಿಡಿದರು. ೧೯೩೯ ರಲ್ಲಿ 'ಜವಾಬ್ದಾರಿ ಸರ್ಕಾರ'ಕ್ಕಾಗಿ ಚಳವಳಿಗಳು ನಡೆದಾಗ ಚಿತ್ರದುರ್ಗ ಜಿಲ್ಲೆ ತುರುವನೂರಿನಲ್ಲಿ ೧೮.೯.೧೯೩೯ ರಂದು ಈಚಲ ಮರ ಕಡಿದು ದೊಡ್ಡ ಸತ್ಯಾಗ್ರಹವನ್ನೇ ಮಾಡಿದ್ದರು. ಇದರಲ್ಲಿ ಭಾಗವಹಿಸಿದ್ದಕ್ಕೆ ಬಂಧಿಯಾಗಿ ೧೮ ತಿಂಗಳು ಜೈಲಿನಲ್ಲಿದ್ದು, ೮೦೦ ರೂ. ದಂಡ ಕಟ್ಟಬೇಕಾಯಿತು. ಚಿತ್ರದುರ್ಗ, ಶಿವಮೊಗ್ಗ, ತುಮಕೂರುಗಳಲ್ಲಿ ತೀವ್ರವಾದ ಪ್ರತಿಭಟನೆಗಳು ಜರುಗಿದವು. ಚಿತ್ರದುರ್ಗದಲ್ಲಿ ಏನೇ ನಡೆದರೂ ನಿಜಲಿಂಗಪ್ಪನವರ ಪಾತ್ರ ಇರುತ್ತಿತ್ತು. ಪೊಲೀಸರ ದೌರ್ಜನ್ಯಕ್ಕೆ ತುತ್ತಾಗಿ ಅನೇಕರಿಗೆ ತುರುವನೂರಿನಲ್ಲಿ ಪುಂಡು ಗಂದಾಯವನ್ನು ಹಾಕಿದರು. ಆಗ ನಿಜಲಿಂಗಪ್ಪ ಅವರು ಒಂದು ವರ್ಷ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿದ್ದರು.

ಇವರು ೧೯೪೦ ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಚುನಾವಣಾ ಪ್ರಚಾರಕ್ಕೆ ಸಂಸ್ಥಾನದೆಲ್ಲೆಡೆ ಪ್ರಚಾರ ನಡೆಸಿ ಜನಪ್ರಿಯತೆ ಗಳಿಸಿದರು. ೧೯೪೧ ರಲ್ಲಿ ಮೈಸೂರು ಕಾಂಗ್ರೆಸ್‌ನ ೪ನೆ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಕೂಡ ನಿಜಲಿಂಗಪ್ಪ ದುಡಿದಿದ್ದಾರೆ. ಇದಕ್ಕೆ ಎಚ್. ಸಿದ್ದಯ್ಯ ಅಧ್ಯಕ್ಷರಾಗಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಆರಂಭದ ದಿನಗಳಿಂದಲೂ ಎಸ್ಸೆನ್. ಗುರುತಿಸಿ ಕೊಂಡಿದ್ದರು. ೧೯೪೨ ರಲ್ಲಿ ನಿಜಲಿಂಗಪ್ಪನವರು ಮುಂಬೈನಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಇದರಿಂದ ಚಳವಳಿ, ಹೋರಾಟದ ಕಿಚ್ಚು ಎಸ್ಸೆನ್‌ರಲ್ಲಿ ಇಮ್ಮಡಿಯಾಯಿತು. ಬಾಂಬೆ ಕಾಂಗ್ರೆಸ್ ಅಧಿವೇಶನ ಮುಗಿಸಿಕೊಂಡು ಬರುವಾಗ ಬೆಂಗಳೂರಿನ ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಬಂಧಿತರಾದರು. ೯ ತಿಂಗಳು ಕೆ.ಜಿ.ಎಫ್.ನ ಜೈಲಿನಲ್ಲಿ ಒಬ್ಬಂಟಿಗರಾಗಿ ಕಾಲ ಕಳೆಯಬೇಕಾಯಿತು. ೧೯೪೩ ರಲ್ಲಿ ಬಿಡುಗಡೆ ಆದರು. ೧೯೪೪ ರಲ್ಲಿ ಮೈಸೂರು ಕಾಂಗ್ರೆಸ್‌ನ ೫ನೇ ಅಧ್ಯಕ್ಷರಾಗಿ ಅವರು ಆಯ್ಕೆಯಾದರು. ೧೯೪೬ ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಕೆ.ಸಿ. ರೆಡ್ಡಿ ಮುಖ್ಯಮಂತ್ರಿ ಆದಾಗ ನಿಜಲಿಂಗಪ್ಪ ಮೈಸೂರು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದರು. ಇವರು ೧೯೫೪ ರವರೆಗೂ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆದರು.

ಮೈಸೂರು ಚಲೋ ಮತ್ತು ಎಸ್ಸೆನ್

೧೯೪೭ ರಲ್ಲಿ ಭಾರತ ಒಕ್ಕೂಟದಲ್ಲಿ ಅನೇಕ ಸಂಸ್ಥಾನಗಳು ಸೇರಿದ್ದವು. ಮೈಸೂರು ಒಡೆಯರು ಸೇರಲು ಹಿಂದೆ ಮುಂದೆ ನೋಡಿ ಕೊನೆಗೆ ಒಪ್ಪಿದರು. ಜವಾಬ್ದಾರಿ ಸರ್ಕಾರ ರಚನೆಯ ವಿಳಂಬ ಕುರಿತು ಸತ್ಯಾಗ್ರಹ ನಡೆಸಲು 'ಮೈಸೂರು ಚಲೋ ಚಳವಳಿ' ನಡೆಯಿತು. ದೆಹಲಿಯಿಂದ ನಿಜಲಿಂಗಪ್ಪ ಮೈಸೂರಿಗೆ ಬಂದಾಗ ಮೈಸೂರಿನಲ್ಲಿಯೇ ಬಂಧಿತರಾದರು. ಹೀಗೆ ಅರಮನೆ ಮುಂದೆ ಸತ್ಯಾಗ್ರಹ ನಡೆಸಿದ ಕಾರಣ ಅರಮನೆ ಸತ್ಯಾಗ್ರಹವೆಂದೇ ಕರೆಯಲಾಯಿತು.

ಏಕೀಕರಣ ಮತ್ತು ಎಸ್ಸೆನ್

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಸಭೆ ೧೯೫೩ ರಲ್ಲಿ ನಡೆಯುವಾಗ ಉದ್ರಿಕ್ತ ಗುಂಪಿನಿಂದ ನಿಜಲಿಂಗಪ್ಪನವರ ಮೇಲೆ ಕಲ್ಲೇಟು ಬಿತ್ತು. ರಕ್ತಸ್ರಾವ ಆದಾಗ ಎಸ್ಸೆನ್‌ರಿಗೆ ಇದು ಏಕೀಕರಣದ ಸಮಸ್ಯೆ ಎಂಬ ಅರಿವಾಯಿತು. ನಂತರ ಹುಬ್ಬಳ್ಳಿ-ಧಾರವಾಡಗಳಲ್ಲಿ ಶಾಸನ ಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪರಾಭವಗೊಂಡಿತು. ಆಗ ಫಜಲ್ ಅಲಿ (ರಾಜ್ಯ ಪುನರ್‌ವಿಂಗಡಣಾ) ಆಯೋಗವನ್ನು ನೇಮಿಸಿದರು. ಎಸ್ಸೆನ್. ಕಾಂಗ್ರೆಸ್ ಅಧ್ಯಕ್ಷರಾಗಿ ಮೇ ತಿಂಗಳಲ್ಲಿ ಅಖಿಲ ಕರ್ನಾಟಕ ಕಾಂಗ್ರೆಸ್ ಸಮ್ಮೇಳನವನ್ನು ದಾವಣಗೆರೆಯಲ್ಲಿ ಹಮ್ಮಿಕೊಂಡಿದ್ದರು. ಇದರಲ್ಲಿ 'Memorandum to United Karnataka'ಕ್ಕೆ ಮನವಿಯನ್ನು

ಆಯೋಗಕ್ಕೆ ಕೊಟ್ಟರು. ಈ ಮನವಿಯನ್ನು ಮುಂಬೈ ಪ್ರಾಂತ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಆರ್.ವಿ. ಜಾಗೀರ್ದಾರರು ಅಧ್ಯಕ್ಷರಾಗಿದ್ದ ಸಮಿತಿಗೆ ಅಂಕಿ-ಸಂಖ್ಯೆಗಳನ್ನೊಳಗೊಂಡ ಚಾರಿತ್ರಿಕ ಹಿನ್ನೆಲೆಯ ಮನವಿ ಕೊಟ್ಟಿತು.

ಮುಖ್ಯಮಂತ್ರಿಯಾಗಿ ಎಸ್ಸೆನ್.

ಎಸ್ಸೆನ್ ೧೯೫೭ ರಲ್ಲಿ **ಮೊಳಕಾಲ್ಮೂರು** ಕ್ಷೇತ್ರದಿಂದ ಆಯ್ಕೆ ಆಗಿ, ಎರಡನೆಯ ಬಾರಿಗೆ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಪಡೆದರು. **ಫಜಲ್ ಅಲಿ ಆಯೋಗದ** ವರದಿಯಂತೆ ಏಕೀಕರಣವಾದಾಗ ಇವರು ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ. ೧೯೫೫ ಮೈಸೂರು ಸರ್ಕಾರ 'ಮಸ್ಕ ರೇಂಜ್' ವೇತನ ಆಯೋಗ ವರದಿಯಂತೆ ನೌಕರರ ಸಂಬಳ-ಸಾರಿಗೆ ಹೆಚ್ಚಿಸಿದರು. ಇದೇ ಸಮಯಕ್ಕೆ ಬಿ.ಡಿ. ಜತ್ತಿ ಅಧ್ಯಕ್ಷತೆಯಲ್ಲಿ ಭೂ ಸುಧಾರಣಾ ಮಂಡಲಿ ರಚನೆಯಾಯಿತು. ೧೯೫೭ ರಲ್ಲಿ ವಿದ್ಯುಚ್ಛಕ್ತಿ ಮಂಡಳಿ ರಚನೆ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ತುಂಗಾಭದ್ರಾ ಮೇಲ್ದಂಡೆ ನಾಲೆಯ ಮೊದಲ ಹಂತ, ಘಟಪ್ರಭಾ ಅಣೆಕಟ್ಟು ದ್ವಿತೀಯ ಘಟ್ಟ (ಹಿಡಕಲ್), ಕಬಿನಿ ಜಲಾಶಯ ಯೋಜನೆಗಳು ಆರಂಭವಾದವು. ಹೀಗೆ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಬೆಳೆದು ನಿಜಲಿಂಗಪ್ಪ ೧೬.೫.೧೯೫೮ ರಂದು ಅಧಿಕಾರ ತ್ಯಜಿಸಿ ಬಿ.ಡಿ. ಜತ್ತಿ ಅಧಿಕಾರ ಸ್ವೀಕರಿಸಿದರು. ಅವಿಶ್ವಾಸ ಗೊತ್ತುವಳಿಯಲ್ಲಿ ೫ ಮತಗಳಿಂದ ನಿಜಲಿಂಗಪ್ಪನವರು ಸದನದಲ್ಲಿ ಸೋತರು.

ನಿಜಲಿಂಗಪ್ಪನವರು ೧೯೬೦ ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷತೆಯನ್ನು ನಿರ್ವಹಿಸಿದರು. ೧೯೬೨ ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಕಾಂಗ್ರೆಸ್ ಜಯಭೇರಿಯಾದಾಗ **ಹೊಸದುರ್ಗ** ಕ್ಷೇತ್ರದಿಂದ ಇವರು ಸೋತರು. ಆಗ **ಎಸ್.ಆರ್. ಕಂಠಿ** ಮುಖ್ಯಮಂತ್ರಿಯಾದರು. ಸ್ವಲ್ಪ ದಿನಗಳಲ್ಲೇ ಎಸ್ಸೆನ್ **ಬಾಗಲಕೋಟೆ** ಕ್ಷೇತ್ರದಿಂದ ಗೆದ್ದು ೧೯೬೨ ಜೂನ್ ೨೧ ರಂದು ಮೂರನೆ ಬಾರಿಗೆ ಮುಖ್ಯಮಂತ್ರಿಯಾದರು.

೧೯೬೪ ರಲ್ಲಿ **ಬೆಂಗಳೂರು ವಿಶ್ವವಿದ್ಯಾಲಯ** ಮತ್ತು ೧೯೬೫ ರಲ್ಲಿ **ಕೃಷಿ ವಿಜ್ಞಾನ ವಿಶ್ವವಿದ್ಯಾಲಯ** ಸ್ಥಾಪನೆಯಾಗಿದ್ದು ಇವರ ಸಾಧನೆಗೆ ಸಾಕ್ಷಿ. ಹಾಸನ-ಮಂಗಳೂರು ರೈಲುಮಾರ್ಗಕ್ಕೆ ಕೇಂದ್ರದಿಂದ ಅನುಮತಿ ಸಿಕ್ಕಿತು. ರಾಜ್ಯದಲ್ಲಿ ಏಕರೂಪದ ಕಂದಾಯವನ್ನು ೧೯೬೪ ರಿಂದ ಎಸ್ಸೆನ್. ಜಾರಿಗೆ ತಂದರು. ೧೯೫೮ ರಲ್ಲಿ ಶರಾವತಿ ವಿದ್ಯುತ್ ಯೋಜನೆ ಪ್ರಥಮ ಹಂತ, ೧೯೬೫ರ ಜನವರಿಯಲ್ಲಿ ಪೂರ್ತಿಯಾಯಿತು. ಬೆಂಗಳೂರಿಗೆ ಕಾವೇರಿಯಿಂದ ನೀರು ಪೂರೈಕೆ (೧೯೬೪) ಆಯಿತು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕದೊಳಗೆ ೪ ದೊಡ್ಡ ಹಾಗೂ ೫ ಚಿಕ್ಕ ನೀರಾವರಿ ಯೋಜನೆಗಳು ಆರಂಭವಾದವು. ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆ ಹಂತ, ಮಲಪ್ರಭಾ ಯೋಜನೆಗಳು ಪ್ರಮುಖವಾದವು. ೧೯೬೩ ರಲ್ಲಿ ರಾಜ್ಯ ಕೈಗಾರಿಕಾ ಸಹಕಾರಿ ಬ್ಯಾಂಕ್ ಸ್ಥಾಪನೆ.

ಏಕೀಕರಣದಿಂದ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ. ೧೯೬೭ ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಶಿಗ್ಗಾಂವಿಯಿಂದ ಅವಿರೋಧವಾಗಿ ಆಯ್ಕೆಗೊಂಡು ೪ನೆಯ ಬಾರಿಗೆ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿ ೨೩.೫.೧೯೬೮ ರವರೆಗೂ ಅಧಿಕಾರದಲ್ಲಿ ಇದ್ದರು.

ಎಸ್ಸೆನ್ ಕಾಂಗ್ರೆಸ್‌ನಲ್ಲಿದ್ದಾಗಲೇ ಜನತಾ ಪಕ್ಷದೊಡನೆ ಐಕ್ಯತೆ ಆಯಿತು. ಇವರು ವಿದೇಶಗಳಿಗೆ ಹೋಗಿ ಬಂದ ನಂತರ ೧೯೬೯ ರಲ್ಲಿ ಇಂದಿರಾ **ಕಾಂಗ್ರೆಸ್**‌ಗೆ **ಜಗಜೀವನರಾಮ್** ಅಧ್ಯಕ್ಷರಾಗಿದ್ದರು. ಪಾಕಿಸ್ತಾನ ಜೊತೆ ಬಾಂಗ್ಲಾದೇಶ ಮುಕ್ತಿಗಾಗಿ ನಡೆದ ಯುದ್ಧದಲ್ಲಿ ಜಯಭೇರಿ ಬಾರಿಸಿದ ಜಯಪ್ರಿಯತೆಯಿಂದ ೧೯೭೧ ರಲ್ಲಿ ಲೋಕಸಭೆ ವಿಸರ್ಜಿಸಿ ಇಂದಿರಾ **ಕಾಂಗ್ರೆಸ್** ಜಯಭೇರಿ ಬಾರಿಸಿತು. ಶತಮಾನ ಇತಿಹಾಸವಿರುವ ಕಾಂಗ್ರೆಸ್ ಒಡೆದ ಮನೆಯಾಯಿತು. ೧೯೭೧ ರಲ್ಲಿ **ಸಂಸ್ಥಾ ಕಾಂಗ್ರೆಸ್**, **ಜನತಾ ಪಕ್ಷ**ದಲ್ಲಿ ಲೀನವಾಯಿತು. ಅದೇ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು.

ಎಸ್ಸೆನ್ ಅವರು ೧೯೭೮ ರಲ್ಲಿ ರಾಜೀನಾಮೆ ನೀಡಿ ರಾಜಕೀಯ ನಿವೃತ್ತಿ ಪ್ರಕಟಿಸಿದರೂ ಜನತಾಪಕ್ಷದ ಅಧ್ಯಕ್ಷ **ಚಂದ್ರಶೇಖರ್** ವಿನಂತಿಸಿಕೊಂಡಾಗ ಕೊಟ್ಟ ರಾಜೀನಾಮೆ ವಾಪಸ್ಸು ಪಡೆದರು. **ಮುರಾರ್ಜಿ ದೇಸಾಯಿ** ೧೯೭೮ ಏಪ್ರಿಲ್‌ನಲ್ಲಿ ಎಸ್ಸೆನ್‌ಗೆ ಗುಜರಾತಿನ ರಾಜ್ಯಪಾಲ ರಾಗಲು ಕೇಳಿದಾಗ ನಿರಾಕರಿಸಿದರು. ಹೀಗೆ ಕಾಂಗ್ರೆಸ್‌ನ್ನು ವಿರೋಧಿಸುತ್ತಲೇ ೧೯೮೩ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ **ಜನತಾಪಕ್ಷ** ಗೆಲುವಾಗಲು ಮತ್ತು **ರಾಮಕೃಷ್ಣ ಹೆಗಡೆ** ಮುಖ್ಯಮಂತ್ರಿಯಾಗಲು ನಿಜಲಿಂಗಪ್ಪನವರು ಪರೋಕ್ಷ ಕಾರಣ ಎನ್ನಲಾಗಿದೆ.

ಎಸ್ಸೆನ್ ಅನಾರೋಗ್ಯ ಪೀಡಿತರಾಗಿರುವಾಗಲೇ ಕರ್ನಾಟಕ ಸರ್ಕಾರವು ಹೆಮ್ಮೆಯ **ಕರ್ನಾಟಕ ರತ್ನ**, ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ **ನಾಡೋಜ ಪ್ರಶಸ್ತಿ**ಯನ್ನು ನೀಡಲಾಯಿತು. ೧೯೬೮ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಎಸ್ಸೆನ್ ಅವರಿಗೆ ಎಲ್. ಎಲ್.ಡಿ. **ಪ್ರಶಸ್ತಿ** ನೀಡಿ ಗೌರವಿಸಿದೆ. ಇವರಿಗೆ ಅಪಾರ ಸ್ನೇಹಿತರು, ಬಂಧುಗಳು, ಶಿಷ್ಯರು ವಿವಿಧ ಕ್ಷೇತ್ರಗಳಲ್ಲಿದ್ದಾರೆ. ನಿಜಲಿಂಗಪ್ಪನವರು ಇತ್ತೀಚಿಗೆ (೮.೮.೨೦೦೦) ನಿಧನರಾದರು. ಇವರ ಕನಸಾದ **ಭದ್ರಾ ಮೇಲ್ದಂಡೆ ಯೋಜನೆ** ಈಗ ನನಸಾಗುತ್ತಿರುವುದು ಸಂತಸದ ಸಂಗತಿ.

ಡಿ. ದೇವರಾಜ ಅರಸು (೧೯೧೫-೧೯೮೨)

ಅರಸು ಅವರು ಕರ್ನಾಟಕ ಕಂಡ ಪ್ರತಿಭಾವಂತ ಮುಖ್ಯಮಂತ್ರಿ ಮತ್ತು ಪರಿವರ್ತನೆಯ ಹರಿಕಾರರು. ಇವರು ೧೯೭೨ ರ ಮಾರ್ಚ್ ೨೦ ರಂದು ಮುಖ್ಯಮಂತ್ರಿ ಆಗಿ ಕರ್ನಾಟಕದಲ್ಲಿ ಹೊಸ ತಿರುವನ್ನು ಸೃಷ್ಟಿಸಿದರಲ್ಲದೆ, ಪ್ರಾಮಾಣಿಕ ದುಡಿಮೆಯನ್ನು ರಾಜಕೀಯ ಸಿಂಹಾಸನದ ಗದ್ದುಗೆಯಿಂದ ಮಾಡಿದ್ದು ಪ್ರಥಮ ಪ್ರಯತ್ನ. ಎಂಟು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ, ಶಾಸಕ, ಸಚಿವ ಹೀಗೆ ಅನೇಕ ಜವಾಬ್ದಾರಿಯುತ ಹುದ್ದೆಗಳನ್ನು ಅಲಂಕರಿಸಿದ್ದರು.

'ದೊಡ್ಡಮನೆ' (ಡಿ) ದೇವರಾಜ ಅರಸು ಅವರು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ ೨೦-೮-೧೯೧೫ ರಂದು ಜನಿಸಿದರು. ಇವರ ತಂದೆ ದೇವರಾಜ ಅರಸು, ತಾಯಿ ದೇವೀರಮ್ಮಣ್ಣಿಯವರು. ಮೈಸೂರು ಅರಸರ ಮನೆತನಕ್ಕೊಳಪಟ್ಟರೂ ಅರಸು ಅವರು ಮಧ್ಯಮ ವರ್ಗದ ಗ್ರಾಮೀಣ ಪರಿಸರದ ಕೃಷಿ ಕುಟುಂಬದಲ್ಲಿದ್ದವರು. ಅರಸು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ್ದು ಪಕ್ಕದ ಮನೆಯ ಗೌಡಯ್ಯನ ಜಗಲಿಯಲ್ಲಿ. ತರುವಾಯ ಮೈಸೂರು ಮತ್ತು ಬೆಂಗಳೂರುಗಳಲ್ಲಿ ವ್ಯಾಸಂಗ ಮಾಡಿ, ಮೈಸೂರು ವಿಶ್ವವಿದ್ಯಾಲಯದಿಂದ ವಿಜ್ಞಾನ ಪದವಿ ಪಡೆದು ಕಲ್ಲಹಳ್ಳಿಗೆ ಬಂದು ವ್ಯವಸಾಯದಲ್ಲಿ ನಿರತರಾದರು.

ನಾಯಕತ್ವ ರೂಪಿಸಿಕೊಂಡ ಅರಸು ಮತ್ತು ಸ್ವಾತಂತ್ರ್ಯ ಹೋರಾಟ

ಪ್ರೌಢಾವಸ್ಥೆಯಲ್ಲಿರುವಾಗಲೇ ಅರಸು ಅವರಿಗೆ ರಾಜಕೀಯದ ಬಗ್ಗೆ ಆಸಕ್ತಿ ಚಿಗುರಿತು. ತಮ್ಮ ಅಪ್ಪಟ ಗ್ರಾಮೀಣ ಸಂಸ್ಕೃತಿ, ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದ ಅರಸು ೧೯೪೧-೪೮ ರವರೆಗೆ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೪೨ ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ್ದ ಅರಸು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂಬುದಕ್ಕೆ ಇನ್ನೊಂದು ಸಾಕ್ಷಿ ಮೈಸೂರು ಚಲೋ ಚಳವಳಿ.

೧೯೫೨ ರಲ್ಲಿ ಹುಣಸೂರು ಕ್ಷೇತ್ರದಿಂದ ವಿಧಾನಸಭೆಗೆ ಇವರು ಆಯ್ಕೆಯಾದರು. ಮತ್ತು ಮುಂದೆ ಆರು ಬಾರಿ ಇದೇ ಕ್ಷೇತ್ರದಿಂದ ವಿಧಾನಸಭೆಗೆ ಗೆದ್ದು ಬಂದಿದ್ದರು. ಅಪಾರ ಅನುಭವ, ದಕ್ಷ ಆಡಳಿತ ಮಾಡುತ್ತಲೇ ೧೯೬೨ ರಲ್ಲಿ ಎಸ್. ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದಾಗ ಇವರು ಸಚಿವರಾಗಿದ್ದರು. ೧೯೬೭ರ ಸಾರ್ವತ್ರಿಕ ಚುನಾವಣೆಯ ನಂತರ ಕಾರ್ಮಿಕ, ಸಾರಿಗೆ, ಪ್ರವಾಸೋದ್ಯಮ, ಪಶುಸಂಗೋಪನೆ, ವಾರ್ತಾ ಮತ್ತು ಪ್ರಚಾರ, ಮೀನುಗಾರಿಕೆ ಮತ್ತು ರೇಷ್ಮೆ ಮೊದಲಾದ ಖಾತೆಗಳನ್ನು ನಿರ್ವಹಿಸಿದ್ದು ಗಮನಾರ್ಹ. ಕಾಂಗ್ರೆಸ್ ೧೯೬೯ ರಲ್ಲಿ ಇಬ್ಭಾಗವಾದಾಗ ಆಡಳಿತ ಕಾಂಗ್ರೆಸ್ಸಿನ ಸಂಘಟಕರಾಗಿದ್ದರು. ಅರಸು ಹಾಗೂ ಕೆ.ಎಚ್. ಪಾಟೀಲರ ನಡುವೆ ಕಾಂಗ್ರೆಸ್ ಇಬ್ಭಾಗವಾಗಿತ್ತು. ಅರಸು ಕಾಂಗ್ರೆಸ್ ಕರ್ನಾಟಕದಲ್ಲಿ ಶಾಶ್ವತವಾಗಿ ಬೇರೂರಿತ್ತು. ೧೯೭೦ ರಲ್ಲಿ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷರಾಗಿ ಅರಸು ಪಕ್ಷದ ಸಂಘಟನೆಯ ಜವಾಬ್ದಾರಿಯನ್ನು, ಜೊತೆಗೆ ಕೇಂದ್ರ ರೇಷ್ಮೆ ಮಂಡಲಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಅರಸು ಅವರು ಕಾಂಗ್ರೆಸ್‌ನಲ್ಲಿ ಕ್ರಮೇಣ ಜನಪ್ರಿಯತೆ ಗಳಿಸಿದರು. ೧೯೭೧ ರಲ್ಲಿ ಲೋಕಸಭೆ ಮತ್ತು ೧೯೭೨ ರಲ್ಲಿ ವಿಧಾನಸಭೆ ಚುನಾವಣೆಗಳು ನಡೆದು ಕಾಂಗ್ರೆಸ್ ಜಯಭೇರಿ ಬಾರಿಸಿತು. ಈ ಗೆಲುವಿಗೆ ಅರಸು ಬಹಳಷ್ಟು ಶ್ರಮಿಸಿದ್ದರು. ವಿಧಾನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾಗಿ ೨೦.೩.೧೯೭೨ ರಂದು ಕರ್ನಾಟಕದ (೮ನೇ) ಮುಖ್ಯಮಂತ್ರಿಯಾದರು.

ಮುಖ್ಯಮಂತ್ರಿ ದೇವರಾಜ ಅರಸು

ಅರಸು ಅವರು ೨೦.೩.೧೯೭೨ ರಿಂದ ೩೧.೧೨.೧೯೭೭ ಹಾಗೂ ೨೮.೨.೧೯೭೮ ರಿಂದ ೭.೧.೧೯೮೦ ರವರೆಗೆ ಮುಖ್ಯಮಂತ್ರಿಯಾಗಿದ್ದರು. 'ಸರ್ವರಿಗೆ ಸಮ ಬಾಳು, ಸರ್ವರಿಗೆ ಸಮಪಾಲು' ಸೂತ್ರವನ್ನು ಒಂದು ಆಯಾಮವಾಗಿ ಬಳಸಿಕೊಂಡವರೇ ಅರಸು. ಇದರಿಂದ ಕರ್ನಾಟಕದಲ್ಲಿ ಒಂದು ಮಹಾ ತಿರುವು ಸೃಷ್ಟಿಯಾಯಿತು. ಅರಸು ಕೈಗೊಂಡ ಮಹಾ ಸಾಧನೆಯೆಂದರೆ, ತಮ್ಮ ಸಂಪುಟದಲ್ಲಿ ವಿವಿಧ ದುರ್ಬಲ ವರ್ಗಗಳನ್ನು ಸಂಘಟಿಸಿದ್ದು.

ಅರಸು ಅವರು ಮುಖ್ಯಮಂತ್ರಿಯಾಗಿ ಅಮೋಘ ಸಾಧನೆ ಮಾಡಿರುವುದು ದಿಟ. ೧೯೭೯ ರಿಂದ ೧೯೭೮ ರ **ಅರಸು ದಶಕವು** ಇಡೀ ದೇಶಕ್ಕೆ ಮಾದರಿಯಾಗಿತ್ತು. ಶ್ರೀಮತಿ **ಇಂದಿರಾಗಾಂಧಿ**ಯವರೊಡನೆ ಮೊದಲು ಉತ್ತಮ ರಾಜಕೀಯ ಸಂಬಂಧಗಳನ್ನು ಹೊಂದಿದ್ದರು. ಇವರು ತಮ್ಮ ಅವಧಿಯಲ್ಲಿ ಅನೇಕ ಪರಿವರ್ತನೆಯ ಕಾರ್ಯಗಳನ್ನು ಮಾಡಿರುವುದು ಶ್ಲಾಘನೀಯ. ಅವುಗಳೆಂದರೆ - ಕರ್ನಾಟಕ ನಾಮಕರಣ, ಭೂ ಸುಧಾರಣೆ ಶಾಸನ, ತುರ್ತುಪರಿಸ್ಥಿತಿ, ಬೂಸಾ ಚಳವಳಿ, ಹಿಂದುಳಿದ ವರ್ಗಗಳ ಆಯೋಗ, ಜೀತಪದ್ಧತಿ ನಿರ್ಮೂಲನೆ, ೨೦ ಅಂಶಗಳ ಕಾರ್ಯಕ್ರಮ ಜಾರಿಗೆ, ಭಾಷಾ ಆಯೋಗ ರಚನೆ, ಅಲ್ಪಾದಾಯ ವರ್ಗದ ಸಾಲ ರದ್ದು, ಅಕ್ರಮ ಲೇವಾದೇವಿಗಳ ನಿಷೇಧ, ಕೃಷಿ ಕಾರ್ಮಿಕರ ವೇತನ ಹೆಚ್ಚಳ, ಬಾಡಿಗೆ ಮನೆಗಳ ಮೇಲೆ ನಿಯಂತ್ರಣ ಹೀಗೆ ಹತ್ತು-ಹಲವು ಕಾರ್ಯ-ಯೋಜನೆಗಳನ್ನು ಜಾರಿಗೆ ತಂದು ಪ್ರಗತಿಗೆ ನಾಂದಿ ಹಾಡಿದರು.

೧. ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ (೧.೧೧.೧೯೭೩)

ನಮ್ಮ ನಾಡನ್ನು ಅನೇಕ ರಾಜವಂಶಗಳು ಆಳಿವೆ. ಕದಂಬ, ಗಂಗ, ಚಾಲುಕ್ಯ, ವಿಜಯ ನಗರ, ಮೈಸೂರು ರಾಜ್ಯ ಹೀಗೆ ಇತ್ಯಾದಿ. ಅಂತಿಮವಾಗಿ ಆಳಿದ ಮೈಸೂರು ಒಡೆಯರು ತಮ್ಮ ಸಂತತಿ ರಾಜಪ್ರಭುತ್ವವನ್ನು ತೊರೆದು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಾಗಲೂ ಈ ರಾಜ್ಯದ ಹೆಸರು ಬದಲಾಗಲಿಲ್ಲ.

ಅರಸು ಅವರ ಹೆಸರು ಇತಿಹಾಸದಲ್ಲಿ ಅಮರವಾಗುಳಿಯಲು ಮತ್ತು ತಮ್ಮ ರಾಜಕೀಯ ಬಲವರ್ಧನೆಯಾಗಲು ಈ 'ನಾಮಕರಣ' ಘಟನೆ ಒಂದು ಸಾಧನವಾಯಿತು. ಸ್ವಾತಂತ್ರ್ಯ ನಂತರ ೧೯೫೬ ನವೆಂಬರ್ ೧ ರಂದು ಕನ್ನಡ ಭೂಭಾಗಗಳೆಲ್ಲ ಒಂದುಗೂಡಿಸಿ ಹೊಸ ರಾಜ್ಯ ರಚನೆ ಮಾಡಿದರು. ರಾಜ್ಯವಾದರೂ ಸಂಪೂರ್ಣ ಸ್ವರೂಪ ಅದಕ್ಕಿರಲಿಲ್ಲ. ಭೌಗೋಳಿಕ ವಿಸ್ತಾರ, ಐತಿಹಾಸಿಕ ಮಹತ್ವವನ್ನು ಕಡೆಗಣಿಸಲಾಗಿತ್ತು. ೧೯೫೬ ರಿಂದ ಹೆಸರಿನ ಬದಲಾವಣೆಗೆ ಶಾಸನಸಭೆಯಲ್ಲಿ ಸಾಕಷ್ಟು ವೇಳೆ ಚರ್ಚೆ ಆಗಿ ಠರಾವು ಮಂಡಿಸಿದ್ದರು. ೧೯೬೭ನೆ ಮಹಾ ಚುನಾವಣೆಗಿಂತ ಮೊದಲು ಶಾಸನ ಸಭೆಯಲ್ಲಿ ಠರಾವು ಚರ್ಚೆಗೆ ಬಂದಿತು. ಎಸ್. ನಿಜಲಿಂಗಪ್ಪನವರ ಅವಧಿಯಲ್ಲಿ ಕರ್ನಾಟಕ ಎಂದು ಮೈಸೂರು-ಕರ್ನಾಟಕವೆಂದು,

ಮೈಸೂರು ಕನ್ನಡ ನಾಡು, ಕರ್ನಾಟಕ ಎಂದು ಹೆಸರಿಡಲು ಚರ್ಚೆ ಆಗುತ್ತಿತ್ತು. ೧೯೭೯ ರ ನಂತರ ಅರಸು ನೇತೃತ್ವದಲ್ಲಿ ಠರಾವುಗಳ ಬಗ್ಗೆ ಮತ್ತು ೧೯೭೦-೭೧ ರ ಚುನಾವಣೆಗಳ ಅವಧಿಯಲ್ಲಿ ಹೆಸರಿನ ಬಗ್ಗೆ ಚರ್ಚೆಗಳಾದವು.

ಆಡಳಿತ ಯಂತ್ರ ಸರಳ ಮತ್ತು ಸುಲಭವಾಗಿಸಲು ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಮಾಡಿದರು. ಅನೇಕ ವರ್ಷಗಳಿಂದ ಕರ್ನಾಟಕದ ನಾಮಕರಣ ಸಮಸ್ಯೆ ನೆನೆಗುದಿಗೆ ಬಿದ್ದಿತ್ತು. ಮೈಸೂರು ರಾಜ್ಯ ಇದ್ದುದನ್ನು ಕರ್ನಾಟಕವೆಂದು ನಾಮಕರಣಗೊಳಿಸಿದ್ದು ಅರಸು ಸರ್ಕಾರದ ಸಾಧನೆ. ಪ್ರತೀಕವಾಗಿ ೧.೧೧.೧೯೭೩ ರಲ್ಲಿ ಅದು ನೆರವೇರಿತು. ಹಂಪಿಯಲ್ಲಿ ಜಯ ಚಾಮರಾಜ ಒಡೆಯರು ಜ್ಯೋತಿ ಬೆಳಗಿಸುವುದರ ಮೂಲಕ ಕರ್ನಾಟಕವೆಂದು ಕರೆದರು. ೧.೧೧.೧೯೭೩ ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅರಸು ನಾಮ ಕರಣೋತ್ಸವ ಭಾಷಣ ಮಾಡಿದರು.

೨. ಭೂ ಸುಧಾರಣೆ (೧೯೭೪)

ಭೂಸುಧಾರಣೆ ಶಾಸನ ಜಾರಿಗೆ ತಂದಿದ್ದು ಅರಸು ಸರ್ಕಾರದ ಬಹುದೊಡ್ಡ ಸಾಧನೆ. ೧೯೫೦ ರ ದಶಕದಿಂದ ಭೂಸುಧಾರಣೆ ಜಾರಿಗೆ ತರುವ ಪ್ರಯತ್ನವಿದ್ದರೂ ಅದು ೧೯೭೨ ರ ನಂತರ ಕೈಗೂಡಿತು. ಇದರ ಬಗ್ಗೆ ರಾಜ್ಯಾದ್ಯಂತ ಅಭಿಪ್ರಾಯವನ್ನು ಅರಸು ಸಂಗ್ರಹಿಸಿದ್ದರು. ಭೂಸುಧಾರಣೆ ಬಗ್ಗೆ ಅರಸು 'ಒಂದು ಭೂಮಿಯ (ಪ್ರದೇಶದ) ಬೇಸಾಯಗಾರ ಯಾರು, ಒಡೆತನ ಯಾರಲ್ಲಿದೆ, ಇದನ್ನು ಕಾನೂನಿನ ಕಲಮುಗಳ ಆಧಾರದ ಮೇಲೆ ನ್ಯಾಯಾಲಯ ನಿರ್ಧರಿಸಿ ತೀರ್ಪು ಕೊಡುವುದಕ್ಕಿಂತ ಸ್ಥಳೀಯರು ಅದನ್ನು ಸ್ಪಷ್ಟವಾಗಿ ಹೇಳಬಲ್ಲರು' ಎಂದು ಅಭಿಪ್ರಾಯಪಟ್ಟರು. ಜನರಿಂದಲೇ ಸ್ಥಳೀಯ ಭೂವಿವಾದಗಳನ್ನು ಇತ್ಯರ್ಥಗೊಳ್ಳಲು ಅನುವು ಮಾಡಿಕೊಟ್ಟರು. ಬೆಳೆಯುತ್ತಿರುವವರು ಯಾರು? ಕೈಕಟ್ಟಿ ಕುಳಿತಿರುವರು ಯಾರು? ಅನುಕೂಲ ಪಡೆಯುವರು ಯಾರೆಂಬುದನ್ನು ನಿರ್ಧರಿಸಲು ಜನತಾ ನ್ಯಾಯಾಲಯಗಳು ಗೇಣಿ ಹಕ್ಕನ್ನು ನಿರ್ಧರಿಸುವುದು ಸೂಕ್ತವೆನಿಸಿತು.

ನ್ಯಾಯಲಯಗಳಲ್ಲಿ ಈ ಕಾರ್ಯಕ್ಕೆ ಅನಗತ್ಯ ತೊಡಕುಂಟಾಗುತಿತ್ತು, ವಕೀಲರಿಗೆ ಅವಕಾಶದಿಂದ ಕಡಿವಾಣ ಹಾಕಲಾಗುತಿತ್ತು. ಇಲ್ಲಿ ಶಾಸಕರು ಜನತೆಯ ಪ್ರತಿನಿಧಿಯಾಗಿದ್ದರೆ, ಪುರುಷನಂತೆ ಬೆವರು ಸುರಿಸುವ ಮಹಿಳೆಯ ಪ್ರತಿನಿಧಿಯೊಬ್ಬರು ಅಲ್ಲಿರಬೇಕೆಂದರು. ಜೀತದಾಳುಗಳಂತೆ ದುಡಿಮೆಯಲ್ಲಿ ದಿನ ಸವೆಸುವ ಹರಿಜನ-ಗಿರಿಜನ ಪ್ರತಿನಿಧಿ ಇದ್ದರೆ ಸೂಕ್ತವೆಂದರಿತರು. ಈ ಮೂವರು ಪ್ರಾಮಾಣಿಕವಾಗಿದ್ದರೆ ಸತ್ಯ ಕಾಣಬಹುದೆಂದತರಿತರು.

೧೯೭೪ ಏಪ್ರಿಲ್ ೧ ರಿಂದ ಈ ಶಾಸನ ಜಾರಿಗೆ ಬಂತು. ಯುಗಗಳಿಂದಲೂ ಬಡಜನರಿಗೆ ಆಗಿರುವ ಅನ್ಯಾಯವನ್ನು ನಿವಾರಿಸುವ ಪ್ರಾಮಾಣಿಕ ಪ್ರಯತ್ನ ಇದಾಗಿತ್ತು. 'ತಂಟೆ ತಕರಾರು ಬಂದರೆ ಊರಲ್ಲಿ ಟಾಮ್ ಟಾಮ್ ಹೊಡೆಸಿ ಯಾರು ಜಮೀನು ಮಾಡುತ್ತಾರೋ ಜನರನ್ನು

ಕೇಳಿ ತಿಳಿದುಕೊಳ್ಳಿ, ಮಾಲಿಕನೂ ಇರುವುದರಿಂದ ಜನರು ಇರುತ್ತಾರೆ. ಸತ್ಯ ಬೆಳಕಿಗೆ ಬರುತ್ತದೆ' ಎಂಬುದು ಅರಸು ಅಭಿಮತ. ಶೇ.೯೯ ರಷ್ಟು ಇಂಥ ಸತ್ಯ ಬೆಳಕಿಗೆ ಬಂತು. ನಿರ್ವಚನೆ, ಕಂದಾಚಾರ, ಮೋಸ, ಅನ್ಯಾಯ, ಆಕ್ರಮಣ ನೀತಿಗಳನ್ನು ಬಿಡಲು ರಾಷ್ಟ್ರ ಉನ್ನತ ಪಂಕ್ತಿಗೆ ಸೇರುವ ನ್ಯಾಯಾಲಯದ ವಿಳಂಬವಿಲ್ಲದೆ ಹಣ ವೆಚ್ಚ ಮಾಡಬೇಕಾದ ನೀತಿ ಇಲ್ಲದಂತೆ ಭೂ ಸುಧಾರಣೆಯನ್ನು ಆಚರಣೆಗೆ ತಂದರು.

೩. ಹಿಂದುಳಿದ ವರ್ಗಗಳ (ಎಲ್.ಜಿ. ಹಾವನೂರು) ಆಯೋಗ

ದೇವರಾಜ ಅರಸು ಸರ್ಕಾರದ ಮತ್ತೊಂದು ಮಹತ್ವದ ಸಾಧನೆಯೆಂದರೆ, ಪ್ರಸಿದ್ಧ ವಕೀಲ **ಲಕ್ಷ್ಮಣ ಜಿ. ಹಾವನೂರ** ಅಧ್ಯಕ್ಷತೆಯಲ್ಲಿ 'ಹಿಂದುಳಿದ ವರ್ಗಗಳ ಆಯೋಗ'ವನ್ನು ನೇಮಿಸಿದ್ದು. ಧಾರವಾಡ ಜಿಲ್ಲೆಯ (ಆಗಿನ) **ರಾಣಿಬೆನ್ನೂರಿನ** ಒಬ್ಬ ಪ್ರತಿಭಾವಂತ ವಕೀಲರನ್ನು ಅಧ್ಯಕ್ಷ ಸ್ಥಾನಕ್ಕೆ ೧೯೭೨ರ ಅಕ್ಟೋಬರ್‌ನಲ್ಲಿ ತಂದಿದ್ದು ಅರಸರ ದೂರದೃಷ್ಟಿಗೆ ಹಿಡಿದ ಕನ್ನಡಿ.

ಅಧ್ಯಕ್ಷರಾಗಿ ಹಾವನೂರು ಮತ್ತು ಸದಸ್ಯರಾಗಿ ಕೆಲವು ಮಂದಿ ಇದ್ದರು. ಅವರಲ್ಲಿ **ಧರ್ಮಸಿಂಗ್** ಸಹಾ ಒಬ್ಬರು. ಹರಿದು ಹಂಚಿಹೋಗಿದ್ದ ಕರ್ನಾಟಕ ಭಾಷೆ, ಧರ್ಮ, ಸಂಸ್ಕೃತಿಯಿಂದ ಏಕತೆ ಪಡೆಯುವಲ್ಲಿ ಸೆಣಸಾಟ ನಡೆಯುವ ಕಾಲ ಅದು. ಮುಂದುವರೆದ ಮತ್ತು ಹಿಂದುಳಿದವರ ತಾರತಮ್ಯವನ್ನು ನಿವಾರಿಸುವ ತಂತ್ರ ಆಯೋಗ ಮಾಡಿತು. ಮತೀಯ ಅಲ್ಪಸಂಖ್ಯಾತರನ್ನು ಸಂಘಟಿಸಿದ ಮತ್ತು ಆ ವರ್ಗಗಳಿಗೆ ರಾಜಕೀಯ ಜೀವ ತುಂಬುವುದು ಅರಸರ ಆಸೆ. ರಾಜಕೀಯ ಅರಿವಿಗೆ ಶಿಕ್ಷಣ ಅಗತ್ಯವೆಂದು, ವಿಶೇಷ ಸೌಲಭ್ಯ ಕಲ್ಪಿಸಲು ಮುಂದಾದರು. ನೇಮಿಸಿದ ಆಯೋಗ ಶೀಘ್ರವಾಗಿ ಕಾರ್ಯರಂಭ ಮಾಡಿ ಅನೇಕ ಮತ, ಕೋಮು, ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸಿತು.

ಈ ಆಯೋಗ ರಚನೆಯಾಗಿ ಕಾರ್ಯಗತವಾದಾಗ ಕರ್ನಾಟಕದಲ್ಲಿ ಸಾಕಷ್ಟು ಪ್ರತಿಭಟನೆಗಳು ನಡೆದವು. ಅವು ಮುಂದುವರೆದವರ ಕೈವಾಡ ಎಂಬುದು ಸತ್ಯ. ವೀರಶೈವ ಮಠಾಧೀಶರು ಸಹಾ ಈ ಆಯೋಗವನ್ನು ಟೀಕಿಸಿದರು.

ಹಾವನೂರು ವರದಿ ಹಿಂದುಳಿದ ವರ್ಗಗಳ 'ಬೈಬಲ್' ಎಂದು 'ಭಗವದ್ಗೀತೆ' ಎಂದು ಕರೆದರು. ೧೯೭೭ ರಲ್ಲಿ ಹಾವನೂರು ವರದಿಯನ್ನು ಸರ್ಕಾರ ಶಿಫಾರಸ್ಸು ಮಾಡಿತು. ಹಾವನೂರರು ರಾಜ್ಯಾದ್ಯಂತ ಪ್ರವಾಸ ಮಾಡಿ ವ್ಯಾಪಕ ಅಧ್ಯಯನದ ಫಲವಾಗಿ ಬಂದ ವರದಿಯಿಂದ ಕುರುಬರು, ಕುಂಬಾರರು, ಮಡಿವಾಳರು, ಈಡಿಗರು, ಹಣಬರು, ಉಪ್ಪಾರರು, ಜೇಡರು ಮೊದಲಾದ ಹಿಂದುಳಿದ ಜಾತಿಯವರು ಸಂವಿಧಾನದತ್ತವಾದ ಸೌಲಭ್ಯಗಳನ್ನು ಪಡೆದರು. ಹಾವನೂರು ವರದಿಯಿಂದ ಹಿಂದುಳಿದ ವರ್ಗಗಳಿಗೆ ನೌಕರಿ ಮತ್ತು ಶಿಕ್ಷಣದಲ್ಲಿ ಮೀಸಲು ಸೌಲಭ್ಯ ಕಲ್ಪಿಸಲಾಯಿತು.

೪. ಜೀತ ಪದ್ಧತಿ ನಿರ್ಮೂಲನೆ

ಅರಸು ಅವರು ಮಾಡಿದ ಇತರ ಸಾಮಾಜಿಕ ಸುಧಾರಣೆಗಳು ಹಲವು. ಶತ ಶತಮಾನಗಳಿಂದ ತಲೆಯ ಮೇಲೆ ಮಲ ಹೋರುವ ಅಮಾನುಷ ಪದ್ಧತಿಯನ್ನು ನಿರ್ಮೂಲನೆ ಮಾಡಿ ಸಾಮಾಜಿಕ ಸಮಾನತೆ ಕಾಪಾಡಲು ಶ್ರಮಿಸಿದರು. ಅರಸು ಅವಧಿಯಲ್ಲಿ ಜೀತ ಪದ್ಧತಿಯನ್ನು ನಿರ್ಮೂಲನೆಗೊಳಿಸಿ ಸು. ೬೫ ಸಾವಿರ ಜೀತದಾಳುಗಳನ್ನು ವಿಮುಕ್ತಿಗೊಳಿಸಿದರು.

೫. ಅಭಿವೃದ್ಧಿ ಯೋಜನೆಗಳು (ನೀರಾವರಿ, ವಿದ್ಯುತ್, ಕಬ್ಬಿಣ)

ಅರಸು ಆಡಳಿತಾವಧಿಯಲ್ಲಿ ಕಬಿನಿ, ಹಾರಂಗಿ, ಹೇಮಾವತಿ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಯೋಜನೆ, ಇತರ ಯೋಜನೆಗಳು ಬರಗಾಲದ ಪರಿಸ್ಥಿತಿಯನ್ನು ನಿವಾರಿಸಲು ಹಮ್ಮಿಕೊಂಡಿದ್ದರು. ಆಹಾರ ಸಮಸ್ಯೆ ನೀಗಲು ಇದು ಫಲಕಾರಿಯಾಯಿತು. ಬೃಹತ್ ನೀರಾವರಿ ಯೋಜನೆಗೆ ಕಾಳಿ ವಿದ್ಯುತ್ ಯೋಜನೆ ಮತ್ತು ಕುದುರೆಮುಖ ಕಬ್ಬಿಣದ ಅದಿರು ಯೋಜನೆಗಳು ಆರಂಭವಾದವು.

೬. ೨೦ ಅಂಶಗಳ ಕಾರ್ಯಕ್ರಮ

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ೧೯೭೫ ರ ಜುಲೈ ೧ ರಂದು ಸಾರಿದ **ಇಪ್ಪತ್ತು ಅಂಶಗಳ ಕಾರ್ಯಕ್ರಮ**ದಲ್ಲಿ ಭೂ ಹಂಚಿಕೆ, ಬಡವರಿಗೆ ಉಚಿತ ವಸತಿ ಯೋಜನೆ, ನಿವೇಶನ ಹಂಚಿಕೆ, ಹರಿಜನ-ಗಿರಿಜನ, ಹಿಂದುಳಿದ ವರ್ಗಗಳಿಗೆ ಪ್ರೋತ್ಸಾಹ, ಇತರೆ ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದು ಶ್ಲಾಘನೀಯ.

ಅರಸು ಅವರು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಖಾಯಂ ಆಹ್ವಾನಿತ ಸದಸ್ಯರಾಗಿ, ರಾಜ್ಯ ಯುವ ಕಾಂಗ್ರೆಸ್ ಸಲಹಾ ಸಮಿತಿ ಅಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾನಿಲಯದ ವಜ್ರಮಹೋತ್ಸವ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಭಾಷೆ, ರಂಗಭೂಮಿ, ತಂತ್ರಜ್ಞಾನ, ಕೃಷಿ, ನೀರಾವರಿ ಕ್ಷೇತ್ರಗಳಿಗೆ ಆದ್ಯತೆ ಕೊಟ್ಟು, ಕರ್ನಾಟಕವನ್ನು ಪ್ರಗತಿಯ ಹಾದಿಗೆ ಕೊಂಡೊಯ್ದರು.

೭. ಪ್ರಗತಿಯ ಚಿಂತಕ

ಅರಸು ಛಲ, ಶ್ರಮ, ಸಹಿಷ್ಣು, ಕೃಷಿ, ಮುತ್ಸದ್ದಿ ರಾಜಕಾರಣಿ, ಓದುಗ, ದೀನ-ದಲಿತರ ಹಿತಚಿಂತಕ, ಸಮಾಜ ಪರಿವರ್ತಕ, ಸಂಪ್ರದಾಯಶೀಲ, ಉದಾರಿಯಾಗಿದ್ದರು. ಕರ್ನಾಟಕದ ಗಡಿಸಮಸ್ಯೆ ಬಂದಾಗ 'ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಲಾರೆ' ಎಂದು ಪ್ರತಿಪಾದಿಸಿದ್ದರು. ರಾಜ್ಯದಲ್ಲಿ ಭಾಗ್ಯಜ್ಯೋತಿ, ಸ್ತ್ರೀಶಕ್ತಿ ಯೋಜನೆ, ಮಾಶಾಸನ, ಭೂಸವಕಳಿ, ಕೃಷಿ ಪದ್ಧತಿ ಸುಧಾರಣೆ ಅರಸರ ಆಡಳಿತದ ಹೆಗ್ಗುರುತುಗಳು.

ಒಟ್ಟಾರೆ ಹೇಳುವುದಾದರೆ ಕೆಂಗಲ್ ಹನುಮಂತಯ್ಯನವರು ಆರಂಭದಲ್ಲಿ ಕರ್ನಾಟಕವನ್ನು ಕಟ್ಟುವ ಕೆಲಸ ಮಾಡಿದರು. ವಿಧಾನಸೌಧ, ಕರ್ನಾಟಕದ ಏಕೀಕರಣ, ಸಾಹಿತ್ಯ-ಸಂಸ್ಕೃತಿ

ಇತರ ಕಾರ್ಯಯೋಜನೆಗಳು ಪ್ರಮುಖವಾದವು. ಎಸ್. ನಿಜಲಿಂಗಪ್ಪನವರು ಕೃಷಿ, ನೀರಾವರಿ ಮೂಲಕ ವಿವಿಧ ಕ್ಷೇತ್ರಗಳ ಪ್ರಗತಿಗೆ ಕಾರಣೀಭೂತರಾದರು. ನಾಲ್ಕು ಬಾರಿ ಮುಖ್ಯ ಮಂತ್ರಿಯಾಗಿ ಅನೇಕ ಬಗೆಯ ಕೆಲಸಗಳನ್ನು ಮಾಡಿದ್ದುಂಟು. ದೇವರಾಜ ಅರಸು ಕರ್ನಾಟಕದಲ್ಲಿ 'ಪರಿವರ್ತನೆಯ ಹರಿಕಾರ'ರಾಗಿ 'ಹಿಂದುಳಿದ ವರ್ಗಗಳ ನೇತಾರ'ರಾಗಿ ಖ್ಯಾತಿ ಪಡೆದರು.

ಹೆಚ್ಚಿನ ಓದಿಗಾಗಿ

೧. ಷೇಕ್ ಅಲಿ .ಬಿ - **ಕರ್ನಾಟಕ ಚರಿತ್ರೆ ಸಂಪುಟ-೫** (ಕನ್ನಡ ವಿಶ್ವವಿದ್ಯಾಲಯ, ಹಂಪಿ)

೨. ಷೇಕ್ ಅಲಿ .ಬಿ - **ಟಿಪ್ಪು ಸುಲ್ತಾನ್**

೩. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ .ಎಂ - **ಕರ್ನಾಟಕ ಇತಿಹಾಸ ದರ್ಶನ**

೪. Hayavadana Rao .C - **History of Mysore**

೫. Govt. of Karnataka - **Karnataka through the Ages**

೬. Sreenivasa Murthy H.V., Ramakrishnan .R - **History of Karnataka**

೭. Gopal M.H - **Tipu Sultan's Mysore**

೮. Forrest D - **The Tiger of Mysore**

೯. Hasan M - **History of Tipu Sultan**

೧. ಸೆಬಾಸ್ಟಿಯನ್ ಜೋಸೆಫ್ - **ಕರ್ನಾಟಕ ಚರಿತ್ರೆ ಸಂಪುಟ - ೬** (ಕನ್ನಡ ವಿಶ್ವ ವಿದ್ಯಾಲಯ, ಹಂಪಿ)

೨. ಹಾಲಪ್ಪ ಜಿ.ಎಸ್ - **ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ** ಸಂ.೨

೨. ವೀರತಪ್ಪ ಕೆ - **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ**

೩. ಶರ್ಮಾ ತೀ.ತಾ - **ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ** (೧೮೦೦-೧೮೫೭)

೪. ಲಿಂಗಯ್ಯ ಡಿ - **ಶಿವಪುರ ಧ್ವಜ ಸತ್ಯಾಗ್ರಹ**

೫. ಸೂರ್ಯನಾಥ ಕಾಮತ್ - **ಕರ್ನಾಟಕ ಗ್ಯಾಸೆಟಿಯರ್** ಸಂ.೨, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ**

೬. ಚಂದ್ರಶೇಖರ್ ಎಸ್ - ದಕ್ಷಿಣ ಭಾರತ - ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು **ಸಂಘರ್ಷ**

೭. ಚಂದ್ರಶೇಖರ್ ಎಸ್ (ಸಂ.) - ಕರ್ನಾಟಕದ ಚರಿತ್ರೆ ಸಂಪುಟ ೭

೧. ಗೋವಿಂದರಾಜು ಸಿ.ಆರ್ - ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ

೨. ಗೋಪಾಲರಾವ್ ಎಚ್.ಎಸ್ - ಕರ್ನಾಟಕ ಏಕೀಕರಣ ಇತಿಹಾಸ

೧. ಅರಳು ಮಲ್ಲಿಗೆ ಪಾರ್ಥಸಾರಥಿ (ಸಂ.) - ಕರ್ನಾಟಕದ ಮುಖ್ಯಮಂತ್ರಿಗಳು

೨. ಕಮಲೇಶ್ ಕೆ.ಆರ್. (ಸಂ.) - ಎಸ್.ಎನ್. ದಿನಚರಿ
೩. ಕಾಮತ್ ಸೂರ್ಯನಾಥ ಯು. (ಸಂ.) - ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಭಾಗ-೨
೪. ಕೋಣಂದೂರು ವೆಂಕಪ್ಪಗೌಡ - ಪರಿವರ್ತನೆಯ ಹರಿಕಾರ
೫. ಚನ್ನಬಸಪ್ಪ ಕೋ - ಎಸ್.ನಿಜಲಿಂಗಪ್ಪ ಒಂದು ಅಧ್ಯಯನ
೬. ಜವರೇಗೌಡ ದೇ - ಕರ್ನಾಟಕದ ರೂವಾರಿ
೭. ಜಾಗೀರದಾರ ಐ.ಕೆ - ಅರಸು ಆಡಳಿತರಂಗ
೮. ನಾಯಕ ಹಾ.ಮಾ - ಪ್ರಗತಿಪಥ
೯. ನಾಯಕ ಹಾ.ಮಾ. (ಸಂ.) - ಕರ್ನಾಟಕಕ್ಕೆ ಶುಭವಾಗಲಿ
೧೦. ಮಧುಕೇಶ್ (ಸಂ.) - ಡಿ.ದೇವರಾಜ ಅರಸು ಜೀವನ ಚರಿತ್ರೆ,
೧೧. ಮಧುಕೇಶ್ - ಭೂ ಸುಧಾರಣೆಯ ಪಿತಾಮಹ ಅರಸು
೧೨. ಮಧುಕೇಶ್ - ಧೀಮಂತ ನಾಯಕ ಅರಸು
೧೩. ಯಲ್ಲಪ್ಪ ರೆಡ್ಡಿ ಆ.ನ - ಅರಸು ಯುಗದ ಅರಣ್ಯಪರ್ವ
೧೪. ರಮೇಶ್ ಬೆ.ಗೋ - ಕರ್ನಾಟಕದ ಮುಖ್ಯಮಂತ್ರಿಗಳು
೧೫. ರಾಜನ್ ಎಸ್ - ಕರ್ನಾಟಕದಲ್ಲಿ ಭೂ ಸುಧಾರಣೆ
೧೬. ವಡ್ಡರ್ಸೆ ರಘುರಾಮಶೆಟ್ಟಿ - ಬಹುರೂಪಿ ಅರಸು
೧೭. ವೆಂಕಟೇಶ್ ಎಚ್.ಎ (ಸಂ.) - ಕನಾಟಕದ ಅರಸು
೧೮. ಶ್ರೀನಿವಾಸರಾವ್ ಎಸ್.ವಿ - ಕನ್ನಡನಾಡಿನ ಮರೆಯಬಾರದ ಮಹನೀಯರು
೧೯. ಶೇಷಗಿರಿರಾವ್ ಎಲ್.ಎಸ್ - ಕಿರಿಯರ ಕರ್ನಾಟಕ
೨೦. ಸಂದೀಪಶಾಸ್ತ್ರಿ (ನಿರೂಪಣೆ) - ಎಸ್. ನಿಜಲಿಂಗಪ್ಪ
೨೧. ಸದಾನಂದ ಜೆ.ಎಸ್., ೨೦೦೩. ಡಿ. ದೇವರಾಜ ಅರಸು (ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ)
೨೩. ಕ್ಷೀರ ಸಾಗರ - ದಿಕ್ಕು ತಪ್ಪಿದ ಕರ್ನಾಟಕ ಭೂ ಸುಧಾರಣೆ

ಮಾದರಿ ಪ್ರಶ್ನೆಗಳು

I. ಒಂದು ವಾಕ್ಯದಲ್ಲಿ ಉತ್ತರಿಸಿ. (೧ ಅಂಕ)

೧. ಹೈದರಾಲಿ ಹುಟ್ಟಿದ ಸ್ಥಳ ಯಾವುದು?
೨. ಹೈದರಾಲಿ ಹುಟ್ಟಿದ ವರುಷ ಯಾವುದು?
೩. ಇಮ್ಮಡಿ ಕೃಷ್ಣರಾಜ ಒಡೆಯರ್ ಹೈದರ್‌ನಿಗಿತ್ತ ಬಿರುದೇನು?
೪. ಮೊದಲನೆಯ ಆಂಗ್ಲೋ-ಮೈಸೂರು ಯುದ್ಧ ಯಾವಾಗ ನಡೆಯಿತು?

೫. ಮೊದಲನೆಯ ಆಂಗ್ಲೋ-ಮೈಸೂರು ಯುದ್ಧ ಯಾವ ಒಪ್ಪಂದದಿಂದ ಕೊನೆಗೊಂಡಿತು?

೬. ಎರಡನೆಯ ಆಂಗ್ಲೋ-ಮೈಸೂರು ಯುದ್ಧ ಯಾವಾಗ ನಡೆಯಿತು?

೭. ಹೈದರನನ್ನು ಸೋಲಿಸಿದ ಬ್ರಿಟಿಷ್ ಸೇನಾನಿ ಯಾರು?

೮. ಹೈದರನು ಎಲ್ಲಿ ಮರಣ ಹೊಂದಿದನು?

೯. ಟಿಪ್ಪುಸುಲ್ತಾನ್ ಹುಟ್ಟಿದ ಸ್ಥಳ ಯಾವುದು?

೧೦. ಟಿಪ್ಪುಸುಲ್ತಾನ ಹುಟ್ಟಿದ ದಿನಾಂಕ ಯಾವುದು?

೧೧. ಎರಡನೆಯ ಆಂಗ್ಲೋ-ಮೈಸೂರು ಯುದ್ಧ ಯಾವ ಒಪ್ಪಂದದಿಂದ ಕೊನೆಗೊಂಡಿತು?

೧೨. ಮೂರನೆಯ ಆಂಗ್ಲೋ-ಮೈಸೂರು ಯುದ್ಧ ಯಾವಾಗ ನಡೆಯಿತು?

೧೩. ಮೂರನೆಯ ಆಂಗ್ಲೋ-ಮೈಸೂರು ಯುದ್ಧ ಯಾವ ಒಪ್ಪಂದದಿಂದ ಕೊನೆಯಾಯಿತು?

೧೪. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧ ಯಾವಾಗ ಆರಂಭವಾಯಿತು?

೧೫. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದ ಸಮಯದಲ್ಲಿ ಭಾರತದ ಗವರ್ನರ್ ಜನರಲ್ ಯಾರಾಗಿದ್ದರು?

೧೬. ಟಿಪ್ಪು ಯಾವಾಗ ಮರಣ ಹೊಂದಿದನು?

೧೭. ಶ್ರೀರಂಗಪಟ್ಟಣದಲ್ಲಿರುವ ಟಿಪ್ಪು ನಿರ್ಮಿಸಿದ ಅರಮನೆ ಯಾವುದು?

೧೮. ಟಿಪ್ಪುವಿನ ಬೇಸಿಗೆ ಅರಮನೆ ಎಲ್ಲಿದೆ?

೧೯. ಬ್ರಿಟಿಷರು ಮೈಸೂರು ರಾಜ್ಯವನ್ನು ಯಾರಿಗೆ ಮರಳಿಸಿದರು?

೨೦. ಲಕ್ಷ್ಮಮ್ಮಣ್ಣಿ ಯಾರು?

೨೧. ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನರೋಹಣ ಮಾಡಿದ್ದು ಯಾವಾಗ?

೨೨. ಬ್ಯಾರಿಕ್ಲೋಸ್ ಏನಾಗಿದ್ದ?

೨೩. 'ಅಭಿನವ ಕಾಳಿದಾಸ' ಎಂದು ಯಾರನ್ನು ಕರೆಯುತ್ತಿದ್ದರು?

೨೪. ಬೂದಿ ಬಸಪ್ಪ ಅಥವಾ ಸದರಮಲ್ಲ ಯಾರು?

೨೫. 'ಶ್ರೀತತ್ವ ನಿಧಿ'ಯ ಕರ್ತೃ ಯಾರು?

೨೬. ದೇವಚಂದ್ರನ ಕೃತಿ ಯಾವುದು?

೨೭. ಕಮಿಷನರುಗಳ ಆಡಳಿತವು ಆರಂಭಗೊಂಡದ್ದು ಯಾವಾಗ?

೨೮. ಮೈಸೂರಿನ ಮೊದಲ ಮುಖ್ಯ ಕಮಿಷನರ್ ಯಾರು?

೨೯. ಕಬ್ಬನ್ ಅವರ ಆಡಳಿತಾವಧಿ ಯಾವುದು?

೩೦. ಅಠಾರ ಕಚೇರಿಯನ್ನು ಯಾರು ಸ್ಥಾಪಿಸಿದರು?

೩೧. ನಾಲ್ವಡಿ ಕೃಷ್ಣರಾಜ ಒಡೆಯರು ಅಧಿಕಾರಕ್ಕೆ ಬಂದ ವರ್ಷ ಯಾವುದು?

೩೨. ವಿಶ್ವೇಶ್ವರಯ್ಯನವರು ಹುಟ್ಟಿದ್ದು ಎಲ್ಲಿ?

೩೩. ಕೆ. ಶೇಷಾದ್ರಿ ಐಯರ್ ಅವರು ಹುಟ್ಟಿದ್ದು ಎಲ್ಲಿ?
೩೪. ಮಿರ್ಜಾ ಇಸ್ಮೈಲ್ ಹುಟ್ಟಿದ್ದು ಯಾವಾಗ?
೩೫. ಕ್ರಿ.ಶ. ೧೮೫೭ ರಲ್ಲಿ ಮೊದಲು ಬಂಡಾಯ ಹೂಡಿದವರರಾರು?
೩೬. ಕೆ.ಪಿ.ಸಿ.ಸಿ.ಯ ಮೊದಲ ಅಧ್ಯಕ್ಷರಾರು?
೩೭. ಬೆಳಗಾವಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದವರಾರು?
೩೮. ವಿದುರಾಶ್ವತ್ಥ ದುರಂತ ಯಾವಾಗ ಸಂಭವಿಸಿತು?
೩೯. ಕಿತ್ತೂರಿನ ಬಂಡಾಯದ ನಾಯಕತ್ವ ವಹಿಸಿದ್ದವರಾರು?
೪೦. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿಯ ಪ್ರೇರಕರಾರು?
೪೧. ಏಕೀಕರಣಕ್ಕೆ ಮೊದಲಿನ ಕನ್ನಡದ ಭೂ ಪ್ರದೇಶಗಳೆಷ್ಟು?
೪೨. ನಾಡು ಎಷ್ಟು ಆಡಳಿತ ಘಟಕಗಳಲ್ಲಿ ವಿಭಜಿತವಾಗಿತ್ತು?
೪೩. ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ ಆಗಿದ್ದು ಯಾವಾಗ?
೪೪. ಮೊಟ್ಟಮೊದಲ ಬಾರಿಗೆ 'ಕನ್ನಡಿಗರ ಏಕೀಕರಣ'ವನ್ನು ಕುರಿತು ಬರೆದವರು ಯಾರು?
೪೫. ಹುಯಿಲಗೋಳ ನಾರಾಯಣರಾಯರ ಕವಿತೆ ಯಾವುದು?
೪೬. ನಾಡು ಏಕೀಕರಣಗೊಂಡದ್ದು ಯಾವಾಗ?
೪೭. ಏಕೀಕರಣಗೊಂಡ ನಾಡಿಗೆ ಏನೆಂದು ಹೆಸರಾಯಿತು?
೪೮. ವಿಧಾನಸೌಧದ ನಿರ್ಮಾತೃ ಯಾರು?

II. ಎರಡು ವಾಕ್ಯಗಳಲ್ಲಿ ಉತ್ತರಿಸಿ (೨ ಅಂಕಗಳು)

೧. ಹೈದರನ ವಿರುದ್ಧ ಮೈತ್ರಿಕೂಟವನ್ನು ರಚಿಸಿಕೊಂಡವರು ಯಾರು?
೨. ಮದ್ರಾಸ್ ಒಪ್ಪಂದದ ಷರತ್ತುಗಳೇನು?
೩. ಶ್ರೀರಂಗಪಟ್ಟಣದ ಒಪ್ಪಂದದ ಬಗ್ಗೆ ಬರೆಯಿರಿ.
೪. ಟಿಪ್ಪು ಯಾವ ದೇಶಗಳಿಗೆ ಸಹಾಯಕ್ಕಾಗಿ ತನ್ನ ರಾಯಭಾರಿಗಳನ್ನು ಕಳುಹಿಸಿದನು?
೫. ಶ್ರೀರಂಗಪಟ್ಟಣ ಒಪ್ಪಂದ ನಡೆದದ್ದು ಯಾವಾಗ? ಯಾರಿಗೆ?
೬. ಮುಮ್ಮಡಿ ಅವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳಾವುವು?
೭. ಕಬ್ಬನ್‌ರ ಅವಧಿಯ ಮೈಸೂರಿನ ಆಡಳಿತ ವಿಭಾಗಗಳೆಷ್ಟು? ಯಾವುವು?
೮. ಬೌರಿಂಗ್ ಅವರು ರೂಪಿಸಿದ ಕೃತಿಗಳಾವುವು?
೯. ಗಾಂಧೀಜಿ ಅವರು ನಾಲ್ವಡಿ ಅವರನ್ನು ಏನೆಂದು ಕರೆದರು? ಯಾಕೆ?
೧೦. ಶೇಷಾದ್ರಿ ಐಯರ್ ಅವರು ಚಾಲನೆ ನೀಡಿದ ಯಾವುದಾದರೂ ಎರಡು ರೈಲುಮಾರ್ಗಗಳನ್ನು ಹೆಸರಿಸಿ.
೧೧. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಯಾವುದಾದರೂ ಎರಡು ಶಿಕ್ಷಣ ಸಂಸ್ಥೆಗಳನ್ನು ಹೆಸರಿಸಿ.

೧೨. ಮಿರ್ಜಾ ಇಸ್ಮೈಲ್ ಅವರು ಸ್ಥಾಪಿಸಿದ ಯಾವುದಾದರೂ ಎರಡು ಕಾರ್ಖಾನೆಗಳನ್ನು ಹೆಸರಿಸಿ.

೧೩. 'ಹಿಂದೂಸ್ಥಾನಿ ಸೇವಾದಳ'ದ ಬಗ್ಗೆ ನಿಮಗೇನು ತಿಳಿದಿದೆ.

೧೪. 'ಅರಣ್ಯ ಸತ್ಯಾಗ್ರಹ' ಎಂದರೇನು?

೧೫. 'ಈಸೂರು ದುರಂತ' ಏಕೆ ಸಂಭವಿಸಿತು?

೧೬. ಹೈದರಾಬಾದ್ ಕರ್ನಾಟಕ ಎಷ್ಟು ಜಿಲ್ಲೆಗಳನ್ನು ಒಳಗೊಂಡಿತ್ತು? ಅವು ಯಾವುವು?

೧೭. ಡೆಪ್ಯೂಟಿ ಚೆನ್ನಬಸಪ್ಪ ಎಲ್ಲಿಯವರು? ಅವರು ಏನಾಗಿದ್ದರು?

೧೮. 'ಕರ್ನಾಟಕ ಭಾಷೋಜ್ಜೀವಿನಿ ಸಭಾ' ಯಾವಾಗ? ಎಲ್ಲಿ ಹುಟ್ಟಿತು?

೧೯. 'ಕರ್ನಾಟಕ ಸಭಾ' ಯಾವಾಗ? ಎಲ್ಲಿ ಹುಟ್ಟಿತು?

೨೦. ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದವರು ಯಾರು?

೨೧. ಫಜಲ್ ಅಲಿ ಆಯೋಗದಲ್ಲಿದ್ದ ಇತರೆ ಸದಸ್ಯರು ಯಾರು?

೨೨. ಎಸ್ಸೆನ್ ಎಷ್ಟು ಬಾರಿ ಮುಖ್ಯಮಂತ್ರಿ ಆಗಿದ್ದರು?

III. ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ (೫ ಅಂಕಗಳು)

೧. ಹೈದರಾಲಿಯ ಬಾಲ್ಯ ಜೀವನದ ಬಗ್ಗೆ ಬರೆಯಿರಿ.

೨. ಮೊದಲನೆಯ ಆಂಗ್ಲೋ-ಮೈಸೂರು ಯುದ್ಧದ ಕಾರಣಗಳು ಹಾಗೂ ಪರಿಣಾಮಗಳನ್ನು ತಿಳಿಸಿ.

೩. ಎರಡನೆಯ ಆಂಗ್ಲೋ-ಮೈಸೂರು ಯುದ್ಧದ ಕಾರಣಗಳು ಹಾಗೂ ಪರಿಣಾಮಗಳನ್ನು ತಿಳಿಸಿ.

೪. ಟಿಪ್ಪುವಿನ ಬಾಲ್ಯ ಜೀವನದ ಬಗ್ಗೆ ತಿಳಿಸಿ.

೫. ಮೂರನೆಯ ಆಂಗ್ಲೋ-ಮೈಸೂರು ಯುದ್ಧದ ಕಾರಣಗಳು ಹಾಗೂ ಪರಿಣಾಮಗಳನ್ನು ತಿಳಿಸಿ.

೬. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದ ಕಾರಣಗಳು ಹಾಗೂ ಪರಿಣಾಮಗಳ ಬಗ್ಗೆ ಬರೆಯಿರಿ.

೭. ಟಿಪ್ಪುವಿನ ಆಡಳಿತದ ಬಗ್ಗೆ ಬರೆಯಿರಿ.

೮. 'ನಗರ ದಂಗೆ'ಯನ್ನು ಕುರಿತು ಬರೆಯಿರಿ.

೯. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಆಸ್ಥಾನ ಕವಿಗಳು ಯಾರು?

೧೦. ಕಬ್ಬನ್ ಅವರು ಜಾರಿಗೆ ತಂದ ನ್ಯಾಯಾಡಳಿತ ವ್ಯವಸ್ಥೆಯನ್ನು ಕುರಿತು ಬರೆಯಿರಿ.

೧೧. ಬೌರಿಂಗ್ ಅವರು ಜಾರಿಗೆ ತಂದ ಪೊಲೀಸ್ ವ್ಯವಸ್ಥೆ ಯಾವ ಬಗೆಯದು?

೧೨. ಅಧಿಕಾರ ವರ್ಗಾವಣೆ (ಪುನರ್ದಾನ) ಎಂದರೇನು? ವಿವರಿಸಿ.

೧೩. ಶೇಷಾದ್ರಿ ಐಯರ್ ಅವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳನ್ನು ಕುರಿತು ಬರೆಯಿರಿ.

೧೪. ವಿಶ್ವೇಶ್ವರಯ್ಯನವರ ಕೃತಿಗಳನ್ನು ಕುರಿತು ಬರೆಯಿರಿ.

೧೫. ಮಿರ್ಜಾ ಇಸ್ಮೈಲ್‌ರು ಜಾರಿಗೆ ತಂದ ಕಾಯಿದೆಗಳನ್ನು ಕುರಿತು ಬರೆಯಿರಿ.
೧೬. ಕರ್ನಾಟಕದಲ್ಲಿ ನಡೆದ ಅಸಹಕಾರ ಚಳವಳಿಯ ಮುಖ್ಯ ಘಟನೆಗಳೇನು?
೧೭. ಬೆಳಗಾವಿ ಕಾಂಗ್ರೆಸ್ಸಿನ ಮಹತ್ವವೇನು?
೧೮. ಕರ್ನಾಟಕದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಮುಖ್ಯ ಘಟನೆಗಳನ್ನು ತಿಳಿಸಿ.
೧೯. ಶಿವಪುರದ ಕೋಲಾಹಲದ ಬಗೆಗೆ ವಿವರಣೆ ನೀಡಿ.
೨೦. ಮೈಸೂರು ಚಲೋ ಚಳವಳಿಯ ಕಾರಣ ಮತ್ತು ಘಟನೆಗಳನ್ನು ತಿಳಿಸಿ.
೨೧. ಕರ್ನಾಟಕ ಏಕೀಕರಣಕ್ಕೆ ಮೊದಲಿದ್ದ ಐದು ಆಡಳಿತ ಘಟಕಗಳನ್ನು ಕುರಿತು ಬರೆಯಿರಿ.
೨೨. ಬೆಳಗಾಂ ಕಾಂಗ್ರೆಸ್ ಅಧಿವೇಶನದ ಮಹತ್ವವೇನು?
೨೩. ನಾಡಿನ ಏಕೀಕರಣಕ್ಕೆ ದುಡಿದ ಕಾಂಗ್ರೆಸಿಗರಾರು?
೨೪. 'ಕರ್ನಾಟಕ' ನಾಮಕರಣವನ್ನು ಕುರಿತು ಬರೆಯಿರಿ.

IV. ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ. (೧೦ ಅಂಕಗಳು)

೧. ಹೈದರಾಲಿಯ ಜೀವನ ಮತ್ತು ಸಾಧನೆಗಳನ್ನು ತಿಳಿಸಿ.
೨. ಟಿಪ್ಪುಸುಲ್ತಾನನ ಜೀವನ ಮತ್ತು ಸಾಧನೆಗಳ ಬಗ್ಗೆ ತಿಳಿಸಿ.
೩. ಮುಮ್ಮಡಿ ಕೃಷ್ಣರಾಜ ಒಡೆಯರ ಜೀವನ ಹಾಗೂ ಸಾಧನೆಗಳನ್ನು ಕುರಿತು ಬರೆಯಿರಿ.
೪. ಪೂರ್ಣಯ್ಯನವರ ಜೀವನ ಹಾಗೂ ಆಡಳಿತ ಸುಧಾರಣೆಗಳನ್ನು ಕುರಿತು ಬರೆಯಿರಿ.
೫. ಮಾರ್ಕ್ ಕಬ್ಬನ್ ಅವರು ಕೈಗೊಂಡ ಆಡಳಿತ ಸುಧಾರಣೆಗಳನ್ನು ಕುರಿತು ಬರೆಯಿರಿ.
೬. ಲೂಯಿ ಬೆನ್ಹಾಮ್ ಬೌರಿಂಗ್ ಅವರ ಆಡಳಿತ ವೈಖರಿಯನ್ನು ಕುರಿತು ಬರೆಯಿರಿ.
೭. ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ಕುರಿತು ವಿವರಿಸಿ.
೮. ಕೆ. ಶೇಷಾದ್ರಿ ಐಯರ್ ಅವರ ಜೀವನ ಹಾಗೂ ಸಾಧನೆಗಳೇನು?
೯. ವಿಶ್ವೇಶ್ವರಯ್ಯನವರು ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ ರೀತಿ ಯಾವ ಬಗೆಯದು?
೧೦. ಮಿರ್ಜಾ ಇಸ್ಮೈಲ್‌ರು ಜಾರಿಗೆ ತಂದ ಆಡಳಿತ ಸುಧಾರಣೆಗಳೇನು? ವಿವರಿಸಿ.
೧೧. ಬ್ರಿಟಿಷರ ವಿರುದ್ಧ ನಡೆದ ಸಶಸ್ತ್ರ ಬಂಡಾಯಗಳನ್ನು ಕುರಿತು ವಿವರಿಸಿ.
೧೨. ರಾಷ್ಟ್ರೀಯ ಕಾಂಗ್ರೆಸಿನ ಹೋರಾಟದಲ್ಲಿ ಕರ್ನಾಟಕದ ಪಾತ್ರವನ್ನು ಕುರಿತು ವಿವರಿಸಿ.
೧೩. ನಾಡಿನ ಏಕೀಕರಣದ ಆರಂಭಿಕ ಪ್ರಯತ್ನಗಳನ್ನು ಕುರಿತು ಬರೆಯಿರಿ.
೧೪. ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನೇಮಕಗೊಂಡಿದ್ದ ಆಯೋಗಗಳನ್ನು ಕುರಿತು ಬರೆಯಿರಿ.
೧೫. ಭಾರತ ರಾಷ್ಟ್ರೀಯ ಕಾಂಗ್ರೆಸ್ ಏಕೀಕರಣಕ್ಕೆ ತೊಡಗಿಸಿಕೊಂಡ ಬಗೆಯನ್ನು ಕುರಿತು ವಿಮರ್ಶಿಸಿ.
೧೬. ಕರ್ನಾಟಕ ಏಕೀಕರಣ ಚಳವಳಿಯನ್ನು ಕುರಿತು ಬರೆಯಿರಿ.
೧೭. ಕೆಂಗಲ್ ಹನುಮಂತಯ್ಯನವರ ಜೀವನ ಹಾಗೂ ಸಾಧನೆಗಳನ್ನು ಕುರಿತು ವಿವರಿಸಿ.
೧೮. ಎಸ್. ನಿಜಲಿಂಗಪ್ಪನವರ ಜೀವನ ಹಾಗೂ ಸಾಧನೆಗಳನ್ನು ವಿವರಿಸಿ.

೧೯. ಡಿ. ದೇವರಾಜ ಅರಸು ಅವರ ಜೀವನ ಹಾಗೂ ಸಾಧನೆಗಳನ್ನು ಕುರಿತು ವಿವರಿಸಿ.

V. ಹೆಚ್ಚಿನ ಜ್ಞಾನಕ್ಕಾಗಿ ಕಾರ್ಯ-ಯೋಜನೆಗಳು (Assignments/Projects)

೧. ಹೈದರಾಲಿಯ ಏಳಿಗೆ ಬಗೆಗೆ ಪ್ರಬಂಧ ರಚಿಸಿ.

೨. ಟಿಪ್ಪುವಿನ ವ್ಯಕ್ತಿತ್ವ ಹಾಗೂ ಆಡಳಿತವನ್ನು ಕುರಿತು ಬರೆಯಿರಿ.

೩. ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಕಾಲಾವಧಿಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹವನ್ನು ಕುರಿತು ಪ್ರಬಂಧ ರಚಿಸಿ.

೪. ಕಮಿಷನರುಗಳ ಆಡಳಿತಾವಧಿಯಲ್ಲಿ ಮೈಸೂರು ಕಂಡ ಸ್ಥಿತ್ಯಂತರಗಳನ್ನು ಕುರಿತು ಪ್ರಬಂಧ ರಚಿಸಿ.

೫. ಮೈಸೂರು ಸಂಸ್ಥಾನವನ್ನು 'ಮಾದರಿ ರಾಜ್ಯ'ವನ್ನಾಗಿ ಪರಿವರ್ತಿಸುವಲ್ಲಿ ದಿವಾನ್ ವಿಶ್ವೇಶ್ವರಯ್ಯನವರ ಪಾತ್ರವನ್ನು ಕುರಿತು ಪ್ರಬಂಧ ರಚಿಸಿ.

೬. ಕರ್ನಾಟಕದ ವೀರಮಹಿಳೆ ಕಿತ್ತೂರು ಚೆನ್ನಮ್ಮನನ್ನು ಕುರಿತು ಪ್ರಬಂಧ ರಚಿಸಿ.

೭. ಈಸೂರು ದುರಂತದ ಬಗೆಗೆ ಪ್ರಬಂಧವನ್ನು ಸಿದ್ಧಪಡಿಸಿ.


೮. ಏಕೀಕರಣ ಚಳವಳಿಗೆ ಪ್ರೇರಣೆ ನೀಡಿದ ಸಾಹಿತಿಗಳು ಹಾಗೂ ಅವರ ಸಾಹಿತ್ಯವನ್ನು ಕುರಿತು ಪ್ರಬಂಧ ರಚಿಸಿ.

೯. ಕೆಂಗಲ್ ಹನುಮಂತಯ್ಯನವರನ್ನು ಕುರಿತು ಪ್ರಬಂಧ ರಚಿಸಿ.

೧೦. ಡಿ. ದೇವರಾಜ ಅರಸು ಅವರ ನೇತೃತ್ವದ ಹಿಂದುಳಿದ ವರ್ಗಗಳ ಪ್ರಗತಿಯನ್ನು ಕುರಿತು ಪ್ರಬಂಧ ರಚಿಸಿ.

ಅಧ್ಯಾಯ ೬

ನಕಾಶೆ ರಚನೆ



ಐತಿಹಾಸಿಕ ಮಹತ್ವ ಪಡೆದ ಸ್ಥಳಗಳು

ಐತಿಹಾಸಿಕ ಮಹತ್ವ ಪಡೆದ ಸ್ಥಳಗಳು

೧. ಜಲಿಯನ್‌ವಾಲಾ ಬಾಗ್

ಪಂಜಾಬಿನ ಅಮೃತಸರದಲ್ಲಿರುವ ಸ್ಥಳ. ಇದು ಮೂರೂ ಕಡೆಗಳಲ್ಲೂ ಕಟ್ಟಡಗಳಿಂದ ಸುತ್ತುವರೆದಿದ್ದು ಕೇವಲ ಒಂದು ಕಡೆಗೆ ಮಾತ್ರ ಪ್ರವೇಶ ದ್ವಾರ ಹೊಂದಿದ್ದ ಬಾಗ್ (ಅಂಗಣ). ಸಾರ್ವಜನಿಕ ಸಭೆ-ಸಮಾರಂಭಗಳಿಗೆ ಜನರು ಸೇರುತ್ತಿದ್ದ ಆಯಾಕಟ್ಟಿನ ಸ್ಥಳವಾಗಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತೀಯರು ಬ್ರಿಟಿಷರ ಶಸ್ತ್ರಾಸ್ತ್ರ ಕಾಯಿದೆ ಹಾಗೂ ದಬ್ಬಾಳಿಕೆ ವಿರುದ್ಧ ಪ್ರತಿಭಟಿಸಲು (೧೯೧೯ ರಲ್ಲಿ) ಮುಂದಾಗಿದ್ದರು. ಪಂಜಾಬಿನಲ್ಲಿ ನೇತೃತ್ವ ವಹಿಸಿದ್ದ ಧುರೀಣರಾಗಿದ್ದ ಡಾ. ಸೈಫುದ್ದೀನ್ ಕಿಚ್ಲೂ ಮತ್ತು ಡಾ. ಸತ್ಯಪಾಲ ಅವರನ್ನು ಸರ್ಕಾರ ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಿತ್ತು. ಈ ಕ್ರಮವನ್ನು ವಿರೋಧಿಸಿ ಪ್ರತಿಭಟಿಸಲು ನಿಶ್ಯಸ್ತ್ರರಾದ ಸಾವಿರಾರು ಜನರು ೧೩.೪.೧೯೧೯ ರಂದು ಜಲಿಯನ್‌ವಾಲಾ ಬಾಗ್‌ನಲ್ಲಿ ಸಭೆ ಸೇರಿದ್ದರು. ಸ್ಥಳೀಯ ಬ್ರಿಟಿಷ್ ಸೈನಿಕಾಧಿಕಾರಿ ಜನರಲ್ ಡಯರ್‌ನು ಈ ಪ್ರತಿಭಟನಕಾರರನ್ನು ಹತ್ತಿಕ್ಕಲು ಮುಂದಾದ. ಯಾವುದೇ ಮುನ್ನೆಚ್ಚರಿಕೆ ನೀಡದೆ ಈತ ಪ್ರವೇಶದ್ವಾರದ ಮೂಲಕ ಜನರನ್ನು ಸುತ್ತುವರೆದು ಗುಂಡಿನ ಸುರಿಮಳೆಗರೆದ. ಇದರಿಂದ ಸಾವಿರಾರು ಜನರು ಸಾವನ್ನಪ್ಪಿದ್ದರು. ಚರಿತ್ರೆಯಲ್ಲಿನ ಈ ಘಟನೆ 'ಜಲಿಯನ್ ವಾಲಾ ಬಾಗ್ ದುರಂತ'ವೆಂದೇ ದಾಖಲಾಗಿದೆ.

೨. ಮೀರತ್

ಇದು ಉತ್ತರ ಪ್ರದೇಶದಲ್ಲಿದೆ. ದೆಹಲಿಯಿಂದ ೫೮ ಕಿ.ಮೀ. ದೂರದಲ್ಲಿ ಇರುವ ಮೀರತ್, ೧೮೫೭ ರ ಸಿಪಾಯಿ ದಂಗೆಯಲ್ಲಿ ಪ್ರಸಿದ್ಧಿ ಪಡೆದ ಸ್ಥಳ. ಕೊಬ್ಬು ಸವರಿದ ತೋಟಾಗಳನ್ನು ಬಳಸಲು ವಿರೋಧಿಸಿದ ಭಾರತೀಯ ಸಿಪಾಯಿಗಳು ಮೀರತ್‌ನಲ್ಲಿ ದಂಗೆಯೆದ್ದರು. ಮೀರತ್ ಸೇನಾ ತುಕಡಿಯ ೯೦ ಜನ ಸಿಪಾಯಿಗಳು ೨೪.೪.೧೮೫೭ ರಂದು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಬಹುಪಾಲು ಸಿಪಾಯಿಗಳನ್ನು ಅಮಾನತ್ತುಗೊಳಿಸಲಾಯಿತು. ಕೆಲವರನ್ನು ಗಲ್ಲಿಗೇರಿಸಿ, ಮತ್ತೆ ಕೆಲವರನ್ನು ಬಂಧನದಲ್ಲಿರಿಸಲಾಯಿತು. ಮೀರತ್ ಸೈನಿಕರು ಅನೇಕ ಬ್ರಿಟಿಷ್ ಅಧಿಕಾರಿಗಳನ್ನು ಕೊಂದು ಚರಿತ್ರೆಯಲ್ಲಿ ದಾಖಲಾದರು.

೩. ಕಲ್ಕತ್ತ

ಈ ಹೊತ್ತಿನ ಪಶ್ಚಿಮ ಬಂಗಾಳದ ರಾಜಧಾನಿಯೇ ಕಲ್ಕತ್ತ. ಇದನ್ನು ಇಂದು 'ಕೊಲ್ಕತ್ತಾ' ಎಂದು ಕರೆಯಲಾಗುತ್ತಿದ್ದು, ೧೯೧೧ ರವರೆಗೆ (ವಂಗ ಭಂಗ ಘಟನೆ ರದ್ದಾಗುವವರೆಗೆ) ಇಂಡಿಯಾದ ರಾಜಧಾನಿಯೂ ಹೌದು. ಆಂಗ್ಲರ ಪ್ರಮುಖ ವಸಾಹತು ನೆಲೆಯಾಗಿತ್ತು. ಅಲ್ಲದೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಅಸ್ತಿತ್ವವನ್ನು ಪಡೆದ ಫೋರ್ಟ್ ವಿಲಿಯಂ ಕೋಟೆಯ ತಾಣ. ೧೯೦೬ ರ ಕಾಂಗ್ರೆಸ್ ಅಧಿವೇಶನವು ಕಲ್ಕತ್ತಾದಲ್ಲಿ ನಡೆಯಿತು.

ಇದರ ಅಧ್ಯಕ್ಷತೆ ವಹಿಸಿದ್ದವರು ದಾದಾಬಾಯಿ ನವರೋಜಿ. ಕಲ್ಕತ್ತಾ ಅಧಿವೇಶನದಲ್ಲಿ ಮೊದಲ ಬಾರಿಗೆ 'ಸ್ವರಾಜ್ಯ' ಪದ ಬಳಕೆ ಆಯಿತು.

೪. ಔಧ್

'ಅಯೋಧ್ಯೆ' ಎಂದೇ ಖ್ಯಾತಿ ಪಡೆದ ಸ್ಥಳ ಔಧ್ ಅಥವಾ ಅವಧ. ಇದು ಉತ್ತರ ಪ್ರದೇಶದಲ್ಲಿದೆ. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಔಧ್‌ನ ಬೇಗಂ ಸೋಲನ್ನು ಅನುಭವಿಸಬೇಕಾಯಿತು. ಡಾಲ್‌ಹೌಸಿಯು ತನ್ನ ಕುತಂತ್ರ ನೀತಿಯಿಂದ ಇದನ್ನು ಕಬಳಿಸಿದ. ಅಲ್ಲದೆ ಔಧ್ ೧೮೫೭ ರ ದಂಗೆಯ ಪ್ರಮುಖ ತಾಣಗಳಲ್ಲಿ ಒಂದು.

೫. ಚಿತ್ತಗಾಂಗ್

ಬಾಂಗ್ಲಾದೇಶದಲ್ಲಿರುವ ಸ್ಥಳ. ಇದು ಬರ್ಮಿಯರ ವಶದಲ್ಲಿತ್ತು. ಆಂಗ್ಲರು ಇದನ್ನು ೧೮೫೨ ರಲ್ಲಿ ವಶಪಡಿಸಿಕೊಂಡರು. ಚಿತ್ತಗಾಂಗ್ ಕ್ರಾಂತಿಕಾರಿಗಳ ಕೇಂದ್ರವೂ ಹೌದು. ಬ್ರಿಟಿಷರ ಶಸ್ತ್ರಾಸ್ತ್ರಗಳ ನೆಲೆಯಾಗಿದ್ದ ಈ ಸ್ಥಳದ ಮೇಲೆ ಸೂರ್ಯಸೇನನು ೧೮.೪.೧೯೩೦ ರಂದು ಕ್ರಾಂತಿಕಾರಿಗಳೊಂದಿಗೆ ಲೂಟಿ ಮಾಡಿದ್ದ.

೬. ಚೌರಿ-ಚೌರಾ

ಇದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯಲ್ಲಿನ ಒಂದು ಗ್ರಾಮ. ಗಾಂಧೀಜಿ ಅವರು ಅಸಹಕಾರ ಆಂದೋಲನಕ್ಕೆ ಕರೆ ನೀಡಿದ್ದ ಸಂದರ್ಭದಲ್ಲಿ ನಡೆದ ಒಂದು ಘಟನೆ ಚೌರಿ-ಚೌರಾವನ್ನು ಚರಿತ್ರೆಯಲ್ಲಿ ದಾಖಲು ಆಗುವಂತೆ ಮಾಡಿತು. ೫.೨.೧೯೨೨ ರಂದು ೩೦೦೦ಕ್ಕೂ ಹೆಚ್ಚಿದ್ದ ರೈತರ ಗುಂಪೊಂದು ಚೌರಿ-ಚೌರಾದ ಪೊಲೀಸ್ ಠಾಣೆಯನ್ನು ಮುತ್ತಿಗೆ ಹಾಕಿತು. ಅಲ್ಲದೆ ಅಲ್ಲಿದ್ದ ೨೨ ಮಂದಿ ಪೊಲೀಸರನ್ನು ಜೀವಂತ ಸುಟ್ಟರು. ಇದರಿಂದ ಭಯಭೀತರಾದ ಗಾಂಧೀಜಿ ಅವರು ೧೨.೨.೧೯೨೨ ರಂದು ಬಾರ್ದೋಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಕರೆದು ಈ ಅಸಹಕಾರ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಂಡರು.

೭. ದಂಡಿ

ಗುಜರಾತಿನ ಸೂರತ್ತಿನಲ್ಲಿರುವ ಸಮುದ್ರ ತೀರ ಪ್ರದೇಶವೇ ದಂಡಿ. ಗಾಂಧೀಜಿ ಅವರು ತಮ್ಮ ೭೮ ಅನುಯಾಯಿಗಳೊಡನೆ ೧೨.೩.೧೯೩೦ ರಂದು ಶಬರಮತಿ ಆಶ್ರಮವನ್ನು ಬಿಟ್ಟು ೩೮೫ ಕಿ.ಮೀ.ಗಳ ದೂರವನ್ನು ಕಾಲ್ನಡಿಗೆಯಲ್ಲಿಯೆ ಜಾತಾ ಹೊರಟು ದಂಡಿ ತಲುಪಿದರು. (ಏಪ್ರಿಲ್ ೬ ರಂದು). ಅಲ್ಲಿ ಒಂದು ಹಿಡಿ ಉಪ್ಪನ್ನು ಎತ್ತಿಕೊಳ್ಳುವುದರ ಮೂಲಕ ಬ್ರಿಟಿಷ್ ವಿರೋಧಿ ಉಪ್ಪಿನ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು.

೮. ಈಸೂರು

ಕ್ವಿಟ್ ಇಂಡಿಯಾ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸ್ವಾತಂತ್ರ್ಯವನ್ನು ಮೊಟ್ಟಮೊದಲಿಗೆ ಘೋಷಿಸಿಕೊಂಡ ಗ್ರಾಮವೇ ಈಸೂರು. ಇದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ

ತಾಲ್ಲೂಕಿನಲ್ಲಿದೆ. 'ಬೇಜಾವಬ್ದಾರಿ ಸರ್ಕಾರದವರು ಗ್ರಾಮದೊಳಗೆ ಬರಬಾರದೆ'ಂದು ಬೋರ್ಡ್ ನೇತಾಕಿ ಪ್ರತಿಭಟಿಸಿದ ಊರು ಈಸೂರು. ಇಲ್ಲಿ ನಡೆದ ಚಳವಳಿಯಲ್ಲಿ ಒಬ್ಬ ತಹಸೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಯನ್ನು ಜನ ಕೊಂದರು. ಇದಕ್ಕಾಗಿ ಊರಿನ ಐದು ಜನರನ್ನು ಬ್ರಿಟಿಷ್ ಸರ್ಕಾರ ಮರಣದಂಡನೆಗೆ ಗುರಿಪಡಿಸಿತು.

೯. ವಿದುರಾಶ್ವಥ

'ಕರ್ನಾಟಕದ ಜಲಿಯನ್‌ವಾಲಾ ಬಾಗ್ ದುರಂತ'ವೆಂದೇ ಖ್ಯಾತಿ ಪಡೆದ 'ವಿದುರಾಶ್ವಥ ದುರಂತ' ಚರಿತ್ರೆಯಲ್ಲಿ ದಾಖಲಾಗಿದೆ. ೧೯೩೮ ರ ಏಪ್ರಿಲ್ ೨೫ ರಂದು ಸಾವಿರಾರು ಜನ ಪ್ರತಿಭಟನಕಾರರು ಸಭೆ ಸೇರಿ ಧ್ವಜಾರೋಹಣ ಮಾಡಿ ನಿಷೇಧಾಜ್ಞೆಯನ್ನು ಮುರಿದರು. ಅಲ್ಲದೆ ಪೊಲೀಸರು ಅನೇಕರನ್ನು ಬಂಧಿಸಿದರು. ಇದರ ವಿರುದ್ಧ ಶಾಂತವಾಗಿ ಪ್ರತಿಭಟಿಸು ತ್ತಿದ್ದ ಜನರ ಮೇಲೆ ಏಕಾ-ಏಕಿ ಗುಂಡಿನ ಮಳೆಗರೆಯಲಾಯಿತು. ಈ ದುರಂತಕ್ಕೆ ಅನೇಕ ಜನ ಬಲಿ ಆಗಬೇಕಾಯಿತು. ಗೌರಮ್ಮ ಎಂಬ ಗರ್ಭಿಣಿಯಷ್ಟೇ ಅಲ್ಲದೆ ೩೫ ಮಂದಿ ಗುಂಡಿಗೆ ಬಲಿಯಾದರು. ವಿದುರಾಶ್ವಥವು ಕೋಲಾರದ ಗೌರಿಬಿದನೂರು ತಾಲ್ಲೂಕಿನಲ್ಲಿದೆ.

೧೦. ಅಂಕೋಲ

ಇದು ಉತ್ತರ ಕನ್ನಡ ಜಿಲ್ಲೆಯ ಸಮುದ್ರ ತೀರದಲ್ಲಿದೆ. ಗಾಂಧೀಜಿ ಅವರ ಕಾನೂನುಭಂಗ ಚಳವಳಿಗೆ ಪ್ರತಿಕ್ರಿಯೆಯಾಗಿ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ೧೩.೪.೧೯೩೦ ರಂದು ಎಂ.ಪಿ. ನಾಡಕರ್ಣಿ ಅವರ ನೇತೃತ್ವದಲ್ಲಿ ಸುಮಾರು ೧೦,೦೦೦ ಕ್ಕೂ ಹೆಚ್ಚಿನ ಚಳವಳಿಗಾರರು ಅಂಕೋಲಾದಲ್ಲಿ ಸೇರಿ ಉಪ್ಪನ್ನು ತಯಾರಿಸುವುದರ ಮುಖೇನ ಕಾನೂನನ್ನು ಮುರಿದರು. ಕಾರ್ನಾಡ್ ಸದಾಶಿವರಾವ್, ಆರ್.ಆರ್. ದಿವಾಕರ, ಎನ್.ಎಸ್. ಹರ್ಡೀಕರ್ ಮೊದಲಾದವರು ಅಂಕೋಲಾದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

೧೧. ಬೆಳಗಾಂ

೧೯೨೪ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನವು ಕರ್ನಾಟಕದ ಬೆಳಗಾಂ ಜಿಲ್ಲೆಯಲ್ಲಿ ನಡೆಯಿತು. ಮೊಟ್ಟ ಮೊದಲ ಕರ್ನಾಟಕದ ಏಕೀಕರಣ ಸಮ್ಮೇಳನ ನಡೆದ ಸ್ಥಳವೂ ಹೌದು. ಗಾಂಧೀಜಿ ಅವರ ಅಧ್ಯಕ್ಷತೆಯ ಈ ಅಧಿವೇಶನದಲ್ಲಿ ಅವರು ಭಾಷಾವಾರು ಪ್ರಾಂತ್ಯಗಳ ರಚನೆಗೆ ಬೆಂಬಲ ನೀಡಿದ್ದೂ ಉಂಟು. ಇದು ಅಂದು ಮುಂಬಯಿ ಪ್ರಾಂತ್ಯಕ್ಕೆ ಸೇರಿತ್ತು.

೧೨. ಕ್ಯಾಲಿಕಟ್

ಇದು ಕೇರಳ ಕರಾವಳಿ ತೀರದಲ್ಲಿದ್ದ ಪೋರ್ಚ್‌ಗೀಸರ ವಸಾಹತು ನೆಲೆ. ಇದಕ್ಕೆ ಮತ್ತೊಂದು ಹೆಸರು ಕಲ್ಲಿಕೋಟೆ. ೧೭.೫.೧೪೯೮ ರಂದು ಪೋರ್ಚ್‌ಗೀಸ್ ನಾವಿಕ ವಾಸ್ಕೊ-

ಡ-ಗಾಮನು ಈ ಕ್ಯಾಲಿಕಟ್ ಬಂದರಿಗೆ ಬಂದು ತಲುಪಿದ. ಆ ಮೂಲಕ ಭಾರತಕ್ಕೆ ಒಂದು ಹೊಸ ಜಲಮಾರ್ಗವನ್ನು ಕಂಡುಹಿಡಿಯಲಾಯಿತು. ಆಗ ಜಾಮೋರಿನ್ ಅರಸ ಇದನ್ನು ಆಳುತ್ತಿದ್ದ. ಕ್ಯಾಲಿಕಟ್‌ನ್ನು ಬ್ರಿಟಿಷರು ಪೋರ್ಚ್‌ಗೀಸರಿಂದ ವಶಪಡಿಸಿಕೊಂಡರು.

೧೩. ಗೋವಾ

ಇದು ಪೋರ್ಚ್‌ಗೀಸರ ಪ್ರಮುಖ ವಾಣಿಜ್ಯಕೇಂದ್ರವೂ, ವಸಾಹತು ನೆಲೆಯೂ ಹಾಗೂ ಅವರ ರಾಜಧಾನಿಯೂ ಆಗಿದ್ದ ಸ್ಥಳ. ಇದು ಭಾರತದ ಪಶ್ಚಿಮ ತೀರದಲ್ಲಿರುವ ಪ್ರಮುಖ ಬಂದರು. ಬಿಜಾಪುರ ಸುಲ್ತಾನರ ಅಧೀನದಲ್ಲಿದ್ದ ಗೋವಾವನ್ನು ಪೋರ್ಚ್‌ಗೀಸರು ೧೫೧೦ ರಲ್ಲಿ ತಮ್ಮದನ್ನಾಗಿಸಿಕೊಂಡಿದ್ದರು.೧೯೬೧ ರವರೆಗೆ ಅವರ ಅಧೀನದಲ್ಲಿಯೇ ಇದ್ದ ಗೋವಾ ಅನಂತರ ಮುಕ್ತವಾಯಿತು.

೧೪. ಪಾಂಡಿಚೇರಿ

ಫ್ರೆಂಚರ ಪ್ರಮುಖ ವಸಾಹತು ನೆಲೆಯೂ, ರಾಜಧಾನಿಯೂ ಆಗಿದ್ದ ಸ್ಥಳ. ಮದ್ರಾಸ್ ಬಳಿಯಿರುವಂಥ ಈ ಬಂದರು ಪ್ರಮುಖ ವಾಣಿಜ್ಯ ಕೇಂದ್ರವೂ ಹೌದು. ಇಂದು ಭಾರತದ ಕೇಂದ್ರಾಡಳಿತ ಪ್ರದೇಶವಾಗಿದೆ. ಇದನ್ನು ೧೬೭೪ ರಲ್ಲಿ ಮಾರ್ಟಿನ್ ಎಂಬಾತ ಸ್ಥಾಪಿಸಿದ್ದ. ಇಂದು ಅಲ್ಲಿ ಅರವಿಂದ ಆಶ್ರಮವನ್ನು ನೋಡಬಹುದು.

೧೫. ಪ್ಲಾಸಿ

ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಕಾರಣವಾದ ಕದನ ನಡೆದದ್ದೇ 'ಪ್ಲಾಸಿ' ಎಂಬ ಸ್ಥಳದಲ್ಲಿ. ಇದು ಬಂಗಾಳದ ಕಲ್ಕತ್ತಾದಲ್ಲಿದೆ.೨೩.೬. ೧೭೫೭ ರಂದು ಪ್ಲಾಸಿಕದನವು ಸಿರಾಜ್-ಉದ್-ದೌಲ್ ಹಾಗೂ ರಾಬರ್ಟ್ ಕ್ಲೈವರ ನಡುವೆ ನಡೆಯಿತು. ಗೆದ್ದ ಆಂಗ್ಲರು ಬಂಗಾಳದ ಮೇಲೆ ನೇರ ಹಿಡಿತ ಸಾಧಿಸಿದರು.

೧೬. ಬಕ್ಸರ್

ಬಿಹಾರದಲ್ಲಿರುವ ಬಕ್ಸರ್, ೨೩.೧೦.೧೯೬೪ ರಂದು ಬಂಗಾಳದ ನವಾಬ ಮೀರ್ ಖಾಸಿಂ ಹಾಗೂ ಬ್ರಿಟಿಷರಿಗೂ ಯುದ್ಧ ನಡೆದ ಸ್ಥಳ. ಭಾರತದಲ್ಲಿ ಆಂಗ್ಲರು ಭದ್ರವಾಗಿ ನೆಲೆಗೊಳ್ಳಲು ಈ ಬಕ್ಸರ್ ಕದನ ಸುಲಭ ಮಾಡಿ ಕೊಟ್ಟಿತು.

೧೭. ಶ್ರೀರಂಗಪಟ್ಟಣ

ಇದು ಮೈಸೂರಿನ ಬಳಿಯಿರುವ ಹೈದರ್ ಮತ್ತು ಟಿಪ್ಪು ಸುಲ್ತಾನರ ರಾಜಧಾನಿ. ಆಂಗ್ಲರ ಸೇನಾ ಠಾಣೆ ಆಗಿದ್ದ ಈ ಸ್ಥಳ ಚಾರಿತ್ರಿಕವಾಗಿ ಮಹತ್ವ ಪಡೆದಿದೆ. ಟಿಪ್ಪುವಿನ ದರಿಯಾ ದೌಲತ್ ಅರಮನೆಯೂ ಇಲ್ಲಿದೆ. ಬ್ರಿಟಿಷ್ ಜನರಲ್ ಹ್ಯಾರಿಸ್ ಟಿಪ್ಪುವನ್ನು ಶ್ರೀರಂಗ ಪಟ್ಟಣದ ಯುದ್ಧದಲ್ಲಿ ಸೋಲಿಸಿದ್ದ.

೧೮. ಹೈದರಾಬಾದ್

ಇಂದು ಆಂಧ್ರಪ್ರದೇಶದ ರಾಜಧಾನಿ ಆಗಿರುವ ಹೈದರಾಬಾದ್ ನಿಜಾಮರ ರಾಜಧಾನಿಯೂ ಆಗಿತ್ತು. ಈ ನಗರವನ್ನು ಕುಲಿ-ಕುತುಬ್ ಷಹ ಎಂಬುವವನು ನಿರ್ಮಿಸಿದ. ಭಾರತವು ಸ್ವಾತಂತ್ರ್ಯವನ್ನು ಹೊಂದಿದ ಮೇಲೆ ಹೈದರಾಬಾದಿನ ನಿಜಾಮ ಒಕ್ಕೂಟವನ್ನು ಸೇರಲು ನಿರಾಕರಿಸಿದ್ದ. ಅಂದಿನ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರು ೧೯೪೮ ರಲ್ಲಿ ಸೈನಿಕ ಕಾರ್ಯಾಚರಣೆಯನ್ನು ನಡೆಸುವುದರ ಮುಖೇನ ಇದನ್ನು ಭಾರತ ಒಕ್ಕೂಟಕ್ಕೆ ಸೇರಿಸಿದರು.

೧೯. ಮೈಸೂರು

ಒಡೆಯರುಗಳ ಆಳ್ವಿಕೆಯ ರಾಜಧಾನಿ ಮೈಸೂರು ಆಗಿತ್ತು. ಕರ್ನಾಟಕವು ಏಕೀಕರಣ ಆಗುವುದಕ್ಕೆ ಮೊದಲು 'ಮೈಸೂರು ಸಂಸ್ಥಾನ'ವೆಂದೇ ಪ್ರಸಿದ್ಧಿ ಪಡೆದಿತ್ತು. ಹಳೆಯ ಮೈಸೂರು ಒಂಭತ್ತು ಜಿಲ್ಲೆಗಳನ್ನು ಹೊಂದಿತ್ತು. ಅಲ್ಲದೆ ಒಡೆಯರ, ಕಮಿಷನರುಗಳ ಹಾಗೂ ದಿವಾನರುಗಳ ಆಳ್ವಿಕೆಯಿಂದ 'ಮಾದರಿ ರಾಜ್ಯ'ವಾಗಿ ರೂಪು ತಳೆಯಿತು. ಏಕೀಕರಣಗೊಂಡ ರಾಜ್ಯಕ್ಕೆ 'ವಿಶಾಲ ಮೈಸೂರು ರಾಜ್ಯ'ವೆಂದೇ ಕರೆದದ್ದು ಗಮನಾರ್ಹವಾದುದು. ಇಲ್ಲಿ ಒಡೆಯರ ಪ್ರಸಿದ್ಧ ಅರಮನೆಯೂ ಇದೆ.

೨೦. ಬೆಂಗಳೂರು

ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ. ೧೫೩೭ ರಲ್ಲಿ ಬೆಂಗಳೂರು ನಗರ ಕೆಂಪೇಗೌಡನಿಂದ ನಿರ್ಮಿತವಾಯಿತು. ಬ್ರಿಟಿಷರು ಕರ್ನಾಟಕದಲ್ಲಿ ಸ್ಥಾಪಿಸಿದ್ದ ಮೂರು ಕಂಟೋನ್ಮೆಂಟ್ (ದಂಡು) ಪ್ರದೇಶಗಳಲ್ಲಿ ಒಂದು ಬೆಂಗಳೂರಿನಲ್ಲಿಯೂ ಇತ್ತು. ಇಂದು 'ಐ.ಟಿ. ಸಿಟಿ', 'ಸಿಲಿಕಾನ್ ಸಿಟಿ' ಮೊದಲಾದ ಹೆಸರುಗಳಲ್ಲಿ ಕರೆಸಿಕೊಳ್ಳುತ್ತಿದೆ.

೨೧. ಕಿತ್ತೂರು

ಇದು ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆಯಲ್ಲಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ಕನ್ನಡದ ಮಹಿಳೆಯೆಂದೇ ಖ್ಯಾತಿ ಪಡೆದ ಚೆನ್ನಮ್ಮ ಕಿತ್ತೂರನ್ನು ಆಳುತ್ತಿದ್ದಳು. ೧೮೨೪ ರಲ್ಲಿ ಈಕೆ ಆಂಗ್ಲರೊಂದಿಗೆ ಸೆಣಸಿ ಬಂಧಿತಳಾದಳು. ಮುಂದೆ ೧೮೨೯ ರಲ್ಲಿ ಸಂಗೊಳ್ಳಿ ರಾಯಣ್ಣನು ಸಹ ಕಿತ್ತೂರಿನ ಅಸ್ತಿತ್ವಕ್ಕಾಗಿ ಆಂಗ್ಲರೊಂದಿಗೆ ಹೋರಾಡಿದ್ದು ಗಮನಾರ್ಹವಾದುದು. ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರು ಮಹತ್ವ ಪಡೆದ ತಾಣ.

ದ್ವಿತೀಯ ಪದವಿಪೂರ್ವ ತರಗತಿ

ಇತಿಹಾಸ-೨

ಮಾದರಿ ಪ್ರಶ್ನೆ ಪತ್ರಿಕೆ

ಸಮಯ: ೩ ಗಂಟೆಗಳು ಭಾಗ-ಅ ಗರಿಷ್ಠ ಅಂಕಗಳು : ೯೦

I. ಈ ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿ. ೧x೧೦=೧೦

೧. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ಬುನಾದಿ ಹಾಕಿದ ಕದನ ಯಾವುದು?

೨. "ಭಾರತದ ಸಂಪತ್ತಿನ ಸೋರಿಕೆ" ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?

೩. ಬ್ರಿಟಿಷರನ್ನು ಮೊದಲನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಸೋಲಿಸಿದ ಸರ್ವಾಧಿಕಾರಿಯ ಹೆಸರೇನು?

೪. ಬಾಲಗಂಗಾಧರ ತಿಲಕರ ರಾಷ್ಟ್ರೀಯತೆಯನ್ನು ಕುರಿತ ಘೋಷಣೆ ಯಾವುದು?

೫. ಹುಯಿಲಗೋಳ ನಾರಾಯಣರಾಯರನ್ನು ಕನ್ನಡಿಗರು ನೆನಪಿಸಿಕೊಳ್ಳುವುದು ಯಾವ ಕಾರಣಕ್ಕಾಗಿ?

೬. ಕರ್ನಾಟಕವು ಏಕೀಕರಣಗೊಂಡದ್ದು ಯಾವಾಗ?

೭. "ಪುನರುಜ್ಜೀವನ" ಎಂಬ ಪರಿಕಲ್ಪನೆಯು ಯಾವ ಅರ್ಥವನ್ನು ಪ್ರತಿಪಾದಿಸುತ್ತದೆ?

೮. ನೆಪೋಲಿಯನ್ ಬೊನಾಪಾರ್ಟೆಯು ತನ್ನನ್ನು 'ಫ್ರಾನ್ಸ್ ಕ್ರಾಂತಿಯ ಶಿಶು' ಎಂದು ಕರೆದುಕೊಂಡದ್ದು ಏಕೆ?

೯. ವಿಶ್ವಸಂಸ್ಥೆಯ (ಯು.ಎನ್.ಒ.) ಪ್ರಧಾನ ಕಛೇರಿ ಇರುವ ಸ್ಥಳ ಯಾವುದು?

೧೦. ಕಮ್ಯುನಿಸ್ಟ್ ಚೀನಾದ ಚರಿತ್ರೆಯಲ್ಲಿ 'ಮಹಾ ಮುನ್ನಡೆ' (ದಿ ಗ್ರೇಟ್ ಲೀಪ್) ಎಂದರೇನು?

ಭಾಗ-ಆ

II. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಎರಡು ವಾಕ್ಯಗಳಲ್ಲಿ ಉತ್ತರಿಸಿ. ೨x೧೦=೨೦

೧೧. ದಕ್ಷಿಣ ಭಾರತದ ಕರಾವಳಿಯ ಯಾವುದಾದರೂ ಎರಡು ಫ್ರೆಂಚ್ ಮತ್ತು ಪೋರ್ಚುಗೀಸರ ವಸಾಹತು ನೆಲೆಗಳನ್ನು ಹೆಸರಿಸಿ?

೧೨. ಲಾರ್ಡ್ ವೆಲ್ಲೆಸ್ಲಿಯು 'ಸಹಾಯಕ ಸೈನ್ಯ ಪದ್ಧತಿ'ಯನ್ನು ಜಾರಿಗೆ ತಂದದ್ದು ಏಕೆ?

೧೩. ಬ್ರಿಟಿಷರ ವಿರುದ್ಧ ದಂಗೆಯೆದ್ದ ಮೊಟ್ಟಮೊದಲ ಭಾರತೀಯ ಮಹಿಳೆ ಯಾರು? ಆಕೆ ಕೊಂದದ್ದು ಯಾರನ್ನು?

೧೪. ಭಾರತೀಯರು ಭಗತ್‌ಸಿಂಗನನ್ನು ಸ್ಮರಿಸುವುದು ಏಕೆ? ಅವನ ಧ್ಯೇಯ ಏನಾಗಿತ್ತು?

೧೫. ಆಲೂರ ವೆಂಕಟರಾಯರು ಕನ್ನಡಿಗರನ್ನು ಪ್ರೇರೇಪಿಸಿದ ರೀತಿ ಯಾವ ಬಗೆಯದು?

೧೬. 'ಬೋಸ್ಟನ್ ಟೀ ಪಾರ್ಟಿ' ಎಂದರೇನು? ಅದರ ಪರಿಣಾಮವೇನು?

೧೭. ರೂಸೋನ ಪ್ರಸಿದ್ಧ ಹೇಳಿಕೆ ಯಾವುದು? ಅದು ಯಾವ ಕ್ರಾಂತಿಗೆ ಜಾಗೃತಿ ಮೂಡಿಸಿತು?

೧೮. ಜರ್ಮನಿಯ ಏಕೀಕರಣದ ಶಿಲ್ಪಿ ಯಾರು? ಏಕೀಕರಣದ ಸಾಧನೆಗಾಗಿ ಅವನು ಅನುಸರಿಸಿದ ಕ್ರಮ ಯಾವುದು?

೧೯. ಮೊದಲನೆಯ ಮಹಾಯುದ್ಧಕ್ಕೆ ಕಾರಣವಾದ ದೇಶ ಯಾವುದು? ಅದು ಏಕೆ?

೨೦. 'ಗೆಸ್ಟ್‌ಪೊ' ಬಗೆಗೆ ತಿಳಿಸಿ.

೨೧. ಭಾರತದಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಮೊದಲಿಗೆ ಘೋಷಿಸಿದವರು ಯಾರು? ಮತ್ತು ಯಾವಾಗ?

೨೨. ಭಾರತೀಯ ಪುನರುಜ್ಜೀವನ ಚಳವಳಿಯಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಪಾತ್ರವೇನು?

ಭಾಗ-೩

III. ಇವುಗಳಲ್ಲಿ ಯಾವುದಾದರೂ ಆರಕ್ಕೆ ೧೫ ರಿಂದ ೨೦ ವಾಕ್ಯಗಳಲ್ಲಿ ಉತ್ತರಿಸಿ.

೫x೬=೩೦

೨೩. ಬಕ್ಸರ ಕದನವು ನಡೆಯಲು ಕಾರಣವೇನು? ಇದರಿಂದ ಆದ ಪರಿಣಾಮವೇನು?

೨೪. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬ್ರಿಟಿಷ್ ಸಾಮ್ರಾಜ್ಯಶಾಹಿ ನೀತಿ ಹೇಗೆ ಕಾರಣವಾಯಿತು?

೨೫. ಭಾರತೀಯ ಪುನರುಜ್ಜೀವನ ಚರಿತ್ರೆಯಲ್ಲಿ ರಾಜಾರಾಮ ಮೋಹನರಾಯ್‌ರವರ ಪಾತ್ರವೇನು?

೨೬. ಉಪ್ಪಿನ ಸತ್ಯಾಗ್ರಹ, ಅಹಿಂಸಾ ಮತ್ತು ಅಸಹಕಾರ ಚಳವಳಿಯಲ್ಲಿ ಗಾಂಧೀಜಿಯವರ ಮುಂದಾಳತ್ವವನ್ನು ಕುರಿತು ವಿವರಿಸಿ?

೨೭. ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಟಿಪ್ಪುಸುಲ್ತಾನನು ವ್ಯಕ್ತಪಡಿಸಿದ ಶೌರ್ಯ ಮತ್ತು ದೇಶಾಭಿಮಾನವನ್ನು ಕುರಿತು ವಿವರಿಸಿ?

೨೮. ಇಟಲಿಯ ಏಕೀಕರಣದ ಸಾಧನೆಯಲ್ಲಿ ಕೆವೂರನ ನೇತೃತ್ವ ಯಾವ ಬಗೆಯದು?

೨೯. ಪ್ರಪಂಚದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಭದ್ರತಾ ಮಂಡಲಿಯು ವಹಿಸುವ ಪಾತ್ರವನ್ನು ಕುರಿತು ವಿಶ್ಲೇಷಿಸಿ? ಅದರ ಪರಿಮಿತಿಗಳೇನು?

೩೦. ಮದರ್ ತೆರೆಸಾರವರ ಸಾಮಾಜಿಕ ಸೇವೆಗಳನ್ನು ಕುರಿತು ವಿವರಿಸಿ?

ಭಾಗ-ಈ

IV. ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿರುವ ರೀತಿಯಲ್ಲಿ ಉತ್ತರಿಸಿ. ೫+೫=೧೦

೩೧. ಕೊಟ್ಟಿರುವ ನಕಾಶೆಯಲ್ಲಿ ಕೆಳಕಂಡ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಚಾರಿತ್ರಿಕ ಸ್ಥಳಗಳನ್ನು ಗುರುತಿಸಿ, ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

೧. ಮೀರತ್

೨. ಬ್ಯಾರಕ್‌ಪುರ

೩. ಗ್ವಾಲಿಯರ್

೪. ಝಾನ್ಸಿ

೫. ಕಲ್ಕತ್ತಾ

೩೨. ಕೊಟ್ಟಿರುವ ನಕಾಶೆಯಲ್ಲಿ ಈ ಕೆಳಕಂಡ ಸ್ಥಳಗಳನ್ನು ಗುರುತಿಸಿ, ಅವುಗಳ ಐತಿಹಾಸಿಕ ಮಹತ್ವವನ್ನು ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

೧. ಬೆಂಗಳೂರು

೨. ಕ್ಯಾಲಿಕಟ್

೩. ಚೌರಿ-ಚೌರಾ

೪. ದೆಹಲಿ

೫. ಜಲಿಯನ್ ವಾಲಾಬಾಗ್

ಭಾಗ-ಉ

V. ಇವುಗಳನ್ನು ೩೦ ರಿಂದ ೪೦ ವಾಕ್ಯಗಳಲ್ಲಿ ಉತ್ತರಿಸಿ. ೧೦x೨=೨೦

೩೩. ನೆಪೋಲಿಯನ್ ಬೋನಾಪಾರ್ಟೆಯ ಸಾಧನೆಗಳನ್ನು ಕುರಿತು ಬರೆಯಿರಿ.

ಅಥವಾ

೧೮೮೫ ರಿಂದ ೧೯೨೦ ರವರೆಗಿನ ಭಾರತದ ಸ್ವಾತಂತ್ರ್ಯ ಚಳವಳಿಯನ್ನು ಕುರಿತು ವಿವರಿಸಿ.

೩೪. ಜರ್ಮನಿಯ ಏಕೀಕರಣ ಚಳವಳಿಯಲ್ಲಿ ಬಿಸ್ಮಾರ್ಕ್‌ನು ವಹಿಸಿದ ಪಾತ್ರ ಯಾವ ಬಗೆಯದು?

ಅಥವಾ

ಮೈಸೂರನ್ನು ಮಾದರಿ ಹಾಗೂ ಅಭಿವೃದ್ಧಿಶೀಲ ರಾಜ್ಯವನ್ನಾಗಿ ರೂಪುಗೊಳಿಸುವಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಪಾತ್ರ ಯಾವ ಬಗೆಯದು? ವಿವರಿಸಿ.

ಆಯ್ದ ಪರಾಮರ್ಶನ ಗ್ರಂಥಗಳು

(ಪದವಿ ಪೂರ್ವ ಶಿಕ್ಷಣ ಇಲಾಖೆಯು ಅನುಮೋದಿಸಿರುವ ಕೃತಿಗಳ ಪಟ್ಟಿ)

History of Karnataka

ಗೋವಿಂದರಾಜು ಸಿ.ಆರ್	- ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ
ದಿವಾಕರ್ ಆರ್.ಆರ್	- ಕರ್ನಾಟಕ ಪರಂಪರೆ ಸಂಪುಟ ೨
ಸಾಲೆತೊರೆ ಬಿ.ಎ. ಮತ್ತು	
ದೇಸಾಯಿ ಪಿ.ಬಿ	- ಕನ್ನಡ ನಾಡಿನ ಚರಿತ್ರೆ ಭಾಗ-೨
ಶರ್ಮಾ ತಿ.ತಾ	- ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ
ಗೋಪಾಲರಾವ್ ಎಚ್.ಎಸ್	- ಕರ್ನಾಟಕ ಏಕೀಕರಣ ಇತಿಹಾಸ
ಷೇಕ್‌ಅಲಿ ಬಿ. (ಪ್ರ.ಸಂ.)	- ಕರ್ನಾಟಕ ಚರಿತ್ರೆ ಸಂಪುಟಗಳು - ೫, ೬, ೭ (ಕನ್ನಡ ವಿಶ್ವವಿದ್ಯಾಲಯ, ಹಂಪಿ)
ತಿಪ್ಪೇರುದ್ರಸ್ವಾಮಿ ಎಚ್	- ಕರ್ನಾಟಕ ಸಂಸ್ಕೃತಿ ಸಮೀಕ್ಷೆ
ಶೇಷಗಿರಿರಾವ್ ಎಲ್.ಎಸ್	- ಕಿರಿಯರ ಕರ್ನಾಟಕ (ಕನ್ನಡ ವಿಶ್ವವಿದ್ಯಾಲಯ, ಹಂಪಿ)
ಕೃಷ್ಣರಾವ್ ಎಂ.ವಿ. ಮತ್ತು	
ಕೇಶವ ಭಟ್ಟ ಎಂ	- ಕರ್ನಾಟಕ ಇತಿಹಾಸ ದರ್ಶನ
ಶ್ರೀನಿವಾಸ್ ಮೂರ್ತಿ ಎಚ್.ವಿ	
ಮತ್ತು ರಾಮಕೃಷ್ಣನ್ ಆರ್	- ಸಮಗ್ರ ಕರ್ನಾಟಕ ಚರಿತ್ರೆ
ಸೂರ್ಯನಾಥ ಯು.ಕಾಮತ್(ಸಂ.)	- ಕರ್ನಾಟಕ ಗ್ಯಾಜೆಟಿಯರ್ ಸಂಪುಟಗಳು
ಸೂರ್ಯನಾಥ ಯು. ಕಾಮತ್	- ಕರ್ನಾಟಕದ ಸಂಕ್ಷಿಪ್ತ ಚರಿತ್ರೆ
ನಾಯಕ ಹಾ.ಮಾ. (ಪ್ರ.ಸಂ.)	- ಕರ್ನಾಟಕ-ಕನ್ನಡ ವಿಷಯ ವಿಶ್ವಕೋಶ (ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು)
Gopal M.H	- **Tippu Sultan's Mysore**

INDIAN HISTORY

Majumdar R.C &
Roy Chaudhari Datta - **An Advanced History of India**

Luniya B.N - **Evolution of Indian Culture**

Ishwari Prasad - **History of India**

Mukherji D. P - **Mordern Indian Culture**

- **History and Culture of Indian people vol. I & XI**
(Bharatiya Vidya Bhavan Series)

Saki - **Making History of Karnataka's People and Their Past vol 1 & 2**

ManFred, A.Z - **A Short History of the world vol 1 & 2**

Romila Thapar
and Percival Spear - **A History of India vol 1 & 2**

Bipan Chandra - **India's Struggle For Independence**

Bipan Chandra - **The Rise and Growth of Economic Nationalism in India**

Bipan Chandra - **Nationalism and Colonaalism in Modern India**

ಶಂಕರನಾರಾಯಣ ರಾವ್ ಎನ್.ಪಿ - **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು**

ಶ್ರೀನಿವಾಸ ಮೂರ್ತಿ ಎ.ಪಿ - **ಭಾರತ ಸ್ವಾತಂತ್ರ್ಯ ಚಳವಳಿ - ೧೮೫೭-೧೯೪೭**

WORLD HISTORY

Fisher H.A.L - **A History of Europe**

Davis H.A - **An Outline History of the World**

John Guthes - **Inside Europe**

Hayer C.J.H. - **History of Europe**

Ketelbey C.D.M. - **A History of Modern Times**

Vealyudhan. P.S - **A Brief History of the World**

Gokhale - **Landmarks in Western Civilization**

NCERT (pub) - **Contemporary World History**

Mariwala & others - **Landmarks in World History**

Hazen C.D - **Modern Europe upto 1945**

Relevent valumes - **Encyclopaedia of Social Sciences**

ಐತಿಹಾಸಿಕ ಮಹತ್ವ ಪಡೆದ ಸಂಘ-ಸಂಸ್ಥೆಗಳು

೧. **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ** - ವಿಧಾನಸೌಧ, ಬೆಂಗಳೂರು

೨. **ಮಿಥಿಕ್ ಸೊಸೈಟಿ** - ನೃಪತುಂಗ ರಸ್ತೆ, ಬೆಂಗಳೂರು

೩. **ಕನ್ನಡ ಸಾಹಿತ್ಯ ಪರಿಷತ್ತು** - ಚಾಮರಾಜಪೇಟೆ, ಬೆಂಗಳೂರು

೪. **ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ** - ಎನ್.ಆರ್. ಕಾಲೋನಿ, ಬೆಂಗಳೂರು

೫. **ಭಾರತೀಯ ವಿದ್ಯಾಭವನ** - ರೇಸ್ ಕೋರ್ಸ್ ರಸ್ತೆ, ಬೆಂಗಳೂರು

೬. **ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು** - ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು

೭. **ಸರ್ಕಾರಿ ವಸ್ತುಸಂಗ್ರಹಾಲಯ** - ಮ್ಯೂಸಿಯಂ ರಸ್ತೆ, ಬೆಂಗಳೂರು

೮. **ಮೈಸೂರು ಓರಿಯಂಟಲ್ ಲೈಬ್ರರಿ** - ಮೈಸೂರು

೯. **ಜಗನ್ಮೋಹನ ಅರಮನೆ** - ಮೈಸೂರು

೧೦. **ಟಿಪ್ಪು ವಸ್ತುಸಂಗ್ರಹಾಲಯ** - ಶ್ರೀರಂಗಪಟ್ಟಣ

೧೧. **ಸರ್ಕಾರಿ ವಸ್ತುಸಂಗ್ರಹಾಲಯ** - ಮಡಿಕೇರಿ

೧೨. **ಕರ್ನಾಟಕ ವಿದ್ಯಾವರ್ಧಕ ಸಂಘ** - ಧಾರವಾಡ

೧೩. **ಜಾನಪದ ಲೋಕ** - ರಾಮನಗರ

೧೪. ವಿಶ್ವೇಶ್ವರಯ್ಯ ವಸ್ತುಸಂಗ್ರಹಾಲಯ - ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ

೧೫. **ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯಗಳು, ಕೋಟೆಗಳು, ಅರಮನೆಗಳು** ಹಾಗೂ ವಾಸ್ತುಶಿಲ್ಪ ಕೇಂದ್ರಗಳು. ಉದಾಹರಣೆಗೆ ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣ, ಹಂಪಿ, ರಾಯಚೂರು, ಗುಲ್ಬರ್ಗಾ, ಬೀದರ್, ಬಿಜಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕಿತ್ತೂರು ಮೊದಲಾದವು.

ಎರಡನೆಯ ವರ್ಷದ ಪದವಿಪೂರ್ವ ಇತಿಹಾಸ ಪ್ರಶ್ನೆ ಪತ್ರಿಕೆ-ನೀಲಿ ನಕಾಶೆ

ಘಟಕಗಳು	ಜ್ಞಾನ			ಅರಿವು/ಮನನ			ಅನ್ವಯಿಕತೆ			ಕೌಶಲ್ಯ/ಅಭಿವ್ಯಕ್ತಿ			ಒಟ್ಟು		
	ವಿಎಸ್‌ಎ	ಎಸ್‌ಎ	ಇಟಿ ೫/೧೦	ವಿಎಸ್‌ಎ	ಎಸ್‌ಎ	ಇಟಿ ೫/೧೦	ವಿಎಸ್‌ಎ	ಎಸ್‌ಎ	ಇಟಿ ೫/೧೦	ವಿಎಸ್‌ಎ	ಎಸ್‌ಎ	ಇಟಿ ೫/೧೦	೧	೨	೫/೧೦
I							(೧)೧						೧		
II		(೧)೨ (೧)೨			(೧)೨	(೧)೧೦ *೧೦	(೧)೧		(೧)೫				೧	೬	೧೫
III	(೧)೧ (೧)೧				(೧)೨				(೧)೫				೨	೨	೦೫
IV	(೧)೧ (೧)೧ (೧)೧	(೧)೨ (೧)೨ (೧)೨ *೨	(೧)೫ (೧)೫			(೧)೫ *೫ *೫ *೧೦		(೧)೨ (೧)೨	(೧)೧೦				೩	೧೦	೨೫
V	(೧)೧ (೧)೧				*೨	(೧)೫	(೧)೧		(೧)೨				೩	೨	೫೦
VI												೧೦			೧೦
													೧೦	೨೦	೬೦
			೨೭			೨೪			೨೯			೧೦	೯೦		

ಲೇಖಕರ ವಿಳಾಸ

ಸಂಪಾದಕರು

೧. **ಡಾ. ಸಿ.ಆರ್.ಗೋವಿಂದರಾಜು**, ಮುಖ್ಯಸ್ಥರು, ಚರಿತ್ರೆ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

ಲೇಖಕರು

೧. **ಡಾ. ಲೋಕೇಶ್ ಕೆ.ಎಂ.**, ಪ್ರವಾಚಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವ ವಿದ್ಯಾಲಯ, ಮಂಗಳ ಗಂಗೋತ್ರಿ, ಕೊಣಾಜೆ ೫೭೪ ೧೯೯

೨. **ಡಾ. ಕೆ. ಮೋಹನಕೃಷ್ಣ ರೈ**, ಹಿ.ಶ್ರೇ. ಅಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೩. **ಪ್ರೊ. ಜಮುನ ಎಂ.**, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು ೫೬೦ ೦೫೬

೪. **ಡಾ. ಕೆ.ಎಸ್. ವಿಜಯಲಕ್ಷ್ಮಿ**, ಪ್ರವಾಚಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು ೫೬೦ ೦೫೬

೫. **ಪ್ರೊ. ಎಸ್. ಚಂದ್ರಶೇಖರ್**, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು ೫೬೦ ೦೫೬

೬. **ಪ್ರೊ. ಎಸ್. ಷಡಕ್ಷರಯ್ಯ**, ಮುಖ್ಯಸ್ಥರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು ೫೬೦ ೦೫೬

೭. **ಪ್ರೊ. ಡಿ.ಎನ್. ಯೋಗೀಶ್ವರಪ್ಪ**, (ಶ್ರೀ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು), ಚಿತ್ಕಲಾ, ೮ನೇ ಕ್ರಾಸ್, IV ನೇ ಮೇನ್, ಸೋಮೇಶ್ವರಪುರಂ, ತುಮಕೂರು ೫೭೨ ೧೦೨

೮. **ಡಾ. ಎನ್. ಚಿನ್ನಸ್ವಾಮಿ ಸೋಸಲೆ**, ಹಿ.ಶ್ರೇ. ಅಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೯. **ಡಾ. ವಿರೂಪಾಕ್ಷಿ ಪೂಜಾರಹಳ್ಳಿ**, ಹಿ.ಶ್ರೇ. ಅಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೧೦. **ಡಾ.ಎ.ಎಚ್. ಗಾಯಿತ್ರಿದೇವಿ**, (ಉಪನ್ಯಾಸಕರು, ಪದವಿಪೂರ್ವ ಶಿಕ್ಷಣ ಇಲಾಖೆ), ನಂ.೩೫, ಕಮಲಾಲಯ ಹೋಮ್ಸ್, ೬ನೇ ಮೇನ್, ಚಾಮರಾಜಪೇಟೆ, ಬೆಂಗಳೂರು

ಕನ್ನಡ ವಿಶ್ವವಿದ್ಯಾಲಯದ ಪಠ್ಯಪುಸ್ತಕ ರಚನಾ ಕೇಂದ್ರವು ಸಿದ್ಧಪಡಿಸಿರುವ ಪದವಿಪೂರ್ವ ಶಿಕ್ಷಣದ ಎರಡನೇ ವರ್ಷದ ಇತಿಹಾಸ ಪಠ್ಯವನ್ನು ತಮ್ಮ ಮುಂದಿಡಲು ನಮಗೆ ಸಂತೋಷವೆನಿಸುತ್ತದೆ. ಈಗ ಜಾರಿಗೆ ಬಂದಿರುವ ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಇದನ್ನು ಸಿದ್ಧಪಡಿಸಲಾಗಿದೆ. ಈ ಪಠ್ಯವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಾಡಿನ ಪ್ರಸಿದ್ಧ ವಿದ್ವಾಂಸರು ಪಾಲುದಾರರಾಗಿದ್ದಾರೆ.

ಈ ಪಠ್ಯವು ನಾಡಿನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತದೆಂದು ನಾವು ಭಾವಿಸಿದ್ದೇವೆ. ಈ ಪಠ್ಯವನ್ನು ಉಪಯೋಗಿಸುವ ಸಹೃದಯಿಗಳು ಪಠ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ಬರೆದು ತಿಳಿಸಿದರೆ ತುಂಬಾ ಉಪಯೋಗವಾಗುತ್ತದೆ. ಮುಂದಿನ ಆವೃತ್ತಿಗಳಲ್ಲಿ ಪಠ್ಯದ ಗುಣಮಟ್ಟವನ್ನು ಇನ್ನೂ ಹೆಚ್ಚು ಉತ್ತಮಪಡಿಸಬಹುದು.

ಪಠ್ಯಪುಸ್ತಕಗಳ ಜೊತೆ ನಾವು ಅಧ್ಯಾಪಕರ ಕೈಪಿಡಿಗಳನ್ನು ಸಿದ್ಧಪಡಿಸುತ್ತಿದ್ದೇವೆ. ನಾವು ಪ್ರಕಟಿಸುತ್ತಿರುವ ಪಠ್ಯಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯು ಅಧಿಕೃತ ಮನ್ನಣೆ ನೀಡಿ ನಮ್ಮ ಪ್ರಯತ್ನದಲ್ಲಿ ಕೈ ಜೋಡಿಸಿದೆ. ಕರ್ನಾಟಕದ ವಿದ್ಯಾರ್ಥಿ ಬಳಗಕ್ಕೆ ಕನ್ನಡದಲ್ಲಿ ಜ್ಞಾನವು ಉತ್ತಮ ರೀತಿಯಲ್ಲಿ ದೊರೆಯಬೇಕೆಂಬುದು ನಮ್ಮ ಮುಖ್ಯ ಗುರಿಯಾಗಿದೆ. ಈ ದಿಶೆಯಲ್ಲಿ ನಮ್ಮ ಪ್ರಯತ್ನ ನಡೆದಿದೆ. ಇದಕ್ಕೆ ತಮ್ಮ ಆಶೀರ್ವಾದವಿದೆಯೆಂದು ಭಾವಿಸಿದ್ದೇವೆ.

ರೂ. ೧೨೦/-